THE BOOK WAS DRENCHED

University of Mysore

Oriental Research Institute Publications

KANNADA SERIES No. 25

GENERAL EDITOR :

H. R. RANGASWAMI IYENGAR, M.A.

Superintendent, Oriental Research Institute, Mysore

ಶ್ರೀ ಮಲ್ಲಿಕಾರ್ಜುನ ಕವೀಶ್ವರ ಸಂಯೋಜಿತ

ಸೂಕಿ ಸುಧಾರ್ಣವಂ

೨೦೧೫೦

SUKTI SUDHARNAVA

OF

MALLIKARJUNA

EDITED BY :

N. ANANTHARANGACHAR, B.A.

Formerly Kannada Pandit, Oriental Library, Mysore,
Now Lecturer in Kannada, Mysore University

MYSORE :

PRINTED BY THE ASST. SUPDT. AT THE GOVT. BRANCH PRESS

1947

Price : Rs. 2—8—0

UNIVERSAL
LIBRARY
OU_200980
UNIVERSAL
LIBRARY

University of Mysore

Oriental Research Institute Publications

KANNADA SERIES No. 25

GENERAL EDITOR :

H. R. RANGASWAMI IYENGAR, M.A.

Superintendent, Oriental Research Institute, Mysore

ಶ್ರೀ ಮಲ್ಲಿಕಾರ್ಜುನ ಕವೀಶ್ವರ ನಿಯೋಜಿತಂ

ಸೂಕ್ತಿಸುಧಾರ್ಣವಂ

SŪKTI SUDHARṆAVA

OF

MALLIKĀRJUNA

EDITED BY :

N. ANANTHARANGACHAR, M.A., B.T.

Formerly Kannada Pandit, Oriental Library, Mysore,
Now Lecturer in Kannada, Mysore University

MYSORE :
PRINTED BY THE ASST. SUPDT. AT THE GOVT. BRANCH PRESS
1947

ಸೂಕ್ತಿಸುಧಾರ್ಣವಂ

ಪರಿವಿಡಿ

			ಪುಟಸಂಖ್ಯೆ
	ಪ್ರಸ್ತಾವನೆ	....	v—viii
	ಮುನ್ನುಡಿ	....	ix—xxix
೧	ಪೀಠಿಕಾಪ್ರಕರಣಂ	....	೧—೧೪
೨	ಸಮುದ್ರವರ್ಣನಂ	....	೧೫—೨೩
೩	ಪರ್ವತವರ್ಣನಂ	....	೨೪—೬೪
೪	ಪುರವರ್ಣನಂ	....	೬೫—೯೨
೫	ನಾಯಕಾಭ್ಯುದಯವರ್ಣನಂ	....	೯೩—೯೭
೬	ವಿವಾಹವರ್ಣನಂ	....	೯೮—೧೧೮
೭	ಕುಮಾರೋದಯವರ್ಣನಂ	....	೧೧೯—೧೩೨
೮	ಚಂದ್ರೋದಯವರ್ಣನಂ	....	೧೩೩—೨೧೮
೯	ಸೂರ್ಯೋದಯವರ್ಣನಂ	....	೨೧೯—೨೩೩
೧೦	ಋತುವರ್ಣನಂ	....	೨೩೪—೨೮೨
೧೧	ವನವಿಹಾರವರ್ಣನಂ	....	೨೮೩—೩೦೦
೧೨	ಜಲಕ್ರೀಡಾವರ್ಣನಂ	....	೩೦೧—೩೨೦
೧೩	ಮಧುಪಾನವರ್ಣನಂ	... .	೩೨೧—೩೨೭
೧೪	ಸಂಭೋಗವರ್ಣನಂ	....	೩೨೮—೩೪೧
೧೫	ವಿಪ್ರಲಂಭವರ್ಣನಂ	....	೩೪೨—೩೫೪
೧೬	ಮಂತ್ರವರ್ಣನಂ	....	೩೫೫—೩೬೮
೧೭	ದೂತಾಂಗವರ್ಣನಂ	... .	೩೬೯—೩೮೦
೧೮	ಯಾತ್ರಾಂಗವರ್ಣನಂ	....	೩೮೧—೩೯೪

ಅನುಬಂಧಗಳು

೧	ಸೂಕ್ತಿಸುಧಾರ್ಣವದ ಪದ್ಯಗಳ ಅಕಾರಾದಿ	....	೩೯೫—೪೧೮
೨	ಆಕರಗಳು ಗೊತ್ತಾಗಿರುವ ಸೂಕ್ತಿಸುಧಾರ್ಣವ ಪದ್ಯಗಳ ಸೂಚೀ		೪೧೯—೪೩೩
೩	ಆಕರಗಳ ಪಟ್ಟಿ	....	೪೩೪—೪೩೫
೪	ಸೂಕ್ತಿಸುಧಾರ್ಣವದ ಶೋಧನೆಯಲ್ಲಿ ಉಪಯೋಗಿಸಿಕೊಂಡಿರುವ ಅಚ್ಚಿನ ಪುಸ್ತಕಗಳ ವಿವರ	....	೪೩೬

ಪ್ರಸ್ತಾವನೆ

ಸಾಹಿತ್ಯಕ್ಷೇತ್ರದಲ್ಲಿ ಬಗೆಬಗೆಯ ಗ್ರಂಥಗಳು ಹುಟ್ಟಿ ಬಳೆದಿವೆ. ಸಾಹಿತ್ಯವೆಂಬುದು ಅನುಭವದ ಟೀಕೆ. ಕವಿಯು ಮಾನವನ ಅನುಭವದ ಯಾವುದಾದರೊಂದು ಸನ್ನಿವೇಶವನ್ನು ಆರಿಸಿ ತನ್ನ ಪ್ರತಿಭಾಶಕ್ತಿಯಿಂದಲೋ ಸಂಸ್ಕಾರ ಬಲದಿಂದಲೋ ಅದನ್ನು ರೂಪುಗೊಳಿಸಿ, ತನ್ನ ರಚನಾಚಾತುರ್ಯದಿಂದಲೂ ಸಂವಿಧಾನಕೌಶಲದಿಂದಲೂ ಓದುವವರ ಅಥವಾ ಕೇಳುವವರ ಮನಸ್ಸಿನಲ್ಲಿ ಹೊಸಹೊಸ ಭಾವನೆಗಳನ್ನು ಮೂಡಿಸಿ ಆಹ್ಲಾದವನ್ನೂ ಆನಂದಾನುಭವವನ್ನೂ ತುಂಬುತ್ತಾನೆ. ಸಹೃದಯಹೃದಯಾಹ್ಲಾದನವೇ ಕಾವ್ಯದ ಮುಖ್ಯ ಗುರಿ. ಕಾವ್ಯಗಳು ಕೆಲವು ಪದ್ಯಾತ್ಮಕವಾಗಿಯೂ ಕೆಲವು ಗದ್ಯಾತ್ಮಕವಾಗಿಯೂ ಇನ್ನು ಕೆಲವು ಗದ್ಯಪದ್ಯಮಿಶ್ರಿತವಾಗಿಯೂ ಇರುವುವು. ಇವುಗಳನ್ನೇ ಕಥೆ, ಆಖ್ಯಾಯಿಕೆ, ಚಂಪೂ, ನಾಟಕವೆಂದು ಕರೆಯುವೆವು.

ಇವೆಲ್ಲ ಸ್ವತಂತ್ರಗ್ರಂಥಗಳು. ಇವುಗಳನ್ನು ಅವಲಂಬಿಸಿ ಮತ್ತೆ ಬೇರೆ ಗ್ರಂಥಗಳೂ ಹುಟ್ಟಿವೆ. ಇವುಗಳಲ್ಲ 'ಸಂಗ್ರಹ' ಗ್ರಂಥಗಳು ಒಂದು ಬಗೆಯವು. ಸುಪ್ರಸಿದ್ಧಕವಿಗಳು ಬರೆದ ಗ್ರಂಥಗಳ ಬಾಹುಲ್ಯದಿಂದಲೂ ವಿಸ್ತಾರದಿಂದಲೂ ಪ್ರತಿಯೊಬ್ಬ ಸಾಹಿತಿಯು ಅವೆಲ್ಲವನ್ನು ಓದಿ ಆನಂದಪಡಲು ಸಾಧ್ಯವಿಲ್ಲ; ಸಾಹಿತ್ಯದ ಸವಿಯನ್ನು ಸಾಮಾನ್ಯಜನರು ಅನುಭವಿಸಿ ನೋಡಲು ಅವಕಾಶವಿರುವುದಿಲ್ಲ. ಈ ಕಾರಣಗಳಿಂದ ಈ ವಿಧವಾದ ಸಂಗ್ರಹಗಳನ್ನು ಮಾಡುವುದು ಎಲ್ಲರಲ್ಲೂ ವಾಡಿಕೆಯಾಗಿದೆ. ಒಬ್ಬ ಕವಿಯು ಬರೆದ ಬೇರೆಬೇರೆ ಗ್ರಂಥಗಳಿಂದ ರಸವತ್ತಾದ ಉಕ್ತಿಗಳನ್ನು ಒಂದೆಡೆ ಸೇರಿಸಿಡುವುದುಂಟು. ಅನೇಕ ಕವಿಗಳ ಗ್ರಂಥಗಳಿಂದ ಸದುಕ್ತಿಗಳನ್ನು ಸಂಗ್ರಹಿಸುವುದೂ ಉಂಟು. ಈ ಎರಡು ಬಗೆಯ ಸಂಗ್ರಹಗ್ರಂಥಗಳು ನಮಗೆ ಪರಿಚಿತವಾದ ಇಂಗ್ಲೀಷು ಮತ್ತು ಸಂಸ್ಕೃತ ಸಾಹಿತ್ಯಗಳಲ್ಲಿ ಹೇರಳವಾಗಿವೆ. ಇತರ ಸಾಹಿತ್ಯಗಳಲ್ಲಿಯೂ ಈ ಬಗೆಯ ಗ್ರಂಥಗಳಿರಬಹುದೆಂದು ಊಹಿಸಬಹುದು. ಇಂಗ್ಲೀಷಿನಲ್ಲಿ ಪಾಲ್ಗ್ರೇವ್ ಎಂಬವನು ಬರೆದ 'ಗೋಲ್ಡ್ ಟ್ರೆಜರಿ' (Golden Treasury) ಈ ಗುಂಪಿಗೆ ಸೇರಿದುದು. ಸಂಸ್ಕೃತದಲ್ಲಿ ಸುಭಾಷಿತರತ್ನಭಾಂಡಾಗಾರ, ಶಾರ್ಙ್ಗಧರಪದ್ಧತಿ, ಸೂಕ್ತಿಮುಕ್ತಾವಳಿ, ಸುಭಾಷಿತರತ್ನಸಂದೋಹ ಮೊದಲಾದ ಅನೇಕ ಗ್ರಂಥಗಳಿವೆ. ಈ ಬಗೆಯ ಸಂಗ್ರಹ ಗ್ರಂಥಗಳಿಂದ ಉದ್ದಾಮಕವಿಗಳ ರಸೋಕ್ತಿಗಳ ಸವಿಯನ್ನು ಸೇವಿಸಲು ಸಾಹಿತ್ಯಪ್ರಿಯರೆಲ್ಲರಿಗೂ ಅವಕಾಶ ದೊರೆತಿರುವುದಲ್ಲದೆ, ಕೆಲವು ಅಜ್ಞಾತಕವಿಗಳ ಅಸ್ತಿತ್ವವನ್ನೂ ಕಾಲವನ್ನೂ ನಿರ್ಧರಿಸಲು ಸಾಧ್ಯವಾಗಿದೆ.

ನಮಗೆ ತಿಳಿದಮಟ್ಟಿಗೆ ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧವಾದ ಈ ಬಗೆಯ ಪ್ರಾಚೀನ ಸಂಗ್ರಹಗ್ರಂಥಗಳು ಎರಡು: ಒಂದು ಸುಮಾರು ಕ್ರಿ.ಶ. ೧೬೦೦ ರಲ್ಲಿ ಬರೆದ ಅಭಿನವವಾದಿವಿದ್ಯಾನಂದನ ಕಾವ್ಯಸಾರ. ಇದನ್ನು ಕರ್ಣಾಟಕಕಾವ್ಯಕಲಾನಿಧಿಯ ಸಂಪಾದಕರು ಅಚ್ಚಿಟ್ಟು ಪ್ರಚಾರಪಡಿಸಿದ್ದಾರೆ. ಮತ್ತೊಂದು ಈಗ ಪ್ರಕಾಶಪಡಿಸುವ ಸೂಕ್ತಿಸುಧಾರ್ಣವ. ಈ ಗ್ರಂಥವನ್ನು ಕವಿಯು ಒಂದು ಮಹಾಕಾವ್ಯವನ್ನಾಗಿ ಪರಿಗಣಿಸಿ, ಪ್ರಸಿದ್ಧ ಸಂಸ್ಕೃತ ಆಲಂಕಾರಿಕನಾದ ದಂಡಿಯು ತನ್ನ ಕಾವ್ಯಾದರ್ಶದಲ್ಲಿ ನಿರೂಪಿಸಿರುವ ಮಹಾಕಾವ್ಯದ ಅಂಗಗಳೆನಿಸಿಕೊಳ್ಳುವ ಹದಿನೆಂಟು ವಿಷಯಗಳ ವರ್ಣನಾರೂಪವಾದ ಪದ್ಯಗಳನ್ನು ತನಗೆ ಹಿಂದಿದ್ದ ಸುಪ್ರಸಿದ್ಧಕವಿಗಳ ಗ್ರಂಥಗಳಿಂದ ಸಂಗ್ರಹಿಸಿ, ಒಂದೊಂದು ಅಂಗಕ್ಕೆ ಸಂಬಂಧಿಸಿದ ಪದ್ಯಗಳನ್ನು ಒಂದೊಂದು ಆಶ್ವಾಸವಾಗಿ ಸಂಯೋಜನೆ ಮಾಡಿ ಬರೆದಿರುತ್ತಾನೆ. ಈ ವಿಷಯವು ಪೀಠಿಕಾಪ್ರಕರಣದ ಕೊನೆಯಲ್ಲಿರುವ, —

ವಾರಿಧಿ ಪರ್ವತಂ ಪುರಮಧೀಶ್ವರನುದ್ಬಹನಂ ಕುಮಾರನಂ
ಭೋರುಹವೈರಿಮಿತ್ರರುದಯಂ ಋತುನಂದನಮಂಬುಸೀಧುಕಾಂ।
ತಾರತಿಚಿಂತೆ ಮಂತ್ರ ಚರ ಯಾನ ವಿರೋಧಿಜಯಂಗಳೆಂಬಿವಂ
ನೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್॥

ಪುರ ವಾರಾಶಿ ನಗರ್ತು ಚಂದ್ರ ತಪನೋದ್ಯಾನಾಂಬುಕೇಳೀಸುರಾ
ಸುರತಕ್ರೀಡನ ವಿಪ್ರಲಂಭ ಲಲನಾಕಲ್ಯಾಣ ಪುತ್ರೋದಯ।
ಸ್ಫುರಿತಾಳೋಚನ ಮಂತ್ರದೂತಗಮನಾಜಿಸ್ತ್ರೀಸುಖವ್ಯಾಪ್ತಿಗಳ್
ದೊರೆಕೊಳ್ಗುಂ ಕವಿವರ್ಣನಕ್ಕೆ ಪದಿನೆಂಟಂಗಂ ಮಹಾಕಾವ್ಯದೊಳ್॥

ಎಂಬ ಪದ್ಯಗಳಿಂದಲೂ ಪ್ರತಿ ಆಶ್ವಾಸಾಂತ್ಯದಲ್ಲಿರುವ ''ಮಲ್ಲಿಕಾರ್ಜುನಕವೀಶ್ವರ ಸಂಯೋಜಿತಮುಮಪ್ಪ ಸೂಕ್ತಿಸುಧಾರ್ಣವದೊಳ್'' ಎಂಬ ವಾಕ್ಯದಿಂದಲೂ ವ್ಯಕ್ತವಾಗುತ್ತದೆ. ಈ ಗ್ರಂಥದಲ್ಲಿ ಪೀಠಿಕಾಪ್ರಕರಣವೂ ಸೇರಿ ಹತ್ತೊಂಬತ್ತು ಆಶ್ವಾಸಗಳಿವೆ. ಆದರೆ ನಮಗೆ ದೊರೆತಿರುವ ಪ್ರತಿಗಳಲ್ಲಿ ಕೊನೆಯದಾದ ಯುದ್ಧವರ್ಣನಾಪರವಾದ ಆಶ್ವಾಸವು ಸಿಕ್ಕಿಲ್ಲ. ಇದರಲ್ಲಿ ಒಟ್ಟು ೨,೧೯೧ ಪದ್ಯಗಳಿವೆ. ಇವೆಲ್ಲಕ್ಕೂ ಆಕರವನ್ನು ಗೊತ್ತುಮಾಡಲು ಸಾಧ್ಯವಾಗಿಲ್ಲ. ಆಕರವು ಗೊತ್ತಾದ ಪದ್ಯಗಳ ಸಂಖ್ಯೆಯನ್ನೂ, ಆಕರಗಳ ಹೆಸರನ್ನೂ ಅನುಬಂಧ ೨ ಮತ್ತು ೩ ರಲ್ಲಿ ಕೊಟ್ಟಿದೆ. ಉಳಿದ ಪದ್ಯಗಳು ಕವಿಯ ಸ್ವಂತವೋ ನಮಗೆ ಈವರೆಗೆ ತಿಳಿಯದ ಪೂರ್ವಕವಿಗಳ ಗ್ರಂಥಗಳಿಂದ ಸಂಗ್ರಹಿಸಲ್ಪಟ್ಟವೋ ಹೇಳಲು ಸಾಧ್ಯವಿಲ್ಲ.

ಈ ಕಾವ್ಯವನ್ನು ಬರೆದವನು, ಸಂಯೋಜಕನು, ಕವೀಶ್ವರ ಮಲ್ಲಿಕಾರ್ಜುನ. ಈತನಿಗೆ ಮಲ್ಲ, ಮಲ್ಲಪ, ಚಿದಾನಂದ ಎಂಬ ಹೆಸರುಗಳೂ ಉಂಟು. ಈತನು ' ಯಾದವಕಟಕಾಚಾರ್ಯ ಸುಕವಿಸುಮನೋಬಾಣನ ಜಾಮಾತ್ಯ, ' ಜನ್ನನ ಸೋದರಿಯ ಗಂಡ, ಕೇಶಿರಾಜನ ತಂದೆ. ಈತನು ' ಮುನಿಗಳ ಸಭೆಯೊಳ್ ಪರಮಮುನಿ,' 'ಸರಸಕವೀಶ್ವರಸಭೆಯೊಳ್ ಸರಸಕವೀಶಂ,' 'ಬುಧರ ಸಭೆಯೊಳ್ ಪರಮಬುಧಂ,'

'ಯೋಗಿಪ್ರವರಚದಾನಂದ ಮಲ್ಲಿಕಾರ್ಜುನಂ.' ಈತನು ಹೊಯ್ಸಳ ವೀರಸೋಮೇಶ್ವರನ ಆಶ್ರಿತನೆಂದೂ ಆ ರಾಜನ ಆಳ್ವಿಕೆಯಲ್ಲಿ ಅವನ ಮೆಚ್ಚುಗೆಗೋಸ್ಕರ ಈ ಕಾವ್ಯವನ್ನು ಬರೆದನೆಂದೂ, ' ಸೋಯಿದೇವರಾಯನ ವಿನೋದಾಕರ್ಣನಕೌತು ಕೋತ್ಪಾದಿತಮುಮಪ್ಪ,' ಮತ್ತು

ಕೃತಿಯಂ ನಿರ್ಮಿಸಿ ಮುನ್ನ ಮಾದರಿಳೆಯೊಳ್ ಶ್ರೀಹರ್ಷನುಂ ಭೋಜಭೂ
ಪತಿಯುಂ ನತ್ಕವಿ ವಜ್ರಹಸ್ತನೃಪನುಂ ಸರ್ವಜ್ಞಸೋಮೇಶನುಂ।
ನುತಿಪೆತ್ತಂದದಿನಿಂದು ಮಲ್ಲಬುಧನಿಂದಂ ಕಾವ್ಯನಾರಂ ಜಗ
ನ್ನುತಮಾಯ್ತೆಂದೆನೆ ಮಾಡಿ ಕೀರ್ತಿವಡೆದಂ ಶ್ರೀವೀರಸೋಮೇಶ್ವರಂ॥

(ಪೀಠಿಕಾಪ್ರ. ೨೪.)

ಎಂಬ ಉಕ್ತಿಗಳಿಂದ ಸ್ಪಷ್ಟಪಡುತ್ತದೆ. ವೀರಸೋಮೇಶ್ವರನು ಕ್ರಿ. ಶ. ೧೨೩೩ ರಿಂದ ೧೨೫೪ರ ವರೆಗೆ ಕರ್ಣಾಟಕದಲ್ಲಿ ರಾಜ್ಯವಾಳಿದಂತೆ ತಿಳಿದುಬರುತ್ತದೆ. ಅಲ್ಲದೆ ಗ್ರಂಥದ ಪೀಠಿಕಾಪ್ರಕರಣದಲ್ಲಿ ಹೊಯ್ಸಳರಾಜರ ವಂಶವೃತ್ತವನ್ನು ವಿವರಿಸುವ ಪದ್ಯಗಳಿವೆ. ಇವು ಎಲ್ಲ ವಿಧದಲ್ಲಿಯೂ ಮಂಡ್ಯ ೧೨೧ ಮತ್ತು ನಾಗಮಂಗಲ ೯೮ ಶಾಸನದ ಪದ್ಯಗಳನ್ನು ಹೋಲುತ್ತವೆ. ಆದುದರಿಂದ ಇವುಗಳನ್ನು (ಮಂಡ್ಯ ೧೨೧ ನೆಯ) ಬಸರಾಳುಶಾಸನದಿಂದ ಉದ್ಧರಿಸಿರಬೇಕೆಂದು ತೋರುತ್ತದೆ. ಅಲ್ಲದೆ ಹೊಯ್ಸಳವಂಶವೃತ್ತವನ್ನು ತಿಳಿಸುವ ಶಾಸನವು ಅನಂಖ್ಯಾತವಾಗಿದ್ದರೂ ಈ ಅನುಪೂರ್ವಿಯಲ್ಲಿ, ಈ ಕ್ರಮದಲ್ಲಿ ಬೇರೆಕಡೆ ಎಲ್ಲಿಯೂ ಇಲ್ಲ. ಈ ವಿಷಯದಲ್ಲಿ ಈ ಗ್ರಂಥದಲ್ಲಿರುವ ಕ್ರಮವೂ ವಿವರಣೆಯೂ ಬಸರಾಳುಶಾಸನದಲ್ಲಿ ಮಾತ್ರ ಕಂಡುಬರುವುದರಿಂದ ಈ ವಾಕ್ಯವನ್ನು ಬರೆದವನೂ ಆ ಶಾಸನವನ್ನು ಬರೆದವನೂ ಒಬ್ಬನೇ ಆಗಿರಬೇಕು. ಬಸರಾಳುಶಾಸನವನ್ನು ಬರೆದವನು ಚಿದಾನಂದನೆಂದು ಸ್ಪಷ್ಟೋಕ್ತಿಯಿರುವುದು. ಮತ್ತು ಬಸರಾಳುಶಾಸನದಲ್ಲಿರುವ,

ಧರೆ ಪೊಗಟೆ ಚಿದಾನಂದಂ। ವಿರಚಿಸಿದಂ ನತ್ಕವೀಶ್ವರಂ ಶಾಸನಮಂ।
ಪರಮಪ್ರಕಾಶಯೋಗೀ। ಶ್ವರತನಯಂ ಬ್ರಹ್ಮವಿದ್ಯೆಗಾಸ್ಪದರೂಪಂ॥

ಎಂಬ ಪದ್ಯವೂ ಸೂಕ್ತಿಸುಧಾರ್ಣವದಲ್ಲಿರುವ

ನರಸಕವೀಶ್ವರಸಭೆಯೊಳ್। ನರಸಕವೀಶಂ ವಿಶಿಷ್ಟಮುನಿಗಳ ಸಭೆಯೊಳ್।
ಪರಮಮುನಿ ಬುಧರ ಸಭೆಯೊಳ್। ಪರಮಬುಧನೆನಿಪ್ಪನೀ ಚಿದಾನಂದಬುಧಂ॥

(ಪೀಠಿಕಾಪ್ರ. ೮.)

ಎಂಬುದೂ ಒಂದೇ ಅರ್ಥವನ್ನು ಕೊಡುತ್ತವೆ. ಆದಕಾರಣ ಬಸರಾಳುಶಾಸನವನ್ನು ಬರೆದ ಚಿದಾನಂದನೇ ಸೂಕ್ತಿಸುಧಾರ್ಣವವನ್ನು ಬರೆದ ಮಲ್ಲಿಕಾರ್ಜುನನೆಂದು ಊಹಿಸಬಹುದು.*

* ಮೈಸೂರು ಶಾಸನಶಾಖೆಯ ವರದಿ ೧೯೩೧, ಪು. ೮೦–೮೯; ಮತ್ತು ಪ್ರಬುದ್ಧ ಕರ್ಣಾಟಕ ಸಂ. ೧೫, ಸಂಚಿಕೆ ೪, ಪು. ೮೨–೯೩.

ಈ ಗ್ರಂಥವನ್ನು ಶೋಧಿಸಿ ಕೋಶಾಗಾರದಿಂದ ಅಚ್ಚಟ್ಟು ಶೀಘ್ರವಾಗಿ ಪ್ರಕಾಶಪಡಿಸಲು ಸಾಧ್ಯವಾಗಲಿಲ್ಲ. ಐದು ಪ್ರತಿಗಳ ಆಧಾರದ ಮೇಲೆ ಈ ಗ್ರಂಥವನ್ನು ಶೋಧಿಸಿದೆ. ಇವುಗಳಲ್ಲಿ ಮೊದಲನೆಯದು ೫೧ನೆಯ ನಂಬರಿನ ಕಾಗದದ ಪ್ರತಿ. ಇದರಲ್ಲಿ ಮೊದಲಿನಿಂದ ಚಂದ್ರೋದಯವರ್ಣನೆಯಲ್ಲಿ ಅರ್ಧ ಭಾಗದವರೆಗೆ ಎಂಟು ಆಶ್ವಾಸಗಳು ಮಾತ್ರ ಇವೆ. ಕವಿಚರಿತಕಾರರು ತಮ್ಮ ಕವಿ ಚರಿತೆಯ ಟಿಪ್ಪಣಿಯನ್ನು ಈ ಪ್ರತಿಯ ಆಧಾರದಮೇಲೆ ಬರೆದಂತೆ ಕಾಣುತ್ತೆ. ಈ ಪ್ರತಿಯ ಮೂಲಮಾತೃಕೆ ಯಾವುದೆಂಬುದು ಸ್ಪಷ್ಟವಾಗಿಲ್ಲ. ಎರಡನೆಯದು ೧೮೦ನೆಯ ನಂಬರಿನ ಕಾಗದದ ಪ್ರತಿ. ಇದರಲ್ಲಿ ಮೊದಲಿನಿಂದ ವಿಪ್ರಲಂಭ ಶೃಂಗಾರದ ವರ್ಣನೆ ಪೂರ್ತಿಯಾಗಿ ಹದಿನೈದು ಆಶ್ವಾಸಗಳಿವೆ. ಇದನ್ನು ಕವಿಚರಿತ ಕಾರರು ತಮ್ಮ ಗ್ರಂಥದ ಎರಡನೆಯ ಮುದ್ರಣದಲ್ಲಿ ಉಪಯೋಗಿಸಿಕೊಂಡಂತೆ ತಿಳಿಯುತ್ತೆ. ಇದು ಮೇಲಿನ ಪ್ರತಿಯೊಡನೆ ಯಾವ ವಿಧದಲ್ಲಿಯೂ ಹೋಲುವುದಿಲ್ಲ. ಅಲ್ಲದೆ ಮಲ್ಲಿಕಾರ್ಜುನನಿಗಿಂತ ಈಚಿನ ಕವಿಗಳ ಪದ್ಯಗಳೂ ಈ ಪ್ರತಿಯಲ್ಲಿ ಸೇರಿಸಲ್ಪಟ್ಟಿವೆ. ಆದುದರಿಂದ ಇದು ಸೂಕ್ತಿಸುಧಾರ್ಣವದ ಸರಿಯಾದ ಮಾತೃಕೆಯೆಂದು ಹೇಳುವುದಕ್ಕಾಗುವುದಿಲ್ಲ. ಮತ್ತೊಂದು ಕಾಗದದ ಪ್ರತಿಯಲ್ಲಿ ಚಂದ್ರೋದಯ ವರ್ಣನೆಯು ಮಾತ್ರವಿದೆ. ಈ ಕಾಗದದ ಪ್ರತಿಗಳಲ್ಲದೆ ಎರಡು ಓಲೆಯ ಪ್ರತಿಗಳೂ ದೊರೆತವು. ಇವುಗಳಲ್ಲಿ ಒಂದು ಶೃಂಗೇರಿಯ ಶ್ರೀ ಶಂಕರಮಠಕ್ಕೆ ಸೇರಿದ್ದು. ಈ ಪ್ರತಿಯು ಇರುವ ಸಂಗತಿಯನ್ನು ಮೈಸೂರು ಶಾಸನ ಇಲಾಖಾ ಅಧಿಕಾರಿಗಳು ತಿಳಿಸಿದರು. ಕೂಡಲೇ ಇದನ್ನು ತರಿಸಿ ಗ್ರಂಥದ ಶೋಧನಕಾರ್ಯವನ್ನು ಮುಂದುವರಿಸಲಾಯಿತು. ಗ್ರಂಥವು ಸ್ವಲ್ಪದೂರ ಅಚ್ಚಾದ ಮೇಲೆ ದೇಲೂರಿನಲ್ಲಿ ಮತ್ತೊಂದು ಓಲೆಯ ಪ್ರತಿಯು ದೊರಕಿತು. ಹೀಗೆ ಸಂಗ್ರಹಿಸಿದ ಎಲ್ಲ ಪ್ರತಿಗಳನ್ನೂ ಉಪಯೋಗಿಸಿ ಈ ಗ್ರಂಥವನ್ನು ಶೋಧಿಸಿ ಅಚ್ಚಿಟ್ಟು ಪ್ರಕಾಶಪಡಿಸಿದೆ. ಈ ಗ್ರಂಥದ ಶೋಧನಕಾರ್ಯವನ್ನು ಮಾಡುತ್ತಿದ್ದ ಶ್ರೀಮಾನ್ ಎಸ್. ಅನಂತರಂಗಾಚಾರ್, ಎಂ.ಎ.,ಬಿ.ಟಿ., ಯವರು ತುಮಕೂರಿಗೆ ಅಧ್ಯಾಪಕರಾಗಿ ವರ್ಗವಾದ ಪ್ರಯುಕ್ತ ಇಲ್ಲಿಯ ಪಂಡಿತರು ಆಸ್ಥಾನ ಮಹಾವಿದ್ವಾನ್ ಶಾಂತರಾಜಶಾಸ್ತ್ರಿಗಳು ಗ್ರಂಥಾಂತ್ಯದಲ್ಲಿ ಕೊಟ್ಟಿರುವ ೨ ಮತ್ತು ೩ ನೆಯ ಅನುಬಂಧಗಳನ್ನು ಸಿದ್ಧಪಡಿಸಿ, ಮೂರು ಅನುಬಂಧಗಳಲ್ಲಿ ಕಂಡ ಅಚ್ಚಿನ ತಪ್ಪುಗಳನ್ನು ತಿದ್ದಿ ಪರಿಷ್ಕರಿಸಿರುತ್ತಾರೆ.

ಈ ಗ್ರಂಥವನ್ನು ಅಚ್ಚಡಲು ಇದರ ಮಾತೃಕೆಯನ್ನು ಎರವಾಗಿ ಕೊಟ್ಟು ಶ್ರೀ ಶೃಂಗೇರಿ ಶಂಕರಮಠದ ಅಧಿಕಾರಿಗಳು ವಿಶೇಷ ಸಹಾಯ ಮಾಡಿರುತ್ತಾರೆ. ಈ ಗ್ರಂಥಪ್ರಕಾಶನಕ್ಕೆ ಸಹಾಯ ಮಾಡಿದ ಸಂಸ್ಥೆಗಳಿಗೂ ಮಹನೀಯರಿಗೂ ಈ ಸಂಸ್ಥೆಯು ಋಣಿಯಾಗಿರುತ್ತದೆ.

ಮೈಸೂರು. ಎಚ್. ಆರ್. ರಂಗಸ್ವಾಮ್ಯಯ್ಯಂಗಾರ್.

ಮುನ್ನುಡಿ

ಸೂಕ್ತಿಸುಧಾರ್ಣವವು ಒಂದು ಸಂಯೋಜಿತ ಗ್ರಂಥ. ಇದಕ್ಕೆ 'ಕಾವ್ಯ ಸಾರ' ವೆಂಬ ಹೆಸರೂ ಉಂಟು. ಆಶ್ವಾಸಾಂತ್ಯಗದ್ಯದಿಂದಲೂ ಪೀಠಿಕಾ ಸಂಧಿಯಲ್ಲಿ ಬರುವ ಕೆಲವು ಪದ್ಯಗಳಿಂದಲೂ ಇದು ವೀರಹೊಯ್ಸಳ ಸೋಯಿದೇವರಾಯನ ವಿನೋದಾಕರ್ಣನಕೌತುಕೋತ್ಪಾದನಕ್ಕಾಗಿ ಯಾದವಕಟಕಾಚಾರ್ಯ ಸುಕವಿ ಸುಮನೋಬಾಣಜಾಮಾತ್ಯ ಪರಮಚಿದಾನಂದಮಲ್ಲಿಕಾರ್ಜುನ ಕವೀಶ್ವರನಿಂದ ಸಂಯೋಜಿತವಾದುದೆಂಬುದಾಗಿ ತಿಳಿದುಬರುತ್ತದೆ. ಮಲ್ಲಿಕಾರ್ಜುನನು ಗ್ರಂಥಾರಂಭದಲ್ಲಿ ಸ್ವಲ್ಪಮಟ್ಟಿಗೆ ಸ್ವವಿಷಯವನ್ನು ಸಂಗ್ರಹವಾಗಿ ತಿಳಿಸಿದ್ದರೂ ತನ್ನ ಕಾಲ ದೇಶ ಮತಗಳ ವಿಷಯವಾಗಿ ಖಚಿತವಾಗಿ ಏನನ್ನೂ ಹೇಳಿಕೊಂಡಿಲ್ಲ. ಆದರೂ ಪೀಠಿಕಾ ಪ್ರಕರಣದ ಆಧಾರದಮೇಲೆ ಈ ವಿಷಯಗಳನ್ನು ಸುಮಾರಾಗಿ ನಿರ್ಧರಿಸಬಹುದು.

ಪೀಠಿಕಾಭಾಗದಲ್ಲಿ ಹೊಯ್ಸಳರ ವಂಶವೃತ್ತಾಂತವನ್ನು ತಿಳಿಸುವ ಕೆಲವು ಪದ್ಯಗಳು ಇರುವುವು. ಅವುಗಳಲ್ಲಿ ಮಂಡ್ಯದ ತಾಲ್ಲೋಕು ಬಸರಾಳು ಶಾಸನದ ಪದ್ಯಗಳು ಒಂಬತ್ತು [1], ನಾಗಮಂಗಲದ ೯ಲನೆಯ ಶಾಸನದ ಪದ್ಯಗಳು ಅಯ್ದು, ತರೀಕೆರೆಯ ೪೫ ನೆಯ ಶಾಸನದ ಪದ್ಯ ಒಂದು. ಸೋಮೇಶ್ವರನ ಸ್ತುತಿರೂಪವಾದ ನಾಗಮಂಗಲದ ೯ಲನೆಯ ಶಾಸನದ ಪದ್ಯವೇ ಕಡೂರು ಹನ್ನೆರಡನೆಯ ಶಾಸನದಲ್ಲಿಯೂ ಇರುವುದು. ಹೊಯ್ಸಳರ ವಂಶವೃತ್ತವನ್ನು ತಿಳಿಸುವ ಅನೇಕ ಶಾಸನಗಳಿದ್ದರೂ ಅವುಗಳಾವುದರಲ್ಲಿಯೂ ಸೂಕ್ತಿಸುಧಾರ್ಣವದ ಪದ್ಯಗಳು ದೊರೆಯುವುದಿಲ್ಲ. ಅಲ್ಲದೆ ಮೇಲೆಹೇಳಿದ ಮಂಡ್ಯ ೧೨೧, ೧೨೨, ನಾಗಮಂಗಲ ೯ಲ ನೆಯ ಶಾಸನಗಳಲ್ಲಿರುವ ಕ್ರಮದಲ್ಲಿಯೇ ಪದ್ಯಗಳು ಸೂಕ್ತಿಸುಧಾರ್ಣವದಲ್ಲಿಯೂ ಇವೆ. ಆದುದರಿಂದ ಇವುಗಳನ್ನು ಬಸರಾಳು ಶಾಸನದಿಂದ ಉದ್ಧರಿಸಿರಬಹುದು. ಆ ಶಾಸನದ ಕೊನೆಯಲ್ಲಿ ಚಿದಾನಂದ ಎಂಬ ಶಾಸನ ಕರ್ತೃವಿನ ಅಂಕಿತವುಳ್ಳ ಈ ಕೆಳಗಿನ ಪದ್ಯವಿದೆ :—

ಧರೆ ಪೊಗಟ್ಟೆ ಚಿದಾನಂದಂ
ವಿರಚಿಸಿದಂ ನತ್ಕವೀಶ್ವರಂ ಶಾಸನಮಂ।
ಪರಮಪ್ರಕಾಶ ಯೋಗೀ
ಶ್ವರತನಯಂ ಬ್ರಹ್ಮವಿದ್ಯೈಗಾಸ್ಪದರೂಪಂ ॥

ಈ ಶಾಸನದ ಕರ್ತೃವಾದ ಚಿದಾನಂದನೂ ಸೂಕ್ತಿಸುಧಾರ್ಣವದ

[1] ಈ ಶಾಸನದ ಮತ್ತೆರಡು ಪದ್ಯಗಳು ನಾಯಕಾಭ್ಯುದಯ ವರ್ಣನೆಯಲ್ಲಿವೆ.

ಸಂಯೋಜಕನಾದ ಮಲ್ಲಿಕಾರ್ಜುನನೂ ಅಭಿನ್ನರಾಗಿರಬೇಕು. ಏಕೆಂದರೆ ಮಲ್ಲಿಕಾರ್ಜುನನು ಸೂಕ್ತಿಸುಧಾರ್ಣವದ ಪೀಠಿಕಾ ಪ್ರಕರಣದ ಲನೆಯ ಪದ್ಯವಾದ

ಸರಸಕವೀಶ್ವರ ಸಭೆಯೊಳ್
ಸರಸಕವೀಶಂ ವಿಶಿಷ್ಟಮುನಿಗಳ ಸಭೆಯೊಳ್ ।
ಪರಮಮುನಿ ಬುಧರ ಸಭೆಯೊಳ್
ಪರಮಬುಧನೆನಿಪ್ಪನೀ ಚಿದಾನಂದಬುಧಂ ॥

ಎಂಬ ಪದ್ಯದಲ್ಲಿ ತನ್ನ ಹೆಸರು ಚಿದಾನಂದನೆಂದು ವ್ಯಕ್ತವಾಗಿಯೇ ತಿಳಿಸಿದ್ದಾನೆ. ಅಲ್ಲದೆ ಆಶ್ವಾಸಾಂತ್ಯದ ಗದ್ಯದಲ್ಲೆಲ್ಲಾ ಪರಮಚಿದಾನಂದ ಮಲ್ಲಿಕಾರ್ಜುನ ಕವೀಶ್ವರ ಸಂಯೋಜಿತಮಪ್ಪ ಎಂದು ಚಿದಾನಂದ ವಿಶಿಷ್ಟವಾಗಿಯೇ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಅದೂ ಅಲ್ಲದೆ ಸುಮನೋಬಾಣನ ದೌಹಿತ್ರನೂ ಮಲ್ಲಿಕಾರ್ಜುನನ ಮಗನೂ ಆದ [redacted]ಕೇಶಿರಾಜನು ತನ್ನನ್ನು 'ಯೋಗಿಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತ[redacted]ಎಂದು ವಿಶೇಷಿಸಿಕೊಂಡಿದ್ದಾನೆ. ಈ ಎಲ್ಲ ಕಾರಣಗಳಿಂದ ಮಲ್ಲಿಕಾರ್ಜುನನಿಗೆ ಮಲ್ಲ, ಮಲ್ಲಪ, ಮಲ್ಲಿಕಾರ್ಜುನ, ಚಿದಾನಂದ, ಚಿದಾನಂದಮಲ್ಲಿಕಾರ್ಜುನ ಎಂಬ ಪರ್ಯಾಯನಾಮಗಳಿದ್ದು ಅವನೇ ಬಸರಾಳು ಮತ್ತು ನಾಗಮಂಗಲದ ೯ಲನೆಯ ಶಾಸನಗಳನ್ನು ರಚಿಸಿ ತಾನು ರಚಿಸಿದ ಆ ಶಾಸನಗಳಿಂದಲೇ ಸೂಕ್ತಿಸುಧಾರ್ಣವದಲ್ಲಿ ಪದ್ಯಗಳನ್ನು ಉದ್ಧರಿಸಿರಬಹುದು. ಶ್ರೀಮಾ೯ ಡಾ॥ ಎ. ವೆಂಕಟಸುಬ್ಬಯ್ಯನವರು ತಮ್ಮ 'ಕೆಲವು ಕನ್ನಡಕವಿಗಳ ಜೀವನಕಾಲವಿಚಾರ'[3] ಎಂಬ ಪುಸ್ತಕದಲ್ಲಿಯೂ ಡಾ ॥ ಎಂ. ಎಚ್. ಕೃಷ್ಣ ಅವರು ಮೈಸೂರು ಶಾಸನದ ಇಲಾಖೆ ೧೯೩೧ನೆಯ ವರುಷದ ವರದಿ[4] ಮತ್ತು ಪ್ರಬುದ್ಧ ಕರ್ಣಾಟಕದ ೧೫ನೆಯ ಸಂಪುಟ ಇವುಗಳಲ್ಲಿಯೂ[5] ಹೀಗೆಯೇ ಅಭಿಪ್ರಾಯಪಟ್ಟಿದ್ದಾರೆ. ಆದರೆ ಕವಿಚರಿತೆಕಾರರಾದ ಶ್ರೀಮಾ೯ ಆರ್. ನರಸಿಂಹಾಚಾರ್ಯರು ಬಸ್ತರಾಳು ಶಾಸನದ ಕರ್ತೃವು ಚಿದಾನಂದನೆಂದೂ ಆತನು ಸ್ಮಾರ್ತ ಬ್ರಾಹ್ಮಣನೆಂದೂ ಜೈನನಾದ ಸೂಕ್ತಿಸುಧಾರ್ಣವದ ಸಂಯೋಜಕನಾದ ಮಲ್ಲಿಕಾರ್ಜುನನಿಂದ ಭಿನ್ನನೆಂದೂ ಕವಿಚರಿತೆಯ ಒಂದನೆಯ ಸಂಪುಟದಲ್ಲಿ[6] ಹೇಳಿರುವುದಲ್ಲದೆ ಮೂರನೆಯ ಸಂಪುಟದ ಪೀಠಿಕೆಯಲ್ಲಿ[7] ಕೆಲವು ಆಕ್ಷೇಪಣೆಗಳಿಗೆ ಉತ್ತರ ಹೇಳುತ್ತಾ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾರೆ. ಆಚಾರ್ಯರು ಮಲ್ಲಿಕಾರ್ಜುನನು ಜೈನನೆಂಬುದನ್ನು ಮೊದಲು ಅಂಗೀಕಾರಮಾಡಿ ಆ ಕಾರಣದಿಂದ ಅವನು ಚಿದಾನಂದನಿಂದ ಭಿನ್ನನೆಂದು ಸಿದ್ಧಾಂತಮಾಡಿದ್ದಾರೆ. ಆದರೆ ಈ ಅಭಿಪ್ರಾಯವು ಭ್ರಮಮೂಲವೆಂಬುದೂ ಮಲ್ಲಿಕಾರ್ಜುನನು ಜೈನನೆಂದೇ ಹೇಳಲು ಸಾಧ್ಯವಿಲ್ಲವೆಂಬುದೂ ಮುಂದೆ ವಿಶದವಾಗುವುದು. ಆದುದರಿಂದ ಬಸರಾಳು

---

[2] ಶಬ್ದಮಣಿದರ್ಪಣ, ಪೀಠಿಕೆಯ ೨ನೆಯ ಪದ್ಯ. [3] ೧೮೭ರಿಂದ ೧೮೯ನೆಯ ಪುಟಗಳಲ್ಲಿ. [4] ಪುಟ ೮೨. [5] ಪ್ರ. ಕ. ೧೫–೪, ಪುಟ ೮೨–೮೪. [6] ಕ. ಚ. ಒಂದನೆಯ ಸಂಪುಟ, ಪುಟ ೩೫೪–೫೫, ಮತ್ತು ೩೬೯–೭೦. [7] ಕ. ಚ. ಸಂಪುಟ ೩, ಪೀಠಿಕೆ ಪುಟ ೫೮–೬೦.

ಶಾಸನದ ಕರ್ತೃವಾದ ಚಿದಾನಂದನೂ ಮಲ್ಲಿಕಾರ್ಜುನನೂ ಏಕವ್ಯಕ್ತಿಗಳೆಂದು ಅಂಗೀಕಾರಮಾಡಬಹುದು.

ಮಲ್ಲಿಕಾರ್ಜುನನ ಮತವಿಚಾರದಲ್ಲಿಯೂ ಹೀಗೆಯೇ ಭಿನ್ನಾಭಿಪ್ರಾಯಗಳಿವೆ. ಶ್ರೀಮಾನ್ ಡಾ॥ ಎ. ವೆಂಕಟಸುಬ್ಬಯ್ಯನವರು ಮಲ್ಲಿಕಾರ್ಜುನನು ನಾಮಾರ್ತ ಬ್ರಾಹ್ಮಣನಿರಬಹುದೆಂದು ಸೂಚಿಸಿದ್ದಾರೆ.[8] ಆದರೆ ಕವಿಚರಿತೆಕಾರರು 'ಕವಿಚರಿತ್ರೆಯ ಪ್ರಥಮ ಸಂಪುಟದ ದ್ವಿತೀಯ ಮುದ್ರಣದಲ್ಲಿ 'ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಈತನು ಜೈನಕವಿ' ಎಂದು ಹೇಳಿರುವುದಲ್ಲದೆ ಮೂರನೆಯ ಸಂಪುಟದ ಪೀಠಿಕೆಯಲ್ಲಿ, 'ಜನ್ನನು ಸುಮನೋಬಾಣನ ಮಗನೆಂಬುದಕ್ಕೂ ಜೈನನಾದ ಮಲ್ಲಿಕಾರ್ಜುನ ಕೇಶಿರಾಜರ ಬಂಧುವೆಂಬುದಕ್ಕೂ ಆವ ಸಂದೇಹವೂ ಇಲ್ಲ. ಮಲ್ಲಿಕಾರ್ಜುನ ಕೇಶಿರಾಜರು ಜೈನರೆಂಬುದು ಮುಖ್ಯವಾಗಿ ಮೊದಲನೆಯವನು ಸೂಕ್ತಿಸುಧಾರ್ಣವದ ಆರಂಭದಲ್ಲಿ ಮಾಡಿರುವ ಜಿನಸ್ತುತಿಯಿಂದಲೂ ಎರಡನೆಯವನು ಶಬ್ದಮಣಿದರ್ಪಣದ ಒಂಬತ್ತನೆಯ ನ[redacted]ದಲ್ಲಿ '' ಶಬ್ದದ್ರವ್ಯಂ ಶ್ವೇತಂ '' ಎಂಬುದರಿಂದಲೂ ಸ್ಪಷ್ಟವಾಗುವುದು' ಎಂ[redacted]ರುವರು. ಆದರೆ ಈ ಅಭಿಪ್ರಾಯವು ಸಾಧುವೂ ಸಾಧಾರವಾದುದೂ ಎಂದು ಒಪ್ಪಲು ಸಾಧ್ಯವಿಲ್ಲ. ಅಲ್ಲದೆ ಈ ವಿಷಯದಲ್ಲಿ ಅವರಿಗೇ ಸಂದೇಹವಿದ್ದಂತೆ ತೋರುತ್ತದೆ. ಅವರೇ ಕವಿಚರಿತ್ರೆಯ ಪ್ರಥಮ ಸಂಪುಟದ ಮೊದಲನೆಯ ಮುದ್ರಣದಲ್ಲಿ ಜಿನಸ್ತುತಿಯ ವಿಷಯವನ್ನೇ ಹೇಳಿಲ್ಲ. ಈಗ ದೊರೆತಿರುವ 'ಸೂಕ್ತಿಸುಧಾರ್ಣವ'ದ ನರಿಯಾದ ಪಾಠವೆಂದು ಒಪ್ಪಬಹುದಾದ ನಾಲ್ಕು ಪ್ರತಿಗಳಲ್ಲಿಯೂ ಜಿನಸ್ತುತಿಯಿರುವುದಿಲ್ಲ. ಜಿನಸ್ತುತಿಯಿರುವ ಗ್ರಂಥವು ಮಲ್ಲಿಕಾರ್ಜುನನ 'ಸೂಕ್ತಿಸುಧಾರ್ಣವ'ವಲ್ಲವೆಂಬುದು ಮುಂದೆ ವ್ಯಕ್ತವಾಗುವುದು ಈ ಜಿನಸ್ತುತಿಯೇ ಆಧುನಿಕನೊಬ್ಬನಿಂದ ಪ್ರಕ್ಷಿಪ್ತವಾಗಿದ್ದರೂ ಇರಬಹುದು ಅದೂ ಅಲ್ಲದೆ ಪರಿಚಿತವಾಗಿರುವ ಯಾವ ಜೈನಕವಿಯಾಗಲಿ ಗ್ರಂಥಾರಂಭದಲ್ಲಿ ಒಂದು ಪದ್ಯದಲ್ಲಿ ಜಿನಸ್ತುತಿಮಾಡಿ ಮುಂದೆ ಜೈನೇತರ ದೇವತೆಗಳಾದ ಶಿವ, ವಿಷ್ಣು, ಗಜಾನನ, ಸರಸ್ವತಿ ಮೊದಲಾದವರನ್ನು ಪ್ರಾರ್ಥನೆಮಾಡಿರುವುದು ಕಂಡುಬರುವುದಿಲ್ಲ. ಲೌಕಿಕ ಕಾವ್ಯಗಳಲ್ಲಿ ಅದಕ್ಕನುಗುಣವಾದ ದೇವತಾವ್ಯೂಹವನ್ನೂ ಧಾರ್ಮಿಕ ಪುರಾಣಗ್ರಂಥಗಳಲ್ಲಿ ಜೈನಮತದೀಪಕರಾದ ಪಂಚಪರಮೇಷ್ಠಿ, ಯಕ್ಷಯಕ್ಷಿಯರು ಮೊದಲಾದವರನ್ನೂ ಸ್ತೋತ್ರಮಾಡುವುದು ವಾಡಿಕೆ ಭಿನ್ನಸಮಯಗಳಿಗೆ ಸಂಬಂಧಪಟ್ಟ ದೈವಗಳನ್ನು ಏಕತ್ರ ಸ್ತುತಿಸಿರುವುದು ಎಲ್ಲಿಯೂ ಕಂಡುಬರುವುದಿಲ್ಲ.

ಮಲ್ಲಿಕಾರ್ಜುನನು ಜೈನನೇ ಎಂಬುದಕ್ಕೆ ಆಂತರಪ್ರಮಾಣಗಳು ಕೂಡ ದೊರೆಯುವಂತಿಲ್ಲ. ಊಹಿಸಬಹುದಾದ ಕೆಲವು ಸಾಧನಗಳೂ ಅದಕ್ಕೆ ವ್ಯತಿರಿಕ್ತವಾಗಿವೆ. ಸಂಕಲಿತ ಗ್ರಂಥವಾದುದರಿಂದ ಅಲ್ಲಿ ಎಲ್ಲ ಧರ್ಮದ ಗ್ರಂಥಗಳಿಂದಲೂ ಪದ್ಯಗಳು ಉದ್ಧೃತವಾಗಿವೆ. ಅವುಗಳೆಲ್ಲ ಸಾಮಾನ್ಯವಾಗಿ ಪ್ರಕೃತಿವರ್ಣನೆಗೆ ಸಂಬಂಧಪಟ್ಟವುಗಳೇ. ಆದರೂ ಪ್ರಾಸಂಗಿಕವಾಗಿ ಬರುವ ವ್ಯಕ್ತಿವರ್ಣನೆಗಳ

---

[8] ಕೆ ಕ. ಜೀ. ಕಾ. ಪುಟ ೧೮೬ ರಿಂದ ೧೮೯.

ಲ್ಲಿಯೂ ಸನ್ನಿವೇಶ ವರ್ಣನೆಗಳಲ್ಲಿಯೂ ಪೈದಿಕಪಕ್ಷಪಾತವು ಕಾಣುತ್ತದೆಯೇ ವಿನಾ ಜೈನವಾಸನೆ ಇರುವಹಾಗೆ ಕಾಣುವುದಿಲ್ಲ.

'ಜೀವದಯೆ ಜೈನಧರ್ಮಂ' ಎಂದು ನಂಬಿರುವ ಜೈನರಿಗೆ ಮೃಗಯಾ ವಿನೋದ ಜೀವನದಲ್ಲಂತು ಗ್ರಾಹ್ಯವಲ್ಲ. ಜೈನಪುರಾಣಗಳಲ್ಲಿ ಆದಕ್ಕೆ ಹೆಚ್ಚು ಅವಕಾಶವಿಲ್ಲ. ಲೌಕಿಕ ಕಾವ್ಯಗಳಲ್ಲಿಯೂ ಯಥೋಚಿತವಾಗಿ ಸಂಗ್ರಹವಾಗಿ ವರ್ಣಿತವಾಗಿದೆ. 'ಸೂಕ್ತಿಸುಧಾರ್ಣವ'ದಲ್ಲಾದರೋ ಪರ್ವತವರ್ಣನಾಭಾಗದ ಸುಮಾರು ೮೫ ಪದ್ಯಗಳಲ್ಲಿ ನಾನಾವಿಧ ಬೇಂಟೆಗಳು ವಿಸ್ತಾರವಾಗಿ ಉಕ್ತವಾಗಿರುವುದಲ್ಲದೆ ಮೃಗಯಾವಿನೋದವು ವ್ಯಸನವಲ್ಲ, ದೋಷವಲ್ಲ, ಸಂಪ್ರದಾಯಬದ್ಧವಾದ ಸತ್ಕಾರ್ಯ ಎಂದು ಸಿದ್ಧಾಂತಮಾಡುವ ಮುಂದಿನ ಎರಡು ಪದ್ಯಗಳು ಉದಾಹೃತವಾಗಿವೆ :—

ಮೊದಲೊಳುಮಾಮಹೇಶ್ವರನೆ ಬೇಡರ ರೂಪನೆ ತಾಳ್ದಿ ಬೇಂಟೆಯಾ
ಡಿದನಿನವಂಶಜರ್ ಪಲಬರುಂ ನೃಪರಟ್ಟಿಯೊಳಂತು ಬೇಂಟೆಯಾ ।
ಡಿದರಮೃತಾಂಶು ವಂಶತಿಲಕರ್ ಮೃಗಯಾರ್ಥಿಗಳಾಗಿ ಬೇಂಟೆಯಾ
ಡಿದರೆನೆ ದೋಷಮಿಲ್ಲಱಿಯದರ್ ಪಟಿವರ್ ಮೃಗಯಾವಿನೋದವಂ ॥

ವಶಮಕ್ಕುಂ ಬಲಲಕ್ಷ್ಯಸಿದ್ಧಿ ನಿಬಿಡವ್ಯಾಯಾಮನಿರ್ಬಂಧಕ
ರ್ಕಶಮಕ್ಕುಂ ತನು ಕೋೞ್ಮಗಂಗಳಟಪಿಂ ವಿದ್ವಿಷ್ಟಬಾಹಾಬಲಂ ।
ಕೃಶಮಕ್ಕುಂ ಮುನಿಭಿನ್ನಪೋವನಮುಮೀ ಶ್ರೀರಕ್ಷಯಿಂದಂ ನೃಪ
ರ್ಗೆಶಮಕ್ಕುಂ ಗಡ ಬೇಂಟೆಯಂ ಬೆಸನಮೆಂದಾರೇೞಿಪರ್ ಲೋಕದೊಳ್ ॥[9]

ಈ ಪದ್ಯಗಳಿಗೂ ಇಲ್ಲಿ ಉದ್ಧೃತವಾಗಿರುವ ಇತರ ಸುಮಾರು ೬೫ ಪದ್ಯಗಳಿಗೂ ಆಕರವೇ ಸಿಕ್ಕಿಲ್ಲ. ಇವುಗಳು ಈಗ ನಷ್ಟವಾಗಿರುವ ಇತರ ಗ್ರಂಥಗಳಿಂದಲೋ ಅಥವಾ ಮಲ್ಲಿಕಾರ್ಜುನ ಕೇಶಿರಾಜರ ಅನುಪಲಬ್ಧ ಗ್ರಂಥಗಳಿಂದಲೋ ಆಯ್ದುವಾಗಿರಬೇಕು. ಮಲ್ಲಿಕಾರ್ಜುನನು ಜೈನನೇ ಆಗಿದ್ದರೆ ಬೇಟೆಗೆ ಇಷ್ಟು ಪ್ರಾಶಸ್ತ್ಯವನ್ನು ಕೊಡುತ್ತಿದ್ದನೆ ?

ಮಲ್ಲಿಕಾರ್ಜುನನ ಬಂಧುಗಳಾದ ಸುಮನೋಬಾಣ, ಕೇಶಿರಾಜ, ಜನ್ನ ಮೊದಲಾದವರ ಚರಿತ್ರದಿಂದಲೂ ಈತನು ಜೈನನೆಂದು ಸಿದ್ಧಾಂತಮಾಡಲು ಸಾಧ್ಯವಿಲ್ಲ. ಸುಮನೋಬಾಣನ ಗ್ರಂಥಗಳಾವುದೂ ದೊರೆತಿಲ್ಲ. ಆತನ ಮತದ ವಿಷಯವಾಗಿ ಯಾವ ನಿರ್ದಿಷ್ಟವಾದ ಅಭಿಪ್ರಾಯಗಳೂ ತಿಳಿದುಬಂದಿಲ್ಲ. ' ಶಬ್ದದ್ರವ್ಯಂ ಜನಿಯಿಸುಗುಂ ಶ್ವೇತಂ' ಎಂಬ ಒಂದು ವಾಕ್ಯವನ್ನು ಬಿಟ್ಟರೆ ಮತ್ತೆಲ್ಲಿಯೂ ಕೇಶಿರಾಜನು ಜೈನನೆಂದು ಊಹಿಸಲು ಆಧಾರಗಳಿಲ್ಲ. ಗ್ರಂಥಾಂತ್ಯದಲ್ಲಿ ತನ್ನಿಂದ ರಚಿತವಾದುವುಗಳೆಂದು ಆತನು ಹೇಳುವ 'ಚೋೞಪಾಲಕಚರಿತ,' 'ಸುಭದ್ರಾಹರಣ,' 'ಪ್ರಬೋಧಚಂದ್ರ' ಮತ್ತು 'ಕಿರಾತ' ಎಂಬ ಗ್ರಂಥಗಳ ಹೆಸರುಗಳನ್ನು ನೋಡಿದರೆ ಆತನು ಜೈನನೋ ಅಲ್ಲವೋ ಎಂಬ ಸಂದೇಹ ಹುಟ್ಟುತ್ತದೆ. ಜನ್ನನು ಮಲ್ಲಿಕಾರ್ಜುನನ ಬಂಧುವಲ್ಲವೆಂದೇ ಡಾ॥ ಎ. ವೆಂಕಟಸುಬ್ಬಯ್ಯನವರ ವಾದ.[9] ಒಂದು

[9] ಕೆ. ಕ. ಚೀ, ಪುಟ ೧೨೪–೧೩೦,

ವೇಳೆ ಆಗಿದ್ದರೂ ಭಾವಮೈದರು ಏಕಧರ್ಮಿಗಳಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ. ತಂದೆಮಕ್ಕಳೇ ಭಿನ್ನಸಮಯಿಗಳಾಗಿದ್ದುದಕ್ಕೆ ಬೇಕಾದಷ್ಟು ಆಧಾರಗಳಿರುವಾಗ ಭಾವಮೈದರ ವಿಷಯವಾಗಿ ಚರ್ಚೆಮಾಡಬೇಕಾದುದೇ ಇಲ್ಲ.

ಈ ಎಲ್ಲ ಕಾರಣಗಳಿಂದ ಮಲ್ಲಿಕಾರ್ಜುನನು ಜೈನನಾಗಿದ್ದಿರಲಾರನೆಂದು ಕಾಣುತ್ತದೆ. ಆತನು ತನ್ನನ್ನು 'ಯೋಗಿಪ್ರವರ' ಎಂಬುದಾಗಿ ವಿಶೇಷಿಸಿಕೊಂಡಿರುವುದರಿಂದಲೂ ಇವನಿಂದ ಅಭಿನ್ನನೆಂದು ನಾವು ಸೂಚಿಸಿರುವ ಬಸರಾಳು ಶಾಸನದ ಕರ್ತೃವಾದ ಚಿದಾನಂದನು ತನ್ನನ್ನು 'ಬ್ರಹ್ಮವಿದ್ಯೆಗಾಸ್ಪದ ರೂಪಂ' ಎಂಬುದಾಗಿ ಸಂಬೋಧಿಸಿಕೊಂಡಿರುವುದರಿಂದಲೂ ಈತನು ವೈದಿಕ ಮತಾನುಯಾಯಿಯೆಂದು ಹೇಳಬಹುದು.

ಸೂಕ್ತಿಸುಧಾರ್ಣವದಲ್ಲಿ ಅದರ ರಚನೆಯ ಕಾಲವನ್ನು ಎಲ್ಲಿಯೂ ತಿಳಿಸಿಲ್ಲ. ಅದರಲ್ಲಿ ಉದ್ಧೃತವಾಗಿರುವ ಪದ್ಯಗಳ ಕರ್ತೃಗಳ ಆಧಾರದ ಮೇಲೆ ಇದನ್ನು ಪೂರ್ಣವಾಗಿ ನಿಷ್ಕರ್ಷ ಮಾಡಲು ಸಾಧ್ಯವಿಲ್ಲ. ಅವರಲ್ಲನೇಕರ ಕಾಲವನ್ನು ಸೂಕ್ತಿಸುಧಾರ್ಣವದ ಕಾಲದ ಆಧಾರದ ಮೇಲೆಯೇ ನಿಶ್ಚಯಿಸಬೇಕಾಗಿದೆ. ಅದರಲ್ಲಿ ಉಕ್ತವಾಗಿರುವ ಕವಿಗಳಲ್ಲಿ ನಿಷ್ಕೃಷ್ಟವಾಗಿ ಕಾಲವು ಗೊತ್ತಿರುವ ಒಬ್ಬಿಬ್ಬರಿಂದ ಅದರ ಪೂರ್ವಮಿತಿಯನ್ನು ಮಾತ್ರ ಸೂಚಿಸಬಹುದು. ಅಂತಹವರಲ್ಲಿ ಜನ್ನ ಕವಿಯೊಬ್ಬ. ಆತನು ತನ್ನ 'ಅನಂತನಾಥಪುರಾಣ'ವನ್ನು ಕ್ರಿ. ಶ. ೧೨೫೦ರಲ್ಲಿ ರಚಿಸಿದುದಾಗಿ ಸ್ಪಷ್ಟವಾಗಿ ತಿಳಿಸಿದ್ದಾನೆ. ಆದುದರಿಂದ ಸೂಕ್ತಿಸುಧಾರ್ಣವವು ಈ ಕಾಲಕ್ಕೆ ಈಚಿನದೆಂದು ಮಾತ್ರ ಹೇಳಬಹುದು. ಎಷ್ಟು ಈಚಿನದು ಅಥವಾ ಯಾವ ವರ್ಷದಲ್ಲಿ ಗ್ರಥಿತವಾಯಿತೆಂಬುದನ್ನು [ಅಲ್ಲಿ ಉಕ್ತರಾದ ಕವಿಗಳಿಂದ] ಸಿದ್ಧಾಂತಮಾಡಲು ಸಾಧ್ಯವಿಲ್ಲ. ಸೂಕ್ತಿಸುಧಾರ್ಣವವು ಹೊಯ್ಸಳ ವೀರಸೋಮಿದೇವನ ವಿನೋದಾಕರ್ಣನ ಕೌತುಕೋತ್ಪಾದನಕ್ಕಾಗಿ ಆತನು ದೋರಸಮುದ್ರದಲ್ಲಿದ್ದಾಗ ರಚಿತವಾದ ವಿಷಯ ಸ್ಪಷ್ಟ. ಆತನ ಕಾಲವು ಖಚಿತವಾಗಿ ತಿಳಿದರೆ ಸುಧಾರ್ಣವದ ಕಾಲವೂ ನಿಶ್ಚಿತವಾಗುವುದು. ಸೋಮೇಶ್ವರನ ಕಾಲದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಕವಿಚರಿತೆಕಾರರು ಸೋಮೇಶ್ವರನು ಕ್ರಿ. ಶ. ೧೨೩೫ರಿಂದ ೧೨೫೪ರವರೆಗೆ ಆಳಿದನೆಂದೂ ಆದುದರಿಂದ ಸೂಕ್ತಿಸುಧಾರ್ಣವವು ಸು. ೧೨೪೫ರಲ್ಲಿ ರಚಿತವಾಗಿರಬಹುದೆಂದೂ ಊಹಿಸುತ್ತಾರೆ. ಆದರೆ ರಾವ್‌ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಗಳು ವೀರಸೋಮೇಶ್ವರನ ಆರಂಭದ ವರ್ಷವನ್ನು ೧೨೩೪ ಎಂದು ಒಪ್ಪಿಕೊಂಡು ತಿರುಚನಾಪಳ್ಳಿ ಜಿಲ್ಲೆಯ ತಿರುವಾತಿಯ ಶಾಸನದಲ್ಲಿ ಉಕ್ತವಾಗಿರುವ ಸೋಮೇಶ್ವರನ ೨೯ನೆಯ ವರ್ಷವೆಂದು ತಿಳಿಸುವ ಕಾಲದ ಆಧಾರದ ಮೇಲೆ ಆತನು ಕ್ರಿ. ಶ. ೧೨೬೩ರವರೆಗೆ ಜೀವಿಸಿದ್ದನೆಂದು ಹೇಳಿರುವರು.[10] ಇದರ ಆಧಾರದ ಮೇಲೆಯೂ 'ಹಣಿದಂ ಕೊಯ್ಯಲ್'[11] ಎಂಬ ಸೂಕ್ತಿಸುಧಾರ್ಣವದ ಒಂದು ಪದ್ಯದಲ್ಲಿ 'ಎಲೆಲೆ ಮಹಾದೇವ' ಎಂದು ಉಕ್ತವಾಗಿರುವುದರ ಆಧಾರದ ಮೇಲೆಯೂ ಸೋಮೇಶ್ವರನು

---

[10] ಆದೇ ಗ್ರಂಥ ೧೮೨—೮೩. [11] ಸೂಕ್ತಿಸುಧಾರ್ಣವಂ, ೧—೨೧.

ಸೇವುಣರಾಜನಾದ ಮಹಾದೇವನ ಸಮಕಾಲೀನನೆಂದೂ ಆದುದರಿಂದ ಇವನು ೧೨೬೫ರವರೆಗೂ ಜೀವಿಸಿರಬಹುದೆಂದೂ ಮಹಾದೇವನು ಪಟ್ಟಕ್ಕೆ ಬಂದಮೇಲೆ ಸೋಮೇಶ್ವರನು ಜಟಾವರ್ಮಸುಂದರಪಾಂಡ್ಯನಿಂದ ಹತನಾಗುವುದಕ್ಕೆ ಮುಂಚೆ ಅಂದರೆ ೧೨೬೦ರ ಮೇಲೆ ೧೨೬೫ರೊಳಗೆ ಸೂಕ್ತಿಸುಧಾರ್ಣವವು ರಚಿತವಾಗಿರಬೇಕೆಂದೂ ಡಾ॥ ಅಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಮೈಸೂರು ಶಾಸನದ ಇಲಾಖೆಯ ಅಧ್ಯಕ್ಷರಾದ ಡಾ॥ ಎಂ. ಎಚ್. ಕೃಷ್ಣ ಅವರು ತಮ್ಮ ಇಲಾಖೆಯ ೧೯೩೧ನೆಯ ವರ್ಷದ ವರದಿಯಲ್ಲಿ ಈ ಎಲ್ಲಾ ಅಭಿಪ್ರಾಯಗಳನ್ನು ವಿಮರ್ಶಿಸಿ ತಮ್ಮ ಸಿದ್ಧಾಂತವನ್ನು ಈ ರೀತಿ ಸೂಚಿಸಿದ್ದಾರೆ: "ವೀರಸೋಮೇಶ್ವರನು ತನ್ನ ತಂದೆಯಾದ ಇಮ್ಮಡಿ ನರಸಿಂಹನು ರಾಜ್ಯಭಾರ ಮಾಡುತ್ತಿದ್ದಾಗಲೇ ಆತನ ಪ್ರತಿನಿಧಿಯಾಗಿಯೋ ಯುವರಾಜನಾಗಿಯೋ ತಮಿಳುದೇಶದಲ್ಲಿ ರಾಜ್ಯಭಾರಮಾಡುತ್ತಿದ್ದು ಅವನ ಅಂತಿಮಕಾಲಕ್ಕೆ ಕರ್ಣಾಟಕಕ್ಕೆ ಬಂದು ಕ್ರಿ. ಶ. ೧೨೩೪ರಲ್ಲಿ ದೋರಸಮುದ್ರದಲ್ಲಿ ಪಟ್ಟಾಭಿಷಿಕ್ತನಾಗಿರಬೇಕು. ಆ ಕಾಲದಿಂದ ಅಂದರೆ ಕ್ರಿ. ಶ. ೧೨೩೪ ರಿಂದ ಕರ್ಣಾಟಕದಲ್ಲಿ ಇವನ ರಾಜ್ಯಭಾರದ ಗಣನೆಯು ಆಗಿರಬೇಕು. ತಮಿಳು ದೇಶದಲ್ಲಾದರೋ ಇವನು ಯುವರಾಜನಾದ ಕಾಲದಿಂದ ಕಾಲಗಣನೆಮಾಡಿರಬೇಕು. ನಂಜನಗೂಡಿನ ೩೬ನೆಯ ಶಾಸನವು ವೀರಸೋಮೇಶ್ವರನು ೧೨೨೮ರಲ್ಲಿ ಕಣ್ಣನೂರಿನಲ್ಲಿ ರಾಜ್ಯಭಾರ ಮಾಡುತ್ತಿದ್ದನೆಂದು ತಿಳಿಸುವುದು. ೧೨೩೦ರಲ್ಲಿ ರಚಿತವಾದ ನಾಗಮಂಗಲದ ೯ನೆಯ ಶಾಸನದಲ್ಲಿ 'ವೀರಸೋಮೇಶ್ವರ ದೇವರು ದೋರಸಮುದ್ರದೊಳ್ ಸುಖಸಂಕಥಾವಿನೋದದಿಂ ಪೃಥ್ವೀರಾಜ್ಯಂಗೈಯುತ್ತಿರೆ' ಎಂದಿದೆ. ಈ ಕಾಲಗಣನೆಯ ಪ್ರಕಾರ ಇರುವ ಇವನ ಎರಡನೆಯ ಮತ್ತು ಅಯ್ದನೆಯ ವರ್ಷದ ಶಾಸನಗಳು ತಿರುಚನಾಪಳ್ಳಿ ಜಿಲ್ಲೆಯಲ್ಲಿ ಸಿಕ್ಕುತ್ತವೆ. ಆದುದರಿಂದ ತಮಿಳುನಾಡಿನಲ್ಲಿ ಕ್ರಿ. ಶ. ೧೨೨೮ನ್ನು ಇವನ ರಾಜ್ಯಭಾರದ ಆರಂಭ ಕಾಲವನ್ನಾಗಿ ಇಟ್ಟುಕೊಂಡಿರಬೇಕು. ಕನ್ನಡನಾಡಿನಲ್ಲಾಗಲಿ ತಮಿಳುನಾಡಿನಲ್ಲಾಗಲಿ ಕ್ರಿ. ಶ. ೧೨೫೬ನೆಯ ವರ್ಷದ ಮೇಲೆ ಸೋಮೇಶ್ವರನ ಶಾಸನಗಳಾವುವೂ ಸಿಕ್ಕುವುದಿಲ್ಲ. ಕರ್ಣಾಟಕದಲ್ಲಿ ಇವನ ಮಗ ಮುಮ್ಮಡಿ ನರಸಿಂಹನ ಶಾಸನಗಳು ೧೨೫೭ರಿಂದ ಪ್ರಾರಂಭವಾಗುವುವು. ದಕ್ಷಿಣದಲ್ಲಿಯೂ ಇವನ ಮತ್ತೊಬ್ಬ ಮಗ ರಾಮನಾಥನು ಕ್ರಿ. ಶ. ೧೨೫೭ರಲ್ಲಿ ಆಳುತ್ತಿದ್ದನೆಂದು ಶ್ರೀರಂಗದ ರಂಗನಾಥಸ್ವಾಮಿಯ ದೇವಸ್ಥಾನದ ೪೭ನೆಯ ಶಾಸನವು ತಿಳಿಸುವುದು. ತಮಿಳು ನಾಡಿನ ಶಾಸನಗಳಲ್ಲಿ ಸೂಚಿಸಿರುವ ವರ್ಷಗಳೆಲ್ಲ ಅವನು ಅಲ್ಲಿ ರಾಜ್ಯಭಾರ ಮಾಡುವುದಕ್ಕೆ ಮೊದಲು ಮಾಡಿದ ಕಾಲವನ್ನು ಸೂಚಿಸುತ್ತವೆ. ಅಲ್ಲಿ ಶಕವರ್ಷಗಳಾಗಲಿ ಚಾಂದ್ರಸಂವತ್ಸರಗಳಾಗಲಿ ಉಕ್ತವಾಗಿಲ್ಲ. ಕರ್ಣಾಟಕದಲ್ಲಿಯಾದರೋ ರಾಜ್ಯಭಾರದ ವರ್ಷಗಳನ್ನು ಸೂಚಿಸದೆ ಶಕಸಂವತ್ಸರಗಳನ್ನೂ ಚಾಂದ್ರಮಾನವರ್ಷಗಳನ್ನೂ ಹೇಳಿವೆ. ಅವನ ಜೀವಿತದ ಕೊನೆಯ ಶಾಸನವು ಹೆಗ್ಗಡದೇವನಕೋಟೆಯ ಹತ್ತನೆಯದು. ಅದರ ಕಾಲ ಶಕ ೧೧೭೮

ಅಥವಾ ಕ್ರಿ. ಶ. ೧೨೫೫. ಆಗ ಆತ ಜೀವಂತನಾಗಿರಬೇಕು. ಕೃಷ್ಣರಾಜ ಪೇಟೆಯ ೯ನೆಯ ಶಾಸನವಾದ ಬಾಚಳ್ಳಿ ಶಾಸನವು ಕ್ರಿ. ಶ ೧೨೫೬ರಲ್ಲಿ ಸೋಮೇಶ್ವರನು ಪರಂಧಾಮವನ್ನೈದಿದ್ದನೆಂದು ಸ್ಪಷ್ಟವಾಗಿ ಹೇಳುವುದು. ಆದುದರಿಂದ ಸೋಮೇಶ್ವರನ ರಾಜ್ಯಭಾರವು ೧೨೨೮ರಿಂದ ೧೨೫೬ರವರೆಗಿರಬೇಕು. ಸುಂದರಪಾಂಡ್ಯನಿಂದ ಸೋಮೇಶ್ವರನು ಹತನಾದನೆಂದು ಕೃಷ್ಣ ಶಾಸ್ತ್ರಿಗಳು ಊಹಿಸಿರುವುದಕ್ಕೂ ಇದು ವಿರೋಧವಾಗಿಲ್ಲ. ೧೨೫೪ರಿಂದ ೧೨೭೧ರವರೆಗೆ ಆತನು ರಾಜ್ಯಭಾರಮಾಡಿದುದರಿಂದ ಆತನು ೧೨೫೬ರಲ್ಲಿ ಸೋಮೇಶ್ವರನನ್ನು ಸಂಹಾರ ಮಾಡಿರಬಹುದು. 'ಮುನ್ನಂ ರೂಢಿಯ ಕೃಷ್ಣ ಕಂಧರನಂ' ಎಂಬ ಪದ್ಯದಲ್ಲಿ ಬರುವ 'ಮಹಾದೇವ' ಎಂಬ ಶಬ್ದವು ಆಶ್ಚರ್ಯ ಸೂಚಕವೇ ವಿನಾ ಸೇವುಣರ ಮಹಾದೇವನನ್ನು ಕುರಿತದ್ದಲ್ಲ. ಮಹಾದೇವ ನೊಡನೆ ಯುದ್ಧಮಾಡಿದವನು ಆತನ ಮಗ ನರಸಿಂಹನೇ ವಿನಾ ಸೋಮೇಶ್ವರನಲ್ಲ. ಮಗನು ಸುಮಾರು ೧೫ ವರ್ಷವಾದ ಮೇಲೆ ನಡೆಸಿದ ಜೈತ್ರಯಾತ್ರೆಯನ್ನು ೧೫ ವರ್ಷದ ಹಿಂದೆ ಗತಿಸಿದ ತಂದೆಗೆ ಅನ್ವಯಿಸುವುದು ಸಂಪ್ರದಾಯವಲ್ಲ. ಆದುದರಿಂದ ಸೋಮೇಶ್ವರನು ೧೨೫೬ರವರೆಗೆ ಜೀವಂತನಾಗಿರಬೇಕು. ಅಷ್ಟರಲ್ಲಿ ಸೂಕ್ತಿಸುಧಾರ್ಣವವು ಗ್ರಥಿತವಾಗಿರಬೇಕು.

" ಅಲ್ಲದೆ ಸೋಮೇಶ್ವರನು ಕರ್ಣಾಟಕದಲ್ಲಿ ಸ್ಥಿರವಾಗಿದ್ದುದು ೧೨೪೦ರವರೆಗೆ. ಅಲ್ಲಿಂದ ಮುಂದೆ ತನ್ನ ಅಂತ್ಯಕಾಲದವರೆಗೆ ಆತನು ಕಣ್ಣನೂರಿನಲ್ಲಿಯೇ ರಾಜ್ಯಭಾರಮಾಡುತ್ತಿದ್ದನೆಂಬುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಆ ಕಾಲಕ್ಕೆ ಮುಂಚೆಯೇ ಮಲ್ಲಿಕಾರ್ಜುನನು ಆತನ ಆಸ್ಥಾನಕವಿಯಾಗಿದ್ದು ಈ ಗ್ರಂಥವನ್ನು ರಚಿಸಿರಬೇಕು. ಪ್ರಸಕ್ತವಾದ ಸೂಕ್ತಿಸುಧಾರ್ಣವದಲ್ಲಿ ಬಹುಶಃ ಎರಡನೆಯ ನರಸಿಂಹನ ವಿವಾಹಕ್ಕೆ ಸಂಬಂಧಪಟ್ಟ 'ಎಳವೆಱೆಯಂ ಶ್ರೀಕಂಠಂ'[12] ಎಂಬ ಪದ್ಯವಿರುವುದರಿಂದಲೂ ಸೋಮೇಶ್ವರನ ಪೌರುಷವನ್ನು ವರ್ಣಿಸುವ ಪದ್ಯಗಳೂ ೧೨೨೮ರಿಂದ ೧೨೫೬ರಲ್ಲಿ ರಚಿತವಾದ ಶಾಸನಗಳ ಪದ್ಯಗಳೂ ಇರುವುದರಿಂದಲೂ ಮಂಡ್ಯದ ೧೨೧–೧೨೨, ನಾಗಮಂಗಲದ ೯ನೆಯ ಶಾಸನಗಳು ಏತತ್ಕೃತವಾಗಿರುವುದರಿಂದಲೂ ಈ ಗ್ರಂಥವು ಆ ಶಾಸನಗಳ ಕಾಲಕ್ಕೂ ಸೋಮೇಶ್ವರನು ಕರ್ಣಾಟಕವನ್ನು ಬಿಟ್ಟುಹೋದ ೧೨೪೦ಕ್ಕೂ ಮಧ್ಯಕಾಲದಲ್ಲಿ ರಚಿತವಾಗಿರಬಹುದು. ಇದರ ಪರಮಾವಧಿ ೧೨೪೦.

ಡಾ॥ ಕೃಷ್ಣರ ಈ ಸಿದ್ಧಾಂತ ಸಾಧುವೆಂದು ತೋರುತ್ತದೆ. ಕವಿಚರಿತೆಕಾರರೂ ತಮ್ಮ ಕವಿಚರಿತೆಯ ಮೂರನೆಯ ಸಂಪುಟದ ಉಪೋದ್ಘಾತದಲ್ಲಿ ಡಾ॥ ಅಯ್ಯನವರ ಆಕ್ಷೇಪಣೆಗಳಿಗೆ ಉತ್ತರವೀಯುತ್ತಾ ಸೂಕ್ತಿಸುಧಾರ್ಣವದ ರಚನೆಯ ಕಾಲವು ೧೨೪೫ಕ್ಕಿಂತ ಹಿಂದೆ ಇದ್ದರೂ ಇರಬಹುದೆಂದೂ ಸೂಚಿಸಿದ್ದಾರೆ.[13]

---

12 ಸೂಕ್ತಿಸುಧಾರ್ಣವ, ೬–೫೫. 13 ಕವಿಚರಿತೆ—ಸಂಪುಟ ೩, ಪೀಠಿಕೆ lxi.

ಕಮಲಭವನ 'ಶಾಂತೀಶ್ವರಪುರಾಣ'ದ ಪದ್ಯಗಳು ಸೂಕ್ತಿಸುಧಾರ್ಣವದಲ್ಲಿರುವುದರಿಂದ ಕಮಲಭವನು ಸೂಕ್ತಿಸುಧಾರ್ಣವ ಕರ್ತೃವಿಗಿಂತ ಹಿಂದೆ ಸುಮಾರು ೧೨೩೫ರಲ್ಲಿದ್ದಿರಬಹುದು ಎಂದು ಕವಿಚರಿತೆಕಾರರು ಸೂಚಿಸಿದ್ದಾರೆ. ವಾಸ್ತವವಾಗಿ ನೋಡಿದರೆ ಈಗ ಶುದ್ಧವೆಂದು ಅಂಗೀಕೃತವಾದ ಸೂಕ್ತಿಸುಧಾರ್ಣವದ ಯಾವ ಮಾತೃಕೆಯಲ್ಲಿಯೂ ಅದರ ಪದ್ಯಗಳು ಸಿಕ್ಕುವುದಿಲ್ಲ ಕವಿಚರಿತೆಯ ಒಂದನೆಯ ಸಂಪುಟದಲ್ಲಿ ಶಾಂತೀಶ್ವರಪುರಾಣದಿಂದ ಉದ್ಧೃತವಾದ ಪದ್ಯಗಳಲ್ಲಿ 'ಮೆಟ್ಟಿದುದಲ್ಲದಿಲ್ಲುಟಿದಭೂತಳಂ'[14] ಎಂದು ಪ್ರಾರಂಭವಾಗುವ ಪದ್ಯ ಮಾತ್ರ ಸೂಕ್ತಿಸುಧಾರ್ಣವದ ಮಾದರಿಯಲ್ಲಿ ರಚಿತವಾದ ಕವಿ ಮಲ್ಲಿಕೃತ 'ಕಾವ್ಯಸಾರ'ದಲ್ಲಿ ಸಿಕ್ಕುತ್ತದೆ. ಇದನ್ನು ನೋಡಿ ಕವಿಚರಿತೆಕಾರರು ಭ್ರಮಿಸಿರಬಹುದು. ಅಲ್ಲದೆ[15] ಡಾ॥ ಅಯ್ಯನವರು ತಿಳಿಸಿರುವ ಹಾಗೆ 'ಶಾಂತೀಶ್ವರ ಪುರಾಣ'ವು ೧೨೫೫ರಲ್ಲಿ ಸೂಕ್ತಿಸುಧಾರ್ಣವದ ರಚನೆಯಾದಮೇಲೆ ಹುಟ್ಟಿರಬೇಕು. ಆದುದರಿಂದಲೇ ಸೂಕ್ತಿಸುಧಾರ್ಣವದಲ್ಲಿ ಅದರಿಂದ ಉದಾಹರಣೆಗಳಿಲ್ಲದಿರಬಹುದು.

ಹಾಗೆಯೇ 'ಕಬ್ಬಿಗರ ಕಾವ'ದಿಂದ 'ಸುಧಾರ್ಣವ'ದಲ್ಲಿ ಪದ್ಯಗಳು ಉದ್ಧೃತವಾಗಿವೆಯೆಂದೂ ಆದುದರಿಂದ ಅದಕ್ಕಿಂತ ಹಿಂದೆ ಈ ಗ್ರಂಥವು ಸುಮಾರು ೧೨೩೫ರಲ್ಲಿ ರಚಿತವಾಗಿರಬಹುದೆಂದೂ ಕವಿಚರಿತೆಯಲ್ಲಿ ಉಕ್ತವಾಗಿದೆ. 'ಕಬ್ಬಿಗರ ಕಾವ'ವನ್ನು ಪ್ರಕಾಶಮಾಡಿದ ಶ್ರೀವರ್ಮಾ ಎಸ್. ಜಿ. ನರಸಿಂಹಾಚಾರ್ಯರೂ ಅದರ ಉಪೋದ್ಘಾತದಲ್ಲಿ 'ಕಬ್ಬಿಗರ ಕಾವ'ದ ೩೩೬, ೩೩೯, ೩೪೦ನೆಯ ಪದ್ಯಗಳು ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ ಉದಾಹೃತವಾಗಿರುವುದರಿಂದ ಅದಕ್ಕಿಂತ ಹಿಂದೆ ಈ ಗ್ರಂಥವು ರಚಿತವಾಗಿರಬೇಕು' ಎಂದು ಹೇಳಿ ಕವಿಚರಿತ್ರೆಕಾರರ ಮತವನ್ನೇ ಪೋಷಿಸಿದ್ದಾರೆ. ಆದರೆ 'ಶಾಂತೀಶ್ವರ ಪುರಾಣ'ದಂತೆಯೇ ಈ ಮೂರು ಪದ್ಯಗಳೂ ಕವಿಮಲ್ಲಿಕೃತ ಕಾವ್ಯಸಾರದಲ್ಲಿ ಸಿಕ್ಕುತ್ತವೆಯೇ ವಿನಾ ಸೂಕ್ತಿಸುಧಾರ್ಣವದ ಶುದ್ಧ ಮಾತೃಕೆಗಳಲ್ಲಿ ದೊರೆಯುವುದಿಲ್ಲ. 'ಕಬ್ಬಿಗರ ಕಾವ'ಕ್ಕಿಂತಲೂ ಮೊದಲೇ ಸೂಕ್ತಿಸುಧಾರ್ಣವವು ಗ್ರಥಿತವಾಗಿರಬಹುದು.

ಇದೂ ಅಲ್ಲದೆ ಮೇಲೆ ಹೇಳಿರುವಂತೆ ವಿವಾಹ ವರ್ಣನೆಯಲ್ಲಿ ಇಮ್ಮಡಿ ನರಸಿಂಹನ ವಿವಾಹಕ್ಕೆ ಸಂಬಂಧಪಟ್ಟ ಪದ್ಯಗಳೂ[16] ಕುಮಾರೋದಯ ವರ್ಣನೆಯಲ್ಲಿ ಇಮ್ಮಡಿ ನರಸಿಂಹ ಮತ್ತು ಸೋಮೇಶ್ವರ ಇವರ ಜೈತ್ರಯಾತ್ರೆಯ ವಿಷಯಕವಾದ ಪದ್ಯಗಳೂ[17] ಬರುವುವು. ಚಂದ್ರೋದಯ ವರ್ಣನೆಯಲ್ಲಿ 'ಭಾವಿಪಾದರಿಪ'[18] ಎಂದು ಪ್ರಾರಂಭವಾಗುವ ಪದ್ಯದಲ್ಲಿ ಒಬ್ಬ ಕೇಶವದೇವನನ್ನು ಹೊಗಳಿದೆ. ಬಹುಶಃ ಈತನು ಮಲ್ಲಿಕಾರ್ಜುನನ ಮಗನೂ ಶಬ್ದಮಣಿ

---

14 ಕವಿಚರಿತ್ರೆ—ಸಂಪುಟ ೧, ಪುಟ ೩೬೪. 15 ಕವಿಚರಿತಕಾರರು ಸೂಕ್ತಿಸುಧಾರ್ಣವದ ಸರಿಯಾದ ಪ್ರತಿಯಾಪುದೆಂಬುದನ್ನು ವಿಚಾರಮಾಡದಿದ್ದುದು ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದೆ. 16 'ಎಳವೆಱೆಯಂ ಶ್ರೀಕಂಠಂ' ಎಂಬ ಪದ್ಯ. 17 ಸೂಕ್ತಿಸುಧಾರ್ಣವ—೫-೬, ೭—೨೦. 18 ಅದೇ ಗ್ರಂಥ, ೮—೩೮೧.

ದರ್ಪಣಕಾರನೂ ಆದ ಕೇಶಿರಾಜನೇ [19] ಇರಬೇಕು. ಈ ಪದ್ಯಗಳೆಲ್ಲ ಆತನ ಗ್ರಂಥವಾದ 'ಹೋಬಪಾಲಕ ಚರಿತೆ'ಯಿಂದ ಆಯ್ದುದಾಗಿರಬೇಕು. ಹೋಳ ರಾಜನಾದ ಮೂರನೆಯ ರಾಜರಾಜನು (೧೨೧೬–೧೨೫೭) ರಾಜ್ಯವನ್ನು ಕಳೆದು ಕೊಂಡು ಸೆರೆಯಲ್ಲಿದ್ದಾಗ ಹೊಯ್ಸಳ ಎರಡನೆಯ ನರಸಿಂಹನು ಅವನ ರಕ್ಷಣೆ ಯನ್ನು ಕೈಕೊಂಡು ಸೆರೆಯಿಂದ ಬಿಡಿಸಿ ಅವನನ್ನು ಪುನಃ ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿದನು. ಆದುದರಿಂದ ಈ ನರಸಿಂಹನಿಗೆ 'ಹೋಳಸ್ಥಾಪನಾಚಾರ್ಯ' ಎಂಬ ಬಿರುದುಂಟಾಯಿತು. ಇವನನ್ನೇ ಹೋಳಪಾಲಕನೆಂದು ಕರೆದು ಕೇಶಿ ರಾಜನು ಇವನ ಚರಿತ್ರೆಯನ್ನು ಕಾವ್ಯರೂಪವಾಗಿ ರಚಿಸಿರಬಹುದು. ತಂದೆ ಮಕ್ಕಳಾದ ಮಲ್ಲಿಕಾರ್ಜುನ ಕೇಶಿರಾಜರಿಬ್ಬರೂ ಸಮಕಾಲೀನರಾಗಿ ನೃಸಿಂಹನ ಕಾಲದಿಂದಲೂ ಹೊಯ್ಸಳರ ಪೋಷಣೆಯಲ್ಲಿದ್ದು ನೃಸಿಂಹ ಸೋಮೇಶ್ವರರ ಬಲ ಪರಾಕ್ರಮಗಳನ್ನು ಪ್ರತ್ಯಕ್ಷ ನೋಡಿ ಮೆಚ್ಚಿ ಅವರ ವಿಷಯಕವಾದ ಗ್ರಂಥಗಳನ್ನು ರಚಿಸಿರಬೇಕು. ಇವರಿಬ್ಬರೂ ಸೇರಿ 'ಸೂಕ್ತಿಸುಧಾರ್ಣವ'ದ ಸಂಕಲನ ಕಾರ್ಯವನ್ನು ನೆರವೇರಿಸಿ ತಮ್ಮ ಕಾವ್ಯದಿಂದಲೂ ಅದರಲ್ಲಿ ಪದ್ಯಗಳನ್ನು ಉದ್ಧರಿಸಿರಬೇಕು. ಇದರ ಆಧಾರದ ಮೇಲೆ ಕೇಶಿರಾಜನು ಪ್ರಯೋಗಗಳನ್ನು ಕಂಡು ತನ್ನ ವ್ಯಾಕರಣಕ್ಕೆ ಉಪಯೋಗಮಾಡಿಕೊಂಡಿರಬಹುದು. ಇದು ನಿಜವಾದ ಪಕ್ಷ ದಲ್ಲಿ ಇವರಿಬ್ಬರೂ ಸೋಮೇಶ್ವರನಿಗಿಂತ ಹಿರಿಯರಾಗಿದ್ದು ಅವನು ತಮಿಳು ನಾಡಿಗೆ ಹೋಗುವುದಕ್ಕಿಂತ ಮುಂಚೆ ದೋರಸಮುದ್ರದಲ್ಲಿರುವಾಗಲೇ ಅವನ ಸಂತೋಷಕ್ಕಾಗಿ ೧೨೪೦ರ ಸುಮಾರಿನಲ್ಲಿ ಸೂಕ್ತಿಸುಧಾರ್ಣವವನ್ನು ರಚಿಸಿರ ಬಹುದೆಂದು ಹೇಳುವುದು ಸಮಂಜಸವಾಗಿ ಕಾಣುತ್ತದೆ. ಬಸರಾಳ ಶಾಸ ನದ ಕಾಲವು ನಿಷ್ಕೃಷ್ಟವಾಗಿ ೧೨೩೭ ಎಂದು ಗೊತ್ತಾಗಿರುವುದರಿಂದ ಈ ಕಾಲ ನಿರ್ಣಯವು ಮತ್ತಷ್ಟು ಸೂಕ್ತವಾಗಿ ಭಾಸವಾಗದಿರದು.

ಮಲ್ಲಿಕಾರ್ಜುನನಿಂದ ಸಂಕಲಿತವಾದ ಸೂಕ್ತಿಸುಧಾರ್ಣವವಲ್ಲದೆ ಅದರ ಮಾದರಿಯಲ್ಲಿ ಅದರ ಅನೇಕ ಪದ್ಯಗಳನ್ನೊಳಗೊಂಡ ಕವಿಮಲ್ಲಕೃತ 'ಕಾವ್ಯ ಸಾರ'ವೆಂಬ ಮತ್ತೊಂದು ಗ್ರಂಥವಿದೆ. ಸಂಪಾದಕರಲ್ಲಿದ್ದ ಕಾಗದದ ಪ್ರತಿ (ಕ), ಮೈಸೂರು ಪ್ರಾಚ್ಯಕೋಶಾಗಾರದ ಕೆ. ಎ. ೫೧, ಶೃಂಗೇರಿ ಮಠದ ಓಲೆಯ ಪ್ರತಿ (ಖ), ಈಚೆಗೆ ೧೯೩೬ರಲ್ಲಿ ಸಂಪಾದಕರು ಸಂಚಾರ ಹೋಗಿದ್ದಾಗ ಬೇಲೂರಿ ನಿಂದ ತಂದ ಓಲೆಯ ಪ್ರತಿ (ಬ) ಮತ್ತು ಡಾ॥ ಕೃಷ್ಣರವರು ತಮ್ಮ ವರದಿಯಲ್ಲಿ ವಿವರಿಸಿರುವ ಓಲೆಯ ಪ್ರತಿ—ಇವು ಒಂದು ಪಂಗಡಕ್ಕೆ ಸೇರಿದವು ಇವೇ ಮಲ್ಲಿ ಕಾರ್ಜುನನಿಂದ ಸಂಕಲಿತವಾದ ಮೂಲ ಗ್ರಂಥ. ಇವೆಲ್ಲವೂ ಹೆಚ್ಚು ಕಡಿಮೆ ಒಂದೇ ಮಾದರಿಯವು. ಅಲ್ಪ ಸ್ವಲ್ಪ ಪಾಠಭೇದಗಳಿದ್ದರೂ ಆಕಾರ, ಮಿತಿ, ಜೋಡಣೆ ಮೊದಲಾದುವುಗಳಲ್ಲಿ ಒಂದೇ ರೀತಿಯಾಗಿವೆ. ಪ್ರಾಚ್ಯಕೋಶಾ ಗಾರದ ಕೆ. ಎ. ೧೬೦ರ ಎರಡು ಸಂಪುಟಗಳು, ಮೈಸೂರು ಭಕ್ಷಿ ನರಸಪ್ಪನವರ

---

19 ಸಾಹಿತ್ಯ ಪ್ರಪಂಚದಲ್ಲಿ ಆ ಕಾಲದವರೆಗೆ ಮತ್ತಾವ ಕೇಶಿರಾಜನೂ ನಮಗೆ ಪರಿಚಿತನಾಗಿಲ್ಲ.

ಮನೆಯಲ್ಲಿರುವ ಓಲೆಯ ಪ್ರತಿ ಮತ್ತು ಬೇಲೂರು ತಾಲ್ಲೂಕು ಬಿಕ್ಕೋಡು ಹೋಬಳಿ ಹೊನ್ನವಳ್ಳಿ ಜೋಡಿದಾರ್ ನಾರಾಯಣ ಭಟ್ಟರಿಂದ ತಂದಿದ್ದ ಓಲೆಯ ಪ್ರತಿ—ಇವು ಮೂರೂ ಮತ್ತೊಂದು ಗುಂಪಿಗೆ ಸೇರಿದುವು. ಇವು ಮೂಲ ನೂಕ್ತಿ ಸುಧಾರ್ಣವ ಗ್ರಂಥದ ಆಧಾರದಮೇಲೆ ಅನೇಕ ಪ್ರಾಚೀನ ನವೀನ ಕವಿಗಳ ಪದ್ಯಗಳನ್ನು ಸೇರಿಸಿಕೊಂಡು ಆವಶ್ಯಕವಲ್ಲವೆಂದು ತೋರಿದುದನ್ನು ಬಿಟ್ಟು ವಿಸ್ತೃತವಾಗಿರುವುವು. ಇವುಗಳಲ್ಲಿ ಮಲ್ಲಿಕಾರ್ಜುನನಿಗಿಂತ ಆಧುನಿಕರಾದ ಮಧುರ, ಬಾಹುಬಲಿ, ಚೌಂಡರಸ ಮೊದಲಾದವರ ಗ್ರಂಥಗಳಿಂದ ಪದ್ಯಗಳು ಉದ್ಧೃತವಾಗಿರುವುದರಿಂದ ಈ ಕಾವ್ಯಸಾರವು ಮಲ್ಲಿಕಾರ್ಜುನನಿಂದ ಸಂಕಲಿತವಾದುದಲ್ಲವೆಂದು ಹೇಳಬೇಕು. ಅಲ್ಲದೆ ಈ ಪ್ರತಿಗಳಲ್ಲಿ ಮೂಲ ಗ್ರಂಥಕ್ಕಿರುವ ನೂಕ್ತಿಸುಧಾರ್ಣವ ಮತ್ತು ಕಾವ್ಯಸಾರ ಎಂಬ ಎರಡು ಹೆಸರುಗಳಲ್ಲಿ ಸೂಕ್ತಿಸುಧಾರ್ಣವವೆಂಬ ಹೆಸರು ಎಲ್ಲಿಯೂ ಕಂಡುಬರುವುದಿಲ್ಲ. ಇಲ್ಲಿ ಇರುವ ಆಶ್ವಾಸಾಂತ್ಯ ಗದ್ಯವೂ ವ್ಯತ್ಯಾಸವಾಗಿದೆ. ಪೀಠಿಕಾಪ್ರಕರಣದಲ್ಲಿರುವ ಹೊಯ್ಸಳರ ವಂಶ ವರ್ಣನೆಗೆ ಸಂಬಂಧಪಟ್ಟ ಪದ್ಯಗಳು ಪೂರ್ಣವಾಗಿ ಲುಪ್ತವಾಗಿವೆ. ಅಂಗೀಕೃತ ಪ್ರತಿಗಳಲ್ಲಿ ಇಲ್ಲದ ಜಿನಸ್ತುತಿ ಇವುಗಳ ಆರಂಭ ಪದ್ಯವಾಗಿದೆ[20]. ಮೊದಲನೆಯ ಗುಂಪಿನ ಪ್ರತಿಗಳಲ್ಲಿ ಯುದ್ಧವರ್ಣನೆಯನ್ನು ಉಳಿದು ಪೀಠಿಕಾ ಪ್ರಕರಣ ಸೇರಿ ೧೮೮ ಆಶ್ವಾಸಗಳಿವೆ. ಎರಡನೆಯದರಲ್ಲಿ ೧೫ ಆಶ್ವಾಸಗಳಿವೆ. ಬಹುಶಃ ಇಲ್ಲಿಯೂ ಉಳಿದ ಆಶ್ವಾಸಗಳಿದ್ದು ಲುಪ್ತವಾಗಿರಬಹುದು. ಮೊದಲನೆಯ ಸೂಕ್ತಿಸುಧಾರ್ಣವದಲ್ಲಿ ಸುಮಾರು ೨,೨೦೦ ಪದ್ಯಗಳಿವೆ. ಎರಡನೆಯದರಲ್ಲಿ ಸುಮಾರು ೩,೫೬೫ ಪದ್ಯಗಳಿವೆ. ಇವೆರಡಕ್ಕೂ ಸಮಾನವಾದ ಪದ್ಯಗಳು ಸುಮಾರು ೬೫೫ ಮಾತ್ರ. ಇದರ ಆಧಾರದಮೇಲೆ ಮತ್ತೊಂದು ಪೂರ್ವಪಕ್ಷ ಶಂಕಿತವಾಗಬಹುದು. ಏನ್ತಾರ ಮಾಡಬೇಕೆಂದು ಹೊರಡುವವನು ನವೀನ ಕಾವ್ಯಗಳಿಂದಲೂ ಪದ್ಯವನ್ನು ಆರಿಸಿಕೊಂಡು ದೊಡ್ಡದುಮಾಡಬೇಕೇ ವಿನಾ ಮೂಲ ಗ್ರಂಥಗಳಲ್ಲಿರುವುದನ್ನು ಬಿಡುವುದು ಅಸಂಭವವಾದುದರಿಂದ ಮೂಲ ಗ್ರಂಥದ ಮಿತಿಯೂ ಎರಡಕ್ಕೂ ಸಂವಾದಿಯಾಗಿರುವ ೬೫೫ ಪದ್ಯಗಳಷ್ಟೇ ಇರಲಾರದೇಕೆ? ಮೊದಲನೆಯ ಸಂಪ್ರದಾಯಕ್ಕೆ ಸೇರಿದ ಪಾಠವು ಬುದ್ಧಿವಂತನಾದ ಒಬ್ಬನಿಂದ ಮಲ್ಲಿಕಾರ್ಜುನನಿಂದಲೇ ರಚಿತವಾಗಿರುವಂತೆ ಭ್ರಮೆ ಬರುವ ಹಾಗೆ ಎಚ್ಚರಿಕೆಯಿಂದ ಅವನ ಹಿಂದಿನ ಕಾಲದ ಕಾವ್ಯಗಳ ಪದ್ಯಗಳನ್ನು ತುಂಬುವುದರ ಮೂಲಕ ಏಕೆ ವಿಸ್ತೃತವಾಗಿರಬಾರದು ಎಂದು. ಇದಕ್ಕೆ ಹೀಗೆಯೇ ಸರಿ ಎಂದು ಸಿದ್ಧಾಂತಮಾಡಿ ಹೇಳಲು ಸಾಧ್ಯವಿಲ್ಲ. ಒಂದನೆಯ ಗುಂಪಿನ ಪ್ರತಿಗಳ ಪಾಠದಲ್ಲಿ ಕವಿಯಿಂದ ಆಶ್ವಾಸ ಪ್ರಾರಂಭದಲ್ಲಿ ಉಕ್ತವಾಗಿರುವ ವರ್ಣನೀಯಾಂಶ

---

[20] ಶ್ರೀಮಾನ್‌ಗಳಾದ ಆರ್. ನರಸಿಂಹಾಚಾರ್ಯರೂ ಎಸ್. ಜಿ. ನರಸಿಂಹಾಚಾರ್ಯರೂ ಈ ಗ್ರಂಥಪಾಠವನ್ನು ಮಲ್ಲಿಕಾರ್ಜುನನಿಂದ ಸಂಕಲಿತವಾದ ಮೂಲ ಪಾಠವೆಂದು ಭ್ರಮಿಸಿರುವುದರಿಂದ ಕಾಲ ಮತವಿಚಾರಗಳಲ್ಲಿ ಅವರ ಅಭಿಪ್ರಾಯವು ಭಿನ್ನವಾಗಿದೆ.

ಗೆಳನ್ನು ತಿಳಿಸುವ ಎರಡು ಪದ್ಯಗಳಿಗೆ ಅನುಗುಣವಾಗಿ ವರ್ಣನೆಗಳಿರುವುದರಿಂದಲೂ ಈಗ ಸಿಕ್ಕಿರುವ 'ಸೂಕ್ತಿಸುಧಾರ್ಣವ'ವೆಂಬ ಹೆಸರುಳ್ಳ ಗ್ರಂಥದ ಪ್ರತಿಗಳೆಲ್ಲವೂ ಒಂದೇ ರೀತಿಯ ಪಾಠವನ್ನೂ ಕ್ರಮವನ್ನೂ ಉಳ್ಳದರಿಂದಲೂ ಇವಕ್ಕೆಲ್ಲ ಒಂದೇ ಮೂಲ ಮಾತೃಕೆಯಾಗಿದ್ದರೂ ಇರಬಹುದು! ಮಲ್ಲಿಕಾರ್ಜುನನಿಗಿಂತ ಆಧುನಿಕವಾದ ಗ್ರಂಥಗಳ ಪದ್ಯಗಳು ಅಲ್ಲಿಲ್ಲದುದರಿಂದಲೂ ಆದೇ ಮಲ್ಲಿಕಾರ್ಜುನನಿಂದ ಸಂಕಲಿತವಾದ ಗ್ರಂಥವೆಂದು ಸ್ಥೂಲವಾಗಿ ಹೇಳಬಹುದು. ದ್ವಿತೀಯ ಸಂಗ್ರಹಕಾರನು ಮೊದಲ ಪ್ರತಿಯಲ್ಲಿ ತನಗೆ ರುಚಿಸದೇ ಇರುವ ಪದ್ಯಗಳನ್ನು ಬಿಟ್ಟು ಆಕರ್ಷಕವಾದ ಹೊಸ ಪದ್ಯಗಳನ್ನು ಆಯ್ದು ಸೇರಿಸಿ ದೊಡ್ಡದನ್ನಾಗಿ ಮಾಡಿಕೊಂಡಿರಬಹುದು.[21]

---

[21] ಈ ವಿಸ್ತೃತ ಗ್ರಂಥವು ಮಲ್ಲಿಕಾರ್ಜುನನ ಮೂಲಗ್ರಂಥಕ್ಕಿಂತ ಭಿನ್ನವಾಗಿದ್ದರೂ ಅದಕ್ಕಿಂತ ಈಚಿನದಾದರೂ ಅದು ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಬಹು ಮುಖ್ಯವಾಗಿದೆ. ಅದರಲ್ಲಿ ಒಟ್ಟು ಸುಮಾರು ೩,೫೭೫ ಪದ್ಯಗಳಿವೆ. ಅವುಗಳಲ್ಲಿ ಮೂಲ ಸೂಕ್ತಿಸುಧಾರ್ಣವದಲ್ಲಿಯೂ ಈಗ ಉಪಲಬ್ಧವಾಗಿರುವ ಇತರ ಗ್ರಂಥಗಳಲ್ಲಿಯೂ ಇಲ್ಲದ ಸುಮಾರು ೫೦೦ ಪದ್ಯಗಳಿವೆ. ಇವುಗಳಲ್ಲಿ ನಮಗೆ ಇದುವರೆಗೂ ತಿಳಿಯದ ಎಷ್ಟೋ ವಿಷಯಗಳು ಪ್ರಕಾಶಕ್ಕೆ ಬರುವುವು. ಈ ಗ್ರಂಥದಲ್ಲಿ ಮೊದಲನೆಯ ಆಶ್ವಾಸದಿಂದ ಕ್ರಮವಾಗಿ ಮಧುರನ 'ಧರ್ಮನಾಥಪುರಾಣ'ದಿಂದ ಪದ್ಯಗಳನ್ನು ಉದ್ಧರಿಸಿದೆ. ಈಗ ಉಪಲಬ್ಧವಾಗಿರುವ ಆ ಗ್ರಂಥದ ನಾಲ್ಕು ಆಶ್ವಾಸಗಳಿಂದಲೇ ಸುಮಾರು ೪೦ ಪದ್ಯಗಳು ಇಲ್ಲಿ ಉದಾಹೃತವಾಗಿವೆ. ಮುಂದೆ ಇದೇ ರೀತಿ ಆ ಗ್ರಂಥದ ಅನೇಕ ಪದ್ಯಗಳು ದೊರೆಯಬಹುದು. ಈ ಗ್ರಂಥದಲ್ಲಿ ನರಸಿಂಹ ಮತ್ತು ಸೋಮ ಶೇಖರ (ಶಶಿಶೇಖರ, ಚಂದ್ರಶೇಖರ) ರ ವಿಷಯವಾಗಿ ಅನೇಕ ಪದ್ಯಗಳು ಸಿಕ್ಕುವುವು. ಸೋಮಶೇಖರ, ಚಂದ್ರಶೇಖರ, ಶಶಿಶೇಖರ ಎಂಬುವು ಸೋಮೇಶ್ವರನ ಪರ್ಯಾಯನಾಮಗಳಿರಬಹುದು. ಈ ಪದ್ಯಗಳೆಲ್ಲವೂ ಕೇಶಿರಾಜನ 'ಚೋಟಪಾಲಕ ಚರಿತ್ರೆ'ಯಿಂದ ಉದ್ಧೃತವಾಗಿರಬಹುದು. ಕೆಲವು ಪದ್ಯಗಳಲ್ಲಿ ಕುಸುಮಪುರಿ, ಅವಂತಿಕಾಪುರಿ, ಮಿಥಿಲೆ, ಚಂಪಾಪುರ, ವನಂತಿಕಾಪುರ, ಸುಮನಃಪುರಗಳ ವರ್ಣನೆಯಿದೆ. ಮತ್ತೆ ಕೆಲವುಗಳಲ್ಲಿ ಪುಷ್ಪಪುರೇಶರಾಜಹಂಸ, ವಿಜಯಾಧಿಪಭೂಪ, ಬಾಗೆಯವಿಭುಮಲ್ಲ, ಶ್ರೀಗಂಡಮಾರ್ತಾಂಡ, ಪ್ರೌಢದೇವ ಮೊದಲಾದವರ ವಿಷಯ ಉಕ್ತವಾಗಿದೆ. ಕಲಾವಿಲಾಸನ ವಿಷಯಕವಾದ ಆಯ್ದ ಪದ್ಯಗಳಿವೆ (ಇವು ಈಗ ಅಚ್ಚಾಗಿರುವ ಅಭಿನವವಾದಿವಿದ್ಯಾನಂದನ ಕಾವ್ಯಸಾರದ ಕೊನೆಯಲ್ಲಿರುವ ಕಲಾವಿಲಾಸನೆಂಬ ಅಂಕಿತವಿರುವ ಪದ್ಯಗಳಿಗಿಂತ ಭಿನ್ನವಾದುದು). ಕವಿಪಂಚಮಾರ್ಗಣ ಅಥವಾ ಕವಿಪಂಚಬಾಣನ ವಿಷಯ ಮೂರು ನಾಲ್ಕು ಪದ್ಯದಲ್ಲಿ ಬರುತ್ತದೆ. (ನಾಂಗತ್ಯದಲ್ಲಿ ಭುಜಬಲಿ ಚರಿತೆಯನ್ನು ಸು. ೧೬೧೦ರಲ್ಲಿ ರಚಿಸಿದ ಪಂಚಬಾಣ ಈತನಲ್ಲ). ಮುಗ್ಧಮೋಹನ, ವಿಕ್ರಮತಿಮಿಂಗಿಲ, ಛಲದಂಕಮಲ್ಲ, ಅಕಳಂಕಮಲ್ಲ, ನಿಕಳಂಕಮಲ್ಲ, ಜಗದೇಕಮಲ್ಲ, ಅರುಹಂತದೇವ, ಸುಚರಿತ್ರಕೋವಿದ ಮೊದಲಾದ ಅಂಕಿತಗಳಿಂದ ಮುಗಿಯುವ ಪದ್ಯಗಳು ಮಧ್ಯೆಮಧ್ಯೆ ದೊರೆಯುವುವು. ಇವುಗಳಲ್ಲಿ ಕೆಲವಾದರೂ ನರಸಿಂಹ ಸೋಮೇಶ್ವರರ ಬಿರುದುಗಳಿರಬೇಕು. (ಸೂಕ್ತಿಸುಧಾರ್ಣವದ ೫–೨೬ರಲ್ಲಿ ಮಲ್ಲಿಕಾರ್ಜುನನು ಸೋಮೇಶ್ವರನನ್ನು 'ಛಲದಂಕರಾಮ ಸೋಮನೃಪಾಲಂ' ಎಂದು ಸಂಬೋಧಿಸಿರುವುದನ್ನು ನೋಡಿ.) ೫–೧೯೨ರಲ್ಲಿ ಒಟ್ಟು ನಾಗವರ್ಮನ ಕೀರ್ತಿಯು ವರ್ಣಿತವಾಗಿದೆ. (ಅದು ಈಗ ಉಪಲಬ್ಧವಾಗಿರುವ ನಾಗವರ್ಮಕೃತ ಗ್ರಂಥಗಳಲ್ಲಿ ಸಿಕ್ಕುವುದಿಲ್ಲ.) ಹರಿಯ

ಮಲ್ಲಿಕಾರ್ಜುನನು ತನ್ನನ್ನು ಯಾದವಕಟಕಾಚಾರ್ಯ ಸುಕವಿ ಸುಮನೋ ಬಾಣಜಾಮಾತೃ ಎಂದು ಹೇಳಿಕೊಂಡಿದ್ದಾನೆಯೇ ವಿನಾ ತನ್ನ ತಂದೆ ತಾಯಿಗಳ ಹೆಸರನ್ನು ತಿಳಿಸಿಲ್ಲ. ಹಿಂದೆಯೇ ತಿಳಿಸಿರುವಂತೆ ತಾನು ಸರಸ ಕವೀಶ್ವರ ಸಭೆಯಲ್ಲಿ ಸರಸ ಕವೀಶನೆಂತಲೂ ವಿಶಿಷ್ಟ ಮುನಿಗಳ ಸಭೆಯಲ್ಲಿ ಪರಮಮುನಿಯೆಂತಲೂ ಬುಧರ ಸಭೆಯಲ್ಲಿ ಪರಮಬುಧನೆಂತಲೂ ವಿಶೇಷಿಸಿಕೊಂಡಿದ್ದಾನೆ. ಹಿಂದೆ ಶ್ರೀಹರ್ಷನೂ ಭೋಜಭೂಪತಿಯೂ ವಜ್ರಹಸ್ತನೃಪನೂ ಕೃತಿಗೆ ಪ್ರೋತ್ಸಾಹಕರಾಗಿ ಕೀರ್ತಿಪಡೆದಹಾಗೆ ಈಗ ಮಲ್ಲಬುಧನಿಂದ ಈ ಗ್ರಂಥವನ್ನು ಬರೆಯಿಸಿ ಸರ್ವಜ್ಞಸೋಮೇಶನೂ ಉನ್ನತಿಯನ್ನು ಪಡೆದನೆಂದು ಹೇಳಿದ್ದಾನೆ. ಶ್ರೀಹರ್ಷನು ಪ್ರಸಿದ್ಧವಾದ 'ರತ್ನಾವಳಿ'ಯೇ ಮೊದಲಾದ ನಾಟಕಗಳನ್ನು ರಚಿಸಿ ಬಾಣಕವಿಗೆ ಪೋಷಕನಾಗಿದ್ದವನು. ಭೋಜನು ಅಕ್ಷರಲಕ್ಷದಾನ ಮಾಡಿದ ಕೀರ್ತಿಯಿಂದ ಕೂಡಿದ ಧಾರಾನಗರದ ಭೋಜರಾಜ; ವಜ್ರಹಸ್ತನೃಪನಾರೋ ತಿಳಿಯದು.[22] ಕನ್ನಡ ಕವಿಗಳಲ್ಲಿ ಇವನು ಜನ್ನ, ಪಂಪ, ಗುಣನಂದಿ, ಗಜಾಂಕುಶ, ಗುಣವರ್ಮ ಇವರುಗಳನ್ನು ಸ್ತೋತ್ರಮಾಡಿದ್ದಾನೆ. ಜನ್ನನು 'ಯಶೋಧರ ಚರಿತ್ರೆ', 'ಅನಂತನಾಥ ಪುರಾಣ' ಗಳ ಕರ್ತೃ; ಪಂಪನು ಪ್ರಸಿದ್ಧನಾದ 'ಆದಿಪಂಪ'; ಗುಣವರ್ಮನು 'ಹರಿವಂಶ', 'ಶೂದ್ರಕ'ಗಳನ್ನು ರಚಿಸಿದ ಒಂದನೆಯ ಗುಣವರ್ಮನೋ 'ಪುಷ್ಪದಂತ ಪುರಾಣ'ವನ್ನು ರಚಿಸಿದ ಎರಡನೆಯ ಗುಣವರ್ಮನೋ ಹೇಳುವುದು ಕಷ್ಟ. ನೂಕ್ತಿಮುಧಾರ್ಣವದಲ್ಲಿ ಇವರಿಬ್ಬರ ಗ್ರಂಥಗಳಿಂದಲೂ ಪದ್ಯಗಳು ಉದ್ಧೃತವಾಗಿವೆ. ಗುಣನಂದಿಯು, ಕೇಶಿರಾಜನೂ ಭಟ್ಟಾಕಳಂಕನೂ ಸ್ತುತಿಸುವ, ಜೈನೇಂದ್ರ ವ್ಯಾಕರಣಕ್ಕೆ ವ್ಯಾಖ್ಯಾನವನ್ನು ರಚಿಸಿರುವ, ಶ್ರವಣಬೆಳಗೊಳದ ೬೬, ೧೧೭, ೧೨೭ನೆಯ ಶಾಸನಗಳಲ್ಲಿ ಉಕ್ತವಾಗಿರುವ ಜೈನ ಗುರುವಿರಬೇಕು. ಈತನು ಕ್ರಿ.ಶ. ೯೦೦ಕ್ಕಿಂತ ಹಿಂದೆ ಇದ್ದಿರಬೇಕು.[23] ಈತನು ಯಾವ ಕನ್ನಡ ಗ್ರಂಥವನ್ನು ಬರೆದಿದ್ದಾನೆಯೋ

ವಿಷಯವಾಗಿ ಈಗ ದೊರೆತಿರುವ ಯಾವ ಗ್ರಂಥಗಳಲ್ಲಿಯೂ ಇಲ್ಲದ ಅಚ್ಯುತ, ಕೃಷ್ಣರ ವಿಷಯಕವಾದ ಪದ್ಯಗಳು ಅಲ್ಲಲ್ಲಿಯೆ ಹೇರಳವಾಗಿರುವುವು. 'ಜಗನ್ನಾಥ ವಿಜಯ'ದಿಂದಲೇ ಉದ್ಧೃತವಾಗಿರಬೇಕೆಂದು ಸಂಶಯವನ್ನುಂಟುಮಾಡುವ 'ಶ್ರೀಜಗನ್ನಾಥನಾ' ಎಂಬುದಾಗಿ ಮುಗಿಯುವ ಒಂದು ಪದ್ಯವು ೬ನೆಯ ಆಶ್ವಾಸಾಂತ್ಯದಲ್ಲಿದೆ. ಉಷಾಪರಿಣಯಕ್ಕೆ ಸಂಬಂಧಪಡುವ ಎರಡು ಪದ್ಯಗಳು ಆರನೆಯ ಆಶ್ವಾಸದಲ್ಲಿವೆ. ಕುಮಾರಸಂಭವದ ಭಾಗವಿರಬಹುದಾದ ಗಿರಿರಾಜನ ಆಸ್ಥಾನ, ಪಾರ್ವತಿಯ ಬಾಲ್ಯ, ರತೀಮನ್ಮಥರ ರೂಪಲಾವಣ್ಯ, ಗಿರಿಜಾಕಲ್ಯಾಣ ಮೊದಲಾದವುಗಳಿಗೆ ಸಂಬಂಧಪಟ್ಟ ಪದ್ಯಗಳು ಎಡೆಯೆಡೆಯಲ್ಲಿ ಗೋಚರವಾಗುವುವು. ಇವು ಹರಿಹರನ ಗಿರಿಜಾಕಲ್ಯಾಣದ ಭಾಗಗಳಲ್ಲ. ಇವೆಲ್ಲ ಇದುವರೆಗೆ ಪರಿಚಿತವಾಗಿರುವ ಕನ್ನಡ ಸಾಹಿತ್ಯಚರಿತ್ರೆಗೆ ಅಗೋಚರವಾದವು.

22 ಎರಡನೆಯ ಗುಣವರ್ಮನು ತನ್ನ ಪುಷ್ಪದಂತ ಪುರಾಣದ ೧—೬೬ನೆಯ ಪದ್ಯಗಳಲ್ಲಿ ಹೇಳುವ ವಜ್ರದೇವನೇ ಇವನಿರಬಹುದೆ?

23 ಇವನ ಕಾಲದ ವಿಷಯದಲ್ಲಿ ಅಯ್ಯನವರು ಮಾಡಿರುವ ನಿರ್ಣಯ ನೂಕ್ತವಾಗಿಲ್ಲ.

ತಿಳಿಯದು. ಗಜಾಂಕುಶನು, ದುರ್ಗಸಿಂಹ, ನಯಸೇನ ಮೊದಲಾದವರಿಂದ ಸ್ತುತನಾದ ಸುಮಾರು ಕ್ರಿ.ಶ. ೧೦೦೦ ರಲ್ಲಿದ್ದಿರಬಹುದಾದ ಕವಿಯೂ ದಂಡನಾಯಕನೂ ಆದವನು. ಇವನನ್ನು ರುದ್ರಭಟ್ಟನೇ ಮೊದಲಾದ ಅನೇಕ ಕನ್ನಡ ಕವಿಗಳು ಸ್ತೋತ್ರಮಾಡಿರುವುದರಿಂದ ಇವನು ಪ್ರಸಿದ್ಧ ಕನ್ನಡ ಕವಿಯಾಗಿರಬೇಕು. ಆದರೆ ಅವನ ಗ್ರಂಥಗಳಾವುವೂ ದೊರೆತಿಲ್ಲ. ಇವರಿಂದಲೇ ಅಲ್ಲದೆ ಸೂಕ್ತಿಸುಧಾರ್ಣವದಲ್ಲಿ ನಮಗೆ ತಿಳಿದಮಟ್ಟಿಗೆ ಮಲ್ಲಿಕಾರ್ಜುನನಿಗಿಂತ ಪ್ರಾಚೀನರಾದ ಸುಮಾರು ೨೫ ಕವಿಗಳ ಗ್ರಂಥಗಳಿಂದ ಪದ್ಯಗಳು ಉದಾಹೃತವಾಗಿವೆ. ಅವುಗಳ ಪಟ್ಟಿಯನ್ನು ಮೂರನೆಯ ಅನುಬಂಧದಲ್ಲಿ ಕೊಟ್ಟಿದೆ.

ಮಲ್ಲಿಕಾರ್ಜುನನು ತಾನು ಗ್ರಂಥವನ್ನು ರಚಿಸುವುದಕ್ಕೆ ಕಾರಣವನ್ನು ಮುಂದಿನ ಪದ್ಯದಲ್ಲಿ ವಿಸ್ತರಿಸಿದ್ದಾನೆ.

ಕರೆದು ಬುಧವ್ರಜಂ ಸುಕವಿ ಮಲ್ಲಪನಂ ಮನದಟ್ಕಿನಿಂದಮಾ
ದರಿಸಿ ಸುಧಾರ್ಣವಾಖ್ಯ ಕೃತಿಯಂ ರಚಿಯಿಪ್ಪುದೆನಲ್ಕೆ ಲೋಕವ|
ಚ್ಚರಿವಡೆ ಸಜ್ಜನರ್ ಪೊಗಡೆ ಸೋಲವಮಗ್ಗುಂದಲೆಯಾಗೆ ಬಿಚ್ಚತಂ
ಪರಿಣತರಪ್ಪರೊಲ್ದೊಳಸೆ ಪೇಟಲೊಡರ್ಚಿದೆನೀ ಪ್ರಬಂಧಮಂ॥

ಮುಂದಿನ ಪದ್ಯಗಳಲ್ಲಿ ಆತನ ಕಾವ್ಯದ ಪ್ರೌಢಿಮೆ ಉಕ್ತವಾಗಿದೆ :—

ಚದುರರ ಮೆಚ್ಚು ಭಾವುಕರ ಕೈಪಿಡಿ ಜಾಣರ ಬಯ್ಕೆ ಸತ್ಕಲಾ
ವಿದರ ವಿಲಾನಮಕ್ಕರಿಗರಾಭರಣಂ ಬುಧರಿಚ್ಛೆಯಚ್ಚು ವೀ।
ರದ ಕಣಿ ಕೂರ್ತು ಕೂರಿಸಿದ ನಲ್ಲಳ ಮೈಸಿರಿ ತಾನೆನಿಪ್ಪ ನ
ಮ್ಮದದೊಳೆ ಬಣ್ಣಿಕುಂ ಧರಣಿ ಸತ್ಕವಿಮಲ್ಲನ ಕಾವ್ಯಸಾರಮಂ॥

ಚದುರೆಸೆವಂತು ಭಾವಮಮರ್ವಂತು ನಯಂ ನಿಮಿರ್ವಂತು ಮಲ್ಲಪಂ
ಪದವಿಡೆ ಭಾರತೀವನಿತೆ ಭೋಂಕೆನೆ ಬಂದು ಮನಸ್ಸರೋಜದೊಳ್|
ಚದುರೆಸೆವಂತು ಭಾವಮಮರ್ವಂತು ನಯಂ ನಿಮಿರ್ವಂತು ಲೀಲೆಯಿಂ
ಪದವಿಡುತಿರ್ಪಳಾಹವನಕಾರಣಮಂತ್ರಮಿದಾಗದಿರ್ಕುಮೆ॥

ಪದವಿನ್ಯಾಸದ ದೇಸೆ ಮಾರ್ಗದ ವಿಲಾಸಂ ರೂಢಿವೆತ್ತಂಗಹಾ
ರದಲಂಕಾರದ ಬಂಧ ಭಾವದೆಸಕಂ ಮೆರ್ವಾಡಿನೋಳ್ಪಂತೆ ಕೂ।
ಡಿದ ನಾನಾರಸನಾರದಾನಮೆನೆದತ್ತೆಂದೊಲ್ದು ಕೈಕೊಂಡು ಮೆ
ಚ್ಚಿದನಾ ಸೂಕ್ತಿಸುಧಾರ್ಣವಾಹ್ವಕೃತಿಪಾತ್ರಶ್ರೀಗೆ ಸೋಮೇಶ್ವರಂ॥

ಈಗಾಗಲೇ ತಿಳಿಸಿರುವಂತೆ ಸೂಕ್ತಿಸುಧಾರ್ಣವವು ಒಂದು ಸಂಕಲನ ಗ್ರಂಥ. ಇದರಲ್ಲಿ ವೀರಶೈವಪ್ರಕರಣವೂ ಸೇರಿ ೧೯ ಆಶ್ವಾಸಗಳಿವೆ.[24] ಗ್ರಂಥಾರಂಭದಲ್ಲಿ ವಿಷ್ಣು, ಈಶ್ವರ, ಗಜಾನನ, ಸರಸ್ವತಿ ಇವರ ಸ್ತೋತ್ರವಿದೆ. ಮುಂದೆ ೧೫ ಪದ್ಯಗಳಲ್ಲಿ ಸಳನಿಂದ ಹಿಡಿದು ವೀರಸೋಮೇಶ್ವರನವರೆಗಿನ ಹೊಯ್ಸಳರ

24 ಈಗ ಉಪಲಬ್ಧವಾಗಿರುವುದು ೧೮ ಮಾತ್ರ.

ವಂಶವರ್ಣನೆಯಿದೆ. ಆಮೇಲೆ ಗ್ರಂಥಕರ್ತೃವಿನ ಸ್ವವಿಷಯವಾದಮೇಲೆ ದುರ್ಜನ ಸುಜನ ಪದ್ಧತಿಗೆ ಸಂಬಂಧಪಟ್ಟ ಸುಮಾರು ೫೦ ಪದ್ಯಗಳಿವೆ. ಕೊನೆಯಲ್ಲಿ ಮುಂದಿನ ೧೮ ಆಶ್ವಾಸಗಳಲ್ಲಿಯೂ ವರ್ಣಿತವಾಗುವ ಕಾವ್ಯಾಂಗಗಳನ್ನು ಸೂಚಿಸುವ

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ
ಭೋರುಹವೈರಿಮಿತ್ರರುದಯಂ ಋತುನಂದನಮಂಬು ನೀಧು ಕಾಂ।
ತಾರತಿ ಚಿಂತೆ ಮಂತ್ರಿ ಚರ ಯಾನ ವಿರೋಧಿಜಯಂಗಳೆಂಬಿವಂ
ನೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್॥

ಎಂಬ ಪದ್ಯವೂ ಇದೇ ಅರ್ಥವನ್ನು ಕೊಡುವ ಮತ್ತೆರಡು ಪದ್ಯಗಳೂ ಆದಮೇಲೆ ಪೀಠಿಕಾಪ್ರಕರಣವು ಮುಗಿಯುವುದು. ಎರಡನೆಯ ಆಶ್ವಾಸದಿಂದ ಮೇಲೆ ಹೇಳಿದ ಪದ್ಯದಲ್ಲಿ ಸೂಚಿತವಾದ ಕ್ರಮದಲ್ಲಿ ಒಂದೊಂದು ಆಶ್ವಾಸದಲ್ಲಿ ಒಂದೊಂದು ವರ್ಣನೆಯಂತೆ ೧೮ ಆಶ್ವಾಸಗಳಲ್ಲಿ ಅಷ್ಟಾದಶವರ್ಣನೆಗಳೂ ವರ್ಣಿತವಾಗಿವೆ. ಪ್ರತಿಯೊಂದು ಆಶ್ವಾಸದ ಪ್ರಾರಂಭದಲ್ಲಿಯೂ ಆಯಾ ಆಶ್ವಾಸದಲ್ಲಿ ಮುಂದೆ ವರ್ಣಿತವಾಗುವ ವಿಷಯಗಳನ್ನೊಳಗೊಂಡ ಒಂದು ಅಥವಾ ಎರಡು ಸೂಚನಾಪದ್ಯಗಳಿರುವುವು.[25] ಇವು ಮಲ್ಲಿಕಾರ್ಜುನನಿಂದಲೇ ರಚಿತವಾಗಿರಬೇಕು. ಮುಂದೆ ಈ ಸೂಚನೆಗಳಿಗನುಗುಣವಾಗಿ ವರ್ಣನಾಪದ್ಯಗಳು ಪ್ರಾಚೀನ ಗ್ರಂಥಗಳಿಂದ ಉದ್ಧೃತವಾಗಿವೆ. ಸೂಚನೆಯಲ್ಲಿ ಹೇಳಿರುವ ವಿಷಯಗಳೆಲ್ಲ ವರ್ಣಿತವಾಗಿವೆಯೇ ವಿನಾ ಅದೇ ಕ್ರಮದಲ್ಲಿ ಉಕ್ತವಾಗಿವೆಯೆಂದು ಹೇಳಲಾಗುವುದಿಲ್ಲ. ಪ್ರತಿ ಆಶ್ವಾಸಾಂತ್ಯದಲ್ಲಿಯೂ[26] 'ಓರಂತೆ ಮೆಚ್ಚಿದಂ ಕೃತಿಸಾರಂ ಹೊಯ್ಸಳವಂಶೋದ್ಧಾರಂ ದೋರಸಮುದ್ರಾಧಿನಾಯಕಂ ಸೋಮನೃಪಂ' ಎಂಬ ಕಂದವೂ 'ಇದು ಸರಸ್ವತೀ ಸರ್ವಾಂಗದರ್ಪಣಾಯಮಾನ ಪ್ರತಿಭಾನನೂತನ ಪುರಾತನ ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧ ಸಾರೋದ್ಧಾರಮು ಮಷ್ಟಾದಶಸ್ಥಳವರ್ಣನ ಮಾರ್ಗ ಮನೋಹರಮುಂ ವೀರಹೊಯ್ಸಳ ಸೋಯಿದೇವ ರಾಯವಿನೋದಾಕರ್ಣನಕೌತುಕೋತ್ತಾದಿತಮುಂ ಯಾದವಕಟಕಾಚಾರ್ಯ

---

[25] ೧೩ನೆಯ ಆಶ್ವಾಸವಾದ ಮಧುಪಾನವರ್ಣನೆಯ ಆರಂಭದಲ್ಲಿ ಪ್ರತ್ಯೇಕವಾದ ಸೂಚನೆಯ ಪದ್ಯವಿರುವುದಿಲ್ಲ. 'ಶೃಂಗಾರ ರತ್ನಾಕರ'ದ ೨–೨೧ನೆಯ ಪದ್ಯವಾದ 'ಮದಿರಾಪಾನ ವಿಕಾರಮಂ' ಎಂಬ ಪದ್ಯದಿಂದಲೇ ಆಶ್ವಾಸವು ಪ್ರಾರಂಭವಾಗುವುದು. ಕವಿಚರಿತೆಕಾರರು ಇದನ್ನು ಸೂಚನಾಪದ್ಯವೆಂದು ತಿಳಿಸಿದ್ದಾರೆ (ಕವಿಚರಿತೆ ೨ನೆಯ ಸಂಪುಟ, ಪುಟ ೨೮–೨೯.) ಇಲ್ಲಿ ಸೂಚನಾ ಪದ್ಯವು ಲುಪ್ತವಾಗಿರಬಹುದೇ?

[26] ಸೂರ್ಯೋದಯ ವರ್ಣನೆಯ ಅಂತ್ಯದಲ್ಲಿ ಮಾತ್ರ
ಹಳಚಿತು ಸೂರ್ಯೋದಯಮಾ
ಸ್ಥಳಕೆಲ್ಲಂ ಕಾವ್ಯಸಾರದೊಳಗೆಂದುದು ಹೊ।
ಯ್ಸಳವಂಶಮೇರು ಯಾದವ
ಕುಳಾಂಬರದ್ಯುಮಣಿ ಸೋಯಿದೇವನೃಪಾಲಂ॥
ಎಂಬ ಪದ್ಯವಿದೆ.

ನುಕವಿ ನುಮನೋಬಾಣಜಾಮಾತೃ ಪರಮಚದಾನಂದ ಮಲ್ಲಿಕಾರ್ಜುನಕವೀಶ್ವರ ಸಂಯೋಜಿತಮುಮಪ್ಪ ಸೂಕ್ತಿಸುಧಾರ್ಣವದೊಳ್' ಎಂಬ ಗದ್ಯವೂ ಇರುವುವು. ಆಶ್ವಾಸಗಳ ಪ್ರಮಾಣ (ಅವುಗಳಲ್ಲಿರುವ ಪದ್ಯಸಂಖ್ಯೆ) ವಿಷಯದಲ್ಲಿ ಯಾವ ಒಂದು ಕ್ರಮವೂ ಮಿತಿಯೂ ಇರುವಂತೆ ಕಾಣುವುದಿಲ್ಲ. ಒಂದು ಆಶ್ವಾಸದಲ್ಲಿ ಪದ್ಯಸಂಖ್ಯೆ ೨೬ ಆದರೆ ಇನ್ನೊಂದರಲ್ಲಿ ೪೯೦ ಆಗಿದೆ. ಈ ವಿಧವಾದ ವೈತ್ಯಾಸಕ್ಕೆ ಪ್ರತ್ಯೇಕವಾದ ಉದ್ದೇಶವಿರುವಂತೆಯೂ ತೋರುವುದಿಲ್ಲ. ಪ್ರಾಚೀನ ಕಾವ್ಯಗಳಲ್ಲಿ ಆಯಾವರ್ಣನೆಗೆ ಸಂಬಂಧಪಟ್ಟ ಪದ್ಯಗಳಲ್ಲಿ ಸ್ವಾರಸ್ಯವಾದುವು ಎಷ್ಟು ಸಿಕ್ಕಿದುವೊ ಅಷ್ಟನ್ನು ಮಾತ್ರ ಶೇಖರಿಸಿರುವ ಹಾಗೆ ಕಾಣುತ್ತದೆ. ಇದು ಪ್ರಾಚೀನ ಕವಿಗಳಿಗೆ ಯಾವ ವರ್ಣನೆಗಳಲ್ಲಿ ಹೆಚ್ಚು ಒಲವಿತ್ತೆಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ. ಆದರೂ ಒಟ್ಟು ಗ್ರಂಥದ ದೃಷ್ಟಿಯಿಂದ ಯಾವ ಅಸಮರ್ಪಕತೆಯೂ ಭಾಸವಾಗುವುದಿಲ್ಲ.

ಸೂಕ್ತಿಸುಧಾರ್ಣವದಲ್ಲಿ ಕಂದ ವೃತ್ತಗಳಲ್ಲದೆ ಬೇರೆಯ ಛಂದಸ್ಸಿನ ಪದ್ಯಗಳು ಉದಾಹೃತವಾಗಿಲ್ಲ. ವೃತ್ತಗಳಲ್ಲಿಯೂ ಮಧುಪಾನ ವರ್ಣನೆಯಲ್ಲಿ ಬರುವ ಚಿತ್ರಲಯ, ಲಲಿತ, ಮಲ್ಲಿಕಾಮಾಲೆ, ಲಯೋತ್ತರ ಅಥವಾ ಲಯಗ್ರಾಹಿ ಜಾತಿಗೆ ಸೇರಿದ ಒಂದೊಂದು ಪದ್ಯಗಳನ್ನು ಬಿಟ್ಟರೆ ಉಳಿದುವೆಲ್ಲ ಕನ್ನಡದಲ್ಲಿ ಪ್ರಸಿದ್ಧವಾದ ಉತ್ಪಲಮಾಲೆಯೇ ಮೊದಲಾದ ಆರು ಸಂಸ್ಕೃತ ವೃತ್ತಗಳು. ದೇಶೀಯ ಛಂದಸ್ಸುಗಳಾದ ರಗಳೆ, ಷಟ್ಪದಿ ಮೊದಲಾದುವು ಆಗಿನ ಪಂಡಿತರ ದೃಷ್ಟಿಯಲ್ಲಿ ಗಣ್ಯವಾಗಿದ್ದಿರಲಾರದು.

ಒಂದು ಸಾಹಿತ್ಯಭಂಡಾರದ ಪೂರ್ಣಪರಿಚಯಮಾಡಿಕೊಳ್ಳುವುದು ನರ್ವರಿಗೂ ಸಾಧ್ಯವಿಲ್ಲವಾದುದರಿಂದ ಅದರಲ್ಲಿ ಉತ್ತಮವಾದ, ರಸವತ್ತಾದ ಉಕ್ತಿಗಳನ್ನೂ ನೀತಿಗಳನ್ನೂ ವರ್ಣನೆಗಳನ್ನೂ ಸಂಗ್ರಹಿಸಿ ಪ್ರತ್ಯೇಕ ಗ್ರಂಥವಾಗಿ ರಚಿಸುವುದು ನಮಗೆ ಪರಿಚಿತವಾದ ಇಂಗ್ಲಿಷ್, ಸಂಸ್ಕೃತ, ತಮಿಳು, ತೆಲುಗು ಮೊದಲಾದ ಭಾಷೆಗಳಲ್ಲೆಲ್ಲಾ ಬಹುಕಾಲದಿಂದಲೂ ರೂಢಿಯಲ್ಲಿದೆ. ಕನ್ನಡಕ್ಕೆ ಅತಿನಿಕಟವಾಗಿ ಸಂಬಂಧಿಸಿರುವ ಸಂಸ್ಕೃತ ಭಾಷೆಯಲ್ಲಂತೂ ಸುಭಾಷಿತ ಗ್ರಂಥಗಳು ಹೇರಳವಾಗಿವೆ [27] ಕನ್ನಡದಲ್ಲಾದರೋ ನುಮಾರು ಹದಿನಾರನೆಯ ಶತ

---

[27] ಸಂಸ್ಕೃತ ಸುಭಾಷಿತಗಳ ಸಮೃದ್ಧಿಯನ್ನು ಮುಂದಿನ ಪಟ್ಟಿಯಿಂದ ಊಹಿಸಿಕೊಳ್ಳಬಹುದು: (೧) ಅಮಿತಗತಿಯ 'ಸುಭಾಷಿತ ರತ್ನಸಂದೋಹ' ೯೯೪. (೨) 'ಕವೀಂದ್ರವಚನಸಮುಚ್ಚಯ' ಸು. ೧೧ನೆಯ ಶತಮಾನ. (೩) ನಂದನ ಕವಿಯ 'ಪ್ರಸನ್ನ ಸಾಹಿತ್ಯರತ್ನಾಕರ'ಸು. ೧೧ನೆಯ ಶತಮಾನ. (೪)ಶ್ರೀಧರದಾಸನ 'ಸದುಕ್ತಿಕರ್ಣಾಮೃತ,' ೧೨೦೫. (೫) ಜಲ್ಹಣನ 'ಸೂಕ್ತಿ ಮುಕ್ತಾವಳಿ,' ೧೨೫೭. (೬) ಶಾರ್ಙ್ಗಧರನ 'ಶಾರ್ಙ್ಗಧರಪದ್ಧತಿ,' ೧೩೬೩. (೭) ವಲ್ಲಭದೇವನ 'ಸುಭಾಷಿತಾವಳಿ', ೧೪೨೭. (೮) ಶ್ರೀವರನ 'ಸುಭಾಷಿತಾವಳಿ'. (೯) ಹರಿದಾಸನ 'ಪ್ರಸನ್ನಾವರತ್ನಾಕರ', ೧೭ನೆಯ ಶತಮಾನ. (೧೦) ಹರಿಕವಿಯ 'ಸುಭಾಷಿತಹಾರಾವಳಿ', ೧೭ನೆಯ ಶತಮಾನ. (೧೧) ಸುಂದರಕವಿಯ 'ಸೂಕ್ತಿಸುಂದರ', ೧೭ನೆಯ ಶತಮಾನ. (೧೨) 'ಕವೀಂದ್ರ ಚಂದ್ರೋದಯ', ೧೭ನೆಯ ಶತಮಾನ. (೧೩) ಹರಿಹರ ಉಪಾಧ್ಯಾಯನ 'ಸುಭಾಷಿತಾವಳಿ', ೧೮ನೆಯ ಶತಮಾನ.

ಮಾನದ ಆದಿಭಾಗದಲ್ಲಿ ಸಂಕಲಿತವಾಗಿರಬಹುದಾದ ಅಭಿನವವಾದಿವಿದ್ಯಾನಂದನ 'ಕಾವ್ಯಸಾರ' ವನ್ನು ಬಿಟ್ಟರೆ ಪ್ರಸಕ್ತವಾದ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ ವೊಂದೇ ಸುಭಾಷಿತಗ್ರಂಥ ನಮಗೆ ದೊರೆತಿರುವುದು. ಅಲ್ಲದೆ ಇದೇ ಪರಮಪ್ರಾಚೀನವಾದುದು. ಮಲ್ಲಿಕಾರ್ಜುನನಿಗಿಂತ ಹಿಂದೆ ಸಂಸ್ಕೃತದಲ್ಲಿ 'ಸುಭಾಷಿತರತ್ನ ಸಂದೋಹ' 'ಕವೀಂದ್ರವಚನಸಮುಚ್ಚಯ' ಮೊದಲಾದ ಸುಭಾಷಿತಗ್ರಂಥಗಳು ರಚಿತವಾಗಿದ್ದುವು. ಅವುಗಳು ಈ ಗ್ರಂಥಕ್ಕೆ ಎಷ್ಟರಮಟ್ಟಿಗೆ ಪ್ರೇರಕವೋ ಹೇಳಲು ಸಾಧ್ಯವಿಲ್ಲ. ಸೂಕ್ತಿಸುಧಾರ್ಣವದ ಸಂಯೋಜನ ಕ್ರಮವು ಮಾತ್ರ ಒಂದು ವೈಶಿಷ್ಟ್ಯದಿಂದ ಕೂಡಿದೆ. ಸಂಸ್ಕೃತ ಸುಭಾಷಿತಕಾರರು ತಮ್ಮ ಸಂಗ್ರಹಗಳಲ್ಲಿ ಸಾಮಾನ್ಯವಾಗಿ ದೇವತಾಸ್ತುತಿ, ಋತುವರ್ಣನೆ, ಅನ್ಯೋಕ್ತಿ, ಸಂಕೀರ್ಣ ಮುಂತಾದ ಸಾಮಾನ್ಯಭಾಗಗಳನ್ನು ಮಾಡುತ್ತಾರೆ. ಮಲ್ಲಿಕಾರ್ಜುನನಾದರೋ ಕಾವ್ಯಾಂಗಗಳಾದ ಅಷ್ಟಾದಶವರ್ಣನೆಗಳನ್ನೂ ಕ್ರಮಬದ್ಧವಾಗಿ ಬೇರೆ ಬೇರೆಯ ಆಶ್ವಾಸಗಳಾಗಿ ವಿಭಾಗಿಸಿಕೊಂಡು ಮಹಾಕಾವ್ಯದ ಮಾದರಿಯಲ್ಲಿ ರಚಿಸಿದ್ದಾನೆ. ಆದುದರಿಂದ ಈ ಯೋಜನೆಯ ಕ್ರಮ, ರೀತಿ ಎಲ್ಲವೂ ಆತನದೇ ಆಗಿರುವುದು.

ಮಲ್ಲಿಕಾರ್ಜುನನು ತಾನೇ ಹೇಳಿಕೊಂಡಿರುವಂತೆ ಸರಸಕವೀಶ್ವರ. ಆದರೆ ಅವನ ಕವಿತಾಶಕ್ತಿಯನ್ನು ಒರೆಹಚ್ಚಿನೋಡಲು ಅವನ ಸ್ವತಂತ್ರ ಗ್ರಂಥಗಳಾವುದೂ ದೊರೆತಿಲ್ಲ. ಆದರೂ ಅವನದೆಂದು ಊಹಿಸಬಹುದಾದ ಪೀಠಿಕಾಪ್ರಕರಣದಲ್ಲಿರುವ ಪದ್ಯಗಳೂ ಆಶ್ವಾಸಾರಂಭದಲ್ಲಿರುವ ಸೂಚನಾಪದ್ಯಗಳೂ ಗ್ರಂಥಮಧ್ಯದಲ್ಲಿ ಬರುವ ನರಸಿಂಹ ಸೋಮೇಶ್ವರರ ಸ್ತೋತ್ರರೂಪವಾದ ಪದ್ಯಗಳೂ ಆತನ ಕವಿತಾಶಕ್ತಿಯನ್ನು ಪ್ರಕಾಶಿಸತಕ್ಕವಾಗಿವೆ. ಅಲ್ಲದೆ ಸಂಕಲನಕಾರ್ಯದಲ್ಲಿಯೂ ಆತನ ವಿವೇಕ, ವಿಚಾರಪರತೆ, ಅಭಿರುಚಿ ಮೊದಲಾದುವು ಸ್ಪಷ್ಟವಾಗುವುವು. ಅವನು ಆರಿಸಿರುವ ಪದ್ಯಗಳಲ್ಲಿ ಯಾವುದಾದರೂ ಒಂದು ಬಗೆಯ ಸೊಗಸಿರುತ್ತದೆ. ಶಬ್ದಾಲಂಕಾರ, ಅರ್ಥಾಲಂಕಾರ, ರಸಭಾವಗಳು, ಉಕ್ತಿವೈಚಿತ್ರ್ಯ, ವರ್ಣನಾವೈಖರಿ—ಒಂದೊಂದು ದೃಷ್ಟಿಯಿಂದ ಒಂದೊಂದು ಪದ್ಯವನ್ನು ಆರಿಸಿಕೊಂಡಿರುತ್ತಾನೆ. ಆತನಿಗೆ ವೈದರ್ಭಿ ಶೈಲಿಯಲ್ಲಿ ಹೆಚ್ಚು ಒಲವಿರುವಹಾಗೆ ಕಾಣುತ್ತದೆ.

ಆದರೂ ಸೂಕ್ತಿಸುಧಾರ್ಣವವು ಪ್ರಕೃತಿವರ್ಣನಾದೃಷ್ಟಿಯನ್ನೇ—ಅಷ್ಟಾದಶವರ್ಣನೆಗಳನ್ನೇ—ಮುಖ್ಯವಾಗಿಟ್ಟುಕೊಂಡಿರುವುದರಿಂದ ಇದರಲ್ಲಿ ನತ್ಕಾವ್ಯದ ಜೀವವಾದ ಭಾವಪ್ರದರ್ಶನಕ್ಕೆ, ಸನ್ನಿವೇಶಗಳ ಸೊಬಗಿಗೆ, ಕಥಾಸಂವಿಧಾನ

---

(೧೪) ವಜ್ರನಾಥನ 'ಪದ್ಯತರಂಗಿಣಿ', ೧೮ನೆಯ ಶತಮಾನ. (೧೫) ಪೂರ್ಣಚಂದ್ರ ಕವಿಭೂಷಣನ 'ಉದ್ಭಟಸಾಗರ'. (೧೬) ಕಾಶಿನಾಥನ 'ಸುಭಾಷಿತರತ್ನಭಾಂಡಾಗಾರ'. (೧೭) ವೇಣುದತ್ತನ 'ಪದ್ಯವೇಣಿ'. (೧೮) ಹರಿಭಾನ್ಕರನ 'ಪದ್ಯಾಮೃತತರಂಗಿಣಿ'. (೧೯) ರೂಪಗೋಸ್ವಾಮಿಯ 'ಪದ್ಯಾವಳಿ'. (೨೦) ಘಾಸಿರಾಮ ಕವಿಯ 'ರಸಚಂದ್ರ'. (೨೧) ಭಟ್ಟಭಾಸ್ಕರನ 'ರಸಪ್ರದೀಪ'. (೨೨) ಶುಕ್ಲಭೂದೇವನ 'ರಸವಿಲಾಸ'. (೨೩) ಭಟ್ಟಗೋವಿಂದಜೀತನ 'ಸಾರಸಂಗ್ರಹ ಸುಧಾರ್ಣವ.' (೨೪) ಶಂಭುದಾಸನ 'ಸಾರಸಂಗ್ರಹ'. (೨೫) ಭೋಜನ 'ಸುಭಾಷಿತಪ್ರಬಂಧ'. (೨೬) ಚತುರ್ಭುಜನ 'ರಸಕಲ್ಪದ್ರುಮ' ಮೊದಲಾದುವು.

ಚಾತುರ್ಯಕ್ಕೆ ಅವಕಾಶವಿಲ್ಲ. ಕಾವ್ಯಾವಲೋಕನದಲ್ಲಿರುವಂತೆ ಭಾವವ್ಯಂಜಕ ಗಳಾದ ಪದ್ಯಗಳು ಇದರಲ್ಲಿಲ್ಲ. ಆದುದರಿಂದ ಇದನ್ನು ಕನ್ನಡ ಸಾಹಿತ್ಯದ ಉತ್ತಮಭಾಗದ ಮಾದರಿ ಎಂಬುದಾಗಿ ಹೇಳಲು ಸಾಧ್ಯವಿಲ್ಲ.

ಆದರೆ ನೂಕ್ತಿಸುಧಾರ್ಣವವು ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಅತಿಮುಖ್ಯವಾದ ಸ್ಥಾನವನ್ನು ಆಕ್ರಮಿಸಿದೆ. ಸಾಹಿತ್ಯಚರಿತ್ರೆಯು ಆದಿಕಾಲದಿಂದ ರಚಿತವಾದ ಎಲ್ಲ ಪ್ರಸಿದ್ಧ ಗ್ರಂಥಗಳಿಂದಲೂ [28] ಇದರಲ್ಲಿ ಪದ್ಯಗಳು ಉದ್ಧೃತವಾಗಿವೆ ಆದರೆ ಈಗ ಅದರಲ್ಲಿರುವ ಸುಮಾರು ೨,೨೦೦ ಪದ್ಯಗಳಲ್ಲಿ ಅರ್ಧಕ್ಕೆಮಾತ್ರ ಆಕರಗಳು ಸಿಕ್ಕಿವೆ. ಅವುಗಳ ವಿವರವನ್ನು ೨ ಮತ್ತು ೩ನೆಯ ಅನುಬಂಧದಲ್ಲಿ ಕೊಟ್ಟಿದೆ. ಈ ಅರ್ಧಭಾಗವು ಸುಮಾರು ೩೦ ಗ್ರಂಥಗಳಿಂದ ಆರಿಸಿಕೊಂಡವು. ಈ ಅಂದಾಜಿನಮೇಲೆ ಉಳಿದ ಅರ್ಧಭಾಗವು ಇದೇ ಸಂಖ್ಯೆಯ ಗ್ರಂಥಗಳಿಂದಾದರೂ ಆರಿಸಿರಬೇಕೆಂದು ಊಹಿಸಬಹುದು. ಇದು ನಿಜವೆಂದು ಒಪ್ಪಿಕೊಂಡರೆ ಈಗ ಕನ್ನಡ ಸಾಹಿತ್ಯದಲ್ಲಿ ನಷ್ಟವಾಗಿರುವ ಗ್ರಂಥರಾಶಿಯ ಪರಿಮಾಣವೂ ಕನ್ನಡ ಸಾಹಿತ್ಯದ ವಿಸ್ತಾರವೂ ವಿಶದವಾಗುವುದು. [29] ಉಪಲಬ್ಧವಲ್ಲದ ಅಷ್ಟು ದೊಡ್ಡ ಗ್ರಂಥರಾಶಿಯ ಉತ್ತಮ ಪದ್ಯಗಳನ್ನು ನೂಕ್ತಿಸುಧಾರ್ಣವವು ಉಳಿಸಿಕೊಟ್ಟಿದೆ. ಕನ್ನಡ ಕವಿಗಳ ಕಾಲನಿರ್ಣಯಕ್ಕೆ ನೂಕ್ತಿಸುಧಾರ್ಣವವು ಈಚಿನ ಗಡಿಗಲ್ಲು. ಅದರಲ್ಲಿ ಒಂದು ಪದ್ಯವಿದ್ದರೆ ಅದರ ಕವಿ ಅದಕ್ಕೆ ಪ್ರಾಚೀನನೆಂಬುದು ಸ್ಪಷ್ಟ; ಇಲ್ಲದಿದ್ದರೆ ನಂದೇಹಾಸ್ಪದ. ನೂಕ್ತಿಸುಧಾರ್ಣವದಲ್ಲಿ ಅನೇಕ ಪ್ರಾಚೀನ ಗ್ರಂಥ ಗಳ ನೂರಾರು ಪದ್ಯಗಳು ಉದ್ಧೃತವಾಗಿರುವುದರಿಂದ ಅವುಗಳ ಸಂಶೋಧನೆಯ ಕಾರ್ಯದಲ್ಲಿ ಉತ್ತಮ ಪಾಠವನ್ನು ನಿಷ್ಕರ್ಷಿಸುವುದಕ್ಕೆ ಅದು ಬಹುಮಟ್ಟಿಗೆ ಸಹಾಯಕವಾಗಿದೆ. ಕವಿಮಲ್ಲನ ಕಾವ್ಯಸಾರವು ನೂಕ್ತಿಸುಧಾರ್ಣವದ ಆಧಾ ರದ ಮೇಲೆಯೇ ಹುಟ್ಟಿರುವುದೆಂಬುದು ನಿರ್ವಿವಾದ. ಅದರಲ್ಲಿ ಮೂಲದಲ್ಲಿಲ್ಲದ

---

[28] ನೂಕ್ತಿಸುಧಾರ್ಣವದಲ್ಲಿ ರನ್ನನ 'ಗದಾಯುದ್ಧ' ಅಥವ 'ಸಾಹಸಭೀಮವಿಜಯ' ದಿಂದ ಒಂದು ಪದ್ಯವೂ ಉದ್ಧೃತವಾಗದೇ ಇರುವುದು ಆಶ್ಚರ್ಯಕರವಾಗಿದೆ. ನಾಗ ವರ್ಮನ 'ಕಾವ್ಯಾವಲೋಕನ'ದಲ್ಲಿ ಅದರ ಎಷ್ಟೋ ಪದ್ಯಗಳು ಉದಾಹೃತವಾಗಿವೆ. ಅದನ್ನು ಮಲ್ಲಿಕಾರ್ಜುನನು ನೋಡಿರಲಾರನೆ? ಅಷ್ಟೇಕೆ, ಅವನೇ ಅಜಿತನಾಥಪುರಾಣ ದಿಂದ ನಾಲ್ಕು ಪದ್ಯಗಳನ್ನು ಉದ್ಧರಿಸಿದ್ದಾನೆ. ಗದಾಯುದ್ಧವು ಅವನಿಗೆ ಪರಿಚಿತವಾ ಗಿಯೇ ಇರಬೇಕು. ಕೇಶಿರಾಜನಂತೂ ಅವರಿಂದ ಶಬ್ದಮಣಿದರ್ಪಣದಲ್ಲಿ ಬೇಕಾದಷ್ಟು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಹಾಗೆಯೇ ಕರ್ಣಪಾರ್ಯನ 'ನೇಮಿನಾಥಪುರಾಣ' ದಿಂದಲೂ ಪದ್ಯಗಳನ್ನು ಆರಿಸಿಕೊಂಡಿಲ್ಲ. ಅವನಿಗಿಂತ ಒಂದು ತಲೆಮಾರಿ ಈಚಿನವನಾದ ನೇಮಿಚಂದ್ರನ 'ಅರ್ಧನೇಮಿ' ಲೇ ಾವತಿ'ಗಳಿಂದ ಅನೇಕ ಪದ್ಯಗಳನ್ನು ತೆಗೆದುಕೊಂ ಡಿರುವಾಗ ಇದನ್ನು ಬಿಡಲು ಕಾರಣವೇನು? ಇದು ಅವನ ಕಣ್ಣಿಗೆ ಬಿದ್ದಿರಲಾರದೆ?

[29] ಇವುಗಳ ಜೊತೆಗೆ 'ಕವಿರಾಜಮಾರ್ಗ,' 'ಕಾವ್ಯಾವಲೋಕನ,' 'ಶಬ್ದಸ್ಮೃತಿ' 'ಧಾತುಪಾಠ,' 'ಶಬ್ದಾನುಶಾಸನ' ಗಳಲ್ಲಿ ಅನಿರ್ದಿಷ್ಟವಾಗಿರುವ ಪದ್ಯಗಳನ್ನೆಲ್ಲಾ ಒಟ್ಟುಗೂಡಿಸಿ ಒಂದೆಡೆ ಪ್ರಕಾಶಪಡಿಸಿದರೆ ಪ್ರಯೋಜನಕಾರಿಯಲ್ಲವೆ?

ಆಕರ ಸಿಕ್ಕದ ಸುಮಾರು ೫೦೦ ಪದ್ಯಗಳಿವೆ. ನಷ್ಟವಾದ ಗ್ರಂಥಗಳಿಂದ ಉದ್ಧೃತವಾದ ಅವುಗಳನ್ನು ಉಳಿಸುವುದಕ್ಕೂ ಇದೇ ಪರೋಕ್ಷವಾಗಿ ಕಾರಣ ವಾಗಿದೆ.

ಅಭಿನವವಾದಿವಿದ್ಯಾನಂದನ 'ಕಾವ್ಯಸಾರ'ಕ್ಕೂ ಇದಕ್ಕೂ ಸುಮಾರು ೨೭೫ ಪದ್ಯಗಳು ಸಂವಾದಿಯಾಗಿರುವುದರಿಂದ ಬಹುಶಃ ಅದರ ರಚನೆಗೂ ಇದೇ ಪ್ರೇರಕ ವಾಗಿರಬೇಕು. ಸೂಕ್ತಿಸುಧಾರ್ಣವದಲ್ಲಿ ಹೊಯ್ಸಳರ ವಂಶವರ್ಣನೆಯೇ ಅಲ್ಲದೆ ಚೋಳ, ಪಾಂಡ್ಯ, ಸೇವುಣರ ವಿಷಯವಾಗಿ ಅಲ್ಲಲ್ಲಿ ಉಕ್ತವಾಗಿರುವುದರಿಂದ ಇತಿಹಾಸದೃಷ್ಟಿಯಿಂದಲೂ ಇದಕ್ಕೆ ಪ್ರಾಶಸ್ತ್ಯವಿದೆ. ಸೂಕ್ತಿಸುಧಾರ್ಣವದಲ್ಲಿ 'ಜಗನ್ನಾಥವಿಜಯ' 'ನೇಮಿನಾಥಪುರಾಣ'ಗಳಿಗೆ ಸಂಬಂಧಪಡದ, ವಿಸ್ತೃತಪಾಠ ದಲ್ಲಿ ಸಿಕ್ಕತ್ತದೆಂದು ಪುಟದಡಿಯಲ್ಲಿ ಹಿಂದೆ ತಿಳಿಸಿರುವ ಪದ್ಯಗಳಿಗಿಂತ ಭಿನ್ನವಾದ ಕೃಷ್ಣನ ವಿಷಯಕವಾದ ಹತ್ತಾರು ಪದ್ಯಗಳೂ ಹರಿಹರನ ಗಿರಿಜಾಕಲ್ಯಾಣಕ್ಕೆ ಸಂಬಂಧಪಡದ ಶಿವಪಾರ್ವತಿಯರ ವಿಷಯಕವಾದ ಕೆಲವು ಪದ್ಯಗಳೂ ವತ್ಸರಾಜ ರತ್ನಾವಳಿಯನ್ನು ಹೆಸರಿಸುವ ಒಂದು ಪದ್ಯವೂ ದೊರಕುವುದರಿಂದ ಮಲ್ಲಿಕಾರ್ಜು ನನಿಗಿಂತ ಹಿಂದೆ ಜೈನರಂತೆಯೆ ವೈದಿಕರನೇಕರೂ ಹೇರಳವಾಗಿ ಕನ್ನಡದಲ್ಲಿ ಗ್ರಂಥರಚನೆ ಮಾಡಿದ್ದಾರೆಂದು ಊಹಿಸಬಹುದು. ಈ ಸಂಕಲನದಲ್ಲಿ ಆಗತಾನೆ ರೂಢಿಗೆ ಬರುತ್ತಿದ್ದ ಷಟ್ಪದಿ, ರಗಳೆ ಮೊದಲಾದ ಛಂದಸ್ಸಿನ ಪದ್ಯಗಳಾವುವೂ ಇಲ್ಲದುದರಿಂದ ಅವಿನ್ನೂ ಪಂಡಿತರ ಮನ್ನಣೆಗೆ ಪಾತ್ರವಾಗಿರಲಿಲ್ಲವೆಂದು ಹೇಳಬಹುದು. ಮಲ್ಲಿಕಾರ್ಜುನ ಪಂಡಿತ ಆ ಕಾಲದ ಎಲ್ಲ ಗ್ರಂಥಗಳನ್ನೂ ಚೆನ್ನಾಗಿ ಆಲೋಡನೆ ಮಾಡಿದ್ದವನು. ಪಂಡಿತ ಪಾಮರರಲ್ಲಿ ಬೆರೆತು ಅವರ ಅಭಿರುಚಿಯನ್ನು ಪೂರ್ಣವಾಗಿ ತಿಳಿದಿದ್ದವನು. ಅವರಿಗಾಗಿ ರಚಿಸಿದ ಈ ಗ್ರಂಥವು ಆ ಕಾಲದವರ ಅಭಿರುಚಿಯ ಕೈಗನ್ನಡಿ.

ಸೂಕ್ತಿಸುಧಾರ್ಣವವನ್ನು ಕೆಳಗೆ ಕಂಡ ಪ್ರತಿಗಳ ಆಧಾರದಮೇಲೆ ಶೋಧಿಸಿದೆ :

(೧) ಸಂಪಾದಕರಲ್ಲಿದ್ದ ಕಾಗದದ ಪ್ರತಿ. ೩೭೪ ಪತ್ರಗಳಿವೆ. ಇದರಲ್ಲಿ ಪ್ರಾರಂಭದಿಂದ ಯಾನಸ್ಥಳವಾದ ೧೮ನೆಯ ಆಶ್ವಾಸ ಪೂರ್ತ ಇದೆ. ಆಜಿ ಅಥವಾ ವಿರೋಧಿಜಯವೆಂಬ ೧೯ನೆಯ ಆಶ್ವಾಸ ಲುಪ್ತವಾಗಿದೆ. ಇದು ಪ್ರತಿ ಯಾದ ಕಾಲ ತಿಳಿಯದು. ಇದರ ಮೂಲಮಾತೃಕೆ ಯಾವುದೋ ಗೊತ್ತಿಲ್ಲ. ಇದರಲ್ಲಿ ಱಕಾರವು ಶುದ್ಧವಾಗಿ ಉಪಯೋಗವಾಗಿರುವುದರಿಂದ ಇದರ ಮೂಲ ಮಾತೃಕೆ ಪ್ರಾಚೀನವಾದುದಾಗಿರಬೇಕು. ಇದರ ಪಾಠವು ಬಹುಮಟ್ಟಿಗೆ ಶುದ್ಧ ವಾಗಿದೆ ಇದನ್ನು (ಕ) ಎಂಬ ಸಂಕೇತದಿಂದ ಕರೆದಿದೆ.

(೨) ಪ್ರಾಚ್ಯಕೋಶಾಗಾರದಲ್ಲಿರುವ ಕೆ. ಎ. ೫೧೨ನೆಯ ನಂಬರಿನ ಕಾಗದದ ಪ್ರತಿ. ಇದರಲ್ಲಿ ಮೊದಲಿನಿಂದ ೮ನೆಯ ಆಶ್ವಾಸವಾದ ಚಂದ್ರೋದಯ ವರ್ಣನೆಯಲ್ಲಿ ೧೯೧ನೆಯ ಪದ್ಯದವರೆಗಿದೆ. ಇದಕ್ಕೂ (ಕ) ಪ್ರತಿಗೂ ಯಾವ ವ್ಯತ್ಯಾಸವೂ ಇಲ್ಲ. ಎರಡಕ್ಕೂ ಒಂದೇ ಮಾತೃಕೆ ಮೂಲವಾಗಿರಬೇಕು. ಆದುದರಿಂದ ಇದಕ್ಕೆ ಪ್ರತ್ಯೇಕವಾದ ಸಂಕೇತವನ್ನು ಕೊಟ್ಟಿಲ್ಲ.

(ಖ) ಶೃಂಗೇರಿ ಶಂಕರಮಠದ ಓಲೆಯ ಪ್ರತಿ. ಇದನ್ನು ಶಾಸನದ ಇಲಾಖೆಯ ಪಂಡಿತರಾದ ಶ್ರೀಮಾ೯ ರಾಮಾನುಜ ಚಕ್ರವರ್ತಿಯವರು ಮೊದಲು ಗುರ್ತಿಸಿದರು. ಇದರಲ್ಲಿ ೧೪೨ ಓಲೆಗಳಿವೆ. ಇದರಲ್ಲಿ ಆದಿಯಿಂದ ೧೫ನೆಯ ಆಶ್ವಾಸದ ೫೩ನೆಯ ಪದ್ಯದವರೆಗಿದೆ. ಇದರಲ್ಲಿ ಱಕಾರವು ಸರಿಯಾಗಿ ಉಪಯೋಗವಾಗಿಲ್ಲ. ಇದು ಮಧ್ಯೆ ನಿಂತುಹೋಗಿರುವುದರಿಂದ ಪ್ರತಿಮಾಡಿದಕಾಲ ಗೊತ್ತಾಗುವಂತಿಲ್ಲ. (ಕ) ಪ್ರತಿಯಷ್ಟು ಶುದ್ಧವಾಗಿಲ್ಲ. ಅಲ್ಲಲ್ಲಿ ಸ್ಖಾಲಿತ್ಯಗಳಿವೆ. ಇದನ್ನು (ಖ) ಎಂಬ ಸಂಕೇತದಿಂದ ವ್ಯವಹಾರಮಾಡಿದೆ.

(ಳ) ನಂಪಾದಕರು ಬೇಲೂರು ತಾಲ್ಲೂಕಿನಲ್ಲಿ ಸಂಚಾರ ಮಾಡುತ್ತಿದ್ದಾಗ ದೊರೆತ ಓಲೆಯ ಪ್ರತಿ. ಈಗ ಇದು ಪ್ರಾಚ್ಯಕೋಶಾಗಾರದ ೫೬೮ನೆಯ ನಂಬರಿನ ಕೋಶವಾಗಿದೆ. ಇದು ೬" × ೨" ಅಳತೆ ಉಳ್ಳದ್ದು; ಬರವಣಿಗೆ ಇರುವ ಸ್ಥಳ ೫" × ೧೨" ಪ್ರತಿ ಪುಟದಲ್ಲಿಯೂ ೧೨ ಪಙ್ತಿಗಳಿವೆ. ಪ್ರತಿ ಪಙ್ತಿಯಲ್ಲಿಯೂ ಸರಾಸರಿ ೩೮ ಅಕ್ಷರಗಳಿವೆ. ಒಟ್ಟು ೨೧೨ ಪತ್ರಗಳಿವೆ. ಪಾಠವು ಶುದ್ಧವಾಗಿದೆ. ಒಂದೇಪಾಠ ಸಂಪ್ರದಾಯಕ್ಕೆ ಸೇರಿದ್ದರೂ (ಕ) ಪ್ರತಿಗಿಂತ ಭಿನ್ನವಾದ ಮೂಲಮಾತೃಕೆಗೆ ಸಂಬಂಧಪಟ್ಟದ್ದು. ಇದರಲ್ಲಿ ೧೪ನೆಯ ಆಶ್ವಾಸವು ಎರಡುಭಾಗವಾಗಿದೆ. ೨೨ನೆಯ ಪದ್ಯವಾದಮೇಲೆ 'ಓರಂತೆ ಮೆಚ್ಚಿದಂ ಕೃತಿಸಾರಂ ಯಾತ್ರಾಂಗಕೆಯ್ದೆ ಹೊಯ್ಸಳ ವಂಶೋದ್ಧಾರಂ ನರಸಿಂಹಸುತಂ ದೋರನಮುದ್ರಾಧಿನಾಯಕಂ ಸೋಮನೃಪಂ' ಎಂಬ ಆಶ್ವಾಸಾಂತ್ಯಪದ್ಯದೊಡನೆ ಯಾತ್ರಾಂಗ ಪ್ರಕರಣವು ಮುಗಿದು, ಯಾನಸ್ಥಲವೆಂಬ ಭಾಗವು ಪ್ರಾರಂಭವಾಗುವುದು. ಅಲ್ಲಿಂದ ಮುಂದಿನ ಪದ್ಯಸಂಖ್ಯೆಯು ಒಂದರಿಂದ ಪ್ರಾರಂಭವಾಗುವುದು. ಆ ಲೆಕ್ಕದಪ್ರಕಾರ ಆ ಪ್ರತಿಯು ಆ ಆಶ್ವಾಸದ ೪೯ನೆಯ ಪದ್ಯದಲ್ಲಿ ಅಪೂರ್ಣವಾಗಿ ನಿಂತುಹೋಗುವುದು. ಬಹುಶಃ ೧೯ನೆಯ ಆಜಿವರ್ಣನೆಯು ಉಪಲಬ್ಧವಲ್ಲದುದರಿಂದಲೂ ೧೪ನೆಯ ಆಶ್ವಾಸದ ೨೩ನೆಯ 'ಗುಡಿನೇಣ್' ಕಾಂಡಪಟಂ' ಎಂಬ ದಂಡಿನ ಸಾಮಗ್ರಿಗಳನ್ನು ತಿಳಿಸುವ ಪದ್ಯವು ವರ್ಣನೀಯಾಂಶಗಳನ್ನು ಸೂಚಿಸುವ ಆಶ್ವಾಸ ಪ್ರಾರಂಭ ಪದ್ಯದಂತೆ ತೋರುವುದರಿಂದಲೂ ಈ ವಿಧವಾದ ಭ್ರಮಜನ್ಯವಾದ ವಿಭಾಗಗಳಾಗಿರುವಂತೆ ಕಾಣುತ್ತದೆ. ಪೀಠಿಕಾಸಂಧಿಯೆಲ್ಲಿ ಅಷ್ಟಾದಶ ವರ್ಣನೆಗಳನ್ನು ಸೂಚಿಸುವ ನಂದರ್ಭದಲ್ಲಿ ಯಾತ್ರೆ ಮತ್ತು ಯಾನಗಳೆಂಬ ವ್ಯತ್ಯಾಸಗಳಿಲ್ಲದುದರಿಂದಲೂ ಆಜಿವರ್ಣನೆಗೆ ಪ್ರತ್ಯೇಕಸ್ಥಾನವಿರುವುದರಿಂದಲೂ ಯಾತ್ರೆಯಾನಗಳೆರಡನ್ನೂ ಬೇರೆಯಾಗಿಟ್ಟುಕೊಂಡರೆ ಆಜಿವರ್ಣನೆಯನ್ನು ಬಿಟ್ಟು ೧೮ ವರ್ಣನೆಗಳು ಮುಗಿಯುವುದರಿಂದಲೂ ಪ್ರಸಕ್ತ ಸಂಸ್ಕರಣದಲ್ಲಿ ಇವನ್ನು ಒಂದೇ ಭಾಗವಾಗಿ ಅಂಗೀಕರಿಸಿದೆ. ಈ ಪ್ರತಿಗೆ (ಬ) ಎಂಬ ಸಂಕೇತವಿದೆ.

(ಱ) ಪ್ರಾಚ್ಯಕೋಶಾಗಾರದ ಕೆ. ಎ. ೧೪೦ನೆಯ ನಂಬರಿನ ಎರಡು ಸಂಪುಟಗಳುಳ್ಳ ತಾಗದದ ಪ್ರತಿ. ಇದು ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದ ಸರಿಯಾದ ಪಾಠವಲ್ಲ. ಅದರ ಆಧಾರದಮೇಲೆ ಪ್ರಾಚೀನ ನವೀನ ಕಾವ್ಯಗಳಿಂದ ಪದ್ಯಗಳನ್ನು ಸೇರಿಸಿಕೊಂಡು ಕವಿಮಲ್ಲನಿಂದ ವಿಸ್ತೃತವಾದ ಕಾವ್ಯ

ಸಾರವೆಂಬ ಹೆಸರುಳ್ಳದ್ದು. ಇದರಲ್ಲಿ ೧೪ ಆಶ್ವಾಸಗಳು ಮಾತ್ರ ಇವೆ. ಸಂದೇಹ ಬಂದೆಡೆಗಳಲ್ಲಿ ಮಾತ್ರ ಇದನ್ನು ಉಪಯೋಗಿಸಿಕೊಂಡಿದೆ. ಇದನ್ನು (ಗ) ಎಂದು ಕರೆದಿದೆ. ಶುದ್ಧವಾದುದೇನೂ ಅಲ್ಲ.

(೬) ಮೇಲಿನ ದ್ವಿತೀಯಪಾಠ ಸಂಪ್ರದಾಯಕ್ಕೆ ಸೇರಿದ ಬೇಲೂರು ತಾಲ್ಲೋಕು ಬಿಕ್ಕೋಡು ಹೋಬಳಿ ಕೊನ್ನವಳ್ಳಿ ಜೋಡಿದಾರ್ ನಾರಾಯಣಭಟ್ಟರಿಂದ ತಂದ ಓಲೆಯ ಪ್ರತಿ. ಇದೂ (ಗ) ಪ್ರತಿಯೂ ಬಹುಶಃ ಒಂದೇ ಮೂಲ ಮಾತೃಕೆಯಿಂದ ಪ್ರತಿಯಾದುದು. ಇದನ್ನು ಕೆಲವೆಡೆಗಳಲ್ಲಿ ಮಾತ್ರ ಉಪಯೋಗಿಸಿಕೊಂಡಿದೆ. (ಘ) ಎಂಬ ಪ್ರತಿ ಇದು.

(೭) ಈಚೆಗೆ ಗ್ರಂಥದ ಮೂಲವೆಲ್ಲ ಅಚ್ಚಾದಮೇಲೆ ಡಾ॥ ಎಂ. ಎಚ್. ಕೃಷ್ಣ ಅವರು ಶಾಸನದ ಇಲಾಖೆಯ ೧೯೩೧ನೆಯ ವರ್ಷದ ವರದಿಯಲ್ಲಿ ಪ್ರಸ್ತಾವಿಸಿರುವ ಓಲೆಯ ಪ್ರತಿಯು ಹಸ್ತಗತವಾಯಿತು. ಇದರಲ್ಲಿ ೬೭ ಪತ್ರಗಳಿವೆ. ಪತ್ರಗಳು ೧೭" × ೨" ಅಳತೆಯುಳ್ಳವು. ಇದರಲ್ಲಿಯೂ ಪ್ರಾರಂಭದಿಂದ ಯಾತ್ರಾಂಗವರ್ಣನೆಯ ಕೊನೆಯವರೆಗೆ ಇದೆ. 'ವಿರೋಧಿಜಯ' ವೆಂಬ ಹದಿನೆಂಟನೆಯ ವರ್ಣನೆ ಇದರಲ್ಲಿಯೂ ಲುಪ್ತ. ಪೀಠಿಕಾಭಾಗ ಮತ್ತು ಸಮುದ್ರವರ್ಣನೆ ಇವೆರಡೂ ಒಂದೇ ಆಶ್ವಾಸವಾಗಿ ಪರಿಗಣಿತವಾಗಿವೆ. ೧–೨ನೆಯ ಆಶ್ವಾಸಾಂತ್ಯಗಳಲ್ಲಿ ಮಾತ್ರ ಆಶ್ವಾಸಾಂತ್ಯ ಗದ್ಯವಿದೆ. ಉಕಾರವು ಶುದ್ಧವಾಗಿದೆ. ಪ್ರತಿ ಮಾಡಿದ ಕಾಲ ತಿಳಿಸಿಲ್ಲ. ಲಿಪಿಶಾಸ್ತ್ರ ದೃಷ್ಟಿಯಿಂದ ಇದು ೧೮ನೆಯ ಶತಮಾನದಲ್ಲಿ ಸಿದ್ಧವಾಗಿರಬೇಕು. ಪಾಠದ ದೃಷ್ಟಿಯಿಂದ ಇದು (ಕ) ಪ್ರತಿಯನ್ನು ಬಹುಮಟ್ಟಿಗೆ ಹೋಲುತ್ತದೆ. ಕೆಲವೆಡೆ ಉತ್ತಮವಾದ ಪಾಠಾಂತರಗಳು ದೊರೆಯುವುವು. ಗ್ರಂಥದ ಮೂಲವು ಅಚ್ಚಾದಮೇಲೆ ಇದು ನಮ್ಮ ವಶಕ್ಕೆ ಬಂದುದರಿಂದ ಶೋಧನ ಕಾರ್ಯದಲ್ಲಿ ಇದನ್ನು ಉಪಯೋಗಿಸಲಾಗಲಿಲ್ಲ.

'ಸೂಕ್ತಿಸುಧಾರ್ಣವ'ದ ಶೋಧನೆಯು ಸಾಧ್ಯವಾದಮಟ್ಟಿಗೂ ಬಹು ಎಚ್ಚರಿಕೆಯಿಂದ ನಡೆದಿದೆ. ಇತರ ಸುಭಾಷಿತ ಗ್ರಂಥಗಳಂತೆ ಇದರಲ್ಲಿರುವ ಪದ್ಯಗಳಿಗೆ ಮಾತೃಕೆಗಳಲ್ಲಿ ಆಕರಗಳು ಸೂಚಿತವಾಗಿಲ್ಲವಾದುದರಿಂದ ಅವನ್ನು ಕಂಡುಹಿಡಿಯುವುದೇ ಪ್ರಯಾಸವಾಯಿತು. ಇದಕ್ಕಾಗಿ ಮಲ್ಲಿಕಾರ್ಜುನನಿಗಿಂತ ಹಿಂದೆ ಇದ್ದ ಉಪಲಬ್ಧವಾದ ಎಲ್ಲ ಕನ್ನಡ ಚಂಪೂಗ್ರಂಥಗಳಿಗೂ (ಆಚ್ಚಾಗಿರಲಿ–ಕೈ ಬರಹದಲ್ಲಿರಲಿ) ಅಕಾರಾದಿಯನ್ನು ಮಾಡಿಕೊಂಡು ಸೂಕ್ತಿಸುಧಾರ್ಣವದ ಅಕಾರಾದಿಯೊಂದಿಗೆ ಹೋಲಿಸಿ ಶಾಸ್ತ್ರೀಯವಾಗಿ ಸಾಧ್ಯವಾದಷ್ಟು ಪದ್ಯಗಳಿಗೆ ಆಕರಗಳನ್ನು ಕಂಡುಹಿಡಿದು ಅವುಗಳಡಿಯಲ್ಲಿ ಕೊಟ್ಟಿದೆ. ಶೋಧನೆಯ ಕಾರ್ಯದಲ್ಲಿ ಮೇಲೆ ತಿಳಿಸಿರುವ ಪ್ರತಿಗಳನ್ನೂ ಆಕರ ಸಿಕ್ಕಿರುವ ಪದ್ಯಗಳಿಗೆ ಇತರಗಳ ಜೊತೆಗೆ ಆಯಾ ಗ್ರಂಥಗಳ ಅಚ್ಚಿನ ಅಥವಾ ಕೈ ಬರಹದ ಗ್ರಂಥಗಳನ್ನೂ ಉಪಯೋಗಿಸಿಕೊಂಡಿದೆ. ಅಚ್ಚಿನ ಪ್ರತಿಗಳಿಂದ ಪಾಠಾಂತರವನ್ನು ಕೊಟ್ಟಿದ್ದರೆ ಅದಕ್ಕೆ (ಅ) ಎಂಬ ಸಂಕೇತವನ್ನು ಉಪಯೋಗಿಸಿದೆ ಉದಾಹರಣೆಗೆ 'ಚಂದ್ರಪ್ರಭ ಪುರಾಣ'ದಿಂದ ಉದ್ಧೃತವಾದ ಒಂದು ಪದ್ಯಕ್ಕೆ ಪುಟದಡಿಯಲ್ಲಿ (ಅ) ಎಂಬ ಪಾಠಾಂತರ

ವಿದ್ದರೆ ಅದು ಚಂದ್ರಪ್ರಭಪುರಾಣದ ಅಚ್ಚಿನ ಪ್ರತಿಯ ಪಾಠವೆಂದು ತಿಳಿಯು ಬೇಕು. ಇಲ್ಲಿ ಉಪಯೋಗಿಸಿಕೊಂಡಿರುವ ಅಚ್ಚಿನ ಪ್ರತಿಗಳ ವಿವರವನ್ನು ಗ್ರಂಥಾಂ ತ್ಯದಲ್ಲಿ ಅನುಬಂಧದಲ್ಲಿ ಕೊಟ್ಟಿದೆ. 'ಶೂದ್ರಕ' ಗ್ರಂಥದ ಪದ್ಯಗಳನ್ನು ಆ ರೀತಿ ಗುರುತಿಸಿದುದು ಅಭಿನವವಾದಿವಿದ್ಯಾನಂದನ 'ಕಾವ್ಯಸಾರ'ದ ಆಧಾರದಿಂದ. ಶೂದ್ರಕಗ್ರಂಥ ಉಪಲಬ್ಧವಾಗಿಲ್ಲ. ಆದರ ಪದ್ಯದ ಕೆಳಗಡೆ (ಅ) ಎಂಬ ಪಾಠಾಂ ತರವಿದ್ದರೆ ಅದು 'ಕಾವ್ಯಸಾರದ' ಅಚ್ಚಿನ ಪ್ರತಿಯ ಪಾಠವೆಂದು ಗ್ರಹಿಸಬೇಕು. 'ಮದನತಿಲಕ' ಮತ್ತು ಪಾರ್ಶ್ವನಾಥಪುರಾಣ ಇವೆರಡೂ ಇನ್ನೂ ಅಚ್ಚಾಗಿಲ್ಲವಾದು ದರಿಂದ ಅದಕ್ಕೆ ಸಂಬಂಧಿಸಿದ ಪದ್ಯಗಳನ್ನು ಶೋಧಿಸುವಾಗ ಆ ಗ್ರಂಥಗಳ ಕೈ ಬರಹದ ಪ್ರತಿಗಳಾದ ಪ್ರಾಚ್ಯಕೋಶಾಗಾರದ ಕೆ. ಬಿ. ೫೮ ಮತ್ತು ಕೆ. ಬಿ. ೫೯ ನಂಬರಿನ ಕೋಶಗಳನ್ನು ಉಪಯೋಗಿಸಿಕೊಂಡಿದೆ. 'ಮದನತಿಲಕ'ದ ಪಾಠಾಂ ತರಗಳಿಗೆ ಮ. ತಿ. ಯೆಂದೂ ಪಾರ್ಶ್ವನಾಥಪುರಾಣದ ಕೈಬರಹದ ಪ್ರತಿಯ ಪಾಠಾಂತರಕ್ಕೆ (ಪ) ಎಂದೂ ಸಂಕೇತಮಾಡಿದೆ.[30] ಪ್ರತಿಗಳೆಲ್ಲೆಲ್ಲ (ಕ) ಪ್ರತಿಯ ಪಾಠವೇ ಬಹುಮಟ್ಟಿಗೆ ಶುದ್ಧವೂ ದೋಷರಹಿತವೂ ಆಗಿರುವುದರಿಂದ ಅದನ್ನೇ ಹೆಚ್ಚು ಅನುಸರಿಸಿದೆ. ಎಲ್ಲ ಸಾಮಗ್ರಿಗಳನ್ನೂ ಉಪಯೋಗಿಸಿಕೊಂಡು ವಿಶೇಷ ಶ್ರಮಪಟ್ಟರೂ ಅರ್ಥವಾಗದ ನುಮಾರು ೫೦ ಪದ್ಯಗಳಿಗೆ ಪ್ರಶ್ನಾರ್ಥಕ ಚಿಹ್ನೆ ಯನ್ನು ಹಾಕಿ ಹಾಗೆಯೇ ಬಿಟ್ಟಿದೆ. ಮಾತೃಕೆಗಳಲ್ಲಿಲ್ಲದ ಸಂಪಾದಕರ ಹೊಸ ಪಾಠಗಳನ್ನು ಕಂಸದಲ್ಲಿ ಸೇರಿಸಿದೆ. ವಾಚಕರ ಸೌಕರ್ಯಕ್ಕಾಗಿ 'ಸೂಕ್ತಿಸುಧಾರ್ಣ ವ'ದ ಪದ್ಯಗಳ ಅಕಾರಾದಿಯನ್ನೂ, ಆಕರಗಳು ನಿಕ್ಕಿರುವ ಪದ್ಯಗಳ ಸಂಖ್ಯೆ ಗಳನ್ನೂ ಆಕರಗಳ ಪಟ್ಟಿಯನ್ನೂ ಅನುಬಂಧದಲ್ಲಿ ಕೊಟ್ಟಿದೆ.

ಮೇಲೆ ಸೂಚಿಸಿರುವಂತೆ ಈ ಗ್ರಂಥದಲ್ಲಿ ಆಕರ ನಿಕ್ಕದೆ ಅನಿರ್ದಿಷ್ಟವಾಗಿ ಉಳಿದಿರುವ ಪದ್ಯಗಳು ಒಂದು ಸಾವಿರಕ್ಕಿಂತ ಮಿಗಿವೆ. ಅವುಗಳಲ್ಲಿ ಯಾವುದ ಕ್ಕಾದರೂ ಆಕರ ಗೊತ್ತಾಗಿ ತಿಳಿಸಿದರೆ ಕೃತಜ್ಞತೆಯಿಂದ ಸ್ವೀಕರಿಸಲಾಗುವುದು.

ಈ ಗ್ರಂಥದ ಸಂಶೋಧನೆಯ ಕಾಲದಲ್ಲಿ ಮೊದಲಿಂದಲೂ ನಾನಾರೀತಿ ಯಾಗಿ ಸಹಾಯಮಾಡಿರುವ ನನ್ನ ಮಿತ್ರರಾದ ತೀ. ನಂ. ಶ್ರೀಕಂಠಯ್ಯ, ಎಂ. ಎ., ಮತ್ತು ಡಿ. ಎಲ್. ನರಸಿಂಹಾಚಾರ್ಯ, ಎಂ. ಎ., ಆವರಿಗೂ, ಶೋಧನೆಗೆ ಪ್ರತಿ ಗಳನ್ನು ಕೊಟ್ಟು ಸಹಾಯಮಾಡಿದ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕ ವಾದ ವಂದನೆಗಳು.

ವ್ಯಯ॥ ಭಾ॥ ಬ॥ ೫. **ಎಸ್. ಅನಂತರಂಗಾಚಾರ್.**

---

[30] ಈ ಸಂಕೇತಗಳಲ್ಲದೆ ಬೇರೆ ಸಂಕೇತಗಳಿದ್ದರೆ ಅವನ್ನು ಅಚ್ಚಿನ ತಪ್ಪೆಂದು ಭಾವಿಸಬೇಕು.

ಸೂಕ್ತಿಸುಧಾರ್ಣವಂ

ಪೀಠಿಕಾಪ್ರಕರಣಂ

ಶ್ರೀ ನೆಲಸಿರ್ಪ ತಾವರೆಯನಾಂತ ಸರೋವರದಂತೆ, ವಿದ್ಯುಮ
ಶ್ರೀ ನೆಲಸಿರ್ಪ ವಾರಿನಿಧಿಯಂತೆ, ತಳರ್ ಪುದಿದಾಮ್ರದಂತೆ ತೇ ।
ಜೋನಿಧಿಯಪ್ಪ ಬಾಲರವಿ ತಳ್ತ ವಿಯತ್ತಳದಂತೆ ವಿಶ್ವಧಾ
ತ್ರೀನುತ ಕೌಸ್ತುಭಾಭರಣನಚ್ಯುತನೀಗೆಮಗೊಲ್ದು ರಾಗಮಂ ॥

ಶ್ರೀವಧು ರಾಗದಿಂದಗಲದಾವನ ವಕ್ಷದೊಳಿರ್ಪಳಾವ[1]ನಂ
ದೇವನಿಕಾಯವೋಲಗಿಪುದಾವನ ನಾಭಿಸರೋಜದೊಳ್ಪಚ।
ಶ್ರೀವರನುತ್ಸವಂ ಬೆರಸು ಪುಟ್ಟಿದನಾವನ[2]ಶೇಷ[2] ದೈತ್ಯವಿ
ದ್ರಾವಣ[3]ನೀಗೆ ಕಾವ್ಯವಿಭುಗ[3]ಚ್ಯುತನಚ್ಯುತ ಸೌಖ್ಯಕೋಟಿಯಂ ॥ ೨

(ದುರ್ಗಸಿಂಹನ ಪಂಚತಂತ್ರಂ, ೧–೧.)

ಪೊಸಪೊಂಬಣ್ಣಂ ಪೊದಪೊ್ದಪ್ಪವ ಜಡೆದುಱುಗಲ್ ಭೂಷಣಾಹಿನ್ಫಟಾ ರ
ತ್ನಸಹಸ್ರಜ್ಯೋತಿ ಶೀತದ್ಯುತಿ ಮೃದುಕರಿಚರ್ಮಾಂಬರಂ ಸಂಜೆಗೆಂಪುಂ।
ಬಿಸಿಲುಂ ಬೆಳ್ದಿಂಗಳುಂ ಕಟ್ಟಲೆಯುಮೆನಿಪ ಚೋದ್ಯಕ್ಕೆ ಪಕ್ಕಾದ ದೈತ್ಯೇಂ
ದ್ರಸುರೇಂದ್ರಸ್ತೋತ್ರಪಾತ್ರಂ ಪ್ರಮುದದೆ ಪರಿರಕ್ಷಿಕ್ಕೆ ನಮ್ಮಂ ತ್ರಿಯಕ್ಷಂ ॥ ೩

[4]ಉದಧಿ[4]ಗಳೇಟುಮೆಯ್ದೆ ತೊವೆರಾದುವು ದಾನಜಲೌಘದಿಂ, ಸುವ
ರ್ನದಿ ತನಗೊರ್ಮೆ ಪೀರಲಣಮೆಯ್ದದ್ದು ಬೃಂಹಿತದಬ್ಬರಕ್ಕೆ ದಿ।
ಗ್ಮದಕರಿ ಭೀತಿಯಿಂದೆ [5]ಸರಘಿ[5]ಟ್ಟುವು ಚಂಚಲ ಕರ್ಣತಾಳವಾ
ತದೆ ಸುಟಿಗೊಂ[6]ಡರಭ್ರಗರ[6]ನಿಪ್ಪ ಗಜಾನನನೀಗೆ ಭೋಗಮಂ ॥ ೪

ಅರಿರೌದ್ರಂ ಕರದೈಶ್ವರ್ಯಮುಲ್ಲಸದಹೀನಾಲಂಕೃತಂ ಮೂರ್ತಿ ನಾ
ಕ್ಷರಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದಂ ಸದಾಳಿಪ್ರಿಯಂ ।

[1] ಗಂ (ಕ). [2] ಶಿಷ್ಯ (ಕ). [3] ಕಾವ್ಯನೀಗೆವ.ಗೆಯು (ಕ), ನೀಗೆ ದುರ್ಗವಿಭುಗ (ಅ).
[4] ಅದುತಿ (ಖ). [5] ಸರಗಿ (ಕ). [6] ದಧ್ರನೆನಿಪ್ಪ (ಕ), ಡುದಧ್ರವೆನಿಸಿರ್ಪ (ಖ).

ವರದಾನಂ [1]ನು[1]ತಭದ್ರಲಕ್ಷಣ[2]ಗುಣಂ[2] ಪದ್ಮಾನುಷಂಗಿತ್ವಮಾ
ಗಿರೆ ಪೆಂಪಚ್ಚರಿಯಾದ ದೇವಗಣಪಂ ರಕ್ಷಿಕ್ಕೆ ಭೂಚಕ್ರಮಂ ॥ ೫

(ಜಗನ್ನಾಥವಿಜಯಂ, ೧–೫.)

ಆವಳ ಕಯ್ಯ ಪುಸ್ತಕದೊಳಿರ್ಪುವು ಲೋಕದ ಸಾರ[3]ಸೂ[3]ಕ್ತಿಯಿ
ನ್ನಾವಳ ವಾಗ್ವಿಲಾಸಚತುರತ್ವದೆ ಪೋದುದು ಪದ್ಮಜಂಗೆ ಮು।
ನ್ನಾವರಿಸಿರ್ದ ಛಾಂದಸಿಕೆಯಾವಳ ಪೋಲ್ವೆಯ ಪುತ್ರಿ ಕೀರ್ತಿ ಲ
ಕ್ಷ್ಮೀ[4]ವಧುವಾದಳಾ ವಧುಗೆ[4] ಕಾವ್ಯದ [5]ನಾಂದಿ[5]ಯೊಳಿರ್ಪ್ಯೆಂತೆಂ ॥ ೬

ದುರಿತವ್ರಾತಲತಾಕೃಪಾಣಿ ವಿಸರದ್ದುರ್ಗೋದ್ಧರೋದಸ್ಸಿನೀ
ತರಣದ್ರೋಣಿ ಸಮುನ್ನತಾಕ್ಷಯಪದ ಪ್ರಾಸಾದ ನಿಶ್ರೇಣಿ ಬಂ ।
ಧುರಸಾಹಿತ್ಯ ಸುರತ್ನರೋಹಣಮಹೇಂದ್ರಕ್ಷೋಣಿ ತಾಳ್ದಿರ್ಕೆ ವಿ
ಸ್ತರದಿಂ ವಾಣಿ ಮದೀಯ ಮಾನಿತ ಮುಖಶ್ರೀಯೊಳ್ ಸಖೀಲೀಲೆಯಂ ॥ ೭

(ಚಂದ್ರಪ್ರಭಪುರಾಣಂ, ೯–೧೧.)

ಸರಸಕವೀಶ್ವರ ಸಭೆಯೊಳ್
ಸರಸಕವೀಶಂ ವಿಶಿಷ್ಟ ಮುನಿಗಳ ಸಭೆಯೊಳ್।
ಪರಮಮುನಿ ಬುಧರ ಸಭೆಯೊಳ್
ಪರಮಬುಧನೆನಿಪ್ಪ[6]ನೀ ಚಿದಾ[6]ನಂದ ಬುಧಂ ॥ ೮

ಶ್ರೀವಧು ಮುತ್ತಿನೆಕ್ಕಸರದಂತುರದೊಳ್ [7]ನಿಲು[7]ವಂತು ವಿಕ್ರಮ
ಶ್ರೀವಧು ಬಾಹುಪೂರಕದವೊಲ್ ಭುಜದೊಳ್ ನಿಲುವಂತು ಕೀರ್ತಿ ದಿ।
ಗ್ದೇವಿಯರೊಳ್ [8]ನಿಜಾಜ್ಞೆ[8]ವೆರಸಾದರದಿಂ ನಿಲುವಂತು ಧರ್ಮಲ
ಕ್ಷ್ಮೀವರನಾಗಿ ಪಾಲಿಸುಗೆ ಮೇದಿನಿಯಂ ಕಲಿಸೋಯಿಬಲ್ಲಹಂ ॥ ೯

(ಮಂಡ್ಯ, ೧೨೧; ನಾ.ಮಂ, ೯೮; ಕಡೂರು, ೧೨.)

ಹರಿನಾಭೀಕಮಲಕ್ಕೆ ಪುಟ್ಟಿದಜನಿಂ ಸಂದತ್ರಿಯಿಂ ಸೋಮನಿಂ
ದೊರೆವೆತ್ತಾ ಬುಧನಿಂ ಪುರೂರವನಿನಾಯುರ್ಭೂಪನಿಂ ರಾಜಶೇ ।
ಖರನಪ್ಪಾ ನಹುಷಾಂಕನಿಂ [9]ವಿಭು[9] ಯಯಾತಿ[10]ಕ್ಷ್ಮಾಪ[10]ನಿಂ ಕ್ಷಾತ್ರಮಂ
ದಿರನಾದಂ ಯದುವಾತನಿಂ ಯದುಕುಲಂ ಪ್ರಖ್ಯಾತಮಾಯ್ತುರ್ವಿಯೊಳ್ ॥ ೧೦

(ಮಂಡ್ಯ, ೧೨೧; ನಾ.ಮಂ, ೯೮.)

---

[1] ನ (ಕ.ಖ) [2] ಪದಂ (ಕ.ಖ). [3] ಸೋ (ಖ). [4] ವರವಾದವಾಗ್ವಧುಗೆ (ಕ), ವಧುವಾವಾಗ್ವಧುಗೆ (ಖ). [5] ಸಂಧಿ (ಖ) [6] ನಿಶ್ಚಿತಾ (ಕ), ಸಚ್ಚಿದಾ (ಖ). [7] ನಲ (ಶಾಸನ). [8] ವಿರಾಗ (ಖ.ಬ). [9] ನಯ (ಕ). [10] ಶ್ರೇಷ್ಠ (ಕ.ಖ. ಶಾಸನ).

ಸಳನೆಂಬಂ ಶತಕಾಭಿಧಾನಪುರದೊಳ್ ವಾಸಂತಿಕಾದೇವಿ[1]ಯೆಂ
ಬಳನಾ[1]ರಾಧಿಸುವಾಗಳು[2]ಗ್ರತರ[2]ನೇತ್ರಂ ಘೋರಪಕ್ಷ್ಮಂ ವಿಶೃಂ ।
ಖಳಗಾತ್ರಂ ಪುಲಿ [3]ಪಾಯೆ[3] ಕಂಡು ಮುನಿನಾಥಂ ಕುಂಚಮಂ ಕೊಟ್ಟು ಹೊ
ಯ್ಸಳ ಎಂದಂ ಬಚಿ[4]ಕಾ[4]ಯ್ತು ಹೊಯ್ಸಳವೆಸರ್ [5]ತದ್ವಂಶಪೋ[5]ರ್ವೀಶರೊಳ್ ॥

(ತರೀಕೆರೆ, ೪೨)

ಆದಿವರಾಹಂ ಕೋಡೊಳ್
ಮೇದಿನಿಯಂ ತಳೆವ ತೆಱದಿನೂರ್ಜಿತಸತ್ವಂ ।
ಮೇದಿನಿಯಂ ತಳೆದಂ ವಿನ
ಯಾದಿತ್ಯಂ [6]ಗೋತ್ರವರ್ಧನಂ[6] ಹೊಯ್ಸಳರೊಳ್ ॥ ೧೨

(ಮಂಡ್ಯ, ೧೨೧.)

ವಿನಯಾದಿತ್ಯನ ನಂದನಂ ನಿಜಭುಜಾವಷ್ಟಂಭದಿಂ ವಿಶ್ವಮೇ
ದಿನಿಯಂ ತಾಳ್ದಿದನಾಜಿವೀರನೆಱಿಯಂಗಂ ಹರ್ಷಮಂ ತಾ[7]ಳ್ದೆ[7] ಮಿ ।
ತ್ರನಿಕಾಯಂ ನಿಜಶತ್ರುಗಳ್ ಭಯಮನೆತ್ತಂ ತಾ[7]ಳ್ದೆ[7] ಭೀತಾನತರ್
ಘನಸಂಪತ್ತಿಯನೆಯ್ದೆ ತಾ[7]ಳ್ದೆ ದಿಗಧೀಶರ್ ತಾ[7]ಳ್ದೆ[7] ತನ್ನಾಜ್ಞೆಯಂ ॥ ೧೩

(ಮಂಡ್ಯ, ೧೨೧.)

ಪೆಸಗೊಂಡಾವಾವ ದೇಶಂಗಳನೆಣಿಸುವುದಾವಾವ ದುರ್ಗಂಗಳಂ ಬ
ಣ್ಣಿಸಿ ಪೇೞುತ್ತಿರ್ಪುದಾವಾವವನಿಪತಿಗಳಂ ಲೆಕ್ಕಿಸುತ್ತಿರ್ಪುದೆಂಬೊಂ ।
ದೆಸಕಂ ಕಯ್ಗಣ್ಮೆ ನಾಲ್ಕುಂ ಕಡಲ ಕಡೆವರಂ ದಿಗ್ಜಯೋತ್ಸಾಹದಿಂ ನಾ
ಧಿಸಿದಂ ವಿಕ್ರಾಂತದಿಂ ನಂವೆಱಿಗನೃಪತಿಯಾತ್ಮೋದ್ಭವಂ ವಿಷ್ಣುದೇವಂ ॥ ೧೪

(ಮಂಡ್ಯ, ೧೨೧.)

ದೇವಿವೆಸರೆಸೆವ ಲಕುಮಾ
ದೇವಿಗಮಾ ವಿಷ್ಣುವರ್ಧನಂಗಂ ತನಯಂ।
ಶ್ರೀ ವಿಜಯನಾರಸಿಂಹ ಮ
ಹೀವಲ್ಲಭನಾದನುದಿತನುಪಮಾತೀತಂ ॥ ೧೫

(ತರೀಕೆರೆ, ೪೨.)

ಇದಿರಾದರಿಭೂಪಾಲರ
ಮದದಾನೆಯ ಕೊಂಬಿನೆಸೆವ ದಂತದ ಬಳೆ[8]ಯಂ[8]।

---

[1] ಯಂ ತಳೆದಾ (ಶಾಸನ). [2] ತ್ತರಳ (ಶಾಸನ). [3] ಯೆಯ್ದೆ (ಕ.೩). [4] ಯಾ (ಕ.೩). [5] ತಾಂ ಯಾದಪೋ (ಶಾಸನ). [6] ದೋಃಪ್ರತಾಪದಿಂ (ಕ.೩. ಶಾಸನ). [7] ೞೆ (ಶಾಸನ). [8] ಯಿಂ (ಕ).

ಬಿದುವಿನ ಮುತ್ತಿನ ಹಾರಮ
ನೊದವಿಸಿ ಜಯಸಿರಿಗೆ ತುಡಿಸುವಂ [1]ನರ[1]ಸಿಂಹಂ ॥ ೧೬

(ಆರಸೀಕೆರೆ, ೬೨.)

ಆ ವಿಜಯ ನಾರಸಿಂಹ ಮ
ಹೀವಲ್ಲಭನಗ್ರಮಹಿಷಿಗಾ ಪಟ್ಟಮಹಾ ।
ದೇವಿಗೆ ಪೆಸರ್ವೆ[2]ತ್ತೆ ರೀಚಲ[2]
ದೇವಿಗೆ ಬಲ್ಲಾಳದೇವನುದಯಂಗೆಯ್ದಂ ॥ ೧೭

(ಮಂಡ್ಯ, ೧೨೯.)

ಉರದೊಳ್ ಸಪ್ತಾಂಗಲಕ್ಷ್ಮೀವಧು ವಿಜಯಭುಜಾದಂಡದೊಳ್ ವಿಕ್ರಮಶ್ರೀ
ಧರೆಯೊಳ್ ತನ್ನಾಜ್ಞೆ ತನ್ನೊಳ್ ನೃಗ ನಳ ನಹುಷ ಕ್ಷತ್ರಧರ್ಮಂ ಪದಾಬ್ಜೇ।
ದರದೊಳ್ ಭೀತಾನತೌಘಂ ಸುಖಮಿರೆ ಪರಮೋತ್ಸಾಹದಿಂ ವಿಶ್ವವಿಶ್ವಂ
ಧರೆಯಂ ದೋರ್ದಂಡದೊಳ್ ತಾಳ್ದಿದನತುಳಬಳಂ ವೀರಬಲ್ಲಾಳದೇವಂ ॥ ೧೮

(ಮಂಡ್ಯ, ೧೨೧.)

ಆ ಚಕ್ರೇಶನ ಸೂನು ವೀರನರಸಿಂಹಂ ಚೋಳರಾಯಪ್ರತಿ
ಷ್ಠಾಚಾರ್ಯಂ ಮ[3]ಗರಾ[3]ಧಿರಾಜ ಲಯಕಾಲಂ ಪಾಂಡ್ಯಸಾಮ್ರಾಜ್ಯಸಂ ।
ಕೋಚಾಧಾಯಿಪರಾಕ್ರಮಂ [4]ಧರೆಯನಾಳ್ದಂ[4] [5]ತತ್ಸುತಂ[5] ವೀರಲ
ಕ್ಷ್ಮೀಚಂಚನ್ನಿ[6]ಧೂ[6]ರನಂಬುಧಿಗಭೀರಂ [7]ವೀರಸೋಮೇಶ್ವರಂ[7] ॥ ೧೯

(ಮಂಡ್ಯ, ೧೨೧; ನಾ.ಮಂ, ೯೮; ಕಡೂರು, ೧೨.)

ಮುನ್ನಂ ರೂಢಿಯ್ದು ಕೃಷ್ಣಕಂಧರನುಮಂ ಮಾರ್ಕೊಂಡು ಚೋಳೋರ್ವಿಯಂ
ನಿನ್ನಂತಾರೊಳಪೊಕ್ಕು ಸಾಧಿಸಿದರಾರ್ ಪಾಂಡ್ಯೇಶನಂ ವೀರದಿಂ ।
ಬೆನ್ನಂ ಪತ್ತಿಸಿ ಸೋಯಿದೇವ ಘಟೆಯಂ ಕೈಕೊಂಡರಾರ್ ಚೋಳನಂ
ತನ್ನಾಮ್ನಾಯದ ರಾಜ್ಯದೊಳ್ ನಿಲಿಸಿದರ್ ಸೋಮಾನ್ವಯಾಧೀಶರೊಳ್ ॥ ೨೦

(ನಾ.ಮಂ, ೯೮; ಕಡೂರು, ೧೨.)

ಹಣ್ದಂ[8]ಬೊಯ್ಯಲ್ ಜವಂ[8] ರಾಯರನೆ [9]ಬಯ[9]ಸಿ ಬರ್ಪಂತೆ ಸೋಮೇಶ್ವರಂ
ಕಣರಾಯಂ ಬಂದನಾಶಾಜಯಕೆಲೆಲೆ ಮಹಾದೇವ ವಿದ್ವಿಣ್ನೃಪರ್ಗೆ । [ತೆಂ
ತ್ತಣ ಕೂರ್ಪಿನ್ನೆತ್ತಣಾರ್ಪೆತ್ತಣ ಜಯದೊದವಿನ್ನೆತ್ತಣಾಟೋಪಮಿನ್ನೆ
ತ್ತಣ ಧಾತ್ರೀಚಕ್ರವಿನ್ನೆತ್ತಣ ಗಜಘಟೆಯಿನ್ನೆತ್ತಣಾತ್ಮೀಯಸೈನ್ಯಂ ॥ ೨೧

---

[1] ಜಯ (ಬ). [2] ತ್ತಚಲಾ (ಬ). [3] ಕರಾ (ಶಾಸನ ಕಡೂರು, ೧೨), ಗಧಾ (ಕ). [4] ಮಗಧನಾಳ್ವಂ (ಬ). [5] ಲೀಲೆಯಿಂ (ಕ.ಖ). [6] ಹಾ (ಕ). [7] ರಾಜವಿದ್ಯಾಧರಂ (ಕ.ಖ. ಶಾಸನ). [8] ಬೊಯ್ದೆಲ್ಲರಂ (ಬ). [9] ಜಯಿ (ಬ).

ಕವಚಂ ಕಟ್ಟಾಯವಣ್ಮಿಂದಿಱಿವ ಮೆಱಿವ ಬಾಹಾಬಲಕ್ಕಾರ್ಪು[1]ವೆತ್ತೀ
ಕವಿ[1]ಳಾಸಂ ಸಾಹಸಕ್ಕೆತ್ತಿದ ಬಿರುದೆ ವಲಂ ಡಂಗುರಂ [2]ಪೊಣ್ದ ಮಂತ್ರ[2]
ಕ್ಕೆ ವಿರೋಧಿಶ್ರೀಸಮಾಕರ್ಷಣಮೆ ಕಳಶವಿಸ್ತಾರಮೆಂಬನ್ನೆಗಂ ಯಾ
ದವರಾಯಂ ಸೋಯಿಗಂ ಹೊಯ್ಸಳಕುಲತಿಲಕಂ ಲೋಕದೊಳ್ ಕೀರ್ತಿವೆತ್ತಂ ॥

ಗಿರಿದುರ್ಗಂ ತಿಱುಕಲ್ ಸಮಗ್ರವನದುರ್ಗಂ ಕರ್ಬುದೋಂಟಂ ಜಲೋ
ದರದುರ್ಗಂ ಕಡುಪಿಂದ[3]ವಿಾಂ[3]ಟಿ ಪೊಗೆವಂತಾಪೋಶನಂ [4]ಕಾಣ್ಬುದೇ ।
ಕರಣಂ ಕೇಳ್[4] ಶರಣಿಲ್ಲ ಬೇಱೆ ನಿಮಗೆಂದುದ್ಭೃತ್ತರಂ ಸಾಱಿ ಡಂ
ಗುರಿಪಂತಬ್ಬರಿಕುಂ ಜಯೋತ್ಕಟಮಹಂ ಶ್ರೀಸೋಮಭೂಪಾಲನಾ ॥ ೨೩

ಕೃತಿಯಂ ನಿರ್ಮಿಸಿ ಮುನ್ನಮಾದರಿಳೆಯೊಳ್ ಶ್ರೀಹರ್ಷನುಂ ಭೋಜ ಭೂ
ಪತಿಯುಂ ಸತ್ಕವಿ ವಜ್ರಹಸ್ತನೃಪನುಂ ಸರ್ವಜ್ಞಸೋಮೇಶನು ।
ನ್ನತಿವೆತ್ತಂ ಧರೆಗಿಂದು ಮಲ್ಲಬುಧನಿಂದಂ ಕಾವ್ಯಸಾರಂ ಜಗ
ನ್ನುತಮಾಯ್ತೆಂದೆನೆ ಮಾಡಿ ಕೀರ್ತಿವಡೆದಂ ಶ್ರೀವೀರಸೋಮೇಶ್ವರಂ ॥ ೨೪

ಚದುರರ ಮೆಚ್ಚು ಭಾವುಕರ ಕೈಪಿಡಿ ಜಾಣರ ಬಯ್ಕೆ ಸತ್ಕಲಾ
ವಿದರ ವಿಲಾಸಮಕ್ಕರಿಗರಾಭರಣಂ ಬುಧರಿಚ್ಛೆಯಚ್ಚು ವೀ।
ರದ ಕಣಿ [ಕೂರ್ತು ಕೂರಿಸಿದ ನಲ್ಲಳ ಮ್ಮೆಸರಿ ತಾ[5]ನೆನಿಪ್ಪ[5] ಸ
ಮ್ಮದದೊಳೆ ಬಣ್ಣಿಕುಂ ಧರಣಿ ಸತ್ಕವಿ ಮಲ್ಲನ ಕಾವ್ಯಸಾರಮಂ ॥ ೨೫

ಪನ್ನನ ದೇಸೆ ಪಂಪನ ಗುಣಂ ಗುಣನಂದಿಯ ಛೊಂಡು ಪೊನ್ನನೊಳ್
ಸನ್ನಿದಮಾದ [6]ಜಾ[6]ಣ್ಣುಡಿ ಗಜಾಂಕುಶ ರಾಜನ ಚಿತ್ತವೃತ್ತಿ ತಾ ।
ನುನ್ನತಮಾಗಿ ನಂದ ಗುಣವರ್ಮನ ಜಾತಿ ಸಮಾನುರಕ್ತಿಯಿಂ
ದನ್ನೆಲಸಿರ್ಪುವೀ ಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್ ॥ ೨೬

ಚದುರೆಸೆವಂತು ಭಾವಮಮರ್ವಂತು ನಯಂ ನಿಮಿರ್ವಂತು ಮಲ್ಲಪಂ
ಪದವಿಡೆ ಭಾರತೀವನಿತೆ ಭೋಂಕನೆ ಬಂದು ಮನಸ್ಸರೋಜದೊಳ್ ।
ಚದುರೆಸೆವಂತು ಭಾವಮಮರ್ವಂತು ನಯಂ ನಿಮಿರ್ವಂತು ಲೀಲೆಯಿಂ
ಪದವಿಡುತಿರ್ಪಳಾಹವನ ಕಾರಣಮಂತ್ರಮಿದಾಗದಿರ್ಕುಮೆ ॥ ೨೭

---

[1] ಕೇಯೂರವಿ (ಖ). [2] ಪೊಣ್ಮದಂತ (ಬ). [3] ದೀಂ (ಕ.ಖ). [4] ಗೊಂಡುಬರ್ಪವರೇಣ್ಯಂ ಕೇಳ್ (ಬ), ಗೊಟ್ಟುಬರ್ಪವರೇಣ್ಯಂ (ಖ). [5] ನದಂದೆ (ಕ). * ಈ ಪದ್ಯವಾದಮೇಲೆ (ಕ) ಪ್ರತಿಯಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ :—

ಕಂ ॥ ರಸದ ಬಗರಗೆ ಕಳಾಳಿಯ। ಪಸರಂ ವರ್ಣನದ ಸೀಮೆ ಕರ್ಣಾಟಕದಿಂ ॥
ದೆಸೆವರ್ಥಸೂಕ್ತಿಕಂಜಂ । ಪಸರಿಸಿತೀ ಕಾವ್ಯ . . . . . ತತ್ಸಾರಂ ॥

ನಾ (ಬ).

ಪಡೆದಂ ರಜೋಧಿಕಂ ವಿಧಿ
ಪೆಡೆವಣಿಯಂ ಫಣಿಯನಮೃತರಸಮಂ ವಿಷಮಂ ।
ಕಡಲಂ ಸುಟಿಯಂ ಮಡಿಯಂ
ಸಿಡಿಲಂ ಪಡೆದಂತೆ ಸುಜನರಂ ದುರ್ಜನರಂ ॥ ೨೮

(ಪಂಪರಾಮಾಯಣಂ, ೧–೩೨ ; ಮಲ್ಲಿನಾಥಪುರಾಣಂ, ೧–೫೨.)

ವಿನಯಮನನ್ನೆಗಂ ಸುಜನರೊಳ್ ಬಟಿಕೊಯ್ಯನೆ ಮಾಡಿಕೊಳ್ವೆ[1]ನ್ನೇ
ಕ್ಕೆನೆ[1] ವಿಷಪನ್ನಗಾಕೃತಿಯೊಳಟ್ಟಿ ತಗುಳ್ದು ದುರಂತ ದುಃಖ ಭಾ ।
ಜನ ದುರಿತಾತ್ಮ ದುಶ್ಚರಿತ ದುಸ್ಸಹ ದುರ್ಮುಖ ದುರ್ವಿದಗ್ಧ ದು
ರ್ಜನನೆನಿಸಿರ್ದ ದುಷ್ಕೃತಿಗೆ ಭಕ್ತಿಯೊಳೆತ್ತು ವೆನಗ್ಗಪೂಜೆಯಂ ॥ ೨೯

ಅಂಗುಳೊಳಡಸಿದ ವಿಷ[2]ಮುಂ[2]
ಭಂಗುರತರ ವಿಷಮದೃಷ್ಟಿ[3]ಯುಂ[3] ವ್ಯಾಳಸಮಾ ।
ಸಂಗಮು[4]ಮುರ್ದಿರೆ[4] ಮದನಹ
ರಂಗೆಣೆಯೆನಿಪುದಱಿನೆಮಗೆ ಖಳರಭಿವಂದ್ಯರ್ ॥ ೩೦

(ಕಾವ್ಯಾವಲೋಕನಂ, ೭೬೩.)

ಒಱೆಯಿಂದುರ್ಚದೆ ನಡುಗುಮೆ
ನೆಱೆದೆಡೆಯಂ ಖಡ್ಗಮಾಸ್ಯಕೋಶದಿನಿಸುಂ ।
ಪೊಱಮಡದೆ ಕೊಂದು ಕೂಗಲ್
ನೆಱೆದುದು ದುರ್ಜನನ ನಿಶಿತ ರಸನಾಖಡ್ಗಂ ॥ ೩೧

ವಿನಯಂ ಮಾಸುಗುಮೆಂದು ಬೆರ್ಚಿ ಕೆಲಬರ್ ಸೌಜನ್ಯಮಂ ಬೀಱು ದು
ರ್ಜನನಂ ಮೆಲ್ಲನೆ ಬಯ್ವರಾ ಖಳನಿನಾರ್ಗಂ ಪೇಟಿಮೊಳ್ಪಂತೆ ಕೆ ।
ಮ್ಮನೆ ಕೈ[5]ಗಾ[5]ದಿರದೋವದುಪ್ಪನೊಲೆಯೊಳ್ ಪೊಯ್ವಂತೆ ಪಾಱೇಪೆ ದು
ರ್ಜನನಂ ಬಯ್ವುದು ಬಯ್ದೊಡಲ್ಲದವನಂ ಪೇಪ್ ಭಾವಿಸಲ್ಬರ್ಕುಮೇ ॥ ೩೨

ತುಡುಕಿದ ದೋಷಿಯನಲ್ಲದೆ
ಪಿಡಿಯದು ಘಟಸರ್ಪನಂತುಟಲ್ಲಿದು ತನ್ನಂ ।
ತುಡುಕದ ನಿರ್ದೋಷಿಯುಮಂ
ಪಿಡಿವುದು ಖಳಮುಖ ಘಟೋಗ್ರಜಿಹ್ವಾಸರ್ಪಂ ॥ ೩೩

(ಜಗನ್ನಾಥವಿಜಯಂ, ೧–೧೨.)

---

[1] ನೆಂತೆನೆ (ಖ.ಬ). [2] ದಿಂ (ಬ). [3] ಯಿಂ (ಬ). [4] ಮಾಗಿರೆ (ಬ).
[5] ಗುಂ (ಕ).

ವಿಕಸಿತಚಂಪಕಕ್ಕೆಳಸಿ ಬಂಡುಣಲೊಲ್ಲದ ಚಂಚರೀಕ ನಾ
ಸಿಕಮನಶೇಷಮಂ ಬೆಳಗೆ ತಿಗ್ಮಕರಂ ದೆಸೆಗಾಣದಿರ್ಪ ಕೌ।
ಶಿಕನಯನಂಗಳಂ ಸುಕವಿಕಾವ್ಯಮನಾಲಿಸಿ ಕಾಯ್ವ ದುರ್ಜನ
ಪ್ರಕರದ ಕರ್ಣಕೋಟರಮನೇಕೆಯೊ ಮಾಡಿದನಬ್ಜಫಿಷ್ಟರಂ ॥ ೩೪

(ಪಂಪರಾಮಾಯಣಂ, ೧–೩೧.)

ಛಂದಮಿದಾವುದೆಂದೊಡಿಱಿವರ್ ಪದಬಂಧದೊಳೀಪ್ರಯೋಗ[1]ಮೆಂ
ತೆಂ[1]ದೊಡೆ ಬಯ್ಪರಾವ ಕವಿಮಾರ್ಗಮಿದೆಂದೊಡೆ ಪೊಯ್ಪರರ್ಥಮೇ।
ನೆಂದೊಡೆ ತೊಂಡುಭಂಡುಗೆಡೆದುಟ್ಟುದನಿಕ್ಕುವರಾ[2]ವ ನೀತಿ ಪೇ[2]
ೞೆಂದೊಡೆ ಕೊಲ್ವರೀಗಳಿನ ದೇಸಿಗೆ ಬಿಟ್ಟ ಮಹಾಕಪೀಶ್ವರರ್ ॥ ೩೫

ವಾಕ್ಕಿನೊಳಿಲ್ಲ ಮೇಣ್ ಪರಿಚಯಂ ಬಗೆ [3]ಮೊ[3]ಕ್ಕಳಮಂತು[4]ಟ[4]ಲ್ತೆ ಗಂ
ಟಿಕ್ಕುವರೆಂಜಲಾದ [5]ಬ[5]ಡುವಾತುಗಳಂ ಪಟಿಗಬ್ಬಮೆಲ್ಲಮಂ ।
[6]ರಕ್ಕಸಿ ತಿಂದು[6] ಕುಂಬಳದ ಮಾಪ್ಕೆಯ ಮಾಡುವೆನೆಂಬ ಸಾಸಿಗಂ
ಗಕ್ಕಟ ಪೂಣ್ದು ನಿರ್ವಹಿಪುದೇನರಿದಾ[7]ಯ್ತೆ[7] ಮಹಾಪ್ರಬಂಧಮಂ ॥ ೩೬

ಕವಿಯಂ ಕಂಡೊಡೆ ಶಾಸ್ತ್ರಹೀನನಿವನೆಂದಿಂತಾರ್ದು, ಶಾಸ್ತ್ರಜ್ಞನಂ
ಕವಿಯಲ್ಲೆಂದಣಮಾರ್ದು ಮಿಕ್ಕ ಬಹುಶಾಸ್ತ್ರಪ್ರಜ್ಞನಪ್ಪಾ ಮಹಾ ।
ಕವಿಯಂ ಕಂಪೊಡೆ ದಗ್ಧವಾಣಿಯಿವನೆಂದಿಂತಾರ್ದು ಹಾಸ್ಯೋಕ್ತಿಯಿಂ
ಕವಿಗಳ್ ವರ್ತಿಪರಲ್ಲದಾವ ಮೊಱೆಮುಟ್ಟಿಂದಂತವರ್ ವರ್ತಿಪರ್ ॥ ೩೭

[8]ಪೆಱರಂ ಪೊಗೞ್[8]ಲ್ಬಪೆಯದೆ
ಪೆಱರಂ ಕಯ್ಯಿಕ್ಕಿ [9]ಜೋಡಿ[9]ಸಲ್ಬಡೆಯದೆ ತಾಂ ।
ಪೆಱರಂ ಪಟಿಯಲ್ಬಡೆಯ್ದೆ
ಮಱುಕಪೊ[10]ಳಿರ್ಪಂತು[10] ದುರ್ಜನರ್ ಬಡ[11]ವಪ್ಪರ್[11] ॥ ೩೮

ನೋಡಿರೆ ನದ್ಗುಣಂಗಳನೆ ಕೇಳ್ದು ಕನಲ್ವ ಖಳಂಗೆ ಕರ್ಣಮಂ
ಮಾಡಲೆ ಪೋಗಿ ಮಸ್ತಕಮನಯ್ಯೊ ವಿಧಾತ್ರನದೆಂತು ಸರ್ಪನೊಳ್ ।
ಮಾಡಿದನಾ ಬುಧಂಗಮಿದು ಸರ್ಪನಿವಂ ಖಳನೆಂಬ ಬುದ್ಧಿ ಮೇಣ್
ಕೂಡದೊ ಕಂಡೊಡಂ ಕಮಲ[12]ಗರ್ಭ[12]ನುಮಂ ಖಳನಾಟಿಗೊಂಡನೊ ॥ ೩೯

(ಲೀಲಾವತಿ, ೧–೩೯.)

---

[1] ಮೇನೆಂ (ಕ). [2] ತಿಕಬ್ಬವೇ (ಬ). [3] ಸೊ (ಕ.ಖ). [4] ಮ (ಕ). [5] ಬಿ (ಕ). [6] ರಕ್ಕಸಿ ತಿಂದ (?). [7] ಯ್ತು (ಖ). [8] ಪರಮಂಕೇಳ (ಕ). [9] ಓದಿ (ಕ). [10] ಳಿಸೆವಂತು (ಕ.ಖ). [11] ವರವರ್ (ಕ). [12] ನಂಧವ (ಖ).

ದುರ್ಜನತೆಯಿಂದೆ ಪಡೆದಂ
ದುರ್ಜನನಂ ಕಮಲಗರ್ಭನಂತಲ್ಲದೆ ಮೇಣ್ ।
ದುರ್ಜನನುದಯದೊಳಂತಾ
ದುರ್ಜನನವನಳವಿಗೆದು ಪುಟ್ಟಿದನಕ್ಕುಂ ॥ ೪೦

ಸತ್ತುಂ ಪಿಸುಣಂ ಪೆಱಗರ್ಗಾ
ಪತ್ತಂ ಮಾಡದಿರ್ಪನೆಂದು ಮಱುಗಿದಪುದು ಮ ।
ಚ್ಚಿತ್ತಂ ಮೃತಮಾಷಮುಖಂ
[1]ಮಿ[1]ತ್ತೆನಿಸದೆ ವಮನಮೆಯ್ದಿಪವೊಲುಂಬವನಂ ॥ ೪೧

(ಲೀಲಾವತಿ, ೧-೩೭.)

ನಂಬಿಸಿ ಖಳನಂ ಸಜ್ಜನ
ನೆಂಬುದನೆನಿಸಿದೊಡಮೇನೊ ಸ್ಮೈತಾದಪನೇ ।
ಕಂಬಿಟ್ಟು ನಾಯ ಬಾಲವ
ನಿಂಬಿಂ ಕಟ್ಟಿದೊ[2]ಡೆ ಸ್ಮೈತದೇನಾದುಪುದೇ[2] ॥ ೪೨

ಅತಿ[3]ಪೀಡಿ[3]ಸುಗುಂ ಸ್ಥಾನ
ಚ್ಯುತನಾಗಿಯುಮಖಿಳ[4]ಮಂ ಖಳಂ ವ್ಯತಪೀ[4]ರು ।
ತ್ಪತಿತಂ ಪಥಿಕರ ಪದತಳ
ಹತಿಯಂ ಹತಕಂಟಕಾಂಕುರಂ ಮಾಡುವವೋಲ್ ॥ ೪೩

(ಲೀಲಾವತಿ, ೧-೩೬.)

ಕನಕಂ ನಿರ್ಘಾಗ್ಯನಾಲೋಕಿಪುದುಮವನ ದುಷ್ಕರ್ಮದುದ್ರೇಕದಿಂ ಕ
ರ್ಬುನಮಾಗಪ್ಪಂತೆ ಪಿತ್ತಜ್ವರನಿರತನ ಬಾಯ್ಗಂಪನಾಳ್ದಿರ್ದ ಪಾಲ್ ಬೇ ।
ವಿನಕಾಯ್ವೊಲ್ ಕೈಪೆಯಪ್ಪಂತಿರೆ ಸುಕವಿಜಗತ್ಸೇವ್ಯಕಾವ್ಯಾಮೃತಂ ದು
ರ್ಜನಚೇತೋವೃತ್ತಿಯೊಳ್ ದುಸ್ಸಹಕಟುಕ[5]ರಸಾಭಾ[ಸ][5]ಮಂ ತೋಱುತಿರ್ಕುಂ ॥ ೪

ಆನುಂ ಬುಧರೊಡನೆ ನೃಪಾ
ಸ್ಥಾನದೊಳಿರ್ದಪ್ಪೆನೆಂದು ಕುಕವಿಕದಂಬಂ ।
ಬಾನುದ್ದಮಪ್ಪುದೇಕು
ದ್ಯಾನದೊಳೊಡನಿರವೆ ಕಾಗೆಯುಂ ಕೋಗಿಲೆಯುಂ ॥ ೪೫

(ಲೀಲಾವತಿ, ೧-೨೬.)

---

[1] ಮ (ಅ). [2] ಡಮದೇನುಸ್ಮೈತಾನಪುದೆ (ಕ). [3] ದೇಧಿ (ಕ). [4] ಲೋಕ ಮಂ ಖಳನಂತಾ (ಕ.ಖ.ಬ). [5] ನ್ವಾಭಾವ (ಕ).

ಹಜ್ಜುಗವಿಗಳ ಕಬ್ಬಂಗಳ
[1]ಪೊ[1]ಱಗಬಿಯಕ್ಕರದ ಹೊಲಿಗೆ ಬಿರ್ಚಿದೊಡೆಲ್ಲಂ।
ಬಜ್ಜಿ ತಾಜ್ಜುಗ ಬೀಱಿಗ ವೆ
ತ್ತ ಱಿ ತತ್ತ ಱಿ ವೆಕ್ಕಸಕ್ಕವಸ್ತವ್ಯಸ್ತಂ ॥ ೪೬

(ಗಿರಿಜಾಕಲ್ಯಾಣಂ, ೧–೨೩.)

ನವರಸಪರಿಭಾವಾರ್ಥಂ
ನವೀನಪದಭರಿತ[2]ಮಿಂತಿದೆನೆ[2] ಸತ್ಕೃತಿಯಂ ।
ತವೆ ಪೇ[3]ಬ್ಬುದು ಪೇ[3]ಬದೊಡೇಂ
ಕವರ್ವರೆ ಕೋಪಿಪರೆ ಡಂಡಿಪರೆ ನಿಂದಿಪರೆ ॥ ೪೭

(ಗಿರಿಜಾಕಲ್ಯಾಣಂ, ೧–೨೦.)

ರಸವತ್ಕಾವ್ಯವನಟ್ಟಿವಟ್ಟು ಸುಜನಂ ಕೇ[4]ಳ್ದೆ ೞದೆ ತಾಳ್ಪಂತೆ[4] ಸಂ
ತಸಮಂ ದುರ್ಜನ[5]ನೇಕೆ[5] ಕೇಳ್ದು ನಲ[6]ಗುಂ[6] ದುರ್ಬೋಧಮಂ ಬೇಱೆ ಪು ।
ಟ್ಟಿಸುಗುಂ ನಿಷ್ಕರವಜ್ರತುಂಡಹತಿಯಿಂ ಕೀಟಂ ಭರಂಗೆಯ್ದು ತುಂ
ಡಿಸುಗುಂ ತುಂಬಿವೊಲೀಂಟಿ ರಾಗಿಸುಗುಮೇ [7]ದಿವ್ಯಾಂ[7]ಬುಜಾಮೋದಮಂ॥ ೪೮

(ಮಲ್ಲಿನಾಥಪುರಾಣಂ, ೧–೨೬.)

ತಲೆಯಂ ತೂಗುವನೊರ್ವನುರ್ವಿ ಕೆಳದೊಳ್ [8]ಕಾ[8]ಟ್ಕುಬ್ಬಮಂ ಕಟ್ಟಿ ಕೋ
ಟಲೆಗೊಂಡೂಬ್ಪವನೊರ್ವ[9]ನೊಲ್ದ[9]ವರ ಚಾತುರ್ಯಕ್ಕೆ ಕೈವಾರಮಂ ।
ಪೊಲೆಗೆಟ್ಟೀವವನೊರ್ವನಿಂತಕಟ ಯಕ್ಷೋಯಾದ್ಯಶಸ್ತಾದ್ಯಶೋ
ಬಲಯೆಂಬುಕ್ತಿಗೆ ದುರ್ವಿದಗ್ಧರೆ ವಲಂ ನೋಂತರ್ ಪೆಱರ್ ನೋಂತರೇ ॥ ೪೯

(ಲೀಲಾವತಿ ೧–೪೦.)

ಬಗೆಗೊಂ[10]ಡೋದದೆ ಕೇಳ್ದ[10]ದೆಲ್ಲ ಕಲೆಯಂ ಕಾವ್ಯಜ್ಞ[11]ರಿಂ ಕಲ್ಲು[11]ದ
ಚ್ಚಿಗದಿಂ ಕಟ್ಟಿದ ಕೆಟ್ಟ ಕನ್ನಡದ ಕಾಬ್ಕುಬ್ಬಂಗಳಂ ಬಂಟ[12]ನಾ[12] ।
ಮಿಗಳಂ ಕೇಳಿಸಿ ತಾಮೆ ತಮ್ಮ ಮನ[13]ದೊ[13]ಳ್ ಸರ್ವಜ್ಞರೆಂದಿರ್ಪ ಕ
ಬ್ಬಿಗರುಂ ಕಬ್ಬಿಗರೆಂಬ ಲೆಕ್ಕದೊಳಗೇಂ ಭೂಭೃತ್ಸಭಾಭೂಷಣಂ ॥ ೫೦

(ಅರ್ಧನೇಮಿ, ೧–೩೫.)

ಪಾವಿಂದಿರ್ಮಡಿ ವಿಪದಿಂ
ಮೂವಡಿ ಶಾರ್ದೂಲದಿಂದೆ ನಾಲ್ವಡಿ ಭಲ್ಲೂ ।

---

[1] ಪೆ (ಬ). [2] ವಿಂತಿದಂ (ಗ). [3] ಬ್ದುಂ ಕೇ (ಖ). [4] ೞಪ್ಪುಕೆಯ್ವಂತೆ (ಖ), ೞಟ್ಟಿಗೆಯ್ವಂತೆ (ಬ). [5] ನೆಯ್ದೆ (ಖ). [6] ಯಂ (ಕ.ಖ). [7] ಹೇಮಾಂ (ಕ.ಖ.ಅ). [8] ಪಾ (ಕ). [9] ನಂತ (ಬ). [10] ದಾಡದಕಲ್ಲ (ಖ). [11] ರೊಳ್ಕೇಳ (ಕ). [12] ನಾ (ಕ). [13] ಯೊ (ಅ).

ಕಾವಳಿಯಿಂದ್ಯೆವಡಿ [1]ಹೋ
ಹೋ[1]ವೆಂಬುದು ಖಳಚರಿತ್ರಮಂ ಭುವನಜನಂ ॥ ೫೧

ಖಳರೆಂಬರ್ ಕವಿಮಾರ್ಗಮಂ ಪಿಡಿದು ಕೇಳ್ದೊಂದುಕ್ತಿಯಿಂ ದೇಸಿಯ
ಗ್ಗಳಮಪ್ಪಂತಿರೆ ಹೇಟ್ಟುದಂ ಕುಪಥಮೆಂಬರ್ ಜಾತಿಸಂಪತ್ತಿಯಂ ।
ಸ್ಖಲಿತಾಲಂಕೃತಿಯೆಂಬರದ್ಭುತ ರಸಾಲಂಕಾರಸದ್ಭಾವಮಂ
ಕಳೆ ಚಿಃ ನೀರಸಮೆಂಬರೋವೊ ಖಳರಂ ಮೆಚ್ಚಿಪ್ಪರಾರ್ ಕಾವ್ಯದೊಳ್ ॥ ೫೨

ಒಂದಂ ಬಾಚಿಸುತಿರೆ ಮ
ತ್ತೊಂದಂ ಬೆಸಗೊಳ್ವನರ್ಥರಸಭಾವಂಗಳ್ ।
ಮುಂದಿರೆ ಪಚ್ಚುತ್ತೆಣಿಪಂ
ಚಂದಮನಿದು ಕಾವ್ಯ[2]ಮಂ ಖಳಂ[2] ಕೇಳ್ವಂದಂ ॥ ೫೩

ಇರು ಮರುಳೆ ಶುಷ್ಕವೈಯಾ
ಕರಣಂಗಂ ಶುಷ್ಕತಾರ್ಕಿಕಂಗಂ ಬೆಳ್ಳ ।
ಕ್ಕರಿಗಂಗಂ ವಿಷಯಮೆ ಕಾ
ವ್ಯರತ್ನಮತಿಚತುರ ಕವಿಕದಂಬಕವಿಷಯಂ ॥ ೫೪
(ಆದಿಪುರಾಣಂ, ೧–೨೪.)

ಸುಲಲಿತ ಕವಿಕೃತಿಗಮಲಿನ
ನೆಳಸುವವೋಲ್ ಮಲಿನನೆಳಸನತಿವಿಶದ ಶಿವೋ ।
ಪಲವೊಸರ್ವವೊಲಿಂದುಕಳಾ
ವಳಿಗೆ ತೃಣಗ್ರಾಹಿ ನೀಲಮಣಿಯೊಸರ್ದಪುದೆ ॥ ೫೫
(ಚಂದ್ರಪ್ರಭಪುರಾಣಂ, ೧–೩೯.)

ಚಂದಮಿದೆಂತುಟೆಂದಡುರಿದೆಲ್ಲ ಪರಿಂತಿದ[3]ಶು[3]ದ್ಧಶಬ್ದಮಾ
ಯ್ತೆಂದೊಡೆ ದುಃಖದಿಂ ಚಿಬುಕುಗುಟ್ಟಿದಪರ್ ಗುಣಮಾವುದಿಂತಿದ ।
ರ್ಕೆಂದೊಡೆ ಮೇಲೆವಾಯ್ದು ಪಿಡಿವಂತಿರೆ ಗರ್ಜಿಪರೋವೊ ತಮ್ಮೊಳೋ
ತೊಂದಱೊಳೊಂದುಮಿಲ್ಲ ಕೆಲಬರ್ ಕವಿಗಳ್ ಮುಗಿಲುದ್ದಮಾದಪರ್ ॥ ೫೬

ಕನಮಂ ಕಿಟ್ಟಲ್ಲದೆ ಪೊಸ
ಸನಿಗಳ್ ಕೈಕೊಳ್ಳವೆತ್ತಿ ಕಳೆಯದೆ ಖಳತಾ ।
ಮನಮಂ ಬೇರ್ವೆರಸಿಂ ಪಸ
ರಿಸುಗುಮೆ ಬುಧವಿಧುಗೆ [4]ವಿಮಳ[4]ಕೃತಿದೀಧಿತಿಗಳ್ ॥ ೫೭
(ಲೀಲಾವತಿ, ೧೨–೮.)

---

[1] ವೋವೋ (ಕ.ಖ). [2] ಮೆಂದವಂ (ಕ). [3] ನಿ (ಕ). [4] ಮಲ್ಲ (ಬ).

ಪೊಸದೇಸೆಯಂ ಬೆಡಂಗಂ
ರಸ[1]ಪುಷ್ಟಿ[1]ಯನರ್ಥ[2]ದೃ[2]ಷ್ಟಿಯಂ ಬಗೆವರೆ ಭಾ ।
ವಿಸುವರೆ ಸಾರ[3]ಣೆಯಂತಿರೆ[3]
ಕಸಮನೆ ಪಿಡಿವರ್ ಕೆಲರ್ ಮಹಾಪುರುಷರ್ಕಳ್ ॥ ೫ ೫೮

(ಅಜಿತಪುರಾಣಂ, ೧–೯೧; ಕಾವ್ಯಾವಲೋಕನಂ, ೨೪೦.)

ಅತಿಮಧುರೋಕ್ತಿಯುಕ್ತನಮಲಂ ವಿದಿತಾಖಿಳಮಾರ್ಗನಪ್ಪ ವಿ
ಶ್ರುತಕವಿರಾಜಹಂಸನಱಿವಂತೆವೊಲೇನಱಿಯಲ್ಕೆ ಯೋಗ್ಯನೇ ।
ಚತುರಕವಿಪ್ರತಾನರಚಿತಾಧ್ವಕೃತಿಪ್ರಕರೈಕಪಾತ್ರನಂ
ಸ್ಥಿತಗುಣದೋಷದುಗ್ಧಜಳಭೇದನಮಂ ಕವಿನಾಮಧಾರಕಂ ॥ ೫೯

(ಚಂದ್ರಪ್ರಭಪುರಾಣಂ, ೧–೩೮.)

ಕವಿತಾಪ್ರೌಢನೆ ಸೋಲ್ವವೋಲ್ ಕೃತಿಯೊಳಜ್ಜಂ ಸೋಲ್ವನೇ ಚಂದ್ರಕಾಂ
ತವೊಸರ್ವಂತಿರೆ ಗೋರಿಕಲ್ಲೊಸರ್ಗುಮೇ ಬೆಳ್ದಿಂಗಳೊಳ್ ತುಂಬಿ ಪೀ ।
ರ್ವವೊಲೇಂ ಪೀರ್ದಪುದೇ ಕಡಂದುಱು ತೆ ನವ್ಯಾವೋದಮಂ ಪೂಗಳೊಳ್
ನವಚೂತಂ ತಳಿರ್ವಂದದಿಂ ತಳಿರ್ಗುಮೇ ಸ್ಥಾಣೂತ್ಕರಂ ಚೈತ್ರದೊಳ್ ॥ ೬೦

(ಜಗನ್ನಾಥವಿಜಯಂ, ೧–೧೩.)

ಅರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬ
ಲ್ಲರ ಬಗೆಗಲ್ತು ವಸ್ತುಕೃತಿಯಂ ಸಲೆ ಪೇೞ್ವುದು ಕಲ್ತು ಪೇೞದಂ।
ದರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬ
ಲ್ಲರ ಬಗೆಗ[4]ಲ್ತದಾವಡೆಗಮಲ್ತದು[4] ಕ್ಷ[5]ಲ್ಪಿ[5] ವಲಂ ಕವೀಂದ್ರರಾ ॥

(ಪುಷ್ಪದಂತಪುರಾಣಂ, ಕಾವ್ಯಾವಲೋಕನಂ, ೨೦೫.)

ಆದರಿಸರ್ ಖಳರ್ ಕೆಲಬರೀ ಪೊಸಕಬ್ಬಮನೆಂದು ನೀಂ ಮನಃ
ಖೇದಮನಾಳದಿರ್ ಜನದ [6]ಕಣ್ಗೆ[6] ವಿಲಾಸಮನೀವ ಸಾಂದ್ರ ಚಂ।
ದ್ರೋದಯದೇಚ್ಛೆಯಂ [7]ವಿರಹಿ[7] ಸೈರಿಸದಿರ್ದೊಡದರ್ಕೆ ಬನ್ನಮೇ,
ನಾದುದೊ ನೋಡೆ ಸಜ್ಜನರ್ಗೆ ಸೇವ್ಯಮದಾದೊಡೆ ತಾನೆ ಸಾಲದೆ ॥

ಗುಣಮಂ ಕಂಡೊಡೆ ದುರ್ಜನಂ ಬಗೆವನಲ್ಲಂ ದೋಷಮಂ ಕಂಡ ಸ
ದ್ಗುಣಿವೊಲ್ ದೋಷಮನಲ್ಲ ಕಂಡೊಡೆ ಖಳಂ ವಿಸ್ತಾರಿಕುಂ ಸಜ್ಜನಂ ।

---

[1] ಷುಟ್ಟಿ (ಖ). [2] ನೃ (ಖ). [3] ಣಿಗೆಯವೊಲ್ (ಕ). [4] ಲ್ತುದಾರಬಗೆಗಲ್ತದು (ಖ). [5] ಬ್ಬ (ಖ). [6] ಕಂಗಳಪರ್ವಮೆನಿಪ್ಪ (ಖ). [7] ಖಳರ್ (ಖ).

ಗುಣಮಂ ಕಂಡವೊಲಿಂತುಟಿರ್ವರ ನಿಜಂ ಪುಣ್ಣೊಳ್ ನೊಣಂ ಪುಪ್ಪದೊಳ್
ಪ್ರಣಯಂ ಮಾಬ್ಬುದು ತುಂಬಿಯೆಂಬ ತೆಱದಿಂದಾ[1]ರ್ ಬಾಚಿಪರ್ ನೈಜಮಂ ॥ ೬೩

"ರಸಮಂ ಭಾವಿಸದರ್ಥಮಂ ಬಗೆಯದ[2]ಜ್ಞರ್ ಭಾವದೊಳ್ ರೂಢಿವೆಲ್ಲಲಂ-
ತೆ ಸೆವಂತಾಳ್ದದ ಶಾಸ್ತ್ರದೊಳ್ ವಿಕಳರುದ್ಯತ್ಕಾವ್ಯದೊಳ್ ನೀರಸರ್ ।
ದೆಸೆದಿರ್ಪರ್ ಬಿಗಿದೂಡಿಬಿಟ್ಟ ತುದಿಯೊಳ್ ತಮ್ಮಿಂದಮಂ ತಾವೆ ಭಾ
ವಿಸರೇಂ ಚಃ ಖಳವೃತ್ತಿಯಿಂ ಕೆಲರಿವೇಂ ಹಾಸ್ಯಕ್ಕೆ ಪಕ್ಕಾದರೋ" ॥ ೬೪

ಎನಿತನೊಬಿಲ್ದು ಪೇೞ್ವ ಕವಿಯೇ೭ನದಂ ಪೆಪರಿಟ್ಟು ಮೆಚ್ಚಬ
ಲ್ಲನನಱಿಸಲ್ಕೆವೇೞ್ವುದವನಂ ಜಗದೊಳ್ ಪಡೆಯಲ್ಕೆ ಬಾರ್ಪುದಾ ।
ತನ ಮುಖದಿಂದಮಲ್ಲದದು ಸಲ್ಲದು ಕಟ್ಟಿಯುಮೇನೊ ಮ್ರಾಲೆಗ್ಗಾ
ಱಿನ ಪೊಸಬ್ರಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗವೇ ೬೫
(ಅನಂತನಾಥಪುರಾಣಂ, ೧–೪೫.)

ರಸಮಂ ನಾಲಗೆ ಕವಿತಾ
ರಸಮಂ ಕವಿ ಕುಸುಮರಸಮನಳಿಮಾಲೆ ಸುಧಾ ।
ರಸಮಂ ಸುರರಕ್ಷಯ್ಯಸುಖ
ರಸಮಂ ಪರಮಾತ್ಮನಱಿವನುಟಿದವರಱಿಯರ್ ॥ ೬೬
(ಮಲ್ಲಿನಾಥಪುರಾಣಂ, ೧–೨೮.)

ಕಾಬ್ಬುರಮಾಗೆ ಕಾವ್ಯರಸಮರ್ಥಮುಮಕ್ಕರಮುಂ ಪ್ರತೀತಿಯಂ
ಮಾಬ್ಬಿನೆಗಂ ಜಲಕ್ಕನಿರೆ ಪೇೞದೆ ಕೆಮ್ಮನೊ[3]ಗಂ[3]ಟುವೇೞ್ವುದು ಚಃ
ನೋಬ್ಬುದೆ ಮ್ಱುಯ್ಯನಾ ಕೃತಿಗೆ ಪಂಚಿಕೆವೇೞ್ವುದದರ್ಕೆ ಟಿಪ್ಪಣಂ
ಬೇೞ್ವುದು ಟೀಕು ಪೇೞ್ವುದೆನೆ ಪೇೞ್ದವನುಂ ಕವಿಯೆಂಬ ಲೆಕ್ಕಮೇ ॥ ೬೭
(ಕಾವ್ಯಾವಲೋಕನಂ, ೨೯.)

ಮೃದುಪದಬಂಧಮಂ ಬ್ಱಗೆಯ ಭಾವದ ಮೈಸಿರಿಯಂ ರಸಪ್ರವಾ
ಹದ ನೆಲೆವೆರ್ಚನಿಂಬಱಿದು[4] ಭಾವಿಸಿ ಭಾವಿಸಿ ಮೆಚ್ಚಿ ಮೆಚ್ಚಿ ಪೊ।
ಣ್ಮಿದ ಪುಳಕಂಗಳಿಂ ನಯನದೊಳ್ ಕರೆಗಣ್ಮಿದ ಹರ್ಷಬಾಷ್ಪವ
ರ್ಷದಿನನುರಾಗಮಂ ಪಡೆವ ಸಜ್ಜನಸಂಸ್ತವಮೊಂದೆ ಸಾಲದೇ ॥ ೬೮
(ಪಂಪರಾಮಾಯಣಂ, ೧–೨೯.)

ಅಸವ್ವನದಿಂದಮೊಂದಿನಿತು ಕಲ್ಪಿತದೋಷಮನುಂಟುಮಾಡಿಕೊಂ
ಡೆನಗದೆ ಕೆಮ್ಮನೂನವಿಡಿದೊಳ್ಳಿತುಮಪ್ಪೆಡೆಗಟ್ಟಿಯಿಂ ವಿಚಾ।
ರಿಸಿ ತಲೆದೂಗಿ ಮೆಚ್ಚಿ ಬೆರಲಂ ಮಿಡಿದೊಯ್ಯನೆ ಕೇಳ್ದೊಡಿಲ್ದು ಬ
ಣ್ಣಿಸುವ ಬುಧರ್ಕಳಿಂ ಕವಿಗೆ ಪಿಂಗುಗುಮಾ ಕವಿತಾಪರಿಶ್ರಮಂ ॥ ೬೯

---

[1] ರ್ಬಣ್ಣಿಪನ್ಯಾಯಮಂ (ಖ). [2] ನ್ಯ (ಖ). [3] ಱಿಂ (ಆ). [4] ಗೆ (ಕ).

ನಿರುಪಹತಿಸ್ಥಲಂ ಮೃದುತರಾಸನ[1]ಮೊಳ್ಕಣಿಸಿಂಪುದಂಬುಲ್ಲಂ[1]
ನೆಗಪಿಗ ಪುಸ್ತಕಪ್ರತತಿ ಲೇಖಕವಾಚಕಸಂಗ್ರಹಂ ನಿರ್ಗ್ರ.
ತ್ತರಗೃಹನಿಶ್ಚಿತಸ್ಥಿತಿ "ವಿಚಾರಕಸಂಗತಿ "ಸತ್ಕಳತ್ರನ್ತಾ
ದರತ್ತೆ[2]ಯನುಳ್ಳ ಸತ್ಕವಿಯುಮಿಾಸುಪೊಡವಗದೆ[2] ಕಾವ್ಯವಾರ್ಧಿಯಂ ॥ ೨೦

ಅಲಸಂ ಶಾಂತಂ ಜಡಂ[3]ದುರ್ಮತಿ[3] ಮತಿವಿಕಳಂ ಮತ್ಸರಂ [4]ಭೋಗಿ ರುಕ್ಷಂ[4]
ಚಲನನ್ಯಾಸಕ್ತನಪ್ರಸ್ತುತಮತಿ [5]ವಿರತಂ[5] ನೀರಸಂ ಧಾಂದಸಂ ವಾ ।
ಕೃಶ ಬಾಲಂ ವೃದ್ಧಜೀರ್ಣಂ ಸಮೆದನನಧಿಕಸ್ತೋತ್ರಶೀಲಂ ಕಥಾವ್ಯಾ
ಕುಲನುಗ್ರಂ ಲೋಕಮೂ[6]ಢಂ[6] ಸಮುಮುವಿರಹಿತಂ ಕಾವ್ಯದೊಳ್ ಶ್ರೋತೃವಲ್ಲಂ ॥

ಪಟಿಮೊಡೆ ಬಾಬ್ಬಿನಲ್ಲದೊಡೆ [7]ಬಾಬ್ಬಿನೆ[7] ಸತ್ಕೃತಿಗೇಳ್ದು ದುರ್ಜನಂ
ಪಟಿದು ವೃಥೋಕ್ತಿ ಸಲ್ಲದೊಪೆ ಸಲ್ಲದೆ ಕಾವ್ಯನಿಬಂಧನಕ್ಕಮಾ।
ಪಟಿಯೆ ಪೊಗಪ್ಪ್ತೆಯಲ್ತೆ ರಸವತ್ಕೃತಿಯಂ ಕವಿ ಪೇಳ್ಕೆ ದುರ್ಜನಂ
ಪಟಿಯುತುಮಿರ್ಕೆ ಬಾಬ್ಬಿ ಮನೆಗೊಂದು ಬಗುಳ್ವುದು ವೇಟ್ಕುಮೆನ್ನರೇ ॥ ೨೨

(ಆನಂತನಾಥಪುರಾಣಂ, ೧-೪೦.)

"ಶಿಥಿಲಪದಪ್ರಪೂರ್ಣಮಪಶಬ್ದತುಷ್ಟಾವೃತಮಸ್ತಭಾವಮು
ಪ್ರಥಿತಗತಾರ್ಥಶಾಸ್ತ್ರಮಪಹಾಸ್ಯ ಸಮಾಶ್ರಿತಮಪ್ಪ ಕಬ್ಬಮಂ।
ಕಥಿಯಿಸಿ ಗರ್ವದಿಂ ಬೆಜ್ಜುತು ಬಿಚ್ಚಿನೆ ಬೀಗಿ ನರಸ್ತುತೀ [8]ಶರೋ[8]
ವ್ಯಥೆಯನದೇಕೆ ಮಾಡುವರೊ ದುಷ್ಕವಿಗಳ್ ಕೆಲರೀ ಧರಿತ್ರಿಯೊಳ್ ॥ ೨೩

(ಶೃಂಗಾರರತ್ನಾಕರಂ, ೧-೭.)

ಒನವರ್ಣ ರಸಂ ಪೊನ್ತಲ್ಪೊನ್ತಲ್ತನಟ್ಟದೆ ರಂಜಿಪ ದೇಸಿ ದೇಸಿವೆ
ತ್ತೆಸೆಯದೆ ರೇಖೆ ರೇಖೆವಡೆಮೊಪ್ಪದೆ ಕೊಂಕ್ತು ಸಮಂತ್ತು ಕೊಂಕನೊ ।
ಪ್ಪಿಸದೆ ನಿರರ್ಥಮಪ್ಪ ಕೊಡೆಗಬ್ಬ [9]ಮನುಬ್ಬರ[9]ಮಾಬ್ಬ ಗರ್ವದಿಂ
ದೆಸೆವನನಿಕ್ಕು ಕಿಚ್ಚಿನೊಳಗಿಕ್ಕಿದೊಡಾಗರೆ ಮತ್ತೆ ಕಬ್ಬಿಗರ್ ॥ ೨೪

"ಕರೆದು ಬುಧವ್ರಜಂ ಸುಕವಿ ಮಲ್ಲಪನಂ ಮನದಬ್ಕಳಿಂದಮಾ
ದರಿಸಿ ಸುಧಾರ್ಣವೋರ್ಮಿಕೃತಿಯಂ ರಚಿಯಿಪ್ಪುದೆನಲ್ಕೆ ಲೋಕವ ।
ಚ್ಚರಿವಡೆ ಸಜ್ಜನರ್ ಪೊಗಪೆ ಸೋಲವೆ.ಗುಂದಲೆಯಾಗೆ ಬಿಚ್ಚತಂ
ಪರಿಣತರಪ್ಪರೊಲ್ದೆಳಸೆ ಪೇಟಲೊಡರ್ಚಿದೆನೀ ಪ್ರಬಂಧಮಂ ॥ ೨೫

---

[1] ದೊಳ್ಳುಡಿನಿಂ ಬುಧಂಬಲುಂ (ಖ). [2] ಸಮಗ್ರಮುಳ್ಳಕವಿಯಿಾಸುವುದೊಪ್ಪದೆ (ಕ).
[3] ತಾನತಿ (ಖ). [4] ದುಃಖರಂತಾಂ (ಖ). [5] ನಿರತಂ (ಕ.ಖ) [6] ರ್ಖಂ (ಖ).
[7] ಸಾಯನೆ (ಖ). [8] ಮನೋ (ಖ). [9] ಮನೋವ್ಯಥೆ (ಖ).

ವಾರಿಧಿ ಪರ್ವತಂ ಪುರಮಧೀಶ್ವರನುದ್ಯಹನಂ ಕುಮಾರನಂ
ಭೋರುಹಮೈರಿಮಿತ್ರರುದಯಂ ಋತು ನಂದನವಂಬು ಸೀಧು ಕಾಂ ।
ತಾರತಿ ಚಿಂತೆ ಮಂತ್ರ ಚರ ಯಾನ ವಿರೋಧಿಜಯಂಗಳೆಂಬಿವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್ ॥ ೭೬

ಪುರ ವಾರಾಸಿ ನಗರ್ತು ಚಂದ್ರ ತಪನೋದ್ಯಾನಾಂಬುಕೇಳೀ ಸುರಾ
ಸುರತಕ್ರೀಡನ ವಿಪ್ರಲಬ್ಧ ಲಲನಾಕಲ್ಯಾಣ ಪುತ್ರೋದಯ ।
ಸ್ಫುರಿತಾಳೋಚನ ಮಂತ್ರ ದೂತ ಗಮನಾಜಿ ಸ್ತ್ರೀಸುಖವ್ಯಾಪ್ತಿಗಳ್
ದೊರೆಕೊಳ್ಗುಂ ಕವಿವರ್ಣನಕ್ಕೆ ಪದಿನೆಂಟಂಗಂ ಮಹಾಕಾವ್ಯದೊಳ್ ॥ ೭೭

ಉದಧಿ ಪುರಾಧಿಪಸುತ ಮುಂ
ತ್ರದೂತಗಮನಾಜಿ ವಿರಹ ಪರಿಣಯ ಸುರತ ।
ರ್ತುದಿನೇಶ ಚಂದ್ರ ಮಧು ಕುಭೃ
ದುದಕ ವನಸ್ಪತಿಯೆ ಕೃತಿಗೆ ಪದಿನೆಂಟಂಗಂ ॥ ೭೮

(ಉದಯಾದಿತ್ಯಾಲಂಕಾರಂ, ೧-೧೩.)

ಇದು ಸರಸ್ವತೀಸ್ವಯಂವರ ದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧ ಸಾರೋದ್ಧಾರಮುಮ
ಷ್ಟಾದಶ ಸ್ಥಳವರ್ಣನಮಾರ್ಗ ಮನೋಹರಮುಂ ವೀರಹೊಯ್ಸಳ
ನೋಯಿದೇವರಾಯ ವಿನೋದಾಕರ್ಣನ ಕೌತುಕೋತ್ಸಾ
ದಿತಮುಂ ಯಾದವಕುಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮ ಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತವಪ್ಪ ಸೂಕ್ತಿ
ಸುಧಾರ್ಣವದೊಳ್

ಪೀಠಿಕಾಪ್ರಕರಣಂ ಪ್ರಥಮಾಶ್ವಾಸಂ ಸಂಪೂರ್ಣಂ.

ಸಮುದ್ರವರ್ಣನಂ

ತೆರೆ ನೊರೆ ಬುದ್ಬುದಂ ಸುಟಿ ಜಲಂ ತೆಗೆ ಪೆರ್ಚುಗೆ ಗುಣ್ಪು ಘೋಷಣಂ
[1]ವರು[1]ಣನಗ್ತಂ [2]ವಧೂಟಿ[2]ಜನ್ನನಂ ಮಣಿಗಳ್ ವಡಬಾಗ್ನಿ [3]ವಾಶ್ಚರಂ[3] ।
ಹರಿ ಮಱಿಯಾ[4]ವೆ[4] ವೇಳೆ ತೊಱೆಯಿನ್ಗಾ[5]ಶ್ರ[5]ತೆ ನೀರ್ಮೊಗೆವಭ್ರಮುರ್ವರಾ ಕ
ಪರಿವೃತಿ ನಾ[6]ಗರಿ[6]ಕ್ಕೆ ಬಗೆಗಾದೊಡೆ ಸೈತು ಸಮುದ್ರವರ್ಣನಂ ॥

ಮ್ಮಾಲ್ಲಾಮಾಲಾಪ್ರವಾಳಾವೃತಸುರತರುಶೋಭಾವಹಂ ಭಾವಹಂ
ವ್ಯಾಲಾವಲೀಲಾಭಿಘಾತಪ್ರಕರಮಕರಕುಂಭೀಕರಂ ಭೀಕರಂ ಜಂ ।
ಬಾಲಾಬಾಲಾಮೃಣಾಳೋಚ್ಚಲಿತಶಫರಕಂಜಾಕರಂ ಜಾಕರಂ ಕ
ಲ್ಲೋಲಾಲೋಲಾಯಮಾನಧ್ವನಿಜನಿತದಿಶಾಭಿತ್ತಿ ಮುದ್ರಂ ಸಮುದ್ರಂ ॥

ಗಂಭೀರಸ್ಫಾರವೇಳಾಬಹಳಪರಿವೃತೋಲ್ಲೋಲಕಲ್ಲೋಲಮಾಲಾ
ರಂಭಪ್ರೌಢ್ಡೀನಫೇನಪ್ರಬಳಜಲಚರೋ[7]ಲ್ಲುಂಠ[7]ಪಾಠೀನಶುಂಭ ।
ತ್ಕುಂಭೀರಾಭೀಳನಕ್ರಪ್ರಕರಕಮಠನೀರೇಭರತ್ನ ಪ್ರ[8]ವಾಳೋ[8]
ಜ್ಜೃಂಭತ್ಫೇನೌದ್ಭಾಸಿವೀಚೀನಿಚಯಪುನಪುನಾರಾವರೌದ್ರಂ ಸಮುದ್ರಂ ॥
(ಶೂದ್ರಕಂ, ೭೩.)

ವಿಚಲತ್ಫಾಠೀನಪುಚ್ಛಪ್ರತಿಹತಸಲಿಲಾನ್ಮೇಕಫೋಚ್ಚಂಡಶುಂಡಾ,
ಗ್ರಚಪೇಟಾಸ್ಫೋಟಿತಾಂ[9]ಬೂ[9]ರಗಮುಖನಿಸೃತಶ್ವಾಸಸಂಕೋಚಿತಗ್ರಾ ।
ಹಚಯೋದೀರ್ಣಸ್ಫಪಾನೋತ್ಸುಕತಿಮಿಕುಳಕೋಳಾಹಳಕ್ಷೋಭವೀಚೀ
ವಿಚರದ್ವೀತಾನಮುದ್ಯಾಬಬಶಿಖಿಮುಖಸಂಧಾನಮಂಭೋನಿಧಾನಂ ॥

ಶಶಿ ತನ್ನುದರದೊಳುದಯಿಸಿ
ಮಿಸುಗುವುದಾ ನಭದೊ[10]ಳೆಂ[10]ದು ಜಲನಿಧಿ ಪಲವುಂ ।
ಶಶಿವಡೆದ ತೆಱದೆ ಮಿಗೆ ರಂ
ಜಿಸುವುವು ಮಂಡಳಿಸಿ ಪೊಳೆವ ಫೇನಪ್ರಕರಂ ॥ ೫

---

[1] ಶರ (ಬ). [2] ತಮಾಡಿ (ಖ.ಬ). [3] ಪಾರ್ಸರ (ಕ). [4] ದೆ (ಖ). [5] ಷ (ಖ.ಬ). [6] ಗಿರ (ಕ). [7] ಲೋಲ (ಕ), ಲ್ಲೂಠ (ಅ.ಖ). [8] ಧಾಪೋ (ಖ). [9] ಭೋ (ಖ.ಬ). [10] ಳಿಂ (ಕ).

ಹರನಿರ್ಕೆಗೊಂದು ಬೆಳ್ಳಿಯ
ಗಿರಿ ಸಾಲದೆನುತ್ತನೇಕ ರಜತಾಚಲಮಂ ।
ಶರನಿಧಿಯಟ್ಟುವ ತೆಱದಿಂ
ನೊರೆವೆಟ್ಟಂತಿಪ್ಪ ತೆರೆಗಳೇನೊಪ್ಪಿದುವೋ ॥ ೬

ಪಲವುಂ ರತ್ನಾಂಶು ತಳ್ಪೊಯ್ದೆಸೆದಿರೆ ಶಬಳಚ್ಛಾಯೆಯಿಂದಂ ತರಂಗಾವಳಿ ಜಂಬೂದ್ವೀಪಮಂ ಮಂಡಳಿಸಿದ ಪರಿವೇಷಂಬೊಲಿಂಬಾಯ್ತು ಮುಕ್ತಾ ।
ಫಳಜನ್ಮಸ್ಥಾನಮುಜ್ಜೃಂಭಿತ ಜಲಚರಕೋಳಾಹಳಧ್ವಾನಮುದ್ಯದ್ವಿಲಸತ್ಫೇನಮಾಶಾಮುಖಲಿಖಿತ ಸಮುತ್ಫೇನಮಂಭೋನಿಧಾನಂ ॥ ೭

ವಡಬಾನಳನುರಿಯ[ಳ್ಳಿ]ಱು[1]
ದೊಡಲೆಲ್ಲಂ ಬೆಂದು ಬೊಕ್ಕೆ ನೆಗೆದವೊಲೊಳ[2]ಗಿಂ ।
ದಡಕೊತ್ತಿ[2] ಮ್ಮುತ್ತುಗಳ[6] ನೆಗೆ
ದೊಡೆವವೊಲಾ ಕಡಲ ಬುದ್ಬುದಂ ಕಣ್ಗೆಸೆಗುಂ ॥ ೮

ಪದಿನಾಲ್ಕುಂ ಲೋಕಮಂ [3]ಕಱ್ಪೊಡೆಯೊಳೆ ತಳೆದಾ[3] ವಿಷ್ಣು ತನ್ನೇಕದೇಶಾಗ್ರದೊಳರ್ಪಂ, ವಾರಿದ್ದಂ ತನ್ನೊಳೆ ಕತಿಪಯ ವಾರ್ಬಿಂದುವಂ ಪೇಱಿ, ತಂದಂ ।
ತದಱಿಂದಂ ಲೋಕಮಂ ತೀವುವುದು ಪವಿಭಯ ಭ್ರಾಂತಿಯಿಂದಂ ಶರಣ್ಹೊಕ್ಕುದು ತನ್ನಂ ಗೋತ್ರಧಾತ್ರೀಧರತತಿಯೆನೆ ಪೆಂಪರ್ಣವಕ್ಕೇ[4]ಕಭೋಗ್ಯಂ[4] ॥ ೯

(ಜಗನ್ನಾಥವಿಜಯಂ, ೧–೪೫.)

ಕುಂದಲೊಡನಿಂದುಬಿಂಬಂ
ಕುಂದುಗುಮದು ಪೆರ್ಚೆ ಪೆರ್ಚುಗುಂ ಜಲನಿಧಿ ಮೆ ।
[5]ಯ್ಯೊಂ[5]ದಿದ [6]ಪು[6]ತ್ರಸ್ನೇಹಂ
ಸಂಧಿಸಿ ಜಗಕಿಂತು ಸೊಗಯಿಸವೇಡಾ ॥ ೧೦

(ಕಾವ್ಯಾವಲೋಕನಂ, ೯೧೦.)

ಮೇರು ಕಲಂಕೆಯುಂ ಕದಡಿತೋ ಬಡಬಾನಳನಬ್ಧೆ ಕಾಯ್ದುದೋ
ಮಾರುತಿ ಕಚ್ಚೆ ಮೇಣ್ ಪಱಿದುದೋ ಗಿರಿಗಳ್ ಬರೆ ವಜ್ರಿಗಳ್ಕತೋ ।
ಸಾರಸಮಸ್ತವಸ್ತುಗಳ[7]ನಾರ್ ಕೊಳೆ ತಪ್ಪುದೊ[7] ಮತ್ತ[8]ಮಂತೆ[8] ಗಂ
ಭೀರತೆ ಸಂದುದೆಂದು ಹರಿ ಮೆಚ್ಚಿ ಕರಂ ಪೊಗಟ್ಟುಂ ಸಮುದ್ರಮಂ ॥ ೧೧

(ಕಾವ್ಯಾವಲೋಕನಂ, ೯೦೮.)

---

[1] ಯೊಳಗುರಿ (ಕ), ಯಳ್ಳುಱು (ಖ). [2] ಗಿರ್ದೊಡೆವಂತೆ (ಖ). [3] ಕುಕ್ಷಿಯೊಳೆ ಧರಿಸಿದಾ (ಖ). [4] ನುಚಿತೋದ್ಯಂ (ಅ). [5] ಯ್ದಂ (ಖ). [6] ಮಿ (ಖ). [7] ನಾಂ ತೊಳಗಾದುದೋ (ಖ). [8] ಮತ್ತೆ (ಖ).

ಮಗನಿಂದುವಬ್ಜವಾಸಿನಿ
ಮಗಳಳಿಯಂ ಜಲಜಜಠರನಿದು ಪೆಂಪೆನ್ವಿಂ ।
ಮಿಗಿಲಾವನೆಂದು ರಾಗಿಸಿ
ನಗುವಂತೆವೊಲಾಯ್ತು ಜಲಧಿಕಳಕಳನಿನದಂ ॥

ವರುಣಾಶಾಜಾತವಾತಾಹತಿಯೊಳೆ ತೆರೆಗಳ್ ತೇನತೇನ್ದಂ ತೆರ[1]ಳ್ದೊ
ಳ್ನೊ[1]ರೆಗಳ್ ತಳ್ತು ಬಿರ್ದ್ ನೀರಾನೆಗಳ [2]ತೆಱಪೆ ತಾರ್ಮುಟ್ಟಿ[2]ನೊಳ್ ನೀಕರಂ ಬಾನ್।
ಬರಮುದ್ದಂ[3]ಪಾ[3]ಱಿ ನೀರೇಱಿದ ಮುಗಿಲೊಡೆದೊಂದೊಂದಱೊಳ್ ತಾಗಿ ಬೀೞ್ವಂ
ತಿರೆ ಭೋರೆಂದಾಗಳುಂ ಘೂರ್ಣಿಪುದು ದಶದಿಶಾಭಿತ್ತಿಮುದ್ರಂ ಸಮುದ್ರಂ॥ ೧೩

ಅದು ಮತ್ತೆಂತೆಂದೊಡುದ್ಯ[4]ತ್ಕರಿ[4]ಮಕರ ಕುಳಕ್ಷೋಭ ನೀರೇಭರಾಜೀ
[5]ರ[5]ದನವ್ಯಾಘಾತ[6]ಪಾತೋ[6]ತ್ಕಮಠ ಲುಠನ ಕಾರಿನ್ಯ ನಾರೀನ [7]ಮತ್ಸ್ಯ[7] ।
ಚ್ಛದನ ಚ್ಛೇದಾದಿ ನಾನಾ ಜಲಚರ ನಿಕರಾಸ್ಫಾಲನಪ್ರೋಚ್ಚಲತ್ಫ
ಚ್ಛದನ [8]ಚ್ಛನ್ನ ಚ್ಛಟಾಪ್ರ[8]ಕ್ಷುಭಿತಲಹರಿಕಾಸ್ಫಾರ [9]ರೌ[9]ದ್ರಂ ಸಮುದ್ರಂ॥ ೧೪
(ಶೂದ್ರಕಂ—ಕಾವ್ಯಸಾರಂ, ೭೫.)

ಅತುಳೋತ್ತಾಲ ತಿಮಿಂಗಿಳ ಪ್ರಬಳ ಪಕ್ಷೋದ್ಭೂತ ವಾತ ಪ್ರಕಂ
ಪಿತ ಕುತ್ಕ್ರೀಲನಮಗ್ನ[10]ದುರ್ಗ[10]ಸುನಗಾಸಗ್ರಹವ್ಯಗ್ರ ವಿ ।
ಸ್ತೃತ ವಕ್ತ್ರೋದರಭಾಗಭೂರಿಕಮಠಪ್ರಕ್ಷುಬ್ಧಕಲ್ಲೋಲ ಕ
ಲ್ಪಿತ ಕೋಲಾಹಲ ಕಲ್ಪಕಾಲರಭಸ ಪ್ರಸ್ಪರ್ಧಿಯಂ ವಾರ್ಧಿಯಂ ॥ ೧೫
(ಶೂದ್ರಕಂ— ಕಾವ್ಯಸಾರಂ, ೭೬.)

ಆ[11]ವಾವೆ[11]ಡೆಯೊಳ್ ನಪರ
ತ್ನಾವಳಿ ತೀವಿರ್ಪುವೆಂದು ಮಕರಾರೂಢಂ ।
ಜೀವನನಾ[12]ಥ್ತು[12] ವರುಣಂ
ಕಾವಂ ಧೃತ[13]ಪಾಶ[13]ನೆಸೆವ [14]ರತ್ನಾ[14]ಕರಮಂ ॥ ೧೬

ಹರಿವಜ್ರಹತಿಗೆ [15]ನ್ನುರ್ಕಿದ ಕೊಳ್ಳಿಕ
ಗಿರಿ ಮಱುವುಗೆ ಕಾದು ವಾರ್ಧಿ[15] ಮರ್ಯಾದೆಯನೀ ।
ಧರಣಿಗೆ ಮಾಡಿದುದೆಂತೆನೆ
ಧುರದೊಳ್ ನೀರ್ಮೊಕ್ಕವಂಗೆ ಮುನಿಯರ್ ಪಗೆವರ್ ॥ ೧೭

[1] ೞ್ದಂ ನೊ (ಕ). [2] ನೆಗಳತಾದೃಷ್ಟಿ (ಕ). [3] ಬೀ (ಜ). [4] ತ್ತಿಮಿ (ಖ).
[5] ಮ (ಖ). [6] ಮುದ್ಯ (ಖ). [7] ಮುದ್ಯ (ಖ). [8] ಚ್ಛೇದಾದಿ ನಾನಾ (ಕ).
[9] ಸಾಂ (ಖ). [10] ವಿಗ್ಯ (ಖ). [11] ವವನೆ (ಕ). [12] ದಂ (ಕ). [13] ಸಾರ (ಖ).
[14] ಮಕರಾ (ಖ). [15] ಮರೆಯುಗೆ ಗಿರಿ ಕಾದುದು ವಾರ್ಧಿಯೆಂಬ (ಖ).

ಸಿರಿಗೆ ಸುಧಾಕರಂಗೆ ಸುರದಂತಿಗೆ ಕಲ್ಪಕುಜಕ್ಕೆ ಪೆರ್ಚಿದ
ಚ್ಚರಸಿಯ ಸಂಕುಳಕ್ಕೆ ತ್ರಿದಶೇಂದ್ರಹಯಕ್ಕಮೃತಕ್ಕೆ ಮಿಕ್ಕ ಭಾ ।
ಸುರತರಮಪ್ಪ ರತ್ನನಿಚಯಕ್ಕೆ ನೆಗಪ್ತೆಯ ಜನ್ಮಭೂಮಿಯಾ
ಧರೆಗೆನೆ ಬಣ್ಣಿಸಲ್ ನೆಱಿವನಾವನೊ ಪೆಂಪೆಸೆದಿರ್ಪ ವಾರ್ಧಿಯಂ ॥ ೧೮

ಪವಳದ ಕುಡಿ ಶಂಖದ ಬ
ಳ್ಳಿ ವಿರಾಜಿಪ ಮುತ್ತು ಮಾಣಿಕಂ ಬೆಳೆವುದಱಿಂ।
ನವರತ್ನದ ಬೆಳೆಗೆಯ್ಯೆನಿ
ಸುವುದಂಬುಧಿ ಕವಿಗಳಿಱಿಕದಿಂ ಸತ್ಕೃತಿಯೊಳ್ ॥ ೧೯

ಪಡಗೊಂಡು ನಾವೆ ದೋಣಿಗ
ಳಿಡಿಕಿಱಿದ [1]ಬಹಿ[1]ತ್ರವಮರ್ದ ಜೋಲಗಂಬುಗೆ ಬಂ ।
ದೆಡೆಗೆಯ್ದು ಜಂಗಮತ್ವಂ
ಬಡೆದವರವೊಲರ್ಪವಾ ಮಹಾಜಲನಿಧಿಯೊಳ್ ॥ ೨೦

ಎಡೆಗುಡದುಸಿರ್ದೆಗೆವೆಡೆಯೊಳ್
ಪೊಡಕರಿಸುವುದುಸಿರನಿಕ್ಕುವೆಡೆಯೊಳ್ ಮುನ್ನೀ ।
ರ್ಗಡಲೆಂದೊಡೆ ವಡವಾಗ್ನಿಯ
ಪೊಡರ್ಪಿನಿತ್ತೆಂಬ ರಸನೆಗೊಗೆಯವೆ ಪುಗುಳ್ಗಳ್ ॥

ಮೇಲೆ ನಿರಂತರಂ ನೆಗೆದ ಕಯ್ ಕರಮೊಪ್ಪುವ ಕೂವಕಂಧಮಂ
ಪೋಲೆ ಕರಾಗ್ರದಿಂ ನೆಗೆದ ಸೀಕರಮೊಪ್ಪುವ ವಾಲದಂಡಮಂ ।
ಪೋಲೆ ನಿಗಂತರಂ ಪರಿವದೊಂದು ಮಹಾಮಕರಂಬೊಲಾದುದಂ
ದೀ ಲವಣಾಂಬುರಾಶಿಯೊಳಗೆಂದದ[2]ನೊಂದಿನಿಸಿರ್ದು[2] ನೋಡಿದಂ ॥ ೨೨

ಕರಿ ಮಕರಂಗಳುಚ್ಚಲಿತ ಭಂಗುರ ತುಂಗ ತರಂಗಮಾಲೆಯಂ
ಕರಿರದನಾಗ್ರದಿಂದಿಱಿಯೆ ಮುತ್ತುಗಳಂತಿರೆ ಸೂಸಿ ಪಾಯ್ವ ಶೀ ।
ಕರದೊಳೆ ನಾಂದು ಸೇಡುಗೊಳುತುಂ ಸುಟಿ[3]ದಾಡು[3]ವ ಗಾಳಿ ಬರ್ಪ ದೇ
ವರ ವರ ಕಾಂತೆಯರ್ಕಳ ಪರಿಶ್ರಮಮಂ ಕಳೆದತ್ತು ವಾರ್ಧಿಯೊಳ್ ॥ ೨೩

(ಶೂದ್ರಕಂ—ಕಾವ್ಯನಾರಂ, ೭೮.)

ಮಿಳಿರ್ವರುಣಧ್ವಜಂಗಳ ನೆಟಲ್ಗಳನೊಂದೆರೆಗೆತ್ತು ವಾರ್ಧಿಯೊಳ್
ಪೊಳೆವೆಳವಾಳೆಗಳ್ ಕರ್ದುಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ ।

---

[1] ಭ್ಮೈ (ಕ.ಖ.ಗ). [2] ನೋದಿಸಿ ನಿಂದು (ಖ). [3] ದೂದು (ಕ).

ಗಳೆ ತಿಮಿಯಂ ತಿಮಿಂಗಿಳನಡಂ[1]ಗುವಿನಂ[1] ತವೆ ನುಂಗೆ ತತ್ತಿಮಿಂ
ಗಿಳಮುಮನಾ ತಿಮಿಂಗಿಳಗಿಳಂಗಳೆ ನುಂಗಿದುವೊಂದು ತಾಣದೊಳ್ ॥ ೨೪

(ಶೂದ್ರಕಂ--ಕಾವ್ಯಸಾರಂ, ೭೬.)

ಬೆಟ್ಟುಗಳೆಟ್ಟು ಬೆಟ್ಟುಗಳನಟ್ಟುವವೋಲ್ ಪವಮಾನ ವೇಗದಿಂ
ದಟ್ಟಿ ತೆರಳ್ದು ಗೊಂದಣಿಸಿ [2]ತಾಳತರೂಪಮಹಸ್ತ[2] ಘಾತದಿಂ ।
ತೊಟ್ಟನೆ ಕಿಟ್ಟು ಪೊಯ್ದು ಕೊಣಕಿಟ್ಟು ಮಹಾರವದಿಂದೆ ಹೋರಲೆ
ಬ್ಬಟ್ಟುವ [3]ಸೊಕ್ಕಿ [1]ದಾನೆ ಮಕರಂಗಳನೀಕ್ಷಿಸಿದಂ ಸಮುದ್ರದೊಳ್[4] ॥ ೨೫

ಶಂಖಮನೆತ್ತಿ ವಿಾನ ಪೊಳೆಪಂ ತಳೆದಾವೆಯ ರೂಪನಾಳ್ದ ಪಾ
ವಂ ಕರ[4]ಮೊಪ್ಪೆ ನೆಮ್ಮಿ[4] ಶಿಶುಮಾರ[5]ಸಮಾ[5]ಶ್ರಯಮಾಗಿ ಭೂಮಿಭೃ ।
ತ್ಸಂಕುಳಮಂ ಶರಣ್ಗೆವರೆ ರಕ್ಷಿಸಿ ಲಕ್ಷ್ಮಿಯನೋತು ಪೆತ್ತು ವೀ
ತಾಂಕುಶಸತ್ವದಿಂದಮರ್ದು ಪೋಲ್ತುದು ವಾರಿಧಿ ವಾರಿಜಾಕ್ಷ[6]ನಂ[6] ॥ ೨೬

ಸೀಮೆಯಿದು ಜಲಧಿಗಂ ಪೃ
ಥ್ವೀಮಂಡಲಕೆಂದು ಪರಶುರಾಮಂ ಬರೆದಾ ।
ಸೀಮೆಯೆ ಮೇರೆಯೆನಿಪ್ಪುದು
ಭೂಮಿಗೆ[7]ಯುಳಿಕಂಬೊಲಾಯ್ತು[7] ಸೀಮಾಲಂಘ್ಯಂ ॥ ೨೭

ಆಡುವ ವಿಾನ್ಗಳುಂ ಕುಣಿವ ಹಂಸೆಗಳುಂ ಕಡುದಣ್ಣ[8]ನೇಗಳುಂ[8]
ತೀಡುವ ಗಾಳಿಯುಂ ಸುಟಿವ ನಾವೆಗಳುಂ ತೆರೆ ಪೊಯ್ಯೆ ಪುಯ್ಯಲಿ ।
ಟ್ಟಾಡುವ ಫೇನಸಂಹತಿಗಳುಂ ತ್[9]ಗದುನ್ಮದಿಷ್ಟ್ವದಂಗಳುಂ
ಮಾಡಿದುವಬ್ಧಿಯಂ ಪಿರಿದುಮಂ ಮನದೊಳಾ ಜಯದಂಕಕಾಖಿನಾ ॥ ೨೮

ಅಗಲದ ಪರೋಪಕಾರದ
ಬಗರಗೆ ನೀರ್ವೇಱಿ ಕೀಱಿ ನವಜಲದಂಗಳ್ ।
ಗಗನಪಥಕ್ಕಡರ್ವಗ್ನಿಯ
ಪೊಗೆಗಳ್ ನೆಗೆವಂತೆ ನೆಗೆದುವಂಬುಧಿಯಿಂದಂ ॥ * ೨೯

[1] ಗುವವೋಲ್ (ಖ). [2] ಕಾಳದ ರೂಪದ ಹಸ್ತಿ (ಕ). [3] ದಮ್ಮ (ಕ). [4] ಮುಬ್ಬೆನೇಮಿಸಿ (ಕ). [5] ನುಪಾ (ಅ.ಕ). [6] ನಾ (ಕ.ಗ). [7] ಬಟಿಕವ ನಿನಾಯ್ತು (ಕ). [8] ನಾಳ್ಗಳುಂ (ಬ). [9] ವಮನ್ಮಥ (ಕ).

* ಈ ಪದ್ಯವೂ ಇದರ ಮುಂದಿನ ಪದ್ಯವೂ (ಬ) ಪ್ರತಿಯಲ್ಲಿ ಹಿಂದುಮುಂದಾಗಿದೆ.

ಧರೆಗಿ[1]ದಮರೇಂ[1]ದ್ರಜಾಲಂ ಒಳಗೊಳಗಳು
ಶರಧಿಯ ವಿಷಮಂ ಕಡಂಗಿ ಮಾರುತಜವದಿಂ ।
ಪರಿದೆಱಗಿ [2]ಮೊಗೆದು ನೆಗೆದು[2]
ರ್ದರೆಗಮರ್ದಂ ಕಱು[3]ವುವಲ್ಲಗೆಱಗುವ[3] ಮುಗಿಲ್ಗಳ್ ॥ ೩೦

ಮೃಗ ಮಕರಂಗಳಂ ಕಮಠ ನಾಗ ಹರಿನ್ಮಣಿ ನೀಲಮೌಕ್ತಿಕಾ
ಳಿಗಳ ಕಳಾಪದಿಂ ಶಫರ ಶಂಖಪರಂಪರೆಯಿಂ ವಿಳಾಸವ ।
ತ್ಪಗಯುಗಳಂಗಳಿಂ ಲಹರಿ[4]ಕಾ[4] ಲತಿಕಾವಳಿ[5]ಯಂಗಳಿಂದೆ[5] ಧಾ
ತ್ರಿಗೆ ಕಟಿಸೂತ್ರದಂತೆ ಸೊಗಯಿಕ್ಕುಮಗಾಧ ಪಯೋಧಿಮಂಡಲಂ ॥ ೩೧

ನೊರೆಯಿ[6]ವ್[6]ಲ್ಲವು ತಳ್ತ ಶಂಖದ ಬಳ್ಳಿಗಳ್ ಬಡಬಾನಲಾಂ
ಕುರಮಿ[6]ವ್[6]ಲ್ಲವು ರತ್ನದೀಧಿತಿಗಳ್ ತರಂಗಮಿ[6]ವ್[6]ಲ್ಲವು ।
ದ್ಧರಕುಳಾಚಲಪಂಕ್ತಿಗಳ್ ಜಳಶೀಕರಂಗಳ್[6]ವ್[6]ಲ್ಲವಾ
ಪರೆದ ಮುತ್ತುಗಳೆಂಬ ಶಂಕೆಯನಾಗಿಕುಂ ಮಕರಾಕರಂ ॥ ೩೨

(ಕಾವ್ಯಾವಲೋಕನಂ, ೮೮೬.)

ಬಲವೈರಿಸ್ಫಾರ ವಜ್ರಾಯುಧ ಭಯಚಕಿತೋ[7]ದ್ಧೂತ[7] ಮೈನಾಕಗೋತ್ರಾ
ಚಲಪಕ್ಷತ್ರಾ[8]ಯಿ ಸಿಂಧು[8]ಪ್ರಿಯತಮನತಿಗಂಭೀರನಂತರ್ನಿವಿಷ್ಟಾ ।
ಖಿಲಲೋಕಂ ನಕ್ರಚಕ್ರಸ್ಫುರದುರುತರ [9]ಕ್ರೋಧಶ್ಚರಾಧ್ಯಾಸಿತ[9] ಪ್ರೋ
ತ್ಕಲಿತಾಂಭಃ ಕುಂಭಿ[10]ಕುಂಭೀನಸ ಮಕರ ಕರಕ್ಷೋಭ[10]ರೌದ್ರಂ ಸಮುದ್ರಂ ॥

(ಪಞ್ಚತಂತ್ರಂ—ಪದ್ಯ ೨೨೨, ಪುಟ ೧೫೦.)

ಒಳಗೊಳಗಳುರ್ದುದು ವಡಬಾ
ನಳನಿನಿನಂ ಮೊಗೆಯೆ ಮುಗಿಲ ಬಳಗಂ ಮಹಿಗಂ ।
ಜಲಮಯಮೆನಿಸಲ್ ಸಾಲ್ದುದು
ಜಲರಾಶಿ ನಭಕ್ಕೆ ನೆಗೆದ ಪೆಱ್ಚುಗೆಯಿಂದಂ ॥ ೩೩

---

[1] ಡಿದವಿಂ (ಬ). [2] ನೀರಂ ಮೊಗೆದು (ಬ). [3] ಪೊಲಲ್ಲಿಗೆಱಿಪ (ಕ.ಗ). [4] ಪಾ (ಬ). [5] ಯಿಂದಲಂತು (ಕ). [6] ಪೆ (ಬ). [7] ದಾರ (ಕ), ದ್ದಾಮ (ಅ). [8] ತ್ರಾಯಿಯಿಂದು (ಕ), ತ್ರಾಣಸಿಂಧು (ಅ). [9] ರೋಧಸ್ಸುರೋಧಂ ಯಮು (ಕ), ಯೋಧ್ಯನ್ಯರೋಧಂ ಯಮು (ಬ). [10] ಕುಂಭೋನ್ಮದ ರಸ ವಿಲಸತ್ ಕ್ಷೋಭ (ಅ).

ಆದು ಜಂಬೂದ್ವೀಪಮಂ ಬಾನ್ಗಡರೆ ಬಳಸಿದಂತಿರ್ದುದಂಭಃಕರೀಂದ್ರೋ
ದ್ರದನಾಘಾ[1]ತೋಚ್ಚಳಚ್ಛೀಕರ[1]ಮಕರಕರಸ್ಫಾಲಪಾರೀನಪುಚ್ಛ ।
ಚ್ಛದನಚ್ಛನ್ನಕ್ರಕೂರ್ಮಪ್ರಕುಪಿತ[2]ವಿ[2]ಲುಠಚ್ಛಿಂಶುಮಾರಪ್ರಹಾರ
ಪ್ರದಳತ್ಫೇನಪ್ರವಾಹಪ್ರಬಲಘನಘನಾರಾವರೌದ್ರಂ ಸಮುದ್ರಂ ॥ ೩೫

ಒಂದುಂ ಕಾರಣಮಿಲ್ಲದೆನ್ನ ಧನಮಂ ಶ್ರೀಕೌಸ್ತುಭಾಸಾಂಗನಾ
ವೃಂದಸ್ನಿಗ್ಧಸುರದ್ರುಮಾ[3]ಮೃತಹಯಶ್ರೇಷ್ಠೀಭಮಂ[3] ದೇವರೆ ।
ಯ್ತಂದೀಬ್ಕೊಂಡುದನೆನ್ನ ಪುಯ್ಯಲನಿದಂ ನೀಂ ಭೂಧರಂಗೆ[4]ಯ್ದಿ[4] ಪೇ
ಸೆಂದೂಳ್ವಂತೆ ಗಭೀರನಾದಮೊಗೆವಂತಾಯ್ತು ಬ್ಧಿ ವಾತಾಹತಂ ॥ ೩೬

ಪವಳದ ಬೀಡು ಕಂಬುಗಳ ನಾಡು ಜಲೇಶನ ಜೋಡು ನಾಡೆಯುಂ
ಕವಿಗಳ ಲೀಲೆ ಗಂಗೆಗಿವಿಯೋಲೆ ಪನೇಭದ ಶಾಲೆ ಪದ್ಮಸಂ ।
ಭವನ ನೆಗಪ್ಪೆ ಪೂರ್ವದ ಪೊಗಪ್ಪೆ ಕುದುರ್ಗದಗಪ್ಪೆ ಮಿಕ್ಕ ಬಾ
ಡವಶಿಖಿಗೋಗರಂ ಮಣಿಗಳಾಗರಮಂದೆಸೆದತ್ತು ಸಾಗರಂ ॥ ೩೭

ಪವಳದ ಕೆಯ್ ಮುಗಿಲ್ಗಳಿವಟ್ಟಿಗೆ [5]ನೀರ್ಗಳ್[5] ಗೊತ್ತು ಮುತ್ತು ಹು
ಟ್ಟುವ ಕಣಿ ಬೆಟ್ಟವಕ್ಕಿಗಳ ಗೂಡೆಳನೀಸಱಿ ತೊಟ್ಟಿಲುದಗ್ರ ದಾ ।
ನವರೆಱಿವೆಟ್ಟು ಲಕ್ಷ್ಮಿಯ ತವರ್ಮನೆ ತಿಂಗಳ ಪೆತ್ತ ತಂದೆ ವಾ
ಡವಶಿಖಿಗಂ ನಿವಾಸಮನುರಾರಿಯ ನೆಚ್ಚೆ ಶುಭಂ ಮಹಾರ್ಣವಂ ॥* ೩೮

ನಳನೀಗರ್ಭಾಂಡಮಾಲಾಫಳಿತಮೆನಿಪ ಪೃಥ್ವೀಮಹಾವಲ್ಲಿಯಂ ಮಂ
ಡಳಿಸಿರ್ದಾವಾಲದಂತಿರ್ಪುದು ಜಲಚರಸಂಭೂತ ಸಂಪದ್ವಿಧಾನಂ ।
ವಿಳಸದ್ರತ್ನಪ್ರತಾನಂ ಕುಲಗಿರಿಶರಣಸ್ಥಾನಮುತ್ಕೀರ್ಣಫೇನಂ
ಬಳವದ್ವೀಚೀವಿತಾನಂ ಪ್ರಬಳಘಳುಘಳುಧ್ವಾನಮಂಭೋನಿಧಾನಂ ॥ ೩೯

(ಜಗನ್ನಾಥವಿಜಯಂ, ೧–೨೩.)

ಕ್ಷಿತಿಯನಶೇಷಮಂ ಬಳಸಿ ಕಾವುದಱಿಂ ಮಱಿವೊಕ್ಕ ಭೂಮಿಭೃ
ತ್ಪತಿಯನರಾತಿಗೊಪ್ಪಿಸದ ಸಾಹಸನದಿಂದವೆ ಬೀರಗೌರವ ।
ಸ್ಥಿತಿಯಿನಲಂಘ್ಯಶಕ್ತಿಯಿನುದಾರಗುಣೋನ್ನತಿಯಿಂ ಪಯೋಧಿ ಭೂ
ಪತಿಯನೆ ಪೋಲ್ತು ಪೋಲದತಿತೃಷ್ಣತೆಯಿಂ ತೆರೆಯಿಂ ಜಡತ್ವದಿಂ ॥ ೪೦

---

[1] ತಬಲಚ್ಛೀಕರ (ಬ). [2] ಲು (ಕ). [3] ಶ್ವಗಜಮಂರತ್ನಂಗಳಂ (ಖ).
[4] ಯ್ದಿ (ಬ). [5] ಮಾನ್ಗಳ (ಕ). * ಇಲ್ಲಿಗೆ (ಕ) ಪ್ರತಿಯಲ್ಲಿ ಸಮುದ್ರವರ್ಣನೆಯಾದ ೨ನೆಯ ಆಶ್ವಾಸವು ಮುಗಿದಿದೆ.

ಜಗದೊಳುಳ್ಳ ನದೀಪ್ರವಾಹಜಲಂಗಳೌಘದಿನಾವಗಂ
ಪುಗೆಯುಮೊತ್ತದು ಮೇರೆಯಂ ವಡಬಾನಳಂ ಬಿಡದೇಗಳುಂ ।
ತಗುಳೆ ಪೀರೆಯುಮಂತ[1]ದೆಳ್ಳನಿತಪ್ಪೊಡಂ ತವದಂತೆವ್ರೋಲ್[1]
ಬಗೆದು ನೋಡೆ ಮಹಾತ್ಮರಪ್ಪವರೇಕರೂಪರದೆಲ್ಲಿಯುಂ ॥ ೪೧

(ಕಾವ್ಯಾವಲೋಕನಂ. ೭೨೩.)

ಧರಣೀವನಿತೆಗೆ ಧಾತ್ರಂ
ವಿರಚಿಸಿ[2]ದ[2] ವಿಚಿತ್ರ ಮೇಖಲಾನೂತ್ರಮೆನಲ್ ।
ಕರಮೆಸೆವುದಖಿಳ ಮಣಿಗಣ
ಕಿರಣಾವಳಿ ಕಲಿತ ಪಲಿತ ಪಾರಾವಾರಂ ॥ ೪೨

(ವರ್ಧಮಾನಪುರಾಣಂ.)

ಉರಗೇಂದ್ರಾಭಿನುತಾಂತರಂಗಬಹಿರಂಗಶ್ರೀಯುತಂ ವೃತ್ತರ
ತ್ನರುಚಿವ್ಯಾವೃತನಿಷ್ಕಳಂಕಹೃದಯಂ ನಿತ್ಯಂ ಗಭೀರಂ ಸುರಾ ।
ಸುರಸೇವ್ಯಂ ಕಮಠಪ್ರಣೂತವಿಭವಂ ಶ್ರೀಪಾರ್ಶ್ವತೀರ್ಥೇಶನಂ
ತಿರೆ ಪೂರ್ಣಂ ಲವಣಾರ್ಣವಂ ಸೊಗಯಿಕುಂ ನೀಲಪ್ರಭಾಡಂಬರಂ ॥ ೪೩

(ಪಾರ್ಶ್ವನಾಥಪುರಾಣಂ.)

ನೊರೆಯಿಂ ಬುದ್ಬುದದಿಂ ಕಣಾವಳಿಗಳಿಂದಾವರ್ತದಿಂ ತುಂತುಱಿಂ
ತೆರೆಯಿಂ ಪೆರ್ದೆರೆಯಿಂ ತಿಮಿಂಗಿಳ[3]ಗಿಳ[3]ಸ್ತೋಮಂಗಳಿಂ ಕಚ್ಚಪ್ಪೋ ।
ತ್ಕರದಿಂ ನಕ್ರನಿಕಾಯದಿಂ ಮಕರದಿಂ ನೀರಾನೆಯಿಂ ಕಂಬುವಿಂ
ವರರತ್ನವ್ರಜದಿಂ ಪ್ರವಾಳಲತೆಯಿಂದೊಪ್ಪಿತ್ತು ನೀರಾಕರಂ ॥ ೪೪

(ಗಿರಿಜಾಕಲ್ಯಾಣಂ, ೧–೪೭.)

ಎಳಸತ್ಕಲ್ಲೋಲಮಾಲಾಪ್ರತಿಹತವಿತತಪ್ರೋಚ್ಚಲಚ್ಛೈಲಕೋಳಾ
ಹಳತೋದ್ಯತ್ಫೇನನಾನಾಕರಿಮಕರವಿಪುಚ್ಛಪ್ರಹಾರಪ್ರತಾಪ್ತೋ ।
ದ್ಗಳಿತಾನಂತಪ್ರರತ್ನಪ್ರಬಲಜಲಚರಾನೀಕಗಂಭೀರಭೀಮೋ
ಜ್ಜ್ವಳರಾವಪ್ರೋದ್ಯತಪ್ರೋದ್ಗಳಿತಘುಳುಘುಳುಧ್ವಾನಮಂಭೋನಿಧಾನಂ ॥ ೪೫

(ಗಿರಿಜಾಕಲ್ಯಾಣಂ, ೧–೪೬.)

ಕಟ್ಟಿದ ಚೌರಿಗಳ್ ಗಗನಮಂ ಮಿಗೆ ಚುಂಬಿಪ ಕೂವಕಂಭವು
ಟ್ಟಿಟ್ಟ ಸುವರ್ಣರತ್ನತತಿ ಗಾಳಿಯ ಕೋಳ್ಗನುಕೂಲವಪ್ಪಿನಂ ।

---

[1] ದೇಟನೆ ತಪ್ಪುದಂತವದಂಡೆವ್ರೋ (ಖ.ಬ). [2] ದಂ (ಬ). [3] ಕುಲ (ಬ).

ಬಿಟ್ಟುಪ[1]ರಿ[1] ಪ್ರಮಾದಫಲಕಂ [2]ಸಿ[2]ತನಾದ ವಣಿಗ್ವರಂ ಕರಂ
ದಿಟ್ಟಿಗೆ ಚೆಲ್ವನಾಗಿ ಕಡಲೊಳ್ ಬರುತಿರ್ಪುದು ಯಾನಪಾತ್ರಕಂ ॥ ೪೭

ಹಾಸ್ತಾಗಿ [3]ನು[3]ರೇಶಂ ಹರಿ
ಗಾ ಸೌಪರ್ಣಿಂಗೆ ನುಗಿಯದುರಗ ನಿಕಾಯಂ ।
ಬಾನಣಿಸಿಪ್ಪುದು ಕಡಲಂ
ಬೀಸದೆ ನಿಲೆ ವಾಯುವಿಂಗೆ ಪೆರ್ದೆರೆಗಳವೋಲ್ ॥ ೪೭

ಓರಂತೆ ಮೆಚ್ಚದಂ ಕೃತಿ
ನಾರಾರ್ಣವ ವರ್ಣನಕ್ಕೆ ಹೊಯ್ಸಳವಂಶೋ !
ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೪೮

ಇದು ನರಸ್ಪತೀನವರ್ಣಂಗದರ್ಪಣಾಯಮಾನ ಪ್ರತಿಭಾನನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧನಾರೋದ್ಧಾರಮುಮ
ಷ್ಟಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋತ್ಪಾ
ದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತ್ಯ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ನಮುದ್ರವರ್ಣನಂ ದ್ವಿತೀಯಾಶ್ವಾಸಂ ಸಂಪೂರ್ಣಂ.

[1] ರಿಂ (ಕ.ಖ.ಬ). [2] ಸ (ಖ). [3] ಸ (ಕ.ಖ.ಬ).

ಪರ್ವತವರ್ಣನಂ

ತರುತತಿ ಬಳ್ಳಿ ಪುಲ್ಲೊದಱು ಪಕ್ಕಿ ಮೃಗಂ ಫಣಿ [1]ಜೇನ್[1] ಮೃಗವ್ಯಮೊ
ಜ್ಜರಮೆಸೆವುನ್ನತಿಕ್ಕೆ ಶಿಲೆ ಕೋಡು ಗುಹಾವಳಿ ತಾಪಸಾಶ್ರಮಂ ।
ದರಿ ಸರಿಯಾನೆಗಳ್ ಗಱುಕೆ ಮೇವ ಮುಗಿಲ್ ದೊಣೆ ಭಿಲ್ಲಪಲ್ಲಿ ಕಿ
ನ್ನರಮಿಥುನಾಳಿಗಳ್ ವಿನಯಮಾಗಿರೆ ತೀರ್ವುದು ಶೈಲವರ್ಣನಂ ॥ ೧

ಬಿಲಸಗ್ಗಂ ನವಿನಂದಿಡೋಣಿ ಪರಿಚಾರೇರುಂ ಪುಗಿಲ್ವಟ್ಟೆ ಮೇ
ಖಳೆ ತಾಳ್ವಾಸಱು ಗಂಡಶೈಲಮಡಕಿಲ್ಮೂಟಂ ಹರಲ್ಮಟ್ಟು ತಾ ।
ಬಿಲೊನರ್ದಾಣ ಮಹಾಗ್ರಹಂ ತೊಱುಕೆಕೊಳಂ ಪುಲ್ಪಟ್ಟೆಗಳ್ ಕಾರ್ಮುಕಂ ಜೋ
ಲ್ಸಲೆ ಗಂಟಿಕ್ಕಿದ ಕಾಡದಿಕ್ಕಿಗಮಜಸ್ರಂ ರಯ್ಯಮಾಬೆಟ್ಟದೊಳ್ ॥ ೨

ನೋಡೆ ಮಹೇಂದ್ರರೌದ್ರ [2]ವದನೋಪಮಮ[2]ಪ್ಪುದಯಾದ್ರಿಕೂಟದಿಂ
ಮೂಡುವ [3]ತಿಗ್ಮ[3]ದೀಧಿತಿಯ ತೀವ್ರ ಕರಂಗಳ ಕೋಳ್ಗಿರ್ಚಿ [4]ತ ।
ಳ್ತೋಡಿ [4]ತೆರಳ್ದು ತೂಳ್ದ ನಿಲಲಾಱಿದೆ ಪಶ್ಚಿಮ ದಿಗ್ವಿಭಾಗ[5]ದ
ತ್ತೋ[5]ಡುವದೊಂದು ಕಟ್ಟುಲೆಯ ಹಾದಿವೊಲಿರ್ದುದು ವಿಂಧ್ಯಪರ್ವತಂ ॥ ೩

ಪ್ರತಿಭೂ[6]ಜೋಡ್ಡೀನ[6]ಮಾ[7]ನಂ[7] ಪ್ಲವಗಕಳಕಳಂ ಕೇಕಿ[8]ಚಂಚೂ[8]ಭಯಾಕುಂ
ಚಿತ[9]ಫಾಳ[9]ವ್ಯಾಳಜಾಲಂ ಜರದಜಗರವಕ್ತ್ರಕ್ಷರತ್‌ಕ್ಷ್ವೇಡವಾತಾ ।
ಹತವನ್ಯಪ್ರಾಣಿವರ್ಗಂ ಮೃಗಪತಿನಖನಿರ್ಭಿನ್ನಮತ್ತೇಭಕುಂಭ
ಚ್ಯುತಮುಕ್ತಾಪುಂಜಗುಂಜಾ[10]ವಿಳಸಿ [0]ತ ಕಟಕಂ ಕಣ್ಗೆವಂದತ್ತಗೇಂದ್ರಂ ॥ ೪

ಉತ್ಕಶಿಖಂಡಿತಾಂಡವಮನೋಹರಮುಜ್ಜ್ವಲರತ್ನರಾಜಿ[11]ರಂ
ಜ[11]ತ್ಕಟಕಂ, [12]ಸ್ಫರಃಕನಕ[12]ಪದ್ಮಪರಾಗಪಿಶಂಗಿತಾಂಗರಂ, ।
[13]ಜ[13]ತ್ಕಳಹಂಸನಾದರಮಣೀಯತರಂ ಮದದಂತಿದಾನ[14]ಧಾ
ರೋ[14]ತ್ಕಟಮೊಪ್ಪುಗುಂ ಕುಮುದಪಾಂಡುರಮಾ ವಿಜಯಾರ್ಧಪರ್ವತಂ ॥ ೫

(ಆದಿಪುರಾಣಂ, ೧–೬೩.)

---

[1] ಚಿನ್ (ಕ). [2] ರನದೊಪ್ಪಮನಿಂ (ಖ). [3] ತೀವ್ರ (ಖ). [4] ದಳ್ಳಾಡೆ (ಕ). [5] ದಿಂದೊ (ಖ). [6] ಜಾತೀಯ (ಖ). [7] ನ (ಕ). [8] ಕೇಕಾ (ಕ). [9] ಲೋಲ (ಕ). [10] ಕಬಳಿ (ಖ). [11] ರಾಜ (ಅ), ರುಚಿ (ಕ). [12] ಸರತ್ನಚಯ (ಅ,) ಕನತ್ಕನಕ (ಅ). ಕರತ್ನವಚ (ಖ). [13] ಗ (ಅ). [14] ಗಂಧೋ (ಅ). ಮದೋ (ಕ)

ಉಲಿವ ಶಕುಂತಿಯಿಂ ನುಡಿವವೋಲ್ ಕುಸುಮೋ[1]ಜ್ಜ್ವಲ[1]ಭೂರಿಭೂರುಹಾ
ವಳಿಯಿನನಂತರಂ ನಗುವವೋಲ್ ನವನಿರ್ಝರವಾರಿನಾದದಿಂ ।
ದೊಲೆದು ತಗುಳ್ದು ಪಾಡುವವೊ[2]ಲೂ[2]ದುವ ಗಾಳಿಯ ಕೋಳ್ಗಳೋಳಿವ
ಟ್ಟಲುಗುವ ಕೊಂಬಿನಿಂ ನಲಿದು ನರ್ತಿಪವೋಲ್ ಸೊಗಯಿಕ್ಕುಮಾ ನಗಂ ॥ ೬

ಭಾರತದಂತೆ ಭೀಮನಕುಲಾರ್ಜುನಸಂಗತಿಯಿಂ ನೆಗಟ್ಟು ದೈ
ತ್ಯಾರಿಯ ವಕ್ಷದಂತೆ ಭೃಗುಸಂಪದದಿಂ ಹರನಂತೆ ಸದ್ಗುಹಾ ।
ಕಾರವಿಳಾಸದಿಂ ರಘುಜನಂತೆ ಮನೋಜ್ಞಧರಿತ್ರಿಸಂಭವಾ
ಕಾರದಿನಿರ್ದುದೊಂದು ಕುಧರಂ ಗಗನಸ್ಥಳಮಂ ತುಡುಂಕುತುಂ ॥ ೭

ಕುವಲಯಪಾಂಡುರಂ ಕನಕಪಂಕಜಷಂಡವಿರಾಜಿ ಕೇಕಿತಾಂ
ಡವರಮಣೀಯ[3]ಕಲ್ಪ[3]ಲತಿಕಾವನ[4]ಮುನ್ಮದ[4]ಭೃಂಗಮಾಳಿಕಾ ।
ರವಮುಖ[5]ರೀ[5]ಕೃತಾ[6]ಮ್ರ[6]ವನಶೋಭಿತಮಾಶ್ರಿತದಿವ್ಯಸೌಂದರೀ
ನಿವಹವಿಕೀರ್ಣ[7]ಚಂಪಕವನಂ ಕರಮೊಪ್ಪುಗುಮಾ ಮಹೀಧರಂ ॥ ೮

(ಆದಿಪುರಾಣಂ, ೧೩–೭೦.)

ಫಳಭಾರಾಕ್ರಾಂತ ಸಾರ್ವರ್ತುಕನಿಕಟವನಂ ಮೇಖಲಾಕೀರ್ಣ[7]ವಲ್ಲೀ
ನಿಲಯಂ[7] ಗಂಧೇಭಗಂಧೋತ್ಕಟಮವಿರಳಸಾನುಸ್ಥಳೀಪದ್ಮ[8]ರಾಗೋ[8] ।
ತ್ಪಲಷಂಡಂ ಕೂಟಕೋಟಿ[9]ಸ್ಥಗಿತ[9]ಮಣಿಮಯೂಖಾವಳೀಚಿತ್ರ[10]ತಾಶಾ[10]
ವಳಯಂ ಕಣ್ಗಂ ಮನಕ್ಕಂ ಪಡೆದುದು [11]ಪದೆಪಂ ಚಿತ್ರಕೂಟಾಚಲೇಂದ್ರಂ[11]॥ ೯

(ಪಂಪರಾಮಾಯಣಂ, ೭–೩೦.)

ಭ್ರಮಿತಾ[12]ಷ್ಟಾಪದಮುಗ್ರಖಡ್ಗಮೃಗಸಂಘನ್ನಂ[12] [13]ಜರ[13]ದ್ದಂದಶೂ
ಕಮು[14]ಖೋಚ್ಛ್ವಾಸ[14]ವಿಷಾಗ್ನಿದಗ್ಧವಿಪಿನಂ ಮತ್ತೇಭವಿಕ್ರೀಡಿತಂ ।
ತಮದೊಡ್ಡಂಬಿನಿಗಂ ಕಱಿಂಗಿ ನಭಮಂ ನುಂಗಿತ್ತು ಪಾಪರ್ದಿಸಂ
[15]ಭ್ರ[15]ಮಕೋಲಾಹಲಲುಬ್ಧ[16]ಕಾ[16]ಕಲುಷಿತಾಂ[17]ತ[17]ಸ್ಸಿಂಧು ವಿಂಧ್ಯಾಚಲಂ ॥ ೧೦

(ಪಂಪರಾಮಾಯಣಂ, ೭–೧೨೨.)

---

[1] ತ್ಸವ (ಖ). [2] ಲೋ (ಖ). [3] ಪುಷ್ಪ (ಕ). [4] ಮನ್ಮಥ (ಕ). [5] ರಂ (ಖ). [6] ರ್ದು (ಕ), ರ್ಥ (ಬ). [7] ಧದ್ರವಿಳಸದ್ಗಂ (ಕ). [8] ನೀಲೋ (ಅ), ನದ್ಮೋ (ಕ). [9] ಸ್ಫುರಿತ (ಅ.ಕ), ಸ್ಥನಿತ (ಖ). [10] ಶೋಭಾ (ಖ). [11] ಮುದಮಂ ನೋಡೆ ವಿಂಧ್ಯಾಚಲೇಂದ್ರಂ. [12] ಟೋಪದೆಯುಗ್ರಖಡ್ಗಮೃಗಸಂತಾನಂ (ಕ). [13] ಚಲ (ಖ). [14] ಖಶ್ವಾನ (ಅ.ಕ). [15] ಕ್ರ (ಖ). [16] ಕಂ (ಅ.ಕ). [17] ಧ (ಖ).

ಬಹುರತ್ನಚ್ಛಾಯೆಯಿಂ [1]ಚಿತ್ರಿಸಿ ನಿ[1]ಖಿಳ ದಿಶಾಭಿತ್ತಿಯಂ ಚೂಳಿಕಾನೋ
ಕಹಶಾಖಾಹಸ್ತದಿಂ ಜಕ್ಕುಲಿಸಿ ರವಿರಥಾಶ್ವಂಗಳಂ ಗಂಡಶೈಳಾ ।
ಗ್ರಹಟತ್ಕೂಟಂಗಳಿಂ[2]ದುದ್ಧ[2]ರಿಸಿ ದಿವಮನೇಂ ಪೆಂಪುವೆತ್ತತ್ತೊ ಭೂಭೃ
ನ್ಮಹಿತಂ ಶ್ರೀಪರ್ವತಂ ನಿರ್ಝರಜಲಲಹರೀಲಾಸ್ಯಮಾಂಗಲ್ಯರಂಗಂ ॥ ೧೧

(ಮಲ್ಲಿನಾಥಪುರಾಣಂ, ೧೦--೧೦೨)

ಕರಿಗಳ್ ಮದವತ್ಕರಿಗಳ್[6]
[3]ಪರ[3]ಲೆಲ್ಲಂ ಮುತ್ತು ಮಾಣಿಕಂ ಪಾಸಱಿಗಳ್ ।
ಪರುಷಂಗಳ್ ದೊಣೆಗಳ್ ಸಿ
ದ್ಧರಸಂಗಳ್ ಗಿರಿಯ [4]ಸಿರಿಯನೇ[4]ನಂ ಪೇೞ್ವೆಂ ॥ ೧೨

ಕತ್ತುರಿಮೃಗಮೆ ಮೃಗಂಗಳ್
ಮುತ್ತುಗಳಂ ತಳೆದ ಗಂಧಗಜಮೆ ಗಜಂಗಳ್ ।
[5]ಬ[5]ತ್ತದೆ ಪರಿವ ರಸಾಯನ
ದೊತ್ತಿಂ ಬಂದಿಟಿಯುತಿರ್ಪ ತೊಱಿಗಳೆ ತೊಱಿಗಳ್ ॥ ೧೩

ಸೊಗಯಿಸಿ ಪಾಯ್ವ ನಿರ್ಝರದ ಶೀಕರಪುಂಜದೊಳಾದ ಮಂಜಿನಿಂ
ದಗಲದೆ ಪೊರ್ದಿ ಬರ್ಪ ರವಿಯಿಂ[6]ದು[6]ರಿದೇೞ್ಪಿನಕಾಂತತಾಪದಿಂ ।
ಮೃಗದವೊಲೇಱಿ ಮೇವ ಮುಗಿಲಿಂ ಪಥಿಕರ್ಕಳ ಕಣ್ಗೆ ಮಾಗಿ ಬೇ
ನಗೆ ಮಡೆಗಾಲಮೆಂಬಿನಿತುಮೊ[7]ರ್ಮೆಯೆ ತೋಱಿಗು[7]ಮಾ ವನಾಂತದೊಳ್ ॥ ೧೪

ಕೋಡಿಸುವ ಚಂದ್ರಕಾಂತದ
ಕೋಡುಂಗಲ್ಗಳಿನೊಸ[8]ರ್ವ[8] ರಸದ ಪೊನಲ್ಗಳ್ ।
ಸೇಡುವಡೆ ಕವಿಯೆ ಗಿರಿಗೆಡೆ
ಯಾಡುವ [9]ವಿಧು[9] ನಾಂದು ನನೆದು ಹಿಮಕರನಾದಂ ॥ ೧೫

(ಲೀಲಾವತಿ, ೯–೩೨.)

ಪೂಗೊಯ್ವ [10]ಶಬರಿ[10] ಶಿಖರದ
ಪೂಗಿಡುಗಳ ಕೊಂಬಿನಲ್ಲಿ ತೊಡರ್ದಿರೆ ಮಿನ್ಗಳ್ ।
[11]ಪೂಗೆತ್ತು ತುಡುಂಕುವಳೆನ[11]
ಲಾ ಗಿರಿಯುನ್ನ[12]ತಮ[12]ನಿನ್ನದೇನಂ ಪೇೞ್ವೆಂ ॥ ೧೬

(ಲೀಲಾವತಿ, ೯–೩೮.)

---

[1] ಪರ್ವಿದುದ (ಅ.ಖ). [2] ದಂಧ (ಖ). [3] ಪುರು (ಕ). [4] ಪೊದಲೊಳೇ (ಕ). [5] ಪ (ಕ). [6] ಪು (ಕ). [7] ರ್ಮೊದಲೊಪ್ಪುಗು (ಖ). [8] ರ್ತ (ಅ.ಖ). [9] ರವಿ (ಖ). [10] ಖಚರಿ (ಅ.ಖ). [11] ಪೂಗೊಯ್ಯರ್ ತುಡುಕುವರೆನ (ಬ). [12] ತಿಯ (ಖ.ಬ).

ಜ್ವಳದರ್ಕಗ್ರಾವಮಂ ತಿಗ್ಮಕರನಮಳಮಾಣಿಕ್ಯ ಸಂತಾನಮಂ ನಿ
ರ್ಮಳಜಾತಿಜ್ಯೋತಿಶ್ಶೋಘಂ ಮೃಗಮೊಱಗಿದ ಚಂದ್ರಾಶ್ಮಮಂ ಚಂದ್ರಬಿಂಬಂ ।
ಪೊಳೆಯುತ್ತುಂ ಪೋಲೆ ನೀಳಾಚಲಮನಡಕಿಲಿಟ್ಟಂತೆ ತೋರ್ಕುಂ ತದುಚ್ಚಾ
ಚಳ ಚೂಡಾಚಕ್ರದೊಳ್ ಚುಂಬಿತಜಲಧರದಿವ್ಯಾಪಗಾವ್ಯೋಮಮೆಂದುಂ ॥ ೧೭

(ಲೀರಾವತಿ, ೯–೨೯.)

ಹರಿನೀಲಶಿಖರದುನ್ಮುಖ
[ಕ]ರಮಂ[ತಾಂ] ರಾಹುಗೆತ್ತು ಭಯದಿಂ[ದಂ] ಸಂ ।
ಚರಿಸುವ ಚಂದ್ರಮನೆರಳೆಗೆ
ಪಿರಿದುಂ ಪಾಯಲ್ಕೆ ಬಗೆದುವಲ್ಲಿಯ ಪುಲಿಗಳ್ ॥ ೧೮

ಆಗತಟಮನೆ ಸಾರ್ಚ ಮುಗಿಲ್
ತಗುಳ್ದುಂ ಮಱೆಗಱುಯೆ ಪೋಗಿ ಕೋಡುಂಗಲ್ಲಂ ।
ಮೃಗರಾಜನೇಱು ನನೆಯದೆ
ಮಗುಟ್ಟಿರ್ಪಿಕ್ಷಿಸುತಿರ್ಕುಮೇನದತ್ಯುನ್ನತಮೋ ॥ ೧೯

ನೀಲದ ಕೋಡುಂಗಲ್ಗಳ
ಲೋಲದ್ಯುತಿ ಮುಸುಱು ಮಸುಳೆ ಮೇಗಣ [1]ಮ್ಮಾ[1] ತಾ ।
ರಾಳಿಯ ಹಾ[2]ರಿ[2]ಯ ಬಟ್ಟೆಗೆ
ಶೈಲಂಬರ ತೊಲಗಿದಂತೆ ಕೆಲದೊಳ್ ತೋರ್ಕುಂ ॥ ೨೦

(ಲೀರಾವತಿ, ೯–೩೪.)

ಮೃಗಧರನಗತಟದೊಳ್ ಬರೆ
ಮೃಗಮದಱೊಳ್ ಬೆರಸೆ ಬೇಡನೊಡನಾರ್ದೆಸಲಂ ।
ದೊಗುವಮೃತದಿನದು ಬರ್ದೊಡೆ
ಮೃಗವ್ಯಮಂ ತೊಱೆದು ಬಿಲ್ಲಮಂಬಂ ಬಿಸುಟಂ ॥ ೨೧

ಗಿರಿಗಳ್ ಜಂಗಮವಪುಗಳ್
ಶಿರದೊಳ್ ಸಸಿದರಳೆಯಂತೆ ಮುಸುಱಿದ ಮಂಜಿಂ ।
ನರೆಯಂ [3]ಪೊತ್ತವೊಲಿರ್ದುವು
ನಿರವಸ್ಥಿತದಶನಘನಗುಹಾಮುಖತತಿಗಳ್ ॥ ೨೨

(ಲೀರಾವತಿ, ೯೬–೨೪.)

ಎಲವಂ ಪಾದರಿ ಹಾಲೆ ನುಗ್ಗೆ ಸಿರಿಸಂ ಮಾಸೋವಿಳಾಸಕ್ಕೆ ಬೊ
ಬ್ಬುಲ [4][ತಕ್ಕಿ][4]ಲ್ತರು ಕಾಸು ನೆಲ್ಲ ಕಡವೀಚಿಲ್ ಮಾರುತುಂಬುರ್ಬೆಳ ।

---

[1] ನಿಂ (ಅ.ಕ). [2] ಲಿ (ಖ). [3] ಪೋಲ್ತಣವಿ (ಕ). [4] ತೊಕ್ಕ.

ಲ್ಲಲಸಂ ಬಾಡೆ ಕಱುಂಕೆ ಕಲ್ಲೊಡರಿ ಬಿಲ್ಬಲ್ಲತ್ತಿ ಮುಳ್ಮುತ್ತವಂ
ಕೊಳೆ ಕಾಪ್ಮೆಣಸಿಂಗಳಂ ಕೊನಗು ಗೇರ್ ಕಕ್ಕೆ ಬಿದಿರ್ಕಮ್ಮರಂ ॥ ? ೨೩

ಎಲವದ [1]ಬೇಲ[1] ಚೆನ್ನಗೆಯ ಹೊನ್ನೆಯ ಕಮ್ಮರದಾರ ಗೇರ ನೇ
ಱುಲ ನಿರಿತಾಳೆ ಯಿಂಗುಳದ [2]ನಿಂಬದಶೋಕೆಯ ಗೋಣಿಯಾಲದೀ[2] ।
ಚಿಲ ಕರಿಬೇವಿನಂಬಚೆಯ [3]ತಂಡಸಿನಾಸಿನ ತುಂಬುರೆಕ್ಕೆ[3] ಬೊ
ಬ್ಬುಲಿಯರನೇಱುಲಂಕೊಲೆಯ ಸೆಳ್ಳ ತಮಾಳದ ಪಾರಿವಾಳದಿಂ ॥ ೨೪

(ಲೀಲಾವತಿ, ೬–೨೬.)

ತದುಕಿನ ತಾಳ ತೆಂಗಿನ ತಮಾಲದ ತುಂಬುರ ಚಿಲ್ಲ ಬೆಲ್ಲವ
ತ್ತದ ಬಿಳಲತ್ತಿ ಯಿಪ್ಪೆಯ ಮರಂಗಳ ಕೊಂಬುಗಳಂಬರಂಬರಂ ।
ಪುದಿದು ಪೊದಱ್ದು ಸುರ್ವಡರೆ ಪರ್ವಿರೆ ಕಾರಿರುಳೋಳಿ ಕೊಂಬುಗೊಂ
ಡುದೆನೆ ಕಱುಂಗಿ ಕಟ್ಟುಲಿಸುತಿ[4]ರ್ದು[4]ದು ಕಾನನಮೆತ್ತ ನೋಟ್ಪೊಡಂ ॥ ೨೫

(ಲೀಲಾವತಿ, ೬–೨೭.)

ಕಡಸಿಗೆ ಕಾ[5]ಗೆ[5]ದೊಂಡೆ ಕಹಿದೊಂಡೆ ಕವುಂಗಿನಿ ಹಾಲೆಯೇಲೆ ದಾಂ
ಗುಡಿಯುಗುರ್ವೇರಿಯಾಶ್ವರಿ ಸುಗಂಧಿ ಕುರುಂಟಿಗೆ ಮೊಲ್ಲೆ ಬಿಂಬ ಮಾ ।
ರುಡ [6]ಮದದಾ[6]ನೆ [7]ಸುರ್ಚುರಿಕೆ[7] ಕಬ್ಬಳಿ ಹಾವು[8]ಸವುಂತೆ[8] ಸೋರೆ ತ
ಳ್ತಡರ್ದುವು ಬಳ್ಳಿವಳ್ಳಿ ಬನದೊಳ್ ಸಲೆ ಕಟ್ಟುಲಿಯಿರ್ಕೆಯೆಂಬಿನಂ ॥ ೨೬

ಅಲ್ಲಿ ಮರವಾಯ್ದು ಕೊರ್ವಿದ
ಪುಲ್ಲಿಂ ಪೆರ್ಮರನನಡರ್ದು ಪರ್ಬಿದ ನಾನಾ ।
ಬಳ್ಳಿಗಳಂ ಕಟ್ಟುಲೆ ತನ
ಗಲ್ಲದೆ ಮಾರ್ಮಲೆವುದಿಂದುಗಂ ದಿನಪಂಗಂ ॥ ೨೭

(ಲೀಲಾವತಿ, ೬–೨೫.)

ತಲೆವಣಿಯ ಫಣಿಗಳಂ ಸುರಿ
ಮೊಲದಡಗಂ ಪೊತ್ತ ಬೇಡರುಂ ಮರಗಳ ಕ ।
ಟ್ಟುಲೆ ತಲೆ[9]ಮುಟ್ಟಿ[9]ಡಿದಿರೆ ಮುಂ
ದಲೆಯೊಳ್ ಸೊಡರಿಟ್ಟು ನಡೆವ ತೆಱದಿಂ ನಡೆದರ್ ॥ ೨೮

(ಲೀಲಾವತಿ, ೬–೩೦.)

---

[1] ಚಿಲ್ಲ (ಖ). [2] ನೆಲ್ಲಯ ನೀವಹಸೊಲೆಯಾಲದಿಂ (ಅ). [3] ತಾರೆಯ ತಂಡಸಿನಾಸಿನಾನೆ (ಅ). [4] ರ್ದು (ಕ). [5] ಡ (ಕ). [6] ಮಮದರ್ದಾ (ಕ). [7] ನುಬ್ಬುಗರೆ (ಖ). [8] ಮೆಕ್ಕೆ (ತ.ಖ). [9] ಮದ್ದಿ (ಕ).

ಕಱುಕೆ ಮರಗಱುಕೆ ಕವಲುಂ
ಗಱುಕೆ ಕವಲ್ಗೊಟ್ಟಿ ಹಂಚ ತವತಲೆ ಸೇಡ್ದಂ ।
ಕಿಱುಮಾ[1]ಲೆ[1] ನೂಲೆ [2]ಕಿಸುಕುರಿ[2]
ನೆಱೆದೀ ಚಿಕ್ಕಣಿಕೆ ಮಾನಿನಿ ಕಸಕೆ [3]ಕಲ್ವುಲ್[3] ॥ ೨೯

ಅದಱಲ್ಲಿ ಮೂಷೆಯಿಟ್ಟೆಱ
ಗಿದ ತೆಱದಿಂ ಸೊಕ್ಕಿದೆಕ್ಕಲಂ ದಾಡೆಯಿನೆ ।
ತ್ತಿದ ಬಿದಿರ [4]ಸುರ್ವಿನೊಳ್ ತೋ
ರ್ಪುದಲ್ಲಿ[4] ಗೀಜಗನ ಗೂಡಿನಂತಿನಬಿಂಬಂ ॥ ೩೦

ಲೋಲಶ್ಮಶ್ರುಮುಖಂ ತೆಱಂಬೊಳೆವಿನಂ ಗಾಹಿಂಗೆ ಬೀಟ್ವನ್ನಮಾ
ಭೀಳಾಲೋಕದೆ ಸಾರ್ದು ಪಲ್ಮೊಱೆದು ಕ್ರೋಪಾಟೋಪದಿಂ ಚೆಚ್ಚರಂ ।
ನೀಳಾಲಂಘನದಿಂದೆ ಬಪ್ಪೆರಳೆಯಂ ಪ್ರೊಯ್ದೆತ್ತಿ ಸೀಳ್ದೆತ್ತಿ ಶಾ
ರ್ದೂಲಂಗಳ್ ಕೆಲಸೈಲದೊಳ್ ಸೊಗಯಿಕುಂ ಶಾರ್ದೂಲವಿಕ್ರೀಡಿತಂ ॥ ೩೧

ಚಲವಾಲಂ ಸ್ಥೂಲಗಾತ್ರಂ ವಿ[5]ಕೃ[5]ತವದನನಾಭೀಳರಕ್ತೇಕ್ಷಣಂ ಪೆ [ಪಾ।
ರ್ಬುಲಿ [6]ತಾರ್ಮುಟ್ಟಾದುದಂ[6] ಸಂಕಟದ ಸರಣಿಯೊಳ್ ಕಂಡು [7]ಬಲ್ವಂದಿಯಂ
ಯಲೊಡಂ ಸ್ಕಂಧಾಗ್ರದಿಂದಂ ಕಡಿದೊಡಕುಗಳೊಳ್[7]ಕೂರುಗುರ್ಕೊಯ್ಯೆನೊಂದಾ
ಪುಲಿಯಂ ಪ್ರೋಲ್ಡಂತೆ ಪ್ರೊಯ್ದೆತ್ತಿದುದು ಸರಿಸದಿಂ ಕ್ರೋಡನಂತೊಂದು ಕೋ
ಡೊಳ್ ॥

ಮಿಱುಗುವ ದಾಡೆಯಿಂದಣೆದು ಪೆರ್ದರಿಯಂ ಕರದಿಂದಮೆತ್ತು ತುಂ
ತುಱುತುಱುತಿಂಬ ಕಂದರಮ[8]ನೊತ್ತರಗೊಂಡು[8] ಮಹಾಮಹೀಜದೊಳ್ ।
ತಱತಱನಾಗಿ ಮಾಱೊರಸುತುಂ ಮಲೆಯುತ್ತೊಲೆಯುತ್ತ ಮಲ್ಲಿ ಕೈ
ಪಱಿದ ಗಜೇಂದ್ರನಂತೆ ಬರುತಿರ್ದುದು ಭೀಕರನೊಂದು ಸೂಕರಂ ॥ ೩೩

(ಕ್ಷುದ್ರಕಂ — ಕಾವ್ಯಸಾರಂ ೧೧೧೨.)

ಘನಕೋಪಾಟೋಪದಿಂದಂ ಕುಲಕುಧರಮಹಾತ್ಯಂಗಮಂ ಕೋಡ ಕೊಪ್ಪಿಂ
ತೊನೆದೀಡಾಡುತ್ತೆ ಬಪ್ಪ ದ್ವಿರದಪತಿಯನಾತ್ಮೋಪದೇಶಂಗಳಿಂ ಭೋಂ ।
ಕನೆ ನೋಡುತ್ತೆಯ್ದೆ ಬೆನ್ನಂ ಬಿಡದೆ ನಲವಿನೊಳ್ಗಂಡನುದ್ದಂಡದಿಂ ಕೆ
ಮ್ಮನೆ ಹೋರುತ್ತುಂ ಮದಾಂಧಂ ನಡೆದುದದಡವಿಯೊಳ್ ದೀರ್ಘದೇಹಂ ವರಾಹಂ ॥

[1] ರೆ (ಕ). [2] ಕೇಸುರಿ (ಖ). [3] ಕವಲ್ವುಲ್ (ಕ). [4] ಮುರದ ಸುರ್ವಿನ ಪೊದಱಿನ (ಕ.ಬ). [5] ವ್ಯ (ಖ). [6] ತಾಂ ಮಂದಾದುದಂ (ಕ). [7] ಮೆಲ್ವಾಯೆ ಕೋಲಂ ಪುಲಿಯವಾಯಲ್ಕೊಡಂ ತಾಂ ನಿಜಗಳದೆಡೆಯೊಳ್ (ಕ). [8] ನಿತ್ತರಗೊಂಡ.

ಉರಿ ತೀಡುತ್ತಿರ್ದ ಕಣ್ಬೀಡೆಳವೆಱುಯೊಗೆದಂತಿರ್ದ ಕೂರ್ದಾಡೆ ಮೈವೆ
ತ್ತಿರೆ ಸಂಧ್ಯಾಕಾಲದಾಕಾರಮನನುಕರಿಸುತ್ತೊಪ್ಪೆ ತನ್ನೊಂದು ಕಾಯ್ವಿಂ ।
ದರಿಯಂ ಕೋದೆತ್ತಿ ಕೋಡೊಳ್ ತಳರ್ದು ಬಿಡದೆ ಸೊಕ್ಕಿರ್ದ ಬೆನ್ನೊಂದಱುಂ ದಿ
ಕ್ಕರಿ ಕೈಬಿಟ್ಟಿರ್ದುದೆಂಬಂತೆಸೆದುದನದಳಂ ದೀರ್ಘದೇಹಂ ವರಾಹಂ ॥ * ೩೫

ವಿಪುಳಸ್ಕಂಧೋರುಭಾರೋಲ್ಲಸಿತಗತಿರತಂ ಭೀಕರಾರಣ್ಯಸಂಚಾ
ರಪದಶ್ರಾಂತಂ ಬೃಹತ್ಕರ್ದಮಿತ ತನು ಕವು[1]ರ್ವಳ್ಳೆ[1] ಕಂದಾವಳೀಲೋ ।
ಲುಪನುದ್ಯದ್ಘೋರಘೂರ್ಣಾವಿವರ ಘುರುಘುರುನ್ಸಾರಪಾತ್ರಾಭಿಘಾತ
ಸ್ಫುಟಾಂತಂ ನಿಂದು ಕೂಲಂ ನಡೆದುದು ಬಲವದ್ದೀರ್ಘದೇಹಂ ವರಾಹಂ॥* ೩೬

ನೆಱೆದಿರೆ ಕೊಬ್ಬಿ ನಂದಱಿಯಬಾರದವೋಲ್ ಪಲವೇಱು ಮೂಷೆಯಿ
ಟ್ಟೆಱಿಗಿದ ಮಾಪ್ಕೆಯಿಂ ಪಟನವಿರ್ ಮೊದಲಿಂದೆ ಕಟಲ್ತು ಬೆಳ್ನವಿರ್ ।
ತುಱುಗಿ ನಿರಂತರಂ ಬಳಪಮಂ ತೊಡೆದಂತಿರೆ ಮೈಬೆಳರ್ತ ಕಯ್
ಪಱುದ ಗಜೇಂದ್ರಮಂ ನೆಱೆಯೆ ಪೋಲ್ತುದುವೆಕ್ಕಲನೊಂದು ತಾಣದೊಳ್ ॥ ೩೭

ನಡುವಿಂ ನಾಲ್ವಡಿ ಕೊರ್ವುವೆತ್ತ ಕೊರಲೊಳ್ ಕರ್ಬೊನ್ನ ಬಲ್ಸೂಜಿಗಳ್
ನಡೆ ಬೊಟ್ಟಿಟ್ಟವೊಲುರ್ಬೆ ರೋಮನಿಕರಂ ಕಂಕಾಳಮಂ ರಕ್ಕಸಂ ।
ಕಡೆವಾಯೊಳ್ ಕುಡಿದೋರ್ವಿನಂ ಮಡಗಿದೊಲ್ ದಂಷ್ಟ್ರಾಂಕುರಂ ತೋಱಿ ಕಣ್
ಕಿಡಿಯಂ ಸಾಲಡೆ ಹಂದಿ ಹಿಂಡೊಡೆದು ಗಂಡಂ ಬೀಱಿ ಪೋಯ್ತೆಕ್ಕಲಂ ॥ ೩೮

ತುದಿಕೋಡೊಳ್ ವೇಣುಜಾಲಂಗಳ ಹೊದಱಿನಡರ್ದೆತ್ತುತುಂ ಭದ್ರ[2]ಮುನ್ಸಾ
ದಿ ಧರೋತ್ತಿಷ್ಠ[2][ತ್ಸು]ಕಂದಂಗಳನೆ ಕಬಳಿಸುತ್ತುಂ ತಡಂಮೆಟ್ಟುತುಂ ಬೆ ।
ಟ್ಟದ ತೀಕ್ಷ್ಣಗ್ರಾವದೊಳ್ [3]ನೀರಡಸಿ[3] ಬಿಡದೆ ನೀರ್ದಾಣಮಂ ನೋಡುತುಂ ಕಂ
ಠದ ಬ[4]ಣ್ಪಿಂ[4] ಜೊಂಪಿಸುತ್ತುಂ ನಡೆದುದಡವಿಯೊಳ್ ದೀರ್ಘದೇಹಂ ವರಾಹಂ ॥

ಬರಿಗಂಡಂ ಪಿಣಿಲೇಱು ರೋಮಮುಡಿದಿರ್ಬನ್ನಾಗೆ ಮುಂಗಾಲಗ
ಲ್ತರೆ ಬಿರ್ಕುರ್ವೆ ಮೊಗಂ ಕರಂ ಪೆಗಲ ಬಿಣ್ಪಿಂ ಜೋ[5]ಲೆ[5] ಬಾಲಂ ಮುಱುಂ ।
ಕರೆ ಬಂಬಲ್ಗಡಿವಂ ಪೊದಳ್ದುಗಸೆವೂಗೊಂಬೊಪ್ಪೆ ಕೋಱ್ಕುಟ್ಟಿ ಪೆ
ರ್ನೊರೆ ಸೂಸುತ್ತಿರೆ ಭೀಕರಂ ಸೊಗಯಿಸಿತ್ತುತ್ಕೀಕರಂ ಸೂಕರಂ ॥ ೪೦

(ಚಂದ್ರಪ್ರಭಪುರಾಣಂ, ೫–೬೦.)

---

* ಈ ಪದ್ಯಗಳೆರಡೂ (ಕ) ಪ್ರತಿಯಲ್ಲಿಲ್ಲ. [1] ರ್ವೋಜೆ (ಕ.ಖ). [2] ಮುನ್ಸಾದಿದು ರಾತೊರ್‌ಕ್ಲಿಷ್ಟ (ಕ). [3] ತಿನ್ನೊರಸಿ (ಅ.ಕ). [4] ಳ್ಪಿಂ (ಕ). [5] ಲ್ವ (ಅ).

ಗಿರಿತಟದೊಳ್ ಚರಿಯಿಪ ಕಿ
ನ್ನರರಂ ನಡೆ ಪುಯ್ಯಲೆಯ್ದುವವರವರ ಮದಂ ।
ಸುರಿತರೆ ಕಾಡ್ಕೋಣಂಗಳ್
ತರಳತರಶ್ವಸಿತ ವಿಲುಳಿತಘ್ರಾಣಂಗಳ್ ॥ ೪೧

ಕೋಣಂಗಳ್ ಘುರುಘುರಿತ
ಘ್ರಾಣಂಗಳ್ ಮಸಗಿ ಲೂನಘಟ್ಟನ ನಿಖಿಳ ।
ತ್ರಾಣಂಗಳ್ ಕರ್ದಮಿತ ವಿ
ಷಾಣಂಗಳ್ ದೆಸೆಗೆ ಮಸಗಿ ಕೊಣಕಿಡುತಿರ್ಕುಂ ॥ ೪೨

ಪಿರಿದುಂ ದಾನಾಂಧವೊಂದು ಸ್ಫಟಿಕಮಯ ಶಿಲಾಭ್ಯಂತರಾತ್ಮೀಯರೂಪಂ
ಕರಿಗೆತ್ತೆಯ್ತಂದು ಪಾಯಲ್ ಮುಱಿಯೆ ರದನಯುಗ್ಮಂಗಳಂತಂತೆ ನೋಡು ।
ತ್ತಿರೆ ಕಣ್ಣಂ ಮುಚ್ಚಿ ತದ್ರೂಪಮನೆ ಕರಿಣಿಗೆತಾ ತೋರುತಾತ್ಮೀಯರೂಪಂ
ಕರಮಂ ಮೇಲಕ್ಕಿ ನಿಂದಿರ್ದುದು ವಿಪುಳಕುಭೃತ್ಕುಂಜದೊಳ್ ಕುಂಜರೇಂದ್ರಂ ॥

ಬಿದುವೋ ಕೂಟಮೊ ಕರ್ಣತಾಳಮೊ ಪತತ್ರಕ್ಷೇಪಮೋ ನಿರ್ಗಲ
ನ್ಮದಮೋ ನಿರ್ಝರಮೋ ಲಲಾಟಮೊ ಶಿಲಾವಿಸ್ತಾರಮೋ ಕಣ್ಣ ಕೆಂ ।
ಪೊ ದವಜ್ವಾಲೆಯೊ ಮೆಯ್ಯ ಕರ್ಪೊ ಕರಿಕೋ ಪೇರಾನೆಯೋ ವಜ್ರಿಗೊ
ಡ್ಡಿದ ನೀಲಾದ್ರಿಯೊ ಪೇಟಿದೆಂಬಿನಮಗುರ್ವಾದತ್ತು ಮತ್ತೊಂದಿಭಂ ॥ ೪೪

(ಜಗನ್ನಾಥವಿಜಯಂ, ೧೬-೮.)

ಸೊವಡಿಂಗೇವಯ್ಸು ಪುಲ್ಪಟ್ಟೆಯ ತಿವಳಿಯನಾರಯ್ದು ಘರ್ಮದ್ರವಂ ಮೆಯ್
ನವಿರುಂ ಮೆಯ್ವೆರ್ಚೆ ಕಣ್ಬೀಡುರಿಯನುಗುಳೆ ಕಣ್ಮುಚ್ಚಿನೊಳ್ ಕಂಡು ಕಾಯ್ವಿಂ।
ಜವದಿಂ ಬೆಂಕೊಂಡು ಕೋಡೇಱಿನ ಮಸಕಮಗುರ್ವಾಗೆ ಕಾಡಾನೆ[1]ವಿಂಡಂ[1]
ತವೆ ಕೊಂದುಂ ತನ್ನ ಕೋಪಂ ತವದಿರೆ ಮರವಾಯ್ದತ್ತು ಮತ್ತದ್ವಿಪೇಂದ್ರಂ॥೪೫

(ಮಲ್ಲಿನಾಥಪುರಾಣಂ, ೧೦-೯೦.)

ಸೊವ[2]ಡಿಂ ಸೊರ್ಕಿ[2]ನುತುಂ ಕರೇಣುಕುಳಮಂ ಸಾ[3]ರ್ದಾರ್ದುರ್[3] ನಾಮೋದಪ
ಲ್ಲವಮಂ ಮೇಯುತೆ ತೀಂಬ ತುಂಬಿಗಳನುದ್ಯದ್ಗಲ್ಲದಿಂದಗ್ರಪ ।
ಲ್ಲವದೊಳ್ ಸೋವುತೆ ಸೋರ್ವ ದಾನಜಲದಿಂದಂ ಸಲ್ಲಕೀಕಾನನೋ
ದ್ಭವಮಂ ಮಾಡುತುಮಾಡುತಿರ್ದುವಗದೊಳ್ ಕೋಡಿಟ್ಟು ಕಾಡಾನೆಗಳ್ ॥ ೪೬

(ಲೀಲಾವತಿ, ೮-೩.)

---

[1] ಯೊಂದಂ (ಅ). [2] ಡಂಸೊಂಕಿ (ಕ), ಡಂಸೊಂಪಿ (ಖ). [3] ರ್ದ್ರಾರ್ದ್ರ (ಕ).

ಬೆದಱೆ ಮನಂ ವನಸ್ಥಳದೊಳೊಂದಿಭಮಿರ್ದುದು ಮೂರ್ಧಪಿಂಡಮು
ಲ್ಲದು ಶಿಖರಸ್ಥಳಂ ನಿಟಿಲಮಲ್ಲದು ಪಾಸಱೆ ಕರ್ಣತಾಳಮ ।
ಲ್ಲದು [1]ಚಳಪಕ್ಷ[1]ಸಂಹತಿ ವಂದಪ್ಪವಮಲ್ಲದು ನಿರ್ಝರಪ್ಲವಂ
ಮದಗಜಮಲ್ಲದಿಂದ್ರನೊಳಿದಿರ್ಚಿದ ನೀಲನಗೇಂದ್ರಮೆಂಬಿನಂ ॥ ೪೭

(ಪಂಪರಾಮಾಯಣಂ, ೧೦–೧೫೯ ; ಮು.ಪು, ೧೦–೮೮.)

ಒಡಗೊಂಡೊಯ್ದೊಂದು ಪದ್ಮಾಕರಹಿಮಜಲಮಂ ಕೊಂಡು ಮೇಲೊಟ್ಟಿ [2]ತಣ್ಪಂ[2]
ಪಡೆದಂಭೋಜಾತಪತ್ರಂಗಳ ಕೊಡೆವಿಡಿದಲ್ಲಿಂ ನಿಕುಂಜಸ್ಥಳಕ್ಕು ।
ಯ್ದುಡಿದಿತ್ತುತ್ಫುಲ್ಲಮಂ ಸಲ್ಲಕಿಯೆಳದಳಿರಂ ಪೇಚಕಸ್ಥಾನಮಂ ಕೈ
ದುಡುಕುತ್ತಾಘ್ರಾಣಿಸುತ್ತುಂ ನಸೆಗನುವಶಮಾಗಿರ್ದುದಂದೊಂದಿಭೇಂದ್ರಂ॥ ೪೮

(ಜಗನ್ನಾಥವಿಜಯಂ, ೧೬–೧೦.)

ಕುಡುತುಂ ಚಂದನನಲ್ಲಕೀ ಕಬಳಮಂ ತತ್ಪಲ್ಲವಾನೀಕದಿಂ
ತೊಡೆಯುತ್ತುಂ ಮೊಗಮಂ ನೆಬಲ್ಪಿಡಿಯುತುಂ ನಿಂದಬ್ಕಱಿಂ ಸೋಂಕುತುಂ ।
ಕಡೆಗಣ್ಣಿಂ ನಸುನೋಡುತುಂ ತುಡುಕುತುಂ ಚಿತ್ತೊಗ್ದ ವನಸ್ಥಾನಮಂ
ಪಿಡಿಯಂ ಕಾದಪುದಂದಮಾದ ನಸೆಯೊಳ್ ಕೂಡಿತ್ತು ಮತ್ತೊಂದಿಭಂ ॥ ೪೯

ಪಸಿದೊಡೆ ಸಲ್ಲಕೀಕಿಸಲಯಂಗಳನೊಯ್ಯನೆ ನೀಡಿ [3]ಮೆಯ್ಯ ತೀರ್ದ
ಮನೆದೊಡೆ[3] ಕೋಡೊಳಿಟ್ಟೊರಸಿ ನೀರ್ಗೆಳಸಿದೊಡೆ ತಂದು ನೀರನೂ ।
ಡಿಸಿ ನಸೆಯಿಚ್ಚೆಯಾದೊಡೊಡಗೂಡಿ ಬಬಲೊಡೆ ಕರ್ಣತಾಳಮಂ
ಪನರಿಸಿ ತನ್ನ ಕೈಪಿಡಿಯವೊಲ್ ಪಿಡಿಯಂ ಪಿಡಿದಿರ್ದುದೊಂದಿಭಂ ॥ ೫೦

(ಚಂದ್ರಪ್ರಭಪುರಾಣಂ, ೫–೬೪.)

ಕೊಳದೊಳ್ ಬಾಲಮೃಣಾಲನೀ ಕಬಳಮಂ [4]ಕಿಡ್ತೆ[4]ತ್ತಿ ಹಸ್ತಾಗ್ರದಿಂ
ತಿಳಿನೀರಂ ತೆಗೆದೊಯ್ಯನೂಡಿಸಿ ಪರಿಮ್ಲಾನಾನ್ಯದೊಳ್ ಶೀಕರಂ ।
ಗಳನೀಡಾಡಿ ಪೊದಳ್ದ ಪಚ್ಚೆಗೊಡೆಯೆಂಬಂತೆತ್ತಿ ಪಂಕೇಜಿನೀ
ದಳಮಂ ಬಾಳಕರೇಣುವಂ ಬಯಕೆಯೊಳ್ ಕೊಂಡಾಡುತಿರ್ದತ್ತಿಭಂ ॥ ೫೧

(ಲೀಲಾವತಿ, ೮–೪.)

ಪೊರೆದೊಡವಾಯ್ದ ನಿರ್ಝರದ ನಾದಮುಮಂ ಮದಸೌರಭಕ್ಕೆ ತ
ತ್ಕರಟತಟಾಂತದೊಳ್ ಸುಟಿವ ತುಂಬಿಯ ನಾದಮುಮಂ ಪುಳಿಂದಸೌಂ ।
ದರಿಯರ ಗೀತನಾದಮುಮನಾಲಿಸಿ ಸೋಲ್ತು ನೆಲಲ್ಲೊಲಿಲ್ದು ಸುಂ
ದರಗಿರಿಕಂದರೋದರದೊಳಿರ್ದುದೊಂದು ಮದಾಂಧಸಿಂಧುರಂ ॥ ೫೨

[1] ಪರತ್ರ (ಖ). [2] ತಾಪಂ (ಕ). [3] ನೀಡಿತಮ್ಮಸಪಕ್ಕೆ (ಖ). [4] ಕೊಟ್ಟೆ (ಖ).

ನವನೀರೇಜಮನೊಟ್ಟಿಕೊಂಡು [1]ವಿಕಚೋತ್ಕರ್ಷ[1]ನ್ಸ್ರವ[2]ಚ್ಚಂ[2]ದನ
ದ್ರವದಿಂ ನಾಂದು ಕರಾಂಬುಶೀಕರದೆ ತನ್ನಂ ತೊಯ್ದು ಕರ್ಪೂರರೇ ।
ಣುವನಾಂತೊಯ್ಯನೆ ನೆಮ್ಮಿ ಸಾಲತರುವಂ [3]ಶ್ವಾಸಾನಿಲೋತ್ಪುಷ್ಪ[3]
ಲ್ಲವದಿಂ ಬೀಸಿಕೊಳುತ್ತುಮಿರ್ದುದು ವಿಯೋಗಮ್ಲಾನವನ್ಯದ್ವಿಪಂ ॥ ೫೩

(ಲೀಲಾವತಿ, ೮–೮.)

ತುಂಬಿಗುರುಳಲೆಯೆ ಕೈಯಲ
ಗೆಂಬನಮಲರ್ಗೊಂಬು ಪೊಳೆಯೆ ಪಲ್ಗಳ ಛವಿ ಮಿಂ ।
ಚಂ ಬೀಱಿ ಬೇಱಿ ಸಮದ
ಸ್ತಂಬೇರಮಮೆಸೆದುದೊಂದು ಮ್ಯೆಲಾರನವೊಲ್ ॥ ೫೪

(ಲೀಲಾವತಿ, ೮–೪೯.)

ಪ್ರಸವದ್ಗ[4]ರ್ಭೋತ್ಥ[4]ದಿಂ ನೇರ್ಪಡುವ ಪಿಡಿಯನಬ್ಜಾಕರಕ್ಕೊಯ್ದು ನೀರೂ
ಡಿಸಿ ಮೆಯ್ಯಂ ಕರ್ಚಿ ಮೆಲ್ಪಂ ಪಿಡಿದು ಬಿಸಲತಾಗ್ರಂಗಳಂ [5]ಸೃಕ್ವ[5]ದೊಳ್ ನಂ ।
ಧಿಸಿ ಕೊಟ್ಟಂಭೋಜಪತ್ರೌಘದೆ ಕೊಡೆವಿಡಿದಾತ್ಮಾಂಗಮಂ ಕೂರ್ಮೆಯಿಂ ನೆ
ಮ್ಮಿಸಿ ತತ್ಕರ್ಣಾಗ್ರದಿಂ ಬೀಸಿದುದುಮುಪಸಮಾಯತ್ತಮತ್ತೊಂದಿಭೇಂದ್ರಂ ॥

ಪರಿಪರಿದು ನಲಿದು ಮೊಲೆಗಳ್
ತೊರೆದಿರೆ ತಣಿಯುಂಡು ಪಾಲ್ಗಳಂ ಪುಷ್ಕರದಿಂ ।
ಬರೆ ತೆಗೆದು ಮುರಿದು ನೋಡುವ
ಕರಿಣಿಯ ಮೆಯ್ಯೊಳ್ ತುಳುಂಕಿತೊಂದಿಭಕಳಭಂ ॥ ೫೬

(ಲೀಲಾವತಿ, ೮–೧೩.)

ಪಿಡಿಯೆ ಮೆಲಲ್ ಪಿಡಿ ಸೃಕ್ವದೊ
ಳಡಸಿದ ಪಲ್ಲವಕೆ ಪಲ್ಲಮಱಿ ನಿಳ್ಕುವುದುಂ ।
ಕಡೆಗಣ್ಣೊಳ್ ಕಂಡೊಂದಿಭ
ಮುಡಿದಿತ್ತುದು ಸಾರ್ದ್ರಸಲ್ಲಕೀಪಲ್ಲವಮಂ ॥ ೫೭

(ಕಾವ್ಯಾವಲೋಕನಂ, ೧೪೫.)

ಹರಿ ಭೇದಂಗೆಯ್ಯೆ ಬಿರ್ದೊರ್ಮೀಪನ ಪಡಿವೊಗದೊಳ್ತುಂತುಱಿಂ [6]ತೂಱಿಸುಯ್ಯಂ[6]
ಕರದಿಂದಾರಯ್ದು ಬಾಯೊಳ್ ತದುಕಿನ ತಳಿರಂ ತೂಂತಿ ರಕ್ತಾರ್ದ್ರಮುಕ್ತೋ ।
ತ್ಕರಮಂ ಮತ್ತಾತ್ತಯ್ದು ಪುಣ್ಣೆತ್ತಿಯೊಳೆ ಹುದುಗಿ ಬಾಷ್ಪಪ್ಲುತಾಲೋಕೆ ಶೋಕ್ತಾ
ತುರೆ ದುಃಖೋದ್ರೇಕದಿಂದಂ ಬಸೆ ಪರವಶೆ ಬೀಸಿತ್ತು ಕರ್ಣಾಗ್ರದಿಂದಂ ॥ ೫೮

(ಲೀಲಾವತಿ, ೮–೨೦.)

---

[1] ಕರೆವಾಪಪ್ರ (ಕ), ಕರಚೋಪಪ್ರ (ಖ). [2] ಸ್ಪಂ (ಖ). [3] ಶಾಸಾನಿಲಂ ನೂಸಿ (ಖ). [4] ರ್ಭಾರ್ಥ (ಕ). [5] ಶ್ರೋತ್ರ (ಕ). [6] ಕೋಟಿನೂರ್ಯಂ (ಖ).

ಪಿಡಿವೊಲೆಯೂಡಿ ಪಲ್ಲಮಱಿಯಂ ಕರಪುಷ್ಕರದಿಂ ಕಪೋಲಮಂ
ತೊಡೆದು ಲವಂಗಪಲ್ಲವಮನಿತ್ತು ತಮಾಲದ ಮೂಲವಿಂಡಿಯೊ ॥
ಳ್ಕೊಡುಕಿಸಿ ನೀಳ್ದುರೋದಕಮನೂಡಿಸಿ ಚಿತ್ತದೊಳಾದ ಮೋಹಮ
ಚ್ಚಿಡಿದಿರೆ ಬಿಚ್ಚತಂ ಕಟಿಪಲಾಱಿದೆ ನಿಂದುದದೊಂದು ತಾಣದೊಳ್ ॥ ೫೯

ಒಮ್ಮೆ ವನಸ್ಥಳೀಕಮಲಪಾಂಸುವನಿಂಬೆನೆ ಮೆಯ್ಯೊ[1]ಳೊಟ್ಟಿ[1]ಕೊಂ
ಡೊಮ್ಮೆ ಕರಾಗ್ರಮಂ ನೆಗಪಿ ಸಂಭ್ರಮದಿಂ ಪರಿದೊರ್ಮೆ ಶ್ಯೆಲಸಿಂ ।
ಧೂರ್ಮಿಗೆ ಬೆಚ್ಚಿ ತಾ[2]ಯ್ವಿಡಿ[2]ಯ ಸೋಂಕಿಲನೊಯ್ಯನೆ ಸೋಂಕಿ ನಿಲ್ದು ಮು
ಯ್ಯೊಮ್ಮೆಯುಮೊಪ್ಪಿ ತೋಱಿ ಕಳಭವ್ರಜಮಿರ್ಪುದದೊಂದು ತಾಣದೊಳ್ ॥ ೬೦

(ಜಗನ್ನಾಥವಿಜಯಂ, ೧೬–೧೦.)

ಉಡಿಯೆ ಕರಿ ಚಂದನದ ತಳಿ
ರ್ಗುಡಿ[3]ಯಿಂದಂ ನೆಲಕೆ[3] ಬಿಟ್ಟು ಪರಿವೆಳವಾವಂ ।
ಪಿಡಿಯೆ ಪಿಡಿ ಪಿಡಿಯ ಪೋತಂ
[4]ಪಿಡಿದೋಡಿದುದಂದು ಪೂತ್ಕೃತಕ್ಕಗಿದಗದೊಳ್[4] ॥ ೬೧

(ಲೀಲಾವತಿ, ೮–೧೫).

ಮಿಳಿರೆ ಕಿವಿಗಳ್ ತಮಾಲದ
ತಳಿರಂತಿರೆ ಪೊಳೆ[5]ವ್ [5] ಪವಳದಂತಿರೆ ಬಾಯ್ ಕಯ್[6] ।
ಗಳನೆತ್ತಿ [6]ಪಿಡಿ[6]ದು ಪೋರ್ದುವು
ಕಳಭಂಗಳ್ ನಲಿದು ನೋಡುತಿರೆ ತಾಯ್ವಿಡಿಗಳ್ ॥ ೬೨

(ಲೀಲಾವತಿ, ೮–೧೭.)

ರಸದಾಳಿಂಬದ ಬಿತ್ತೆಂ
ಬ ಶಂಕೆಯಿಂದದಱಿ ತಪ್ಪಲೊಳ್ ಸಿಂಗಂ ನೀ ।
ಳ್ದು ನಿಱುಂಬುಳಾಡಿದಾನೆಯ
ಪೊಸಮುತ್ತೆಂ ಮುಕ್ಕಿ ಚಪಳ ಕಪಿಕುಲಮುಗುಬ್ಬುಂ ॥ ೬೩

ಬಿಸಿಲೊಳರೆವಿರಿದ ಬಿದುವಿಂ
ನಸು ಕೆದಱಿದ ರಕ್ತಯುಕ್ತಮುಕ್ಕಾಫಳಮಂ ।
ರಸದಾಳಿಂಬದ ಬಿತ್ತೆಂ
ದೊಸೆದು ಕದರ್ದುಂಕವು ಶುಕಕುಲಂ ವನಗಜದಾ ॥ ೬೪

---

[1] ಳೋಲೆ (ಕ). [2] ಯ್ದೊಡೆ (ಕ). [3] ಯಂ ಥಯದಿಂದೆ (ಅ). [4] ಪಿಡಿದೋಡಿ ಪಿಡಿದೀಡಾಡಿದುದು ಪೂರತತ್ಕನಿರಾಗಳ್ (ಕ.ಖ). [5] ಯೆ (ಅ). [6] ಪರಿ (ಅ).

ದರಿಗೊಳೆ ಗಂಡಶೈಲದ ತಳಂ ತವುತಂದಿರೆ ದಂತಮಧ್ಯದೊಳ್
ಜರಿದುದು ಬಿರ್ದು ತೆತ್ತಿಸಿದವೋಲಿರೆ ಹೋತದ ನೆತ್ತಿ ಸುತ್ತಲುಂ
ಪಿರಿದು ಸಮುದ್ರಮಂ ರಘುಜನೋವದೆ ಕಟ್ಟುವ ಕಾಲದಂದು ಪೊ
ಕ್ಕಿರದೆ ಗಿರೀಂದ್ರನಂ ಬಲಮುಖಂ ನೆಱಿ ಪೊತ್ತವೋಲರ್ದುದೊಂದಿಭಂ ॥ ೬೫

ಗಗನಾಸ್ಫಾದಿತ ಗಂಡಶೈಲದೆಡೆಯೊಳ್ ನಿಂತಿರ್ದುದಂತೊಂದು ಮ
ತ್ತಗಜಂ ತದ್ಭಟಬಿಂಬಮಂ ದ್ವಿಪಮೆಗೆತ್ತ ತ್ಯುದ್ಧತಂ ಪಾಯ್ದು ಕೂ
ರುಗುರಂ ದಾಡೆಯುಮಾವಗಂ ಮುಱಿಯೆ ಸಿಂಗಂ ಭಂಗಮಂ ಪೊತ್ತು ನೊಂ
ದುಗ[1]ರಂದೆಯ್ತರೆ[1] ನಿರ್ವಿಕಾರ ರಭಸಂ ಪೇೞ್ವುದುಂ ಬನ್ನಮಂ ॥ ೬೬

ಮದಗಜಗಂಧದುದ್ದೆಸಕೆ ಭೋಂಕನೆ ಲಂಘಿಸಿ ಚಂದ್ರಕಾಂತಕೂ
ಟದ ಕೆಲದಲ್ಲಿ ನಿಂದಿಭ[2]ದುದ[2]ಗ್ರತನುಪ್ರತಿಬಿಂಬಮಂ ಮದೇ
ಭದ ತನುಗೆತ್ತು ಪಾಯ್ದು ಶಿಲೆಯಂ ಮೃತಮಾದುದಿಭದ್ವಿಷಂ ಬರ್ದುಂ
ಕಿದುದಿಭಮಂತೆ ನಿರ್ಮಲರ ಸನ್ನಿಧಿ ಮಾಬ್ಬುದಪಾಯನಾಶಮಂ ॥ ೬೭

(ಜಗನ್ನಾಥವಿಜಯಂ, ೧೬–೨೯).

ಉಗುವೆಂಟುಂಮದವೆತ್ತಿ ಕಚ್ಚೆ [3]ವಿಸರ[3]ಚ್ಚೀತ್ಕಾರಭೀರುಸ್ವ[4]ನಂ[4]
ಮಿಗೆ ಬಾ[5]ಯಂ[5] ಬಿಡೆ ಕಯ್ಯನಿಟ್ಟು ನುಗಿವನ್ನಂ ಗರ್ಜಿಸುತ್ತೆಯ್ದಿ ಮು
ತ್ತು[6]ಗ[6]ಳಿತ್ತಂ ಬಿದುವಿಂ[6] ಸ್ವರೌದ್ರರಸಬಿಂದುಶ್ರೇಣಿವೋಲ್ ಸೂಸೆ ದಂ
ತಿಗಳಂ ಸೀಳ್ದು ಸಿಱುಂಬುಳಾಡಿದುದದೊಂದುತ್ಕಂಠಕಂಠೀರವಂ ॥ ೬೮

(ಜಗನ್ನಾಥವಿಜಯಂ, ೧೬–೧೨).

ಪರಿಮೂತ್ರಂ ಭಿನ್ನಲಂಡಂ ಸುರಿವ ಮದಜಳಂ ಮೆಯ್ಯೊಳಟ್ಟಾಡೆ ಭೀತಾ
ತುರಚಿತ್ತಂ ಸುತ್ತಲುಂ ಪೆ[7]ಳ್ಪ [7]ಳಿಸೆ ನಯನಮುತ್ಕಂಪಿತಂ ಕುಂಚಿತಾಂಗಂ
ಪರಿದೇೞಾಕುಂಜಮಂ ಪೊ[8]ಕ್ಕ[8]ವೆಮಿಡುಕದೆ ನಿಂದಿತ್ತು ಮತ್ತೊಂದಿಭಂ ಸಾ
[9]ರ್ತರೆ ಕರ್ಣಾಭ್ಯರ್ಣಮಂ ವನ್ಯಮೃಗವಿಳಯನಿಷ್ಪಾದಕಂ[9] ಸಿಂಹನಾದಂ ॥ ೬೯

(ಮಲ್ಲಿನಾಥಪುರಾಣಂ, ೧೦–೯೨).

ಖರನಖರಂಗಳಿಂದುಗಿದು ಕೋಪದೆ ಸೀಳ್ದು ಸಿಱುಂಬುಳಾಡೆ ಕುಂ
ಜರ[10]ದು[10]ರುಕುಂಭಮಂಡಲಮನ[11]ಲ್ಲು[11]ಗುತಂದು ಕುಳುಂಪೆಗೊಂಡ ನೆ ?

---

[1] ಗಂದಂದಯರ (ಖ). [2] ಮನ (ಕ.ಖ). [3] ವಿಲಸ (ಖ). [4] ರಂ (ಆ.ಕ). [5] ಯೊಳ್ (ಖ). [6] ಗಳಂ ತದ್ಬಿದು (ಖ). [7] ಪ್ಪ (ಖ.ಬ). [8] ತ್ತೆ (ಕ.ಖ). [9] ರ್ದಿರೆಯುಂ ಕರ್ಣಾವತಾರಂ ಮೃಗಪತಿ ವಿಲಸಹ್ಲಾದಕಂ (ಕ.ಖ.ಬ). [10] ಗು (ಆ). [11] ಲೊ (ಖ).

ತ್ತರ ಹೊಸವಜ್ಜೆಯೊಳ್ ಕೆದಱು ಕಣ್ಗೆಸೆದಿರ್ದವು ರಕ್ತಸಿಕ್ತಕ್ಕೇ
ಸರ[1]ಪರಿಶೋಭಿ[1] ಕೇಸರಿಯ ಬೀರದ ಬಿತ್ತುಗಳಂತೆ ಮುತ್ತುಗಳ್ ॥ ೭೦

(ಮಲ್ಲನಾಥಪುರಾಣಂ, ೧೦–೯೪).

ಉಗಿಬಗಿಮಾಡು[2]ತ್ತೆ ಮದಾಂ
ಧಗ[2]ಜಮ[3]ನೆ[3]ಸೆದತ್ತು ರಕ್ತಕೇಸರವಿಸರಂ
ನಗಮಸ್ತಕದೊಳ್ ಸಂಧ್ಯಾಂ
ಶುಗಳಿಂ ರಂಜಿಸುವ ಚಂದ್ರನಂತೆ ಮೃಗೇಂದ್ರಂ ॥ ೭೧

(ಮಲ್ಲನಾಥಪುರಾಣಂ, ೧೦–೯೬.)

ಕೆದಱಿದ ಕೇಸರಂ ಕುಸಿದು ಪಿಂದೊಗೆದೊಡ್ಡಿದ ಕಂದವೇಱಿಕ
ಟ್ಟಿದ ಬಸಿಱಿತ್ತಿ ದೇಕಚರಣಂ ತೆಱಿದಾನನವಾಳ ಸುತ್ತಿಸು
ತ್ತಿದ ಕುಡಿವಾಲವೊಪ್ಪೆ ಕಿವಿಗಳ್ ಕಿಱಿ[4]ಪು[4]ತ್ತಿರೆ ಪಾಯ್ದು ದೇವಕೂ
ಟದ ಕಱುವಿಟ್ಟ ಕೇಸರಿವೊಲಿರ್ದುದು ಕೇಸರಿ ಕುಂಭಿಕುಂಭದೊಳ್ ॥ ೭೨

(ಲೀಲಾವತಿ, ೮–೨೧.)

ಕೊರಲೊಳ್ ತಳ್ತಗ್ಗಳಂ ತೊಂಗಲ ಪೊರಜೆವೊಲಿಂಬಾಗೆ ಬಾಲಂ ಬಳಂಕು
ತ್ತಿರೆ ಗಾತ್ರಂ ನೆತ್ತಿಯೊಳ್ ನಟ್ಟುಗುರುಗ್ತಿಯೆ ನಿಶಾತಾಂಕುಶಶ್ರೀಯನುದ್ಯ
ತ್ಕರಿಯಂ ಪಾಯ್ದೇಱಿ ಬಂಬ್ರವ್ಳರಿಯಿಸಿ ಗಿರಿಯೊಳ್ ಪೋರಿಸುತ್ತುಂ ಸರತ್ಕೇ
ಸರಿ ಕಾಸಾರಕ್ಕೆ ಕೊಂಡೊಯ್ದುಪುದಿದು ಮೃಗರಾಜಂಗೆ ಪೇಟಂದಮಲ್ತೆ ॥ ೭೩

(ಲೀಲಾವತಿ, ೮–೨೪.)

ಹರಿ ಕರಿಯಂ ತಗುಳ್ದು ಬರೆ ಸೂಕರನಾ ಕರಿಗಂಜಿ ಪೊಕ್ಕು ಬೆಂ
ಬರಿವರಿವಂತು ಪೆರ್ಚ್ಚಿದಿರನೆತ್ತಿ ದೊಡಂತದು ತಾಗೆ ಮೇಘಮಂ
ಕರಿ ಮುಱಿದೊತ್ತೆ ಸೂಕರನನಾ ಕರಿಯಂ ಹರಿ ಮೆಟ್ಟಿ ಸೀಳ್ದೊ [ಡಾ]
ಸುರಿದುವು ಮೇಘಜೀಭಜ ವರಾಹಜ ವೇಣುಜ ಮೌಕ್ತಿಕವ್ರಜಂ ॥ ೭೪

ಮಾರೆದಿಂದಾ ಸರ್ಪನಂ ಹಸ್ತಿಯೆ ಪಿಡಿ[5]ವುದುಮಾ[5] ಸರ್ಪನಂ ಹಸ್ತಿಯಂ ಕೇ
ಸರಿ ಕೋಪಾಟೋಪದಿಂ ಪಾಯ್ದು ಗಿಬಗಿವುದುಮಾ ಸರ್ಪನಂ ಹಸ್ತಿಯಂ ಕೇ
ಸರಿಯಂ ಸಿಂಹಾರಿಯೆಂಟುಂ ಪದ[6]ದೊಳ್[6]ಱಿ[7]ವುದುಂ[7] ಸರ್ಪನಂ ಹಸ್ತಿಯಂ ಕೇ
ಸರಿಯಂ ಸಿಂಹಾರಿಯಂ ತುಂಡದೊಳೆ ಪಿಡಿದು ಪಾಱಿತ್ತು ಭೇರುಂಡನಾಗಳ್ ॥ ೭೫

(ಜಗನ್ನಾಥವಿಜಯಂ, ೧೬–೧೪.)

---

[1] ಮೆಸೆದತ್ತು (ಖ). [2] ತ್ತು ಮುದಾತ್ತ (ಅ). [3] ದೆ (ಕ.ಖ). [4] ಸು (ಕ.ಖ).
[5] ದುದುವಾ (ಅ). [6] ದಿನಿ (ಅ). [7] ದುದಾ (ಅ).

ಮರೆಯನೆಡೆಗೆಯ್ದ ಪಾವಂ
ಧರಿಕಯ್ಯೊಳ್ ಸುತ್ತಿ ಪಿಡಿದ ಹಸ್ತಿಯನಂತಾ
ಕರಿರಿಪುವನೊಯ್ದ ಶರಭನ
ಶಿರಮಂ ಭೇರುಂಡ[1]ನೆತ್ತಿ[1] ಪಾಱುತ್ತಾಗಳ್ ॥

ಮರೆಯಂ ನುಂಗಿತ್ತು ಪೆರ್ಬಾವಜಗರಮನಿಭಂ ಕುತ್ತಿ ಸುತ್ತಿತ್ತು ಕೋಡೊಳ್ ಕರಿಯಂ ಪೊಯ್ದತ್ತು ಸಿಂಗಂ ಪಿಡಿದುದು ಶರಭಂ ಸಿಂಗಮಂ ಕೋಪದಿಂದಂ ಮರೆ ಪೆರ್ಬಾವಾನೆ ಸಿಂಗಂ ಶರಭಮಿನಿತುಮಂ ಕರ್ಚಿ ಭೇರುಂಡನಂದಂ ಬರದೊಳ್ ಪಾಱುತ್ತಿರಲ್ಕಚ್ಚರಿವಡೆ ತಲೆಯಂ ತೂಗಿದಂ ವಿಕ್ರಮಾಂಕಂ ॥ ೭೭

ತುಂಡಯುಗಂಗಳಿಂ ನೆಗಪಿಕೊಂಡೆರಡಂ [2]ಮಿಗೆ[2] ಪಾಱುಪೋಪ ಭೇ
ರುಂಡನ ತುಂಡ[3]ದೊಂದು[3] ಶರಭಂ ಜಗುಳ್ದೊಯ್ಯನೆ ಬೀಡೆ ಬೇಗದಿಂ
ಚಂಡಿಸಿ ಪಾಱಲೊಂದೆಱಗಲೊಂ[4]ದೆಬಲು[4]ತ್ತಿರೆ ವಕ್ರಮಾನಭೋ
ಮಂಡಲದಲ್ಲಿ ನಿಂದುದನಭೀಕ್ಷಿಸಿದಂ [5]ಕಲಸೋಯಿಬಲ್ಲಹಂ[5] ॥ ೭೮

(ಲೀಲಾವತಿ, ೮-೨೭).

ಒಟ್ಟಿ ಕೆಲದಂ[6]ತ[6]ಮಂ [7]ದೂ[7]
ತಟ್ಟಿದುದೆನೆ ದಿನಕರಂಗೆ ಬೆಟ್ಟದ ತಡಿಯಿಂ ।
ಮುಟ್ಟಿದುದಜಗರ ಮುಖದಿಂ
ಪುಟ್ಟಿದ ವಿಷವಹ್ನಿಯುಗುಳ್ದ ಕರ್ಬೊಗೆ ಮುಗಿಲಂ ॥ ೭೯

ಪವಿಯ ಮುಖಘಾತದಿಂ ಡೋ
ಣಿವ್ರೋದ ಪಪೆವುಣ್ಗೆ ಜಿಗುಳೆಯಂ ಬಿಟ್ಟವ್ರೊಲೆ ।
ಪ್ಪವುದಾರ ಗಹ್ವರಾಂತ
ರ್ನಿವಿಷ್ಟಜರದಜಗರಂಗಳಾ ಗಿರಿವರದೊಳ್ ॥ ೮೦

ಅಂಬರದೊಳ್ ಕಿನ್ನರಗೇ
ಯಂ ಬಳಯಿಸಿ ಮುದದಿನಲಸದಾಲಿಸಿ ಕಾ ।
ವಂಬೊಯ್ದವೆನಿಸಿ ತದ್ಗಿರಿ
ಯಂ ಬಳಸಿರ್ದ ಜಗರಂಗಳೇನೊಪ್ಪಿದುವೋ ॥ ೮೧

ನಗಲಕ್ಷ್ಮಿಯುಟ್ಟ ಹಳಮೈ
ಲಗೆಗಳನೊ[8]ಜ್ಜ[8]ರಮೆನಿಪ್ಪ ಮಡಿವಾಳಂಗಂ ।

---

[1] ಗರ್ಚಿ (ಖ.ಘ). [2] ನೆಱೆ (ಕ.ಖ). [3] ದಿಂದೆ (ಕ). [4] ದೆಳೆಯು (ಕ.ಖ).
[5] ಕವಿರಾಜಕುಂಜರಂ (ಅ). [6] ಶ (ಖ). [7] ಮಾ (ಬ). [8] ಜ್ವ (ಕ).

[1][ವಗೆ]ವಜ್ಜಿ[1]ಯೊಳ್ ತೆಗೆಬಿಸುಟವೊ
ಲಗತಟದೊಳ್ [2][ಪೋರಳು][2]ತಿಪ್ಪುವಜಗರನಿಕರಂ ॥ ೮೨

ಪುದಿದಡ[3]ವಿಯ[3] ಕಟ್ಟಲೆ ಶೂ
ಲದೊ[4]ಳಿಕ್ಕಿದೊಡಿಟಿದು[4] ಸೋರ್ವ ತಿಂಗಳ ಪೆಣ್[5]ನಂ ।
ದದೊಳ್[5]ರ್ದುದು ಕೆಟ್[6]ಗೊಕ್ಕು
ರ್ಬಿದ[6] ನೆಯ್ಯಿಂ ಜೇನಪುಟ್ಟಿ ಪೆರ್ಮರಗಾಡೊಳ್ ॥ ೮೩
(ಲೀಲಾವತಿ, ೬-೩೧.)

ಗಿರಿಪತಿಯುಂ ಪವಿಹತಿಗಗಿ
ದಿರಿದದ ಠಾಣಾಂತರಕ್ಕೆನೇರಿದ ಹಲವುಂ ।
ಹರಿಗೆಗಳೆನಲ್ಕೆ ಶಿಲೆಯೋ
ವರಿಯೊಳ್ ಹೆಜ್ಜೇನಹುಟ್ಟಿ ಸೊಗಯಿಸಿ ತೋರ್ಕುಂ ॥ ೮೪

ಪೊದಲೊಳುಮಾಮಹೇಶ್ವರನೆ ಜೇಡರ ರೂಪನೆ ತಾಳ್ದಿ ಬೇಂಟೆಯಾ
ಡಿದನಿನವಂಶಜರ್ ಪಲಬರುಂ ನೃಪರಟ್ಟಿಯೊಳಂತು ಬೇಂಟೆಯಾ
ಡಿದರಮೃತಾಂಶುವಂಶತಿಲಕರ್ ಮೃಗಯಾರ್ಥಿಗಳಾಗಿ ಬೇಂಟೆಯಾ
ಡಿದರೆನೆ ದೋಷಮಿಲ್ಲಱಿಯದರ್ ಪಟಿವರ್ ಮೃಗಯಾವಿನೋದಮಂ ॥ ೮೫

ವಶಮಕ್ಕುಂ ಬಲ [7]ಲಕ್ಷ್ಯ[7]ಸಿದ್ಧಿ ನಿಬಿಡವ್ಯಾಯಾಮ ನಿರ್ಬಂಧಕ
ರ್ಕಶಮಕ್ಕುಂ ತನು ಕೋಟ್ಯಿಗಂಗಳಟಿಪಿಂ ವಿದ್ವಿಷ್ಟಬಾಹಾಬಲಂ
ಕೃಶಮಕ್ಕುಂ ಮುನಿಭಸ್ತಪೋವನಮುಮಾ ಶ್ರೀರಕ್ಷೆಯಿಂದಂ ನೃಪ ?
ರ್ಗೆಶಮಕ್ಕುಂ ಗಡ ಬೇಂಟೆಯಂ ಬೆಸನಮೆಂದಾರೇಳಿಪರ್ ಲೋಕದೊಳ್ ॥ ೮೬

ಕತ್ತುರಿಮಿಗಮಂ ಪಂದಿಯ
ಮುತ್ತಂ [8]ಪೊಂಬು[8]ಲಿಯ ತೊಗಲನಾನೆಯ ಕೊಂಬಂ ।
[9]ಕಿತ್ತುದಸವಸದೆ ತೆಗೆತೆಗೆ
ದಿತ್ತುದುದಂ[9] ಪತಿಗೆ ಕಾಣ್ಕೆಗೊಟ್ಟಿಂತೆಂದರ್ ॥ ೮೭
(ಅನಂತನಾಥಪುರಾಣಂ, ೧೧-೩೮.)

ಮತ್ತಗಜಂಗಳ ಕೋಡಂ
ಕತ್ತುರಿಮಿಗಮಂ ಪೊದಳ್ದಿ ಪೊಂಬುಲಿದೊಗಲಂ ।

---

[1] ಹೊಗುವುರಿ (ಕ), ಹೊಗವರಿ (ಖ). [2] ಪೊಗಳು (ಕ), ಬೆಳಗು (ಖ). [3] ಗದ (ಕ.ಖ). [4] ಳಿಡಿದು (ಕ.ಖ) [5] ದಂದದಿನಿ (ಅ). [6] ಗುರ್ಕಿದ (ಅ). [7] ಲಕ್ಷ್ಮಿ (ಖ). [8] ಪೆರ್ಬು (ಬ). [9] ಕುತ್ತಱಿಸದಡಿಸಿ ಪಿಡಿದುಗಿದೆತ್ತಿದುವಂ (ಅ), ಕಿತ್ತುದಸವಸವೆ ತೆಗೆದುಗಿದೆತ್ತಿದುದಂ (ಬ).

ಚಿತ್ತಯ್ಪುದೆಂದು ಕಾಣ್ಕೆಯ
ನಿತ್ತು ಮೊಗಂಬಡೆದು ಧರಣಿಪತಿಗಿಂತೆಂದರ್ ॥ * ೮೮

ಪೊಲನಱಿವೆಂ ನೆಲನಱಿವೆಂ
ನೆಲೆಯಱಿವೆಂ ಮೃಗದ ಮೂಱು ವಿವರಮನಱಿವೆಂ ।
ಕೊಲೆಯಾಳುಮನಱಿವೆಂ ಪೇ
ಬಲದೇಂ ಬೇಂಟೆ[1]ಯದು[1] ನೋಡಲೆನ್ನೊಳೆ ಸಹಜಂ ॥ ೮೯

ಬಗೆಯಱಿದು ನಿಟ್ಟಿಪೆಂ ಪ
ಜ್ಜೆಗಳನುಗುರ್ಕೊಬಗು ತುಪ್ಪುಟೆಂಬವಱಿಂ ಪು
ಲ್ಮೃಗಮಂ ಬೆಳ್ಮೃಗಮಂ ಬ
ಲ್ಮೃಗಮಂ ಶಿಲೆಗುಹೆಯೊಳಾದೊಡಂ[2] ಪಿಡಿ[2]ದಪ್ಪೆಂ ॥ ೯೦

ದೇವರ ಬೆನದಿಂ ದೆಸೆ ನಾ
ಲ್ಗಾವುದ ಪರಿನಂಖ್ಯೆಯಾಗಿ ಬರೆದೆಂ ಪನ್ನಿ
ರ್ಗಾವುದ ಕಾಡಂ ತೆಕ್ಕನೆ
ತೀವಿರ್ದಪುವಲ್ಲಿ ಮೂಱು ಬೇಂಟೆಯ ಮೃಗಗಳ್ ॥ ೯೧

ತುಱುತುಱುನೆ ತಿಂಬ ತನುವಂ
ನೆಱಿಪಂದಿಗಳೊಱಿಸಿಕೊಂಡ ಧರದಿಂದೆತ್ತಂ
ತಱ್ಪಿಯದ ಕೋಡುಂ[3]ಗಲ್ಲುಂ
ಮು[3]ಱಿಯದ ಪೆರ್ಮರನುಮಿಲ್ಲಮಂತಾ ಕಾಡೊಳ್ ॥ ೯೨

ಪಟೆನವಿರೆಲ್ಲಂ ಮೆಯ್ಯಂ
[4]ತಟೆದುಂ[4] ಬೆಳ್ಮಗಗಳಾಗಿ ತಿಳಿದಿರ್ದುವು [5]ಮೇ[5]
ವಟೆಗಳೊಳಾಡುತ್ತುಂ ಪಿಂ
ಡಟಿಯದೆಯಾ ಬೆಳ್ಮಿಗಂಗಳುಂ ಪಂದಿಗಳುಂ ॥ ೯೩

ಅಕಳಿತನೆಂಬುದೊಂದು [6]ಎರೆ[6]ಯಿನ್ನೆವರಂ ಗುಱಿಯಾದುದಿಲ್ಲ ಕಾ
ರ್ಮುಕರವಿಮುಕ್ತ ಬಾಣದಿನೆರ[7]ಳ್ದ [7]ಳೆಯಗ್ಗಳದಿಂ ಮದಾಂಧಮೀ

---

* ಈ ಪದ್ಯವು (ಬ) ಪ್ರತಿಯಲ್ಲಿ ' ದೇವರ ಬೆನದಿಂ ' ಎಂಬ ಪದ್ಯವಾದ ಮೇಲೆ ಇದೆ.

[1] ಹೊಳೆ (ಖ.ಬ). [2] ಬಡಿ (ಕ.ಖ.ಬ). [3] ಲ್ಮುಟ್ಟಿ (ಬ). [4] ಕಟಿದುಂ ? [5] ಮೆಯ್ (ಕ.ಖ.ಬ). [6] ಕೇಳೆಱಿ (ಕ.ಖ). [7] ಳ್ದೆ (ಬ).

ಸಕಳ ಮೃಗಂ ಮನಕ್ಕೆ ಹರಿಣೀಯಮದಾಗಿರೆ ತೋರ್ಕುಮೆಯ್ದೆ ಮೂ
ಱು ಕರ ತಿರದ್ಧನೆಳ್ಕಿನಿತುವಂ ಬರುತುಂ ನಸಿಯಿಲ್ಲ ಬುದ್ಧನೊಳ್ ॥ ? ೯೪

ಬೇಂಟೆಗಳೊಳ್ ನಾನಾವಿಧ
ಬೇಂಟೆಗಳೆನಿತೊಳ[1]ವವು[1]ಳ್ಕೊಡಂ ನೃಪತಿಗೆ ಪೆ
ರ್ವೇಂಟೆ ಕಿಱುವೇಂಟೆಯಾವರ
ವೇಂಟೆಯೆನಲ್ ಮೂಱು ವೇಂಟೆ ಪೆಸರ್ವಡೆದಿಕ್ಕುಂ ॥ ೯೫

ಅರುಣಾಸ್ಯಂ ಲೋಲಜಿಹ್ವಾನ್ವಿತಸಿತರದನಂ ಬಭ್ರುನೇತ್ರಂ ಸುಹನ್ಮೇ
ದುರಕಂತಂ ಚೂಡಕಕ್ಷಂ ಕೃಶಲಸದುದರಂ ಪಾಂಸುನಿರ್ಮಾಂಸಪಾದಂ
ಗುರುದೀರ್ಘಾಪ್ಲುಷ್ಟಪೃಷ್ಠಂ[1]ದೃಡವಿಶಿಖನಖಂ ತುಚ್ಛಪುಚ್ಛಂ ಸುಲೋಮಂ
ಸ್ಥಿರಕರ್ಣಂ ಸಿಂಹನಾದಂ ಪವನಜವನನಾ ಶ್ವಾನನಾದ್ಯಾನದಾಮುಂ ॥ ೯೬

ಬಿಡುವುದು ತಡವೆನೆ ಮೊಲನಂ
ಪಿಡಿವುದು ಕಾಣ್ಬಳವಿಯೊಳಗೆ ನರಳಿಪ ಮರೆಯಂ ।
ತಡೆಗಡಿದು ಕರ್ಚಿ ಮೃಗಮಂ
ಕೆ[2]ಡೆಪಿಡಿ[2]ವಾ ನಾಯ್ಗಳರಸನಿಂತಿರವೇಡಾ ॥ ೯೭

ಮನಗಿ ಕನಲ್ದು ನಿನ್ನಣುಗಿನಂಕದ ನಾಯ್ಗಳರೆ ಪಜ್ಜೆಗಾಣ್ಬುದುಂ
[3]ಮಸ್[3]ವುದು ಕೂಡೆ ಕತ್ತಿಗಳನಾಗಳೆ ಸುಂಟಗೆಗೋಲ್ಗಳೆಲ್ಲಮಂ
ಬಸಿ[4]ವುದು ಕೋಪದಿಂದರೆಯುತಿ[5]ರ್ಪು[5]ದು ಸಂಬರಮಂ ಕ್ಷಣಾರ್ಧದಿಂ
ಪೊಸೆವುದು ಕಿಚ್ಚನಲ್ಲ ಪೆಱತೇನದು ಮಾ[6][ಣ][6]ದಿಳಾಧಿನಾಯಕಾ ॥ ೯೮

ಕೆಳರ್ದೊಡೆ ಸಿಂಗದಬ್ಬರಮರಲ್ದೊಡೆ ಮಾರಿಯ ಮೂರ್ತಿ ಕೋಪದಿಂ
ದಳುರ್ದೊಡೆ ಕಾಡಗಿಚ್ಚಿನ ಮೊಗಂ ಬಟಿಸಂದೊಡೆ ಕಾಲಮೃತ್ಯು ವೆ
ಗ್ಗಳಿಸಿ ಬಗುಳ್ದೊಡರ್ಣವನಿನಾದಮಳುಂಬಿಸಿ ನೀಳ್ದ ಗಂಟಲಿಂ
[7]ದೊಳ್[7]ರ್ದೊಡೆ ರಾಹುವಿಂದೊಗರನೆಕ್ಕಲವಂದಿಗೆ ತಕ್ಕುದುರ್ವಿಪಾ ॥ ೯೯

ಪೊರೆದವು ನೆತ್ತರಿಂದೆನಿಪ ನಾಲಗೆಯಂ ನಸುಕಿತ್ತು ಸಿಂಹಕೇ
ಸರದವೊಲಿರ್ದ ದಾಡೆಗಳ ಕಾಂತಿಯನಾಂತು ವರಾಹಘಾತಜ
ರ್ಝರತನುಗಳ್ನಿಜಶ್ರಮವನೊಯ್ಯನೆ ನಾಲಗೆ[8]ಯಿಂದೆ [8]ತೋಱುವಂ
ತಿರೆ ಬಟಿಸಂದುವಾ ಶಬರನಾಯಕರಂ ಕಿಱುನಾಯಕುನ್ನಿಗಳ್ ॥ ೧೦೦

(ಕಾದಂಬರಿ, ಪೂ. ಭಾ. ೧೬೭).

---

[1] ವುಮು (ಕ.ಖ). [2] ಡಪಿದ (ಬ). [3] ಬಿಸು (ಖ). [4] ಬಿನು (ಬ). [5] ರ್ದು (ಖ.ಬ). [6] ನ (ಕ.ಖ.ಬ). [7] ದಳು (ಕ.ಖ). [8] ಯಿಂತೆ (ಬ).

ಅತಿಕುಟಿಲಕೋಟಿಹಸ್ತ[1]ರ್[1]
ಕೃತಕೌಲೇಯಕ[ಬ]ಲಗ್ರಹರಾ ವನಮೃಗಸಂ ।
ತತಿಗೆ ದೃಡಕಠಿಣಕಾಯ[1]ರ್[1]
ಕೃತಾಂತದೂತರ್ಕಳಂತೆ ಬರೆ ಬೇಂಟೆಯವರ್ ॥ ೧೦೧

ಪದವಿಲ್ ಕಟ್ಟಿದ[2] ಗೇ[2]ಣ್ ಪೊಸ
ಪ್ಪೊದೆ ಪೆಗಲೊಳ್ ಕೋದ ಕೊಂಬು ಬಡಿಕೋಲ್ ಬಲೆ ಪಾ ।
ಶದ ವಿಶ್ಯಕದ್ರು ದೇಸಿಯ
ನೊದವಿಸಿ ನಡೆದತ್ತು ಬೇಂಟೆಗಾಱರ ತಂಡಂ ॥ ೧೦೨

ಕೋಸುವಲೆ ದೋಂಟಿವಲೆ ಬಾ
ಣಾಸನವಲಗಂಬು ಕಲ್ಲ ಕೈಪ್ರೊಡೆ ಗಾಳಂ ।
ಮಾಸಿದ ಮಯಣದ ಹಳೆಯೊರ್ರೆ
ಪಾಶದ ನಾಯ್ವೆರಸು ಒನಕೆ ಬೇಡರ್ ನಡೆದರ್ ॥ ೧೦೩

ಸೋಪಿನ ತೋಪಿನ ಪಳಹದ-
ಕೋಪಿನ ಪಾಳಿವದ ಗೋರಿವೇಂಟಗ ಮತ್ತಂ ।
ಚಾಪಪ್ರವೀಣರುದ್ಗತ
ಕೋಪರ್ನಡೆತಂದರಲ್ಲಿ ಮುಂದೆ ಪುಳಿಂದರ್ ॥ ೧೦೪

ವಿಕರಾಳಾಳೋ[3]ಕನೀಕ್ಷಜ್ಜ್ವಳಗತನಳಿನೀಶ್ಯಾಮನುದ್ಯಾಮ್ಯದೇಕಾ
ಸ್ಯಕರಾಗ್ರಂ ವೇಣುಬಾಣಾಸನವಿನಿಹಿತಕಕ್ಷಂ ಸಕೌಳೇಯಕಸ್ತ್ರೀ
ನಿಕರಂ ಹ್ರಸ್ವಾಸಿಧೇನುಸ್ಥಗಿತಜಘನನಂದೊಪ್ಪಿದಂ ದ್ವೀಪಿಲಾಂಗೂ
ಲಕೃತೋಷ್ಣೀಷಂ ಶಿರಾಳಂಕೃತದರವಿಕಸತ್ಕಿಂಕಿರಾತಂ ಕಿರಾತಂ ॥ ೧೦೫

(ಚಂದ್ರಪ್ರಭಪುರಾಣಂ, ೫–೫೭.)

ಕರ್ಬೊನ್ನಿಂದಂ ವಿಧಾತ್ರಂ ಸಮೆದನಿವನನೆಂಬೊಂದು ಕಾರ್ಕಶ್ಯದಿಂದಂ
ನರ್ಬಾಂಗಂ ಕಣ್ಗಗುರ್ವಂ ಪಡೆಯಲಡವಿಯಂ ಕೂಡೆ ಕಾಳಿಂದಿ [4]ನು[4]ತ್ತಂ
ಪರ್ಬತ್ತೆಂಬಂತೆ ನೀಳೋತ್ಪಳ [5]ರುಚಿರತರ[5] ಶ್ಯಾಮದೇಹಾಂಶು ಪರ್ಬ
ಲ್ಕೊರ್ವಂ ಬಂದಂ ಪುಳಿಂದಪ್ರಕರಬಹುಳಸೇನಾಪರೀತಂ ಕಿರಾತಂ ॥ ೧೦೬

(ಕಾದಂಬರಿ, ಪೂ. ಭಾ. ೧೬೫.)

---

[1] ಂ (ಕ.ಖ.ಬ). [2] ನೇ (ಖ.ಬ). [3] ಳರ್ಲೋ (ಖ). [4] ಯಿ (ಕ.ಖ.ಬ).
[5] ದಳರುಚಿರ (ಅ.ಖ).

ನಡೆ[1]ಸಲ್ [1]ಬಿಲ್ವಿಡು ಸಾ[2]ರ್ದ[2]ಮರ್ಚು ಮರನಂ ಬಂದೇ[3]ಱು ಕೈದೋಱು ಬಿ
ಲ್ವಿಡಿಸುತ್ತಂ ಬಲಿ ಸೋಂಕವುಂಕು ಕೆಡು ಕಯ್ಯೊಳ್ ನಿಂದು ಕೀಳ್ನಾಯ್ಗಳಂ
ಬಿಡು ಪಾದಾರ್ದೆಸೆನುತ್ತೆ ತಮ್ಮೊಳದಟಿಂದಾ ಬೇಡರೋರೊರ್ವರಂ[3]
ನುಡಿವೊಂದಬ್ಬರಮುರ್ಬಿತಾಗಳೆನಿಸುಂ ವಿಂಧ್ಯಾಟವೀ ಮಧ್ಯದೊಳ್ ॥ ೧೦೭
(ಕಾದಂಬರಿ, ಪೂ. ಭಾ. ೧೫೯).

ಇದೆ ಪರ್ವಿತ್ತು ಮತಂಗಜೋ[4]ಚ್ಚ[4]ಳಿತ ಕಂಜಾಳೀ ರಜಸ್ಪೋ[5]ತಮಿಂ
ತಿದೆ ತೀವಿತ್ತು ವರಾಹಸಂಕುಳದಳನ್ಮುಸ್ತೋ[5]ತ್ಕರಾಮೋದಮಿಂ
ತಿದೆ ಬಂದತ್ತಿಭಯೂಥನಾಥದ[6]ಳಿತೋ[6]ದ್ಯತ್ಸಲ್ಲಕೀ[7]ಗಂಧ[7]ಮಿಂ
ತಿದೆ ತೋಱಿತ್ತು ಮದಾಂಧ[8]ಸೈರಿಭಖುರಪ್ರೋದ್ಧೂತ[8]ರೇಣುವ್ರಜಂ ॥ ೧೦೮
(ಕಾದಂಬರಿ, ಪೂ..ಭಾ. ೧೫೪.)

ಬರೆದಪೆ ನೆತ್ತರಿನೆಂಬಂ
ತಿರೆ ಪಜ್ಜೆಗಳೆಸೆಯೆ ನಾಂದು ನೆತ್ತರೊಳೆತ್ತಂ
ಕರಿ ಮಸ್ತಕ[9]ದಳಮುಕ್ಕೋ
ತ್ಕರಮಿಂತಿದೆ ತೋಱಿದತ್ತು ಮೃಗಪತಿರಾಜಂ[9] ॥ ೧೦೯
(ಕಾದಂಬರಿ, ಪೂ. ಭಾ. ೧೫೮).

ನನುಮೆಲ್ದಚ್ಚಗಱುಂಕೆ ಸೂಸುತಿದೆ ಪೋದತ್ತಿಲ್ಲಿ ನಾನಾಮೃಗಂ
ಮುಸುಱುತ್ತಿರ್ಪುದು ಗುಂಗುರೀಯೆಡೆಯೊಳಂ ಪೋದತ್ತು ಸೊಕ್ಕಾನೆ ಕೋ
ಳ್ಗೆನ [10]ಱಿಲ್ದಿರ್ಪುವು ಪೋದವೀಯೆಡೆಯೊಳಂ[10] ಪೆರ್ಬಂದಿಗಳ್ ನೆತ್ತರಿಂ
ಬಸಿಯುತ್ತಿರ್ಪುದು ಪೋದವಿಕ್ಕಿ ಮಱಿಯಂ ಪುಲ್ಪಚ್ಚೆಯೊಳ್ ಪುಲ್ಲೆಗಳ್ ॥ ೧೧೦
(ಕಾದಂಬರಿ, ಪೂ. ಭಾ. ೧೫೭).

ರುರುಗಣಮಿತ್ತಲಿತ್ತ ವಿಚರನ್ಮೃಗಸಂಕುಳಮಿತ್ತಲಿತ್ತ ಸೂ
ಕರಚಯಮಿತ್ತಲಿತ್ತ ವನಸೈರಿಭಸಂಕುಳಮಿತ್ತಲಿತ್ತ ಕುಂ
ಜರಕುಳಮತ್ತಲಿತ್ತ [11]ಶಿಖಿಮಂಡಲವಿಸ್ತರ[11]ಮಿತ್ತಲಿತ್ತ ಕೇ
ಸರಿರವಮಿತ್ತಲಿತ್ತಮೆನುತಿರ್ಪ ರವಂ ನೆಗಟ್ಟಿತ್ತು ಸುತ್ತಲುಂ ॥ ೧೧೧
(ಕಾದಂಬರಿ, ಪೂ. ಭಾ. ೧೫೫).

---

[1] ಸಲ್ನ (ಅ). [2] ರ್ಚ ಮರ್ಚು (ಅ), ರ್ದುಮೆಚ್ಚು (ಬ). [3] ಱು ಬಿಲ್ವಿಸುತುಂ ಜಡಿ ಸೋಂಕೌಂಕು ತೆರಳ್ಚು ನೋಡು ಕಡು ಗೆಯ್ಯೊಳ್ ನಿಂದು ಕೀಳ್ನಾಯ್ಗಳಂ ಬಿಡು ಕೋಲಂ ತುಡು ಸಾರ್ದುಪೊರ್ದಿನೆನುತಂ ತಂತಮ್ಮೊಳೋರೋರ್ವರೋಳ್ (ಅ). [4] ತ್ಕ (ಕ.ಖ.ಬ). [5] ರಂನೇಚಲಂ (ಖ.ಬ). [6] ಳನೋ (ಖ.ಬ). [7] ದಂಡ (ಖ.ಬ). [8] ಸ್ಯೆನ್ಯ . . . ಭಕರದ್ವಸ್ಪೃಕ (ಖ.ಬ). [9] ಮೌಕ್ತಿಕದಂತುರವೀಧಿಯ ತೋಱಿದಪುದು ಮೃಗಪತಿ ಮಾರ್ಗಂ (ಅ) [10] ಜಾಗಿರ್ಪುದು ಬಜ್ಜೆ ಪೋದವಿದಱೊಳ (ಕ.ಖ.ಬ). [11] ವೆಶಿಖಂಡಿಕುಲಸ್ವನ (ಅ.ಕ).

ಪರಿಬೆಂಬತ್ತೆಯ್ದು ನಾಯಂ ಬಿಡು ನಡೆಯಿ[1]ಸು ದೀಹಂಗಳಂ ಪಾಶಮಂ[1] ವಾ
ಗುರೆಯಂ ಬೀಸಾಂಕೆಗೊಳ್ಳಾರ್ದೆಸು ಪೊಣರ್ದಿಱು ಕೊಲ್ಲೆಂಬ ಘೋರಸ್ವನಂ ಪೊ
ಣ್ಮಿರೆ ವನ್ಯಪ್ರಾಣಿಗಳ್ಗಂತಕನ ಪಡೆಯೆ ಧಾಳಿಟ್ಟಪ್ಪೋಲ್ ಬೇಡರಿರ್ದರ್
ತರುಶಾಖಾಳೀವನಾಂತಸ್ಥಿಮಿರಮೆ ಶಬರವ್ರಾತಮಾಯ್ತೆಂಬಗುರ್ವಿಂ ॥ ೧೧೨

(ಜಗನ್ನಾಥವಿಜಯಂ, ೧೬-೧೫).

ಪುಲಿಯಿದೆ ಸಿಂಹವಜ್ಜೆಯನೆ ಕಾಣಿಸು ಕ್ರೂರಮೃಗಕ್ಕೆ ಮಾರ್ಗಮಂ
ಬಲವೊಗಿಸಂಗಪನ್ನಗನ ಶಂಕಿಸದೋಲ್ ಬಿಡು ನಾಯಕುನ್ನಿಯಂ
ಬಲುಸರಳಿಂದೆ ನೋಡಿಯೆಸು ಪಕ್ಕಿಗೆ ಪಾಶವ ಪಾಸು ತಂಬೆಲ
ರ್ಗೊಲಿದಿರಾಗು ಶಾಂತಮೃಗಮೆಬ್ಬಿಪಿ ಪ್ರೋಪ್ರೋಡೆ ಪ್ರೋಗಲೀಯದಿರ್ ॥ ೧೧೩

ನಡು ಗಿಡುವಿಂಗೆ ಸಾರ್ವೆರಳೆಯಟ್ಟಿದೊಡೊತ್ತಿಗೆ ಪೋಗಿ ಸಂದಿಯಿಂ
ದಿಡು ಕೆಲನೋಡುವಂತಿರದೆ ಬಂದೊಡೆ ಹಂದಿಯನೊಂದಿ ನಾಯ್ಗಳಂ
ತುಡುಕಿಸಿ ಕೋಲಿನಿಂದಿಡು ಘನಾಸ್ಯವದಕ್ಷರವಕ್ಷಸಂಧಿಯಂ
ಮಿಡುಕದೆ ತೀವಿ ನೀನಿಸುವುದೆಂಬ ವನೇಚರರಾವಮೆತ್ತಲುಂ ॥ ೧೧೪

ತುಡು ಕೋಲಂ ಹರಿಣಂಗೆ[2] ಪಾಸು[2] ಬಲೆಯಂ ಕೋಕಂಗೆ ನೀರ್ದಾಣಮಂ
ಬಿಡು ಪೆರ್ಬಂದಿಗೆ ನಾಯ ಬಾಯ ಮೊಲನಂ ಕೈಗುತ್ತಿ[3] ಕೊಲ[3] ಕಂಡಿಯೊಳ್
[4]ಕೆಡೆಕುತ್ತೆಟ್ಟಿಸು[4] ಮೇಲೆ ಪಾಯ್ವ ಪುಲಿಯಂ ಪುಲ್ಗಾ[5]ನೊ[5]ಳಾ [6]ಪ್ಪೋಪ್[6] ಪೇ
ರುಡುವಂ ಸೋವುವಡಂಗಿಯೆಯ್ದು ಸರುವಂ ಕಟ್ಟಿಟ್ಟು ನಾರಂಗಮಂ ॥ ೧೧೫

ಮರೆ ಹರಿದಾಡೆ ಹಂದಿ ಹರಿಗೆಟ್ಟಿರೆ ಪೆಬ್ಬುಲಿಯುರ್ಬುಗುಂದೆ ಕೇ
ಸರಿ ಮುರಿದೇಱೆ ಕಾಯ್ದು ಕರಿ ಮೇಲ್ನುಟಿದಾಲಿಸೆ ಪುಲ್ಲೆಪಿಂಡು ಗೋ
ಣ್ಮಿರಿದು ಬಿಗುರ್ತು ನೋಡೆ ಕಡವುಂ ಕಡವುಲ್ಲೊಳಡಂಗಿ ಝೊಂಪಿಸು
ತ್ತಿರೆ ಭರದಿಂದೆ ಬೇಂಟೆವಱೆಯುಬ್ಬರಮಬ್ಬರಮಾಯ್ತರಣ್ಯದೊಳ್ ॥ ೧೧೬

ಹುಲ್ಲೆಯ ಹಿಂಡು ಮುಲ್ಲಣಿಸಿ ತಲ್ಲಣಗೊಂಡವು ಬೊಬ್ಬೆಯುಬ್ಬರ
ಕ್ಕೊಲ್ಲದೆ ಮೇಪುಗಾಡೊಳಿರದೋಡಿತು ಪೆರ್ಮರೆ ಸೊಕ್ಕಿದೆಕ್ಕಲಂ
ಬಿಲ್ಲಿಗೆ ಸಾರ್ದುದೆಬ್ಬಿಸುವ ಪೆಬ್ಬುಲಿ ಝೊಪ್ಪವನೊತ್ತುಗೊಂಡವ
ಲ್ಲಲ್ಲಿ ಮೃಗಂಗಳುಂ ಮಿಡುಕುಗೆಟ್ಟಿರ್ತಿರ್ದುದು ಕೂಡೆ ಬೇಂಟೆಯೊಳ್ ॥ ೧೧೭

---

[1] ಯಿಡಿವಗ್ಗಂಗಳಂ ಸುತ್ತಿತಾ (ಖ.ಬ). [2] ಸಾರ್ಚು (ಕ). [3] ನೊಳ್ (ಕ).
[4] ಡೆಕುತ್ತೆ ಬೀಸು (ಕ). [5] ಡೊ (ಖ). [6] ಯೇಱು (ಬ).

ಇಡು ಜೇನೊಳ್ ಕಿಚ್ಚನಾ ಬಪ್ಪುದೆ ಮರೆ ನರುವಂ ಕಟ್ಟು ಪೊಯ್ಯನ್ನೆಗಂ ಪೇ
ರುಡುವಂ ನಾಯಂ ಮೃಗಕ್ಕಂ ಬಿಡು ಬಿಡು ಮೊಲನಂ ಸೇಡು [1]ಗೋಲಿಂದ[1]ಲಂಬಿಂ
ಬಿಡು ನಾರಂಗಕ್ಕೆ ಜೊಪ್ಪಂಬುಗಲೆಡೆಗೊಡದಿರ್ ಪಂದಿಯಂ ನೀನೆನುತ್ತೊಂ
ದೆಡೆಯೊಳ್ ಸಂಧಾನಮಾಗಿರ್ದುದು ಬಹುಮೃಗಯಾಕ್ರೀಡೆಯಿಂ ವ್ಯಾಧಯೂಥಂ ॥

ನರಳಿಪ ಹುಲ್ಲೆ ಪಾಯ್ವ ಪುಲಯೋಡುವ ಪೆರ್ಮರೆ ದಾಡೆಗುಟ್ಟಿ ಬೆ
ಳ್ಮೊರೆ ಸುರಿಸುತ್ತೆ ಕೆಕ್ಕಳಿಪ ಸೂಕರಮುರ್ಬಿಪ ಕಾಡಕೋಣನ
ಬ್ಬರಿಪ ರವಕ್ಕ ಕೆಂಗಲಿಪ ದೊ[2][ಡ್ಡ]2 ಬಿಲಂಗಳೊಳೋಡಿ ಪೊಕ್ಕು ಮೈ
ಗರೆವುದು ನೂಳಿವಪ್ಪ ಮೊಲಗಳ್ ನೆರೆದೊಪ್ಪಿದುವಲ್ಲ ಬೇಂಟೆಯೊಳ್ ॥ ೧೧೯

ನುಟ್ಟುರೆಯ ತೆಱದೆ ನುಟಿವುದು
ನೆಟ್ಟನೆ ಪೊಱಮಟ್ಟೊಡಟ್ಟುವುದು ಮಗುಟ್ಟೊಡೆ ಬೆಂ
ಗೊಟ್ಟುದು ಮುಟ್ಟುವ ಪದದೊಳ್
[3]ನೆಟ್ಟನೆ[3] ತಿರುಪಿತ್ತು ನಾಯನಂದೊಂದು ಮೊಲಂ ॥ ೧೨೦

[ಕೊಂಡುದು] ಕೊಂಡುದಂತದುವೆ ನಾಳುವನಲ್ಲದು ತಪ್ಪಿತತ್ತಲಾ
ಕೊಂಡುದು ಜಾಯಿಲಂ ಮಗುಬ್ದು ಪೋಪುದನತ್ತಿರದೆಯ್ದೆ ಕೊಂಡುದಾ
ಕೊಂಡುದು ನಮ್ಮ ಪುತ್ಥಳಿಯೆನಲ್ ಕಿಱುನಾಯ್ಗಳ ಬಾಯ್ಗಳಿಂದೆ ನೂ
ಲುಂಡೆಯನಿಟ್ಟವೋಲ್ [4]ಮಿಡುಕು[4]ತುಂ ಪರಿದಾಡಿದುದೊಂದು ಪೆರ್ಮೊಲಂ ॥

ಅಳವಿಯೊಳಿರ್ದ ಪೆರ್ಮೊಲನನಾ ನೃಪನಿಟ್ಟೊಡೆ ಸೆಂಡುಕೋಲ ಬೆ
ಳ್ಪೊಳಗೊಳಪೊಯ್ದು ಸುತ್ತುವೆಡೆಯೊಳ್ ಬಿಡು ತಾಗುಗುಮೆಂದು ಭೀತಿಯಿಂ
ಜಳಧರಮಾರ್ಗದಿಂದಿಟಿದು ಬಿರ್ದು ಮೊಲಂ ಬೆರಸೊಂದುವಿಂದು ಮಂ
ಡಳದವೊಲಿರ್ದುದೆಂದೊಡದನೇವೆಸಗೊಂಡಪೆ ಬೇಂಟೆಯೊಪ್ಪಮಂ ॥ ೧೨೨

ವನಜಜನಂಚೆ ಗೌರಿಯುಡುವಂಬುಜನಾಭನ ಪರ್ದು ಕಾರ್ತಿಕೇ
ಯನನವಿಲಿಂದುಬಿಂಬದ ಮೊಲಂ ಕಲಿಮೂಕವರಾಹನಗ್ನಿಮಿ
ತ್ರನ ಹರಿಣಂ ವಿನಾಯಕನ ಮೂಷಕ ಕಾಲನ ಕೋಣ ವಿಂಧ್ಯವಾ
ಸಿನಿಯ ಮೃಗಾರಿ ನಾಯಿಗರಿದಲ್ಲವು ನಾಹಸಮಲ್ಲದೇವನ ॥ ೧೨೩

ಪರ್ಪಡಿಗೆ ಸೋಗೆ [5]ಗಿ[ಂ][5]ಡುಗೊರಳಿಂ ಶಿವಿ ಮುಂದೆಱಗಿಪ್ಪಿನಂ ತೃಷಾ ?
ಪರಿವೃತನಾಗಿ ನೀರ್ಗುಡಿಯುತಿರ್ದುದನೊಯ್ನೆ ಬಂದು ಭೂತಳೇ
ಶ್ವರನಿಸೆ ಭೋಂಕನುಚ್ಚಳಿಸೆ ಪಾಱುವ ಸೋಗೆಯ ಕಂಠನಾಳದಿಂ
ಸುರಪತಿ ಚೋದ್ಯಮಪ್ಪಿನೆಗಮೊರ್ಮನೆ ನೆತ್ತರ ನೀರಧಾರೆಯೊಳ್ ॥ ೧೨೪

---

[1] ಜೇಂಗೋಲ (ಕ.ಖ). [2] ಡ (ಕ.ಖ.ಬ). [3] ತೊ (ಬ). [4] ತಿಣುಕು (ಖ.ಬ).
[5] ಗೀ (?).

ಓರಂತೆ ಬಂದು ಹರಿಣಂ
ನೀರುಣಿತಿರೆ ಕಂಡು ಭೂಪನಿಸ[1]ಲಬ್ಬರಿಗಂ[1] ।
ಕಾರಮೊಗೆದಂತೆ ನೆತ್ತರ
ನೀರುಂ ಬೆರಸೊಡನೆ ಸುರಿಯಲರ್ಮೆಯ್ಯಿಂದಂ ॥ ೧೨೫

ಬಟಿಯಂ ಬಂದೆಚ್ಚಡೆ ಪ
ಣ್ಗಳ ಧರದಿಂ ಕೊಂಬು ಪಱಿದುದೆನೆ ತುಱುಗಿ ತಳಿ ।
ರ್ತೆಳಮಾವಿನ ಸೆಳೆಗೊಂಬಿಂ
[2]ದಿ[2]ಳೆಗಿಟಿಯಲ್ ಪಾರ್ವ ನವಿ[3]ಲನಿ[3]ಱಿವ ಬೆಡಂಗಂ ॥ ೧೨೬

ಕರಡಿಗೆ ಕೇಶಮಂ ಕೆದಱಿ ಪುಲ್ಲೆಗೆ ಮೇಲುದನೆತ್ತೆ ಬಪ್ಪ ಬೆ
ಳ್ಳೆರಳೆಗೆ ತಾಂ ಬೆರಲ್ಮಡಿಯೆ ಪೆರ್ಬುಲಿಗೊಯ್ಯನೆ ಕಚ್ಚೆ[4] [ದಾ][4]ಡೆಯಂ ।
ಮರೆಗಿರದಂಶಮಂ ಮುಗಿಯೆ ಪಂದಿಗೆ ಬೆನ್ನನೊಡರ್ಚಿ ಬಾಗೆ ಚ
ಚ್ಚರಮಱಿವೆಚ್ಚನಂದು ಜವ[5]ನಗ್ಗಳೆ[5]ಯಾತನ ಸನ್ನೆಯಿಂ ನೃಪಂ ॥ ೧೨೭

ಬೆರಸಿದ ಗಾಳಿಗೂಡಿ ಪೊಸತಾಗಿರೆ ಬೆಂಬಟಿಗೊಂಡು ಕಂಡು ಕಾ
ತರಿಸುವ ದಿಟ್ಟಿ ಕೆತ್ತುವೊಡಲೆತ್ತಿದ ಕಂಠಮರಲ್ದ ಕರ್ಣಮು ।
ಬ್ಬರಿಸುವ [6]ಮೈನವಿರ್[6] ಪನಿವ ಮುಂಬದಮೊಪ್ಪಿರೆ ಹುಲ್ಲೆಗಾಸೆಗೆ
ಯ್ವೆರಳೆಯ ಭಾವಮಂ ನೃಪತಿಕಂಡಿಸಲಾಱಿದೆ ನಿಂದು ನೋಡಿದಂ ॥ ೧೨೮

ಅದೆ ಹೋಯಿತ್ತಿಲ್ಲಿ ಸಿಕ್ಕಿತ್ತೆಸು[7]ವ[7]ಳವಿಗೆ ಗೆಂಟಾದುದಲ್ತಲ್ತು ಗೆಂಟಾ
ದುದೆ ಪೋದಪ್ಪುದಿನ್ನೆಚ್ಚಪೆನೆನುತೆ ನೃಪಂ ತೀವಿ ತೊಟ್ಟಾ[8]ರೆ [8]ತಕ್ಕೈ ।
ಸಿದ ಮುಂಗಾಲ್ ಪೊಕ್ಕ ಪಿಂಗಾಲ್ ನೆಗೆದುಡಿಗಿದೊಡಲ್ ಬಿಟ್ಟ ಕಣ್ ನೆಟ್ಟ ಕರ್ಣಂ
ಪದವಿಟ್ಟೈದಾಱಿನೇಱಂ ಸರಳಿಸಿದುದು ಭೀತಾಂತರಂಗಂ ಕುರಂಗಂ ॥ ೧೨೯

ಕೀಲಿಸಿ ಕಂಧರದೊಳ್ ಭೂ
ಪಾಲಕನಿಡೆ ನೊಂದು ಪಂದಿ ತಿರುಗುವ ಪದದೊಳ್ ।
ಕೇಲಂ ಮಾಡುವ ತಿಗುರಿಯ
ಕೋಲಂತೆವೊಲಿರ್ದುದಿಟ್ಟಿ ತನು ಕೆಡೆವಿನೆಗಂ ॥ ೧೩೦

ದಿಟ್ಟಿಸಿ ನೋಡುತುಂ ನಡೆವ ನಾಯಿಗಳಂ ತಗುಳುತ್ತುಮೆಚ್ಚಕೋ
ಲ್ಗಟ್ಟುತುಮುಗ್ರರೂಪದೊಳೆ ಬರ್ಪುದನಂತಸಹಾಯಶೂರನಾ ।

---

[1] ವಿಬ್ಬರಗಿಂ (ಕ). [2] ಗಿ (ಖ), ದಿಳೆಗಿಟಿದವೋಲೋರ್ವನಿಱಿದನವಿಲಬೆಡಂಗಂ (ಬ). [3] ಲಗಿ (ಖ). [4] ದಂ (ಕ.ಖ.ಬ). [5] ನುಗ್ಗಳಿ (ಖ.ಬ). [6] ಮೆಯ್ಯನೀರ್ (ಬ). [7] ನ (ಕ). [8] ಲ (ಕ).

ರ್ದಿಟ್ಟಿಯೊಳಾಲಿಸಿಟ್ಟಡಿರದಂತದು ಕಂಧಮನುರ್ಚಿ ಧಾತ್ರಿಯೊಳ್
ನಟ್ಟಿರೆ ಕಂಭದೊಳ್ ಕಳಭಮಿರ್ಪವೊಲಿರ್ದುದು ಸೊಕ್ಕಿದೆಕ್ಕಲಂ ॥ ೧೩೧

ಒತ್ತಿನೊಳಿರ್ದು ಕೈಪಱುದ ದಂತಿಯವೋಲ್ ಕಡುಪಿಂದೆ ದಾಡಿಗು
ಟ್ಟುತ್ತಿರೆ ನೋಡಿ ಕಂಡಿರದೆ ಚಾಪಮನೋಪಳ ಕೈಗೆ ನೀಡಿ ನೀ ।
ನತ್ತಿರು [1]ಎಂ[1]ದು ಸಾರ್ದಲಗನೊಯ್ಯನೆ ಕಿತ್ತಡೆ ಕಂಡು ದಿಂಡುವಾ
ಯ್ದೆತ್ತಿದ ಹಂದಿಯಂ ಮುಳಿದು ಕುತ್ತಿದನೊತ್ತಿದನಾ ವನೇಚರಂ ॥ ೧೩೨

ಮುನಿಸಿಂ ಬೊಬ್ಬಿಕ್ಕುದುಬ್ಬಿಯಬ್ಬರಿಸಿ ಕಾಯ್ದಟ್ಟಿಟ್ಟಿಗಳ್ ತನ್ನ ಮೈ
ಗಿನಿಸಂ ಮಟ್ಟಿಸಲಾಗದೆಂಬನೆಗಮತ್ಯಾಭೀಳ ದೇಹಂ ಮಹಾ ।
ಶನಿದಂಷ್ಟ್ರಂ ಘನಘೋರ ಘುರ್ಘುರರವಂ ಬಲ್ಪಂದಿ ಬಲ್ಪಂದಿಕಾ
ಱನವೋಲ್ ಪಿಂಡೊಡೆದೊಂದೆ ಪೋಯ್ತು ಮಲೆದಂತಿಂತಿಕ್ಕೆಲಕ್ಕೆಕ್ಕಲಂ ॥ ೧೩೩

ಇದು ನೀಲಾಚಲಶೃಂಗಮಲ್ಲ ದಿಟದಿಂ ಕಯ್ಯಿಲ್ಲದುಗ್ರೇಭಮಿಂ
ತಿದು ನಿ[2]ರ್ಬಂ[2]ಧದ ಬಂಧಮಿಂತಿದೆನಲಾದಿಕ್ಕೋಡನಂ ಪೊಲ್ತುದು ।
ನ್ಮದದಿಂ ಗರ್ಜಿಪ ನಾಯ್ಗಳಂ ತುಳಿವ ಪಿಂಡಂ ಕಾಯ್ವ ಬಲ್ಪಕ್ಕು ಕೊ
ರ್ವಿದ ಪೆರ್ಬಂದಿಯನೊರ್ವನೊಂದೆ ಸರಳಿಂದೆಚ್ಚಂ ಪುಳಿಂದಾಧಿಪಂ ॥ ೧೩೪

ಅಡಸಿದಡೆಕ್ಕಲಂ ಮಗುಟ್ಟು ಭೋಂಕನೆವಾಯೆ ಬೆದರ್ದ ನಲ್ಲಳಂ
ಸೆಡೆಯದಿರೆಂದು ಹಿಂದಿರಿಸಿ ಗಾತ್ರಮನಿಕ್ಕಿ [3]ಕುನುಂಗಿ[3] ಮೋಱೆಯಂ ।
ಪಿಡಿದೆಡಗಯ್ಯೊಳುದ್ಧರಿಸಿ ಸಬ್ರನೆ ಕಿತ್ತಲಗಿಂದ ಹಂದಿಯಂ
ನಡು ಕಡಿ[4]ವ್ಪೋಪಿ[4]ನಂ ತಿವಿದು ಮೆಚ್ಚಿಸಿದಂ ಶಬರಂ ಪುಳಿಂದಿಯಂ ॥ ೧೩೫

ಇಕ್ಕೆಲದೆ ಶಬರನಾರ್ದಿಸೆ
ಯೆಕ್ಕೆಲನನದೊಂದು [5]ಬಾಣ[5] ನಡದಿರೆ ಸತಿ ಕಂ ।
ಡಕ್ಕಟ ಬಿಲ್ಲಾಳೇ ಎನ
ಲಕ್ಕಾ ನೀಂ ಪೆ[6]ಣ್ಣೆನಲ್ಕೆ[6] ಲಜ್ಜಿತೆಯಾದಳ್ ॥ ೧೩೬

ಜಡಿವನ್ನಂ ಸ್ಥೂಲವಾಲಂ ಕುಸಿದು ಘುಳುಘುಳುಧ್ವಾನದಿಂ ಗರ್ಜಿಸುತ್ತುಂ
ಕಿಡಿಗಳ್ ಕಣ್ಣಾಲಯಿಂದಂ ಕೆದಱಿ ಮುಳಿದು ಮೇಲ್ವಾಯ್ವ ಶಾರ್ದೂಲಮಂ ಪೋ
ಕ್ಕುಡಿಯೊಳ್ [7]ಮೆಲ್ದಂ[7]ಡೆಗೊಂಡುರ್ಚಿದ ಕಿಱಿಯಲಗಿಂದೊಂದೆರಟ್ಟೂಱು ನಾಲ್ಕೆಂ
ದಡಕಿಲ್ಗೊಂಡೇಱು ಬೆನ್ನೊಳ್ ಪೊಳೆವಿನಮಿಱಿದಂ ವೀರ[8]ದಿಂದಾ[8] ನರೇಂದ್ರಂ ॥

---

[1] ವೆಂ (ಕ.ಖ.ಬ). [2] ಬ್ಬಂ (ಕ.ಖ). [3] ಕುರಂಗ (ಬ). [4] ಯಪ್ಪಿ (ಖ.ಬ).
[5] ತಾಗಿ (ಬ). [6] ಣ್ಣೇ ಎನೆ ಸ (ಖ). [7] ಕೆಂದಂ (ಕ), ತಾಗಿ (ಬ). [8] ಧೀರಂ (ಬ).

ಬಳಸುತ್ತುಂ ಪಾಯಿಸುತ್ತುಂ ತಡುಕಿ ತುಡುಕಿ[1] ಪಿ[1]ಮ್ಮೆಟ್ಟುತುಂ ಮುಂದೆ ಬಂದ
ವ್ವಳಿಸುತ್ತುಂ ಕುಕ್ಕುರಂಗಳ್ ತೆಗೆಯೆ ಮಿಗೆ ಬಳಲ್ದೊಯ್ಯನಂತಂತೆ ಕಿ[2]ಬ್ಗ[2] ।
ಣ್ಣೊಳೆ ನೋಡುತ್ತೋರೆಯಿಂದಂ [3]ಗಿರಿಯ ಸರಿಯ[3]ನಾನಲ್ಕೆ/ನಾರ್ದಂಡುಗೊಂಡಿ
ರ್ದಿಳೆ ಕಂಪಂಗೊಳ್ವನಂ ಗರ್ಜಿಸಿದುದು ಮುಳಿದಾಭೀಳದೇಹಂ ವರಾಹಂ ॥ ೧೩೮

ಬಿದಿರ ಸಿ[4]ಡುಂ[4]ಬಿನೊಳ್ ಗಜಜು ಗರ್ಜಿಸಿ ಪೆರ್ಬುಲಿವಾಯೆ ಕಯ್ದುಗೆ
ಯ್ಯದೆ ಕೆಲನಾರ್ದು ಮೆಯ್‌ಪೊಣರ್ದು ತೊಟ್ಟನೆ ಗಂಟಲನೊತ್ತೆ ಕಿಬ್ಬಿಸಿರ್
ತಿದಿಯವೊಲಾಗೆ ಕಣ್ತುಮುಚೆ ಬಿರ್ದು [5]ಮು[5]ಸುಂಬಿ ಜವಂಗೆ ಬಿರ್ದನಿ
ಕ್ಕಿದನುಸಿರಿಕ್ಕಲೀಯದುಸಿರಿಕ್ಕುವವೋಲ್ ಶಬರಂ ಮಹಾಬಳಂ ॥ ೧೩೯
(ಮಲ್ಲಿನಾಥಪುರಾಣಂ, ೧೦–೭೩.)

ಕಡು ಕಡುಪೇಱಿ ಪೆರ್ಬುಲಿಯುಗುರ್ವಿಸೆಯೊಯ್ಕನೆ ಮೇಲುವಾಯೆ ಮುಂ
ದಡಿಯಿಡುತ್ತೆದೆ ಗಂಟಲೆಡೆಯಂ ಪಿಡಿದೊತ್ತುವ ತಾಣದೊಳ್ ನಖಂ ।
ಮುಡುಪನವುಂಕೆ ಕಂಡು ಸತಿ ಕಂ[6]ಟಿ[6]ಸಿ ಕಾಡುವಳೆಂದು ಬಂದ ತ
ನ್ನೊಡನೆಯ ಬೇಂಟೆಕಾಱಿವಡೆಯಂ ತೊಡೆಸಕ್ಕೆಯನುಂಟುಮಾಡಿದಂ ॥ ೧೪೦

ಬಗಿದು ಪುಗಲ್ಕರಿದೆಲ್ಲಿಯು
ಮೊಗೆದ ಮರಂ ಪ್ರೋದಱು ಬಳ್ಳಿಗಿಡುವೆಂಬಿವಱಿಂ ।
ಮಿಗಿಲೆನಿಪ ಬಲ್ಲೆ ನಗಸಾ
ನುಗಳೊಳದಂತಾವ ಮೆಯ್ಯೊಳಂ ಪುದಿದಿರ್ಕುಂ ॥ ೧೪೧
(ಕಾವ್ಯಾವಲೋಕನಂ, ೯೭)

ಸುರಪತಿಯಂತೆ ವಿಸ್ಫುರಿತನೇತ್ರಸಹಸ್ರವಿರಾಜಿತಂ ನರೇ
ಶ್ವರಭವನಾಗ್ರದಂತೆ ದೃಢವೇತ್ರಲತಾಶತದುಷ್ಪ್ರವೇಶಮಂ ।
ಬರತಳದಂತೆ ಋಕ್ಷಮೃಗಲುಬ್ಧಕಸಂಗತಮಂಬುರಾಶಿಯಂ
ತಿರೆ ತತವಿದ್ರುಮದ್ಯುತಿನಿರಂತರಮೊಪ್ಪುಗುಮಾ ವನಾಂತರಂ ॥ * ೧೪೨
(ಕಾವ್ಯಾವಲೋಕನಂ, ೩೩೮.)

ಸೊಗಯಿಸಿ ತೋರ್ಪ ಸೋಗೆ ಕೊರಲೊಳ್ ಪೊಗರ್ವಟ್ಟೆಸೆದಿರ್ಪ ಕರ್ಪು ಕೆ
ಯ್ಮಿಗೆ ಕಡೆಗಣ್ಗೊಳೊಳ್ ಪೊಳೆವ ಬೆಳ್ಪು ಶಿಖಾಗ್ರದೊಳೊಂದಿದೊಳ್ಪು ಮೆ ।

---

[1] ಪೆ (ಕ). [2] ಗ್ಗ (ಖ.ಬ). [3] ಪರಿಯದೊರೆಯ (ಬ). [4] ಱುಂ (ಕ). [5] ಮು (ಕ.ಆ). [6] ಪಿ (ಕ).

* ಇಲ್ಲಿಂದ ಮುಂದಿನ ೮ ಪದ್ಯಗಳು (ಜ.ಬ) ಪ್ರತಿಗಳಲ್ಲಿ ಆಶ್ವಾಸದ ಆದಿಯಲ್ಲಿ ಕಂಡುಬರುತ್ತವೆ.

ಲ್ಪೊಗೆದಿರೆ ಕೇಗುವಿಂಚರದ ನುಣ್ಪು ಮನಂಗೊಳೆ ಚೆಲ್ವನಾಳ್ದುದೀ
ನಗವನರಾಜಿಯೊಳ್ ಸುಟಿಯುತಿರ್ಪ ವಿಚಿತ್ರ ಶಿಖಂಡಿಮಂಡಲಂ ॥ ೧೪೩

(ಕಾವ್ಯಾವಲೋಕನಂ, ೬೦೯.)

ಕೋಗಿಲೆ ಚಾದಿಗೆ ಪೋದಗೆ
ಮೂ[1]ಗಿಲಿ ಕೌಂ[1]ಗಂಚೆ ಕೊಂಚೆ[2] ನೂಲೆಳೆಗಂ[2] ಹಂ ।
ಗಾಗೆ [3]ಪೊಣರ್ವ[3]ಕ್ಕಿ ಪಿಂಗು[4]ರಿ[4]
ಗೂಗೆ[5] ಮ್ಲುಕ್ಕುಂದ ಬಳಾಹಕ ಲಾವುಗೆ ಶೇನಂ[5] ॥ ೧೪೪
ಚಿಕ್ಕು

ಕಾರಂಡಂ ಕೆಂಗಣ್ಣಂ
ಭೇರುಂಡಂ ಪೊಱಿಸು ಕ್ರೌಶಿಕಂ ಕು[6]ಣಿವ [6]ನವಿಲ್ ।
ಕಾರೆ ಗಿಳಿ[7] ಯೇ[7]ಳೆ ಬಾವಲಿ ಗ್ಗಚ
ಕೀರಂಚೆ ಪರಡೆ ಪರ್ದು ಹಸುಬಂ ಗಿಡುಗಂ ॥ ೧೪೫

ಪುರುಳಿ ಕುಳಿ[8]ರ್ವಂ ನವಿಲ್ಕೇ[8]
ಕೊರೆಸಣಗಂ ಪಣ್ಪರಸವಲೂರಲ್ ವಾವಲ್
ದುರಿಸೆಗಿಳಿ ಪರ್ದು ಮರವಂ
ಮರಕುಟಿಗಂ ಪುಱಿಲೆ ಬುಱುಗಿ ಹಸುಬಂ ಪುಱಿವುಲ್ ॥ ೧೪೬

ಪರಮೇಷ್ಠಿಯಂಚೆ ಕೃಷ್ಣನ
ಗರುಡಂ ಪವಮಾನನೆರಳೆ ದುರ್ಗಿಯ ಸಿಂಹಂ ।
ಸುರರಾಜನಾನೆ ಮುನ್ನೀ
ಗಿರಿವರದೊಳ್ಪುಟ್ಟಿ ನೆಗಲ್ದ ವೆನಿಸುವು[9] [ವನಿಶಂ][9] ॥ ೧೪೭

ಬೆಟ್ಟಕ್ಕೆ ಱಿಂಕೆವೆಟ್ಟಂ
ಪುಟ್ಟಿದವೋಲ್ ತೋರ್ಕುಮ[10]ಲ್ಲಿ ಭೇರುಂಡಂ[10]ಗಳ್ ।
ದಿಟ್ಟಿಗೆ ಭಯಮಂ ಮಾಟ್ಟುಂ
ತೊಟ್ಟನೆ ಶರಭಾ[11]ದಿ[11] ಮೃಗಮನೆಡೆಗೊಳ್ವೆಡಯೊಳ್ ॥ ೧೪೮

---

[1] ಗಿಂ ನಾ (ಕ). [2] ಮೂಲೆಗಳೆಗ (ಖ). [3] ಕೊಳರ್ವ (ಬ). [4] ರು (ಕ). [5] ಯುಮುಖ ಬಕಬಳಾಮಳಗೆದಱಿಂ (ಖ), ಸುಕ್ರು ಬಕ್ರು ಗೀಜಗನೊಱಿವಂ (ಕ). [6] ಳಿರ್ವ (ಕ). [7] ಹಿ. [8] ವಂಗವಿಲ್ಕೆ (ಕ). [9] ಮನಗಂ (ಕ), ದುವನಂ (ಖ.ಬ). [10] ದಱಿದೇರುಂಕ (ಕ). [11] ರಿ (ಕ).

ಮರೆ ಹಂದಿ ಹುಲ್ಲೆ ಹುಲಿ ಕಡ
ವೆರಳೆಯು[1]ಮಾ ಬೆಕ್ಕು[1] ತೋಳನೆಯ[೪] ಸಾರಂಗಂ ।
ಕರಡಿ ಮೊಲಂ ಕೋಡಂಗುರಿ
ನರಿದರಿ ಕೂರಂಗಿ ಬೆಕ್ಕು ಹೇರುಡು ಕಾಕಂ ॥ ೧೪೯

ಚರಣಾಗ್ರೋದೀರ್ಣಭಾಸ್ವತ್ಪರನಖಚರಣಂ ನಿಶ್ಚ[2]ಲಂ ಪ[2]ಶ್ಚಿಮಾಂಗಾಂ
ತರಗುಪ್ತ ಸ್ಥೂಲವಾಲಂ, ಪ್ರಕಟಿತ ಕೃತಕಾಕಾರಿ ವಿಭ್ರಾಂತ[3]ಕಾ[3]ರ್ಯ।
ಸ್ಥಿರಸರ್ವಾಂಗಂ ಬಿಲ[1]ಕ್ಕೋಸರಿಸಿ ದರಿ[1]ಗೆ ಸಾರ್ದಿರ್ದುದಂಗಾರಭಂಗ
ಸ್ಫುರಿತಾಭೀಳಾಕ್ಷನಾಖ್ಯಗ್ರಹಣವೆಸನನಪ್ಪೀ ಬಿಡಾಳಂ ಬಿಡಾಳಂ ॥ ೧೫೦

ಮೋಱೆಯ ಬೆಳ್ಪಿಂದುವನ್ಯೆ
ದಾಱುಂಗುಲಮುಟಿಯೆ ರಾಹು ನುಂಗಿದ ತೆಱದಿಂ ।
ತೋಱುವ ತೆಱನೆಸೆವಿನ ಮ್ಯೆ
ಮೋಱುಪ್ಪುವು ಪುಂಡುಗರಡಿ ಶ್ಯೆ[5]ಲಾಂತರ[5]ದೊಳ್[೪] ॥ ೧೫೧

ಕಲ್ಲ ಗವಿಯೊಳಗೆ ಕಟ್ಟಲೆ
ಮಲ್ಲಟಿಗೊಂಡಿರ್ದ ತೆಱದಿನಿರ್ಪುವು ತಾಂ ಭೂ ।
ವಲ್ಲಭ[6]ನನಱಿಸಿ ಮಱಿಯುಂ[6]
ಪಲ್ಲೂಕಪ್ರತತಿ ನಗದ ನಾಲ್ಕುಂ ದೆಸೆಯೊಳ್[೪] ॥ ೧೫೨

ಮೆಲ್ಲನೆ ನೀಡಿ ಮೆಟ್ಟುವಡಿ ನಿಶ್ಚಲವಾಲಮರಲ್ದ ಕರ್ಣಮ
ಲ್ಲಲ್ಲಿಗೆ ನಿಂದು ನಿ[7]ಳ್ಕಿ ನ[7]ಸು ನೋಟ್ಪ ಪಿಶಂಗವಿಲೋಚನಂಗಳೊ ।
ತ್ತಿಲ್ಲದ ತಾಣದೊಳ್[೪] ನೆಲಕೆ ಪರ್ಬುವ ಗಾತ್ರಮಗುರ್ವನೀಯೆ ಪೆ
ರ್ಬುಲ್ಲೆಗೆ ಬಂದು ಸಾರ್ದು[೪]ದು[೪] ತರಕ್ಷು ಮೃಗಾವಳಿಯಿಕ್ಕೆದಾಣಮಂ ॥ ೧೫೩

ತೀಡುವ ಗಾಳಿಯಿಂದಱಿದು ಮ್ಯೆಸೊವಡಂ ಮೊಗವೆತ್ತಿ ಸುತ್ತಲುಂ
ನೋಡಿ ಕಱುಂಕೆ ಸೂಸೆ ಕಡೆವಾಯ್ಗಳೊಳಾಲಿಸಿ ಕಾಲ ಸೊಪ್ಪಳಂ ।
ಕೂಡೆ ಪೊದಟ್ಟು ಪೊಣ್ಮಿದ ಭಯಾತುರದಿಂದೆರ್ದೆವಾಯೆ ಗಂಡುಗೆ
ಟ್ಟೋಡಲೊಡರ್ಚಿ ಪೆಪ್ಪಳಿಪಿನಂ ಪುಲಿವಾಯ್ದುದು ಪುಲ್ಲೆವಿಂಡಿನೊಳ್[೪] ॥ ೧೫೪

---

[1] ಬೆಕ್ಕರ್ದೊಡ್ಡು (ಬ). [2] ಲತ್ಪ (ಕ). [3] ಭಾ (ಕ). [4] ಕೊರಿಸೆ ಸರಿ (ಕ).
[5] ಲಸ್ಥಳ (ಕ). [6] ಮಱಿಯುಂ ತಾಯುಂ (ಖ.ಬ). [7] ಬ್ಕುವ (ಕ). [8] ಪು (ಕ).

ಚಳಲಾಂಗೂಲಂ ಸಮುದ್ಯದ್ಭುಳು[1]ಘುಳಿತ ಗಳ[1]ಧ್ವಾನರೌದ್ರಾನನಂ ಪಿಂ
ಗಳಿತ ಪ್ರೋಜ್ಜೃಂಭಿ[2] ತಾಕ್ಷಂ[2] ಪು[3]ಲಿ ನಿಲಲಿ[3]ದಿರೊಳ್ ತದ್ಭಯಭ್ರಾಂತೆ ಕೌತೂ ।
ಹಳೆ ನಲ್ಲಳ್ ಭೋಂಕೆನಲ್ ಪೆರ್ಬುಲಿಯ ಭಯದೆ ತನ್ನಪ್ಪುಬಿಟ್ಟಪ್ಪಳೆಂದು
ಮ್ಮಳದಿಂದಂ ತೀವಿ ತೊಟ್ಟುಂ ಮಿಸುಕದೆಸದೆ ನಿಂದಂತೆ ನಿಂದಂ ಫಳಿಂದಂ॥೧೫೫

ಇದಿರೊಳ್ [4]ಗರ್ಜಿಸಿ ಪುಲಿ ನಿಲೆ[4]
ಬೆದಱಿ ಕರಂ ಶಬರಿ [5]ಬರಿಯ[5]ನಪ್ಪಲೊಡಂ ರೋ ।
ಷದಿನಲರ್ದು ದೊಂದು ಕಣ್ ರಾ
ಗದೆ ಮುಗುಳ್ದುದದೊಂದು ಕಣ್[6] ವನೇಚರಪತಿಯಾ ॥ ೧೫೬

(ಚಂದ್ರಪ್ರಭಪುರಾಣಂ, ೫-೫೯.)

ಉಗುರ್ವೊಯ್ಲಾತನ ಮೆಯ್ಯೊಳೀ ಪುಲಿಯ ಪೊಯ್ಲಿಂದಾದುವೆಂದೋಪವಳ್
ಬಗೆವಂತನ್ಯವಧೂರತೋತ್ಸವ ನಖಾಂಕಾನೀಕಮಂ [6]ಮುಚ್ಚುವು[6] ।
ಜ್ಜುಗದಿಂದಂ ಪಿಡಿದೊಂದು ಪೆರ್ಬುಲಿಯನೊರ್ವಂ [7]ಕಕ್ಷದಿಂ[7]ದೊತ್ತಿ ತ
ನ್ನ ಗೃಹಕ್ಕೆಯ್ತರುತಿರ್ದನೊಂದೆಡೆಯೊಳುದ್ಯದ್ವೀವರಂ ಧೀವರಂ ॥ ೧೫೭

(ಜಗನ್ನಾಥವಿಜಯಂ, ೧೬-೨೦.)

ಉರವಣಿಯಿಂ ಕೃತಾಂತ[8]ನವೊ[8]ಲೆಯ್ದುವ ದಂತಿಯ ಮುಂದೆ ಪೊಕ್ಕು ಸಾ
ರ್ದುರಮನೆಸಲ್ [9]ಪೆಡರಂ[9]ಮಗುಬ್ದ ದಂತಿಯ ವಕ್ಷಮನುರ್ಚಿ ಪೇಚಕಾಂ ।
ತರದೆ ನುಸುಳ್ದು ತನ್ನುರಮನುರ್ಚಿದೊಡಚ್ಚರಿವಟ್ಟನೆಚ್ಚ ಬಿ
[10]ಚ್ಚ[10]ರಿಕೆಗಮಾ ತೆಱಂ [11]ಮು[11]ರಿದ ದಂತಿಗಮಾ ವನದೊಳ್ ವನೇಚರಂ॥ ೧೫೮

ವನಚರಿ ಪಾಡೆ ಪಾಡಟಿದು ಸಾರ್ದೊಲೆದಾಲಿಸುತಿರ್ಪ ದಂತಿಯಂ
ವನಚರನೆಚ್ಚೊಡ್ಡೆದೆ ಬಿರಿದಾನೆಯ ಕುಂಭದಿನುನ್ನಮನ್ನಿಜ।
ನ್ತನಭರಕುಂಭಮಂಡಲಕೆ ಸೋಲ್ತದು ಸೇಸೆಯನಿಕ್ಕುವಂತೆ ಮು
ತ್ತಿನ ಸರಿ ಸೋರೆ ಹಾರರಚನಾತುರೆಯಾಯ್ದಳವಳ್ ವಿಳಾಸದಿಂ ॥ ೧೫೯

(ಲೀಲಾವತಿ, ೮-೩೫.)

ಭಾಸುರ ಕೇಸರಪ್ರತತಿ ಕೇ[12]ಸು[12]ರಿಯಂ ಕುಡುದಾಡೆ ನಾಡೆ ನಂ
ಧ್ಯಾನಮಯೋದ್ಗತಾಮೃತಕರಾಂಕು[13]ರ[13]ಮಂ ತನು ಬಾಲಭಾಸ್ಕರೋ ।

---

[1] ಘುಳುಘುಳಿತ (ಕ). [2] ತಾಂಗಂ (ಖ.ಬ). [3] ದಿದಿಡಿದಿ (ಖ.ಬ). [4] ಪುಲಿ ಗರ್ಜಿಸಿ ಬರೆ (ಖ.ಬ). [5] ಪ್ರಿಯನ (ಖ.ಬ). [6] ವಂಚಿಪು (ಅ). [7] ಕುಕ್ಷಿಯಿಂ (ಗ). [8] ಕನೊ (ಕ). [9] ಕರಂ (ಕ.ಗ). ಪೆಡಂ (ಖ). [10] ತ್ತ (ಖ.ಬ). [11] ದಿ (ಕ.ಖ) [12] ಸ (ಕ). [13] ಶ (ಖ.ಬ).

ದ್ಭಾಸಿತ ದೀಪ್ತಿಯಂ ಮಸುಳಿಸುತ್ತಿರೆ ಕಟ್ಟಿದಿರಾಗಿ ಪಾಯ್ವುದಂ
ಕೇಸರಿಯಂ ಮೃಗಕ್ಕರಿಯನಾಂತಿಱುದಂ ಪ್ರತಿರೂಪಶೂದ್ರಕಂ ॥ ೧೬೦

ಮುಗಿಲೊಡೆಯೆ ಗಜಱು ಗರ್ಜಿಸಿ
ಮೃಗಾರಿ ಮೇಲ್ವಾಯೆ ಕಟ್ಟಿದಲಗಂ ಕಿತ್ತಾ ।
[1]ಯು[1]ಗವಾಂಕೆಯಾಗೆ ನೆತ್ತರ್
ಝಗಿಲೆಂದೊಡನೆಗೆಯೆ ಸುಭಟಶೂದ್ರಕನಿಱುದಂ ॥ ? ೧೬೧

ಸಿಂಗಂಗಳನವಯವದಿಂ
ನುಂಗುವ ಶರಭಂಗಳೆಂಟನೆಂಟುಂದೆಸೆಮಾ ।
ತಂಗ[2][ವ][2] ಮಸುಳಿಪ ಗರ್ಭದೆ
ಪೊಂಗಿದ ಕೌಂಕುಟಿನಿಱುಂಕಿ ಬರ್ಪರ್ ಶಬರರ್ ॥ ೧೬೨

ಪುಲಿಯುಗುರಿಂದಮಾದ ಕಲೆ ದ್ರಂಡೆಯೊಳಿಕ್ಕಲವಂದಿ ಪಾಯ್ದ ಪೆ
ರ್ಗಲೆ ತೊಡೆಯೊಳ್ ಗಜಂ ರದನದಿಂದಿಱುದೆತ್ತಿದ ಡೋಣಿ[3]ವಾಯ್ದ[3] ಪೆ ।
ರ್ಗಲೆ ನಿಜವಕ್ಷದೊಳ್ ಮಿಱುಗೆ ಮಿರ್ದ ಮೃಗಪಕ್ಷಿಯನಾಂತುಕೊಂಡು ಕೋ
ಸಲೆಯ ಪುಳಿಂದನೊಂದೆ ಗುದುಕಿಂ ಬರುತಿರ್ದನದೊಂದು ತಾಣದೊಳ್ ॥ ೧೬೩

ಕರಿ ಪೊಣರ್ದಿಕ್ಕಲಂ ಮಲೆತು ಪೆರ್ಬುಲಿ ಪಾಯ್ದುಗಿಯಲ್ಕೆ ಡೋಣಿವಿ
ಟ್ಟುರದ ಪಿಸುಟ್ಟ ಪೆರ್ದೊಡೆಯ ನುರ್ಗಿದ ದಂಡೆಯ ಭಂಗಿ ರೌದ್ರಮಾ ।
ಗಿರೆ ನೆಱೆ ಮೂಱು ಬೇಂಟೆಯುಮನಾಡಿ ತದಾಪ್ತಿಷಭಾರದಿಂದೆ ಜೀ
ರ್ಗರೆಯು[4]ತುಮಂತೆ ಕಾಲ್ವೊಲಪಿನಿಂ[4] ಬರುತಿರ್ದನದೊರ್ವ ಲುಬ್ಧಕಂ ॥ ೧೬೪
(ಜಗನ್ನಾಥವಿಜಯಂ, ೧೬–೨೧.)

ಗಗನತಳಂಬರಂ ನೆಗೆದು ಮತ್ತಗಜಂಗಳ ಮಸ್ತಕಕ್ಕೆ ಪಾ
ಯ್ದುಗಿಬಗಿಮಾಡುವಲ್ಲಿ ಪೊಳೆವಂಕುಶದಂತಿರೆ ಕೊಂಕುವೆತ್ತ ಕೂ ।
ರುಗುರ್ಗಳೊಳೆಯ್ದೆ ತೆತ್ತಿಸಿದ ಮುತ್ತಿನ ಲೋಭದೆ ಕೊಲ್ವರೆತ್ತಲುಂ
ಮೃಗಪತಿಸಂಘಮುಂ ಪಲರುಮಾ ಬನದೊಳ್ ಶಬರಾಧಿನಾಯಕರ್ ॥ ೧೬೫
(ಕಾದಂಬರಿ, ಪೂ. ಭಾ., ೯೯.)

ಕಾಯ್ ಸತ್ತೆಂ ಕೆಟ್ಟೆನೋವೋ ಬೊಬೊಬೊಬೊಬೊಬೊಬೋ ಕೂಗು ಕೂ
[ಕೂಗುಸಾಯ್ಸಾಯ್
ನಾಯ್ ನಾಯೆತ್ತೆತ್ತ ಪತ್ತೊತ್ತೊರಸಿ ಬೆರಸು ಬಾಯ್ಮಾಡಿದೇನೆಂದು ನಿಂದಾ ।

[1] ಯು (ಕ). [2] ಳ್ (ಕ.ಖ.ಬ). [3] ಯೋದ (ಬ). [4] ತೆ ಮಾಂಸವಾಂತೊಲವಿನಿಂ (ಅ).

ರಯ್ಸುತ್ತೊತ್ತೆತ್ತು ಬಿಲ್ಲಂ ನಡೆದಿಡು ದಡಿಯಂ ಕೊಳ್ಕೊಳೆಯ್ದೆಯ್ದು ಬಯ್ಪೊಯ್
ಕೊಯ್ ನೀಳ್ಕೊಳ್ಕುತ್ತು ಕೂಲ್ ಕೊಲ್ ಕೆಡೆ ಕೆಡೆ ಕೆಡೆ ಯೆಂಬಬ್ಬರಂ ಪರ್ಬಿತೆತ್ತಂ॥

ದಡಿಯೊಳೆ ಕೋದ ಪಂದಿ ಕೊನೆವಿಲ್ಲೊಳೆ ಕೈ[1]ಪೊಡೆಯಂತೆ[1] ನೇಲ್ವ ಪೇ
ರುಡು [2]ಮುಱುದಿಕ್ಕೆ[2] ಕಲ್ಲಿಯೊಳೆ ನಾಯದೆ ಸಂಕಟಗೊಳ್ವ ಪಕ್ಕಿ ಪೆ ।
[3]ರ್ಬು[3]ಡಿಕೆಯೊಳಿರ್ಪುಗುಂದಿ ನಸು[4]ಗೆ[4]ತ್ತುವ ಮಿನ್ಗಳ ನೇದೆಯಿಂದೆ ಪೇ
ರಡವಿಯೊಳಂದು ಬೇಡವಡೆ ಬಂದುದು ಕೂಡೆ ತೊಟಲ್ದು ಬೇಂಟೆಯೊಳ್ ॥ ೧೬೭

ಉಡು ನವಿಲಾವೆ ಬೆಕ್ಕು ನರಿ ಲಾವುಗೆ ದೊಡ್ಡಿನಹೋರಿ ಹೇರಣಿಲ್
ಗಿಡುಗ ಮೊಲಂ ಕವುಂಜು ಮರೆ [5]ಮುಂಗ[5]ಲಿ ಕಕ್ಕರವಕ್ಕಿ ಕೋಡಗಂ,।
ಕಡವೆಳೆ ಬಳ್ಳು ಕೊಂಡುಗುಱಿ ಕೂರಗೆಯೆಂಬಿವನ್ಯೆದೆ ಕ[6]ಸಿ[6]ನೊ
ಳ್ಗಡಣದೆ ಪೊತ್ತು ಬೇಡವಡೆ ಬಂದುದು ಕಾನನದೊಳ್ ನಿರಂತರಂ ॥ ೧೬೮

ಬಿದಿರು[7]ದಿರ್ದ[7]ಕ್ಕಿ ಪಕ್ಕಿ[8]ವೋಜು[8] ಪುಲ್ ಮಯಣಂ ಗುಱುಗುಂಜಿ ಜೇನುತು
ಪ್ಪದ ಕೊಡನೆಯ್ಯ ಮುಳ್ ಪುಣಿಸೆ [9]ಪಣ್ಗಳ್[9] [10]ಹೂತಿ[10]ಯ ಬೆಕ್ಕು ನೀಳ್ದ ಮು ।
ತ್ತದ ಪೊಸನಾರ್ ಸೆಣಂಬು ಪಲವುಂ ಮೃಗವಕ್ಕಿಗಳಿಂದಮೊತ್ತಿ ಕ
ಟ್ಟಿದ ಮರ[11]ಗಂಬಿ[11] ಜೀರ್ಗರೆವಿನಂ ಗುದುಕಿಂ ಮಗುಬ್ದರ್ ವನೇಚರರ್ ॥ ೧೬೯

ಕರಿದಂತಂಗಳನಾಂತು ಪೀಲಿವೊಜುಯಂ ತಜ್ಕೈಸಿ ಗಂಧೇಭ ಬಂ
ಧುರಮುಕ್ತಾಫಳಭಾರಮಂ ತಳೆದು ಮಾಂಸವ್ರಾತಮಂ ಪೊತ್ತು ಕೇ ।
ಸರಿ ಚರ್ಮವ್ರಜಮಂ ತೆರಳ್ಚಿ ಚಮರೀವಾಲಂಗಳಂ ತಾಳ್ದು ಬಂ
ದರನೇಕರ್ ಬಟಿಸಂದು ಕಾಡೊಡೆಯನಂ ಕಾಂತಾರದೊಳ್ ಲುಬ್ಧಕರ್ ॥ ೧೭೦
(ಕಾದಂಬರಿ, ಪೂ. ಭಾ., ೧೬೯.)

ಬಾಳೆಯ ಗುದಿ ಬಲಗಯ್ಯೊಳ್
ಬಾಣೆಯ ಗೊನೆ ಪೆಗಲೊಳೊಪ್ಪೆ ಹಕ್ಕಿಯ ಸಿಲುಕಂ ।
ತೋಳ ಮೊದ[12]ಲೆತ್ತಿ[12] ಬರುತಿರೆ
ಬಾ[13]ಳೆಯ ಕಯ[13] ಪಿಡಿದು ವನಚರಂ ನಡೆತಂದಂ ॥ ೧೭೧

---

[1] ಪಡೆದಂತೆ (ಕ). [2] ತನುಸೋಂಕೆ (ಖ.ಬ). [3] ರ್ಬ (ಕ). [4] ಗಿ (ಕ), (ಬ.ಖ). [5] ಮೂಗಿ (ಕ). [6] ನಿ (ಕ). [7] ದುಳ್ಳಳಿ (ಕ). [8] ಪೊಡೆ (ಕ). [9] ಕಣ್ಗಂ (ಕ). [10] ಹುತ್ತಿ (ಖ.ಬ). [11] ಗುಂಜಿ (ಖ.ಬ). [12] ಲ್ಲಿ (ಖ.ಬ). [13] ಳೆಯ ಕಾಯ್ (ಖ.ಬ).

ಕರೆವಂತಾಡುವ ಪಲ್ಲವಪ್ರಕರದಿಂ ಮಂದಾನಿಲಂ ಸೋಂ[1]ಕೆ[1] ಬೀ
ಬ್ಬರಲಿಂದರ್ಚಿಸುವಂತೆ ಕೋಕಿಲರವಪ್ರಧ್ವಾನದಿಂ ಸ್ವಾಗತ ।
ಸ್ಫರಮಂ ಬಿತ್ತರಿಪಂತೆ ತೋಱು ಮೆಱೆಯುತ್ತಿರ್ದಪ್ಪುವಲ್ಲಿರ್ದ ಮಾ
ಮರ[2]ಗಳ್[2] ಪೊರ್ದಿದ ಮಾನಸರ್ಗೆ ನಿಜದಿಂದಾತ್ಮಸ್ಥಸತ್ಕಾರಮಂ ॥ ೧೭೨

ಪಿಡಿವುದು ಸೋಗೆ ಸೋಗೆವೊದಱಿಂ ನೆಬಲಂ ಜರತಾಪಸರ್ಗೆ ಕೈ
ಗುಡು[3]ವುವು[3] ಕೋಡಗಂ [4]ಜಲ[4]ಗಳಂ ಕುಡಿಗೈಗಳಿ[5]ನೊ[5]ಯ್ದು ತಂದು ಮುಂ ।
ಗುಡುವುವು ಹಸ್ತಿ ತಂದು ಪುರದೊಳ್ [6]ಸ[6]ಮಕಟ್ಟಿರೆ ನಿಂದು [7]ವಾಕ್ಯ[7]ಮಂ
ನುಡಿವುವು ರಾಜಕೀರ್ರಕುಳವಾಶ್ರಿತಪಾವನಮಾ ತಪೋವನಂ ॥ ೧೭೩

ಜಲರುಹಬೀಜರಾಜಿಗಳನಾಱಿಪ ಪರ್ಣಕುಟೀರಕಂಗಳಂ
ನಿಲಿಸುವ ದಂಡಮೊತ್ತುವ ಮೃಗಾಜಿನಮಂ ಪೊಲುತಿರ್ಪ ಮುಂಜಮೇ ।
ಖಲೆಗಳನೊಪ್ಪಮಾಡುವ ಸಮಿತ್ಸುಶಮಂ ತರವೋಪ ಧೌತವ
ಲ್ಕಲಮನಲುಂಬುವಕ್ಷಮಣಿಯಂ ನಮೆವೀ ವ್ಯವಸಾಯಮೆತ್ತಲುಂ ॥ ೧೭೪
(ಕಾದಂಬರಿ, ಪೂ. ಭಾ., ೨೨೪.)

ಅತಿಥಿಯನಾದರಿಪ್ಪ ಪಿತೃದೈವಮನರ್ಚಿಪ ಧರ್ಮಶಾಸ್ತ್ರಸಂ
ಗತಿಗಳೊಳಿರ್ಪ ಯಜ್ಞವಿಧಿವೇಟ್ಪ ಪುರಾಣಮನೋದುವಾಗಮ ।
ಪ್ರತತಿಗಳಂ ವಿಚಾರಿಸುವ ತತ್ವನಿರೀಕ್ಷಣೆಗೆಯ್ವ ಯೋಗದು
ನ್ನತಿಕೆಯನಪ್ಪುಗೆಯ್ವ ಮುನಿಸಂಘದಿನೊಪ್ಪುವುದಾ ತಪೋವನಂ ॥ ೧೭೫
(ಕಾದಂಬರಿ, ಪೂ. ಭಾ., ೨೨೫.)

ಪರಮ ತಪೋನಿಧಿಗಳ್ಗಂ
ಬರ[8]ನದಿ[8]ಯಂ ವಿಾಯ[9]ಲಿಟ್ಟ[9] ನಿಚ್ಚಣಿಗೆವೊಲ !
ಚ್ಚರಿವಡೆಯೆ ನೆಗೆವುದೆನಸುಂ
ತೆರೆ ಮಸಗುವ ಹೋಮಧೂಮವಾ ಮುನಿವನದೊಳ್ ॥ ೧೭೬

ಶರಭಂ ಕೇಸರಿಗಳ್ಗೆ ಕೇಸರಿ ಕರೀಂದ್ರಂಗಳ್ಗೆ ಕಾಡಾನೆ ಬೇ
ಡರ ಕಪ್ಪಿಂಗೆ ಪುಳಿಂದ[10]ಸಂಕುಳಮೆ[10] ಶಾರ್ದೂಲಕ್ಕೆ ಶಾರ್ದೂಲಮ ।
ಚ್ಚರಿ ಸಾರಂಗಮೃಗಕ್ಕೆ ಚಿತ್ರಕಮೃಗಂ ಪಾವಿಗೆ ಪಾವಲ್ಲಿ ಮುಂ
ಗುರಿಗಳ್ಗಂಜದೆ ಬಿಟ್ಟು ಪೊ[11]ರ್ದುವು[11]ವಲಂಘಿಂ ಜಾತಿವೈರಂಗಳಂ ॥ ೧೭೭
(ಅನಂತನಾಥಪುರಾಣಂ, ೯–೯೮.)

---

[1] ಕಿ (ಕ). [2] ಮಂ (ಕ). [3] ಗುಗು (ಕ). [4] ಋಷಿ (ಖ.ಬ). [5] ನಾ (ಖ.ಬ). [6] ಸು (ಖ.ಬ). [7] ಹವ್ಯ (ಖ.ಬ). [8] ನಿಧಿ (ಕ). [9] ಲುಂ (ಕ). [10] ರರ್ಬಿಸುವ (ಕ). [11] ರ್ದಿರ್ದು (ಕ).

ಒಡವರ್ಪೆಱೆಸನೆಂಬ ಕೈಗುಡುವ ತೀರ್ಥಕ್ಕುಯ್ವ ದೇವಾರ್ಚನ
ಕ್ಕೆಡೆಯಂ ಮಾಡುವ ಹೋಮಸಾಧನಸಮಿ[1]ದ್ದರ್ಭಾ[1]ರ್ಘ್ಯತೋಯಂಗಳಂ ।
ಕುಡುವಿರ್ದಲ್ಲಿಗೆ ಕಂದಮೂಲಫಲಮಂ ತಂದೀವ ಪರ್ಯಾಪ್ತಿಯಂ
ಪಡೆವನ್ನಂ ಬಿಡದಿಂತು ವೃದ್ಧಯತಿಗಳ್ಗಾ ಸ್ಥಾನದೊಳ್ ವಾನರರ್ ॥ ೧೭೮

ಕರಿ[2]ಣಿ ಕರಾಂಗುಲಿಯಿಂ[2] ಕೇ
ಸರಿಯ [3]ಚಲ[3]ತ್ಕೇಸರಂಗಳಂ ತೊಡೆದುದು ಕೇ ।
ಸರಿಣಿ ಮೊಲೆಯೂಡುತಿರ್ದುದು
ಕರೇಣುಜಾತಕ್ಕಮಾತ್ಮಸಂಜಾತಕ್ಕಂ ॥ ೧೭೯
(ಅನಂತನಾಥಪುರಾಣಂ, ೩–೩೭.)

ಪರಮ ತಪೋನಿಧಿಗಳ್ ಸಂ
ಚರಿಸುವ ಬಟ್ಟೆಯನಗಲ್ದು ನಟ್ಟವಿಸಲ್ ಕಾ ।
ಯ್ದುರಗಂ ಪುಡಿಯೊಳ್ ಪೊರಳು
ತ್ತಿರೆ ಸೋಗೆಯನೆತ್ತಿ ಸೋಗೆ ಪಿಡಿದುದು ನೆಬಲಂ ॥ ೧೮೦
(ಅನಂತನಾಥಪುರಾಣಂ, ೩–೩೮.)

ಬೆಚ್ಚದೆ ಬೆದಱದೆ ಮೊಲೆಯಂ
ಸಾರ್ಚಿದ [4]ಮಱು[4]ವೆರಸು ಸುಟಿವ ಮಾನಿಸರುಲಿಪಂ ॥
ಮಚ್ಚಿದ ಪುಲ್ಲೆಗಳಲ್ಲಿ ಪೊ
ಣರ್ಚುತ್ತಿರ್ದಪುವು ಶಾಂತರಸಪರಿಣತೆಯಂ ॥ ೧೮೧

ಜಡೆಗಳ ಬಂಬಲೊಳ್ ತೊಡರ್ದು ಬಳ್ಳಗಳಿರ್ದವು ಮೆಯ್ಯನೆಯ್ದೆ ಪು
ತ್ತಡರ್ದವು ಗಡ್ಡಮಂ ಬಳಸಿ ಗೂಡುಗಳಿಟ್ಟವು ಪಕ್ಕಿ ಕಂಗಳಂ ।
ಕಡಿದವು ಪತ್ತಿ ಕಟ್ಟಿ [5]ಱುಪೆಗಳ್[5] ಬೆಮರಂ ನಸುನಕ್ಕುತಿರ್ಕು[6]ಮಾ
ಗಡ[6]ಮುರಗಂಗಳೇವೊಗಜ್ಪೆನೇದೊರೆಯುಗ್ರತಪಂ ತಪಸ್ವಿಯಾ ॥ ೧೮೨

ಒರಸಿಕೊಳಲೆಂದು ಪೊರ್ದಿದ
ಹರಿಣಂ ಮೇಗಡರ್ದ ಪುತ್ತು ಶಾರ್ದೂಲಂ ಶಾಂ ।
ತರಸಪ್ರ[7]ವಾಹ[7]ಮೆಸೆದಿರೆ
ಧರೆಯೊಳ್ ಮೂಡಿದ ಸುಧಾಂಶುವಂ ಮುನಿ ಪೋಲ್ತಂ ॥ ೧೮೩

---

[1] ದ್ಗಂಗಾ (ಖ.ಬ). [2] ಣೀಕರಂಗಳಂ (ಕ). [3] ಜರ (ಕ). [4] ಮೊಲೆ (ಖ.ಬ).
[5] ಱೆಗಲೊಳ್ (ಖ.ಬ). [6] ವಡಗಂ (ಕ). [7] ಭಾವ (ಖ.ಬ).

ಹರನಂ ಗೆಲ್ವೆನವೋಘಮೆಂದು ಮದನಂ ಪೆರ್ಚಿಂ ವ್ರತಂಗೊಂಡನೋ
ಸ್ಮರನೀಶಾಗ್ನಿಯೊಳಪ್ಪೆ ಶೋಕದೆ ವಸಂತಂ ಯೋಗಿಯಾಗಿರ್ದನೋ ।
ಹರಜೂಟೇಂದು ಸಮಸ್ತ ಮಂಡಲನಿಮಿತ್ತಂ ವರ್ಣಿಯಾಗಿರ್ದನೋ
ಪಿರಿದುಂ ತಾನೆನಲೊರ್ವ ತಾಪಸಕುಮಾರಂ ಧೀರನೊಪ್ಪಿರ್ದನೋ ॥ ೧೮೪

ಮನಮಿರೆ ಪುರ್ವಿನ [1]ಮೊದಲೊಳ್[1]
ಮನದೊಳಗಿರೆ ವಾಯು ಕರಣತತಿ ವಾಯುವಿನೊಳ್ ।
ಕುನಿದಿರೆ ಪದ್ಮಾಸನದೊಳ್
ತನುವಿರೆ ಯೋಗೀಂದ್ರನಾತ್ಮಚಿಂತೆಯೊಳಿರ್ದಂ ॥ ೧೮೫
(ಯಶೋಧರಚರಿತ್ರೆ, ೪–೧೩.)

ಪರಮತಪಃಪ್ರಭಾವ ನೆಲೆನಿಂದು ದೃಢಾಸನನಾಗಿ ನೀಗಿ ದು
ಷ್ಕರಣಗುಣಂ ಕುನಿಂಗಿರೆ ಮನಂ ನೊಸಲಲ್ಲಿರೆ ಲೋಚನಂಗಳು ।
ಳ್ಳರೆಮುಗಿದಿಂಬುವೆತ್ತಿರೆ ಸುದಂತಚಯಂ ಸಮನಾಗಿ ತಮ್ಮೊಳೊಂ
ದಿರೆ ಸಮಸಂದುದಾ ಪರಮಯೋಗಿಯ ಯೋಗ ನಿಯೋಗಭಾವಮಂ ॥ ೧೮೬

ಹರನಂ ಶಂಕರನಂ ಜಿತತ್ರಿಪುರನಂ ನೇತ್ರಾಗ್ನಿಭಸ್ಮೀಕೃತ
ಸ್ಮರನಂ ತುಂಗಹಟಜ್ಜಟಾಭರನನುದ್ಯದ್ಭಕ್ತಿಭಾ[2]ವಾ[2]ನತಂ ।
ವರಗಂಗಾಧರನಂ ಮೃಡಾಣಿವರನಂ ವ್ಯಾಲೋಲಬಾಲೇಂದುಶೇ
ಖರನಂ ತಾಳ್ದಿದನಾತ್ಮಹೃತ್ಕಮಲದೊಳ್ ಯೋಗೀಂದ್ರವೃಂದಾರಕಂ ॥ ೧೮೭
(ಕನ್ನಡ ಪಂಚತಂತ್ರಂ—ಪುಟ ೭೫, ಪದ್ಯ ೨೫.)

[3]ಖಂಡಿಸಿದಂ[3] ಮುನಿ ಸುಮನಃ
ಕಾಂಡ[4]ನನೆಂ[4]ದಳ್ಕಿ ಮಱುಗೆ ಬಂದುದು ಹಿಮರು ।
ಮ್ಮಂಡಳಮೆನೆ ಶಶಿಕಾಂತಕ
ಮಂಡುಲು ಪೊಳೆದತ್ತು ಪುಳಿನ ನಳಿ[5]ನಾಂತರ[5]ದೊಳ್ ॥ ೧೮೮
(ಅನಂತನಾಥಪುರಾಣಂ, ೩–೪೯.)

ಪ್ರೀಣನಮಾದುದು ಮುನಿಗೀ
ವರ್ಣಮುಖಾಂಬುಜಮನಡರ್ದಿರಲ್ ಶೈಶವದೊಳ್ ।
ವಾಣೀವಧು ನಿಱಿಸಿದ ನಿ
ಶ್ಕ್ರೀಣಿಯವೋಲ್ ಶ್ರುತದ ಶವಣಕೋಲ ವಿ[6]ಕಾ[6]ಸಂ ॥ ೧೮೯
(ಅನಂತನಾಥಪುರಾಣಂ, ೩–೫೦.)

---

[1] ಕೊನೆಯೊಳ್ (ಅ). [2] ರಾ (ಕ) [3] ಕಂಡರಸಿದ (ಖ.ಬ). [4] ಮಿದೆಂ (ಖ.ಬ).
[5] ನಾಂತಿಕ (ಕ). [6] ಳಾ (ಅ).

ನನೆಯಂಬಂ ಬಿಸುಟಿಕ್ಷುಚಾಪಲತೆಯಂ ಬಾಹ್ಯೊಂ[1]ಪ[1]ದೊಳ್ ಸೆಕ್ಕಿ ಕೇ
ತನಮಂ ಮಾನ್ಗೊಳದೊಳ್ [2]ಮಡಂಗಿ[2] ಮುನಿಪಾದೋಪಾಂತದೊಳ್ [3]ಸಾ[3]ರ್ದು
ಷನಿಷಣ್ಣಂ ರತಿಯಂ ಮಗುಟ್ಟಿ ಕಳೆದಂ [4]ದೌಶ್ಚಿ[ತ್ತ್ಯಪಶ್ಚಾತ್ಪ್ರ]ಯಾ [ವೇ ।
ಯಿನಿಯಂ ಕಿಂಚಿದಪಾಂಗಸಂಸ್ಫುರಿತಸಂಜ್ಞಾಲೋಕದಿಂ ಮನ್ಮಥಂ ॥ ೧೯೦
(ಅನಂತನಾಥಪುರಾಣಂ, ೩–೫೧.)

[5]ಕ್ಷಮಯುತ ತಾಪಸವ್ರಜಗಳಂವನೀರುಹ[5] ದೋರ್ಲತಾ
ಸಮುದಯ ಹಸ್ತ ಪಲ್ಲವದಿನೆಣ್ದೆಸೆ ಪಲ್ಲವಿತಂಗಳಾಗ ಜೋ ।
ಲ್ದಮೃತಫಲಂಗಳಂತಿರೆ ಕಮಂಡುಲು ಜಂಗಮಪಾರಿಜಾತದಾ
ರಮೆಯವೊಲಾಯ್ತು ನೋಡೆ ಸಮುದಾಯಸಮಾಗಮನಂ ಮುನೀಂದ್ರರಾ ॥೧೯೧

ತಲೆವಾಗುತ್ತಿರ್ದುವೆಂಬಂತೆಱಪ ಮರಗಳಿಂದರ್ಚಿಸುತ್ತಿರ್ದುವೆಂಬಂ
ತಲರ್ಗಳ್ ತಳ್ತಲ್ಲೊಗುತ್ತಿರ್ದಖಿಳ ತರುನಿಕಾಯಂಗಳಿಂ ಕೂಡೆ ಬದ್ಧಾಂ ।
ಜಳಿಯಾಗುತ್ತಿರ್ದುವೆಂಬಂತೆಸೆವ ಕಿಸಲಯಾಬದ್ಧ ಸಂಘನ್ನ ಶಾಖಾ
ಕುಲದಿಂ ಚೆಲ್ವಾದ ಋಷ್ಯಾಶ್ರಮದ [6]ರಚನೆ[6]ಯಂ [7]ಬಣ್ಣಿಸಲ್[7] ಬಲ್ಲನಾವಂ[7] ॥ ೧೯೨
(ಕಾದಂಬರಿ, ಪೂ. ಭಾ., ೨೨೫.)

ಪ್ರತಿಮಾಯೋಗ[8]ದೊಳೊ[8]ಪ್ಪುವ
ಯತಿಪತಿಗಳ ಕುರುಳ ಬಂಬಲೊಳ್ ಚಳಶಾಖಾ ।
ತತಿ [9]ಕೂಡೆ[9] ತೊಡ[10]ರ[10] ಬಿಡಿಸುವು
ದತಿಸಂಭ್ರಮದಿಂದಮೆಯ್ದೆ ಮರ್ಕಟನಿಕರಂ ॥ ೧೯೩
(ಲೀಲಾವತಿ, ೮–೬೩.)

ಪೊಕ್ಕು ಕುಟೀರಮಂ ಕೆದಱಿ ಹೊತ್ತಗೆಯಂ ಮಸಿಯಕ್ಕರಂಗಳಂ
ನೆಕ್ಕಿ ಬಿಸುಟ್ಟು ಬೊಕ್ಕಣದ ಒೂದಿಯನುಃಪೆನಲೂದಿ ಮೂಗಿನೊಳ್ ।
ಪೊಕ್ಕೊಡೆ ಸೀಂತು ಮಾಣ್ದಿರದೆ ಪಾಯ್ದು ವಿಜೃಂಭಿಸಿ ಕೊಂಬನೇಱಿ ಪು
ರ್ವಿಕ್ಕಿ ಕುಮಾರತಾಪಸರನೇಡಿಸುತಿರ್ದುದದೊಂದು ಕೋಡಗಂ ॥ ೧೯೪

ತುದಿಗೋಡಂ ಮೆಟ್ಟಿ ಕೊಂಬಂ ಪಿಡಿದು ಜಡಿದು ತೂಗಾಡಿ ಕಿಱ್ರಿಂದು ಮುನ್ನೇ
ಱಿದ ಕೋಡಂ ನೋಡಿ ಪಲ್ಲಂ ಕಿಱಿದಗಿದುರವಂ ಪಿಕ್ಕಿ [11]ಪೇನಿಂದೆ[11]ತಿನ್ನುರ್ವಿ ।

---

[1] ನ್ನ (ಕ). [2] ಬೆಲಂಗಿ (ಅ). [3] ಥು (ಅ). [4] ದೌಶ್ಚಿಂತ್ಯಪಾಶ್ಚಾತ್ಯ (ಅ), ದೌಶ್ಚಿತ್ತಪಶ್ಚೆತ್ಯ (ಕ), ದೌಶ್ಚಿತ್ತಪಶ್ಚಾತ್ತ (ಖ.ಬ). [5] ಕ್ರಮನಮನೀರಜಾವಳಿಗಳಿಂ ಧರೆನೀರಜ (ಖ.ಬ). [6] ಮಹಿಮೆ (ಖ.ಬ). [7] ನೋಡುತುಂ ಪೋದನಾಗಳ್ (ಅ). [8] ದಿನೊ (ಕ.ಖ.ಬ). [9] ತೂಗಿ (ಅ). [10] ರೆ (ಕ). [11] ಪೇನ್ದಿಂದುಱಿನು (ಕ), ಪಿಂದಿಂದುರೆ (ಖ).

ದ ಮೆಯ್ಯಂ ಕಯ್ಯೊಳೆತ್ತಂ ತುಱುಸಿ ಮಱುಗಳಂ ಸಾರ್ಚಿಕೊಂಡಂತೆ ಕುಳ್ಳಿ
ರ್ದು[1]ದು ಕೋಡಂ[1] ಕೋಡಹೇಮಂತದೊಳೆಳವಿಸಿಲಂ ಕಾಯಲೆಂದಾತ್ಮಧೂರ್ತಂ॥

ಪಲ್ಗಱುದು ಪೂರ್ವನುರ್ವಿ ಬೆ
ರಲ್ಗೊನೆಯಿಂ ತುಱುಸಿ [2]ಪಿರಿಯ ನೀಳ್ದು[2]ಪ್ಪುಬಂ ।
ಬಲ್ಗಳನುಗುರಿ[3]ಪಿ[3]ಕ್ಕಿ ಬಿ
ಸಿಲ್ಗಾದುದದೊಂದು ಮರದ ಕೋಡೊಳ್ ಕೋಡಂ ॥ ೧೯೬

ದರಿಯಂ ಬಳಸಿದ ಕರ್ಪುರ
ಮರಂಗಳಿಂ ಸುರಿದ [4]ಪ[4]ಳುಕು ತೀವಿರೆ ಪಲವುಂ ।
ದರಿ ಸರಿಸವಾಗಿ ವರಪಾ
ದರಿಯಲ್ಲದೆ ದರಿಗಳಿಲ್ಲೆನಿಪ್ಪುವು ನಗದೊಳ್ ॥ ೧೯೭

ಅಸಿತಾಹಿವ್ಯೂಹಮೋಹಂ ಪುದಿಯೆ ಮದಮಯೂ[5]ರೋತ್ಕರಂ[5] ಚಂದ್ರಕಾಂತ
ಪ್ರಸರಗ್ರಾವಂಗಳೊಳ್ ಮಾರ್ಪೊಳೆವ ನವತಮಾಲಸ್ಫುರಚ್ಛಾಖೆಯಂ ಖಂ ।
ಡಿಸ್[6]ಲೆಂದೈತಂದವಂ[6]ತಾ ಶಿಲೆಯೊಳೊಗೆದಶೋಕಚ್ಛದಚ್ಛಾಯೆ ತಳ್ತು
ರ್ವಿಸೆ ಮಾಂಸಭ್ರಾಂತಿಯಿಂ ತದ್ಗಿರಿಯೊಳೆಳಸುಗುಂ ಬಾಲಶಾರ್ದೂಲಜಾಲಂ ॥

ಪಾಶದ ನೇರ್ಣಳಂ ಪೊಸೆವ ಜಾಲಮನೊಪ್ಪಿರೆ ಮಾಬ್ಪ ಕಲ್ಲಯಂ
ಕಾಸಿನ ಕಂಬಿಯಂ ಸಮೆವ ಮಾರ್ಗಣಮಂ ಗಱುಗಟ್ಟುತಿರ್ಪ ಬಿ !
ಲ್ಗೀಸುವ ಬಾಣಮಂ ತಿರುಪಿ ತಿರ್ದುವ ಮಾರ್ತಿರುವಂ ತೊಡರ್ಚಿ ನೋ
ಟ್ಪ ಸಹಜಕ್ರಿಯಾವನ ವನೇಚರರಿಂ ಬಗೆಗೊಂಡುದಾ ವನಂ ॥ ೧೯೯
(ಜಗನ್ನಾಥವಿಜಯಂ, ೧೬-೧೬.)

ಪೊಸಪೊದೆಗಟ್ಟುವಂಬುಗಳ ಕುಪ್ಪಿಯನಾ[7]ವ[7]ರಿಪಾರ್ದ್ರಜಾಲಮಂ
ಪಸರಿಪ ಸೆಂಡುಗೋಲ [8]ಪಿಡಿಗ[8]ಟ್ಟುವ ಪೀಲಿಗಳಿಂ ತರಂಗಮಂ ।
ಪೊಸೆಯಿಪ [9]ಬೆತ್ತ ಗಣ್ಣಿವಲೆಯಂ[9] ಸಮಕಟ್ಟುವ [10]ಕಟ್ಟು[10]ಗೂಂಟಮಂ
ಬಸಿವ ಪುಳಿಂದ ಸಂಕುಳದ ಪೆರ್ಕಣದಿಂದೆಸೆದತ್ತು ಪಕ್ಕಣಂ ॥ ೨೦೦
(ಚಂದ್ರಪ್ರಭಪುರಾಣಂ, ೫-೫೪.)

ಒತ್ತುವ ಕೋಡ ಕಾಳೆ ಕುಣಿವೋಜೆಗೆ ಬಾಜಿಪ ಱುಂಜೆ ಬೇಂಟೆಯಿಂ
ದೆತ್ತಣಿನಪ್ಪ ಬಕ್ಕುಡಿಯ ಬಿಲ್ಲುಲಿ ಪೋತದ ಗಲ್ಲದಿಂದೆ ಗಂ ।

---

[1] ದದೊಂದಂ (ಖ.ಬ.) [2] ಬಿದಿಯನೀರ್ದು (ಕ), [3] ಬಿ (ಕ), ಪ (ಖ.ಬ). [4] ಹು (ಕ). [5] ರಭೃತಂ (ಖ.ಬ). [6] ಲ್ಯೆತಂಮಂಮುತಂ (ಕ). [7] ದ (ಕ.ಖ.ಬ). [8] ಪಿಡಿದ (ಕ.ಖ.ಬ). [9] ತತ್ತ ಕಣ್ ಕಿವಿಯ ತಾಂ (ಬ). [10] ಬೆಟ್ಟು (ಅ).

ಡೆತ್ತ್ವ ಕುಕ್ಕುಟಂಗಳ ಸರಂ ಕಿಱು ನಾಯ್ಗಳ ಪಿಂಡ ತಕ್ಕೆ ಮ
ತ್ತೊತ್ತುವ ಗರ್ಜಿತಂ ಮೆಱುವ ಬೆಟ್ಟದ ಬೇಡರ ಪಳ್ಳಿ ಪಳ್ಳಿಯೊಳ್ ॥* ೨೦೧

ಹರಿ ಪೊಯ್ಯೆ ಬಿರಿದ ಮದವ
ತ್ಕರಿಕುಂಭದಿನಗದೊಳೊಕ್ಕ ಸಿಕ್ತಾರಕ್ತ ।
ಸ್ಫುರಿತ ನವಮೌಕ್ತಿಕಂಗಳ
ನರೆ ಉಳಿ ವನಚರಿಯರೆರದ ಪಣ್ಗೆತ್ತಾಯ್ಗರ್ ॥* ೨೦೨

ಏನಿತ್ತೆನಿತ್ತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ ।
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದ[1]ನಂತು[1] ಕೀಸುಗುಂ ॥ ೨೦೩
(ಕಾವ್ಯಾವಲೋಕನಂ, ೩೫೯.)

ಎಣ್ಣೆಯೊಳರನೇಱಿಲ ತನಿ
ವಣ್ಣಂ ನುಣ್ಣಿಸಿದನಬ್ಜಭವನೆನಿಸುವ ಮೆ ।
ಯ್ವಣ್ಣದ ಶಬರಿ ತಮಾಲದ
ತಣ್ಣೆಟಲೊಳ್ ಕಣ್ಣ ಬೆಳಗೆ ಬೆಳಗಾಗಿರ್ದಳ್ ॥ ೨೦೪
(ಗಿರಿಜಾಕಲ್ಯಾಣಂ, ೩).

ಬೆಳಗಂ ಕಟ್ಟಲಿಸುವ ಮೆಳೆ
ಯೊಳಗಂ ಪೊಕ್ಕಲ್ಲಿ ತನ್ನ ಕಣ್ಗಳ ಬೆಳಗಿಂ ।
ಬೆಳಗಾಗಿರೆ ಬೆಳಗಿಲ್ಲದ
ಮೆಳೆಯಿಲ್ಲೆಂದಬಲೆ ಶಬರಿ ಸೊಬಗಟಿದಿರ್ದಳ್ ॥ ೨೦೫
(ಗಿರಿಜಾಕಲ್ಯಾಣಂ, ೧–೧೨೭.)

ಇರೆ [2]ತಚ್ಛಬರಿ[2] ಕಿರಾತಂ
ತರುಣಿಯ ಮುಗ್ಧತೆಗೆ ಮೆಚ್ಚಿ [3]ತರಳೇಕ್ಷಣಮಂ[3] ।
ಬರೆ ಮುಚ್ಚೆಯಿಡಿದ ಕಟ್ಟಲೆ
ದೊರೆಕೊಂಡತ್ತೆಂದು ನೆರೆದು ಸುಖಿಯಾಗಿರ್ದಳ್ ॥* ೨೦೬
(ಗಿರಿಜಾಕಲ್ಯಾಣಂ, ೧–೧೨೮.)

ತಳಿರ [4]ಸವಂಗ[4] ಪೂತ ಸೆಳೆಗೊಂಬಿನ ಬಿಲ್ ನವಪುಲ್ಲ ಕಂಕಣಂ
ಬಿಳಿಯಸಿಯಂಬು ಮಾಂದಳಿರ ಕೈಪೊಡೆ ತೋರದುಱುಂಬಿನೊಳ್ ತೆಱಂ ।

---

* ಈ ಚಿಹ್ನೆಯಿರುವ ಪದ್ಯಗಳು (ಕ) ಪ್ರತಿಯಲ್ಲಿಲ್ಲ. [1] ನೇಕೆ (ಕ.ಖ.ಬ). [2] ನುಪ್ರೌಢ (ಅ). [3] ಪ್ರಿಯಳ ಕಣ್ಣಂ (ಅ). [4] ತರಂಗ (ಖ.ಬ).

ಬೊಳೆವಲರ್ಗೊಂಚಲೊಪ್ಪೆ ತನು ನೀಲಶಲಾಕೆವೋಲಾಗೆ ಕಾಮನಂ
ತಳವಡೆ ನಿಂದಳಂದು ಮೊಲೆ ಬಾರದ ಬಾಲೆ ಪುಳಿಂದ ಲೀಲೆಯಿಂ ॥ ೨೦೭
(ಲೀಲಾವತಿ, ೮. ೨೮.)

ನನೆವೆರಸುಟ್ಟ ಮಾಂದಳಿರುವೊಪ್ಪಿರೆ ಕಾಡಲರಂ ತುಱುಂಬಿ ಚಂ
ದನದೊರಲಲ್ಲಿ ಪೋಯ್ದು ಬಿದಿರಕ್ಕಿಯನುನ್ಮದದಂತಿದಂತದೊಂ ।
ದೊನಕೆಯನೆತ್ತಿ ನುಣ್ಣನಿಯ ಸುಪ್ಪಿಯ ಗಾವರದೊಳ್ ತೊಡರ್ಚಿ [1] ಜ
ವ್ವನಿಗ[1] ಪುಳಿಂದಿ ಪಾಡಿದಳೊಱಲ್ದು [2]ಗುಣಪ್ರಿಯ[2]ನಂಕಮಾಲೆಯಂ ॥ ೨೦೮
(ಲೀಲಾವತಿ, ೮–೩೦.)

ಮಿಸುಗುವ ದಂತಿದಂತಮುಸಲಂ ಕರಪಲ್ಲವದೊಳ್ ಬೆಡಂಗುವೆ
ತ್ತೆಸೆದಿರೆ ರಕ್ತಚಂದನದೊರಲ್ ಬಿದಿರಕ್ಕಿಯನಾಂತುಕೊಂಡು ರಂ ।
ಜಿಸೆ ಬಗೆಗೊಂಡು ಗಾವರದೊಳೊಂದಿದ ಸುಪ್ಪಿ ಮನಕ್ಕೆ ರಾಗಮಂ
ಪಸರಿಸೆ ಪಾಡಿದಳ್ ಶಬರಿ ದೇಸೆವೆಡಂಗಿನ ದೇಸಿಯೋಳಿಯಂ ॥ ೨೦೯

ಬಿಡುಗಿವಿ ಮಿಂಚುವೆತ್ತ ಸುಲಿಪಲ್ ಕುಣಿದಾಡುವ ಕುಂತಳಂ ನೊಸ
ಲ್ಪಿಡಿದ ಬೆಮರ್ ಕದಕ್ಕದಿಪ ಪೆರ್ಮೊಲೆ ಪಾಡುವ ಸುಪ್ಪಿಯಿಂಚರಂ ।
ಪಿಡಿವ ತಳಕ್ಕೆವರ್ಪೊನಕೆ ಜಾಱುವ ಸೋರ್ಮುಡಿ ನೀಡಿದಂಘ್ರಿ ಚೆ
ಲ್ವಡರ್ದಿರೆ ಕ್ಕಟ್ಟಿಗುಟ್ಟುವ ಪುಳಿಂದಿಯರೊಪ್ಪುಗುಮಾ ನಗೇಂದ್ರದೊಳ್ ॥ ೨೧೦

ಅಡವಿಯ ಹುಲ್ಲೆಗಳ್ ಬರೆದ ಹುಲ್ಲೆಗಳಂತಿರೆ ವನ್ಯದಂತಿಗಳ್
ತೊಡ[3][ರ್ದು]3 ತೊಡರ್ಪಿನೊಳ್ ತೊಡರ್ದ ದಂತಿಗಳಂತಿರೆ ನುಣ್ಪು ವೀಣೆಯಂ ।
ಮಿಡಿದವೊಲಾಗೆ ಪಾಡಿದಳೊಱಲ್ದರನೇಱಿಲಪಣ್ಣನೆಣ್ಣೆಯೊಳ್
ತೊಡರ್ದವೊಲಪ್ಪ ಬಣ್ಣದ ಪುಳಿಂದಿ ಮನೋಭವನಂಕಮಾಲೆಯಂ ॥ ೨೧೧

ದನಿಯ ಪೋಗರ್ ಮನೋಭವನ ಬಾಳ್ವೊಗರಂತಿರೆ ಚಿತ್ತವಿತ್ತು ಮೇ
ಪನೆ ಮಱುದಾಲಿಸುತ್ತೆಸೆವ ಪುಲ್ಲೆಯುಮಾಗಳದರ್ಕೆ ಸಾರ್ದ ಬೇ ।
ಡನುಮಿರೆ ಚಾಪಮಂ ತೆಗೆದು ಚಿತ್ರಿಸಿದಂತೆ ಮನೋನುರಾಗದಿಂ
ವನಚರಿ ಪಾಡಿದಳ್ ಮಧುರಗೀತಗಳಂ ಕವಿರಾಜಮಲ್ಲನಾ ॥ ೨೧೨
(ಲೀಲಾವತಿ, ೮–೩೨.)

ತುಱುಗೆವೆಗಣ್ಣಕಾಂತಿ ಮರಗಬ್ಬುಲೆಯಂ ಬೆದಱಿಟ್ಟೆ ತೊಂಡೆವಾ
ಯ್ದೆಱೆ ಕಿಸುಸಂಜೆವೀಱೆ ದಶನಾಂಶು[4]ರಸಾಮೃತಪೂರಮಿಂಬಿನಿಂ[4] ।

---

[1] ದೋಪನಿಗ (ಅ). [2] ಮನೋಭವ (ಬ). [3] ರೆ (ಕ.ಖ.ಬ). [4] ನವಾಮೃತ ಪೂರವೆಂಬಿನಂ (ಅ), ರಸಾಮೃತಪೂರವೆಂಬಿನಂ (ಕ).

ತುಱುಗಿರೆ ಸಿಂಹವಾನೆ ಪುಲಿ ಪುಲ್ಲೆ ನವಿಲ್ ಫಣಿ ತಮ್ಮ ವೈರಮಂ
ಮಱೆದೊಡನಾಲಿಸಲ್ ಶಬರಿ ಪಾಡಿದಳಚ್ಯುತನಂಕಮಾಲೆಯಂ ॥ ೨೧೩

(ಜಗನ್ನಾಥವಿಜಯಂ, ೧೬--೨೫.)

ಪೊಳೆದು ಕದಂಪನಪ್ಪಳಿಸಿ [1]ಪಾಲೆ[1]ಯೊಳೊಪ್ಪುವ ದಂತದೋಲೆಯಂ
ದಳವಡೆ ಲೀಲೆಯಿಂ ಪಸಿಯ ಬಣ್ಣದ ಬೇಡಿತಿ ತಟ್ಟಲೊಳ್ ತಳ ।
ತ್ತಳಿಸುವ ತೋರಮುತ್ತುಗಳನಾಯ್ದಳಗಂ ಮುಗಿಲಂ ಪಳಂಚೆ ಬಿ
ದ್ದೆಳೆಯುಡುಜಾಲಮಂ ಹಿಮಕರಂ ಬೆರನಾಯ್ವ ನಿಶಾವಧೂಟಿವೋಲ್ ॥ ೨೧೪

(ಲೀಲಾವತಿ, ೮–೩೬.)

ಅಲರ್ಗಣ್ ಪೊಂಗಿದ [2]ಲೋಳೆ[2]ವಾಯ್ ನಗೆವೊಗಂ ತೊಂಗಲ್ಗುರುಳ್ ಕೆಂದಳಂ
ಸುಲಿಪಲ್ ಸೋರ್ಮುಡಿ ತೆಳ್ಪಸಿಱ್ ಪೆಱುನೊಸಲ್ ಪೊಂಬಾಪೆ ಪಚ್ಚೊಲೆ ನೇ ।
ಱಿಲಪಣ್ಣಂ ತಿಳಿಯೆಣ್ಣೆಯೊಳ್ [3]ಬಳಸಿ[3] ತೊಯ್ದಂತಪ್ಪ ನುಣ್ಗಪ್ಪು [4]ಪೆ
ರ್ಮೊಲೆ[4] ಚೆಲ್ವಾಗಿರೆ ನಿಂದ ಬೇಡಿತಿಯರಂ ಕಂಡಂ ಮಹೀವಲ್ಲಭಂ ॥ ೨೧೫

(ಕಾವ್ಯಾವಲೋಕನಂ, ೨೦೬.)

ಕಾಡಿಗೆಯೆಚ್ಚಿ ಪಲ್ ಸುಲಿದು ಕೆಂದಳಿರಂ [5]ತಿಱಿದು[5]ಟ್ಟು [6]ಮಾಲೆ[6]ಯಂ
ನೂಡಿ ಮದೇಭಮಸ್ತಕದ ಮುತ್ತಿನ ಹಾರಮನಿಕ್ಕಿ ಬೇಡನಂ ।
ಬೇಡಿತಿ [7]ಮತ್ತೆ[7] ತಂಬುಲಮನಾನನಮಂ [8]ನಡೆ[8]ನೋಡೆ ಪಂದಿ ಕೋ
ಡಾಡಿಸಿದಂದಮಾಯ್ತಡರೆ ನೋಡಿದ[9]ನೋಟಮ[9]ಪೂರ್ವರೂಪೆಯಾ ॥ ೨೧೬

ತಳಿರೊಳ್ ಮುಚ್ಚಿ[10]ಟ್ಟ[10] ಕೂಸಂ ಶಬರಿ ತೆಗೆಯೆ ನಿಶ್ಚೇಷ್ಟವಾಗಿರ್ಪುದುಂ ಕ
ಣ್ಗಳ ನೀರಂ ತೀವಿ ಬೇಗಂ ತೊಡೆದು ಹಿಮಕಣಾನೀಕಮಂ ತೇಂಕುದಾಣಂ ।
ಗಳನಂಟಂಟೆಲ್ಲಯುಂ ಕಾಣದೆ ಹರಣಮನತ್ಯುಷ್ಣದಿಂ ಸುಯ್ಯೆ ಸುಯ್ಯಿಂ
ದೆಳಗೂಸೆಬ್ಬಿತ್ತು ಕಾವ್ ಕಾವೆನೆ ತೊರೆದ ಕುಚಾಗ್ರಂಗಳಂ ನೀಡುತಿರ್ದಳ್ ॥೨೧೭

(ಲೀಲಾವತಿ, ೯–೨೧.)

ನನು ಸೊಕ್ಕಿ ಪಾಡಿ ಕಿನ್ನರಿ
ರಸವೊಸರ್ವಿನವೊಸರ್ವ ಬೆರಲ ಬೆಮರ್ವನಿಯಿಂ ತ ।
ಣ್ಣಸಗೊಂಡ ತಂತಿಗಳನಾ
ಱಿಸುವರ್ ಬಿಸುಸುಯ್ದು ಕಿನ್ನರರ್ ಬೀಣೆಗಳಂ ॥ ೨೧೮

---

[1] ಪುಳ್ಳೆ (ಕ). [2] ಲಾಳೆ (ಅ), ತೊಂಡೆ (ಕ). [3] ಬೆರಸಿ (ಖ.ಬ). [4] ಕಣ್ಮೊಳೆ (ಕ). [5] ನೆಱಿಯುಂ (ಕ). [6] ಪೊಲ್ಲೆ (ಖ.ಬ). [7] ಮಾಡಿ (ಖ.ಬ). [8] ನೆಱಿ (ಖ.ಬ). ನೋರ್ವನ (ಖ.ಬ). [10] ಟ್ಟು (ಅ).

ಚರಿಯಿಪ ಕಿನ್ನರಿಯರ ಮೊಗ
ಸಿರಿಗೊಯ್ಯನೆ ಗೋರಿಗೊಂಡು ಕೂಡೆ ಕುಕಿಲ್ದು ।
ಪ್ಪರಿಸಿ ರವಿರಥದ ವಾಜಿಗ
ಳರುಣನನೋರೊರ್ಮೆ ಗಸಣಿಗೊ[1]ಳ್ಪುವು[1] ನಭದೊಳ್ ॥ ೨೧೯

ಕರಿಣೀಶೃಂಗಾರಮುಗ್ರೋರಗಭಯಮಗದೈಷ್ಣ್ಯಾದ್ಭುತಂ ದಸ್ಯುವೀರಂ
ಶರಭಾಕಾರೋರು ರೌದ್ರಂ ಪ್ಲವಗವಿಕೃತಿಹಾಸ್ಯಂ ಚಮೂರುಪ್ರಣಶ್ಯ ।
ದ್ರುರುಬೀಭತ್ಸಂ [2]ದವ[2]ವ್ಯಾಕುಲಖಗಕರುಣಂ ಯೋಗಿ[3]ರಾಟ್‌ಶಾಂತ[3]ಶಾಂತಂ
ದೊರೆವೆತ್ತಾ ಶ್ಚರ್ಯಭೂತಂ ನವರಸಮಯಮಾಯ್ತಾ ನಗೇಂದ್ರೋಪಕಂಠಂ ॥ ೨೨೦
(ಚಂದ್ರಪ್ರಭಪುರಾಣಂ, ೧೦–೪೩.)

ಇರೆ ಶಬರಾಧಿರಾಜಕಟಕಂ ಕಟಕಂ ಕಟಕಂಧರೋಗ್ರಸಿಂ
ಧುರಮೆನೆ ನಿರ್ಝರೋಲ್ಲಹರಿಯುಂ ಹರಿಯುಂ ಹರಿಯುಂ ವಿಜೃಂಭಿಪಾ ।
ಗಿರಿತಟದಲ್ಲಿ ದಾವಶಿಖಿಯುಂ ಶಿಖಿಯುಂ ಶಿಖಿಯುಂ ಪ್ರಭೂತಮಾ
ಗಿರಿ ಬೆಳಗಂ ತಮಂ ತವಿಪಿನಂ ವಿಪಿನಂ ವಿಪಿ[4]ನದ್ಧ[4]ಮೊಪ್ಪುಗುಂ ॥* ೨೨೧
(ಜಗನ್ನಾಥವಿಜಯಂ, ೧೬–೨.)

ಆ[5]ಳ್[5]ಗನನಾಳಿಗೊಂಡು ನಲೆ ಜಾಯಿಲನಂ ನಲವಿಂದೆ ಮಾಱು ಪು
ಳಿಯನೆ ದಾಂಟಿ ಸಾಳುವನ ಝುಂಕಿಸಿ ಜೋಗನ [6]ಬಾಯ ಬಾಡುಮಂ[6] ।
ನಲೆ ನಿಲೆ ಕೋದು ಚಂದ್ರನ ಮೊಲಕ್ಕೆಣೆಯಪ್ಪಿನ [7]ಮಾಱುಪೋಯ್ತು ಕೇಳ್
ನಲೆ[7] ಬಡಿಕೋಲ ಸಾಲೊಳಗೆ ಪೆರ್ಚಿನ ಠಕ್ಕನೊಂದು ಪೆರ್ಮೊಲಂ ॥ ೨೨೨

ಅಡಿ ಮಿಡಿ ತೊಡೆ ನಡುವಿನಿತಂ
ಪಿಡಿವೆಡೆಯೊಳ್ ನಾಯನೊಂದು ಕೋಡೊಳ್ ಕ್ರೋಡಂ ।
ಜಡಿದಡಸಿ ಪೊಡೆ[8]ಯಲಕ್ಕಡಿ[8]
ಗೆಡೆದುದು [9]ಕಡಿದೆಡೆ[9]ಯೊಳಂದು ಶಬರಾಧಿಪನಾ ॥

ಮಕ್ಕಳ ಮೋಹ[10]ಮಂ ತೊಱೆದು[10] ಪಾಲನಿದಕ್ಕೆಱೆದುಂಬ ಕೂಟನೊ
[11]ಲ್ದ[11]ಕ್ಕಿಯುಮಂತದುಂ ನೆಱೆಯದಾನೊಡಗೂಡಿಯುವೊಂದುಮಗ್ಗುಳೊಳ್ ।
[12]ಪಕ್ಕೆಯನಿತ್ತು [12] ಸಾಕಿ[13]ದುದ[13] ನೋಡುತಲೆನ್ನಯ ನಾಯನೆಕ್ಕಲಂ
ಗಿಕ್ಕಿದೆನೆನ್ನ ಜೀವಮಿರಲಾನಿದಱಿಂದಕಟೇಕೆ ಮುಂಚೆನೋ ॥ ೨೨೪

---

[1] ಳಿಸುಗು (ಕ). [2] ಧನು (ಖ.ಬ). [3] ಸಂಜಾತ (ಕ). [4] ನಾಂಧ (ಕ).
* ಈ ಪದ್ಯ (ಖ.ಬ) ಪ್ರತಿಗಳಲ್ಲಿಲ್ಲ. [5] ಳಿ (ಕ). [6] ತೋರಬಾಲಮಂ (ಕ). [7] ಮೊಲೆ ಪೋಗಿ ಪೆರ್ಬಲೆ (ಕ). [8] ದು ಹೊರಳಲ್ಕೆ (ಖ.ಬ). [9] ವಿರ್ದೆಡೆ (ಖ.ಬ). [10] ದಿಂತೆ ಗೆದು (ಖ.ಬ). [11] ಯ್ದಿ (ಕ). [12] ಸಕ್ಕೆಯನಿಕ್ಕಿ (ಖ.ಬ). [13] ದಪೆ (ಕ).

ಒಡನಾಡಿಸಿಯೊಡನೋದಿಸಿ
ಯೊಡಬೆಳಯಿಸಿದೆನ್ನ ಚೆನ್ನ ಕುನ್ನಿಯನೀ ಕ ।
ಕ್ಕಡವಂದಿ ಕೊಂದುದಿನ್ನದ
ಱೊಡನಟಿವೆಂ ಕೊಲ್ಲದುಟಿಯೆನೀ ಸೂಕರನಂ ॥ * ೨೨೫

(ಗಿರಿಜಾಕಲ್ಯಾಣಂ, ೧-೧೦೮.)

ವೀರಾವತಾರನಸುರನ
ಬಾರಿಗೆ ಗುಱಿಯಾದುದೆನ್ನ ನಾಯ್ಗಂ ನೀರೊಳ್ ।
ನೀರಿಟಿವನಲ್ಲ ಪಂದಿಯ
ಬಾರಂ [1]ಕೊಱಿದ[1]ದಱ ನೆತ್ತರೊಳ್ ನೀರಿಟಿವೆಂ ॥ ೨೨೬

ಪಿಂಗದೆ ಕಿರಾತ ನಲವಿಂ
ಬೆಂಗೊಂಡೆಕ್ಕಲನನಟ್ಟಿ ಪಿಡಿದತಿ ಮುದದಿಂ ।
ಮುಂಗಾಣದೆನ್ನ ನಚ್ಚಿನ
ಸಿಂಗಮನುಗುಬುಗುಡೆನುತ್ತೆ ವನಚರನಿಱಿದಂ ॥ ೨೨೭

ಹುಲಿ ಬಿಲದಿಂ ಬಿಸಿಲ್ಗೆಳಸಿ ಪಟ್ಟಿರೆ ಕಂಡು ವನೇಚರಂ ಕಱು
ತ್ತಲಗನೆ ಕಿಬ್ಬು ದಂಡೆಗುಡೆ ಕೊರ್ಬಿದ ಪೆರ್ಬುಲಿ ಮೇಲುವಾ[2]ಯಲಾ ।
ಪುಲಿಯನೆ [2]ಕುತ್ತಿಯಪ್ಪಳಿಸೆ ಕಂಡು ಪುಳಿಂದಿ ಮನೋನುರಾಗದಿಂ
ಕಲಿ ಕಲಿದೇವ ಭಾಪೆನುತಮಪ್ಪಿದಳೋವುತೆ ತನ್ನ ನಲ್ಲನಂ ॥ ೨೨೮

ಪೊಸ ನಸೆಯಿಂ ಮೃಗಂ ಮೃಗಿಯ ಮಗ್ಗುಲಿಸುತ್ತಿರೆ ಬೇಡ[3]ನಂದು ತಾ
ನೆ[3]ಸಲೆರಡಂಬನಂಬಿನೊಳೆ ಮಾರ್ಮಸೆಯುತ್ತಿರೆ ಪುಲ್ಲೆ ಕಂಡು ಚಿಃ ।
ಕಿಸುಗುಳಿ ಬೇಡ ನೀನೆಸೆವೊಡಂಬೆರಡಂ ತೊಡುವಾ ಪತಾಕೆಯೆ
ಮ್ಮನುವೆರಡೊಂದೆ ಜೀವಮೆನು ಮೇಣ್ಸೆ[4]ಯಲ[4] ಸರಳೊಂದೆ ಸಾಲದೇ ॥ ೨೨೯

ಹರಿಣಿಯನೆಚ್ಚು ತ[5]ತ್ಪ್ರಿಯ[5]ಕುರಂಗಮನಾರ್ದೆಸಲೆಂದು ಬಾಣಮಂ
ತಿರುವಿನೊಳಿಟ್ಟು ತೀವಿ ತೆಗೆವನ್ನಗಮಂಗಜಬಾಣಘಾತದಿಂ ।
ದೆರಳೆ ನೆಲಕ್ಕೆ ಬೀಳೆ ಮರು ಭಾಪುಪಕಾರಿಯೆನುತ್ತೆ ಬಿಲ್ಲುಮಂ
ಸರಳುಮನಿಕ್ಕಿ ಕೈಮುಗಿದು ಬಣ್ಣಿಸಿದಂ ಸ್ಮರನಂ ವನೇಚರಂ ॥ ೨೩೦

---

* ಈ ಪದ್ಯ (ಖ.ಬ) ಪ್ರತಿಗಳಲ್ಲಿಲ್ಲ. [1] ಸೀಳ್ದ (ಖ.ಬ). [2] ಯೆ ಗಾರ್ಘುಲಿ ಲೆನೆ (ಕ). [3] ಕಂಡದಂತೆ (ಕ). [4] ಏೀ (ಕ). [5] ತ್ಪತಿ (ಕ).

ಕರಡಿಯನೆಚ್ಚೊಡುರ್ಚಿ ನರಲುರ್ಕಿನ ಪಂದಿಯನುರ್ಚಿ [1]ಭೀಕರೋ
ತ್ಕ[1]ರತರಮಪ್ಪ ಪೆರ್ಬುಲಿಯನುರ್ಚಿದೊಡಂತವು ರೌದ್ರ ಕೋಪದಿಂ ।
ದಿರದಱಿಯಟ್ಟಲಂಜದೆ [2]ಕ್ರಮಂ ಪಿಡಿ[2]ದೊಯ್ಯನೆ ನ್ನೇಣ ಕಿತ್ತುಮಾ ?
ಕರಡಿಯನಾ ವರಾಹನುಮನಾ ಪುಲಿಯಂ ತಿವಿದಂ ವನೇಚರಂ ॥ ೨೩೧

ತೋರ ಬಿದಿರ್ಮುತ್ತಿನ ನವ
ಹಾರದ ಕೆಂದಳಿರ್ಗಳುಡೆಯ ವನಚರಿಯೊರ್ವಳ್ ।
ತಾರಾವಳಿಯಿಂ ನವಸಂ
ಧ್ಯಾರಾಗದೊಳೆಸೆವ ನಿಶೆಯನನುಕರಿಸಿರ್ದಳ್ ॥ ೨೩೨

(ಜಗನ್ನಾಥವಿಜಯಂ, ೧೬–೧೮.)

ಸರಿಕಿಸೆ ವೃಕ್ಷಾರೋಹಣ
ವರಾಹಚರ್ವಿತಕ ವೇಣುದಾರಿತಕಂಗಳ್ ।
ಕರಮೆಸೆಯೆ ಕಾಮಶಾಸ್ತ್ರದ
ದೊರೆಯಾದುದು ಶಬರಶಿಶುಗಳುಜ್ಜುಗಮದಱೊಳ್ ॥ ೨೩೩

(ಚಂದ್ರಪ್ರಭಪುರಾಣಂ, ೫–೫೫.)

ತುಱುಗಿರೆ ತಮ್ಮ ನುಣ್ಮೊಡೆಯ ಕಾಂತಿ ಕವಲ್ತು ದೆನಿಪ್ಪ ಪೀಲಿಯೊಳ್
ಮಿಱುಗುವ ವಿದ್ರುಮಾಧರದೆ ಸೂಸಿದ ಕಾಂತಿಕಣಂಗಳೆಂಬಿನಂ ।
ಮಿಱುಗುವ ಗುಂಜಿಯಾಭರಣಮುಣ್ಮ ವಪಾಂಗಮರೀಚಿಮಾಲೆ ಸು
ತ್ತಿಱಿದುದೆನಿಪ್ಪ ಕೇತಕಿಯ ಬಲ್ಸುಟಿಯೋಲೆ ಬೆಡಂಗವಂದಿರಾ ॥ ೨೩೪

ಪೊನತಳಿರ ಚಮರಿ ಕ್ರೊಸಗಿನ
ಕುಸುಮದ ಪೊರೆ ಪುಲ್ಲಕಂಕಣಂ ಕಣಗಿಲೆಯೊಂ ।
ದಸಿಯ ಪಸಿಯೋಲೆ ನೆಲ್ಲಯ
ತಿಸರಂ ಸರಸಿಜದ ನೂಲೆ ನೂಲ್ ವನಚರಿಯಾ ॥ ೨೩೫

ಆಱ[3]ದಿ[3]ರೆ ತೆಗೆಯಲಿನಿಯಂ
ಮಾಱಲ್ ಪೋದಳ್ ಮೃಗಕ್ಕೆ ಬಿಲ್ಲಂ ಭಿಲ್ಲ ।
ರ್ಗೆಱಿದ ಜವ್ವನ ನಿರಿಯಂ
ಬೀಱಲ್ ಪೋಪಂತೆ ಶಬರಿ ಶಬರಾಲಯದೊಳ್ ॥ ೨೩೬

[4]ಕಟ್ಟೊಪ್ಪಮಾದ[4] ಬಿಂಕದ
ಬೊಟ್ಟಿಕ್ಕಿದ ಪುಲ್ಲಕಂಕಣಂ ಬಿಳಿಯಲರ್ಗಣ್ [5] ।

---

[1] ಪೋಗಿ ಭೀಕ (ಕ.ಖ.ಬ). [2] ತಮಂ ಬಿಡ (ಖ.ಬ). [3] ಲ (ಕ). [4] ಗುಟ್ಟು ತಳಿರುಟ್ಟು (ಕ).

ಬಟ್ಟವೊಲೆ ಪೊಳೆವ ಕದಪಳ
ವಟ್ಟಿರೆ ಚಂಚರಿಯರಲ್ಲಿ ಮೆಲ್ಲನೆ ನಡೆವರ್ ॥ ೨೩೭

ಬೆರಸದಿರೆ ನುಣ್ಪಿನಿಂ ಕಿ
ನ್ನರಿಯರ ಸರದೊಡನೆ ತಮ್ಮ ಕಿನ್ನರಿಯ ಸರಂ ।
ಬೆರಲಂ ಮಿಡಿಯದೆ ಮಱೆದಂ
ಬೆರಲಂ ಮಿಡಿದಪರು ಕಿನ್ನರರ್ ಕಿನ್ನರಿಯಂ ॥ ೨೩೮

ಓರಂತೆ ಮೆಚ್ಚಿದಂ ಕೃತಿ
ಸಾರಂ ಗಿರಿವರ್ಣನಕ್ಕೆ ಹೊಯ್ಸಳವಂಶೋ ।
ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೨೩೯

ಇದು *ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ಷ್ಟಾದಶಸ್ಥಳವರ್ಣನಮಾರ್ಗಮನೋಪರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ಪರ್ವತವರ್ಣನಂ ತೃತೀಯಾಶ್ವಾಸಂ ಸಂಪೂರ್ಣಂ.

---

* ಇಲ್ಲಿ (ಕ) ಪ್ರತಿಯಲ್ಲಿ "ಸರಸ್ವತೀ ಸರ್ವಾಂಗ" ಎಂಬುದರ ಹಿಂದೆ "ಸಮಸ್ತ ಭುವನಾನಂದ" ಎಂಬ ವಿಶೇಷಣವಿದೆ.

ಪುರವರ್ಣನಂ

ಬನಮುಂ ಕೆಯ್ವೊಲಗಾವ ಪಾಮರಿಯರುಂ ಮಾರ್ಗ[1]ಪ್ರಪಾಪಾಲಿಕಾ[1]
ಜನಮುಂ ಗೋಕುಲಮುಂ ಜಲಾ[2]ಶ[2]ಯಮುಮಾರೂಢಾಸ್ತ್ರಶಸ್ತ್ರಶ್ರಮಾ ।
ವನಿಯುಂ ಕೋಂಟೆಯುಮೆತ್ತಿ ದಂಗಡಿಗಳುಂ ವಾರಾಂಗನಾವಾಟ ದೇ
ವ ನ್ಯ[3]ಪೇಂದ್ರಾ[3]ಲಯವರ್ಗಮುಂ ಪುರವರವ್ಯಾವರ್ಣನಕ್ಕಾಸ್ಪದಂ ॥ ೧

ಜನಪದಮುಂ ವನಾವಳಿಗಳುಂ ಬೆಳೆಗೆಯ್ಗಳುಮಾಳ್ದ ಗೋಪುರಂ
ತನೆ ಬೆಳೆಗಾಯ್ಯ ಪಾಮರಿಯರುಂ ಪ್ರಪೆಯುಂ ಪುರುಳ್ [4][ಪ್ರರೋಹ]4ನಂ ।
ದನ ಪರಿಘಾಪರೀತವಳಯಾಪಣ ಪಣ್ಯಗೃಹಾಳಿ ದೇವತಾ
ಜನಪ ಗೃಹಂಗಳುಂ ಪುರವರೋಚಿತವರ್ಣನಕಪ್ಪುದಾಸ್ಪದಂ ॥ ೨

ಅದು ಮತ್ತೆಂತನೆ ತೆನೆಗಳ
ಪುದಿವು ತರಂಗಂಗಳಾಗೆ ಸೀಗೋರ್ಗಂಜೆಯದೆಂ ।
ಬುದಧಿಯ ಬಳಸಿಂ ಮೆಱೆದಿ
ರ್ಪುದು ಪುರದಿಂದೇಱ್ಗೆವೆತ್ತು ಜಂಬೂದ್ವೀಪಂ ॥ ೩

ಮೇರುವಿ[5]ನಂದ[5]ಮಂ ಜನನಿದಾನಮನಗ್ಗದ ಜಂಬು[6]ದೀವ[6]ಮಂ
ವಾರಿಧಿಸರ್ಪನಪ್ಪಿದುದು ವಾರಿಧಿವೇಷ್ಟಿತಭೂಮಿಭಾಗದೊಳ್ ।
ಭಾರತವರ್ಷಮೊಪ್ಪಿದುದು ಭಾರತವರ್ಷದ ತೆಂಕ[7]ವಂಕ[7]ದೊಳ್
ಧಾರಿಣಿಗುಜ್ಜ್ವಲಶ್ರವಣ[8]ಕುಂಡಲ[8]ಮಾಯ್ತು ಸುರಮ್ಯಮಂಡಲಂ ॥ ೪
(ಅನಂತನಾಥಪುರಾಣಂ, ೧೧–೪.)

ಅದು ನಗರನಿಕರಪೂರಿತ
ಮದು ಖರ್ವಟಕಲಿತಮದು ಮಡಂಬಾಸ್ಪದಮಂ ।
ತದು ಸಂವಾಹಮನೋಹರ
ಮದು ತಾಂ ಗ್ರಾಮೋಪಸೇವ್ಯಮದು ಖೇಟಮಯಂ ॥ ೫

[1] ಪ್ರಕಾಮಿನೀ (ಕ). [2] ಶ್ರ (ಕ). [3] ಪಾಲಾ (ಖ.ಬ). [4] ಪ್ಪರೋಪ (ಕ), ಪ್ಪದೋಪ (ಖ.ಬ). [5] ನರ್ಧ (ಅ). [6] ದ್ವೀಪ (ಖ.ಬ). [7] ವಕ್ಕ (ಕ.ಖ.ಬ). [8] ಖಂಡಳ (ಅ), ಮಂಡಳ (ಬ).

ಆ ನಾಡು ಸಿರಿಯ ಕಣಿ ನೋ
ಡಾ ನಾಡು ಮನೋಜಕಲ್ಪವೃಕ್ಷದ ತಳಿ[1]ಗರ್ಗಾ ।
ಡಾ[1] ನಾಡು ಚಿತ್ತಭವನೆಂ
ಬಾನೆಯ ತಾ[2]ಯ್ನಾ[2]ಡು ವಿಶ್ವವಿಶ್ವಂಭರೆಯೊಳ್ ॥ ೬

ಒದವಿದ ದೇಶದುನ್ನತಿಯನೇವೊಗಳ್ವೆಂ ಮದಮತ್ತಹಸ್ತಿ ಪು
ಟ್ಟದ ಮಲೆ ಮುತ್ತು ಪುಟ್ಟದ ಬಿದಿರ್ ಮಣಿ ಪುಟ್ಟದ ಬೆಟ್ಟು ಕೌಂಗು ಪು
ಟ್ಟದ ಪೊಲನಂಚೆ ಪುಟ್ಟದ ಕೊಳಂ ನದಿ ಪುಟ್ಟದೊಸಱ[3]ನ[3]ಮೇರು ಪು
ಟ್ಟದ ಪುರನಂದನಂ ಜರಗು ಪುಟ್ಟದ ಭೂತಳಮಿಲ್ಲ ದೇಶದೊಳ್ ॥ ೭

ಊರೂರ್ಗೆ ಮುಂದಣೂರ್ಗಳ್
ದೂರಮು[4]ಮೊಪ್ಪ[4]ರಿಯೆ ನಡುವೆ [5]ಕ್ಕೈಗೆಯ್ದ[5] ಪೊದ ।
ಪ್ಪಾರವೆಯುಂ ತುಱುಪಟ್ಟಿಯ
ದಾರಿಯ ಬೀಣ್ಗೆಲನದೇನುಮಿಲ್ಲಾ ನಾಡೊಳ್ ॥ ೮

ಮಾಮರನಲ್ಲದಿಲ್ಲ ತನಿಗಂಪಿನ ಮಲ್ಲಿಗೆಯಲ್ಲದಿಲ್ಲ ಪೊಂ
ದಾಮರೆಯಿಲ್ಲದಿಲ್ಲ ಪೊಣರ್ವಕ್ಕಿಗಳಿಂಚರಮಿಲ್ಲದಿಲ್ಲ ಗೀ ।
ತಾಮೃತಮಿಲ್ಲದಿಲ್ಲ ಕಡುಮುದ್ದಿನ ಚೆಲ್ವಿನ ಪೆಂಡಿರಿಲ್ಲದಿ
ಲ್ಲಾ ಮಹಿ ಭೋಗಭೂಮಿಯೊ ಮನೋಭವರಾಜನ ಜನ್ಮಭೂಮಿಯೋ ॥ ೯

ಬನಮೇ ಕೀರಾಳಿ ಪುಂಸ್ಕೋಕಿಲಮಧುರರವೋದ್ದಾಮಕೋಳಾಹಳಂ ಕಾ
ನನಮೇ ಗಂಧೇಭದಾನಪ್ಲವಪರಿಮಳಚಂಚನ್ನ[6]ದೀವಾಃಪ್ರವೃದ್ಧಂ[6] ।
ಜನಮೇ ಭೋಗೋಪಭೋಗಾನ್ವದಸಮುಚಿತಲಕ್ಷ್ಮೀವಿಳಾಸಾಶ್ರಯಂ ತಾ
ನೆನೆ ಮತ್ತೇನೆಂ[7]ಬುದಂ[7]ಗೋದ್ಭವನರಪತಿಗಾ ಪೂರ್ಣಸಪ್ತಾಂಗಮಂಗಂ ॥ ೧೦

ಸ್ಮರಶರಕೋಟಿಗಾರ ಬಗೆಯಂ ಗುಱಿಮಾಡವೆ ನಾಡೆ ನೀಱಿವೆಂ
ಡಿರ ಬಟಿನಲ್ವಗಲ್ವ ಬನದಾಗಿಪ ಭೋಗಿಪ ಕಾಯ್ವ ಬಯ್ವ ನಾ ।

---

[1] ರಂತಾ (ಕ). [2] ಯ್ಗಾ (ಬ). [3] ರ್ಮೆ (ಕ), ರ್ಸು (ಬ). [4] ಮಪ್ಪ (ಕ), ಮೊಪ್ಪು (ಬ). [5] ಕ್ಕೈಗಟ್ಟಿ (ಕ). [6] ಟೀವಾತಪ್ರೋದ್ಭಂ (ಕ), ಟೀವಾನವ್ಯದ್ಭಾಂ (ಬ). [7] ಬರಂ (ಕ).

ಣ್ಗರೆವೆಡೆವೇಲ್ಪುಬಲ್ಪ ಬಿಡೆ ಪತ್ತಿಪ [1]ಜೊತ್ತಿ[1]ಪ ಪಾಡುವಾಡುವಾ
ದರ ಪಿರಿದೊಪ್ಪೆ ಮೆಚ್ಚಿಸು[ಗು]ಮಿಚ್ಚಿಸುವಂಗಜರಾಜಚೇಷ್ಟೆಗಳ್ ॥ * ೧೧

(ಪುಷ್ಪದಂತಪುರಾಣ, ೨–೨೭.)

[2]ತ[2]ನಿತು ತೊಡಂಬೆವಿಟ್ಟುದಿರ್ದ ಪಣ್ಗಳನಟ್ಟಿಯೆ ಮೆಲ್ದು ಸೋರ್ವ ತೆಂ
ಗಿನ ತಿಳಿನೀರನೀಂಟಿ ಲತೆಯಿಂದುಗುತಂದಲರೊಳ್ ಮಲಂಗಿ ಮೆ
ಲ್ಲನೆ ತೊನೆಯುತ್ತಮಿರ್ಪೆಲೆಯ ತಣ್ಣೆಲರಿಂ ಬೆಮರಾಱಿ ಪೌರನಂ
ದನದೊಳಗಪ್ರಯತ್ನಸುಖಮಂ ಪಥಿಕರ್ ಪಡೆವರ್ ನಿರಂತರಂ ॥ ೧೨

(ಚಂದ್ರಪ್ರಭಪುರಾಣಂ, ೩–೧೫.)

ದಾರಿಯ ನಂದನಂ[3]ಬಿಡಿದು[3] ಪೂತ ಕೊಳಂ ಕೊಳದೊಳ್ ಬಲೆಲ್ಕೆಯಂ
[4]ಜಾ[4]ರಿಸಲೆಂದು ನಿಂದ ಪಥಿಕರ್ ಪಥಿಕಾನಯನಪ್ರಭಾಮೃತಾ ।
ಸಾರ[5]ದೆ[5] ತೀವಿ ಬರ್ಪ ಪರಿಕಾಲ್ ಪರಿಕಾಲ್ಗಳ ನೀರನುಣ್ಬ ಕೇ
ದಾರವನಂ ಪುನಂಗೊಳಿಸುತಿರ್ಪುವು ಭೂವನಿತಾವಿಭೂತಿಪ್ರೋಲ್ ॥ ೧೩

(ಜಗನ್ನಾಥವಿಜಯಂ, ೨–೪.)

[6]ಧೃ[6]ತನಾನಾವರ್ಣಪರ್ಣಚ್ಛವಿ[7]ಸಮುದಯ[7]ಸಂದರ್ಶನೀಯಂ ದಳತ್ಪು
[8]ಷ್ಪಿತಮಲ್ಲೀಘ್ರಾಣ್ಯ[8]ಮುದ್ಯತ್ಫಲರಸವಿಳಸಾಸ್ವಾದನೀಯಂ [9]ಪಿಕೋಚ್ಚಾ ।
ರಿತ[9]ನಾದಾಕರ್ಣನೀಯಂ ಸಿಕತವಿಮಳಶಯ್ಯಾತಳಸ್ಪರ್ಶನೀಯಂ
ಸತತಂ ಪೌರರ್ಗೆ ಪಂಚೇಂದ್ರಿಯಸುಖಮೊದವಂ ನಂದನಂ ಮಾಟ್ಪುದೆಂದುಂ ॥೧೪

(ಚಂದ್ರಪ್ರಭ ಪುರಾಣಂ, ೧–೧೧೨.)

ಅಲರ್ಗಣ್ ಪುಷ್ಪವಾಟಿಕುಲದೊಳ್ ಬೆಳೆದಿರ್ಪುವು ಮಾನಕೇತುಗಳ್
ಜಲರುಹಷಂಡದೊಳ್ ಮೆಱೆಯುತಿರ್ದಪುವಿಕ್ಷು[10]ವನಂ[10]ಗಳಲ್ಲಿ ಬಿ ।

---

[1] ಚಾರಿ (ಬ). [2] ಪ (ಬ).

*ಅರಲಸರಲ್ಗದಾರ ಮನಮುಂ ಗುಱಿಮಾಡವೂ ನಾಡೆ ನೀಱುವೆಂ
ಡಿರ ನಡವೊಪ್ಪುವಪ್ಪುವೊಡಗೂಡುವ ನೋಡುವ ನುತ್ತುವೊತ್ತುವಾ ।
ದರಿಪೊಲಿಸ್ರೋಲ್ವ ಗೆಲ್ವ ಬನದಾಗಿಪ ಭೋಗಿಪ ಕಾಯ್ವ ಬಯ್ವ ನಾ
ಣ್ಗರೆವೆರೆವಿಂಬುಕೆಯ್ವುವೊಳಪೊಯ್ವುವನೇಕ ವಿಚಿತ್ರ ಚೇಷ್ಟೆಗಳ್" ॥

(ಪುಷ್ಪದಂತ ಪುರಾಣದ ಲೈಬ್ರೆರಿಯ 51ನೆಯ ನಂಬರ್ ಓಲೆಯ ಕೋಶದ ಪಾಠ.)

[3] ಜಡಿಯೆ (ಕ . [4] ಬಾ (ಅ). [5] ಕೆ (ಖ.ಬ). [6] ದ್ರು (ಕ). [7] ಯೆನ ಯನ (ಕ). [8] ಷ್ಪತತಿಜಾಘ್ರಾಣ (ಬ), ಷ್ಪತತಿಘ್ರಾಣೀಯ (ಅ). [9] ಪಿಕಪ್ರೋತ್ಥಿತ (ಬ). [10] ಕಣಂ (ಬ).

ಲ್ಲೊಲೆಗೆ ಬರುತ್ತಮಿ[1]ರ್ದಪುವು[1] ಕಾದಪೆನೆಂದು ವಸಂತನೆತ್ತಲುಂ
ತೊಲಗದೆ ನಿಂದನಂಗಭವನಾಜ್ಞೆಯಿನಾ ವಿಷಯಾಂತರಾಳದೊಳ್ ॥ ೧೫
(ಅನಂತನಾಥಪುರಾಣಂ, ೩–೮.)

ಬಳಸಿರ್ದ[2]ದ್ರಿ[2]ಯ ಕಲ್ಗಳೆಲ್ಲಮವು ಪೊನ್ನುಂ ರನ್ನಮುಂ ಪೂಗೊಳಂ
ಗಳ ನೀರೆಲ್ಲಮನೇಕಸಿದ್ಧರಸಮುಂ ಪೀಯೂಷಮುಂ ಕೆಯ್ವೊಲಂ ।
ಗಳ ಸನ್ಯಾವಳಿಯೆಲ್ಲಮೊಳ್ಗಿಬವೆಯುಂ ಪುಂಡ್ರೇಕ್ಷುವುಂ ನಂದನಂ
ಗಳ ಧಾತ್ರೀರುಹಜಾತಮೆಲ್ಲಮಮರೋರ್ವಿೀಜಾತಮುಂ ಚೂತಮುಂ ॥ ೧೬

ಒದವಿದ ಮುಟ್ಟು ತೀವಿದ ಕಳಂ ಬೆಳೆತೀವಿದ ಗದ್ದೆ ಕೌಂಗುತೀ
ವಿದ ಬನವಂಚೆತೀವಿದ ಕೊಳಂ ವಿವಿಧಾಂಬುಜಷಂಡಮೆಯ್ದೆ ತೀ ।
ವಿದ ಕೆಱೆ ಹಟ್ಟಿತೀವಿದ ಹಯಂ ಮನೆತೀವಿದ ಮಕ್ಕಳೋಳಿ ಪಿಂ
ಗಿದ ಸಿರಿತೀವಿದಂಗಡಿಗಳೆಲ್ಲಿಯುಮಲ್ಲಿಯ ಪಳ್ಳಿಪಳ್ಳಿಯೊಳ್ ॥ ೧೭

ಮೇಳಿಸಿ ಕಾಯ್ಬುಱುವುದು ವನ
ಪಾಲರೊಳಾಱಿಡಿಯ ಮನಕದೆಸಕಂ ಸುಮನೋ ।
ಮಾಲೆಗಳೊಳ್ ಕದ್ದೋಡುವ
ಶೀಲಂ ಶೌಂಡಿಕರೊಳಲ್ಲದಿಲ್ಲಾ ನಾಡೊಳ್ ॥ ೧೮

ಮೇದರೊಳಲ್ಲದೆ ವಂಶ
ಚ್ಛೇದಂ ಗಾರುಡದೊಳಲ್ಲದಹಿತತ್ವಂ ಹೊಂ ।
ಗೇದಗೆಯ ಹೊದಱೊಳಲ್ಲದಿ
ಳಾ ದುರ್ಧರ ಕಂಟಕತ್ವಮಿಲ್ಲಾ ನಾಡೊಳ್ ॥ ೧೯

ಬಡತನಮೆಂಬುದು ನಡುವಿನೊ
[3]ಳಡೆಗಿಱು[3]ವುದು ಬಿಗಿದ ಮೊಲೆಯೊಳತಕಾಟಲತ್ವಂ ।
ಮಡದಿಯರ ಕುರುಳೊಳಲ್ಲದೆ
ಪಡಿವಾತೇಂ ಜನರ ದೆಸೆಯೊಳಿಲ್ಲಾ ನಾಡೊಳ್ ॥ ೨೦

ಶ್ರುತದೊಳ್ ಚಿಂತೆ ಮದೇಭದೊಳ್ ಸೆಱೆ ನಿರೋಧಂ ಪಂಜರಾನೀಕದೊಳ್
ಯತಿಭಂಗಂ ಕೃತಿಯೊಳ್ ಭಯಂ ನಟನದೊಳ್ ನಿಷ್ಕಿಂಚನತ್ವಂ ಮಹಾ ।
ವ್ರತದೊಳ್ ಶೂನ್ಯಗೃಹಂ ದುರೋ[4]ದ್[4]ರದೊಳಾದಂ ವಿಗ್ರಹಸ್ಥಾನಮ
ನ್ವಿತವಾದಂಗಳೊಳಲ್ಲದಿಲ್ಲ ಮಱೆದುಂ ಮತ್ತೆಲ್ಲಿಯುಂ ದೇಶದೊಳ್ ॥ ೨೧

[1] ರ್ದವುಱೆ (ಬ). [2] ಲ್ಲಿ (ಕ). [3] ಳಡರ್ದುರ್ದಿ (ಕ). [4] ವ (ಬ).

ಬವರಂ ಜಡಸಂಗಂ ರಾ
ಜವಿರೋಧಂ ತಪನವಿಕೃತಿ ಗುಣಗೋಪನಮೆಂ ।
ಬವು ಮಾನನರೊಳ್ ದೊರೆಕೊ
ಳ್ವವು ಪದ್ಮದೊಳಪ್ಪೊಡಕ್ಕುಮಂತಾ ನಾಡೊಳ್ ॥ ೨೨

[1]ನಿಗಳಂ[1] ಸೊಕ್ಕಾನೆಯೊಳ್ ವಿಗ್ರಹಮೊದವಿದ ವಾದಂಗಳೊಳ್ ದಂಡಮುತ್ಕೀ
ತುಗಳೊಳ್ ಕಾರ್ಶ್ಯಂ ವಧೂಮಧ್ಯದೊಳತಿಕಠಿನತ್ವಂ ಕುಚದ್ವಂದ್ವದೊಳ್ ವ ।
ಕ್ರಗಮಂ ನಕ್ಷತ್ರದೊಳ್ ಭಂಗದ ಪರಿ ತೆರೆಯೊಳ್ ಕಂಟಕಂ ಹರ್ಷದೊಳ್ [2]ಸ್ವಾ
ತಿಗೆ[2] ಕಾವ್ಯಪ್ರೌಢಿಯೊಳ್ ತಳ್ತಿ ಜುವುದೆವೆಯೊಳುಂಟಲ್ಲಿ ಬೇಱಿಲ್ಲ ನಾಡೊಳ್ ॥ ೨೩

(ಅನಂತನಾಥಪುರಾಣಂ, ೧-೮೫.)

ಸತತಂ ಮಾರ್ಗೋಲ್ಲಂಘನ
ಗತಿ ಹಯದೊಳವಗ್ರಹಂ ಮದೇಭಸಮೂಹಾ ।
ಕೃತಿಯೊಳ್ ಸಮರಾಗಮನ
ಸ್ಥಿತಿ ನಲ್ಲರೊಳಲ್ಲದಿಲ್ಲ ಪೆಱತೊಂದೆಡೆಯೊಳ್ ॥ ೨೪

(ಚಂದ್ರಪ್ರಭ ಪುರಾಣಂ, ೧-೮೬.)

ತಿವಿವ ಸೆಱುವಿಡಿವ ಕಟ್ಟುವ
ತವೆ ಕೊಲ್ವ ಪರಾರ್ಥತತಿಗೆ ಬಯಸುವ ದುಷ್ಟ ।
ವ್ಯವಹೃತಿ ನೆತ್ತದೊಳಲ್ಲದೆ
ಸವನಿಸದಾ ವಿಷಯಜನಸಮಾಜದೊಳೆಂದುಂ ॥ ೨೫

ಸಿರಿ ನೆಲೆಗೊಂಡುದಲ್ಲಿ ಮದನಂ ಮನೆಗಟ್ಟಿದನಲ್ಲಿ ಸೌಖ್ಯಮಂ
ಕುರಿಸಿ ಮಡಲ್ತುದಲ್ಲಿ ಋತುಗಳ್ ನೆಲೆಗೊಂಡುವು ತಮ್ಮೊಳಲ್ಲಿ ಜಾಣ್ ।
ಪರಿವೆನಗೈವುದಾರ್ಗಮಿರದಲ್ಲಿ ಗುಣಂ ಪೆಣೆಗೊಂಡುದಲ್ಲಿ ನಾ
ಟ್ಯರಸನದೆನ್ನದಾ ವಿಷಯಮಂ ಪೆಱತೆಂದೊಡೆ ದೋಷಮಾಗದೇ ॥ ೨೬

ಮುದಮೂರೂರಬಲಾಜನಕ್ಕೆ ಪರಿನೀರೂರೂರ ತೋಂಟಕ್ಕೆ ಸಂ
ಪದಮೂರೂರ ಗೃಹಕ್ಕೆ ಪಂಕಜದ ಚೆಲ್ವೂರೂರ ಗುಯ್ಯಲ್ಗೆಯಾ ।
ಸ್ಪದಮೂರೂರ ಬುಧಾಳಿಗಂಚೆಗಳ ಪೆಂಪೂರೂರಷಂಡಕ್ಕೆ ಪಾ
ಲೊದವೂರೂರ ದನಕ್ಕ[3]ರ್ಕ್ಯ[3]ಮದಱಿಂ [4]ರಮ್ಯಂ[4] ತದುರ್ವೀತಳಂ ॥ ೨೭

(ಕಾವ್ಯಾವಲೋಕನಂ, ೨-೮೯.)

ಪೊಬಲಿಂದ್ರಪುರಂ ಕಾಲೂರ್
ಪೊಬಲಿಂದ್ರರ್ ಪೊಬಲ ಮಾನನರ್ ಕಾಲುರಿಚರ್ ।

---

[1] ವಿಗಡಂ (ಕ.ಖ.ಬ). [2] ಸ್ವಲ್ಪಿಗ (ಬ). [3] ಕ್ಕು (ಬ). [4] ದುಷ್ಯಂ (ಬ).

ಪೊಬಲಿಚರೆನೆ ಸೊಗಯಿಸುವುದು
ಪೊಬಲಿಂ ಕಾಲೂರ್ಗಳಿಂದಮಂತಾ ವಿಷಯಂ ॥ ೨೮
(ಕಾವ್ಯಾವಲೋಕನಂ, ೩೩೫.)

ಜನಪನ. ಕಾದು ರಕ್ಷಿಸುವ ನೀತಿಜನಂಗಳ ಮೇಲ್ಮರಲ್ವ [1]ವ
ರ್ದನ[1]ಸುಖಲೀಲೆಯೇಂ ಪಿರಿದೊ ಕುಂದದ ಕಾಲ್ ನಲೆ ನಂದ ಸುಗ್ಗಿ ಬಂ ।
ದನುದಿನಮಿರ್ಪ ದೀವಳಿಗೆ ನಾಡ್ಗೆ ಬಸಂತನ ಕಾಪು ಕಾಮದೇ
ವನ ರತಿಯಾಜ್ಞೆ ಚಂದ್ರನ [2]ಛಡಾಳಿಕೆ[2] [3]ತಂ[3]ಬೆಲರೊಂದು ಬೆಂಬಲಂ ॥ ೨೯
(ಅನಂತನಾಥಪುರಾಣಂ, ೧–೮೬.)

ಜನಪತಿಯಿರ್ಪ ಪೆರ್ಗುಱುಹಿನಿಂದಿವು ಬೀಡಿವು ನಾ[4]ಡೊಳಾರ್ಗಳೆಂ
ದನುವಿಸಲೊಲ್ಲದಂ[4]ತಱಿಯಬಾರದು ಭೇದಿಸಿ ಬೇಱುವೇಱು [5]ಸೊಂ ।
ಪಿನ ಸಿರಿ ಬೇಱುವೇಱು ಮಣಿಮಾಡದ[5] ತಿಂಥಿಣಿ ಬೇಱುವೇಱು ನಂ
ದನತತಿ ಬೇಱುವೇಱು ಪರಿಖಾ[6]ವಳ[6] ತೋರಣ ವಪ್ರಗೋಪುರಂ ॥ ೩೦
(ಅನಂತನಾಥಪುರಾಣಂ, ೧–೮೬.)

ಪಿಕಕೋಳಾಹಳಮಲ್ಲದಿಲ್ಲ ಪೆಱ[7]ತುಂ[7] ಕೋಳಾಹಳಂ ನಾಗಚಂ
ಪಕಗಂಥೋದ್ಗಮಮಲ್ಲದಿಲ್ಲ ಪೆಱ[7]ತುಂ[7] ಗಂಥೋದ್ಗಮಂ ಭೃಂಗಗಾ ।
ಯಕಗೀತಸ್ವನಮಲ್ಲದಿಲ್ಲ ಪೆಱ[7]ತುಂ[7] ಗೀತಸ್ವನಂ ರಾಜಕೀ
ರಕವಾಕ್ಪಾಟವಮಲ್ಲದಿಲ್ಲ ಪೆಱ[7]ತುಂ[7] ವಾಕ್ಪಾಟ[8]ವಂ[8] ಸುತ್ತಲುಂ ॥ ೩೧
(ಶಾಂತಿಪುರಾಣಂ, ೩–೩.)

ಎಳಲತೆ ತಳ್ತ ಚಂದನದ ಸಾಲೆಳವಳ್ಳಿಗಳಂಡುಗೊಂಡು ಗೊಂ
ದಳಿಸಿದ ಬಳ್ಳಿಗೊಂಗು ವನಮಾಲಿಕೆ ಸುತ್ತಿದ ನಾಗಕೇಸರಂ ।
ಪೊಳೆವಲರ್ದೊಂಗಲಿಂ ಮಿಳಿರ್ವ ಮಲ್ಲಿಗೆಯಪ್ಪಿದಮಾವು ಜಾಜಿ ಮಂ
ಡಳಿಸಿದ ಕೇಸರಂ ಮೆಱುವುದೆಲ್ಲಿಯುಮಲ್ಲಿಯ ನಂದನಾಳಿಯೊಳ್ ॥ ೩೨

ಪಾಡುವ ತುಂಬಿ ತುಂಬಿಯೊ[9]ಳರಲ್ವ ಮರಲ್ ಮರಲೊಂದು ಸೊಂಕಿನಿಂ[9]
ತೀಡುವ ಗಾಳಿ ಗಾಳಿಗೆ ಬಬಲ್ವ ತಳಿರ್ ತಳಿರಿಂ ಫಲಂಗಳಿಂ ।
ದಾಡುವ ರಾಜಕೀರತತಿ ಕೀರಚಯಂಗಳ ಕೂಡೆ ಬೈದು ಬೈ
ದಾಡುವ ತೊಂಡುವೆಣ್ಬರುಳಿ ಮಾಡು[10]ವುವಾ[10]ರ್ಗಮನಂಗದಾಹಮಂ ॥ ೩೩

---

[1] ಮರ್ದನ.(ಕ.ಖ.ಬ). [2] ತಳಾರಿಕೆ (ಅ). [3] ತೆಂ (ಅ). [4] ಡೆಯೊರ್ಗಮೆಂ ದನುಮಿಪರೆಲ್ಲರುಂ (ಅ). [5] ತಾಂ ಮಣಿಮಯಮಪ್ಪಮಾಣಿಕದ ಮಾಡದ (ಕ.ಖ.ಬ). [6] ಮಣ್ (ಅ). [7] ದುಂ (ಅ). [8] ವುಂ (ಖ.ಬ). [9] ಮರಲ್ದರಲೊಳ್ ಕರಮೆಂದು ಸಾದಿನಿಂ (ಬ). [10] ಗುಮಾ (ಬ).

ಕುಸುಮರಜಂಗಳೇರಿಗಳ ನೀ[1]ರ್ಗಳ ಚಂಚಲ ಬಿಂದುವರ್ಗದಿಂ[1]
ದೊಸರ್ವ ರಸಂಗಳೊಳ್ದೊಱೆಗೆ ಪಂಕಜಪತ್ರದ ಸಾಲೆ ಮಾಪಿನೊಳ್ ।
ಪಿಸುಗುತಮಿರ್ಪ ಬಲ್ಸೊನೆಯ ಸನ್ನೆಗೆ ಕಾಂಚನಕೇತಕೀದಳ
ಪ್ರಸವದಳಂಗಳೋಲೆಗೊಡೆ ನಲ್ಲಳಿಗಪ್ಪುವು ನಂದನಂಗಳೊಳ್ ॥ ೩೪

ಗೊಲೆಯೊಳ್ ಪಣ್ತುದು ವೆ೦ದವಾಜೆ ಪಥಿಕರ್ ಬರ್ಕೆಂದು ಭೃಂಗಂಗಳಿಂ
ದುಲಿಯುತ್ತಿರ್ದುದು ಪ್ಪೆಣ್ತು[2] ಬಕ್ಕೆ ತನಿವಣ್ಣಾಗಿರ್ದುದಿಮ್ಮಾವು ಕ
ಟ್ಟಲಿಸಿರ್ದತ್ತೆವಳ್ಳಿ ಕಾಯ್ತು ಕರೆವಂತಿರ್ದತ್ತು ಚೆಂದೆಂಗು ಸಾ
[3]ಲಲೆಯುತ್ತಿರ್ದುದು[3] ಬಂದ ಕರ್ಬೆನೆ ವನಶ್ರೀ ಬಣ್ಣಿಸಲ್ಬಕ್ಕುಮೇ ॥ ೩೫

(ಆದಿಪುರಾಣಂ, ೧೧–೬೮).

ತಿಂತಿಣಿವಣ್ಣನಾಂತ ಕದ[4]ಳಂ ಪದವಣ್[4] ಪುದಿದೀಳೆ ಬೀಡೆವ
ಣ್ಣಿಂ ತುಱುಗಿರ್ದ ದಾಡಿಮಚಯಂ ಕಿಸುವಣ್ [5]ಕುಸಿದಿರ್ದ[5] ನಾ[6]ಗರಂ
ಗಂ[6] ತನಿವಣ್ ಪೊದ[7]ಟ್ಟಿಡಿದ[7] ಮಾವೆಳಗಾಯ್ಪೊಱೆ ತಳ್ತ ತೆಂಗು ಬೇ
ರಿಂ ತುದಿಮುಟ್ಟೆ ಕಾಯ್ತ ಪಲಸೆಂಬಿವು ಕುಂದವು ನಂದನಂಗಳೊಳ್ ॥ ೩೬

(ಜಗನ್ನಾಥವಿಜಯಂ, ೨–೧೫).

ಪುದಿದ ಫಲಂಗಳಿಂ ತೊನೆವ ತೆಂಗಿನ ತಿಂತಿಣಿ ಕೌಂಗಿ ನುರ್ಬಲುಂ
[8]ಗ[8]ದ ಹೊದಱೀಳೆಯಿರ್ದೆಡೆ ನವಾಮ್ರದಿಱುಂಬರನೇಱಿಲಾಗರಂ ।
ಕದಳಿಯ ಕಂಟಿ [9]ಕಮ್ಮ[9]ದ ಸಂದಣಿ ದಾಡಿಮದೊತ್ತು ಸುತ್ತಲುಂ
ನದಮದ ಮಾದಲಂ ಪಲಸಿನುಬ್ಬರಮಲ್ಲಿ ಕರಂ ಮನೋಹರಂ ॥ ೩೭

ಪದವಣ್ ಪೇಱಿರ್ದ ನಾರಂಗದ ತರು ತನಿವಣ್ ಪೇಱಿದಿಮ್ಮಾವು ಜೇನೆಯ್
ಪುದಿದಂತಿರ್ದಚ್ಚವಣ್ ಪೇಱಿದ ಕದಳಿವನಂ ಬೀಡೆವಣ್ ಪೇಱಿ ಜೆಲ್ವೇ ।
ಱಿದ ದಾಳಿಂಬಂ ಪಯಃಪೂರಿತಫಲತತಿ ಪೇಱಿರ್ದ ಚೆಂದೆಂಗು ಬೇರಿಂ
ತುದಿಕೋಡಂ ಮುಟ್ಟಿ ಕಾಯ್ವೀಱಿದ ಪಲಸು ಪುರೋದ್ಯಾನದೊಳ್
ಕುಂದವೆಂದುಂ ॥ * ೩೮

ನಲಿವುಲಿವಂಚೆ [10]ಕೂಂ[10]ಚೆ [11]ನಳಿನಂ[11] ಪುಳಿನಂ ಗಿಳಿವಿಂಡು ಬಂಡು ಕೋ
ಗಿಲೆ ಗೊಲೆತೆಂಗು ಕೌಂಗು ವಕುಳಂ ಮುಕುಳಂ ಲತೆ ಪರ್ಬಿ ಕೊರ್ಬಿದೊ ।

---

[1] ರ್ಗುದಿದೆಂಚೆಯೆಬಂದಕರ್ವಿನಿಂ (ಬ). [2] ಱ್ತು (ಖ.ಬ). [3] ಲೆಳೆಮುತ್ತಿರ್ದುದು (ಕ), ಱಿನೆ ಮುತ್ತಿರ್ದುದು (ಖ). [4] ಳೀಫಲಮಂ (ಖ.ಬ). [5] ಮುನುಕಿರ್ದ (ಅ). [6] ರಂಗಮುಂ (ಖ.ಬ). [7] ೈದಿಸವ (ಅ). [8] ಕ (ಖ). [9] ಮಾಮರ (ಖ). * ಈ ಪದ್ಯ (ಕ) ಪ್ರತಿಯಲ್ಲಿಲ್ಲ. [10] ಬೆಂ (ಕ). [11] ವಳಿವಂ (ಖ).

ಳ್ದೆಲರೆಲೆವೀಳೆ ಬಾಡೆ ಮಧುಪಾವಳಿ ಪೂವಳಿ ಕಂಪು ಸೊಂಪಗುಂ
ದಲೆ ಸಲೆ ಕಂತು ನಿಂತ ನೆಲೆವೀಡೆನಿಸಿರ್ದವು ನಂದನಂಗಳೊಳ್ ॥ ೩೯

ಕುಸುಮರಸಂಗಳೊದ್ದೆ ತನಿವಣ್ಣ ರಸಂಗಳ ಸೋನೆ ನಾ[1]ರ [1]ಕೋ
ಕ್ಕೆಸರೆಳನೀರ ಬೆಂಚೆ ಸೊನೆಯೊ[2]ಳ್ಗೆಸಱಿಂ[2]ಬಿವಱಿಂದಮೆಲ್ಲಿಯುಂ ।
ಬಸನದ ಬಾಪ್ತಿಯಪ್ಪೆಡೆಗಳಿಲ್ಲದೆ ನಲ್ಲರನಂಗರಾಗಮು
ರ್ಬಿಸೆ ಭರದಿಂ ತೊಱಲ್ದಱಿಸುವರ್ ಬನದೊಳ್ ಕೃತಕಾ[3]ಚಲಂ[3]ಗಳಂ ॥ ೪೦

(ಮಲ್ಲಿನಾಥಪುರಾಣಂ, ೨–೩೫.)

ವಿರಹಿಗೆ ಬೇಗೆಯಂ ಪ್ರಿಯರ್ಗೆ ರಾಗಮನಾಗಿಸುಗುಂ ಬನಂಗಳೊಳ್
ಮೊರೆವ ಮದಾಳಿ ಕೂ[4]ಜಿ[4]ಸುವ ಕೋಗಿಲೆ ಕೇಗುವ ಸೋಗೆ ಚಪ್ಪರಿ ।
ಪ್ಪರಗಿಳಿ ಕುಪ್ಪೆವಾಯ್ವ ಕಪಿ ಮೂಡಿ ಮುಱುಂಗುವ ಜಕ್ಕವಕ್ಕಿ ಸಂ
ಚರಿಸುವ ಹಂಸೆ ಕೂಡುವ ತುರಂಗಮ ಘುಮ್ಮೆನುತಿರ್ಪ ಪಾರಿವಂ ॥ ೪೧

ಮಾಂದಳಿರೋಲೆ ಕಂ[5]ಠ[5]ರವಮಾ ಮಱಿದುಂಬಿಗಳಕ್ಕರಂಗಳೊಳ್
ಪೊಂದಿದ ಮುದ್ರೆ ಚಂದ್ರಸದನಂ ಮಲಯಾನಿಲ ನುಯ್ವನಟ್ಟುವಂ ।
ಬಂದ ಬಸಂತರಾಜನೊಡಗೂ[6]ಡಿರುತೋ[6]ರಿಯೊಂದದಿರ್ದವರ್
ನೊಂದಪರೆಂದು [7]ಕೊಕ್ಕು ದೆಱಿದೋದುವವಂ[7] ಕಳಕಂಠವಾಚಕಂ ॥ ೪೨

ಪ್ರಣವೋತ್ಥಶ್ರುತಿಮಧುರ
ಕ್ವಣಿತಂ ದ್ವಿಜಮುಖ್ಯವೃತ್ತಿ ಕೃಷ್ಣರುಚಿತ್ವಂ ।
ಪೆಣ್ದಿರೆ ಪುರೋಹಿತಬ್ರಾ
ಹ್ಮಣನೆನಿಸಿತ್ತ ತನುನೃಪತಿಗೀ ಪರಪುಷ್ಟಂ ॥ * ೪೩

ಗಿಳಿ ಗಿಳಿವಿಂಡಿನೊಳ್ ಸೆಣಸಿ ಬಯ್ವುವು ಕೋಗಿಲೆ ಕೋಕಿಲಕ್ಕೆ ಕೆ
ಕ್ಕಳಿಸಿ ಕುಕಿಲ್ವುವುದ್ಭ್ರಮರಮುದ್ಭ್ರಮಿಗಂಗಳ ಗಾವರಕ್ಕೆ ಗಾ ।
ವಳಿಸಿ ಘಡಾಳದೊಳ್ ಮೊರೆವುವಾದೊಡಮೂ[8]ರಬನಂ [9]ಬ[9]ನಂಗಳೊಳ್
ಕೆ[10]ಳೆಗೆಡೆ[10]ದಂತೆವೋಲ್ ಗಡಣಿಸಿರ್ಪುವು ತದ್ವಿಷಯಾಂತರಾಳದೊಳ್ ॥ ೪೪

(ಅನಂತನಾಥಪುರಾಣಂ, ೧–೭೭.)

---

[1] ಱು (ಕ). [2] ಳ್ಗೆಱಿಯೆಂ (ಖ). [3] ತಳಂ (ಬ). [4] ಚಿ (ಖ). [5] ತು (ಖ.ಬ). [6] ಡಿದರೋತಿರಿ (ಕ). [7] ತಱಿಂ ತೆಱಿದೋದುವುವಲ್ಲಿ (ಕ). * ಈ ಪದ್ಯ (ಕ) ಪ್ರತಿಯಲ್ಲಿಲ್ಲ. [8] ಡೆಯೂ (ಕ.ಖ.ಬ). [9] ಜ (ಕ.ಖ). [10] ಳಗಿಡ (ಅ).

ಅಲರ್ದಲರ್ವಂಡನುಂಡು ಕಳನಾದದಿನಾಣತಿಗೆಯ್ವ ತುಂಬಿ ಕೋ
ಮಲ ಕಳಿಕಾರಸಾನವಮನೀಂಟಿ ಮದೋತ್ಸವದಿಂ ಕುಕಿಲ್ವ ಕೋ ।
ಗಿಲೆ ಮಿಡಿಯಂ ಕರ್ದುಂಕಿ ನಲಿದಾಡುವ ರಾಜಶುಕಂ ಸರೋಜ ಕಂ
ದಳಮನೊಱಿಲ್ದು ಕರ್ಚಿ ಸುಟಿವಂಚೆಗಳಿಲ್ಲದುದಿಲ್ಲ ನಂದನಂ ॥ ೪೫
(ಜಗನ್ನಾಥವಿಜಯಂ, ೨–೧೦.)

ಸರಸ ಪರಿಪಕ್ವಫಲಕುಲ
ಭರದಿಂದಂ ಜೊಂಪಜೊಂಪದೊಳ್ ಶೋಧಿಸುತುಂ ।
ವಿರಹಿಗಳನಱಿಸಿ ಕಾವನ
ಗರವಟಿ ಬರ್ಪಂತೆ ನುತ್ತಿ ಬರ್ಪುವು ಗಿಳಿಗಳ್ ॥ ೪೬

ಊರೂರ್ಗೆ ಪೆಸರ ನಂದನ
ಮೂರೂ[1]ರ್ಗುತ್ತುಂಗ[1]ಶಿಖರ ದೇವಾಲಯಮಿಂ ।
ತೂರೂರ್ಗೆ ಚದುರ [2]ಚ[2]ಲ್ಲದ
ವಾರಸ್ತ್ರೀನಿಕರಮೆಸೆ[3]ವು[3]ದಾ ಜನಪದದೊಳ್ ॥ ೪೭

ಭೂತಳವರ್ತಿಯಪ್ಪ ವಿಷಯಾಳಿ ವಿಚಾರಿಪೋಡಾವಗಂ ನದೀ
ಮಾತೃಕ ದೇವಮಾತೃಕಮೆ ತದ್ವಿಷಯಂ ನವನಾಳಿಕೇರ ವಾ ।
ರ್ಮಾತೃಕಮಿಂದುಕಾಂತಜಳಮಾತೃಕಮಿಕ್ಷುರಸಾರ್ದ್ರನಾಳಿಕಾ
ಮಾತೃಕವಾಮ್ರಕಪ್ರಪರಿಪಕ್ವಫಲೋತ್ಕರಸಾರಮಾತೃಕಂ ॥ ೪೮
(ಚಂದ್ರಪ್ರಭಪುರಾಣಂ, ೧–೯೦.)

ಕೂರಿದುವೆನಿಪೆಲೆಗಳ ಬಾ
ಯ್ದಾರೆಗಳೆಲರಲೆಯೆ ತಾಗಿ ಪಱಿದುಗುವ ರಸಾ ।
ಸಾರಮೆ ಕೊಳಗೊಂಡೆಂದುಂ
ನೀರೂಟಕ್ಕೆಳಸವಲ್ಲಿ ಕರ್ವಿನ ತೋಂಟಂ ॥ ೪೯
(ಚಂದ್ರಪ್ರಭಪುರಾಣಂ, ೧–೯೬.)

ಮಿಡಿಯಲೊಡನೊಸರ್ವುವೆಂಬೀ
ನುಡಿಗಳವಂತಿರ್ಕೆ ಬೆರಲೆರಲ್ ತಾಗಿದೊಡಿಂ ।
ಗಡಲ ಮಡುವೆನಿಸಿ ರಸಮಂ
ಬಿಡುವುವು ಪುಂಡ್ರೇಕ್ಷುದಂಡವಿತತಿಗಳೆತ್ತಂ ॥ ೫೦

ನೆಲ್ಲುಂ ಕೌಂಗುಂ ಮಾವುಂ
ಮಲ್ಲಿಗೆಯುಂ ಬೆಳೆವುವಲ್ಲಿ ಕರ್ವಿನ ರಸದಿಂ ।

[1] ರ್ಗುಂತುಂಗ (ಕ). [2] ರ (ಕ). [3] ಯು (ಕ).

ದೆಲ್ಲಾ ಕಾಲಮುಮೆಂದೊಡ
ದಲ್ಲದೆ ಮತ್ತಾವುದಿಂಬು ಕಣ್ಗಂ ಮನಕಂ ॥ ೫೧

ಕುಡಿ[1]ಯಂ[1] ಪೊನ್ನನೆ ಬಿತ್ತಿ ಪೊಕ್ಕ ಬೆಳೆದೊಡಾ ಪೊಂಗಾಯ್ತು ಕಂಪೆಂಬವೋಲ್
ಕಡುಗೆಂಪುಂ ಕಡುಗಂಪುಮಗ್ಗಲಿಸೆ ನಾಡೂರೂರ ಸುತ್ತುಂ ಬೆಡಂ ।
ಗಿಡಿದಿರ್ಕುಂ ಕೆಜ್ಜೆಯೇರಿಯುದ್ದದೊಳೊಡಂಬಟ್ಟುದ್ದದಿಂದೆತ್ತಲುಂ
ಕುಡುಗೋಲುರ್ಚದ ಗಂಧಶಾಳಿವನಮುತ್ಕೀರಾಳಿ ಲೀಲಾಸ್ಪದಂ ॥ ೫೨

ಭೋಂಕನೆ ಬಂದುವಂದು [2]ತೆನೆಯಕ್ಕಿಯ ಮುಕ್ಕಿ ಕಲಂಕಿ ನೂಸುವ
ನ್ನಂ[2] ಕುಟುಕಿಂಗೆ ಪಾಯ್ದುಲಿ[3]ಯುತುಂ ಕವಿಯಲ[3] ಗಿಳಿಸೋವ ಪಾಮರೀ ।
ನಂಕುಲದೊಂದು ಮೆಲ್ಲುಲಿ[4]ಗಳಿಂಚರಮಂ ನನುಗೇಳ್ದು[4] ಕೀರವ್ಯಂ
ದಂ ಕಳಕೂಜಿತಾನುಮಿತವಾದುದು ಶಾಡ್ವಲಗಂಧಶಾಲಿಯೊಳ್ ॥ ೫೩

(ಜಗನ್ನಾಥವಿಜಯಂ, ೨–೭.)

ತೆನೆ ಫಲಭಾರದಿಂದೆಱಗೆ ಪಾಯ್ದದಱೊಳ್ ಕುಟುಕಿಂಗೆ ಮೆಲ್ಲಮೆ
ಲ್ಲನೆ ಗಿಳಿ ಪಾಯೆ ಪಕ್ಷತತಿ ಮೇಗೆ ಪೊದಟ್ಟಿರೆ ಪಚ್ಚನಪ್ಪ ತ ।
ದ್ವನ ನವಪತ್ರಮೋ ಶುಕಪತತ್ರಮೊ ಪೇೞಮಿದೆಂಬ ಶಂಕೆಯಂ
ಜನಿಯಿಸೆ ಗಂಧಶಾಳಿಯ ಶುಕಾಳಿಯ ಲೀಲೆ ಕರಂ ಮನೋಹರಂ ॥ ೫೪

ತ್ವರಿತಂ ಗೋಪಂ ನಕೋಪಂ ಪೆಱಗೆ ಪರಿಯೆ ಹೂಂಕಾರದಿಂದಳ್ಳೆ ಬೀಗು
ತ್ತಿರೆ ಬಾಯಿಂ ಬಿಟ್ಟೆ[5]ಗಳ್[5] ಸಾಲಿಡೆ ಪಸುನೊರೆಯಿಂ ನಾಂದು ಪುಲ್[6]ತಿಳ್ಳಿ[6]ಗೊಂಡ ।
ಬ್ಬರಿಸುತ್ತುಂ ತನ್ನ ಕಣ್ಗಳ್ ಕರೆಯೆ ನಿಕಟದೊಳ್ ಕೇಳ್ದು ಗಾ[7]ಳ್ಕೆ[7]ಳೆನುತ್ತುಂ
ಪರಿತಂದತ್ತೂರ್ವದಿಂದಂಬಿರಿವಿಡೆ ಮೊಲೆವಾಲಂದು ಧೇನುಪ್ರತಾನಂ ॥ ೫೫

(ಲೀಲಾವತಿ, ೫–೧೦೧.)

ಅಡೆಯಂ ಕೋದೆತ್ತುತುಂ ಮಾರ್ದನಿಗೆ ಮಸಗುತುಂ ದರ್ಪದಿಂ ಛಾಯೆ
ಯೊಳ್ ಕೋ]
ಡಿಡುತುಂ ಮುಂ ಕಾದಿ ಪು[8]ಣ್ದಿಂತಿಣ[8]ಿಗೆಱಗೆ ನೊಟಂ ಶೀರ್ಣಶೃಂಗಾಗ್ರದಿಂ ಮಾ ।
ರ್ದೊಡೆಯುತ್ತುಂ ಪೊಕ್ಕು ಪಿಂಡಂ ಕಲಕಿ ಕೆಲೆಯುತುಂ ಬೆರ್ಚಿ ಬಲ್ಗೊಳಿಗಳ್ ಬೆಂ
ಗುಡೆ ಗಂಡಂ ನೂಸುತುಂ ಬಂದುದು ಮದಪಿದಳತ್ಪಿಂಗಳಾಕ್ಷಂ ಮಹೋಕ್ಷಂ ॥ ೫೬

(ನೇಮಿನಾಥಪುರಾಣಂ, ೮–೧೮ ; ಲೀಲಾವತಿ, ೫–೧೦೨.)

---

[1] ಯೊಳ್ (ಕ.ಖ). [2] ತೊನೆದಿಕ್ಕೆಯಿನಿರ್ಕಲದೊಳ್ ಕಲಂಕುವನ್ನಂ (ಅ). [3] ವತ ಮ್ಮುಲಿಪಿಂ (ಅ). [4] ಪಮಂ ನನುಗೇಳದ ನಿಂದ (ಅ). [5] ಯೊಳ್ (ಅ). [6] ಮಿಳ್ಳೆ (ಅ). [7] ಳ್ಕೀ (ಕ). [8] ಣ್ಟೆತ್ತಿಣ್ (ಕ.ಖ.ಬ).

ಬಲಭಿನ್ನಾಗೇಂದ್ರನೊಳ್ ಮಾರ್ಮಲೆತ ಹರವ್ಯಷಾಧೀಶನೊಳ್ ಪ್ರೌರ್ದ ಕೀನಾ
ಶಲುಲಾಯಶ್ರೇಷ್ಮನೊಳ್ ತಾಗಿದ ರಣಗಣನಾರೇಖೆಯೆಂಬಂತು ರೇಖಾ ।
ವಳಿ ಪೀನಸ್ಕಂಧದೊಳ್ ತಳ್ತ ಮರ್ದಿರೆ ಪೊಱಮಟ್ಟಿತ್ತು ಕಾಂತಾರದಿಂ ಪಾ
ಟಳನೇತ್ರಂ ತುಂಗಗಾತ್ರಂ ಘನತರಕಕುದಂ ಶಾತಶೃಂಗಂ ಗವೇಂದ್ರಂ ॥ ೫೭

(ಜಗನ್ನಾಥವಿಜಯಂ, ೫–೩೫.)

ಪೊಸನನೆಯ ಸೊವಡನಾಘ್ರಾ
ಣಿಸಿ ಮ[1]ಣಿ[1]ಕದ ಮಿಡಿವ ಕಚ್ಚೆಯೊಳೆ ಮೊಗವೆತ್ತು ।
ತ್ತೆಸೆದುದು ವೃಷಮಮರರನೇ
ಡಿಸುವವೊಲೇನುಂಟೆ ನಿಮಗಮಿಾ ಸುಖಮೆನುತುಂ ॥ ೫೮

(ಲೀಲಾವತಿ, ೫–೧೦೮.)

ಎಡಪಿ [2]ಪ[2]ರಲ್ಗಳಂ ದೆಸೆಗೆ ಬೆರ್ಚುತೆ ಗೋವನ ಗಾಳಿಗೆಯ್ದೆ ಪಿಂ
ಡಡಸುತೆ ಕಂದಮಂ ನೆಗಪಿ ನೋಡುತೆ ಪಕ್ಕಮನಗ್ರವಾಲದಿಂ ।
ತೊಡೆವುತೆ ಕರ್ಣಮಂ ತೆಱೆದು ತಿತ್ತಿರಿಗಾಳೆಯನಾಲಿಸುತ್ತೆ ಪಿಂ
ಡೊಡೆಯದೆ ಕೂಡಿ ಬರ್ಪ ಪಲವಾಕಳಿನೊಪ್ಪುವುವಲ್ಲಿ ಪ[3]ಟ್ಟಿ[3]ಗಳ್ ॥ ೫೯

(ಲೀಲಾವತಿ, ೫–೧೦೩.)

ಬರಲಾಱದೆ ಪೆರ್ಗೆಚ್ಚಲ
ಭರದಿಂದಂ ಪೆಱಗು ಕುಸಿಯೆ ಪೊಱೆಯಂ ಕಳೆವಂ ।
ತಿರೆ ತೊರೆದ ತೋರಮೊಲೆಯಂ
ಬಿರಿಪಿಡುತುಂ ಬಂದುವಲ್ಲಿ ಪಲವು ಪಯಂಗಳ್ ॥ ೬೦

(ಲೀಲಾವತಿ, ೫–೧೦೪.)

ಕಱುಗೊಂಬು ನಳಿದಬೆನ್ನುಂ
ಕಱುಕಿದ ತೊಡೆಗೆಚ್ಚಲಲೆವ ಬಾಲಂ ತೆಳುಮ್ಮೆ ।
ಮೆಱೆಯೆ ಬಿಳಿದಾಗಿ ಮಾಣದೆ
ಕಱುವೆಮ್ಮೆಯ ಪಿಂಡು ಪಳ್ಳಿಪಳ್ಳಿಯೊಳೆಸೆಗುಂ ॥ ೬೧

ಸುರಭಿ ಘಜೋದ್ಧಿ ದುಗ್ಧನಿಧಿ ನಂದಿನಿ ವತ್ಸಲೆ ಕಾಮಧೇನು ಪೀ
ವರಕುಚೆ [4]ಗೋಪಿ ಸಲ್ಲಕಿ[4]ಯೆನಿಪ್ಪಭಿಧಾನದ ಗೋಕದಂಬಮಂ ।
ಕರೆದು ಮುರಾರಿ ಮೈದೊಡೆದು ಮೇಯಿಸಿಯುಂ ತಿಳಿನೀರನೂಡಿಯುಂ
ಮರದ ನೆಲಲ್ಗಳೊಳ್ ನಿಲಿಸಿಯುಂ ಮೆಱೆದಂ ನಿಜಗೋಪಲೀಲೆಯಂ ॥ ೬೨

(ಜಗನ್ನಾಥವಿಜಯಂ, ೫–೪೨.)

---

[1] ಸ (ಖ.ಬ). [2] ಸ (ಕ.ಖ.ಬ). [3] ಳ್ಳಿ (ಅ). [4] ಗೋಮತಲ್ಲಕಿ (ಬ).

ಕಱುಕಿಱುದೆ ಮೆಟ್ಟಿ ಕೆಚ್ಚಲ
[1]ನಿ[1]ಱುಂಕಿ ಕುಡಿವಾಲಮೆತ್ತಿ ಕೊಣಕಚ್ಚೆಡೆಯೊಳ್ ।
ಕಱುಗಳನೆ ನೆನೆದು ಮನೆಗಳೆ
ಗುಱಿಯಾಗಿರೆ ಬರ್ಪ ಪಲವು ಧೇನುಗಳೆಸೆಗುಂ ॥ ೬೩

ಕಱುವಂ ಬಿಡುಬಿಡು ತೊಳೆ ನೀ
ರೆಱೆ ಕಂದಲನೊರ[2]ಸಿ ತೊಳೆ ತಗುಳ್ದೊ[2]ದೆವಾ[2]ವಂ ।
ತುಱಿಸ[3] ತಱೆಯಿಕ್ಕು ತಡೆಯದೆ
ಮುಱುವಂ ಸುರಿಯೆಂಬ ನರಮೆ ತುಱುಗಾರ್ತಿಯರೊಳ್ ॥ ೬೪

(ಲೀಲಾವತಿ, ೫–೧೨೧)

ಮಡದಿ ನಿತಂಬಮಂ ಮಡದಿನಾಂತು ಕೆಲಕ್ಕೊ[4]ಱಿಗಿ[4]ರ್ದ ಕಂದಲಂ
ತೊಡೆಯೊಳಿಱುಂಕಿ ಬಳ್ಕಿ ನಡು ಬೆನ್ನೊಳೆ ಪೊಕ್ಕಿರೆ ದುಗ್ಧಧಾರೆಯೊ ।
ಳ್ಗಡಣದಿ ನಾಡೆ ಕಣ್ಬೆಳಗು ಬ[4]ಲ್ಬೆ[4]ಡಗಂ ಬಿಗಿದೊತ್ತೆ ಕೈಗಳಿಂ
ಪಿಡಿದು ಕುಚಾಗ್ರದೊಳ್ ತುಱುಗೆ ಪಾಲ್ವನಿಗಳ್ ಕಱುದೆಳ್ ಘಟೋದ್ಧ್ನಿಯಂ ॥ ೬೫

(ಲೀಲಾವತಿ, ೫–೧೨೫.)

ಇನಿಸಂ ಪೊಕ್ಕೂರು ಮಿಕ್ಕೋರಿಸಿದ ಚರಣಂ ಶೋಭೆಯಂ ಬೀಱುತೆ ಕುಂಭ
ಕ್ಕೆ ನಿತಂಬಂ ನು[5]ತ್ತು[5] ನೇಣಂ ತೆಗೆವ ಪುಗುವ ಕೈಗಳ್ ಬೆಡಂಗಾಗೆ ತುಂಗ ।
ಸ್ತನಯುಗ್ಮಂ ತೂಗೆ ಪೂತ್ಕಾರದಿನುಸಿರ್ದಿಡುತುಂ ಲೋಳೆವಾ[6]ಯುರ್ಚೆ
ಯೊ[6]ರ್ವಳ್[7]
ತೊನೆಯುತ್ತುಂ ಪಾಡಿ ಪಾಲಂ ಪೊಸೆದಳಸದಳಂ ಪೊಣ್ಮೆ ಘರ್ಮಾಂಬುಜಾಲಂ ॥

ಅನಿಲಾಯತೊತ್ಕೀಚ್ಚಲಚ್ಚಾಳಿಯೊಳವ[7]ದಳ[7]ದಿಂ ಪಾಯ್ದು [8]ಕಾಲೋಡೆ[8] ತೂಗುಂ
ದೆನೆಯಂ ತಪ್ಪೈಸಿ ಕಿರ್ಕೀಱುನು[9]ತೆಡೆ[9]ಗೆಸಱೊಳ್ ಬಿಟ್ಟು ಬಲ್ಗಡ್ಡೆಯಂ ಸಾ ।
ರ್ದೊನಲುತ್ತಚ್ಚಾಂಬುವಿಂ ಬಿಂಬಿಸುವ ಕಣಿಶಮಂ ಕರ್ಚಿ ತುಂಡಾಗ್ರಮಂ ನೂ
ತನ ಪಕ್ಷಪ್ರಾಂತದೊಳ್ ಮಾರ್ದೊದೆದುದು ಧೃತಜಂಬಾಲಮಂ ಬಾಲಕೀರಂ॥ ೬೬

(ಲೀಲಾವತಿ, ೫–೫೯).

ಇದು ದಲ್ ಪಕ್ಕಿಗಳೆಲ್ಲಮಂ ನೆರಪುವಂದಂ ಪಕ್ಕಿಸೋವಂದಮ
ಲ್ಕಿದೆನಲ್ ಸೋಗೆನವಿಲ್ ಬಟಲ್ಮುಡಿಗೆ ಭೃಂಗಂ ಕುಂತಳಕ್ಕಂಚೆಗಳ್ ।

---

[1] ಸೆ (ಕ). [2] ನುತಗುಳ್ದೊಡೆಯಾ (ಕ). [3] ಲದಿ (ಖ.ಬ). [4] ಲ್ದ (ಖ). [5] ತ್ತಿ (ಅ). [6] ಯುರ್ಬಲೊ (ಖ.ಬ). [7] ಯವ (ಅ). [8] ಕಾಲ್‌ಜಾಱೆ (ಅ). [9] ತಡಿ (ಅ).

ಮೃದುಯಾನಕ್ಕೆ ಪಿಕಂ ರವಕ್ಕೆಳಸೆ ತಂತಮ್ಮಾ ಸ್ವಜಾತೀಯ ಸ
ನ್ಮದದಿಂ ಪಾಮರಿಯರ್ ಜಿತಾಮರಿಯರಿರ್ಪರ್ ಕಾದು ಕೇದಾರಮಂ ॥ ೬೮
(ಮಲ್ಲಿನಾಥಪುರಾಣಂ, ೨–೨೧.)

ಅವಿರಳಮಾದ ತುಂಗ ಕುಚಭಾರದೆ ತೋಳ್ ಸೆಳೆ[1]ದಿಟ್ಟ[1] ತಕ್ಕಿನೊಳ್
ಕವಣೆಯ ಗುಂಡು ಪಾ[2]ಯ[2]ವು ಮೃಗಾವಳಿ ಪಾ[2]ಯ[2]ವು ಕೆಯ್ಗೆ ಪಾಮರೀ ।
ಯುವತಿಯರಾರ್ದು ಚಪ್ಪರಿಸೆ ಕೋಗಿಲೆಯಿಂಚರಮೆಂದು ಬೆರ್ಚಿ ಪಾ
ಱುವ ಗಿಳಿವಿಂಡು ಪಾಂಥರೆರ್ದೆ ಪವ್ವನೆ ಪಾಱುವುವಾ ಪ್ರದೇಶದೊಳ್ ॥ ೬೯
(ಅನಂತನಾಥಪುರಾಣಂ, ೧–೮೨.)

ಇಡಲನುಗ[1]ಯ್ವು[1]ದುಂ ಬಟಲೆ ಕಯ್ವರಿಗೆಯ್ಯಲೊಡರ್ಚಿ ಪೋಗೆ ಮೆ
ಲ್ಲಡಿ ತಡವಾಗೆ ಕಿಂಡು ಜಡಿವುಜ್ಜುಗದಿಂ ದನಿಯೆತ್ತಿ ಮುಂ ತೊದಳ್ ।
ನುಡಿಗೊಳೆ ಲೀಲೆಯಿಂದೆಱಿಗೆ ಶಾಳಿವನಕ್ಕೆ ಶುಕಾಳಿ ನೋಡಿ ನಿಂ
ದೆಡೆಯೊಳೆ ನಿಂದು ಚಿತ್ತದೊಳೆ ಸೋವರು ಪಾಮರಕಾಮಿನೀಜನಂ ॥ ೭೦

ತೋಳ ಮೊದಲ್ವರಂ ಬಳೆದು ಕೊರ್ಪಿದ ಪೆರ್ಮೊಲೆಯೊಡ್ಡಿನಂತೆ ಕಯ್
ತಾಳಮೆಗೂಡವೆತ್ತಿದ ಕಳಧ್ವನಿ ಕೇಳಿಸದೂರುಭೂರಿಭಾ ।
ರಾಲಸಯಾನಮೆಯ್ದೆಸೆವ ಶಾಳಿವನಾಳಿಗೆ ಬಂದು ಪಾಯ್ವ ಕೀ
ರಾಳಿಗೆ ಕೆಮ್ಮನುಮ್ಮಳಿಪರಿರ್ದೆಡೆಯಿಂದಮೆ ಪಾಮರೀಜನಂ ॥ ೭೧

ಕವಯರದಂತೆ ಬಟ್ಟಿತಳವಟ್ಟು ಕುಚಂ ಕಡುಕೊರ್ವಿ [1]ಪರ್ವೆ[4] ನಿ
ಕ್ಕುವ ಸೋಱಿವಾಱು ಸುತ್ತಿದ ಶಿರೋಜಭರಂ ತಲೆಗೊಪ್ಪೆ ಕೈಗಳಂ ।
ಕವಿವ ಮೃಗಂಗಳಂ ತಗುಳ್ವ ಮುಂಬಗೆಯೇಱುವ ಪಕ್ಕಿಸೋವ ಪಾ
ಡುವ ಪಟುಚೇಟಿಯರ್ ಚರಿಯಿಪಧ್ವಗರ್ಗೀಗುಮನಂಗರಾಗಮಂ ॥ ೭೨

ಕವಣೆಯ ಬಿಟ್ಟು ಮಾಮಿಡಿಯ ಮಿಟ್ಟೆಗಳಿಂ ತೆಗೆದೆಚ್ಚು ಕಂಕಣಾ
ರವಮೊಗೆವಂತು ಚಪ್ಪರಿಸಿ ಘಿಱ್ರಿನೆ [5]ತೆಂಗಿನ[5]ಪತ್ರದಂದದಿಂ ।
ನವಡಿಸಿ ಚಟ್ಟಲಚ್ಚಲಲಚಟ್ಟಲಚಚ್ಚಲಲೆಂದು ಬೈದು ಪಾ
ಟವದೊಳೆ ಪಕ್ಕಿ ಸೋದು ಬೆಳೆಗಾಯ್ದುದು ಪಾಮರ ಕಾಮಿನೀಜನಂ ॥ ೭೩

ಗಿಳಿ ಸೋವ ಮುಗ್ಧವಧುಗಳ
ಪೊಳೆವಧರಮನಾಲ ಪಣ್ಗಳೆಂದಿರದಾಗ ।
ವ್ವಳಿಸಿ ಬಿಡೆಕರ್ಚಿ ಬೆಚ್ಚಿಸಿ
ಗಿಳಿ ಸೋದುವು ಕೆಯ್ವೊಲಂಗಳಿಂದಾಕೆಗಳಂ ॥ ೭೪

[1] ವಿಟ್ಟು (ಕ). [2] ಯ್ದ (ಖ ಬ). [3] ಯ್ದು (ಕ). [4] ತರ್ಬ (ಖ.ಬ). [5] ತೇಗಿತು (ಕ).

ಮಡಿಯೊಳ್ ಪಾಲಿಬಿಗಿರ್ದ ಶಾಲಿವನದೊಳ್ ಕೀರಾಳಿಯಂ ಸೋವಲೊ
ಳ್ಮಿಡಿಯಿಂದಂ ಮಿಡಿವಿಲ್ಲೊಳೆಚ್ಚೊಡೆದೆಯೊಳ್ ಪುಂಡ್ರೇಕ್ಷುವಂ ತಾಗೆ ಗಂ
ಟೊಡೆದೆತ್ತಂ ರಸಮೆಚ್ಚು ಪಾಯೆ ಪಥಿಕರ್ ಪೊಕ್ಕೀಂಟುತುಂ ಕಯ್ಯ ಬಾ
ಯೆಡೆಯೊಳ್ [1]ಸಾರ್ಚುಗೆ[1] ಕಂಡು ಬೆಂಡುಬೆಬಿಗಪ್ಪರ್ ಪಾಮರೀವಕ್ತ್ರಮಂ ॥ ೭೫
(ಅನಂತನಾಥಪುರಾಣಂ, ೧–೮೧.)

ತರಳಾಪಾಂಗಮರೀಚಿಗಳ್ ಕಳಮಕೇದಾರಕ್ಕೆ [2]ಬೆಳ್ಳಾರ[2]ದೋ
ಲಿರೆ ನುತ್ತುಂ ಗಿಳಿಸೋವ ನುಣ್ದನಿಯದೆತ್ತಂ ಗೋ[3]ರಿ[3]ಯಂ ಪಾಡುವಂ ।
ತಿರೆ ಪಾಂಥರ್ ಬಲವಂದು ಬೆಳ್ಳಿಗದವೋಲ್ ಸಾರ್ತಂದು [4]ಬೆಳ್ಳಾಗೆ[4] ಪಾ
ಮರಿಯರ್ ಕಾಮನ ಬೇಂಟೆಗಾರ್ತಿಯರೆನಿಪ್ಪಾ ಶಂಕೆಯಂ ಮಾಡುವರ್ ॥ ೭೬

ಗಗನದೊಳೆಯ್ದೆ ಮಂಡಳಿಸಿ ನಿಂದ ಶುಕಾಳಿಯನಂದು ಬೆರ್ಚಿಪು
ಜ್ಜುಗದೊಳೆ ನೋಟ್ಪ ಪಾಮರಿಯ ಚಾರುಕಟಾಕ್ಷಮರೀಚಿ ನೀಳ್ದು ಶೋ ।
ಭೆಗೆ ನೆಲೆಯಾಯ್ತು ತತ್ಕಳಮಭೂರಮೆಗೆತ್ತಿದ ಪಚ್ಚನಪ್ಪ ಸ
ತ್ತಿಗೆಗಳವಟ್ಟು ತೋರ್ಪ ಶಶಿಕಾಂತದ ಕಾಂತದ ಕಾವಿದೆಂಬಿನಂ ॥ ೭೭
(ಚಂದ್ರಪ್ರಭಪುರಾಣಂ, ೧–೯೫.)

ಇರದಿದಿರ್ಗೊಳ್ವುದು ಪಿಕತತಿ
ಕರೆವುವು ಶುಕರಾಜಿ ಕಾಣ್ಕೆಗೊಡುವುದು ಫಳಮಂ ।
ಝರಿ ಕಾಲ್ದೊಳೆವುದು ಪಾಂಥರ
ಬರವಿಂಗಿಂತಿದು ವನಾಳಿ ಮಾಡ್ವಾತಿಥ್ಯಂ ॥ ೭೮

ಕುಡಿನೀರೆತ್ತುವವೋಲ್ ಪ್ರಪಾಪ್ರಮದೆಯರ್ [5]ಸತ್ಕಂಗಳೊಳ್ ಸುಮ್ಮನಂ[5]
ಬಡೆವೇಕಾಕಿನಿಯರ್ ಮನೋಜಸುಖದಾನಾಗಾರದೊಳ್ ಚಿತ್ತಮಂ ।
ಪಿಡಿಪೊಳ್ಪೆಂಡಿರೊಡ[6]ರ್ಚೆ[6] ಮೆ[7]ಚ್ಚ[7]ನೊಲವಿಂದೊಗರ್ವಾವುದಕ್ಕೊಯ್ಯನೆಂ
ಟೆತೆಗೆಯ್ದಪ್ಪುವು ಕಾರ್ಯಹಾನಿ ಪಥಿಕರ್ಗೂರೂರ ನಾಟ್ಟಚ್ಚೆಯೊಳ್ ॥ ೭೯
(ಅನಂತನಾಥಪುರಾಣಂ, ೧–೮೪.)

ಪಱಿಪಡೆ ಸೇದೆ ಪಿಂಗೆ ತೃಷೆ ತಣ್ಗಳಸಂಗಳನೆತ್ತಿಕೊಂಡು ನೀ
ರೆಱುವ ಚಳಲ್ಲತಾಂಗಿಯರ ಕೊಂಕಿದ ತೋಳ ಮೊದಲ್ಗೆ ತೀವಿ ಕಿ ।
ಕ್ಕಿಱಿದ ಕುಚಕ್ಕೆ ಕಣ್ಬರಿಯೆ ಧಾರೆಗಳೋರೆಗೆ ನೂಸೆ ಮುಟ್ಟಿ[8] ಕೈ
ಮಱೆದು ಬಯಲ್ಗೆ ಬಾಯ್ವಿಡುವರಧ್ವಗರಧ್ವತಟಪ್ರಪಾಳಿಯೊಳ್ ॥ ೮೦
(ಅನಂತನಾಥಪುರಾಣಂ, ೧–೮೩.)

---

[1] ಪಾಯ್ದುಗೆ (ಅ), ಸಾರುಗೆ (ಬ). [2] ಬೇಳಾರ (ಖ). [3] ಲ (ಖ). [4] ಬೆಳಗಾಗೆ (ಖ.ಬ). [5] ಸಾರಂಗಳೊಳ್ ಸಾಧನಂ (ಖ), ಶ್ರೋತ್ರಂಗಳೊಳ್ ಸುಮ್ಮನಂ (ಕ). [6] ರ್ಚಿ(ಖ). [7] ಚ್ಚಿ (ಖ). [8] ಸಿಮೀಱಿ (ಖ.ಬ).

ಕರಗಮನೆತ್ತಿ ನೀರೆಱುವ ನೀಱುಯರಧ್ವಗರಧ್ವಖೇದಮೋ
ಸರಿಸಿದೊಡಂ ಪ್ರಪಾಪ್ರಕರದೊಳ್ ಕುಡಿವರ್ ಬಿನದಕ್ಕೆ ಬಿಚ್ಚತಂ ।
ಪರಿಮರಿಯಾಡಿ ಕಣ್ಪೊಳೆಯೆ ವೇಳೆಗಳೊಳ್ ಸುಟಿಗೊಂಡ ನಾಭಿಯೊಳ್
ಗುರುಕುಚ ಕೂಟದೊಳ್ ತೊಳಪ ತೋಳ ಮೊದಲ್ಗಳೊಳಾನನಾಬ್ಜದೊಳ್ ॥ ೮೧

[1]ಕೊ[1]ನೆವನಿ ನೂಸೆ ಸಣ್ಣವನಿ ಕೆಂದಳದೊಳ್ ನರಿಗೂಡೆ ದಿಟ್ಟಿ ಮೂ
ಗಿನ ಕೊನೆಯಲ್ಲಿ ಸಯ್ತು ನಿಲೆ ಕೊಂಕಿ ಕೊರಳ್ ಮಿಡುಕಾಡೆ ನಾರ್ಚಿಕೊ ।
ಳ್ಳೆನೆ ಕು[2]ಡಿ[2]ಗೋಡುತಿರ್ಪ ಕಳಶಾಂಬುಗಳಂ ತೃಷೆ ತೀರೆ ಸುಱ್ರಿಸು
ಱ್ರೆನೆ ಪಥಿಕಾಳಿ ಪೀರ್ದು ಪಡೆಗುಂ ಪರಿತೃಪ್ತಿಗಳಂ ನಿರಂತರಂ ॥ ೮೨

ಕಳಶಮನೆತ್ತಿ ನೀರೆಱುವ ಕಾಂತೆಯ ತೋಳ ತೆರಳ್ಕೆ ಮೇಲುದಂ
ತೊಲಗಿಸೆ ನೋಡಿ ನುಣ್ಬೊಗರನೀಂಬ ಕುಚದ್ವಯ ಮೂಲಮಂ ನಮು ।
ಜ್ಜ್ವಲಭುಜಮೂಲಮಂ ನೆಱಯೆ ಕಂಡರ್ದಿಯಾಱುದೊಡಂ ನಿರೀಕ್ಷಣಾ
ಕುಲತೆಯಿನೀಂಟುವರ್ ಪಥಿಕರಾ ಕಲಶಾಂಬುವೆ ಸೀಮೆಯೆಂಬಿನಂ ॥ ೮೩

(ಚಂದ್ರಪ್ರಭಪುರಾಣಂ, ೧–೯೮.)

ಅಱವಟ್ಟಿಗೆಯೊಳ್ ಕುಡಿನೀ
ರೆಱುವ ಬೆಡಂಗಿಯರ ಭಾವಮಂ ಭೋಂಕನೆ ಕ ।
ಣ್ದೆಱೆದಡರೆ ನೋಡಿ ಪೀರುವ
ತೆಱದಿಂದಂ ಸೊಗಸೆ ತಂಪುಮಂ ತೃಷ್ಣೆಯುಮಂ ॥ ೮೪

ಗರುಡಿಯೊಳಂಕ[3]ದೋಜೆ[3]ಗಳ ತಾಳಲಯಂಗಳ ಸೂಠಿ ವಾಹಳೀ
ತುರಗಖುರಪ್ರಹಾರಗತಿಯೊಳ್ ಜಗಜಟ್ಟಿಗಳಕ್ಕಡಂಗಳೊಳ್ ।
ಮರಳದೆ ಪೋರ್ವ ಶಕ್ತಿ ತಟಿಯೊಳ್ ನೆಱೆ ಪೋರ್ವ [1]ರುತ[1]ದ್ವಿಪಂಗಳೊಳ್
ಪುರುಡಿಸೆ ನುತ್ತಲುಂ ಪೊಱಪೊಂಬಲ್ ಮೆಱೆಗುಂ ವಿಜಯೋತ್ಸವಂಗಳಿಂ ॥ ೮೫

(ಅನಂತನಾಥಪುರಾಣಂ, ೧–೮೯.)

ಪದಪಂ ಬೀಱುಗುಮಾ ಪುರೋಪವನದೊಳ್ ಪೆಣ್ದುಂಬಿವಿಂಡಿಂ ಕಱಿಂ
ಗಿದ ನೈದಿಲ್ಪೊಗಳಂಚೆವಿಂಡನೊಳಕೊಂಡಂಭೋಜಷಂಡಂ ತಳಿರ್ ।
ಪುದಿದೇಲಾವನಪೊಡ್ಡುಗೊಂಡ ಕದಳೀಕಾಂಡಂ ತರಂಗೊಂಡ ಚೂ
ತದ ನಾಲ್ ಚಂದನವೀಧಿ ಸಲಪಗೆಯ ಜೊಂಪಂ ಮಾಧವೀಮಂಡಪಂ ॥ ೮೬

(ಪಂಪರಾಮಾಯಣಂ, ೧-೧೧೦.)

---

[1] ತೊ (ಕ). [2] ಳಿ (ಕ). [3] ಜೂಜು (ಕ). [1] ಮದ (ಅ).

ಮದನಂ ತೋಂಟಿಗನಾದ ಚೂತವತನುಜ್ಯಾರಾಪದೊಳ್ ಕೂಡಿ ಪಾ
ಡಿದ ಪೆಣ್ದುಂಬಿ ವಸಂತದೊಳ್ ಮದನಕೇಳೀ ಸೂತ್ರಮಂ ಖ್ಯಾತವೋ ।
ದಿದ ಕೀರಂ ರತಿಯೊಳ್ ಪದನ್ಯಸನಮಂ ಕಲ್ತಂಚೆ ಶೀತಾಂಶು ತೀ
ವಿದ ನೈದಿಲ್ಗೊಳನಲ್ಲದಿಲ್ಲೆನೆ ಬನಂ ಚಿತ್ತೋತ್ಸವಾಲಂಬನಂ ॥ ೮೭

(ಮಲ್ಲಿನಾಥಪುರಾಣಂ, ೨–೩೭.)

ಮದನಂ ಕೊಂಬುಗೊಳಲ್ಕೆ ನಚ್ಚುವ ನವಾಮ್ರಂ ಕಂತುಚಾಪಕ್ಕೆ ಚಿ
ತ್ತದೊಳಾರ್ದ್ರಪ್ರ ಸಿತೇಕ್ಷು[1]ವಾಟಿ[1] ವಿಷಮಾಸ್ತ್ರಂ ಪಂಚಬಾಣಕ್ಕೆ ಮಾ ।
ಣದೆ ಕಣ್ಣಾದಿರಿಸಿಟ್ಟ ಮಲ್ಲಿಗೆ ಮನೋಜಂ ಸ್ವಚ್ಛವಾಃಕೇಳಿಸ
ಮ್ಮದಕೆಂದೋವುವ ಪದ್ಮಷಂಡಮೆಸೆಗುಂ ತನ್ನಂದನೋಪಾಂತದೊಳ್ ॥ ೮೮

(ಚಂದ್ರಪ್ರಭಪುರಾಣಂ, ೧–೧೦೪.)

ನವಪುತ್ರಪ್ರೀತಿಯಿಂದಂ ರತಿಯೆ ಸಲಹಿದಿಮ್ಮಾವು ಮಾನಾಂಕಿತಂ ಕೇ
ತುವಡ[2]ರ್ಪಿಂ[3]ಗಂಗಜಂ ಪರ್ವಿಸಿದ ಲತೆ ಸುಧಾಸೂತಿ ಪೀಯೂಷಧಾರಾಂ ।
ಬುವೆ ಪೊಯ್ನೀರಾಗೆ ಮುದ್ದಿಂ ಬಳಯಿಸಿದಳದೆಂಗೆಯ್ದೆ ಮಂದಾನಿಲಂ ತೋಂ
ಟವೆಸಂಗೆಯ್ದಟ್ಟಿಂ ಪೆರ್ಚಿಸಿದ ವಿಚಕಿಳಂ ರಣ್ಯಮಲ್ಲಲ್ಲಿಗೆಲ್ಲಂ ॥ ೮೯

(ಚಂದ್ರಪ್ರಭಪುರಾಣಂ, ೧–೮೭.)

ಪಾಡುತ್ತುಂ ಮಱಿದುಂಬಿಯೊಳ್ ಡಣದಿಂ ಪಾರಾವತಕ್ರೀಡೆಯಂ
ನೋಡುತ್ತುಂ ಪದಪಿಂ ವಿಚಿತ್ರತರ[4]ಕೇಳೀವಾರ್ಧಿಯೊಳ್ ಮೂಡಿ ಮು ।
ಟ್ಟಾಡುತ್ತುಂ ಶತಪತ್ರಪತ್ರಶ[4]ರ[4]ದಿಂದಂ ಪತ್ರಭಂಗಂಗಳಂ
ಮಾಡುತ್ತುಂ ಪ್ರಿಯರಿಂತು ಪ್ರೊಟ್ಟುಗಳೆವರ್ನಿಚ್ಚಂ ಪುರೋದ್ಯಾನದೊಳ್ ॥ ೯೦

(ಮಲ್ಲಿನಾಥಪುರಾಣಂ, ೨–೩೮.)

ಮಲರ್ದಲರ್ಗಳ್ಕಿ ಬಳ್ಕಿ ಮಱಿದುಂಬಿಯ ಮಾಲೆಗೆ ಕಾಯ್ದು ಬಯ್ದು ಕೋ
ಗಿಲೆಗೆ ಕನಲ್ದೊನಲ್ದು ಗಿಳಿಪಿಂಡಿನ ತೊಂಡಗಟಲ್ದೆಟಲ್ದು ತ ।
ಳ್ತಲರ್ದೆಳಮಾವು ಮಲ್ಲಿಗೆಗೆ ಕೋಳ್ಗುದಿಗೊಂಡು ಬಬಲ್ದು ಜೋಲ್ವ[5]ರು
ತ್ಕಳಿಕೆಯಿನಾಮ್ರವಲ್ಲರಿಯೊ[6]ಳೋಪ[6]ವರಾ ಪುರನಂದನಂಗಳೊಳ್ ॥ ೯೧

(ಅನಂತನಾಥಪುರಾಣಂ, ೧–೯೫.)

ಎಳಲತೆ ಪೆಕ್ಕಣಕ್ಕೆ ತಳಿರಂ ತೆಗೆದುಟ್ಟುದದರ್ಕೆ ನಟ್ಟುವಂ
ಮಲಯಸಮೀರಣಂ[7] ಪವನದಂಡಪೊಳಿಂತಿದೆ ಪಣ್ಣಬಂದ್[7] ಮ ।

---

[1] ಮಾರೆ (ಅ). [2] ರ್ವಾಂ (ಅ). [3] ರತ (ಅ). [4] ತ (ಅ). [5] ಲ್ದಡು (ಕ.ಖ.ಬ). [6] ಳೊಪ್ಪು (ಬ). [7] ಪನಸರಂಗಳೊಳಿಂತಿವೆಬಣ್ಣಮಿಂದ (ಅ).

ದ್ದಳೆ ಮಧುದೂತಿ ನಾಗಲತೆ ಮಲ್ಲಿಗೆ ಮಾಲತಿ ಬನ್ನಿಮೆಂದು ನೂ
ಬ್ವಳನಪೊಲೆತ್ತಲುಂ ಕರೆಗುಮಾ ವನದೊಳ್ ಕಿನುಗಣ್ಣಿ ಕೋಗಿಲಂ ॥ ೯೨
(ಅನಂತನಾಥಪುರಾಣಂ, ೩–೧೧.)

ಕಡೆಗಡೆಯೊಳಿರ್ದು ನಗದಿಂ
ಕಡಿವಡೆದೆಂ ಕುಬ್ಜನಿಂದೆ ಕುಡಿವಡೆದೆನಿ[1]ದೆ[1] ।
ನ್ನೆಡೆಯಲ್ಲವೆಂದು ಕಡಲಾ
ಯೆಡೆಗೆಬ್ತಂದಂತೆ ಪರಿಖೆ ಪಡೆದುದು ಗುಣ್ಪಂ ॥ ೯೩

ಬಡಪಾರ್ವಂ ಜಾಮದಗ್ನ್ಯಂ ತುಡೆ ವಿಶಿಖಮನೀರೆಬ್ಬಿತೆಣ್ಣಾಗ್ಗುದಂ ಮೆಯ್
ಸೆಡೆ[2]ದೊ[2]ಡಿತೊರ್ಬಗನ್ತ್ಯಂ ತನುಮುನಿ ಮುನಿದಾಪೋಶನಂ ಗೊಂಡೊಡೆತ್ತಂ।
ಪುಡಿ[3]ಯಿಟ್ಟಿತ್ತೊಂದೆ ಧೀಂಕಾದುದು[3] ಕಪಿಗಣುವಂಗೆಂದಗಙ್ ವಾರ್ಧಿಯಂ ಕೀ
ಬ್ವಡಿಕುಂ ನಾನಾಮರಾಳೀಬಹುಳಕಳಕಳಧ್ವಾನನಂತಾನದಿಂದಂ ॥ ೯೪
(ಜಗನ್ನಾಥವಿಜಯಂ, ೨–೧೮.)

ಎನ್ನಂತೆ ರತ್ನವಿತತಿಗೆ
ತಾನ್ನೆಲೆಯಾಯ್ತೆಂಬ ಸಮಗುಣಪ್ರಣಯದಿನಾ ।
ಮುನ್ನೀರ್ ಬಂದಪ್ಪಿದುದೆನೆ
ತನ್ನಗರಮನಮಳಪರಿಖೆ ಬಳಸಿದುದೆತ್ತಂ ॥ ೯೫
(ಚಂದ್ರಪ್ರಭಪುರಾಣಂ, ೧–೧೧೫.)

ಪರಿಖಾವಳಯಮಲಂ[4]ಘ್ಯಂ[4]
ಪರಿವೇಷ್ಟಿಸಿ ಕಡೆಯಲೆಂದು ಪಾಲ್ಗಡಲೊಳ್ ತಂ ।
ದಿರಿಸಿದ ಮಂದರಗಿರಿಗೇಂ
ದೊರೆಯಾದುದೊ ಪೊನ್ನ ಕೋಂಟೆ ವಿಕಟಾಟ್ಟಾಳಂ ॥ ೯೬
(ಮಲ್ಲಿನಾಥಪುರಾಣಂ, ೨–೫೧).

ಸುರನಗಮಂ ನಿಷಿರ್ಚಿ ತೆರೆನುತ್ತಿದನಲ್ತೆ ಸರೋಜಸಂಭವಂ
ಪುರಕೆನೆ ಚೆಲ್ವನಪ್ಪ ನವ[5]ಹಾಟಕ[5]ನಿರ್ಮಿತಮಪ್ಪ ಕೋಂಟೆ ಮು ।
ಟ್ಟಿರೆ ಮುಗಿಲಂ ರಥಕ್ಕೆ ಪಥಮಿಲ್ಲದೆ ಬಿಟ್ಟೆರಡುಂ ಕೆಲಂಗಳೊಳ್
ಚರಿಯಿಪನಲ್ಲದಂದು ರವಿಗೆತ್ತಣದುತ್ತರದಕ್ಷಿಣಾಯನಂ ॥ ೯೭
(ಚಂದ್ರಪ್ರಭಪುರಾಣಂ, ೧–೧೧೪.)

---

[1] ಪೆ (ಕ.ಖ). [2] ಯಾ (ಬ). [3] ಮಟ್ಟಿತ್ತೊರ್ವೆ ತಾಂ ಪೋದುದು (ಬ).
[4] ಪಿಂ (ಖ.ಬ). [5] ಪಾಟಲ (ಖ.ಬ).

ಬಳಸಿದ ಮುಗಿಲಟ್ಟಳೆಗಳ
ನೆಳಸಿದ [1]ಪಬಯಿಗೆಗ[1]ಳೆಲರ್ಗಳಾಱಿಸುತಿರ್ಕುಂ ।
ಜಲಜಪ್ರಿಯನ ರಥಾಶ್ವಂ
ಗಳ ಮೆಯ್ಯೊಳ್ ತಳೆದ ಗಗನಗಮನಶ್ರಮಮಂ ॥ ೯೮

ತೂಗಿದೊಡಮರಾವತಿ ಲಘು
ವಾಗಿ ನಭಕ್ಕೊಗೆದುದಂಜಿ ಪೊಕ್ಕುದು ರಸೆಯಂ ।
ಭೋಗಪತಿ ತೆಗೆದು ನ್ಯಾ[2]ಟ್ಕಿಡಿ
ಯಾಗಿರ್ದಪುದಳತೆ ತನಗೆನಿಪ್ಪುದು ನಗರಂ ॥ ೯೯

ತ್ರಿದಶಜನಾನ್ವಿತಂ ಗಡ ಮಹೀರುಹಪಂಚಕಸಂಚಿತಂ ಗಡಂ
ತದು ದಿಟದಿಂದಮಾನಪರಿಮೇಯವಿದಗ್ಧಬುಧಾಶ್ರಯಂ ರಸಾ ।
ಸ್ಪದ ಬಹುವೃಕ್ಷಕೇಳಿವನಸಂಗತಮೆಂದು ನಗುತ್ತುಮಿರ್ಪುದಾ
ತ್ರಿದಶರ ಲಕ್ಷ್ಮಿಯಂ ನಿಯತಲಕ್ಷ್ಮಿಪುರಂ ನವಸೌಧರೋಚಿಯಿಂ ॥ ೧೦೦
(ಚಂದ್ರಪ್ರಭಪುರಾಣಂ, ೧–೧೩೭.)

ವಾರಿಧಿ ತನ್ನಗಚ್ ತನಗೆ ರೈವತಶೈಲಮುಪಾಂತಶೈಲಮಂ
ಭೋರುಹಲೋಚನಂ ತ್ರಿಭುವನಪ್ರಭು ತನ್ನಧಿನಾಥನೆಂದೊಡಿ ।
ನ್ನಾರಭಿವರ್ಣಿಸಲ್ ನೆಱಿವರೆಂಬಿನಮಿರ್ದುದುದಗ್ರಗೋಪುರಂ
ದ್ವಾರವತೀಪುರಂ ಜಿತಸುರೇಂದ್ರಪುರಂ ವಸುಧಾಂಘ್ರಿನೂಪುರಂ ॥ ೧೦೧
(ಜಗನ್ನಾಥವಿಜಯಂ, ೯–೮೫.)

ಅದಱೊಳ್ ಪುಟ್ಟಿದ ಗಂಡರೆಲ್ಲಮತಿವೀರರ್ ಪೆಂಡಿರೆಲ್ಲಂ ವಿಳಾ
ಸದ ಸೌಭಾಗ್ಯದ ಸೀಮೆಗಳ್ ಕಿಱಿಯಳರೆಲ್ಲಂ ಪಂಡಿತರ್ [3]ಸೆಟ್ಟಿವ ।
ಟ್ಟಿದ[3]ರೆಲ್ಲಂ ಕಡು [4]ಚಾಗಿ[4]ಗಳ್ ಬದಗರೆಲ್ಲಂ ಭೋಗಿಗಳ್ ಗಾಂಪರುಂ
ಚದುರರ್ ಲೆಂಕರುಮಾಯಕಾಱರಧಮವ್ಯಾಪಾರರುಂ ಧಾರ್ಮಿಕರ್ ॥ ೧೦೨
(ಅನಂತನಾಥಪುರಾಣಂ, ೧೧–೧೨.)

ನಯಮಳವಟ್ಟ ಜವ್ವನದ ರೂಢಿಯ ಗಾಡಿಯ ಪೆಂಡಿರೆಲ್ಲಮ
ಲ್ಲಿಯೆ ಸಿರಿಗೊಪ್ಪಮಂ ಪಡೆದ ಚಾಗದ ಭೋಗದ ಗಂಡರೆಲ್ಲಮ ।
ಲ್ಲಿಯೆ ಪೆಸರಾನೆಯುಂ ಕುದುರೆಯುಂ ಪೆಸರಾದ ಸಮಸ್ತವಸ್ತುವ
ಲ್ಲಿಯೆ ಪೆಱತೊಂದು ಪಟ್ಟಣದೊಳಿಲ್ಲೆನೆ ಪಟ್ಟಣಮೊಪ್ಪಿ ತೋಱುಗುಂ ॥ ೧೦೩

---

[1] ಪಡನೆಗಳೆ (ಕ). [2] ಟ್ಗ (ಕ), ಲ್ಪ (ಖ.ಬ). [3] ಕಟ್ಟಿವಟ್ಟಿದ (ಕ). [4] ಜಾಣ (ಖ.ಬ).

ಮುರಿಳಿಯ[1] ತಿವಳಿಯ ತಿನರಿಯ
ಕರಡೆಯ ವಾದ್ದಳೆಯ ಕೊಟಲ ಪಳವದ ಪಲವುಂ ।
ಗಿರುಗಟೆಯ ಸಿವುರ ಸಿಪ್ಪಿನ
ಕೊರಗಿನ ಕಿನ್ನರದ ಸರಮೆ ಸರಮಾ ಪೊಟಲೊಳ್ ॥

ಜನವಕ್ಕೋನ್ಮುಕ್ತನಿರ್ದ್ದಿಮಪರಿಮಳತಾಂಬೂಲ[2]ಸಂಸಂಗಿ[2] ಭೃಂಗೀ
ಸ್ವನದಿಂ ಪ್ರತ್ಯಂತರಾಜಾತ್ಮಜವಿಭವಸಮಾಕ[3]ರ್ಣಿತೋತ್ತಾ[3]ನಗಾನ ।
ಧ್ವನಿಯಿಂ[4]ದುದ್ವೃತ್ತಮತ್ತ[4]ದ್ವಿರದನಿಗಡನಿರ್ಘೋಷದಿಂ ಸಂಚರದ್ವಾ
ರನಿತಂಬಿನ್ಯಂದುಕಾರಾವದಿನತಿಮುಖರಂ ತತ್ಪುರೀ ಪಟ್ಟಮಾರ್ಗಂ ॥ ೧೦೫

(ಚಂದ್ರಪ್ರಭಪುರಾಣಂ, ೧–೧೩೧.)

ಘನತರಮಾದ ಕತ್ತುರಿಯ ನೀರ್ದಳಿಪಂ ಪುದಿದಿರ್ದ ತೋರಮು
ತ್ತಿನ ಕಡೆ ತಳ್ತ ಹೇಮಮಯಪುಷ್ಪದ ಪೂವಲಿ ನೀಳ್ದ[5] ಚೀನಕೇ ।
ತನತತಿ ಮಾಲೆಗೊಂಡ ಮಣಿದೋರಣಮೆಂಬಿವು ಬೀದಿಬೀದಿಯೊಳ್
ಮನೆಮನೆಯೊಳ್ ವಿರಾಜಿಸೆ ವಿರಾಜಿಸುತಿರ್ಪುದು ತತ್ಪುರಾಂತರಂ ॥ ೧೦೬

(ಜಗನ್ನಾಥವಿಜಯಂ, ೯–೯೭.)

ಚಂದನದ[6]ಗ[6]ರುವ ಮೃಗಮದ
ಮೊಂದಿದ ಕೇಸರದ ಸರಸಿಜಾಸವ[7]ದಳುರ್ದೆಂ[7] ।
ಟುಂದೆಸೆಗೆ ಮಿಳಿರ್ವ ಧೂಪದ
ಸಾಂದಿನ ಸೌಷ್ಠವದ ಕಂಪೆ ಕಂಪಾ [8]ಪೊಟಲೊ[8]ಳ್ ॥ ೧೦೭

ಪೊಂಗಳಸಂಗಳಿನೆಸೆವು
ತ್ತುಂಗಧ್ವಜತೋರಣಂಗಳಿಂ ಸೊಗಯಿಪ ಕೂ ।
ಟಂಗಳಿನೆಲ್ಲಂ ನಾಡೆ ಮ
ನಂಗೊಳಿಪುವು ಪುರದ ರಮ್ಯಹರ್ಮ್ಯಚಯಂಗಳ್ ॥ ೧೦೮

(ಕಾವ್ಯಾವಲೋಕನಂ, ೯೯.)

ಪುರದೊಳಗಲ್ಲಿಗಲ್ಲಿಗೆರಡುಂ ತರದಿಂ [9]ಸೊಡರ್ವೆಳ್ಪಿನಿಂ[9]ದವಂ
ಬರಚರಕಾಮಿನೀತತಿಗೆ ಚಂದನದಣ್ಪಿನ ಸೊಂಪನೀಯುತುಂ ।

---

[1] ವದ (ಕ). [2] ಸಂಪತ್ತಿ (ಖ). [3] ರ್ಣನೋತ್ತಾ (ಕ), ರ್ಣಿತಂಧ್ವಾ (ಖ). [4] ವ್ಯಾಪಾರಮುಕ್ತ (ಅ.ಖ.ಬ). [5] ಲ (ಅ). [6] ತ (ಕ). [7] ದೊಳಗೆಂ (ಕ). [8] ಪುರದೊ (ಕ). [9] ಪೊಡೆವೆಳ್ಪಿನಿಂ (ಕ), ದೆಸೆವೊಳ್ಪಿನಿಂ (ಕ).

ಸಿರಿಗೆ ನಿವಾಸಮಾದ ಪಿರಿಯಂಗಡಿಗಳ್ ಬಗೆಗೊಪ್ಪಿ ತೋರ್ಪುವಾ
ಪುರವರಲಕ್ಷ್ಮಿ ತೊಟ್ಟ ಪೊಸಮುತ್ತಿನ ಹಾರದ ಪೊತ್ತ[1]ಮೆಂಬಿನಂ ॥ ೧೦೯

(ಜಗನ್ನಾಥವಿಜಯಂ, ೯–೧೦೫.)

ತಪ್ಪದೆ ನರಸಿಜಸಂಭವ
ನಪ್ಪೊಡಮೆಣಿಸಲ್ಕೆ ನೆಱಿಯನೆನಿಸುವ ಪಲವುಂ ।
ಕಪ್ಪುರದ ರಾಸಿ ಬೀದಿಯೊ
ಳುಪ್ಪಿನ ರಾಸಿಯವೊಲೊಟ್ಟಿ ಬೆಟ್ಟಾಗಿರ್ಕುಂ ॥ ೧೧೦

ಸುರಪನ ವಜ್ರಮುಂ ಹರಿಯ ಕೌಸ್ತುಭಮುಂ ಹರನಿಂದುಲೇಖೆಯುಂ
ವರುಣನ ಮುತ್ತಿನೆಕ್ಕಸರಮುಂ ಗರುಡಾಂಗದ ಪಚ್ಚೆಯುಂ ಫಣೀ ।
ಶ್ವರಫಣರತ್ನಮುಂ ಬೆಲೆಗೆ [2]ವೇಱ್ಪುದುವ[2]ಲ್ಲಮೆನಿಪ್ಪ [3]ರತ್ನದಿಂ[3]
ದೆರಡನೆಯಬ್ಧಿ ರನ್ನವಸರಂ ಗೆಲೆವಂದುದು ರೋಹಣಾದ್ರಿಯಂ ॥ ೧೧೧

(ಪಂಪರಾಮಾಯಣಂ, ೧–೧೦೯.)

ಗಿರಿಜೆಯ ರನ್ನದಾಳಿ ಸಿರಿಯಿಕ್ಕಿದ ಮುತ್ತಿನ ಹಾರಮಟ್ಟಿಯಿಂ
ನರಸತಿ ತೊಟ್ಟ ಪಚ್ಚೆ ಪಡಿಯಲ್ಲವು ಕೀೞ್ತಿರಮಂತವಿರ್ಕೆನಲ್ ।
ವರುಣನೆ ಮಾಱಲಚ್ಚೆ ವರಣಾನುಚರರ್ ಪರಿದಾಡುತಿರ್ಪರೀ
ಪುರದೊಳಗೆಂಬಿನಂ ಮೆಱಿವರಾ ಪುರದೊಳ್ ಮಣಿಗಾಱರಾವಗಂ ॥ ೧೧೨

ಪುರದೊಳ್ ಗಂಧವಣಂಗಳೊಳ್ ಶಶವಿಷಾಣದ್ವೀಪಿನೀಸ್ತನ್ಯವ
ನ್ಯರಸಾದ್ಯಂಗಳೊಳಾವುದಿಲ್ಲಮೆನಲುಂಟಾ ಕೇರಿಯೊಳ್ ಸಿದ್ಧಸಿ ।
ದ್ಧರಸಂ ದೇಹರಸಾಯನಂ ಮೃತಪುನಸ್ಸಂಜೀವನಂ ವಿಕ್ರಿಯಾ
ಪರ ದಿವ್ಯೌಷಧಿ ದೇವಲೋಕದಮೃತಂ ಪಾತಾಳಭೇ[4]ದ್ಯಂ[4]ಜನಂ ॥ ೧೧೩

(ಅನಂತನಾಥಪುರಾಣಂ, ೧–೧೦೬.)

ಮೃಗಮದಮೆಯ್ದೆ ಕಣ್ಣ ಬೆಳಗಿಂ ಮಲಯೋದ್ಭವದಂತೆ ತೋಱೆ ತುಂ
ಬಿಗಳದಱಚ್ಚಗಂಪುಗಳನುಂಡೆಗರ್ಪನೆ ಪೋಲ್ತುದೆಂಬವೋಲ್ ।
ನೆಗೆಯೆ ತೆರಲ್ವ [5]ಕಂಪು ನೆಲದೊಳ್[5] ನಱುಸುಯ್ಗಳ ಗಾಳಿ ತೋಟಿಯಂ
ತೆಗೆದು ಮಗುೞ್ಚೆ ಕತ್ತುರಿಮಗುೞ್ಚುವರಲ್ಲಿಯ ಘಟ್ಟಿವಳ್ತಿಯರ್ ॥ ೧೧೪

(ಲೀಲಾವತಿ, ೭–೧೨.)

---

[1] ದಂದದಿಂ (ಅ). [2] ಬಿಣ್ಣ್ದುಮ (ಅ). [3] ಪೆಂಪಿನಿಂ (ಅ). [4] ದ್ಯಾಂ (ಖ.ಬ). [5] ಕಂಪಿನೆಲರೊಳ್ (ಅ).

ಒಳ್ನಡು ಬಳ್ಕೆ ಪೆರ್ಮೊಲೆ ವಿಜೃಂಭಿಸೆ ಕಂಕಣಕಿಂಕಿಣೀರವಂ
ಗಳ್ ನನುಪೊಣ್ಮೆ ಹಾರಲತೆ ನರ್ತಿಸೆ ಸುಯ್ ನೆಲೆವೆರ್ದೆ ಕುಂತಳಂ ।
ಗಳ ನಿಮಿರ್ದಾಡೆ ಘರ್ಮಜಲವುಣ್ಮೆ ವಿರಾಜಿಸುತಿರ್ದರಲ್ಲಿ ತೋ
ಳ್ಗಳ್ ನಲಿದೊಪ್ಪೆ ನೀಳ್ದುಡುಗಿ ಘಟ್ಟಿಮಗುಟ್ಟುವ ಘಟ್ಟಿವಳ್ತಿಯರ್ ॥ ೧೧೫
(ಜಗನ್ನಾಥವಿಜಯಂ, ೯–೧೦೨.)

ಚಳನಯನಾಂಶುಚಂದ್ರಿಕೆಯಿನೊಯ್ಯನೊಸರ್ತರೆಪಕ್ಕೆ ತಾನೆ ನೀ
ರ್ದಳಿಯೆ ಪಳಚ್ಚನಪ್ಪ ಶಶಿಕಾಂತದ ಸಣ್ಣಿಗೆ ನೋಡಲೀಯದ ।
ವ್ಪಳಿಸೆ ಕುಚದ್ವಯಂ ಪದದಿನುಣ್ಮುವ ಸು[1]ಯ್ನುಗಂ[1]ಪುಗಳ್ ದಳಂ
ಗಳನಧಿವಾಸಿಸುತ್ತಮಿರೆ ಘಟ್ಟಿಮಗುಟ್ಟುವುದಂಗನಾಜನಂ ॥ ೧೧೬
(ಚಂದ್ರಪ್ರಭಪುರಾಣಂ, ೧–೧೩೦.)

ತನಿಗಂ[2]ಪಿನತ್ತ[2] ಪುಗಲರಿ
ದೆನಿಸುವ ಸುರಿದರಲ ಬಂಡು ಕಣಕಾಲುದ್ದಂ ।
ಜನಕೆನಿಸುವ ಪೆಂಪಿನ ಪೂ
ವಿನ ನಂತೆ ಕರಂ ಮನೋಹರಂ ಪುರವರದೊಳ್ ॥ ೧೧೭
(ಲೀಲಾವತಿ, ೭–೧೩.)

ತರಳಾಪಾಂಗಂಗಳೊಳ್ ಮಚ್ಚರಿಪಲರ್ಗಣೆಯಂ ಕಟ್ಟಿ ತೂಪಂದದಿಂ ಚಾ
ಮರಮಂ ವಕ್ಷೋಜಪೀಠಸ್ಥಿತಮದನನೃಪಂಗೆತ್ತುವಂತೆತ್ತಿ ಪೂವಂ ।
ದರಹಾಸಶ್ರೀಯನೀವಂತಿರೆ ಪೊಸನನೆಗಳ್ಗಂತವಂ ಸುಯ್ಯೆ ಕಂಪಿಂ
ಪೊರೆವಂತಾ ಸಂತೆಯಿಂದಂ ತೊಲಗದು ಸತತಂ ಪುಷ್ಪಲಾವೀಕದಂಬಂ ॥ ೧೧೮
(ಲೀಲಾವತಿ, ೭–೧೪.)

ನಱುನುಯ್ಗುಂ ಮಾಲೆಗಂ ನೂಱಱಿದೆಱಗುವಿನಂ ತುಂಬಿಗಳ್ ನೋಡಿದರ್ ಮೆ
ಮಱೆವೆನ್ನಂ ಬಾಹುಮೂಲಂ ಪೊಗರನುಗುಟ್ಟಿನಂ ಕಣ್ಮಲರ್ ಬಳ್ಕಿಮಿಂಚಂ। [ಯ್
ಕಱುವನ್ನಂ ಮಾಲೆವೂವಂ ನೆಗಪಿ ಸೊಗಯಿಕುಂ ನೀಱಿರೊಳ್ ಪುಷ್ಪಚಾಪಂ
ಗುಱುಯೇಸಂ ತೋಱಲಂಬಂ ಪೊದೆಗೆದಱಿದವೋಲ್ ಪುಷ್ಪಲಾವೀಕದಂಬಂ ॥
(ಪಂಪರಾಮಾಯಣಂ, ೧–೧೨೦.)

ತರಳಕಟಾಕ್ಷಮಾಲೆಯೊ [3]ಸಿತೋ[3]ತ್ಪಲಮಾಲೆಯೊ ಕಯ್ಯ ಮಾಲೆಯೋ
ಸಿರಿನದ ಮಾಲೆ[4]ಯೋ ಮಿಸುಪ ಜಾಜಿಯ ಮಾಲೆಯೊ ಹೇಳೆನಿಪ್ಪ [4]ನೀ ।

---

[1] ಯ್ಯಿಲರ್ಗಂ (ಅ). [2] ಪನೆತ್ತಿ (ಅ). [3] ನವೊ (ಅ). [4] ಯೊಳ್ತೊಡರ್ದ ಮಾರೆಯೊ ವಿನ್ಮಯಮೆಂದು ನೋಲ್ಪ (ಅ).

ಉರ ಸೊಬಗಂ ಮೊದಲ್ಗೆಡಿಸಿ ತೋಳ ಮೊದಲ್ [1]ಬೆಲೆ[1]ವೂವನೆತ್ತುವಂ
ತಿರೆ ನನೆಯಂಬುಗಳ್ಗೆ ಬೆರಲೆತ್ತುವರಲ್ಲಯ ಮಾಲೆಗಾರ್ತಿಯರ್ ॥ ೧೨೮
(ಮಲ್ಲಿನಾಥಪುರಾಣಂ, ೨–೫೯.)

ಉಗುರ್ಗಳ ಕಾಂತಿಯುಂ ನಯನಕಾಂತಿಯುಮೊಂದಿ ಕದಂಬಮಾಗಿ ಸಂ
ಪಗೆಯೆನಬಂತೆ ನ್ಯೈದಿಲೆಸಬಂತೆ ವಿಮೋಹಮನೀಯೆ ಮಾಡುಗೊಂ ।
ಡಗಲಲೊಡಂ ಬಟಿಕ್ಕೆ ಬಜಿಮಲ್ಲಿಗೆಯಾಗಿರೆ ಬಂದು ಮಾಯವಾ
ಸಿಗಮಿದು ಸಲ್ಲದೆಂಬ ವಿಚರಂ ನಗುವರ್ ಮಿಗೆ ಮಾಲೆಗಾರ್ತಿಯರ್ ॥ ೧೨೧

ತೆಗೆಯೆ ಚಕೋರಿ ಕರ್ಚಿ ಶಶಿಮಂಡಲದಿಂದಮೆ ಕಿಟ್ಟು ಬಿಟ್ಟ ರ
ಶ್ಮಿಗಳೆಡೆಯಂತೆ ತೋಱಿದುದು ನುಣ್ಗಱಿಯಾ ಕೆಡೆದುನ್ಮಯೂಖಮಾ ।
ಲೆಗಳೆನೆ ಚಂದ್ರಮಂಗೆ ಕುಡಲೆತ್ತಿದವೋಲೆಸೆದಿರ್ದರಲ್ಲಗ
ಲ್ಲಗೆ ಮಿಗೆ ತೋರಮಲ್ಲಿಗೆಯ ಮಾಲೆಯನೆತ್ತಿದ ಮಾಲೆಗಾರ್ತಿಯರ್ ॥ ೧೨೨
(ಲೀಲಾವತಿ, ೨–೨೯.)

ಕೇಳಿದು ನೋಡಲರ್ಥಮನನೇಕಮನೀವವೊಲಾ ಸುವರ್ಣಸಂ
ಮೇಳವಿಚಿತ್ರಬಂಧರಸಭಾವದೆ ಛಂದಸುಸೂತ್ರದೋಜೆಯಿಂ ।
ಮೇಳಿಸಿ ತೋರ್ಪರಲ್ಲಿ ನವಚಂಪಕಮುತ್ಪಲಜಾತಿಮಲ್ಲಿಕಾ
ಮಾಲೆಗಳಂ ಕವೀಂದ್ರರೊಡನಾಡಿದರೆಂದೆನೆ ಮಾಲೆಗಾರ್ತಿಯರ್ ॥ ೧೨೩

ಆವಂ ಸ್ವರ್ಗಾಪವರ್ಗಕ್ಕೆಳಸುವನವನಂ ಗಂಡುದೊ[2]ಚ್ಚಾ [2]ಳ್ವರಾವಂ
ಕಾವಂದೇವವ್ರತಖ್ಯಾತಿಯನವನನವಲ್‌ಮಾಬ್ಪುದೆಂದಾ ಪುರಸ್ತ್ರೀ ।
ಭ್ರೂವಿಕ್ಷೇಪಕ್ಕೆ ಸೇನಾಪತಿಪದವಿಯನಿತ್ತಂ ಮನೋಜಾತನಾಟಂ
ದಾ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲ ಕಣ್ಣಂ ಸ್ಮರಂ ನಂದೆವೊಯ್ದಂ ॥
(ಮಲ್ಲಿನಾಥಪುರಾಣಂ, ೨–೫೬.)

ಬತ್ತಲೆ ಬಂದ ಮುನೀಂದ್ರರ್
ಸುತ್ತುವರತಿವಿಭವದಿಂದಲುಟ್ಟಿರ್ದವರುಂ ।
ಬತ್ತಲೆ ಪೋಪರ್ ಸೊಬಗಿನ
ಬಿತ್ತರದಿಂದೆಸೆವುವವಱಿ ವೇಶ್ಯಾವಾಟಂ ॥ ೧೨೫

ಮಕರಾಂಕಧ್ವಜಮಾಲಿಕಾಪ್ರಕಟಿತಂ ಪ್ರದ್ಯುಮ್ನಪಕ್ಷಕ್ರಮಂ
ಶುಕಸಾರಿಪ್ರಕರಪ್ರಕಾಶಿತರತಿವ್ಯಾಪಾರಚಾತುರ್ಯಮು ।

---

[1] ನನೆ (ಅ). [2] ತ್ತಾ (ಅ).

ತ್ಸುಕಭೂಪಾಲಭುಜಂಗತಾಟಿತಹಟದ್ಫಂಟಾರವಾವಿಷ್ಕೃತಾ
ಧಿಕಸೌಭಾಗ್ಯಮದೇಂ ಬೆಡಂಗಮರ್ದುದೋ ಗಾಣಿಕ್ಯಸೌಧೋತ್ಕಟಂ ॥ * ೧೨೬

ಮಿಱುಗುವ ಮಿಂಚಿಗಿಂದುಕಳೆಯಂ ಮಿಗೆ ರೊಂಕಣೆಯಿಕ್ಕುವಂತಿರ
ಲ್ಕುಱಿನವಟ್ಟೈಪ ನಾಡ ಕಡುನೀಱಿಯರಂ ನಡೆ ನೋಡಿ ಸೋಲದಿಂ ।
ಮಱೆವುದು ರಂಭೆಯೂರ್ವಶಿ ತಿಲೋತ್ತಮೆ ಮೇನಕಿ ಮಂಜುಘೋಷೆಯೆಂ
ಬಱಿಕೆಯ ದೇವಸೌಂದರಿಯರಂ ಚರಿಯಿಪ್ಪ ನಿಳಿಂಪಸಂಕುಳಂ ॥ ೧೨೭

ಬಲದು ಜವ್ವನಂ ತವದು ಮೆಯ್ಸಿರಿ ಖಂಡಿಸದಾಯು ಮೆಚ್ಚು ಕೆ
ಚ್ಚಟಿಯದು ನಣ್ಪು ನಣ್ಪುಗೆಡದಾಸಱು ಪೋಗದು ಬೇಟದಿಂಬು ಕ ।
ಯ್ಗುಟಿಯದು ಸೊಂಪು ಸೊಂಪಡಗದಲ್ಲಿ ಜನಂಗಳ ಸೊಂಪಿನಿಂದೊಸ
ರ್ತಿಟಿದುದು ಸಗ್ಗದುಳ್ಳ ಸವಿಯೆಲ್ಲಮಿದೀ ನೆಲಕೆಂಬ ಮಾಜ್ಕೆಯಿಂ ॥ ೧೨೮

ಒದವಿದ ತಮ್ಮ ಕೆಂದಳದ ಕೆಂಪುಗಳಿಂ ಗಿಳಿ ಪದ್ಮರಾಗರ
ತ್ನದ ಗಿಳಿಯಂತೆ ತಮ್ಮ ನಯನಾಂಚಲ ಚಂದ್ರಿಕೆಯಿಂದಮಿಂದುಕಾಂ ।
ತದ ಗಿಳಿಯಂತೆ ಕೌತುಕಮನಾಕ್ಷಣದೊಳ್ ನೆಱೆ ಮಾಡೆ ನೋಡಿ ಮಾ
ಯದ ಗಿಳಿಯೆಂದು ಪಂಜರದೊಳಿಕ್ಕುವರೋದಿಸಲಂಜಿ ಮುಗ್ಧೆಯರ್ ॥ ೧೨೯

ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂ
ಡಳಿಯೊಡನಾಡಿಯಾಡಿ ನಡೆಗಲ್ತು ಕಳಾಪಿಗಳಾಟಮಂ ಮನಂ ।
ಗೊಳೆ ನಡೆನೋಡಿ ನೋಡಿ ಕುಣಿಯಲ್ ನೆಱೆ ಕಲ್ತು ಕಲಾಗುಣಂ[1]ಪೊದ
ಳ್ದಳವಡೆ ಬಾಲಭಾವದೊಳೆ[1] ಬಾಲಕಿಯರ್ ಬಳೆವರ್ ನಿರಂತರಂ ॥ ೧೩೦

(ಕಾವ್ಯಾವಲೋಕನಂ, ೨೯೦.)

ಗಱೆಯಿಂ ಗೋಳುವರಿಂದ್ರನಂ ಗಿರಿಶನಂ ಸರ್ವಸ್ವಮಂ ಕೊಂಡು ಮು
ನ್ನುಟಿವರ್ ಕಂತುವನೀಯ[2][ರಂ]ತೆ ಕರೆಯರ್ ವಿತ್ತೇಶನೇನಿತ್ತೊಡಂ ॥
ಪಟಿಕಯ್ಯರ್ ವರುಣಂ ಕರಂ ಕರುಣದಿಂ ಲಲ್ಲೈಸೆ ತಾವೊಲ್ಲರಾ
ಪೊಟಲೊಳ್ ಪೆಂಡಿರಿ[3][ಗೋಲೆವೋಗದವರಾರ್][3] ನಿರ್ವಾಹಮಂ ಸ್ನೇಹಮಂ ॥ *

ಸುರರಾಜಂ ಕಣ್ಣಮೆಯ್ಯಿಂ ನನೆಗಣೆಗೊಡಲಾದಂ ಜವಂ ಛಾಯೆಯೊಳ್ ಮೆಯ್
ಗರೆದಂ ರತ್ನಾಕರೇಶಂ ಕಡಲೊಳಗುಳಿದಂ ಭಿಕ್ಷುವಂ ಪೊರ್ದಿ ಯಕ್ಷಂ ।

---

* ಈ ಚಿಹ್ನೆಯಿರುವ ಪದ್ಯಗಳು (ಕ) ಪ್ರತಿಯಲ್ಲಿಲ್ಲ. [1] ಗಳಂತಳವಡೆ ಭಾಗ್ಯಭೋಗದೊಳೆ (ಕ.ಖ ಬ). [2] ಮಂ (ಖ.ಬ). [3] ಗೊಲೆವೊಗವದಱೊಳ್ (ಖ.ಬ)

ಮಗುಳಾದಂ ಮಿಕ್ಕಿನರ್ ಗೊಂಟಿನೊಳೆ ಮುದುಡಿದರ್ ಚಿತ್ತಮಂ ವಿತ್ತಮಂ ತ
ಬ್ಬರಿಗೊಂಡಿಚ್ಛೈಸಿದಾ ನೂಳೆಯರುಟಿದೊಡೆ ಸಂತಾಪದಿಂ ದೈನ್ಯದಿಂದಂ॥ ೧೩೨
(ಅನಂತನಾಥಪುರಾಣಂ, ೧–೧೧೨).

ಗಿರಿಜಾವಲ್ಲಭನೊತ್ತೆ ಗೊಟ್ಟ ಪೆಱಿಯಂ ಸೈತಿಕ್ಕವೇಡ್ ಬಂದಪಂ
ಹರಿ ಮುಂದಟ್ಟಿದನಿಂದು ಕೌಸ್ತುಭಮನಕ್ಕಂ ಕಂಡಳೇ ವಜ್ರಮಂ ।
ಸುರರಾಜಂ ಬಿಡಿನಲ್ಕೆ ಬಂದು ಪೊಱಿಗಿರ್ದಂ ಕಾಮದೇವಂ[1]ಗೆ[1] ಬೋ
ನರಿಗಂ ನಿಂದುಟಿಯೆಂಬರಾ ವ್ಯರದ ವೇಶ್ಯಾವಾಟದೊಳ್ ಚೇಟಿಯರ್ ॥ ೧೩೩

ನರಸಿಜನಾಥನಂ ಸಿರಿ ಮನೋಭವನಂ ರತಿಯಿಂದುಮಳಿಯಂ
ಗಿರಿಜೆ ಸುರೇಶನಂ ಶಚಿ ಚತುರ್ಮುಖನಂ ವರವಾಣಿ ತಾರಕಾ ।
ಪರಿವೃಢನಂ ಸಮಂತೆನೆವ ರೋಹಿಣಿ ಪಾರ್ಶ್ವದೊಳಿಟ್ಟು ಕಾವರಾ
ಪುರದ ವಿಳಾಸಿನೀಜನದ ಗಾಡಿಗೆ ಮೆಚ್ಚಿ ನಿಜಾತ್ಮನಾಥರಂ ॥ ೧೩೪

ಮದನವಿಕಾರಮಂ ಮೆಱಿವ ಪಾರಿವಮಿಲ್ಲದ ರಾಜಕೀರಮಿ
ಲ್ಲದ ನೆಲೆಮಾಡಮಿಲ್ಲದ ನೆಗಪ್ತೆಗೆ ನೇಱಿದ ಪೊನ್ನಘಂಟೆಯಿ ।
ಲ್ಲದ ತಳಿರುಯ್ಯಲಿಲ್ಲದ ಲತಾಗೃಹಮಿಲ್ಲದ ಗೊಟ್ಟಿಗಾಣ[2]ಮಿ[2]
ಲ್ಲದ ಕಡೆಪಟ್ಟ ನೂಳೆವನೆಯಿ[3]ಲ್ಲೆನೆ ತತ್ಪುರಮೊಪ್ಪಿ ತೋಱಿಗುಂ[3] ॥ ೧೩೫
(ಮಲ್ಲನಾಥಪುರಾಣಂ, ೨–೫೭.)

ನಡೆಗಲಸುತ್ತು ಮಂಚೆಗಳನೋದಿಸುತುಂ ಗಿಳಿಯಂ ಪಿಕಕ್ಕೆ ಮಾ
ಮಿಡಿಗಳನಿಕ್ಕುತುಂ ನವಿಲನಾಡಿಸುತುಂ ಪೊಣರ್ವಕ್ಕಿಯಂ ಪಿಣಿ ।
ಲ್ಪಿಡಿದು ಬಟಲ್ವನಂ ತಗುಳುತುಂ ಬನದೊಳ್ ಬಿನದಂ ವಿಲಾಸಮಂ
ಪಡೆಯೆ ನಿರಂತರಂ ತೊಲಗದಿರ್ಪುದು ವಾರವಿಳಾಸಿನೀಜನಂ ॥ ೧೩೬
(ಮಲ್ಲಿನಾಥಪುರಾಣಂ, ೨–೩೯.)

ಮನಸಿಜನಾಣೆ ಮನ್ಮಥನ ಘೋಷಣೆ ದರ್ಪಕನೇಱ್ಗೆ ಕಂತುರಾ
ಜನ ವಿಜಯಪ್ರಶಸ್ತಿ ರತಿನಾಥನ ದೃಷ್ಟಿ ಮನೋಜನಾಜ್ಞೆ ಕಾ ।
ಮನ ಹೊಸದೇಸಿ ಚಿತ್ತಜನ ಬೀರ ರತೀಶನ ಬಿಂಕವಂಗಜಾ
ತನ ಬಿರುದಲ್ಲದಿಲ್ಲ ಮಱಿದೆಲ್ಲಿಯುಮಲ್ಲಿಯ ನೂಳೆಗೇರಿಯೊಳ್ ॥ ೧೩೭

ಮಕರಾಂಕಾವಾನಭೋಗಪ್ರಹತಪಣವನಸಂವಾದಿ ಸೌಭಾಗ್ಯಘಂಟಾ
ನಿಕುರುಂಬಾಂದೋಳಲೀಲಾ ಯುವತಿಕಬರಿಕಸ್ತೂರಿಕಾರೇಣುಸಂವಾ ।

---

[1] ಗೆಂ (ಕ). [2] ರಿ (ಅ). [3] ಲ್ಲದವಿಲ್ಲವುನೂಳೆಗೇಱಿಯೊಳ್ (ಅ).

ಹಕಚಂಚತ್ಕೀರಪಾರಾ[1]ವತಪರಿತನುರಾದ್ರೀಂದ್ರಧಾಮಂ[1] ಮಾಟಕೂಟಾಂ
ತಿಕಹೇಳೋದ್ಯಾನಪಾಳಂ ನುಟಿದುದು ಗಣಿಕಾವೇಶ್ಮಚಾರಂ ಸಮಿಾರಂ ॥ ೧೩೮

(ಅನಂತನಾಥಪುರಾಣಂ, ೧–೧೧೩.)

ಗಣಿಕಾರತ್ಯಂತಸುಪ್ತಿಸ್ಖಲನಚತುರನಂಭೋಜಕಿಂಜಲ್ಕಸಂಚಾ
ರಣಶೀಲಂ ಪುಷ್ಪವಲ್ಲೀನಟನಪಟುನಟಂ ನಂಚರಚ್ಚಂಚರೀಕ ।
ಕ್ವಣನಜ್ಯಾಸಂಗಚಿತ್ತೋದ್ಭವಭುವನಜಯೋತ್ಪಾದನಪ್ರೌಢಸೇನಾ
ಗ್ರಣಿ ಚೇತಃಪ್ರೀತಿಯಂ ಪೆರ್ಚಿಸುವುದು ಪವನಸ್ಪೈರಚಾರಂ ಸಮಿಾರಂ ॥ ೧೩೯

(ಮಲ್ಲಿನಾಥಪುರಾಣಂ, ೨–೪೦.)

ನುಟಿಗುರುಳೊಳ್ ತೊಡಂಕಿ ವದನಾಂಬುಜಸೌರಭದೊಳ್ ಮುಟುಂಗಿ ಪೊಂ
ಪುಟಿಗೊಳುತಿರ್ಪ ಸೋರ್ಮುಡಿಯೊಳೊತ್ತಿದ ಕತ್ತುರಿಯಂ ಕಲಂಕಿ ಮೈ ।
ವಟಿಯೊಳೆ ಮೇಲುದಂ ತೊಲಗನೊಂಕಿ ಕುಚದ್ವಯದೊಳ್ ಪಳಂಚಿ ಪೊ
ಕ್ಕುಟೊಳಿಟಿದಾಡಿ ತೀಡಿದುದು ವಲ್ಲಭನಂತಿರೆ ಮಂದಮಾರುತಂ ॥ ೧೪೦

ಅಳಮಾಲಾಕೇಶಮಂ ಮೆಲ್ಲನೆ ಬರೆತೆಗೆದಬ್ಜಾನನಾಮೋದಮಂ ಪೀ
ರ್ದು ಲತಾಂಗಾಲಿಂಗನಂ ಸಂಗಳಿಸಿ ಕೃತಕಶೈಲೇಂದ್ರಶುಂಭನ್ನಿತಂಬ ।
ಸ್ಥಳಮಂ ತನ್ನಿರ್ಝರಾಂಬುಸ್ಮರರಸಮೊನರ್ಪಂತೇಱಿ ನಿಚ್ಚಂ ವನಸ್ತ್ರೀ
ಗೊಲವಂ ಮಾಡುತ್ತಮಿರ್ಕುಂ ಚತುರವಿಟನವೋಲ್ ದಕ್ಷಿಣಾಶಾಸಮಿಾರಂ ॥ *

ನಿಱಿಯ ಸೆಱಿಂಗನೆತ್ತಿ ಮಿಸುಪೊಳ್ಪೊಡೆಯೊಳ್ ನಸುಸೋಂಕಿ ಮೇಲ್ಗುದಂ
ತೆಱೆದು ಕುಚಾಗ್ರದೊಳ್ ಪೊರಳ್ದು ಹಾರಮನೀಡಿಱಿದಾಡಿ ಪೀರ್ದು ಬಾ ।
ಯ್ದೆಱಿಯನಲಂಪಿನಿಂದೆಸೆವ ಲೋಲಕುರುಳ್ಗಳನೊಕ್ಕಲಿಕ್ಕಿ ಮೆ
ಯ್ಯಱಿಯದೆ ನೂಳೆಗೇರಿಯೊಳೆ ಸಂಚರಿಪಂ ವಿಟನಂತೆ ಮಾರುತಂ ॥ ೧೪೨

ಸ್ತನಚೀನಾಂಶುಕಭಾರಮಂ ನೆಳೆಯುತುಂ ರೋಮಾಂಚಮಂ ಮೆಯ್ಗಳೊಳ್
ತೊನೆಸುತ್ತುಂ ಕುರುಳಂ ಚಲಂದೆಗೆಯುತುಂ ಶೃಂಗಾರಸಾರಾನ್ವಿತಾ ।
ನನಪಂಕೇಜದ ಕಂಪನೀಡ್ದುಕೊಳುತುಂ ಮಂದಾನಿಲಂ ಸೋಂಕೆ ತ
ನ್ನಿನಿಯಂ ಬಂದಮರ್ದಪ್ಪಿದಂತೆ ಸುಖದಿಂ ಕಯ್ಗೆಯ್ದಳಂದಟ್ಟಿಯಿಂ ॥ * ೧೪೩

ವನಿತಾಕೇಶಕಲಾಪನವ್ಯಕುಸುಮಾಮೋದಂಗಳೊಳ್ ಕಮ್ಮಕ
ಮ್ಮನೆ ನಾರೀನಿಬಿಡೋನ್ನತಸ್ತನಘಟಪ್ರೋದ್ಭಟ್ಟದೊಳ್ ಮೆಲ್ಲಮೆ ।

---

[1] ಪತಿತಸುರನಗೇಂದ್ರಾಧಿಕೂಟಂ (ಖ). * ಈ ಚಿಹ್ನೆಯಿರುವ ಪದ್ಯಗಳು (ಕ) ಪ್ರತಿಯಲ್ಲಿಲ್ಲ.

ಲ್ಲನೆ ಕಾಂತಾಸುರತಪ್ರಮೋದಬಳಸ್ವೇದಾಂಬುವಿಂ ತಣ್ಣತ
ಣ್ಣನೆ ತೀಡಿತ್ತು ವಿಲಾಸಿನೀಸದನದೊಳ್ ಬಂದೊಂದು ಮಂದಾನಿಲಂ ॥* ೧೪೪

ಯುವತೀಸಂತಾನನಾನಾಚಳದಲಕಲನಲ್ಲಾಸ್ಯಲೀಲಾಪ್ರಬಂಧಂ
ವಿವಿಧಾಗಾರಾಂಗನಾಪ್ರಸ್ಫುರಿತಕೃತಕಕಾಸಾರಪಾನೀಯಭಂಗೋ ।
ದ್ಭವಬಿಂದುವ್ರಾತಶೀತಾವರಣನೊಲವಿನಿಂ ತೀಡಿದಂ ಸ್ತ್ರೀಕುಲೋದ್ಯ
ನ್ನವಕಸ್ತೂರಿಕಾವಪ್ರೋನ್ಮಲಯಜಘುಸೃಣಾಮೋದಭಾರಂ ಸಮೀರಂ॥* ೧೪೫

ಆ ಪುರದ ದೇವಭವನಕ
ಳಾಪದ ಮಾಣಿಕಕಳಶದೆಳವಿಸಿಲಿರುಳಂ ॥
ವ್ಯಾಪಿಸೆ ಗೃಹದೀಪಿಕೆಗಳೊ
ಳ್ಪೊತ್ತುಂ ಜಕ್ಕವಕ್ಕಿಗಳ್ ನೆಲಸಿರ್ಕುಂ ॥ ೧೪೬

ಅರಮನೆಗಿಂಬುವೆತ್ತ ರಣಮಂಡಲಮಾ ರಣಮಂಡಲಕ್ಕೆ ಬಿ
ತ್ತರಿಸಿದ ವೀಧಿ ವೀಧಿಗಳ [1]ತೌದಲೆ[1]ಗೊಪ್ಪುವ ಮಂಟಪಂ ಮನೋ ।
ಹರತರಮಂಟಪಕ್ಕೆ ಕರುವಿಟ್ಟವೊಲಿಪ್ಪ ಸುಧಾಗೃಹಂಗಳ
ಚ್ಚರಿಯೆನೆ [2]ಚೈತ್ರಚಂದ್ರಮರೆ[2] ಚಿತ್ರಿಸಿದಂತೆಸೆದಿರ್ಪುದಾ ಪುರಂ ॥ ೧೪೭
(ಅನಂತನಾಥಪುರಾಣಂ, ೧೧–೧೩.)

ಬರೆಯಲ್ ಬಾರದು ಬಚ್ಚಿಸಲ್ಕರಿದು ಮಾಡಲ್ ಕೂಡದೊಡ್ಡೈಸಲ
ಚ್ಚರಿ ಭೂಮಂಡಲಮಧ್ಯದಿಂದೊಡೆದು ಮೂಡಿತ್ತೆಂಬಿನಂ ಚೆಲ್ವನಾ ।
ಕರುಮಾಡಂ ನವಭೂಮಿಕಾಪ್ರಕಟಿತಂ ವಿಷ್ಕಂಭವಿಸ್ತಾರಬಂ
ಧುರನಂಧಿಪ್ರತಿಭಾಸಿ ನಾಟಕದ ಪಾಂಗಿಂ ಚೂಳಿಕಾ[3]ಲಾಲಿತಂ[3] ॥ ೧೪೮
(ಅನಂತನಾಥಪುರಾಣಂ, ೧–೧೧೪.)

ಆಡುವ ಡಕ್ಕೆವಾಜಿಸುವ ನೋಡುವ ಸಂಗಡವೊಪ್ಪೆ ರಾಗಮಂ
ಪಾಡುವ ತಳ್ತು ಕುಂಬಿಸುವ ಬೀಣೆಯ ತಂತಿಯನಂಟುನೋಲ್ಪ ಮಾ ।
ತಾಡುವವಂತೆ [4]ಪೂಮುಡಿವ[4] ಕನ್ನಡಿಯಂ ಪಿಡಿದಿರ್ಪ ಭಾವದಿಂ
ಗಾಡಿಯನಾಂತ ಪುತ್ತಳಿಗಳಾ ಕರುಮಾಡದೊಳೊಪ್ಪಿ ತೋಱುಗುಂ ॥ ೧೪೯

ಬಳಸಿದ ನೀಲದ ಮುತ್ತಿನ
ತೊಳಗುವ ಮಾಣಿಕದ [5]ರನ್ನ[5]ವೆಳಗಿನ ಬೆಳಗಂ ।

---

* ಈ ಚಿಹ್ನೆಯಿರುವ ಪದ್ಯಗಳು (ಕ) ಪ್ರತಿಯಲ್ಲಿಲ್ಲ. [1] ಕಾಲ್ಮೆಲೆ (ಕ). [2] ಚಿತ್ರ ಹಂದ್ರಮರೆ (ಕ). [3] ರಾಳಿಕಂ (ಕ). [4] ಪೋಲ್ಮುಡಿಯ (ಕ). [5] ಬೆರಕೆ (ಆ).

ಥಳಥಳಿಸಿ ಬಿಸಿಲ ಬೆಳ್ದಿಂ
ಗಳ ಕಾಳದ ಕಣ್[1]ಯೊಲ[1]ಪ್ಪುದಾ ಕರುಮಾಡಂ ॥ ೧೫೦

(ಅನಂತನಾಥಪುರಾಣಂ, ೧-೧೧೬.)

ಥಂಗವಡೆದೆಸೆಗುಮವರ ಗೃ
ಹಂಗಳ್ ಮಾಣಿಕದ ಸಂಜೆಯಿಂ ನೀಲದ ಕ ।
ರ್ದಿಂಗಳನೆಳಮುತ್ತಿನ ಬೆ
ಳ್ದಿಂಗಳಿನುಜ್ವಲಿಸಿ ಪೊಳೆವ ವಜ್ರದ ಬಿಸಿಲಂ ॥ ೧೫೧

ಆ ರಾಜಸ್ಥಪನದ ಪಚ
ನಾರಂಭದ ಸೆಜ್ಜೆಯಸ್ರ್ತದಾರೋಗಿಪ ಕೊ ।
ಟ್ಯಾರದ ಭಂಡಾರದ ದೇ
ಹಾರದ ಮನೆ ಮೂಡಣಿಂ ಪ್ರದಕ್ಷಿಣಮುಚಿತಂ ॥ ೧೫೨

(ಲೋಕೋಪಕಾರ, ೪-೧೮.)

ಕರಿ[2][ಯೆ][2]ಂತಪ್ಪುವು ಸಾರ್ವಕಾಳಿಕಮದಶ್ರೀರಾಜಹರ್ಷಂಗಳಾ
ಪುರದಶ್ವಂಗಳದೇನತರ್ಕ್ಯಹಯವಂ ಕೀಷ್ಮಾಡಿ ಸಾಲ್ವನ್ನಮೇ ।
ದೊರೆಯರ್ ವೀರಭಟರ್ ದಶಾನನನ ಬಾಹಾಚಂದ್ರಹಾಸಾಸಿಯಂ
ಧುರದೊಳ್ತಾಗಿದ ಬಲ್ಪನೇಱ ಕಲೆಯಂ ಪೇಳ್ವನ್ನರೇವೇಳ್ದಪೆಂ ॥ ೧೫೩

ನೆಲೆಮಾಡಂಗಳನೋಳಿವಟ್ಟ ನೃಪಗೇಹಂ ವಸ್ತುವಂ ಬಿಲ್ಲ ಬ
ಲ್ಲುಲಿಯಂ ಘೂರ್ಣಿಸುವಾ ರಣಂ ಕಳಸದಳ್ಳೇಱುಂ ಮುಗಿಲ್‌ಮುತ್ತುಗಳ್ ।
ನೆಲೆಯಿಂ ನೂಸುವ ದೇಗುಲಂ ತಪಕೆ ತಂಪಂ ಮಾಳ್ಪ ವಾರಾಂಗನಾ
ನಿಳಯಂ ನೋಳ್ಪರ ಕಣ್ಗೆ ರಮ್ಯಮೆನೆ ಪೆಂಪಂ ಪೆತ್ತುದಾ ಪಟ್ಟಣಂ ॥? ೧೫೪

ಅದನಾಳ್ವಂ ನಿಜಬಾಹುರಾಹುಕಬಳೀಭೂತಾರಿಸಂತಾನನಂ
ಫ್ರಿದಳತ್ಪಂಕಜರೇಣುಶೋಣಿತಶಿರೋಭೂಭೃತ್ಸಮಾಧಾನನಾ ।
ಸ್ಪದಸಂಭಾವಿತಸತ್ಯಶೌಚಗುಣರತ್ನಾಂಭೋನಿಧಾನಂ ಧರಾ
ನುದತೀಹೃತ್ಪತಿ ಸಿಂಹಸೇನನನಘಂ ಸಾಹಿತ್ಯರತ್ನಾಕರಂ ॥ ೧೫೫

(ಅನಂತನಾಥಪುರಾಣಂ, ೧-೧೨೧.)

---

[1] ವೊ (ಅ). [2] ಯ (ಕ.ಖ.ಬ).

ಓರಂತೆ ಮೆಚ್ಚಿದಂ ಕೃತಿ
ಸಾರಂ ಪುರವರ್ಣನಕ್ಕೆ ಹೊಯ್ಸಳವಂಶೋ ।
ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೧೫೬

ಇದು ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ ಪ್ರಮಾಣ
ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮಷ್ಟಾದಶ
ಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ ಸೋಯಿ
ದೇವರಾಯ ವಿನೋದಾಕರ್ಣನಕೌತುಕೋತ್ಪಾದಿತಮುಂ
ಯಾದವಕಟಕಾಚಾರ್ಯಸುಕವಿ ಸುಮನೋಬಾಣ
ಜಾಮಾತೃ ಪರಮಚಿದಾನಂದಮಲ್ಲಿಕಾರ್ಜುನ
ಕವೀಶ್ವರನಂಯೋಜಿತಮುಮಪ್ಪ
ಸೂಕ್ತಿಸುಧಾರ್ಣವದೊಳ್

ಪುರವರ್ಣನಂ ಚತುರ್ಥಾಶ್ವಾಸಂ ಸಂಪೂರ್ಣಂ.

ನಾಯಕಾಭ್ಯುದಯವರ್ಣನಂ

ಮುನಿ[1]ಸಿಂದಾಂತರನಿಕ್ಕಿ[1] ಭೂವಳಯಮಂ ನಿಷ್ಕಂಟಕಂ ಮಾಡಿ ಕೀ
ರ್ತಿನಿಜಾಜ್ಞಾಸಹಿತಂ ದಿಶಾವಳಯಮಂ [2]ತಳ್ತಪ್ಪಿ[2] ಸಂಗೀತಮಂ ।
ಜನನಾಥಂ ಮುದದಿಂದಮೋಲಗದೊಳೆತ್ತಂ ಕೇಳ್ದು ತಾಂ ತ್ಯಾಗವ
ರ್ಧನಮಂ ಮಾಬ್ಪುದು ನಾಯಕಾಭ್ಯುದಯಮೆಂಬಂಗಂ ಮಹಾಕಾವ್ಯದೊಳ್ ॥ ೧

ಗೆಲವಿಂ ಭೂಮಿಜೆ ಕೈಗೆವರ್ಪುದೆ ಫಲಂ ರಾಮಂಗೆ ಮುಂ ಪೋದ ಭೂ
ತಳರಾಜ್ಯಂ ಕ್ರಮದಿಂದೆ ಬರ್ಪುದೆ ಫಲಂ ಧರ್ಮಾತ್ಮಜಂ[3]ಗಾರ್ಪಿನಿಂ[3] ।
ನಲೆ [4]ರಾ[4]ಗೋತ್ಸವಸಿದ್ಧಿ ಸಾರ್ವುದೆ ಫಲಂ ಶ್ರೀಹೇಚರಂಗಂತಱಿಂ
ಫಲಯೋಗಸ್ಥಿತಿ ನಾಯಕಾಭ್ಯುದಯಮೆಂಬಂಗಂ ಮಹಾಕಾವ್ಯದೊಳ್ ॥ ೨

ಯಮದಂಡಾಶನಿಪಾತದೊಂದು ಸವಿಯಂ ಶ್ರೀಸಿಂಹಸೇನಪ್ರತಾ
ಪಮನುಗ್ರಾಜಿಯೊಳುಂಡು ಕಂಡು ಬಟಿಯಂ ಪ್ರಾಣೈಕಮಾತ್ರಪ್ರನಾ ।
ದಮಹಾಲಾಭದಿ[5]ನಾಜ್ಞೆಯಿಂದಲಳೆಯಂ[5] ತತ್ಕೀರ್ತಿ ಪೂಮಾಲೆ ತೇ
ಜಮೆ ಚೂಡಾಮಣಿಯಾಗೆ ಬಾಬ್ಪರಿಳೆಯೊಳ್ ವೀರಾರಿಭೂಪಾಲಕರ್ ॥ ೩

(ಅನಂತನಾಥಪುರಾಣಂ, ೨-೮.)

[6]ಪೊಡರ್ದಡೆ[6] ಕಪ್ಪಮಂ ಕುಡದ ಮಂಡಳಿಕರ್ ಮನೆಮಕ್ಕಳಂದದಿಂ
ಪಡೆದಬಳಾಜನಂ ನೆಱೆದ ಮಕ್ಕಳೆ ಮಕ್ಕಳನೀಳ್ವುದೊಂದು ದಾಂ ।
ಗುಡಿವಿಡಿದೀವ ಜಾಗವೆಡಱೋಡುವಿನಂ ಪೊರೆದಾ ನೆಗಪ್ತೆಯೊಳ್
ತೊಡರ್ದಿರೆ ವೃದ್ಧರಾಜ್ಯಮುಮದೇನೆಸೆದತ್ತೊ ನಭಶ್ಚರೇಂದ್ರನಾ ॥ ೪

ಉಂಟು ಭುಜಾಬಲಂ ಪಿರಿದು ಚಾಗದ ಸಂಪದಮೇಟುವಾರ್ಧಿಯಂ
ದಾಂಟಿದುದಾತ್ತ ಕೀರ್ತಿ ಕಳೆಯೊಳ್ ಬಿನದಂ ತನಗೆಂದು ನಿಚ್ಚಲುಂ ।
ಕಂಟಕಿತಾಂಗಮಾದಪುದು ಪಂಡಿತಮಂಡಳಿ ರಾಜ್ಯಮಂತೆ ನಿ
ಷ್ಕಂಟಕಮೆಂಬಿನಂ ಪಡೆದನಚ್ಚರಿಯಂ ನೃಪನೀತನೊಚ್ಚತಂ ॥ ೫

---

[1] ಸಿದ್ಧಾಂತರು ಮೆಚ್ಚ (ಕ). [2] ತಳ್ತೊಪ್ಪೆ (ಕ). [3] ಗೊಪ್ಪಿನಿಂ (ಖ). [4] ನಾ (ಕ). [5] ನಾತನಾಜ್ಞೆತಿಳಕಂ, (ಅ). [6] ತೊಡರ್ದಿರೆ (ಖ.ಬ).

ಸಿರಿ ವಕ್ಷೋರಂಗದೊಳ್ ನರ್ತಿಸೆ ವಿಜಯಭುಜಾದಂಡದೊಳ್ ವಿಕ್ರಮಶ್ರೀ
ಯಿರೆ ವಕ್ತ್ರಾಂಭೋಜದೊಳ್ ವಾಗ್ವನಿತೆ ನೆಲಸೆ ತನ್ನಾಜ್ಞೆ ವಿದ್ವಿಷ್ಟಭೂಪಾ ।
ಲರ ಕೋಟೀರಂಗಳೊಳ್ ನರ್ತಿಸೆ ವಿಶದಯಶಂ ಪೆರ್ಚೆ ವಾರಾಶಿಯೇಱುಂ
ಬರವಾಳ್ದಂ ವಿಶ್ವಧಾತ್ರೀತಳಮನತಿಬಳಂ ರಾಯರೊಳ್ ಸೋಯಿದೇವಂ ॥ ೬

(ಮುಂಡ್ಯ, ೭೭ ; ನಾಗಮಂಗಲ, ೨೫.)

ಅದಟಿನಳುರ್ಕೆಯಂ ಮೆಱೆವ ಚೋಳನ ಪಂದಲೆಯೊಂದೆ ಕೈಗೆ ವಂ
ದುದೆ ಕರಿಕೋಟಿ ಬಂದುದು ಹಯಾವಳಿ ಬಂದುದು ರತ್ನರಾಶಿ ಬಂ ।
ದುದು ಬಗೆದಂತೆ ಚೇರಮನ ಚೋಳನ ಪಾಂಡ್ಯನ ನಾಡೆ ಕೈಗೆ ವಂ
ದುದು ಕಡಿತಕ್ಕಮುಂಡಿಗೆಗವೋಲೆಗವಿಸಾ ಶುಭತುಂಗದೇವನಾ ॥ ೭

ಧಾರಾಮದದಿಂದೆ ನೆಲಂ
ಬೈರಗಿಬೀಟ್ಪಂದದಿಂದೆ ಬಿಡುತಪ್ಪ ಮಹಾ ।
ವಾರಣಘಟೆಯಿಂ ನಿಚ್ಚಂ
ಕಾರಂ ಕೈಕೊಂಡು ಮೆಱೆವುದಾತನ ರಾಜ್ಯಂ ॥ ೮

ಬಡಗಣ ತುರಂಗಮಂಗಳೆ
ನಡುಪಟ್ಟೆ ನೆಗಪ್ಪೆ ವಡೆಯೆ ಕಪ್ಪೆಗಳೆ ಪೊದ ।
ಪ್ಪೊಡಮೆಗಳ ಸಮೆದ ಮಾಣ್ಕ
ದುಡಿಗೆಗಳೆ ಸಮಸ್ತಮಿನಿತುಮಾತನ ಮನೆಯೊಳ್ ॥ ? ೯

ಅರುಣಸರೋರುಹದಲರಂ
ಮುಱಿಮುಱಿದೀಡಾಡುವಂತೆ ನಟಿಯಿಸಿ ಮೊದಲೊಳ್ ।
ಕರವುರಿದೆನೆ ಕರಮವು ಸಾ
ಸಿರಮೆನೆ [1]ರಚಿಯಿಸಿ[1]ದಳಾಕೆಯೆಡಕಂ ಬಲಕಂ ॥ ೧೦

(ಲೀಲಾವತಿ, ೪–೧೪೧.)

ಜತಿ ತೊಡರೆ ರಣಿತ ನೂಪುರ
ಹತಿಗಳ ಬಟಿವಿಡಿದು ವಾದಕಂ ಬಾಜಿಸಿದಂ ।
[2]ತತವಾವುಜನಾಗಸಗತಿ
ತತಿಯಿಂ ನೃತ್ಯಾನುಗಂ[2]ಬೊಲಾಗಿರೆ [3]ವಾದ್ಯಂ[3] ॥ ೧೧

(ಲೀಲಾವತಿ, ೪–೧೪೨.)

---

[1] ರೇಚಿಸಿ (ಅ). [2] ಧೃತದಾವುಜ್ಜಮದಾರಸವತಿಯುಂ ನೃತ್ಯಾಂಗಮೆಂ (ಅ).
[3] ರಾಜ್ಯಂ (ಕ.ಖ.ಬ).

ಕರಣದೊಳೊಂದುಂ ಭಾರತಿ
ಕರಣಮಿದಂ ಮೆಚ್ಚರೆನಿಪುದಿಲ್ಲೆನೆ ಮೆಲ್ಪಂ ।
ಪರಿವಿಡಿಯಿಂ [1]ಪರಿಶೋಭಿಸಿ[1]
ಪರಿವಿಡಿಯಿಂದಂಗ[2]ಹಾರ[2]ಮಂ ಪ್ರೊನಯಿಸಿದಳ್ ॥ ೧೨
(ಲೀಲಾವತಿ, ೪–೧೪೩.)

ಒತ್ತಿದ ಶೃಂಗಾರದ ರಸ
ದೊತ್ತೆನೆ ಕೈಗೆಯ್ದ ನರಸಕವಿತೆಯ ನೆಲೆಯಂ ।
ಪೆತ್ತು[3]ಜತಿವೆತ್ತು[3] ಶೋಭಿಸೆ
ವೃತ್ತಸ್ತನೆ ಲಾಸ್ಯಲೀಲೆಯಿಂ ಶೋಭಿಸಿದಳ್ ॥ ೧೩
(ಲೀಲಾವತಿ, ೪–೧೪೪.)

ಚರಣಾಗ್ರಂ ಜಾನುವಂ ಜಕ್ಕುಲಿ[4]ಸಡರೆ[4] ನಿತಂಬಕ್ಕೆ ಪಕ್ಕಾ[5]ಗಿ[5] ಮಧ್ಯಂ
ಮುರಿವನ್ನಂ ದಕ್ಷಿಣಕ್ಕವ್ವಳಿಸಿದ ಕುಚದೊಳ್ ಕೈದ[6]ಳಿರ್ಕೂ[6]ಡೆ ವಾಮಂ ।
ಕರಕಂಜಂ[7] ಕಾಂತಿಯಂ ತಳ್ತಳುರ್ದು ಮಿಳಿರೆ[7] ವಕ್ತ್ರಾಂಬುಜಂ ಕೊಂಕಿ ಚೆಲ್ವಾ
ಗಿರೆ ಕಾಮೋತ್ಪತ್ತಿಯಂ ಕಾಮಿಸಿ ತರುಣಿ ತಪಂಗೆಯ್ವವೋಲ್ ಕಣ್ಗೆವಂದಳ್ ॥ ೧೪
(ಲೀಲಾವತಿ, ೪–೧೪೫.)

ಬಲಗಾಲ್ ಸ್ಥೈತೊಪ್ಪೆ ವಾಮಂ ಕೆಲಕೆ ತೊಲಗೆ ವಕ್ಷಸ್ಥಿತಂ ಮುಟ್ಟಿ ಚೆಲ್ವಾ
ಗೆ ಲತಾಖ್ಯಂ ಕೈ ಕರಂ ಕಣ್ಮೊಳೆ ನೆಗೆಯೆ ಕಚಂ ಕೊಂಕೆ ಮಧ್ಯಂ ದಳತ್ಕು ।
ಟ್ಮಲನೇತ್ರಂ ಬೀಱಿ ಬೆಳ್ಪಂ ಪ್ರಹಸಿತವದನಂ ಶೋಭೆಯಂ ಸೂಸೆ ಲೀಲಾ
ಲಲಿತಾಸ್ಯಾಕ್ರಾಂತದಿಂ ನಿಂದಮರನರ ಸಭಾಚಿತ್ತದೊಳ್ ಕಾಂತೆ ನಿಂದಳ್ ॥ ೧೫
(ಲೀಲಾವತಿ, ೪–೧೪೬.)

ವಿವಿಧಾಲಂಕೃತಿ ಕೂಡೆ ಕೊಂಡ ಗಮಕಂ ಮಂಥಾದ್ರಿಯಂ ಮುಂದೆ ವ
ರ್ಣವಿಭಾಗಂ ನವಣಾಗೆ ರಾಗರಮಣೀಯಚ್ಛಾಯೆಯುಂ ಕೂಡೆ ನೀ
ಡುವ ವೀಣಾಕಲಕೋಮಳಕ್ವಣಿತದೊಳ್ ತಳ್ಪೊಯ್ದು ಕೈಗಣ್ಮೆ ಪೊ
ಣ್ಮುವ ಗೀತಕ್ಕೆ ಮೃಗಾಕ್ಷಿಯಾಡಿ ಮೆಱೆದಳ್ ಗೀತಾನುಗಪ್ರೌಢಿಯಂ ॥ ೧೬
(ಲೀಲಾವತಿ, ೪–೧೪೭.)

ಕಚಧಾರಾಲಸಗಾಮಿನೀಪರಿವೃತಂ ಗಂಗಾತರಂಗೋಪಮಾ
ನ ಚಲಚ್ಚಾಮರವಾತಪೀತನಿಜಘರ್ಮಾಂಭಃಕಣಂ ದ್ರೌಪದೀ ।

---

[1] ದಂ ತಾನೆನೆ (ಆ). [2] ರಾಗ (ಆ). [3] ಜಡಿಯುತ್ತೆ (ಆ). [4] ನೆ ಬರಿ (ಕ.ಖ.ಬ). [5] ಗೆ (ಖ.ಬ). [6] ಳಂಕೂ (ಕ.ಖ.ಬ). [7] ಕಾಂಚಿಯಿಂದಳ್ಳಿಱುದು ನಿಮಿರೆ (ಕ.ಖ.ಬ).

ಕುಚಕುಂಭಾರ್ಪಿತಕುಂಕುಮದ್ರವವಿಲೇಪೋರಃಸ್ಥಲಂ ದಾಂಟೆ ಕೀ
ರ್ತಿಚತುರ್ವಾರ್ಧಿಯ[1]ನಿ[1]ರ್ದನಂದು ಸುಖದಿಂ ವಿದ್ವಿಷ್ಟವಿದ್ರಾವಣಂ ॥ ೧೭
(ಪಂಪಭಾರತಂ, ೩–೮೫.)

ತಾಳನಿವರ್ತನಂ ಲಯದ ಮೆಯ್ಸಿರಿಯೊಳ್ ನಿಲೆ ಬೈಕೆದೋಱುವಂ
ತಾಳತಿಗೆಯ್ವ ನಾದದೊದವುಂ ಶ್ರುತಿಯುಂ ಪರದಲ್ಲ ತೋಱೆ ಮೇಣ್ ।
ಚಾಳಿಪ ರಾಗಮಂ ನಿಲಿಸಿ ಗೀತದ ಭಾವದೊಳಂಗಸಂಭ್ರಮಂ
ಮೇಳಿಸಿ ಲೀಲೆಯಿಂ ಮುಖರಿಗಾಣತಿ ದೇವನ ಮುಂದೆ ಪಾಡಿದಳ್ ॥ ೧೮

ತೋಳ ತೊಡರ್ಪು ಕಣ್ಗೆಸೆಯೆ ನಾರ್ಚಿದ ವಕ್ತ್ರಸರೋಜವೋಜೆಯೊಳ್
ಮೇಳಿಸಿ ಪುಂಖಶುದ್ಧಮೆನೆ ಭೋಂಕನೆ ಪುಂಖಿಸಿ ಮಧ್ಯಮಾದಿಯಂ ।
ಚಾಳಿಸಿ ತುಂಬಿಯಿಂಚರದ ಮೊತ್ತಮನೆತ್ತುವವೋಲ್ ಮೃದುಸ್ವರಂ
ಪಾಳಿಯಿನೊಪ್ಪುವಂತೆಸೆಯೆ ಬಾಱಿಸಿದಳ್ ಸುವಿಲಾಸೆ [2]ವೀಣೆಯಂ[2] ॥ ೧೯

ಕೆಲದೊಳ್ ಕೆನ್ನೇತವಂಶಂವೆರಸಿ ಪಿಡಿವ ಕಿಱ್ಪಾಳಗೋವಂ ತುರುಷ್ಕಂ
ಬಲಮುಖ್ಯಾಧ್ಯಕ್ಷದಿಂದಂ ನಡೆವ ಪಡೆವಳಂ ಚೋಟನುಚ್ಚಂಡಬಾಹಾ ।
ಬಲದಿಂ ಮೆಯ್ದೋರ್ಪ ಮಾವಂತರ ಬಟಿವೆಸರಾಳ್ಗಳನಿನ್ನಾವ ರಾಯರ್
ತಲೆದೋರ್ಪರ್ ನಾರಸಿಂಹಂಗಮರಸಮರಸಿಂಹಂಗೆ ವಿಕ್ರಾಂತದಿಂದಂ ॥ ೨೦

ನೀತಿಯೆ ರೂಪುಗೊಂಡ ತೆಱದಿಂ ನೆಲಸಿರ್ಪ ಮಹಾಪ್ರಧಾನರಿಂ
ಮಾತಿನ ಬಲ್ಮೆಯಂ ಸಭೆಗೆ ರಂಜಿಪ ವಾಗ್ಮಿಗಳಿಂ ಪ್ರಬಂಧದಿಂ ।
ಪ್ರೀತಿಯನೀವ ಸತ್ಕವಿಗಳಿಂ ಗಣಿಕಾಗಣದಿಂ ಪ್ರಭೂತಮಾಂ
ಧಾತನ ರಾಜ್ಯದಂತಿಳೆಗೆ ದಕ್ಷಿಣಚಕ್ರಿಯ ರಾಜ್ಯಮೊಪ್ಪುಗುಂ ॥ ೨೧

ಭಾವರಸಂಗಳಂ ಮೆಱೆವ ಸ್ತ[3]ತ್ಕವಿ[3]ಸಂಕುಲ ಗೋಷ್ಠಿಯಲ್ಲಿ ರ
ತ್ನಾವಳಿ [4]ಸರ್ವರಾಗರಸ[4]ಸಂಭೃತಗಾಯಕಸಂಘದಲ್ಲಿ ರ ।
ತ್ನಾವಳಿ ವಾಜಿವಾರಣವಿನೋದವಿಲಾಸವಿಶೇಷದಲ್ಲಿ ರ
ತ್ನಾವಳಿ ವತ್ಸಭೂಪತಿಗದೇನೆಸೆದಿರ್ದುದೊ ರಾಜ್ಯಸಂಪದಂ ॥ ೨೨

ಆ ಸಕಲಪ್ರಧಾನಜನಮುಂ ಪೆಸರೋಲಗಕಾರ್ತಿಯರ್ಕಳುಂ
ಕೂನುಗಳುಂ ಮಹಾಕವಿಗಳೇವೆನ[5]ಗೇ[5]ಳ್ವ ಸರಸ್ವತೀಗಣೇ ।
ಶಾಸಮೆ ಬೀಡಿನೊಳ್ ಮಗುಚೆ ಮಜ್ಜನ ಭೋಜನ ತೃಷ್ಣೆ ರಾಜನಾ
ದೇಶವಿಳಾಸಮಂ ಪಡೆದು ನಿಂದುದು ದಕ್ಷಿಣಚಕ್ರವರ್ತಿಯಾ ॥ ? ೨೩

---

[1] ಲ (ಬ). [2] ವಾಸಮಂ (ಬ). [3] ತ್ಕುಲ (ಕ). [4] ಯಪ್ಪರಾವಗವ (ಬ). [5] ರೇ (ಕ).

ಬಾರಿಸಿ ಚಾಮರಾದಿಗಳನಿಕ್ಕಿದ ಗದ್ದುಗೆಯೊಳ್ ಮಹಾಪ್ರತೀ
ಹಾರರ ಪೇಟ್ಕೆಯಿಂದೆಳಸಿ ಮತ್ತ[1]ವರಂ[1] ಪೆಸಗೊಂಡು ಪೋಗವೇ ।
ಪ್ಪಾರವಕೇಳ್ವ ಮನ್ನೆಯರ ಮಂಡಳಿಕರ್ಕಳ ಭೂಷಣಾಂಶು ವಿ
ಸ್ತಾರದಿನೆತ್ತಲುಂ ಪರಿವಿನಂ ಪರೆಗುಂ ನೃಪಧೀರನೋಲಗಂ ॥ ೨೪

[2]ನಿ[2]ನಗೆ ಶುಭಮೆಂದ ವಂದಿಯ
ಮನೆಯಂಗಣದಲ್ಲಿ ಪಣ್ತು ಪರ್ವಿದ ಮುಂದಾ ।
ರ ನಮೇರು ಪಾರಿಜಾತದ
ಬನದೊಳ್ [3]ಸಿರಿ ಮೆಱೆವಳಲ್ಲಿ[3] ವನಕೇಳಿಗಳಂ ॥ ೨೫

(ಯಶೋಧರಚರಿತೆ.

ಓರಂತೆ ಮೆಚ್ಚಿದಂ ಕೃತಿ
ಸಾರಂ ನೃಪವಿಜಯರಾಜ್ಯಪ್ರಳಕಂ ಶುಭದಾ ।
ಕಾರಂ ಹೊಯ್ಸಳವಂಶೋ
ದ್ಧಾರಂ ಭಲದಂಕರಾಮ ಸೋಮನೃಪಾಲಂ ॥ ೨೬

ಇದು ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧ ಸಾರೋದ್ಧಾರಮುಮ
ತ್ಪಾದಶ ಸ್ಥಳವರ್ಣನ ಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾವಕರ್ಣನ ಕೌತುಕೋ
ತ್ಪಾದಿತಮುಂ ಯಾದವ ಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ನಾಯಕಾಭ್ಯುದಯವರ್ಣನಂ ಪಂಚಮಾಶ್ವಾಸಂ ಸಂಪೂರ್ಣಂ.

[1] ಮವರ್ (ಕ). [2] ತ (ಕ.ಖ.ಬ). [3] ಚಿರ ಮೆಱೆವರಲ್ಲಿ (ಕ.ಖ.ಬ).

ವಿವಾಹವರ್ಣನಂ

ಪಸೆ ಪಂದಲ್ ದಟ್ಟಿ ಜಾಗಂ ಜಗಲಿ ಬಿಗಿದ ಭೃಂಗಾರಿ ಮೇಲ್ಕಟ್ಟು ಚಿತ್ರಂ
ಪೊಸಕುಂಭಂ ಶಂಕು ನೊಲ್ಪೆರಣೆ ತಳಿರ್ಗಳಸಂ ಸರ್ವಧಾನ್ಯಂ ಮೊಸರ್ ಭ ।
ಕ್ಷ್ಯಸಹಸ್ರಂ ಲಾಜೆ ಹೋಮಂ ಪಱು ಕಡೆ ಗುಡಿ ಪೂದೋರಣಂ ಬಾಸಿಗಂ ಸೇ
ಸೆ ಸಮಸ್ತಸ್ತ್ರೀಜನಂ ಕನ್ನಡಿಜವಳಿಗಳುದ್ವಾಹದೊಳ್ ವರ್ಣನೀಯಂ ॥ ೧

ಅಮರೇಂದ್ರಂಗಮರೀಮಹತ್ತರಿಯರಿಂ [1]ಪೇೞ್ವಲ್ಲಿ[1] ವೈವಾಹಿಕೋ
ದ್ಯಮಮಂ ತಾಂ ಮಯವಿಶ್ವಕರ್ಮಸಹಿತಂ ದೇವೇಶನಿಂದ್ರಾಣಿ ದಿ ।
ವ್ಯಮನೋಹಾರಿಣಿಯರ್ ಸಮಂತು ಬರೆ ಬಂದೊಡ್ಡೈಸಿದಂ ನೇತ್ರಹಾ
[2]ರಮನಃ[2]ಕೌತುಕಮಪ್ಪಿನಂ ಜಗತಿ ಜಾತೋದ್ವಾಹಮಂ ಗೇಹಮಂ ॥ ೨
(ಅನಂತನಾಥಪುರಾಣಂ, ೬–೩೭.)

ಕಡುಚೆಲ್ವಿನ ಮಂಟಪಮಂ
ನಡೆ ನೋಡಲ್ ಬಂದು ಬಾಗಿಲೊಳ್ ಪುತ್ಥಳಿಯಂ ।
ಪಡಿಯ[3]ಱತಿಯರೆಂ[3]ದರೆಬರ್
ನುಡಿಯಿಸೆ ನುಡಿಯದೊಡೆ ನಾಣ್ಚಿ [4]ನೆ[4]ಲನಂ ನೋಲ್ಪರ್ ॥ ೩
(ಅನಂತನಾಥಪುರಾಣಂ, ೬–೪೨.)

ಎಱಕೆ ಮರಲ್ದು ಗೋಣ್ಮುರಿದು ಚಂಚುಪುಟಂ ತೆಱೆದಳ್ಳೆವಾಱೆ ಬಂ
ದೆಱಗುವುದಲ್ಲ [5]ಚಂಚುಲೊವೆಯೊಳ್ ಕಡೆಯಿಕ್ಕಿದ ಪಚ್ಚೆ[5]ಸಾರಮಂ ।
ಕಿಱುಮಿಡಿಗೆತ್ತು [6]ಸಾರಿ ಕಿಟಕಾರಿಯ[6] ಮಾಣಿಕವಚ್ಚೆಯಂ ಪಿಕಂ
ಕಿಱುದಳಿರ್ಗೆತ್ತು ಲಂಬಳದ ಮುತ್ತುಗಳಂ ಮಱೆಗೆತ್ತು ಚಾತಕಂ ॥ ೪
(ಅನಂತನಾಥಪುರಾಣಂ, ೬–೪೩.)

ನೀಲಾಬದ್ಧಸ್ಥಳೀಕಂ ಮರಕತಜಗತೀಮಂಡನಂ ಸ್ಫಾಟಿಕಸ್ತಂ
ಭಾಲಂಬಂ ಚಾರುಚಾಮೀಕರಮಯರುಚಿಮದ್ಭಿತ್ತಿ ಮೈಡೂರ್ಯ ನಿರ್ಯೂ ।

---

[1] ಪೇೞ್ದಟ್ಟಿ (ಅ), ಕೇೞ್ವಲ್ಲಿ (ಖ.ಬ). [2] ರಮನುಂ (ಬ). [3] ರರೆಂದ (ಖ.ಬ).
[4] ಕೆ (ಕ.ಬ). [5] ಚಂಚುಗಳ ಲೊವೆಗಳೊಳ್‌ಕೂಡೆಯಿಕ್ಕಿ (ಅ). [6] ಸಾರಿಕೆಟಕಾರಿಯ (ಅ).

ಹಾಲೀಢಂ ವ್ಯಕ್ತಮುಕ್ತಾಘಟಿತಪಟಳಸಂಪರ್ಕಕರ್ಕೀತನದ್ವಾ
ರಾಲಂಕಾರಂಗಳಿಂ ಕಣ್ಗೆಸೆದುದನುಪಮಂ ತತ್ಕೃತೋದ್ವಾಹಗೇಹಂ ॥ ೫
(ಚಂದ್ರಪ್ರಭಪುರಾಣಂ, ೬–೪೪.)

ಅದಱ ನವರತ್ನಕೂಟಾ
ಗ್ರದಿನುಣ್ಮುವ ಬೆರಕೆವೆಳಗು ತುಂಗಧ್ವಜಚಿ ।
ಹ್ನದ ಕಡೆಗಡೆಯೊಳ್ ಕಣ್ಗೆಸೆ
ದುದು ಸಾರಾವಳಿಯ ವಿಳಸವಿಕ್ಕಿದ ತೆಱದಿಂ ॥ ೬
(ಚಂದ್ರಪ್ರಭಪುರಾಣಂ, ೬–೪೫.)

ದಿಟ್ಟಿಗೆವರೆ ಬಂಧವಿಧಂ
ಕಟ್ಟಿದ ಪಲತೆಱದ ಮಣಿಯ ನೂಸಕದ ನೆಲೆಲ್ ।
ಕುಟ್ಟಿಮತಲದೊಳ್ ಪೊಳೆದೆಡೆ
ಗೊಟ್ಟಿತ್ತಲ್ಲಲ್ಲಿ ಬಣ್ಣವುರಮಂ ತೀವಲ್ ॥ ೭
(ಚಂದ್ರಪ್ರಭಪುರಾಣಂ, ೬–೪೬.)

ಸುಟಿವೆಳವೆಂಡಿರ ಕಡೆಗ
ಣ್ಬಟಿಯಂ ಪಸರಿಸುವ ಬೆಳಗು ಬೆಳದಿಂಗಳ ಪೊಂ ।
ಪುಟಿಯೆಂದು ಸು[1]ರಿವುವ[1]ದಱೊಳ್
ಮಱೆಯಿಲ್ಲದೆಯುಂ ಪ್ರಣಾಳಶಶಿಕಾಂತಂಗಳ್ ॥ ೮
(ಚಂದ್ರಪ್ರಭಪುರಾಣಂ, ೬–೪೭.)

ಸಿರಿನದ ಮಾಲೆಯೆಂದೆಸೆವ ದಾಡಿಮಬೀಜಸಮಾಜವೆಂದು ಸೌಂ
ದರಬಿಸಕಾಂಡವೆಂದು ನಲವಿಂದಳಿಯುಂ ಗಿಳಿಯುಂ ಮರಾಳಮುಂ ।
ಪರಿಮರಿಯಾಡಿ ವಾಸಿಸದೆ ಪೀರದೆ [2]ಕಚ್ಚದೆ[2] ಮಾಣ್ದ ಪಚ್ಚೆಯೊ
ಳ್ಪರಲ ತೊಳಪ್ಪ ಮಾಣಿಕದ ಮುತ್ತಿನ ಲಂಬಣ[3]ಮಿಲ್ಲದೆಲ್ಲಿಯುಂ[3] ॥ ೯
(ಚಂದ್ರಪ್ರಭಪುರಾಣಂ, ೬–೪೮.)

ಅದಱ ವಿತಾನಚೀನರಸಚಿತ್ರಕದಂಬಕಮಿಂದ್ರನೀಲರ
ತ್ನದ ನೆಲಗಟ್ಟಿನೊಳ್ ಮೆಱೆದು ಮಾರ್ಪೊಳೆಯುತ್ತಿರೆ ಕಂಡು ಕುಂತಳಂ ।
ಕೆದಱಿ ಕುಚಂ ಕದಕ್ಕದಿಸೆ ಕೆತ್ತೆ ನಿತಂಬಮಿದೊಂದು ಧೂಳಿಚಿ
ತ್ರದ ಕಣಮೆಂದು ಮೆಯ್ಯಲಸೆ ಧಿಂಕಿಡುವರ್ ಕಡೆಯೊಳ್ ಲತಾಂಗಿಯರ್ ॥ ೧೦
(ಅನಂತನಾಥಪುರಾಣಂ, ೬–೪೪.)

---

[1] ಳಿವರ (ಕ.ಬ). [2] ನೀಱದೆ (ಅ). [3] ವೆತ್ತ ನೋಡ್ಪುದಂ (ಕ).

ಕಳಶದ ಮೇಲೆ ಕನ್ನಡಿ ತಗುಳ್ಚಿ ಕೆಲಂಬಿಡಿದಿರ್ದ ವೇದಿಕಾ
ವಿಳಸಿತ ಮಂಟಪಂ ಸ್ಫಟಿಕಭಿತ್ತಿಯೊಳಚ್ಚಱಿದಂತೆ ತೋಱೆ ಪೊಂ ।
ಗಳಸದ ಬಾಯ್ಗೆ ತಂದು ತಳರಂ ಮಣಿವೇದಿಕೆ[1]ಗೆತ್ತು ಭಿತ್ತಿಯಂ[1]
ಬಳಸೆ ಮಹತ್ತರಾಮರಿಯರಂ ನಗಿಪರ್ ಕೆಲರಲ್ಲಿ ಮುಗ್ಧೆಯರ್ ॥ ೧೧

(ಅನಂತನಾಥಪುರಾಣಂ, ೬–೪೫.)

ವಿವಹನದುತ್ಸವಕ್ಕೆ ನೆಲೆಯಾದುದಿದೆಂಬಿನಿತಲ್ತು ಕಾಮನು
ತ್ಸವಕೆ ವಸಂತನುತ್ಸವಕೆ ನಾಟಕದುತ್ಸವಕಾದು[2]ದಕ್ಕೆ[2] ನೋ ।
ಡುವೊಡೆನೆ ನಲ್ಲರೊಳ್ ನಲಿವ ಸಿಂಪಿಣಿಯಾಡುವ ನರ್ತಿಪೊಂದು ಚಿ
ತ್ರವಿಧದ ಚಿತ್ರಕಾಮಿನಿಯ[3]ರಿಂದೆ[3]ಸೆದಿರ್ದು[4]ದು[4] ತಜ್ಜನಾಶ್ರಯಂ ॥ ೧೨

(ಚಂದ್ರಪ್ರಭಪುರಾಣಂ, ೬–೪೯.)

ಮರಕತಸೋಪಾನಚತು
ಷ್ಕರಾಜಿತಂ ಕೋಣಶೋಣ[5]ರುಚಿತಳಿತ[5]ಮನೋ ।
ಹರಮುತ್ತುಂಗಂ ಭಾಸುರ
ಹಿರಣ್ಮಯಂ ವಿಪುಳವೇದಿಯೆಸೆದತ್ತಾದಂ ॥ ೧೩

(ಚಂದ್ರಪ್ರಭಪುರಾಣಂ, ೬–೫೦.)

ಪಳುಕಿನ ಭೃಂಗಾರದ ಬೆ
ಳ್ಪೆಳಗುಂ ಜಾಗಂಗಳೆಸೆವ ಪಸುರ್ವೆಳಗುಂ ಪ್ರ ।
ಜ್ವಳಿಪ ಮಣಿಸ್ತಂಭದ ಕೆಂ
ಬೆಳಗುಂ ಪಸರಿಪುವು ಸುರಶರಾಸನ [6]ಶತಮುಂ[6] ॥ ೧೪

(ಚಂದ್ರಪ್ರಭಪುರಾಣಂ, ೬–೫೧.)

ಒದವಿದ ಚೆಲ್ವು ನೂರ್ಮಡಿಸೆ ನೂರ್ಮಡಿಕುಂ ಹರಿತಾಶ್ಮಭಿತ್ತಿ ಜಾ
[7]ಳ[7]ದ ಪಸುರಿಂದೆ ಜಾಗದ ಪಸುರ್ಪುಪಹಾರಮನೋಹರಪ್ರಸೂ ।
ನದ ಕೆಂಡು[8]ವೆಳ್ಪಿನಿಂದೆ ಕಡೆಯಿಕ್ಕಿದ ಮುತ್ತಿನ ಬೆಳ್ಪು ರತ್ನದೀ
ಪದ ಬೆಳಗಿಂದೆ ಮಾಣಿಕದ ಕಂಬದ ಕೆಂಬೆಳಗಾ ನಿವಾಸದೊಳ್ ॥ ೧೫

(ಜಗನ್ನಾಥವಿಜಯಂ, ೧೦–೯೪.)

ಅನಿಮಿಷವಧು ಕತ್ತುರಿಗದ
ಡಿನ ಚಳಯಂಗೊಟ್ಟಳಲ್ಲಿ ಸೆಳ್ಳುಗುರ್ಗಳ ತೆ ।

---

[1] ಗಿತ್ತುಥಕ್ತಿಯಂ (ಖ.ಬ). [2] ದಿಚ್ಚಿ (ಖ.ಬ). [3] ರೇನೆ (ಕ.ಬ). [4] ದೊ (ಖ.ಬ).
[5] ಮಣಿಕಲಶ (ಅ). [6] ತತಿಯೋರ್ (ಖ.ಬ). [7] ಗ (ಬ). [8] ಡೆ (ಬ).

ಳ್ಳನೆ ತಿಳಿದ ಕಾಂತಿ ಕುನುಮಿನು
ವಿನೆಗಂ ಕಡೆಗಣ್ಣ ಕಾಂತಿ ಧವಳಿಸುವಿನೆಗಂ ॥ ೧೬
(ಅನಂತನಾಥಪುರಾಣಂ, ೬–೪೬.)

[1]ತಾರಗೆಗಳ ತತ್ತಿಗಳಂ[1]
ಕಾರಿರುಳೊಳ್ ಕಱುವ ಗಗನಲಕ್ಷ್ಮಿವೊಲೊರ್ವಳ್ !
ಸೌ[2]ರಾಂಗನೆ[2] ಹರಿನೀಲದ
ಕೇರೊಳ್ ಚಂದನದ ಬಿಂದುಮಾಲೆಯನಿಟ್ಟಳ್ ॥ ೧೭
(ಅನಂತನಾಥಪುರಾಣಂ, ೬–೪೭.)

ಮಂಗಳಕೇತುವಿರಾಜಿತ
ಮಂಗೀಕೃತನೀಲಭಾನು ತಮಸಂ ಪರಿಷ ।
ತ್ಸಂಗತಬುಧಗುರುಕವಿರಾ
ಜಂ [3]ಗದಿತ ನವಗ್ರಹಂ ತದು[3]ದ್ವಾಹಗೃಹಂ ॥ ೧೮
(ಅನಂತನಾಥಪುರಾಣಂ, ೬–೪೮.)

ಜಾಗದ ನೆಲೆವಡಲಗೆಗಳ
ಜಾಗಂಗಳ ಪಸುರ್ಗಳೆಸೆಯೆ ರತ್ನದ ಕೇರ್ಗಳ್ ।
ಜಾಗಂಬೊಯ್ದಂತಿರೆ ಪರ
ಭಾಗಂಬಡೆದುವು ವಿವಾಹಗೇಹಾಂತರದೊಳ್ ॥ * ೧೯
(ಆದಿಪುರಾಣಂ, ೪–೩೧.)

ನುಡಿವ ನಡೆನೋಡುವಾಡುವ
ಪೊಡಮಡುವಮರ್ದಪ್ಪಿಕೊಳ್ವ ತಮ್ಮಿನಿಯರ ಕಾ ।
ಲ್ವಿಡಿವಂದದ ಚಿತ್ರದ ಪೆ
ಣ್ಬಡೆಯಿಂ ಸ್ತ್ರೀರಾಜ್ಯದಂದದಿಂ ಕರಮೆಸೆಗುಂ ॥ ೨೦
(ಆದಿಪುರಾಣಂ, ೪–೩೨.)

ಬೆಳಗುವ ಮಂಗಳದೀಪಾ
ವಳಿಗಳ ಬೆಳಗತ್ತಲಿತ್ತಲಚ್ಚೊತ್ತಿದವೋಲ್ ।
ತಳತಳಿಸಿ ಬೆಳಗೆ ಬೆಳಗನೆ
ಮೊಳೆತಂತೊಪ್ಪಿದುವು ತೊಳಪ ರನ್ನದ [4]ಕೇರ್ಗಳ್[4] ॥ ೨೧
(ಆದಿಪುರಾಣಂ, ೪–೩೪.)

---

[1] ತಾರಸಿಗಳ ಪಂಕ್ತಿಗಳಂ (ಕ). [2] ರಂಗದ (ಬ). [3] ಗತಿನವಗ್ರಹಪರೀತಮು (ಅ), ಗಧಿಕ... ... (ಕ). * ಈ ಪದ್ಯ (ಕ) ಪ್ರತಿಯಲ್ಲಿಲ್ಲ. [4] ಬೇರ್ಗಳ್ (ಕ), ಸೂಡರ್ಗಳ್ (ಖ.ಬ).

[1]ತೊಟ್ಟಿಯ ಸುತ್ತುವೆತ್ತ[1] ಪಸುರ್ವಂದಲ ಮುತ್ತಿನ ಮಂಟಪಂಗಳೊಳ್
ಕಟ್ಟಿದ ಪಚ್ಚೆದೋರಣದ ಬಾಜಿಪ ತೂರ್ಯದ ಸಂಭ್ರಮಂಗಳಿಂ ।
ತೊಟ್ಟೆಡೆಯಾಡುವೆಯ್ದೆ ಯರ ಪಾವನಮಂಗಳದೊಪ್ಪುಗೂ[2]ಡಿ[2] ನೇ
ರ್ಪಟ್ಟುದು ನೋಟಕರ್ಗೊಸಗೆಯುಬ್ಬಣಮಪ್ಪಿನಮಾ ವಿವಾಹದೊಳ್ ॥ ೨೨

ಮಿಸುಗುವ [3]ಚೌಕ[3]ದ ಮುತ್ತಿನ
ಪಸೆವಾಸಿ[4]ನ[4] ಪಟ್ಟವಳಿಯ ದುಗುಲದ ರುಚಿಗಳ್ ।
ಪಸರಿಸೆ ಪೊಂಜಗಲಿ ವಿರಾ
ಜಿಸುತಿರ್ದುದು ಗಾಂಗತುಂಗ ಪುಳಿನತ್ರೀವೋಲ್ ॥ ೨೩
(ಜಗನ್ನಾಥವಿಜಯಂ, ೧೦-೯೫.)

ಬಳ[5]ಸಿತು ಚಾಪ[5]ಲತಾವಳಿ
ಬಳಸಿದ ಬೆಳ್ಮುಗಿಲ [6]ಮುಱಿಯಿದೆನೆ[6] ಬಣ್ಣವುರಂ ।
[7]ಬಳಸಿರ್ದೊಡೆ[7] ಸೊಗಯಿಸಿದುದು
ಪಳುಕಿನ ಪಟ್ಟವಣೆ ವೇದಿಕಾಧಿತ್ಯಕದೊಳ್ ॥ ೨೪
(ಚಂದ್ರಪ್ರಭಪುರಾಣಂ, ೬-೫೨.)

[8]ಮಸೆವ[8]ಟ್ಟು ಜ್ವಲದರ್ಪಣಂ ಪೊಸದಳಿರ್ ಪೂಮಾಲೆ [9]ಮುಕ್ತಾ[9]ಕ್ಷತಂ
ಬಿಸನೂತ್ರಂ ಸಿತ[10]ದೂರ್ವೆ[10] ನೂತನ [11]ಯವ[11]ಗ್ಯೆವೇಯಕಂ ತನ್ನೊಳೊ ।
ಪ್ಪೆ ಸಮಸ್ತೌಷಧಿ ಪಂಚರತ್ನಸಹಿತಂ ಪೂತಾಂಬುಪೂರ್ಣಂ ವಿರಾ
ಜಿಸಿದತ್ತಂ[12]ದಭಿ[12]ಶಾತಕುಂಭಮಯಕುಂಭಂ ವೇದಿಕಾಮಧ್ಯದೊಳ್ ॥ ೨೫
(ಜಗನ್ನಾಥವಿಜಯಂ, ೧೦-೯೬.)

ನ್ಯಸ್ತಿ ಕಲಕ್ಷ್ಯಲಕ್ಷಮಣಿದರ್ಪಣಮಂಡಿತಮುಲ್ಲಸತ್ಪ್ರವಾ
ಳಸ್ತಬಕಂ ಪವಿತ್ರಬಿಸಸೂತ್ರವೃತಂ ನವ[13]ಯಷ್ಟಿ[13]ಚರ್ಚಿಕಾ ।
ಶಸ್ತಮುಪಾತ್ತದರ್ಭರಚನಂ ನಿಖಿಲೌಷಧಿ[14]ಪುಂಜಿತಂ ಪರಿ[14]
ನ್ಯಸ್ತಕಮೊಂದು ಪೂರ್ಣಕಲಶಂ ತಳೆದತ್ತತುಳಂ ವಿಳಾಸಮಂ ॥ ೨೬
(ಚಂದ್ರಪ್ರಭಪುರಾಣಂ, ೬-೫೩.)

---

[1] ಕಟ್ಟಿಯೆ ಸುಟ್ಟುವೆತ್ತ (ಕ), ತಟ್ಟೆಯ ಸುತ್ತುವೆತ್ತ (ಖ.ಬ). [2] ಡೆ (ಕ). [3] ಜೊಕ್ಕ (ಖ.ದ). [4] ದ (ಖ.ಬ). [5] ಭಿಚ್ಚಾಪ (ಅ). [6] ಮಱಿಯುವನೆ (ಬ). [7] ಗಳಬೆಳಗಿಂ (ಖ.ಬ). [8] ಪೆಸರ್ವು (ಖ), ಪೊಸವಾ (ಬ). [9] ಶೇಷಾ (ಅ). [10] ಧೌತ್ರ (ಖ.ಬ). [11] ವರ (ಖ.ಬ). [12] ಚಿತ (ಅ.ಕ). [13] ವಿಷ್ಟಿ (ಅ). [14] ಪುರಿತೋಪರಿ (ಖ.ಬ).

ಆ ವೇದೀಸ್ಥಳದೊಳ್ [1]ಹರಿದ್ವಸುವ ಪಾತ್ರಂಗಳ್ ಲಸದ್ಧೂರ್ವೆಯಿಂ[1]
ತೀವಿರ್ದುಂ ನವಚಂದ್ರಕಾಂತಚಷಕಂಗಳ್ ಚಂದನಕ್ಷೋದದಿಂ ।
ತೀವಿರ್ದುಂ ಮಣಿಶುಕ್ತಿಗಳ್ ಪರಿಮಳತ್ಕಾಶ್ಮೀರಸಾರಾಂಬುವಿಂ
ತೀವಿರ್ದುಂ ಬರೆದಿರ್ದಪ್ಪೋಲೆಸೆದುದಾದಂ ವರ್ಣಸಾಮಾನ್ಯದಿಂ ॥ ೨೭

(ಚಂದ್ರಪ್ರಭಪುರಾಣಂ, ೬–೫೪.)

ಯವೆ ದಿವ್ಯೌಷಧಿ ಪಾರಿಜಾತಕುಸುಮಂ ಸಿದ್ಧಾರ್ಥ[2]ಮಾ[2]ರ್ದ್ರಾಕ್ಷತಂ
ಧವಳಾಬ್ಜಂ ಸಿತದೂರ್ವೆ ನೂತನ ಫಲಂ ಗೋರೋಚನಂ ಲಾಜೆ ಬ ।
ಣ್ಣವುರಂ ರನ್ನದ ತಣ್ಣೊಡರ್ ಮಳಯಜಂ ಕಸ್ತೂರಿ ಕಾಶ್ಮೀರಮೆಂ
ಬಿವಱುಂ ತೆಕ್ಕನೆ ತೀವಿ ಪೊಂಬರಿಯಣಂ ಚೆಲ್ವಾದುದಾ ಸದ್ಮದೊಳ್ ॥ ೨೮

(ಜಗನ್ನಾಥವಿಜಯಂ, ೧೦–೯೮.)

ಘನ್ಯಣ್ಣಾಭ್ಯುಕ್ಷಣವರ್ಣಪೂರ[3]ಚರಣಂ[3] ಸ್ಥಾಲಾವಳೀಮಾರ್ಜನ
ಪ್ರಸವಾಬಂಧನ ದೀ[4]ಪ್ತಿ[4]ಕೋಜ್ಜ್ವಲನ ದರ್ಭಾಗರ್ಭಶಾಲ್ಯುಕ್ಷತ ।
ಪ್ರಸರಕ್ಷಾಲನ ತೋರಣಗ್ರಥನ ಮುಕ್ತಾಮಾಲಿಕಾಲಂಬನ
ವ್ಯಸನವ್ಯಗ್ರಕರಂ ಕರಂ ಸೊಗಯಿಸಿತ್ತಂತಲ್ಲಿ ಕಾಂತಾಜನಂ ॥ ೨೯

(ಚಂದ್ರಪ್ರಭಪುರಾಣಂ, ೬–೫೫.)

ಉಗುರ್ಗೊನೆ [5]ಸೋಂಕದಂತುಗುರಿಪ್ಪೋಜೆ[5] ತರಂತರದಿಂ ಶಿರೋಜಮಂ
ನೆಗಪುವ ಭಂಗಿ ಬಿತ್ತರದಿನೊತ್ತುವ ಕೆಂದಳದೊಂದು ಲಾಘವಂ ।
ಸೊಗಯಿಸುತಿರ್ಪಿನಂ ಸಹಜದಿವ್ಯಸುಗಂಧದ ಕೇಶಪಾಶಮಂ
ಮೃಗಮಧಗಂಧಿ ಪೂಸಿದಳುಪಾಸಿತ ಚಂಪಕಗಂಧತೈಲಮಂ ॥ ೩೦

(ಜಗನ್ನಾಥವಿಜಯಂ, ೧೦–೯೯.)

ಕಲಶಮನಾಗಳ್ ಘನಕುಚ
ಕಲಶದ ಮೇಲಿಟ್ಟು ನೃಪನ ಕೆಲದೊಳ್ ಕೆಲಬರ್ ।
ಕಲಶಸ್ತನೆಯರ್ ನಿಜ ಕುಚ
ಕಲಶದ ಚೆಲ್ವಿಂಗೆ ಕಲಶವಿಟ್ಟಂತಿರ್ದರ್ ॥ ೩೧

(ಕಾದಂಬರಿ, ಪೂ, ೬೨.)

ಬಿಗಿದುತ್ತುಂಗಕುಚಂ ಕದಕ್ಕದಿಸೆ ಹಾರಂ ತೂಗೆ ಕಣ್ಚಿಲ್ಲಮ
ಲ್ಲುಗೆ ಪೊನ್ನೋಲೆ ಕದಂಪನಪ್ಪಳಿಸೆ ಮಧ್ಯಂ ಬಳ್ಕೆ ಘರ್ಮಾಂಬು ಕೈ ।

---

[1] ಹರೀಂದ್ರನವಧಾನ್ಯಂಗಳ್ ಸಮಿದ್ಧರ್ಭಿಯಂ (ಕ), ಹರೀಂದ್ರ ಪದಮಂತ್ರಾಂಗಂಗಳೊಳ್ ದೂರ್ವೆಯಿಂ (ಖ.ಬ). [2] ಸಾ (ಖ.ಬ). [3] ಭರಣ (ಅ). [4] ಪ್ತ (ಖ.ಬ). [5] ಯಿಂದವೊಗರಿಸುಪ್ಪೋಜೆ (ಅ), ಸೋಂದೊಗುರಿಸುತೊಯ್ಯನೆ (ಕ).

ಮಿಗೆ [1]ಕ್ಕೈಕೊಂಡು[1] ಜಗಜ್ಜನ್ಯೈಕವಿಭುವಂ ಯೋಷಿಜ್ಜನಂ ಮಜ್ಜನಂ
ಬುಗಿಸಿತ್ತಂದು ಸುಹೃಜ್ಜನಂ ವಿರಚಿಪನ್ನಂ ಮಂಗಳಾಚಾರಮಂ ॥ ೩೨

(ಜಗನ್ನಾಥವಿಜಯಂ, ೧೦–೧೮೦.)

ಮನಮನಲರ್ಚುತಿರ್ಪ ನವಪುಷ್ಪಸಮೃದ್ಧಿ ವಸಂತಚೂತನಂ
ದನ[2]ಮಲರ್ವಂತು[2] ಮಾಂಗಳಿಕ[3]ಸಾರಧನಂ[3] [4]ಧವಳಪ್ರಸಾಧನಂ[4] ।
ತನಗಮರ್ದೊಪ್ಪೆ ತದ್ವಿಮಲಮೌಕ್ತಿಕಮಂಡನಕಾಂತಿಪೂರದಿಂ
ನೆನೆಯಿಸಿದಂ ಮುಕುಂದನಮೃತಾಬ್ಧಿಯೊಳಿಪ್ಪ ನಿಜಾದಿಮೂರ್ತಿಯಂ ॥ ೩೩

(ಜಗನ್ನಾಥವಿಜಯಂ, ೧೦–೧೦೧.)

ಆ ರಾಜಶೇಖರಂಗೇಂ
ರಾರಾಜಿಸಿದುದೊ ವಿಚಿತ್ರಮಣಿಗಣರಚನೋ ।
ದಾರಂ ಶೇಖರಮುಜ್ಜ್ವಳ
ಮೇರುಶಿಖರಿಶಿಖರರತ್ನದೊಳ್ ನರಿವರುತಂ ॥ ೩೪

(ಚಂದ್ರಪ್ರಭಪುರಾಣಂ, ೬–೫೬.)

ಅಗಲದೆ ನೆಲಸಿದ ಲಕ್ಷ್ಮಿಯ
ನಗಗಣ್ಗಳ ಬೆಳಗು ಬಳೆದು ಬೀಟುಲ್ವರಿದ ।
ತ್ತಗಲ್ದುರದೊಳೆಂಬ ತೆಱದಿಂ
ಸೊಗಯಿಸಿದುದು ವಿಮಲ ತರಳ ತಾರಾಹಾರಂ ॥ ೩೫

(ಚಂದ್ರಪ್ರಭಪುರಾಣಂ, ೬--೫೮.)

ಅರಿಬಳಜಳನಿಧಿ ಮಥನೋ
ದ್ಧುರಭುಜ[5]ಮಂದರ[5]ಮನೆಯ್ದೆ ಸುತ್ತಿದ ತಾರಾ ।
ಪರಿಕರಮೆನೆ ವಜ್ರಾವಳಿ
ವಿರಚಿತ ಕೇಯೂರವಳಯಮೇಂ ತೊಳಗಿದುದೋ ॥ ೩೬

(ಚಂದ್ರಪ್ರಭಪುರಾಣಂ, ೬–೫೯.)

ಕರಟನಿಘರ್ಷಣದೆ ಮದಂ
ಬೊರೆದಾನೆಯ ಕಯ್ಯನಳಿಗಳಾವರಿಸಿದವೋಲ್ ।
ಮರಕತಕಂಕಣಮೆಸೆದುವು
ತಿರು[6]ವೊಯ್ಲಿಂ[6] ಕರ್ಪುವೆತ್ತ ತತ್ಕರಯುಗದೊಳ್ ॥ ೩೭

(ಚಂದ್ರಪ್ರಭಪುರಾಣಂ, ೬–೬೦.)

---

[1] ಕಣ್ಗೊಂಡು (ಖ.ಬ). [2] ಮಮರ್ವಂತು (ಅ). [3] ಸಾಧನವಂ (ಕ), ಸಾಧನಮುಂ (ಬ). [4] ದಳವಪ್ಪಸಾಧನಂ (ಕ). [5] ಮಂಡನ (ಖ.ಬ). [6] ವಾಯಿಂ (ಖ.ಬ).

ಅರುಣತಳದ್ಯುತಿತತಿಯೆಡೆ
[1]ದೆಱಪುಗಳಿಂ[1]ದುಣ್ಮುವಂದದಿಂ ಕೆಂಬರಲುಂ ।
ಗುರದಿನೊಗೆವರುಣರುಚಿಮಂ
ಜರಿ ತಳರೇಱಿಸಿದುದೆಯ್ದೆ ಕರಶಾಖೆಗಳಂ ॥ ೩೮

(ಚಂದ್ರಪ್ರಭಪುರಾಣಂ, ೬–೬೧.)

ಪೂಗಣ್ ಕರ್ವುವಿಲ್ ಮಿಳಿರ್ವ ಮಿಾಂಗುಡಿ ಮಲ್ಲಿಗೆ ಮಾವು ತೆಂಬೆಲರ್
ಕೋಗಿಲೆ ಜೊನ್ನಮಿಂದೊಳಪ ನುಣ್ದನಿ ಸುಗ್ಗಿಯೆನಿಪ್ಪಿವೆಲ್ಲಮೊಂ ।
ದಾಗಿಯೆ ದರ್ಪಕಂಗೆ ಸಮನಿಪ್ಪ ಜಗಜ್ಜಯದರ್ಪಮಂ ಸಮಂ
ತಾಗಿಸಲೊಂದೆ ಸಾಲ್ಗುಮೆನಿಸಿತ್ತು ಕುಮಾರಕೃತಪ್ರಸಾಧನಂ ॥ ೩೯

(ಚಂದ್ರಪ್ರಭಪುರಾಣಂ, ೬–೬೩.)

ಮನಸಿಜನಂಗನಾಜನವಶೀಕರಣೌಷಧಮಂಗಜನ್ಮನಂ
ಬಿನ ಮದಶಕ್ತಿ ಮನ್ಮಥನ ಮೋಹನಯಂತ್ರಮಿದಪ್ಪುದಲ್ಲದೀ ।
ಯಿನಿತುವರಂ ಮನಂಗೊಳಿಸದೆಂಬಿನಮುಜ್ಜ್ವಳ ಮಂಗಳಪ್ರಸಾ
ಧನಮೆ ಮನೋಜರಾಜಜಯಸಾಧನಮಾಯ್ತು ಕೃತಪ್ರಸಾಧನಂ ॥ ೪೦

(ಆದಿಪುರಾಣಂ, ೪–೪೧.)

ಲಲನಾಭೂಷಣವೀಕ ಭೂಷಣಕೆ ಭೂಷಾಲಕ್ಷ್ಮಯಂ ಮಾಱ್ಪುದೀ
ಲಲಿತಾಕಾರೆಯ ರೂಢಿವೆತ್ತ ವಯವಂ ತತ್ಕಾರಣಂ ಭೂಷಣಂ ।
ಗಳಿನೀಕಾಂತೆಗೆ ಶೋಭೆಯಂ ಪಡೆವ ಮಾತಂತಿರ್ಕೆ ದಲ್ ಭೂಷ[2]ಣಂ
ಗಳಿ[2]ಗೀ ಕೋಮಲೆಯಂಗಸಂಗದೆ ನವಶ್ರೀಶೋಭೆಯಂ ಮಾಡುಗುಂ ॥ ೪೧

(ಜಗನ್ನಾಥವಿಜಯಂ, ೧೦-೧೦೩.)

ವಿಳಸಿತಮಪ್ಪದೊಂದು ಪೊಳೆಪಂ ತಳೆದಿರ್ದುದನಿಂದುಲೇಖೆಯಂ
ಪೊಳಪಿಡವೇಱ್ಪುದೇ ಸಹಜಸೌಂದರರೂಪೆಯನೀ ಮೃಣಾಳಕೋ ।
ಮಳೆಯನದೇನಲಂಕರಿಸವೇಱ್ಪುದೆ ಮಂಗಳವರ್ಧನಾರ್ಥಮಾ
ಲಲನೆ[3]ಗೆನುತ್ತಲಂಕರಿಸಿದರ್[3] ವಿವಿಧಾಭರಣಪ್ರತಾನದಿಂ ॥ ೪೨

(ಜಗನ್ನಾಥವಿಜಯಂ, ೧೦–೧೦೨.)

ಕರುವಿಟ್ಟಂ ಕಾಮದೇವಂ ರತಿಯತಿಶಯದಿಂ ಬಣ್ಣಮಿಟ್ಟಳ್ ಬಸಂತಂ
ಬರೆದಂ ಸರ್ವಾಂಗಮಂ ಕಣ್ದೆಱೆದನೊಸೆದು ಶೀತಾಂಶು ಚೈತ್ರಾನಿಳಂ ತೀ ।

---

[1] ಪೆರಳ್ಗಳಿಂ (ಖ.ಬ) [2] ಣಾವಳಿ (ಅ). [3] ಯನಿಂದಲಂಕರಿಸುವಂ (ಅ), ಗಿದೆಂದಲಂಕರಿಸಿದರ್ (ಖ).

ವಿರೆ ಜೀವಂಬೊಯ್ದನಂತಲ್ಲದೊಡೆ ಸೊಗಯಿಪೀ ರೂಪಮಿಾ ಬಣ್ಣಮಿಾ ಮೆ
ಯ್ಸಿರಿಯೀ ಕಣ್ಣೆಲ್ಲಮಿಾ ಭಾವಕಮೊಗೆಯದೆನಲ್ಕಾಂತೆ ಕಣ್ಗೆಡ್ಡಮಾದಳ್ ॥ ೪೩
(ಲೀಲಾವತಿ, ೩–೪೭.)

ಜಗಮಂ ಮಾಡಿದ ಪದ್ಮಜಂ ಪಡೆ[1]ದನಿಲ್ಲೀ[1] ಕಾಂತೆಯಿಂ ಮಾಡುವ
ಲ್ಲಿಗೆ [2]ಚಂದ್ರಂ[2] ಮಲಯಾನಿಳಂ ಮಲಯಜಂ ನೀರೇಜಮಿಮ್ಮಾವು ಮ ।
ಲ್ಲಿಗೆಯೆಂಬಿಂ[3]ತಿದನಟ್ಕಱಿಂದಮರ್ದಿನೊಳ್[4] ತಾನಟ್ಟಿಯಿಂ ತೊಯ್ದು[3] [4]ಮೆ
ಲ್ಲಗೆ[4] ನಂದಂಗಜನೆಂಬಜಂ ಪಡೆದನಿಂತೀ ಕಾಂತೆಗೀ ಕಾಂತಿಯಂ ॥ ೪೪
(ಪಂಪಭಾರತಂ, ೪–೭೫.)

ಇದು ಸುಖದೊಂದು ಪುಂಜಮಿದು ಪುಣ್ಯದ ಪಿಂಡಮಿದಂಗಜಂಗೆ ಬಾ
ಹ್ಮೊದಲಿದು ಚಿತ್ತಜಂಗೆ ಕುಲದೈವಮಿ[5]ದಂಗಜ[5]ಚಕ್ರವರ್ತಿಗೆ ।
ತ್ತಿದ ಪೊಸ[6]ಧತ್ರಮಿಂ[6]ತಿದು ಮನೋಜನ ಕೈಪಿಡಿಯೆಂದು[7]ಮಾಣ್ದೆನಾ[7]
ಸುದತಿಯ ರೂಪನಿಂ ಪೆಱತನೆಂದೊಡೆ ಚಿಃ ಕರಮೆಗ್ಗನಾಗೆನೆ ॥ ೪೫
(ಆದಿಪುರಾಣ, ೨–೭೪ ; ಕಾವ್ಯಾವಲೋಕನಂ, ೧೫೯.)

ವಚನದೊಳಿಲ್ಲ ಪೆರ್ಮೊಲೆಯೊಳಲ್ಲದೆ ಕರ್ಕಶವೃತ್ತಿ ವಕ್ರಮಂ
ಸುಚರಿತದೊಳ್ ವಿಚಾರಿಸುವೊಡಿಲ್ಲಳಕಾಳಿಯೊಳಲ್ಲದೆಲ್ಲಿಯುಂ ।
ವಿಚಳತೆಯಿಲ್ಲ ಚಿತ್ತದೊಳಪಾಂಗದೊಳಲ್ಲದೆ ಸಾರಸದ್ಗುಣೋ
ಪಚಯದೊಳಿಲ್ಲ ಮಾಂದ್ಯಮದು ಯಾನದೊಳಲ್ಲದೆ ತಲ್ಲತಾಂಗಿಯಾ ॥ ೪೬
(ಚಂದ್ರಪ್ರಭಪುರಾಣಂ, ೧೧–೧೧೯.)

ಬಂಬಲ್ನಿಱಿ ಮದನನ ನನೆ
ಯಂಬಿನ ಪೊದೆಯೆನಿಸೆ ಕಣೆಯುಮಳವಟ್ಟಿರೆ ಮು ।
ಯ್ವಂ ಬಳಸಿದ ಮೇಲುದು ಕುಚ
ಮಂ ಬಿಗಿದಿರೆ ಗುರುನಿತಂಬೆ ದುಗುಲಮನುಟ್ಟಳ್ ॥ ೪೭
(ಜಗನ್ನಾಥವಿಜಯಂ, ೧೦–೧೧೬.)

ಲಲನೆಯ ಕೇಶ[8]ವ್ರೊಲ್ಲಿಯಲರುಂ ತಳಿರುಂ ಪೊಳೆವಂದದಿಂದೆ ಕೋ
ಮಳನಖಕಾಂತಿಯುಂ ಮೃದುತಳದ್ಯುತಿಯುಂ ನಿಮಿರ್ವನ್ನವೊಯ್ಯ[9]ನೊ ।
ಯ್ಯಲೆ[9] ತಲೆವಿಕ್ಕಿ ಕಟ್ಟುಲೆಗಮಿಂದುಮರೀಚಿಗಮಾಯ್ತು ನಾಡೆ ಕ
ಣ್ಗಳವಡೆ ಮಲ್ಲಯುದ್ಧಮೆನೆ ದೇಸೆಯ ಪೂಮುಡಿಯಂ ತೊಡರ್ಚಿದರ್ ॥ ೪೮
(ಚಂದ್ರಪ್ರಭಪುರಾಣಂ, ೬–೬೪.)

---

[1] ದುದಿಲ್ಲೀ (ಅ). [2] ಪೂವಂ (ಕ.ಬ). [3] ತಿವನಾಯ್ದುಕೊಯ್ದು ಮರ್ದಿನಿಂ ತನ್ನಿಚ್ಚೆಯಿಂದಂದು (ಕ.ಖ.ಬ). [4] ಮಲ್ಲಿಗೆ (ಖ). [5] ದುಸ್ಸರ (ಕ.ಖ.ಬ). [6] ವಟ್ಟಮಂ (ಅ). [7] ಕಾಣ್ಬುವೀ (ಕ ಖ.ಬ). [8] ದ (ಅ). [9] ನಾಗಳೆ (ಅ).

ಮಳಯಜ ಮೃಗಮೆದಪಂಕಂ
ಗಳಿನಡಕಿಲ್ಬೊಟ್ಟ[1]ನೊರ್ವಳಾ[1]ಕೆಯ ಭಾಳ ।
ಸ್ಥಳಿಯೊಳಳವಡಿಸಿದಳ್ ಸ್ಮರ
ಕುಳದೇವತೆ ಮಿಸುಪ ನೊಸಲ ಕಣ್ಣೊೀಱುದವೋಲ್ ॥ ೪೯
(ಚಂದ್ರಪ್ರಭಪುರಾಣಂ, ೬--೬೫.)

ಮುಸೆದನಮಾಸ್ತ್ರ[2]ನುನ್ಮದನ[2]ಬಾಣಶಲಾಕೆ ವಿಲಾಸದಿಂದಮೇ
ಱಿಸಿದಲರ್ವಿಲ್ಲನೈಕ್ಷವಧನುರ್ಲತೆ[3]ಯ[3]ರ್ಚಿಸಿ ವಿಾನಕೇತುವೆ ।
ತ್ತಿಸಿದ ಸಮುಲ್ಲಸಜ್ಜುಷಪತಾಕೆಯೆನಿಪ್ಪವೊಲಾಂತಳಾಕೆಯಾ
ಪಸದನದೊಳ್ ಜಗತ್ತ್ರಿತಯಚಿತ್ತವಿಮೋಹನಶಕ್ತಿಯೇಱ್ಪಿಯಂ ॥ ೫೦
(ಚಂದ್ರಪ್ರಭಪುರಾಣಂ, ೬–೬೬.)

ಕಟಿ ಕಳಕಾಂಚಿಯಿಂದೆ ಕಳಕಾಂಚಿಯುಮಿಾ ಕಟಿಯಿಂ ಕರಂ ಕನ
ತ್ಕಟಕದಿನೀ ಕನತ್ಕಟಕಮುಂ ಕರದಿಂ ನಿಟಿಲಂ ಲಲಾಮದಿಂ ।
ನಿಟಿಲದಿನಾ ಲಲಾಮಮುಮಲಂ[1]ಕೃತಿವೆತ್ತುದೆನುತ್ತೆ[4]ನೋಡಿದರ್
ಘಟಕುಚೆಯರ್ ಸಮಂ ತರುತಮಾಕೆಯ ಭೂಷ್ಯವಿಭೂಷಣಂಗಳಂ ॥ ೫೧
(ಚಂದ್ರಪ್ರಭಪುರಾಣಂ, ೬–೬೭.)

ಬಡತನಮನಾಂತ ನಡು ಕೊ
ರ್ವಡರ್ದ ಕುಚಂ ಬಿಣ್ಪನಾಳ್ದ ಜಘನಂ ಬೆಳರ್ಗೆಂ ।
ಪಿಡಿದಧರಮಿಂಪನಪ್ಪಿದ
ನುಡಿ ತಡೆಪಂಬೆತ್ತ ನಡೆ ನಿಜಂ ಕೋಮಳೆಯಾ ॥ ೫೨
(ಚಂದ್ರಪ್ರಭಪುರಾಣಂ, ೬–೬೮.)

ದರಹಾಸಜ್ಯೋತ್ಸ್ನೆಯಿಂ ದರ್ಪಕವಿಶದಯಶಂ ಕೊರ್ವೆ ಲಾವಣ್ಯದಿಂದಂ
ಸ್ಮರತೇಜಂ ಪೆರ್ಚೆ ಕಣ್ಗೊಂಡವಳ ಧವಳನೇತ್ರಾಂಚಲಾಲೋಕಮಾ[5]ದಂ[5] ।
ನೆರ[6]ಮಾದಂದಂ[6]ಗಜಂಗೀ ತ್ರಿಜಗಮುಮಿದಿರಿ[7]ಲ್ಲೆಂಬಿನಂ[7] ಪೂವಿನಂಬಂ
ತಿರುವಾಯೊಳ್ಪೂಡಿ ಪುಷ್ಪಾಯುಧನಿರೆ ಕೆಲದೊಳ್ ಲೀಲೆಯಿಂ ಬಾಲೆಯಿರ್ಪಳ್ ॥
(ಜಗನ್ನಾಥವಿಜಯಂ, ೧೦–೧೭.)

ಉರದೊಳ್ ಸಂತತಮಿರ್ಪ ಲಕ್ಷ್ಮಿಯ [8]ದರ[8]ಸ್ಮೇರಪ್ರಭಾಪೂರದಂ
ತಿರೆ ಹಾರಂ ಭುಜದೊಳ್ ಜಯಾಂಗನೆಯ ಗಾಢಾ[9]ಶ್ಲೇಷ[9]ಮೈಚಿತ್ರ್ಯದಂ ।

---

[1] ನಿಟ್ಟರಾ (ಕ.ಖ.ಬ). [2] ಮನ್ಮಥನ (ಕ), ನೊಪ್ಪುವಸಿ (ಖ.ಬ). [3] ಬ (ಆ). [4] ಕರಿಸಿರ್ದುವೆನುತ್ತೆ (ಅ). [5] ತ್ರಂ (ಅ). [6] ವಾದತ್ತಂ (ಅ). [7] ಟ್ಟಿಂಬುಪೋಲ್ (ಖ). [8] ಮುಖ (ಅ). [9] ಶ್ಲಿಷ್ಟ (ಅ).

ತಿರೆ ಕೇಯೂರಕಮಾಸ್ಯದೊಳ್ ನಲಿವ ವಾಣೀಕೇಕರಾಲೋಕದಂ
ತಿರೆ ಕರ್ಣಾಭರಣಂ ಬೆಡಂಗ[1]ಡ[1]ರ್ದು[2]ದಾ ಕಲ್ಪಂ[2] ಜಗನ್ನಾಥನಾ ॥ ೫೪

(ಅನಂತನಾಥಪುರಾಣಂ, ೬–೪೯.)

ಎಳವೆಱಯಂ ಶ್ರೀಕಂಠಂ
ತಳೆದಂತಿರೆ ಭಾಳಪಟ್ಟದೊಳ್ ಕಣ್ಣಿಸೆದಂ ।
ಮಳಯಜಪಿಲಿಪ್ತಗಾತ್ರಂ
ತೊಳಗುವ ಬಾಸಿಗಮನಾಂತು ವರ ನರಸಿಂಹಂ ॥ ೫೫

ಪದೆದೊದವೆ ವೀರಸಿರಿಯ
ಪ್ಪಿದ ತೋಳ್ಗಳ್ತೆನಿಪ ರನ್ನವಟ್ಟೆಯ ರುಕ್ಪುಂ ।
ಜದ ಮಂಜರಿವೋಲ್ ರಂಜಿಸಿ
ದುದು ಪೊನ್ನಾಯುಗದ ಪೊನ್ನಬಜ್ಜರಿ ಕಟಿಯೊಳ್ ॥ ೫೬

(ಅನಂತನಾಥಪುರಾಣಂ, ೬–೫೦.)

ಶಂಕುತಲಾಕೆಯುಂ ಗಟಿಗೆವಟ್ಟಲುಮೊಪ್ಪಿರೆ ವೇದನಾದದೊಳ್
ಸಂಕರಮಾಗಿ ಪಾಠಕಪಟುಸ್ವನಮಂಗಳಗೀತತೂರ್ಯಘೋ ।
ಷಂ ಕಡಲೂರ್ಮಿಯಂತುಲಿಯೆ ನರ್ತಿಸೆ ನಾರಿಯರಾಯ್ತು ಸಾರ್ಕೆ ಲ
ಗ್ನಂ ಕರೆಯಿಂ ವಧೂವರರನೆಂದುಸಿರ್ದರ್ ಹಿತದೊಳ್ ಪುರೋಹಿತರ್ ॥ ೫೭

ನಭಮಂ ಸಂಜೆ ಮುಗಿಲ್ ಪುಗಿಲ್ವ ತೆಱದಿಂ ತಳ್ಪೊಯ್ಯೆ ಭೂಷಾಮಣಿ
ಪ್ರಭೆ ದಿಕ್ಚಕ್ರಮನಚ್ಚಜೊನ್ನಮೆಳಸಿತ್ತೆಂಬನ್ನೆಗಂ [3]ತ್ರೀವೆ[3] ದೃ ।
ಕ್ಪ್ರಭೆ ಭೂಭಾಗಮನೆಯ್ದೆ [4]ಬೆಳ್ಪಮರ್ದ[4]ಪಾಂಗಿಂ ಪೆರ್ಚೆ ಪಾದೋಲ್ಲಸ
ತ್ಪ್ರಭೆ ಬಂದಳ್ ಕುಡುತುಂ ಶಶಿಪ್ರಭೆ ಜನಾಕ್ಷೀಂದೀವರಾನಂದಮಂ ॥ ೫೮

(ಚಂದ್ರಪ್ರಭಪುರಾಣಂ, ೬–೬೯.)

ಕುಡುವುರ್ವಿಂ ಕರ್ಬುವಿಲ್ಲಂ ಪರಪುವ ಕಡೆಗಣ್ಣಿಂ ಮನೋಜಾಸ್ತ್ರಮಂ ಸಾ
ಲಿಡುವುದ್ಯನ್ಮೌಖಲಾಕೂಜಿತದಿನತನುಕೋದಂಡಟಂಕಾರಮಂ ಕ ।
ನ್ನಡಿಪಂಘ್ರಿನ್ಯಾಸದಿಂ ತಾವರೆಗೆದಱುವ ಮಂದಸ್ಮಿತದ್ಯೋತದಿಂದಿ
ಗಡಲಂ [5]ಮತ್ತೊಂದ[5]ನುತ್ಪಾದಿಸುವ ತೆಱದಿನಾನಂದದಿಂ ದೇವಿ ಬಂದಳ್ ॥ ೫೯

(ಜಗನ್ನಾಥವಿಜಯಂ, ೧–೩೩.)

---

[1] ಮ (ಅ). [2] ಚೆಲ್ವಾಳ್ಗಂ (ಖ.ಬ). [3] ತುಂಬೆ (ಅ). [4] ಪುಳ್ಕಲರ್ದ (ಖ.ಬ).
[5] ದೇಱುಂದ (ಅ).

ಉರದೊಳ್ ಹಾರಾಂಶು ಗಂಡಸ್ಥಳಿಯೊಳಮಳಕರ್ಣಾವತಂಸಾಂಶು ಮತ್ತಂ
ಶಿರದೊಳ್ ರತ್ನಾವಳೀಶೇಖರಶಿಖರಿಸಮು[1]ಕ್ತಾಂ[1]ಶುಗಳ್ [2]ನೃತ್ಯ[2]ಮಂ ಬಿ ।
ತ್ತರಿಪನ್ನಂ ಸಿದ್ಧವಿದ್ಯಾಧರದಿವಿಜಕುಮಾರರ್ಕಳಂ ಚೆಲ್ಪಿನಿಂ ಮಾಂ
ಕರಿಸುತ್ತುಂ ಬಂದನಾ[3]ಸಾ[3]ದಿತನಿರುಪಮಶೃಂಗಾರ[4]ನಾ[4]ರಂ ಕುಮಾರಂ ॥ ೬೦
(ಚಂದ್ರಪ್ರಭಪುರಾಣಂ, ೬–೬೦.)

ಬಳವದ[5]ಪಾರ[5]ವೇದರುತಿಗೇಯರವಂ ಪಟಹಸ್ವನಂ [6]ಘಟೀ[6]
ಕಳಕಳದಿಂ ದಳಂಬಡೆದು ವಿಶ್ವಜಗಜ್ಜನ[7]ನರ್ತ[7]ನಾರವಂ ।
ಗಳಿನಿನಿಸೇಳ್ದ ವೆತ್ತು ದಿಗಿಭವ್ರಜಬೃಂಹಿತಭೂರಿನಾದದಿಂ
ಬಳವಿಯನಾಂತು ಘೂರ್ಣಿಪಿನಮಾ ಗೃಹಮಂ ಪುಗುತಂದನಚ್ಯುತಂ ॥ ೬೧
(ಜಗನ್ನಾಥವಿಜಯಂ, ೧೦–೧೩೧.)

ಪಾಸಿದ [8]ದಣಿಂಬದುಗುರ್ಗಳ[8]
ಕೇಸ[9]ಡಿ[9]ಗಳ ಚರಣಭೂಷಣಂಗಳ ರುಚಿಗಳ್ ।
ಬಾಸಣಿಸೆ ಚಿತ್ರಪಟಮಂ
ಪಾಸಿದವೋಲಿರೆ ವಧೂವರರ್ ನಡೆತಂದರ್ ॥ ೬೨
(ಅನಂತನಾಥಪುರಾಣಂ, ೬–೫೪.)

ಪೊಂಬಟ್ಟೆಯ ಬೋರೆಯದೊಳ್
ತುಂಬಿದ ಬಿಡುಮುತ್ತಿನಕ್ಕಿಯಂ ಮೆಟ್ಟಿರ್ದಂ ।
ದೇಂ ಬಗೆವುಗಿಸಿದುದೋ ಹೇ
ಮಾಂಬುಜದ ಮರಾಳಮಿಥುನಮಂ ತನ್ಮಿಥುನಂ ॥ ೬೩
(ಅನಂತನಾಥಪುರಾಣಂ, ೬–೫೫.)

ಕವಿವೇಟಮನಿ[10]ಱಿ[10]ಸುತ್ತಿರೆ
ನವವರನಂ ನೋ[11]ಡುವಪ್ಪು[11]ವುತ್ಕಳಿಕೆಯಿನೇಂ ।
ಯುವತಿಯ ಕಣ್ಣುಂ ಮನಮುಂ
ಜವನಿಕೆಯಂ ಕನ್ನಮಿಕ್ಕಲ[12]ಟಮಟಿಸಿದುವೋ[12] ॥ ೬೪
(ಅನಂತನಾಥಪುರಾಣಂ, ೬–೫೬.)

ಜವನಿಕೆಯೋನರಿಸುವುದುಂ
ನವವರನಂ ಕಣ್ಣ ಬೆಳಗಿನಿಂ ಮುಸುಕಿದಳಾ ।

---

[1] ತ್ತಾ (ಅ). [2] ಪೊತ್ತ (ಅ). [3] ಪಾ (ಖ.ಬ). [4] ಹಾ (ಕ.ಖ.ಬ). [5] ವಾದ (ಕ.ಖ.ಬ). [6] ಪುರೀ (ಅ). [7] ಕೀರ್ತ (ಅ). [8] ದಣಿಬದಹೊಗರಿನ (ಖ.ಬ). [9] ರ (ಕ). [10] ಲ (ಕ.ಖ). [11] ಲೆಯ್ದುವ (ಕ.ಖ.ಬ). [12] ಡಹಡಿಸಿದುದೊ (ಅ).

ಯುವತಿ ಪದೆದಪ್ಪಿದುದು ಮಾ
ಧವನೀಕ್ಷಣಕಾಂತಿಯವಳ ಸರ್ವಾಂಗಮುಮಂ ॥ ೬೫

ತೊಲಗೆ ದುಕೂಲಕಾಂಡಪಟಮುತ್ತಮಲಗ್ನದೊಳೊರ್ವರೊರ್ವರಂ
ನಲಿದೊಲವಿಂದೆ ದಂಪತಿಗಳೀಕ್ಷಿಸೆ ನೋಟದ ಬಳ್ಳವಳ್ಳಿ ನೆ ।
ಯ್ದಿಲ ಮಜ್ಜೆವೊಲ್ ಸುಧಾರಸದ ಸೋನೆವೊಲಂಗಜಬಾಣವೃಷ್ಟಿವೊಲ್
ಸಲೆ ನಿಲೆ ಪರ್ವಿ ಕೊರ್ವಿದುದು ಕೂಡೆ ವಿವಾಹಗೃಹಾಂತರಾಳಮಂ ॥ ೬೬

(ಜಗನ್ನಾಥವಿಜಯಂ, ೧೦–೧೩೨.)

ನನೆಯ ಸರಳ್ಗಳಂತೆ ನೆಱಿದಿಂಗಳ ತಣ್ಗದಿರಂತೆ ಕಂತುರಾ
ಜನ ಕರವಾಳ ಮೆಯ್ಯೊಳಪಿನಂತೆ ನವ್ಯೋತ್ಪಲದಾಮದಂತೆ ಪೂ ।
ವಿನ ಮಜ್ಜೆಯಂತೆ ತುಂಬಿಗಳ ಮಾಲೆ ತೆಱಂಬೊಳೆವಂತೆ ಲೋಲಲೋ
ಚನರುಚಿ ಸುತ್ತಿ ಮುತ್ತಿದುದತೇಷನ್ಯಪಾಲಸಭಾಂತರಾಳಮಂ ॥ ೬೭

(ಪಂಪರಾಮಾಯಣಂ, ೫–೭೦.)

ಮುಗುಳಂ ಪೇಱಿದ ಕುಂದವಲ್ಲಿಗಮ[1]ರಲ್ತಂ[1]ದಾ ಕದಂಬೋದ್ಭಶಾ
ಖೆ[2]ಗಮ[2]ಚ್ಛಾಂಬುವನಂಬುದಂ ಕಱಿವ ಪಾಂಗಿಂ ಸಾತ್ವಿಕಸ್ವೇದಬಿಂ ।
ದುಗೆ ರೋಮೋದ್ಗತಿಗಿರ್ಕೆಯಾದ ಸುತೆಗಂ ಜಾಮಾತೃಗಂ ಪ್ರೀತಿ ಕ್ಕೈ
ಮಿಗೆ ಕೈನೀರೆಱಿದಂ ಕನತ್ಕಳಶಹಸ್ತಂ ತಜ್ಜ[3]ಯ[3]ಶ್ರೀಪ್ರಿಯಂ ॥ ೬೮

(ಚಂದ್ರಪ್ರಭಪುರಾಣಂ, ೬–೭೧.)

ನೆಱಿ[4]ದತ್ತೆತ್ತಾ[4]ನುಮಿಂ ದಂಪತಿಯ ಬಯಕೆ ಸಂಪೂರ್ಣಮಾಯ್ತುತ್ಸವಂ ಕ
ಣ್ಣೆಱಿದಂತಾಯ್ತೆನ್ನ ಸಾಮ್ರಾಜ್ಯದ ಫಲಮೆನುತಂ ರಾಗಮಂ ಬೀಱಿಲಾದ ।
ಟ್ಕಱಿ ಪೆಂಪಂ ತೋಱಿಲಾಗಳ್ ಕನಕಕಳಶಮಂ ತಾನೆ ಬಂದೆತ್ತಿ ಕೈನೀ
ರೆಱಿದಂ ಶ್ರೀವಜ್ರದಂತಕ್ಷಿತಿಪತಿ ಸತತೋತ್ಸಾಹಸಂದೋಹದಿಂದಂ ॥ ೬೯

(ಆದಿಪುರಾಣಂ, ೪–೪೮.)

ಅಱಿ[5]ವುಳ ಪುರೋಹಿತ[5]ರ್ಪೇರ್
ಳ್ದಱಿಯಿಸೆ ಸಿಂಹೋದರಂಗೆ ಮಣಿಕಳಶಮನ ।
ಟ್ಕಱಿಯೊಳೆತ್ತಿತಂದು ಕೈನೀ
ರೆಱಿದಿತ್ತಂ ರತ್ನಮಾಲೆಯಂ ಮೇಘರಥಂ ॥ ೭೦

---

[1] ಕರ್ತಂ (ಖ.ಬ). [2] ಗೆಸ್ವ (ಖ.ಗ.ಬ). [3] ನ (ಅ). [4] ದಂತೆತಾ (ಖ.ಬ).
[5] ಕೆವುಳ್ಳಪುರೋದ (ಖ).

ನಾರಿಯರಿಕ್ಕೆ ಸೇಸೆಗಳನಾದರದಿಂದಿರದೆಯ್ದೆ ಪಾಡೆ ಶೃಂ
ಗಾರಪಯೋಧಿ ಘೂರ್ಣಿಸುವವ್ಯೋಲ್ ಕುಣಿದಾ[1]ಡೆ[1] ಕುಲಪ್ರಧಾನೆಯರ್ ।
ಚಾರು ಸುವರ್ಣಕುಂಭಭೃತಮಂಗಳವಾರಿಯನೆತ್ತಿಕೊಂಡು ಕೈ
ನೀರೆಱೆದಂ ವಧೂವರ[2]ರ್ಗುದಾ[2]ತ್ತ ಮನಂ ವಸುಧಾಧಿನಾಯಕಂ ॥ ೭೧

ಮಾಲೆಯ ಮೇಲೆ ತುಂಬಿಗಳ ಮಾಲೆ ತೆಱಂಬೊಳೆದಾಡೆ ಬೇಱೆ ಪೂ
ಮಾಲೆಯ ಲೀಲೆಯಂ ಕೆದಱೆ ಕೇಕರಮಾಲೆ ಶಿರೀಷಮಾಲೆಯಂ ।
ಸೋಲಿಸಿ ನೀಳ್ದ ಬಾಹುಲತೆ ತೋಳ ಮೊದಲ್ ಮದನಾನುರಾಗಮಂ
ಸಾಲಿಡೆ [3]ಸೀತೆ ಸಾರ್ದು[3] ರಘು[4]ವಂಶನಮೇರು[4]ಗೆ ಮಾಲೆಸೂಡಿದಳ್ ॥ ೭೨

(ಪಂಪರಾಮಾಯಣಂ, ೫–೯೫.)

ಲೋಲಕಟಾಕ್ಷಮಾಲೆ ವನಮಾಲೆಗೆ ಚಂದ್ರಿಕೆವೀಱೆ ಕಯ್ಯ ಪೂ
ಮಾಲೆಗೆ ಭೃಂಗಮಾಲೆ ಮೊಱೆದೆಯ್ದೆ ಶಿರೀಷದ ಮಾಲೆಯಂ ಪ್ರಭಾ ।
ಮಾಲೆಯಿನೇಳಿಸುತ್ತಿರೆ ಭುಜಂ ನಖಮಾಲೆ ಮಯೂಖಮಾಲೆಯಂ
ಸಾಲಿಡೆ ಬಂದು ಬಾಲೆ ವನಮಾಲಿಗೆ ಮಾಲೆಯನೊಲ್ದು ಸೂಡಿದಳ್ ॥ ೭೩

(ಜಗನ್ನಾಥವಿಜಯಂ, ೧೦–೮೪.)

ಮುಸು[5]ಕಿದುದು[5] ದುಂದುಭಿಧ್ವನಿ
ದೆಸೆಯಂ ಮಾಂಗಲ್ಯಗೀತರುತಿ ತುಂಬಿದುದಾ ।
ಗಸಮಂ ಶಂಖ[6]ಧ್ವನಿ[6] ಪೂ
ರಿಸಿದುದು ತಳ್ಪೊಯ್ದು [7]ರೋದಸೀ[7]ಮಂಡಳಮಂ ॥ ೭೪

(ಚಂದ್ರಪ್ರಭಪುರಾಣಂ, ೬–೭೨.)

ಪ್ರಿಯತರಲವಂಗಲವಲೀ
ದ್ವಯ[8]ಕ್ಕಮೇಕ್ಕೈಕ[8]ಲಲಿತಶಾಖಾಯೋಗಂ ।
ನಯ[9]ದಿಂ ಸಮನಿಪಪೋಲಾ[9]
ಪ್ರಿಯಂಗಮಾ ಪ್ರಿಯೆಗಮಾಯ್ತು ಪಾಣಿಗ್ರಹಣಂ ॥ ೭೫

(ಚಂದ್ರಪ್ರಭಪುರಾಣಂ, ೬–೭೩.)

ವ್ಯದುಗತಿವಿಲೋಲಹಾರರ್
ಪ್ರದಕ್ಷಿಣಂ ಬಂದು ದಕ್ಷಿಣಾವರ್ತಶಿಖಾ ।

---

[1] ಡಿ (ಕ). [2] ರ್ಗಮಾ (ಖ.ಬ). [3] ಸಾರ್ದುಸೀತೆ (ಅ). [4] ವೀರನಮೇಲುಗೆ (ಗ). [5] ಕಿರ್ದ (ಖ.ಬ). [6] ಸ್ವನ (ಖ.ಗ.ಬ). [7] ತೊಡವಿಸಿದ (ಗ). [8] ಕ್ಕೆ ಮೆಯ್ಯಿಕ್ಕೆ (ಖ.ಬ). [9] ದೆನದುನಿಪಪೊಲಂತಾ (ಖ).

ಸ್ಪದನಂ ಹೋಮಾನಳನಂ
ಮದುವಕ್ಕಳ್ ಮಿಸುಪ ಲಾಜೆಯಿಂ ಪೂಜಿಸಿದರ್ ॥ ೭೬

(ಜಗನ್ನಾಥವಿಜಯಂ, ೧೦–೧೩೩.)

ವೇದೋಕ್ತಮಂತ್ರಪೂರಿತ
[1]ವಾ[1]ದುವನಾಚಾರ್ಯನಾಜ್ಞೆಯಿಂದನಲನೊಳಂ ।
ದಾ ದಂಪತಿಗಳ್ ಲಾಜೆಯ
ನಾದರದಿಂ [2]ತೀರ್ದ[2]ರರುಣಕರಕಿಸಲಯದಿಂ ॥ ೭೭

ಬಲದೊ[3]ಳ್ಸುಟಿದಿ[3]ರ್ದೊಲೆಯದೆ
ಕೆಲಕಡರದೆ ನೀಳ್ದು ಹೊಗೆಯದೆತ್ತಂ ಹೋಮಾ ।
ನಲನೆಸೆದುದು [4]ಧಟಧಟ್ಟೆಂ
ಬುಲಿ[4] ಪ್ರೊಣ್ಮಿರೆ ಪಾಡಿ ಪರಸುವಂದದಿನವರಂ ॥ ೭೮

ಕೆಂದಳಿರೇಱಿದ ಮಾವಂ
ಬಂ[5]ದ[5] ವಸಂತದೊಳನಂಗನಂಗನೆಸಹಿತೆ ।
ಬ್ಬಂದು ಬಲವಂದು ಮನ್ನಿಸು
ವಂದದೆ ಬಲಗೊಂಡರಗ್ನಿಯಂ ದಂಪತಿಗಳ್ ॥ ೭೯

ಕಡುಮೇಳವುಳ್ಳವರ್ ಕಾ
ಲ್ವಿಡಿವಿಡಿಯೆನೆ ಕುವರ[6]ನೋಪಳೆಸೆ[6]ವುಂಗುಟಮಂ ।
ಪಿಡಿದು ನಸುನಗುತಮಾಕೆಯ
ಕಡುರಾಗದೆ ಸಪ್ತಪದಿಗಳಂ ಮೆಟ್ಟಿಸಿದಂ ॥ ೮೦

ಅಣಚತನವಂ ಕ್ಯೆಕೊಳ್ ನಿನ್ನೊಲೆಭಾಗ್ಯದ ಭದ್ರಲ
ಕ್ಷಣದ ಪದದೊಳ್ ನಂದೀ ಸೌಭಾಗ್ಯದಿಂ ಸ್ವಜನಂಗಳಂ ।
ತಣಿಸಿ ಪೃಥಿವೀರಾಜ್ಯಂಗೆಯ್ಯೆಂದು ತನ್ನೃಪಪುತ್ರಿಗಾ
ಕ್ಷಣದೊಳೊಸೆದಂದೆಲ್ಲರ್ ಸೇಸಿಕ್ಕಿದರ್ ನೆರೆದೆಯ್ದಿರರ್ ॥ ೮೧

ಕೊಂಕಿ ಕವಲ್ತು ತನ್ನನೆ ಪಳಂಚುವ ಕೇಕರ[7]ಪಾತವೆಬ್ಬ[7] ರೋ
ಮಾಂಕುರಮುಣ್ಮಿ ಪೊಣ್ಮುವ ಭಯಂ ನಮಿತಾನನ ಪದ್ಮರಾಗದಿಂ ।

---

[1] ವೋ (ಕ.ಗ). [2] ಸುರಿದ (ಖ.ಬ). [3] ಕುಳ್ಳಿ (ಕ.ಗ). [4] ಧಟಧಟಧಟರುಲ (ಕ.ಗ). [5] ದು (ಖ.ಬ). [6] ನೊಪ್ಪೆಲೆ (ಖ.ಬ). [7] ವಾರನೇಳ್ವ (ಕ).

ದಂ ಕ[1]ರೆ[1]ಗಣ್ಮಿ ನೂಸುವ ಬೆಮರ್ ತಲೆದೋಱುವ ಲಜ್ಜೆ ನಾಡೆ ಚೆ
ಲ್ವಂ ಕುಡೆ ನೋಡುತಂಗನೆಯನೀಕ್ಷಿಸಿದಂ [2]ನೃಪರೂಪ[2]ಮನ್ಮಥಂ ॥ ೮೧

[3]ನಸೆಯ[3]ಳಿಪಿಂ ಪ್ರಿಯಾನನಮನೀಕ್ಷಿಸ[1]ಲುಜ್ಜು[4]ಗೆ[4]ಯಾಗಿ ತಾನೆ ಲ
ಜ್ಜಿಸಿ ತಲೆವಾಗಿ ಕಂಡು ಮಣಿಕುಟ್ಟಿಮದೊಳ್ ನೆಱೆ ನೋಡಿ ಮತ್ತೆ ಮಾ ।
ನಸದೊಳಗಿ[5]ಟ್ಟು ತನ್ನ [6]ವಸುಖಾನುಭವಕ್ಕರಮುಚ್ಚಿ ಕಂಗಳಂ
ಪಸರಿ[6]ಪ[6] ಹೋಮಧೂಮಹತಿಗಂದು ಶಶಿಪ್ರಭೆ ದೂಱನೇಱಿಪಳ್ ॥ ೮೨

(ಚಂದ್ರಪ್ರಭಪುರಾಣಂ, ೬–೭೬.)

[7]ರತಿ[7]ಯೊಡನಿಂದ್ರನೆಂತು ನೆರೆದಂ [8]ಶಚಿಯೊಳ್[8] ಸ್ಮರನೆಂತು ನಾಡೆ ಸಂ
ಗತಿವಡೆದಂ ದಲೆಂದವಳ ರೂಪುಮನಾತನ ಲೀಲೆಯಂ ಮನ ।
ಕ್ಕತಿಶಯಮಾಗೆ ಮತ್ತವ್[9]ಳ[9]ಲೀಲೆಯನಾತನ ರೂಪುಮಂ ಜನ
ಪ್ರತತಿ ಮರಲ್ಚು ನೋಡಿದುದು ನಿಂದು ವಿವಾಹಗೃ[10]ಹಾಂತರಾಳದೊಳ್[10] ॥ ೮೩

(ಚಂದ್ರಪ್ರಭಪುರಾಣಂ, ೬–೭೮.)

ಇಂದು ಪಯೋಜಜಂಗೆ ಕೃತಕೃತ್ಯತೆ ಸಾರ್ದುದು ಪುಷ್ಪಸಾಯಕಂ
ಗಿಂದೊಳ[11]ಸಾ[11]ರ್ದುದೇಸುವೆಸನಿಂದು ಸನಾಭಿಜನಕ್ಕೊಡರ್ಚಿತಾ ।
ನಂದಪರಂಪರಾಜನನಮಿಂದು ಫಲಂ ಪೊಸಜವ್ವನಕ್ಕಮಾ
ಯ್ತಿಂದು [12]ಸು[12]ರೂಪವೃತ್ತಿ ದೊರೆವೆತ್ತುದು ನಾಡೆಯುಮೆಂದು ನೋಡಿದರ್ ॥೮೪

(ಚಂದ್ರಪ್ರಭಪುರಾಣಂ, ೬–೭೯.)

ಹಿತನುತ ಮಂತ್ರಿ ಮಂಡಳಿಕ ಮಿತ್ರ ಪುರೋಹಿತ ದಂಡನಾಯಕಾ
ನ್ವಿತ ನಗರಪ್ರಧಾನವನಿತಾನಿಕರಕ್ಕೆ ಸುವರ್ಣಭಾಜನ ।
ಪ್ರತತಿಗಳೊಳ್ ಕನನ್ಮಣಿಯ ಪೈಂಗಳ ಕೇಳಿಯ ಬಾಯಿನಂಗಳಂ
ಸುತೆಯ ವಿವಾಹದುತ್ಸವದೊಳಿತ್ತುದು ತನ್ನರಪಾಂಗನಾಜನಂ ॥ ೮೫

ವಿದಳಿತ ಪುಷ್ಪಮಾಲಿಕೆಗಳಿಂ ಮಲಯೋದ್ಭವದಿಂ ತೊಳಪ್ಪ ರ
ನ್ನದ ತೊಡವಿಂದಲಂಕರಿಸಿ ಕಾಂಚನ ಭಾಜನದಿಂ[13]ದೆ[13] ಪಂಚರ ।

[1] ಡೆ (ಖ). [2] ಮನುವಂಶ (ಕ.ಗ). [3] ಮಸುಪ (ಅ). [4] ಉದ್ಯತೆ (ಅ).
[5] ಟ್ಟೊಡಂನ (ಅ). [6] ಸಿ (ಕ.ಖ.ಗ). [7] ಸತಿ (ಖ). [8] ರತಿಯೊಳ್ (ಅ).
[9] ನ (ಕ.ಗ), (ವ.ಖ). [10] ಹೈಕದೇಶದೊಳ್ (ಅ). [11] ಸೋ (ಅ). [12] ಸ (ಗ).
[13] ದ (ಖ).

ತ್ನದ ಘನಸಾರವಾರಿಯ ಮೃಗೋತ್ಥ[1]ಕುಳುತ್ಥದ[1] ಬಾಯಿನಂಗಳಂ
ಮುದದೊದವಿಂದಮಿತ್ತು ಮೆಱು[2]ದರ್ ನೆ[2]ಲೆವರ್ಚಿದುದಾತ್ತವೃತ್ತಿ[3]ಯಿಂ[3] ॥ ೮೬
(ಚಂದ್ರಪ್ರಭಪುರಾಣಂ, ೬–೮೦.)

ಆಗಳ್ ಪಾಂಚಾಲರಾಜಂ ಸುರಭಿ ತೊರೆದವ್ಗೋಲ್ ಪಾರಿಜಾತದ್ರುಮಂ ಭೂ
ಭಾಗಕ್ಕೆಟ್ಟಂದವ್ಗೋಲಕ್ಷಯನಿಧಿ ಕೆಲದೊಳ್ನಿಂದವ್ಗೋಲತ್ಯುದಾತ್ತಂ ।
ಚಾಗಕ್ಕಾನಕ್ತರಾರಾವರ್ಗಭಿಮತಮೇನೇನಳಂಕಾರಕನ್ಯಾ
ನಾಗಾ[4]ಶ್ವಾರ್ಥಾಂ[4]ಬರವ್ರಾತದೊಳವನೆ ಮೊಗಂನೋಡದೀಯುತ್ತಮಿರ್ದಂ॥ ೮೭

ಹೃದಯದೊಳೆನ್ನವರ್ ಪೆಱ[5]ರ್[5]ವರ್ ಧನಿಕರ್ ಬಡವರ್ ಸಮಂತು ಬೇ
ಡದವರಡುರ್ತು ಬೇಡಿದವರೆನ್ನದೆ ರನ್ನದ ಪೊನ್ನ ಚಿತ್ರವ ।
ಸ್ತ್ರದ ಪೊಸ[6]ವ[6]ಚ್ಚದೊಟ್ಟಿಲನೆ ಕೋಶಗೃಹಂ ಬಱಿದಾಗೆ ಕೊಟ್ಟು ಮಾ
ಣದೆ ಮಗುಡಾನೆಯಂ ಕುದುರೆಯಂ ಧರಣೀಪತಿ ಸಾಱಿ[7]ಬೀ[7]ಱಿದಂ ॥ ೮೮
(ಚಂದ್ರಪ್ರಭಪುರಾಣಂ, ೬–೮೧.)

ಆ ಪದದೊಳಿಂದುಕುಲಮಣಿ
ದೀಪನ ವಿತರಣದ ಶೌರ್ಯದಾಯತಿಯಧಿಕ ಕ ।
ಳಾಪಂಗಳ ನೆರೆದೋದಿದ
ರಾ ಪೂರ್ಣಮನೋರಥರ್ ನೆಗಟ್ಟೆಯ ಸೂತರ್ ॥ ೮೯

ಪರಿವ ಕಟಾಕ್ಷಂಗಳನೋ
ಸರಿಸುತ್ತಂ ನಿಮಿರ್ವ ಸುಯ್ಗಳಿಂ ಕುಸಿಯುತ್ತಂ !
[8]ಶ[9]ರಪಾತಂಗಳ ನಡುವಣ
ಹರಿಣಿಯವ್ಗೋಲ್ ಮನದೊಳಾಗಳಾ[10]ಕುಲೆ[10]ಯಾದಳ್ ॥ ೯೦
(ಆದಿಪುರಾಣಂ, ೪–೫೦.)

ಇನಿಯನ ಕೆಂದಳಂ ತಳಮನೊಯ್ಯನೆ ಸೋಂಕೆ ಪ್ರೋದಬ್ದ ನಾಣ ಪೆಂ
ಪಿನೊಳೊಗೆತರ್ಪ ಘರ್ಮಜಲಬಿಂದುಗಳಂ ನಮಿತಾನನಾ[10]ಬ್ಜೆ[10] [11]ಬೆ ।
ಚ್ಚನೆ ಬಸಿಯುತ್ತಮಿಂದು[11]ಕರಸಂಕುಲಮೊಯ್ಯನವುಂಕಿ ಸೋಂಕೆ ಸೋಂ
ಕಿನೊಳೊಱಿವಿಂದುಕಾಂತಮಣಿಪುತ್ರಿಕೆಯಂದದಿ[12]ನಾದಮೊಪ್ಪಿದಳ್[12] ॥ ೯೧
(ಆದಿಪುರಾಣಂ, ೪–೪೯.)

---

[1] ಕುಲೋದ್ಭತ (ಖ), ಕುಲೋತ್ಥದ (ಕ.ಗ). [2] ದಳ್ಬೆಲೆ (ಖ). [3] ಯಂ (ಅ). [4] ಶ್ವದ್ವಾಂ (ಖ). [5] ರಿ (ಅ). [6] ಪೊ (ಖ). [7] ತೋ. [8] ಸ್ಮ (ಕ.ಖ). [9] ಕನ್ನೆ (ಖ). (ಕ.ಖ). [10] ಬ್ಜ (ಅ). [11] ಬೆಚ್ಚನೆಬಸಿವಿಂದುಕಾಂತ (ಅ). [12] ನೊಪ್ಪಿತೋಱಿದಳ್ (ಅ).

ವರನಂ ಸೋಂಕಿದ ಲಜ್ಜಾ
ಭರದಿಂ ಮೊಗಮೆಱಗಿ ಬೆಮರೆ ಮೈ ಭಯದಿಂದು ।
ಬ್ಬರಿಸೆ ಪುಳಕಾಂಕುರಂ ಭಯ
ಹರುಷದಿನೊತ್ತರಿಸೆ ನೋಡಿದುವು ಕಡೆಗಣ್ಗಳ್ ॥ ೯೨

ಚಳಿಯಿಸುವಾನನಂ ಕುಸಿದು ತುಳ್ಕುವವೋಲೊಳಪೊಕ್ಕು ಸೋಂಕಿನಿಂ
ಪೊಳೆವ ಬೆಮರ್ ನಿಜಾತ್ಮಪತಿ ನೀಡಿದ ಮಾಲೆಗೆ ಮೆಲ್ಲನಾಂತು ಸಂ ।
ಚಳಿಸುವ ಕೆಂದಳಂ ವರನಿನುತ್ಕರಮಂ ನಲಿಪಾಳಿಯರ್ಗೆ ಕ
ಣ್ಮುಳಿಸಿನೊಳೇಟ್ಪಪೂರ್ವನೆಲೆವೆರ್ಚಿಸಲಾರ್ತುವು ನಾಣ ಗಾಡಿಯಂ ॥ ೯೩

ತನುವಂ ಪುಳಕಂ ಕಡೆಗಣ್
ಮನಮಂ ಸಖಿಯರ್ಗೆ ದೂಱಿದಪ್ಪುವು ನಾಣಾ ।
ವನಿತೊಂದುಶಕ್ತಿಯೆನಿಸಿತೆಂ
ದಿನಿಯನ ಸೋಂಕಿಂದಮಾಕೆಯಾಕುಲೆಯಾದಳ್ ॥ ೯೪

ಭೋಂಕನೆ ಕಂಡು ಕಾಮಿನಿ ಮನಃಪ್ರಿಯನಂ ರತಿರಾಗವಾರ್ಧಿಯೊಳ್
ತೇಂಕಿದಳಪ್ಪಿಕೊಂಡು ಪುಳಕಾಂಕುರ ಸಂಕುಳದಿಂದೆ ನಲ್ಲನಂ ।
ಕೂಂಕಿದಳೆಯ್ದೆ ಘರ್ಮಜಲದಿಂದಭಿಷೇಕಮನಾಕೆ ಮಾಡಿದಳ್
ಪಂಕಜಲೋಚನಾಂಶುಗಳ ಮಾಲೆಗಳಿಂದಮೆ ಮಾಲೆಸೂಡಿದಳ್ ॥ ೯೫

ಮುಡಿಯಿಸಿದುದಕ್ಕೆ ಮೌನಂ
ಬಿಡೆ ಸೋಂಕಿದುದಕ್ಕೆ ಕಂಪನಂ ಜೂಜಾಟ
ಕ್ಕೊಡರಿಸಿದುದಕ್ಕೆ ಸಖಿಯರ
ಗಡಣಂ ಫಳವಾಯ್ತು ಪತಿಗೆ ಮುಗ್ಧೇಕ್ಷಣೆಯೊಳ್ ॥ ೯೬

ಬೆರಲೊಳ್ ಮುದ್ರಿಕೆಯಂ ತೊಡರ್ಚುವ ಕಪೋಲಸ್ಥಾನದೊಳ್ ಪತ್ರವ
ಲ್ಲರಿಯಂ ಚಿತ್ರಿಪ ಹಾರಮಂ ಪಿಡಿದು ನೋಡ್ವಾಸ್ಯಾಂಬುಜಸ್ಪೇದಮಂ ।
ಕರದಿಂದಂ ತೊಡೆದೊಯ್ಯನುಳ್ಳುಡೆಗೆ ಕಾಂಚೀದಾಮಮಂ ಸಾರ್ಚುವೊ
ಳ್ಗುರುಳಂ ನೇರ್ಪಡೆ ತಿದ್ದುತಿರ್ಪೆಡೆಗೆ ಕೃಷ್ಣಂ ನಲ್ಲಳಂ ಪೊರ್ದಿದಂ ॥ ೯೭

(ಜಗನ್ನಾಥವಿಜಯಂ, ೧೦–೧೩೯.)

---

[1] ತ (ಖ). [2] ಯೆಂ (ಖ). [3] ತೂಂ (ಕ). [4] ಜೂದಾಲ (ಖ). [5] ವೊ (ಅ). [6] ವೀನೆವದ (ಅ).

ನುಡಿಯಿಸಿದೊಡೆ ಬಿಗಿದಿರದೊಡ
ನುಡಿ ಕರೆದೊಡೆ ಕಳಿಯ ತಡೆದಿರಿನಿಸಂ ಕುಡವೇ ।
ಡ್ಡೊಡೆ ವೀಳೆಯಮಂ ತಡೆಯದೆ
ಕುಡೆಂದು ತದ್ಪಧುಗೆ ಬುದ್ಧಿವೇ[1]ಟ್ಪರ್ ಸಖ[1]ಯರ್ ॥ ೯೮

ಎಡೆಗುಡೆ ಸಾರ್ದು ಕೇಳಲೆಳಸುತ್ತಿರೆ ಮಾತಱಿದಾಡಿ ಕೇಳಿಯೊಳ್
ತೊಡ[2]ರ್ದಿರೆ[2] ಸೋಂಕಿ ಮೆಯ್ಯನಿನಿ[3]ಸಪ್ಪೆನೆ[3] ಪಾಂಗಱಿದಪ್ಪಿ ತಾಂ ಮೊಗಂ ।
ಗುಡೆ ಪದವೆತ್ತು ಚುಂಬಿಸಿ ಭಯಂಗೆಯೆ ಬ[4]ಲ್ಸೆಣಸಂ[4] ಪೊದಟ್ಟಿ ನಾ
ಣ್ಗಿಡೆ ನೆರೆ[5]ಮೂಡೆಯಂ[5] ಪ್ರಥಮಸಂಗಮದೊಳ್ [6]ಕುವರಂ ಮರುಳ್ಚಿದಂ[6] ॥ ೯೯

(ಚಂದ್ರಪ್ರಭಪುರಾಣಂ, ೬–೮೨.)

ಒಲವಿಂ ನೋಡುವ ನೋಟದಿಂ [7]ಪದದು[7] ಸೋಂಕುತ್ತಿರ್ಪ ಸೋಂಕಿಂ ಮನಂ
ಗೆಲೆ ಮಾತಾಡುವ ಮಾತಿನಿಂ ಕಳೆದು ಲಜ್ಜಾಸಾಧ್ವಸೋದ್ರೇಕ[8]ಮಂ[8] ।
ಜಲಜಾತಾಕ್ಷನೊಳಾಕೆ [9]ಬಿಚ್ಚತಿಕೆಯಂ[9] ಮಾಡಲ್ ಬಟಿಕ್ಕಂ ಕಳಾ
ನಿಲಯಂ [10]ಕೂ[10]ಡಿದನೊಲ್ದು [11]ಚುಂಬನ[11]ಪರಿಷ್ವಂಗಪ್ರಪಂಚಂಗ[12]ಳಿಂ[12] ॥ ೧೦೦

(ಜಗನ್ನಾಥವಿಜಯಂ, ೧೦–೧೪೦.)

[13]ನ[13]ಸೆಪ ನಸುಲಜ್ಜೆಯಂ ಮಾ
ಣಿಸಿದುದು ಬಾಯ್ಗೂಟದಿಂಪು ಮಣಿತಮು[14]ಖಂ[14] ಮು ।
ಟ್ಟಿಸಿದುದು ಮೆಯ್ಗೋಂಕಿನ [15]ಪ[15]ರ
ವಶಮಱಿವುಮನ[16]ಳಱಿ[16] ತೂಳ್ದಿದುದು ಪೊಸ ಸು[17]ಸಿಲೊ[17]ಳ್ ॥ ೧೦೧

(ಚಂದ್ರಪ್ರಭಪುರಾಣಂ, ೬–೮೩.)

ಕರಕೃಷ್ಟಾಳಕಮುತ್ಪದಾರ್ಪಿತನಖಂ ನಿಷ್ಪೀಡಿತೋಷ್ಠಂ ಸಮ
ತ್ಸರಹಸ್ತಾಹತಿ ಹೂಂಕೃತಾನ್ವಿತ ಪದಾಘಾತಂ ಯದೃಚ್ಛಾವಚಃ ।
ಸ್ಫುರಣಂ ಸಭ್ರುಕುಟೀಕ್ಷಣಂ ದೃಢಪರಿಷ್ವಂಗಂ ವಿಮುಕ್ತಾಂಗಸಂ
ವರಣಂ ಕೈತವವೃತ್ತಮೇಂ ನೆಗಬ್ದುದೋ ಸಂಭೋಗಕೋಳಾಹಳಂ ॥ ೧೦೨

(ಜಗನ್ನಾಥವಿಜಯಂ, ೧೧–೫೭.)

ಸರ[19]ಜಾಕ್ಷನೊಳಿತ್ತುದಾ ಸತಿಯ ಸಂಭೋಗಂ ಸನ್ಮತ್ಯ[18]ತ್ಕು[18]ಚಂ
ಸ[19]ರ[19]ವತ್ಕಾಂಚಿ ಸಚುಂಬನಂ ಸಪರಿರಂಭಂ ಸಪ್ರಹಾರಂ ಸನಿ ।

---

[1] ಳ್ದರ್ಸತಿ (ಖ). [2] ರ್ದೊಡೆ (ಖ). [3] ತೊಪ್ಪಿಸೆ (ಅ). [4] ಲ್ವೆಣಸಂ (ಅ). [5] ದಾಡಿಯುಂ (ಖ). [6] ಸುಖಮಂಮಗುಳ್ಚಿದಳ್ (ಖ). [7] ಪಿಡಿದು (ಕ.ಖ.ಬ). [9] ದಿಂ (ಖ). [9] ಪಚ್ಚಳಿಕೆಯಂ (ಖ). [10] ಮಾ (ಅ). [11] ಕೂಡಿದ (ಖ). [12] ಳಂ (ಅ). [13] ಮ (ಅ). [14] ಮಂ (ಅ). [15] ಹ (ಅ). [16] ರರೆ (ಅ). [17] ಯ್ಗ (ಖ). [18] ತ್ಕ (ಖ). [19] ರು (ಅ).

ರ್ಭರವಕ್ಕ್ರಶ್ವಸಿತಂ ಸಲೀ[1]ನ[1]ಮತಿ ಸಸ್ನೇಹಂ ಸರೋವೋದ್ಗಮಂ
ಸರಸಾಂಗಂ ಸನಿಮಿಾಲಿತಂ ಸಸಮಪಾತಂ ಸೌಖ್ಯಸಂಪತ್ತಿ[2]ಯಂ[2] ॥ ೧೦೩
(ಜಗನ್ನಾಥವಿಜಯಂ, ೧೧–೫೯.)

ಚುಂಬನಮೊರ್ಮೆಗೊರ್ಮೆ [3]ಸವಿ[3]ವೆಚ್ಚುವುದಪ್ಪಿರದೊರ್ಮೆಗೊರ್ಮೆ ಮ
ತ್ತಂ ಬಿ[4]ಗು[4]ಹೇಱುತಿರ್ಪುದು ವಿಳಾಸದ [5]ಕ್ಕೈತವಮೊ[5]ರ್ಮೆಗೊರ್ಮೆ [6]ಬೇ ।
ಗಂ[6] ಬಗೆಯಂ ಮರುಳ್ಚುವುದು [7]ನು[7]ಣ್ಣುಡಿಯಂ ಕಿವಿಗೊರ್ಮೆಗೊರ್ಮೆ ಸೋ
ಲಂಬಡೆಯುತ್ತ ಮಿರ್ಪುದವ[8]ರ್ಗ[8]ಳ್ಗವ[8]ಕಾಶಮದುಂಟೆ ಬೇಱದೊಳ್ ॥ ೧೦೪
(ಚಂದ್ರಪ್ರಭಪುರಾಣಂ, ೬–೮೪.)

ಅವಲುಪ್ತಾಂಗವಿಲೇಪನಂ ಚ್ಯುತಲಲಾಮಂ [9]ಸ್ರಸ್ತ[9]ಮಾಲಾಳಿ ವ
ಕ್ರವತಂಸಂ ಶ್ಲಥಮೇಖಲಂ ಶ್ರುತಿತಹಾರಂ ಮುಕ್ತಮಂಜೀರಕಂ ।
ಪ್ರವಿಕೀರ್ಣಾಳಕವಸ್ತ್ರಬಂಧಕಬರೀ[10]ಶೃಂಗಾರ[10]ಮಾರಕ್ತನೇ
ತ್ರವರಾಗಾಧರವಾಯ್ತು ಕಾಮಕಲಹಂ ಸತ್ರಾಜಿತಾದೇವಿಯಾ ॥ ೧೦೫
(ಜಗನ್ನಾಥವಿಜಯಂ, ೧೧–೫೮.)

ಅನವರತಂ ರತೋತ್ಸವದೊಳುಣ್ಮವ ಘರ್ಮಜಲಂಗಳಿಂದೆ ಮ
ಜ್ಜನಮನತಿಪ್ರಿಯಾಧರಸುಧಾರಸಸೇವನೆಯಿಂದಮೂಟಮಂ ।
ಮನದಱಿಪಂ ಕಬಲ್ಚುವ ರತಾಂತಸುಖೋದಯದಿಂದೆ ನಿದ್ರೆಯಂ
ನೆನೆಯದೆ ಪೋದುವಂತವರ್ಗೆ ಚಿತ್ತ ಜಕೇಳಿಗಳಿಂದೆ ಪೊಬ್ತುಗಳ್ ॥ ೧೦೬
(ಚಂದ್ರಪ್ರಭಪುರಾಣಂ, ೬–೮೫.)

ಅನುದಿನಮಿಂತು ಕಾಮಸುಖದಿಂದನುರಾಗಮ[11]ನುಂಟುಮಾಡಿತ
ದ್ವ[11]ನಿತೆಗೆ ರಕ್ಷಣಕ್ಷಮತೆಯಿಂ[12]ದತಿಹರ್ಷಮನಿತ್ತು [12]ವಿಶ್ವಮೇ ।
ದಿನಿಗೆ ಮಹತ್ವದಿಂ ಜನಮನಾಗಿಸಿ ಯಾದವಸಂಕುಳಕ್ಕೆ ಪೆಂ
ಪನು[13]ಪಮಮಾಗಿರಲ್[13] ಸುಖದಿನಿರ್ದನಚಿಂತ್ಯಬಲಂ [11]ಮುರಾಂತಕಂ[14] ॥ ೧೦೭
(ಜಗನ್ನಾಥವಿಜಯಂ, ೧೦–೧೪೩.)

ಪ್ರೌಢಮ[15]ಡುವ[15]ಪ್ಪಿಕೊಳ್ವ ನೆನೆಯುತ್ತಿರಿಮೆಂಬ ಸಮಸ್ತವಸ್ತುವಂ
ಕುಡುವ ಪಲರ್ಮೆಯಿಂ ಪರಸಿ ಸೇನೆಯನಿಕ್ಕುವ ಬುದ್ಧಿವೇಳ್ವ ಕೈ ।

---

[1] ಲ (ಅ). [2] ಯಿಂ (ಖ). [3] ತನಿ (ಅ). [4] ಸು (ಖ). [5] ಗೆಯ್ತಮದೊ (ಅ). [6] ಗಿಂಪಿಂ (ಅ). [7] ನಾ (ಕ.ಖ). [8] ಚಕ್ಕವ (ಖ.ಬ). [9] ವ್ಯಸ್ತ (ಕ), ತ್ರಸ್ತ (ಖ). [10] ಚ್ಛನ್ನಾಂಗ (ಅ), ಶ್ವಾಸಾಂಗ (ಖ). [11] ನಿತ್ತುರುಕ್ಮಿಣೀ (ಅ). [12] ಪತಿ ಹರ್ಷಮನುಂಟುಮಾಡಿ (ಅ). [13] ಗುಣಮಾಗಿರಲ್ (ಅ). [14] ಬಲಾನುಜಂ (ಅ). [15] ಡಲ (ಖ.ಬ).

ಯೆಡೆ ನಿಮಗೆಂದೊಡಂಬಡಿ[1]ಪ[1] ನಲ್ಲರಗಲ್ಕೆಗೆ ಕಣ್ಣನೀರ್ಗಳಂ
[2]ಮಿ[2]ಡಿವ ಬಹುಪ್ರಕಾರಜನನಸಂಕಟಮೊಪ್ಪಿದುದಾ ಪ್ರಯಾಣದೊಳ್ ॥ ೧೦೮

(ಆದಿಪುರಾಣಂ, ೪–೫೭.)

ಮನಮಱಿದಂಜಿ ಬೆರ್ಚಿ ಬೆಸಕೆಯ್ ನಿಜವಲ್ಲಭನೇನನೆಂದೊಡಂ
ಕಿನಿಸದಿರೊಂದಿದಗ್ರಮಹಿಷೀಪದದಲ್ಲಿ ಪದಸ್ಥೆಯಾಗು ನಂ ।
ದನರನಗಣ್ಯಪುಣ್ಯಧನರಂ ಪಡೆಯೆಂದಮರ್ದಪ್ಪಿಕೊಂಡು ತ
ತ್ತನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ ॥ ೧೦೯

(ಆದಿಪುರಾಣಂ, ೪–೫೬.)

ಪದವಿನ್ಯಾಸದ ದೇಸೆ ಮಾರ್ಗದ ವಿಲಾಸಂ ರೂಢಿವೆತ್ತಂಗಹಾ
ರದಲಂಕಾರದ ಬಂಧ ಭಾವದೆಸಕಂ ಮೆಲ್ವಾಡಿನೊಳ್ಪಂತೆ ಕೂ ।
ಡಿದ ನಾನಾರಸಸಾರದಾನಮೆಸೆದತ್ತೆಂದೊಲ್ದು ಕೈಕೊಂಡು ಮೆ
ಚ್ಚಿದನಾ ಸೂಕ್ತಿಸುಧಾರ್ಣವಾಹ್ವಕೃತಿಪಾತ್ರಶ್ರೀಗೆ ಸೋಮೇಶ್ವರಂ ॥ ೧೧೦

ಓರಂತೆ ಮೆಚ್ಚಿದಂ ಕೃತಿ
ಸಾರಂ ಮೈವಾಹವರ್ಣನಕ್ಕಂಗಜನಾ ।
ಕಾರಂ ಹೊಯ್ಸಳವಂಶೋ
ದ್ಧಾರಂ ಸರ್ವಜ್ಞಚಕ್ರಿ ಸೋಮನೃಪಾಲಂ ॥ ೧೧೧

ಇದು ಸರಸ್ವತೀಸವರ್ಣಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ಷ್ಟಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತ್ಯ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ವಿವಾಹವರ್ಣನಂ ಷಷ್ಠಾಶ್ವಾಸಂ ಸಂಪೂರ್ಣಂ.

---

[1] ಸಿ (ಕ.ಖ). [2] ಸಿ (ಕ.ಖ).

ಕುಮಾರೋದಯವರ್ಣನಂ

ತನುಭವಲಾಭ ದೌಹದನಿಮಿತ್ತದ ಸಂಗತಿ [1]ತಕ್ಕ[1] ನೋಂಪಿ ಮುಂ
ಗನನು ಬಯಕ್ಕೆ [2]ಗೆಂಟುಗೆ[2] ದೃಗುತ್ಸವಕಾರಣಗರ್ಭಚಿಹ್ನಮೊ.।
ಳ್ಪಿನ ದಿವಸಂ ಶುಭೋದಯಮಿಳಾದಿಮನೋಹರಭೂತಲಕ್ಷಣಂ
ಜನನುತ ಜಾತಕರ್ಮಮಿನಿತುಂ ಸುತಶೋಭನವರ್ಣನಸ್ಥಳಂ ॥ ೧

ಪಡೆದರುದಗ್ರಮಪ್ಪ ಕುಲಮಂ ಪಡೆದಂತಿರೆ ರೂಪು ಮೂರ್ತಿಯಂ
ಪಡೆದವರಂ ಸಮಂತು ಪಡೆದಂತು ಸಮಾನಮೆನಿಪ್ಪ ನಲ್ಮೆಯಂ ।
ಪಡೆದ[3]ರಿ[3]ಳೀಶನಂ ಪಡೆವುದಿಂ ಪೆಱತಾವುದೊ ಮತ್ತೆ ಮಕ್ಕಳಂ
ಪಡೆದೊಡೆ ಸಾಲ್ಗು ಮೆಂದವರೊಳಟ್ಕುಱಿನಾಳ್ದುದು ಬಂಧುಸಂಕುಲಂ ॥ ೨

ಲಲನಾಮಂಜೀರನಾದಕ್ಕೆಳಸುವ ಕಳಹಂಸಂಗಳಂ ಕಂಡು ಬೆಂಬೆ
ನ್ನೊಳೆ ನೀಡುಂ ಪೋಪ [4]ಸುತ್ತಂ[4] ಭವನಹರಿಣಶಾಬಂಗಳೆಟ್ಟಿಂದು ಚಂದ್ರೋ ।
ಪಲಭಿತ್ತಿಪ್ರಾಂತದೊಳ್ ಮಾರ್ಪೊಳೆಯಲೆನಗಿವಂ ತಂದು ನೀನೀವುದೆಂದಾ
ಗಳುಮಾದಂ ದಾದಿಗಾಯಾಸಮನೊ[5]ಡರಿ[5]ಪ ಮುಗ್ಧಾತ್ಮಜಂಗೆಂದು ತೋರ್ಕುಂ॥
(ಕಾದಂಬರಿ, ಪೂ.ಭಾ. ; ೩೫೮.)

ಅರಿಸಿನದಂಚೆಯಂ ಪೊದಿಸಿ ಪೊಕ್ಕುಟನೆಣ್ಣೆಯ [6]ಸೋಗಿಲೊಳ್[6] ಮರ
ಲ್ದಿರಿಸಿ ಲಲಾಟದೊಳ್ ತಿಲಕಮಂ ಸೊಡರ್ವಕ್ಕಿನೊಳಿಟ್ಟು ಮುದ್ದುಸೀ ।
ವರಮೆರ[7]ಡುಣ್ಮೆ[7] ಕಣ್ದೆಱೆಯದರ್ಭಕನಂ ನಡೆ ನೋಡಿ ನೋಡಿ ಪಾ
ಲ್ತೊರೆದ ಕುಚಂಗಳಂ ಬಿಡವೆ ಸೂಸುವ [8]ಸ್ಯೆಪ್[8]ಪಿನಗೆಂದು ಸಾರ್ಗುಮೊ ॥ ೪
(ಮಲ್ಲಿನಾಥಪುರಾಣಂ, ೩–೧೧೩.)

ಬಾರೆಲೆ ತಂದೆ ಬಾರರಸ ಬಾ ಪೊರೆವಾಳ್ದನೆ ಬಾರೆನುತ್ತ ವಿ
ಸ್ತಾರಿತ ದೀರ್ಘಬಾಹುಯುಗಳಂ ಪರಮೋತ್ಸವದಿಂದಶೇಷಧಾ ।
ತ್ರೀರಮಣಂ ಮರಲ್ದು ಕರೆಯಲ್ [9]ತನಯಂ[9] ಮಣಿಭೂಷಣಾಂಶುವಿ
ಸ್ತಾರಿತನೇತ್ರನೆಂದು ಸುಟಿದಪ್ಪನೊ ಮುಂದೆ ಸಭಾಂತರಾಳದೊಳ್ ॥ ೫
(ಕಾದಂಬರಿ, ಪೂ.ಭಾ. ; ೩೬೧.)

---

[1] ಕಕ್ಕೆ (ಖ.ಬ). [2] ಗೌಂಟಿಗೆ (ಖ.ಬ). [3] ವಿ (ಖ.ಬ). [4] ಕಾಂತಾ (ಅ).
[5] ದವಿ (ಕ). [6] ಸೋಂಕಿನೊಳ್ (ಖ) [7] ದೆಣ್ಣೆ (ಕ). [8] ಸುಯ್ಯೆ (ಕ).

ಪಸಿದಬುತಿರ್ಪ ಬಾಲಕನ ನಾದಮನಾಲಿಸಿ [1]ಗೇ[1]ಹಕೃತ್ಯನುಂ
ಬಿಸುಟತಿವೇಗದಿಂ ಪರಿದು ಸೋಗಿಲೊಳಡ್ಡಮಿಟ್ಟು ಚಿ ।
ಮ್ಮಿಸಿ ಮೊಲೆವಾಲ್ಗಳಂ ದೆಸೆಗೆ ನೋಡದೆ ವಕ್ತ್ರಮನೊಂದಿ [2]ಚೆಲ್ಲದಿಂ[2]
ಮಸಗದೆ ಸಾರ್ಚಿ ಸಾರ್ಚಿ ಮೊಲೆಯೂಡುವ ಸ್ನೆಹನಗೆಂದು ಸಾರ್ವುದೊ ॥ ೬

ಮದಲೇಖಾಮಂಡನಂ ಕಣ್ಗೊಳಿಸೆ ಕದಪಿನೊಳ್ ನೀಳ್ದ ಕಸ್ತೂರಿಕಾಪಂ
ಕದಿನಂಗುಲ್ಯಂಕುಶಾಕರ್ಷಣ[3]ವಿಧುರಶಿರಂ ರಾಗದಿಂದೆತ್ತಿ[3] ಕಯ್ಯಿಂ ।
ಕೆದಬುತ್ತುಂ ಧೂಳಿಯಂ ಪ್ರೀತಿಯನೊದವಿಪ [4]ರಾಗೋ[4]ಚ್ಚಲಡ್ಡಿಂಡಿಮಧ್ವಾ
ನದಿನೆಂದೋ ಮುಂದೆ ಮನ್ನಂದನನೆಸೆವ [5]ಗಜ[5]ಕ್ರೀಡೆ[6]ಯಿಂದಾಡುತಿರ್ಪಂ[6] ॥ ೭

(ಕಾದಂಬರಿ, ಪೂ.ಭಾ. ; ೩೫೯.)

ಇನಬಿಂಬಂ ಕಣ್ಗಳುಂಬಂ ತೊಳಗಿ ಬೆಳಗೆ ಬಾಲಾತಪಂ ಸುತ್ತಲುಂ ಕಂ
ಪಿನ ಸೊಂಪಂ ಬೀಱಿ ಕಣ್ಗಿಟ್ಟಳವೆನಿಪ ನಭೋಲಕ್ಷ್ಮಿ[7]ಯಂತೆಂದು ಪುಟ್ಟ ।
ಲ್ಕಿನಿಯಳ್ಗಾ[7] ನಂದನಂ ಕಣ್ಗೊಳಿಸುತಿರೆ ಹರಿದ್ರಾಂಬರಾಲಿಂಗಿತಾಂಗಂ
ತನಗೊಪ್ಪಲ್ಕೆಂದು ಮದ್ವಲ್ಲಭೆ ಮನಕೆ ಮಹೋತ್ಸಾಹವಂ ಮಾಡಿದಪ್ಪಳ್ ॥ ೮

(ಕಾದಂಬರಿ, ಪೂ.ಭಾ. ; ೩೫೪.)

[8]ಪನೆಗಳ್ ತಾಳ್ದಿದ[8] ಮಂದಹಾಸರುಚಿ ಮುದ್ದಂ ನಾಡೆಯುಂ ಬೀಱಿ ವ
ಕ್ಷನಯಂ ರಂಜಿತಮಾಲೆ ರಕ್ಕೆವಣಿಗಳ್ ಚೆಲ್ವಾಗೆ ವಿನ್ತಾರಲೋ ।
ಚನಯುಗ್ಮಂ ಮಿಸುಗಲ್ ಮರಲ್ದೆಸೆಯೆ ತೂಗುಂದೊಟ್ಟಿಲೊಳ್ ಪಟ್ಟ ಪು
ತ್ರನ ವಕ್ತ್ರೇಂದುವನಂಜನಾಂಕಿತಮನಾನಿನ್ನೆಂದು ಪೇೞ್ ಕಾಣ್ಬೆನೋ ॥ ೯

ಮುದಮುರ್ವೀಶಂಗೆ ಹರ್ಷಂ ಸಕಲಪರಿಜನಕ್ಕುತ್ಸವಂ ಬಂಧುಗಳ್ಗ
ಭ್ಯುದಯಂ ವಂಶಕ್ಕೆ ಚಿಂತಾಭರವಖಿಳ ಸಪತ್ನೀಜನಕ್ಕುಮ್ಮಳಂ ದು ।
ರ್ಮದ ವೀರಾರಾತಿವರ್ಗಕ್ಕಖಿಲಪಿತಫಲಂ ವಿಶ್ವಧಾತ್ರೀಜನಕ್ಕಾ
ದುದೆನಲ್ ಸತ್ಪುತ್ರನಂ [9]ತಾಂ[9] ಪಡೆಯದದು ವೃಥಾಯಾನಮಿಾ [10]ಸ್ತ್ರೀ[10]ವಿಳಾಸಂ ॥

(ಮಲ್ಲಿನಾಥಪುರಾಣಂ, ೩–೧೦೮.)

ಕುರುಳ ಮದಾಳಿಮಾಳಿಕೆಗದೇಕೊಳಗಾಗವು ಚಿನ್ನಪೂ ಮುಖಾಂ
ಬುರುಹದಿನೇಕೆ ನೂಸದು ಲತಾಂಗಿ ವಚೋಮಕರಂದಮಂಗುಲಿ ।

---

[1] ದೆ (ಖ.ಬ). [2] ಚಿತ್ತದಿಂ (ಕ). [3] ಮಮರೆಶಿರಂದೂಗುತಂತೆತ್ತಿ (ಅ). [4] ಗಂಡೋ (ಅ), ಚಂಚ (ಕ). [5] ಜಗ (ಖ.ಬ). [6] ಯೆಂದಾಡಿದಪ್ಪಂ (ಖ.ಬ), ಯಂಮಾಡಿದಪ್ಪಂ (ಕ). [7] ಯೆಂಬಂತಿರುತ್ಸಂಗನಿಷಣ್ಣಂ (ಅ). [8] ಮನೆಗಳ್‌ತಾರಿದ (ಕ). [9] ಪೊ (ಅ). [10] ಶ್ರೀ (ಕ.ಅ).

ಸ್ಮರಶರಮಂಗುಲೀಯಮಣಿರಶ್ಮಿಗಳಿಂ ಗಱುಗಟ್ಟುವೇಕೆ ಪೀ
ವರಕುಚಕೋಕಮೇಕೆಳಸಲೊಲ್ಲವು [1]ಬಾಲ[1]ಮೃಣಾಳನಾಳಮಂ ॥ ೧೧
(ಅನಂತನಾಥಪುರಾಣಂ, ೧೨–೫೮.)

ಪದೆದಮರ್ದಪ್ಪಿಕೊಂಡು ಬಿಗಿಯಪ್ಪಿ ತನೂಜನ ಮೆಯ್ಯ ಧೂಳಿ ಪ
ತ್ತದ ನಳಿತೋಳ್ಗಳೇಕೆ ಮೊಲೆಯುಣ್ಬ ಕುಮಾರನ ಕಣ್ಣ ಕಜ್ಜಳಂ ।
ಪುದಿಯದುರೋಜಮೇಕೆ ಪರಿಚುಂಬಿಸೆ ಕಂದನ ಕೈ ತೊಡಂ[2]ಕಿ[2] ನೂ
ನದ ಕುರುಳೇಕೆ ಬೇಱೆ ಪೊಱೆಯೇಕವಱಿಂ ಕುಲವೆಣ್ಗೆ ಲೋಕದೊಳ್ ॥ ೧೨
(ಅನಂತನಾಥಪುರಾಣಂ, ೧೨–೪೯.)

ಮಗನಂ ತೊಟ್ಟಿಲೊಳಿಟ್ಟು ತೂಗಿ ನಲವಿಂದಂ ಜೋಗುಳಂಬಾಡಿ ಮೆ
ಲ್ನಗೆಯಿಂ ಮುದ್ದುಮೊಗಂ ತುಳುಂಕೆ ಪರಸುತ್ತುಂ ನೋಡಿ ಬಾ ದೇವ ಬಾ ।
ಜಗತೀವಲ್ಲಭ ಬಾರ ಮಾಣಿಕಮೆ ಬಾರೆನ್ನಾನೆಯೆಂದೆತ್ತಿ ಮೆ
ಯ್ದೆಗೆವನ್ನಂ ಮೊಲೆಯೂಡಿ ತೂಪಿಱಿವ ಸ್ಯೈಪೇಂ ನೋನೆನದಳ್ಕ್ಕುಮೇ ॥ ೧೩
(ಅನಂತನಾಥಪುರಾಣಂ, ೧೨–೫೦.)

ಅರಸನ ಕರತಳಲೀಲಾ
ಸರೋಜಮಂ ಬೇಡೆ ಕುಡದೊ[3]ಡೀಸಿಕುಡಲ್ಕಾ[3] ।
ತುರಿಸಿ ಪಿಡಿದೆನ್ನ ತೋಳಂ
ಬರೆತೆಗೆವ ಕುಮಾರನೆಂದು ತೊಡೆಯೇಱಿದಪಂ ॥ ೧೪
(ಅನಂತನಾಥಪುರಾಣಂ, ೧೨–೫೧)

ಸಂಗಳಿಸಿದ ಕಿಱುಜಡೆಗಳ
ತೊಂಗಲ್ಗಳಿನೊಪ್ಪೆ [4]ಜಾನುಸಂ[4]ಕ್ರಮಣಂ ಹ ।
ರ್ಮ್ಯಾಂಗಣದೊಳೆಂದು ನುಡಿಗುಮೊ
ಸಿಂಗದ ಮಱಿಯಂತಿ[5]ರೊಗೆ[5]ದು ತೋರ್ಪ ಕುಮಾರಂ ॥ ೧೫
(ಕಾದಂಬರಿ, ಪೂ.ಭಾ. ; ೩೫೭.)

ತ[6]ಳ್[6]ರಡಿಯಿಡುತಂ ಕುಟ್ಟಿಮ
ತಳದೊಳ್ ಮಾರ್ಪೊಳೆಯುತಿರೆ ನಿಜಪ್ರತಿಬಿಂಬಂ ।
ಗಳನೀಕ್ಷಿ[7]ಸಿ ಕೌತುಕಸಂ[7]
ಚಳನಯನಂ ತನಯನೆಂದು ಬಟಿಸಂದಪನೋ ॥ ೧೬
(ಕಾದಂಬರಿ, ಪೂ.ಭಾ. ; ೩೬೦.)

---

[1] ಹಾರ (ಅ). [2] ಕೆ (ಅ). [3] ಡಿನಿಯಂಕುಡಲಾ (ಅ), ಡಿನಿಯಂಬಿಡದಾ (ಖ.ಬ). [4] ಜಾನುಚಂ (ಅ). [5] ರೆನೆ (ಅ). [6] ಳಿ (ಕ.ಖ.ಬ). [7] ನುತಿರೆಕೌತುಕ (ಅ).

ಎಳವೆಱೆ ಬೆಳೆಯದ ಗಗನ
ಸ್ಥಳಿ ಸಸಿ ಬೆಳೆಯದ ಧರಿತ್ರಿ ಮೌಕ್ತಿಕರತ್ನಂ ।
ಬೆಳೆಯದ [1]ಶುಕ್ತಿಕೆ[1] ಗರ್ಭಂ
ಬೆಳೆಯದ ಬಾಲಕಿಯ [2]ಬಸಿಱಿನರ್ಥಕಮಲ್ತೆ[2] ॥ ೧೭

(ಮಲ್ಲಿನಾಥಪುರಾಣಂ, ೩–೧೧೦.)

ಪೊರೆದು ಪೊದಪ್ಪು ಧೂಳಿವೆರಸಂಗಭವಂ ನಲಿವಾಡದಂಗಣಂ
ಪೊರಳದ ಸೋಗಿಲುಣ್ಣದ ಕುಚಂ ನಡೆ ನೋಡದ ವಕ್ತ್ರಮಟ್ಕಿಱಿಂ ।
ತೊರೆದೊಡನೆಚ್ಚು ಪಾಯ್ವ ಮೊಲೆವಾಲೊಳೆ ನಾನದ ಮೇಲ್ಗುದೆಂತುಮೊ
ಪ್ಪಿರದಿನಿತರ್ಕೆ ಮುನ್ನ ನೆಱೆ ನೋನದರೀಗಳಟಲ್ದಡಕ್ಕುಮೇ ॥* ೧೮

ಮೊಗಮಂ ನೋಡುವ ಲಲ್ಲೆಗೆಯ್ವ ಮೊಲೆಯುಂಡಬ್ಬಟ್ಟ ಜಾಜಿಂಬ ಕೆ
ಮ್ಮಗೆ ಕಾಲ್ವತ್ತುವ ದೂರದಿಂ ಪರಿದು ಬಂದಪ್ಪಪ್ಪೆನುತ್ತಪ್ಪುವೊ ।
ಯ್ಯಗೆ ಚೆಯ್ಯಾಡುವ ಮೇಲುದಂ ಮುಸುಕಿಡುತ್ತಾಯೆಂಬ ದಾಯಂಬ ಮು
ದ್ದುಗಳಂ ತೋಱುವ ಚಿಣ್ಣನೊಳ್ ನಲಿವ ಪೆಣ್ಣೀಂ ನೋಂಪಿಯಂ ನೋಂತಳೋ ॥*

(ಜಗನ್ನಾಥವಿಜಯಂ, ೨–೬೭.)

ಕಳಹಂಸಂ ಸುಟಿಯದ ಪೂ
ಗೊಳನಮೃತಮರೀಚಿ ಬೆಳಗದಂಬರಚಕ್ರಂ ।
ಕಳಭಂ ಸಂಚರಿಸದ ವನ
ವಳಯಂ ಸುತರಾಡದಂಗಣಂ ರಂಜಿಕುಮೇ ॥* ೨೦

ಕರೆವ ಸರಮಱಿದು ಕಣ್ಮಲ
ರರಳೆ ನಿರೀಕ್ಷಿಸುವ ಬಾಲನೆಂದಾದತ್ತೋ ।
ಅರಸಾರದೆಂಬ ಮುದ್ದಿಂ
ಮರುಳಾಗದ [3]ಹೆಣ್ಣ[3] ಮರುಳಿಳಾಮಂಡಲದೊಳ್ ॥ ೨೧

ಅರಸನುಮಾನುಂ ಕೈಗೊ
ಟ್ಟಿರೆ ದಟ್ಟಡಿಯಿಡುತೆ ಮತ್ತೆ ಮಣಿಕುಟ್ಟಿಮದೊಳ್ ।
[4]ಬರೆ ಪಿಂದೆ ನಿಲಿಸಲೊಲ್ಲದೆ[4]
ಮುರಿದೆತ್ತಿಸಿಕೊಳ್ವ ಕಂದನೆಂದಾದಪನೊ ॥ ೨೨

(ಅನಂತನಾಥಪುರಾಣಂ, ೧೨–೫೪.)

---

[1] ಸೂಕ್ತಿಗೆ (ಖ.ಬ). [2] ಬಸಱು ವ್ಯರ್ಥಮದಲ್ತೆ (ಕ.ಖ.ಬ). * ಈ ಪದ್ಯಗಳು (ಕ) ಪ್ರತಿಯಲ್ಲಿಲ್ಲ. [3] ಹೆಣ್ಣು (ಕ). [4] ಪರಸದೆನಪೊಲ್ಲಿದೆನ್ನಿಂ (ಕ), ಪರಪಿದೆನೆಲೊಲ್ಲದೆನ್ನಿಂ (ಖ.ಬ).

ಉದಯಾದ್ರಿಶಿಖರದೊಳ್ ಬಾ
ಲದಿವಾಕರ[1]ನೆಂತು ಬರ್ಪನಂತಾ ಕರಿಕುಂ[1] ।
ಭದ ಮೇಲೆ ಬರ್ಪನಂ ಪರಿ
ದಿದಿರ್ಗೊಂಡಣುಗನನದೆಂದು ನಿವಳಿಸಿದಪೆನೋ ॥ ೨೩

(ಅನಂತನಾಥಪುರಾಣಂ, ೧೨-೫೩.)

ಅಮರಿಯರಿಂದ್ರಲೋಕದ ರಸಾಯನವರ್ಗದೆ ಗರ್ಭಶೋಧನ
ಕ್ರಮಮನೊಡರ್ಚಿ ಕಾಂತೆ ಕುಸುಮಾಸ್ತ್ರನ ಸಾಯಕಲಕ್ಷ್ಮಿಯಂತೆ ಲೋ ।
ಕಮ[2]ನೆರ್ದೆ[2]ಗೊಳ್ವ ಚಂದ್ರಿಕೆಗೆ [3]ಕಣ್ಮಡಿ ತೋಳ್ ಮೊಲೆ[3] ಮೂಡಿದಂತೆ ಮು
ತ್ತಮ್ಮ ತಜಲಂಗಳಿಂ ತೊಳೆದ ಮುತ್ತಿನ ಪುತ್ತಳಿಯಂತೆ ತೋಱಿದಳ್ ॥ ೨೪

(ಅನಂತನಾಥಪುರಾಣಂ, ೪-೯೨.)

ಪಾಯ್ವ ಕುಚಂಗಳಂ ಪಿಡಿದು ನೋಡಿ ಕವುಂಕಳನೆತ್ತಿ ಕಂಪನಾ
ರಯ್ವು[4]ದು[4]ಮೊತ್ತುತುಂ ಮೊಡವಿಯಂ ಮೊಗಮಂ ಮೃಗನೇತ್ರ ದರ್ಪಣ ।
ಕ್ಕೊಯ್ವುದುಮೆಲ್ಲಮಂ ಕಳೆದು ಮಾಣಿಕಮಂ ಪೊಸಪೊಂಗಳಿಂದೆ ಕಯ್
ಗೆಯ್ವುದುಮಾಕೆ ಕೈಗೆ ಸೆಳೆಯಂ ಸಖಿ ಕೊಟ್ಟಳದೇಂ ಪ್ರಗಲ್ಭೆಯೋ ॥ ೨೫

(ಲೀಲಾವತಿ, ೭-೫೦ ; ನೇಮಿನಾಥಪುರಾಣಂ, ೨-೧೦.)

ಸೊಗಯಿಸಿದತ್ತು ಕಾಮಿನಿಗೆ ಮಾಣಿಕ ಗೆಂಟಱೊಳುಟ್ಟ ಮೇಘವ
ರ್ಣಿಗೆ ಪಿಡಿದಿರ್ದ ಸಣ್ಣ ಸೆಳೆ ಮಾಸಿದ ಕುಂತಳಮಾಲೆ ಮೊಕ್ಕಳಂ ।
ಬಿಗಿದ ಘನಸ್ತನಂ ತಿಮಿರ್ದ ಕುಂಕುಮಮಿಕ್ಕಿದ ತೆಂಗಿನೋಲೆ ಕೆಂ
ಪೊಗೆದಲರ್ಗಣ್ಗಳಾಗುಳಿಪ ಮೂರಿ ತಗುಳ್ಚಿದ ಭೂರಿಕಂಕಣಂ ॥ ೨೬

ಕರೆದುದು ಕಣ್ಣ ಬೆಳ್ಪನಧರಂ ಕುರುಳೋಳಿಗೆ ಸುರ್ಕಿನೋಲಗಂ
ಪರೆದುದು ಬೆನ್ನಮೇಲೆ ಮುಡಿ ಬಿರ್ದಿನನಾದುದು ನೀಳ್ದ ಕಣ್ಗಳೊಳ್ ।
ಪೊರೆದುದು ಸಾಂದ್ರರಾಗರುಚಿ ಕಾಮಿನಿ ಮಾವೆಡೆಯೊಳ್ ತೆರಳ್ದ ನಿ
ರ್ಝರವೆಡವಿತ್ತು ಬಾಯ್ದೆರೆ ಕುಚಂ ವಳಿಯೆಂಬೆಡೆಯೊಳ್ ನಿರಂತರಂ । ೨೭

ಎಳೆಮಿಂಚಿಂಗೊಪ್ಪವಿಟ್ಟಂತಮರ್ದಿನ ಕಳೆ ರೂಪಾಂತುದೆಂಬಂತೆ ಮುತ್ತಂ
ತೊಳೆದಿಟ್ಟಂತಂಗಜಾತಂ ಮಸೆದು ಪಿಡಿದ ಕೂರ್ವಾಳಿದೆಂಬಂತೆ ಢಾಳಂ ।
ಬೊಳೆಯುತ್ತುಂ ಸುತ್ತಲುಂ ನೋಟ್ಪರ ಬಗೆಗೆ ಭಯಂ ಪೊಣ್ಮೆ ತಳ್ಪೊಯ್ಯಲಾ ಕೋ
ಮಳೆ [5]ಚೆಲ್ವಿಂದೊಪ್ಪಿ[5] ಬರ್ಪಂಗಜನ ಗಜ[6]ಮೆನಲ್ ಕಾಂತೆ[6] ಕಣ್ಗೆಡ್ಡಮಾದಳ್ ॥೨೮

---

[1] ನಂತೆ ತೋರ್ಪನಂಕದೊಳಿಭಕುಂ ಅ). [2] ನೆಡೆ (ಕ.ಖ.ಬ). [3] ಸೋರ್ಮುಡಿ ತೋರ್ಮೊಲೆ (ಅ). [4] ತು (ಅ). [5] ಬಂದಪ್ಪಿ (ಕ). [6] ದವೊಲ್ ನಾಡೆ (ಖ.ಬ).

ತನು ತನುವಾಗಿ ತೋಱುತಿರೆ ಮುತ್ತಿನ ಮೂಕುತಿ ಮುತ್ತಿನೋಲೆ ಮು
ತ್ತಿನ ತಿಸರಂ ತೆಱಂಬೊಳೆವ ಮುತ್ತಿನ ಲಂಬಳ ಪತ್ತು ವೆತ್ತ ಮು ।
ತ್ತಿನ ನಿಗಳಂ ದುಕೂಲದುಡೆ ಮಲ್ಲಿಗೆ ಚಂದನದಣ್ಪು ಸಿಂಹಪಾ
ಲನನೊಸೆದಾಳ್ದ ಬೆಳ್ವಸದನಂ ಬಗೆಗೊಂಡುದು ಚಂಡವೇಗೆಯಾ ॥ ೨೯

ಮಿಸುಪ ದುಕೂಲ[1]ದುಳ್ಳುಡುಗೆ ಚಂದನಕರ್ದಮ[1]ದಣ್ಪು ಮಲ್ಲಿಕಾ
ಕುಸುಮಮನಾಂತ ಕುಂತಳಭರಂ ಸುಲಿಪಲ್ಗಳ ಕಾಂತಿಯಿಂ ನೆಳ ।
ರ್ತೆಸೆವಧರಂ ತಳತ್ತಳಿಪ ಮುತ್ತಿನ ಪಚ್ಚಮನಂಗಕೀರ್ತಿಯಂ
ಪಸರಿ[2]ಸೆ ಕೊಂಡ ಬೆಳ್ವಸದನಂ ಬಗೆಗೊಂಡುದು ಕೋಮಲಾಂಗಿಯಾ[2] ॥ ೩೦

(ಜಗನ್ನಾಥವಿಜಯಂ, ೨–೭೧).

ಮಲಯಜದಣ್ಪು ಮಲ್ಲಿಗೆಯ ಸೋರ್ಮುಡಿ ನಿಪ್ಪೊನತಪ್ಪ ಮೌಕ್ತಿಕಂ
[3]ಗಳ ತೊಡವುಟ್ಟ[3] ನಟ್ಟಣಿಗೆ ದಂತಮರೀಚಿಗಳಿಂ ಬೆಳರ್ತ ಬಾಯ್[4] ।
ಪಳಿಕಿನ ಪೆಣ್ಗೆ ಪಾಸಟಿಯೆನಿಪ್ಪ ವಿಲಾಸಮನೀಯೆ [4]ಬರ್ಪ[4] ಕೋ
ಮ[5]ಳೆ ವಧು ಕೊಂಡ ಬೆಳ್ವಸದನಂ ಬೆರಸೋಪನೊಳೋತು ಕೂಡಿದಳ್[5] ॥ ೩೧

(ಪಂಪರಾಮಾಯಣಂ, ೩–೭೨.)

ಧವಳಾಪಾಂಗಮರೀಚಿಗಳ್ ಪುದಿದುವೆಂಬನ್ನಂ ಕಪ್ಪೋಲಂ ಬೆಳ
ರ್ತುವು ಭೃಂಗಾವಳಿ ಸುಯ್ಗೆ ಸಾರ್ವ ತೆಱದಿಂ ಸುರ್ಕುಂಗುರುಳ್ಮಾಲೆ ನೀ ।
ಳ್ದುವು ತನ್ನೊಳ್ನೆಲೆವೆರ್ಚಿ ರಾಗರಸವಾಗಳ್ತೀಪಿ ತಳ್ಕಂಕಗು
ಟ್ಟುವ ಪದ್ಮಾಕರದಂತೆ ಕಾಂತೆ ತಳೆದಳ್ ಗರ್ಭಸ್ಥಲಾವಣ್ಯಮಂ ॥ ೩೨

(ಮಲ್ಲಿನಾಥಪುರಾಣಂ, ೪–೯೮.)

ಕರುಮಾಡಪಿಡಿದ ಕೆಲದೊಳ್
ವಿರಚಿತ ಮಣಿಕನಕಮತ್ತವಾರಣಮಾಲಾ ।
ಪರಿಖಚಿತಮಪ್ಪ ಮಾಡದ
ಪಿರಿದೊಂದೇಱನೆಯ ನೆಲೆಯ ಬರದೋವರಿಯೊಳ್ ॥ ೩೩

ರತಮೆನಿತೊಳವನಿತುಂ ಗಳ
ರುತಿಯೆನಿತೊಳವನಿತುಮಿಚ್ಚೆಯೆನಿತೊಳವನಿತುಂ ।

---

[1] ಮಂ ತೆಗೆದುಡಲ್ ನವಚಂದನ (ಕ), ಚಲ್ಲದುಡೆ ಚಂದನಕರ್ದಮ (ಖ.ಬ). [2] ಸಿಕೊಂಡ ಬೆಳ್ವಸದನಂ ರುತುಕಾಲದೊಳೊಂದಿ ನಲ್ಲನೊಳ್ (ಕ). [3] ತೊಳಗುವವುಟ್ಟ (ಖ). [4] ಬಾಪ್ಪ (ಖ.ಬ), ಪುಷ್ಪ (ಅ) [5] ಳೆ ವಧುಕೊಂಡ ಬೆಳ್ವಸದನಂ ಬಗೆಗೊಂಡುದು ಕೋಮಲಾಂಗಿಯಾ (ಅ), ಳ ವಧುಗಾದ ಬೆಳ್ವಸದನಂ ಬೆರಸೋಪನೊಳೊತ್ತು ಕೂಡಿದಳ್ (ಖ.ಬ).

ಮತಮೆನಿತೊಳವನಿತುಂ ಸೀ
ತ್ಕೃತಮೆನಿತೊಳವನಿತುಮೊದವೆ ಕೂಡಿದರವರ್ಗಳ್ ॥ ೩೪

ಪುದಿ[1]ದುಪದಾ[1]ನ ತಳ್ತ ರುಚಿ ಪಾಸಿನ ಬೆಳ್ಪುಗಳೊಳ್ ಪಳಂಚೆ ಮುಂ
ಚದ ಕಡುಗಪ್ಪಿನೊಳ್ ಬೆರಸಿ ಪಿಂಚುವ ಸೊ[2]ಟ್ಟಿ[2]ದ ಸೆಜ್ಜೆಯೊಳ್ ವಿನೋ ।
ದದೆ ಗುಡಿಗಟ್ಟಿ ದೇವಿಯರನೂನಜಿನಾಂಬಿಕೆ ಸೊಕ್ಕಿ ಕಂ[3][ಡ][3]ಳ
ಭ್ಯುದಯಕರಂಗಳಪ್ಪ ಕನಸಂ ಪದಿನಾಱುಮನಂದು ಬೈಗಿನೊಳ್ ॥ ೩೫

ಒಡೆದು ಕಟವೆರಡುಮೊಡನೊ
ಗ್ಗಡಿಸದೆ ಮದವುಣ್ಮಿ ಪೊಣ್ಮಿರಲ್ ಮಲೆ[4]ಗಳ್ ಗಂ ।
ಡ[4]ಡರೆ ಮುರಿದಿಂತು ಮೊಬಗು
ತ್ತಡಸಿರೆ ಗಜಗಮನೆ ವಿಜಯಗಜಮಂ ಕಂಡಳ್ ॥ ೩೬

ಹಣ್[5]ವ[5]ರಡುತ್ತಮುದ್ದರಿಸಿ ಬಿ[6]ದ್ದಣ[6]ಸುಂ ಗಳ ಪ್ರೌಂಗಿ ಕೋಲ್ಗಳಿಂ
ದಣ್[7]ದಣಿಯಿಂ[7] ನೆಲಂ ಬಿರಿವಿನಂ ಕೆಲದೀಡಿಱಿಯುತ್ತಲತ್ತಲಿ ।
ತ್ತಣ ಬಸವಂಗಳೋಡೆ [8]ಪೊಣರಲ್ ತೊಣೆಯಿಲ್ಲದೆ ಮತ್ತಮೆಲ್ಲಿಯುಂ
ಮಣಿಯದೆ ಮುಂಪೆ ನಿಂದ ವೃಷಭೇಂದ್ರನನಿಂದುನಿಭಾಸ್ಯೆ ನೋಡಿದಳ್ ? ॥ ೩೭

ಭಂಗುರಕರಾಳದಂಷ್ಟ್ರಂ
ಪಿಂಗಳನಯನಂ ಮತಂಗಜಂಗಳ ಮಿದುಳಂ ।
ನುಂಗಿ ನಲಿಗೆದಱಿ ಶಿಖರಿಗೆ
ಲಂಘಿಸುತಿರೆ ಸಿಂಗಮಂ ಜಿನಾಂಬಿಕೆ ಕಂಡಳ್ ॥ ೩೮

ಸುರಚಾಪಂಗಳನಿಂದ್ರಂ
ಮುರಿದಿಟ್ಟಂತಭ್ರಪಥದೊಳಳಿಗಳ ಬಳಗಂ ।
ಬೆರಸೆಸೆಪ ಬಣ್ಣವಾಸಿಗ
ವೆರಡಂ ಚಲದಮಲಕಮಳಲೋಚನೆ ಕಂಡಳ್ ॥ ೩೯

ಪಿಂಗೆ ತೆರಳ್ದು ತೂಳ್ದು ಕಡುಗಟ್ಟಿ ಲೆ ಪಾ[9]ಲ್ಪೊಪ್ಪೆ[9]ಯಂತೆ ಮತ್ತೆ ಬೆ
ಳ್ದಿಂಗಳಲರ್ಚ್ [10]ಪೆರ್ಚ್[10] ಮಕರಾಕರಮಾಲೆಯೆ ತಾರಕಾಳಿ ತೇ ।
ಜಂಗಿಡೆ ನೆಯ್ದಿಲೆಯ್ದೆ ಬಿರಿಯುತ್ತಿರೆ [11]ಮೂಡಿ[11] ಜಲಕ್ಕನಾದುದಂ
ತಿಂಗಳನೊಂದೆ ಪಾಂಗಿನೊಳೆ [12]ಬೆ[12]ಚ್ಚಿ ಬೆಡಂಗಿ ಕಡಂಗಿ ನೋಡಿದಳ್ ॥ ೪೦

---

[1] ದಪದಾ (ಖ.ಬ). [2] ಜ್ಜಿ (ಖ.ಬ). [3] ಗ (ಖ.ಬ). [4] ವಳಿಗಳ್ಳ (ಖ.ಬ).
[5] ದ (ಖ.ಬ). [6] ದ್ದೆನ (ಖ.ಬ). [7] ದಿಣಿಯಂ (ಕ). [8] ಸೊ (ಕ). [9] ಳ್ಮನೆ (ಖ.ಬ).
[10] ಕೂಡೆ (ಖ.ಬ). [11] ನೋಡೆ (ಖ.ಬ). [12] ಮೆ (ಕ).

ಪೆಳಱು ತಮಮಟಿಯೆ ದನುಜರ್
ಮುಳಿಯೆ ಖಳರ್ ಮುಟುಗೆ ಮಿಾಂಗಳಲರೆ ಸರೋಜಂ ।
ಬೆಳಗೆ ಜಗಮೊಗೆದ ರವಿಯಂ
ಚಳದಳಿಕುಳಮಲಿನವಿಲುಳಿತಾಳಕಿ ಕಂಡಳ್ ॥ ೪೧

ಸೆಣಸಿ ಪಳಂಚಿ ಸಂಚಳಿಸಿ ಮುಂಚಿ ತೆಱಂಬೊಳೆದೊಂದನೊಂದ ಸಂ
ದಣಿಸಿ ಪಲರ್ಮೆಯಿಂ ಕರ್ದುಕಿ ಭೋಂಕನೆ ಸೋಂಕಿ [1]ಚ[1]ಲಂಕಿ ಬಿಂಕದಿಂ ।
ಮಣಿದು ಕಲಂಕಿ ತೇಂಕಿ ಪೊನಲೊಳ್ ಪರಿದಾಡುವ ತನ್ನ ನೀಳ್ದ ಕ
ಣ್ಬೊಣರ್ಗೆಣೆಯಪ್ಪ ಮಿಾಂಬೊಣರನಂಬುಜಲೋಚನೆ ಕೂರ್ತು ನೋಡಿದಳ್ ॥ ೪೨

ಏಮ್ಮೈಸಿ ತಳಿರೊಳಳಿಗಳ್
ಭಾವಿಸೆ [2]ಸೌ[2]ಸವದ ಕಂಪು ಪೊಂಪುಟಿವೋಗು ।
ತ್ರೋವದೆ ಮಿಕ್ಕಿರೆ ತೆಕ್ಕನೆ
ತೀವಿದ ಪೊಂಗೊಡಂಗಳಂ ಘ[3]ಟ[3]ಸ್ತನೆ ಕಂಡಳ್ ॥ ೪೩

ಕರಿಪತಿಗಳ್ ಕಲಂಕೆ ತೆರೆಗಳ್ ನೆಗೆದೊರ್ಮೊದಲುಣ್ಮಿ ಪೊಣ್ಮಿ ತಾ
ವರೆಗಳ ನೈದಿಲಾವಲಲರ್ಗೊಯ್ಯನೆ ಪಾಯ್ದು ಪಲುಂಬಿ ತುಂಬಿಗಳ್ ।
ಮೊರೆದು ಕಲಂಕಿ ತೇಂಕಿ ಪಲವುಂ ಕೊಳರ್ವಕ್ಕಿಗಳುರ್ಕಿ ಸೊರ್ಕಿ ಮಿ
ಕ್ಕಿರೆ ಸೊಗಯಿಪ್ಪದೊಂದು ಕೊಳನಂ ನಳಿನಾನನೆ ನಿಂದು ನೋಡಿದಳ್ ॥ ೪೪

ಕರಿಮಕರಂಗಳ ಮಿಾನ್ಗಳ
ತಿರಿವ ತಿಮಿಂಗಿಳಗಿಳಂ[4]ಗಳುಮನಱುದು[4] ತೆರ ।
ಳ್ದರಮೆ ಸುಟಿದರಮೆ ಭೋರ್ಗರೆ
ದರ[5]ಮೆ[5]ಗಮಂಬುಧಿಯನಂಬುಜಾ[6]ನ[6]ನೆ ಕಂಡಳ್ ॥ ೪೫

ಸಾಸಿರಮಾಪ್ಕೆಯಿಂ ಬಳಸಿ ಪತ್ತಿದ ಮುತ್ತಿನ ಮುತ್ತೆ ಸುತ್ತಲುಂ
ಬಾಸಿಗದಂದದಂತಿರೆ ತಗುಳ್ಚಿದ ಮಾಣಿಕಮೊಂದನೊಂದು ಗೆ ।
ಲ್ವಾಸೆಯಿನಗ್ಗಳಂ ಬೆಳಗೆ ಸಿಂಗದ [7]ಪಿಂಡು[7] ಮಡಂಗಿ ಪೊ[8]ತ್ತ[8] ಸಿಂ
ಹಾಸನಮಂ ಜಿತಾಮರ ಶರಾಸನಮಂ ತನುಮಧ್ಯೆ ನೋಡಿದಳ್ ॥ ೪೬

ಜಳನಿಧಿಯಿಂ ನಿಯಾಮನಿಧಿ ತಾಂ ಹರಿಪೀಠದಿನೀಶ್ವರಂ ಮರು
ನ್ನಿಳಯದಿನಿಂದ್ರವಂದ್ಯನುರಗಾಲಯದಿಂ ಸುತಭೋಗಭೋಗಿ ನಿ ।

---

[1] ಬೆ (ಖ). [2] ಸಾ (ಕ). [3] ನ (ಕ). [4] ಗಿಳಂ ನಳ್ಳಿಱುದು ತೆರ (ಖ.ಬ).
[5] ಮೊ (ಕ). [6] ನ (ಖ). [7] ಪಿಂಡ (ಖ). [8] ಕ್ಕು (ಖ.ಬ).

ರ್ಮಳತರ ರತ್ನದಿಂ ಶುಭದನಗ್ನಿಯಿನುಜ್ವಲಬೋಧನೆಂಬಿನಂ
ನಳಿನದಳಾಯತಾಕ್ಷಿ ತಡವಿಲ್ಲದೆ ನೀಂ ಪಡೆದಪ್ಪೆ ಬೊಪ್ಪನಂ ॥ ೪೭

ಬೆಳರಿ ಮುಖಾಬ್ಜಮಾ[1]ಯ್ತು [1]ಡಸಿದೊ[2]ಳ್ಗೆ[2]ಲೆಯಂತೆ ಪಯೋಧರದ್ವಯಂ
ಗಳ ತುದಿ [3]ಕರ್ಗಿ[3] ತೋಱುತೆ [4]ತರುಣೀಂ[4]ದುವ ಲಾಂಛನಬಿಂಬದಂತೆ ನೀ ।
ರೊಳಗಣ ರೇಖೆಯಂತೆ [5]ಕಿಡೆ[5] ಚಾರುವಳಿತ್ರಯಮಾ ಶಿರೀಷಕೋ
ಮಳೆ ನವಮೇಘದಂತೆ ಗುರುಗರ್ಭಭರಾನ್ವಿತೆಯಾ[6]ದಮೊ[6]ಪ್ಪಿದಳ್ ॥ ೪೮

(ಶೂದ್ರಕಂ–ಕಾವ್ಯಸಾರಂ, ೩೬೦.)

ಅಲ[7]ಸಿಕೆ[7] ಮೆಯ್ಗಾದುದು ಕ
ಣ್ಮ[8]ರ್ಮರಲ್ದೆಸೆದುವೊದವಿತಾ[8]ಗುಳಿ ಸತತಂ ।
ಪಲವುಂ ವಸ್ತು[9]ಗಳೊಳ್ ತನ
ಗೊಲವರ[9] [10]ಮಾದತ್ತು[10] ಕಾಂತೆಗಂದೆಳವಸಿಱೊಳ್ ॥ ೪೯

(ಕಾದಂಬರಿ, ಪೂ. ಭಾ.; ೩೮೧.)

ಅತಿವೃತ್ತೋನ್ನತಿಯಿಂ ವಿರಾಜಿ[11]ಪುವು[11] ಮುನ್ನಂ ಗರ್ಭದೊಳ್
[12]ಕೊರ್ವಿ[12] ಬಾ
ಹುತಟಕ್ಕೆಯ್ದಿದುವೀಗಳೆಂದು ಪದಪಿಂ ತತ್ಕಾಮಿನೀ ಪುಣ್ಯದೇ ।
ವತೆ ಕಣ್ಣಿಂಜಲ ದೋಷಮಂ [13]ಹರಿಸ[13]ಲೆಂದಿಱ್ಱೊಂದು ರ[14]ಕ್ಷಾಂ[14]ಜನಾ
ಕೃತಿಯಿಂ ಪೀನಪಯೋಧರಾನನವಿ[15]ವೇಂ[15] ಕರ್ಪಿಂಗಡರ್ಪಾದುದೊ ॥ ೫೦

(ಮಲ್ಲಿನಾಥಪುರಾಣಂ, ೪-೯೮).

ಸೆಳೆನಡುವನುಡಿವ ಭರದಿಂ
ಬಳೆವಂತಿರೆ ಬಳೆಯೆ ಮೊಲೆಗಳವರ್ಗಳ ಛಲದಿಂ ।
ಬಳೆವಂತೆ ಬಳೆಯೆ ನಡುವುಂ
ಮುಳಿಸಿದವೋಲ್ ಕರ್ಗಿಕೊಂಡವವಱ ಮೊಗಂಗಳ್ ॥* ೫೧

ಒದವಿದ ಕರ್ಪನೆಯ್ದೆ ಪರಿವೃತ್ತ ಪಯೋಧರ ಚೂಚುಕಕ್ಕೆ ಮಾ
ಡದೆ ವಳಿಭಂಗಮಂ [16]ಕಳಿಕೆದೋರ್ಪ ಲತಾವಳಿವೋಲ್ ಮೊಗಕ್ಕೆ[16] ಮಾ ।

---

[1] ಯ್ದು (ಖ). [2] ಳ್ಕೊ (ಖ). [3] ಕರ್ಣಿಕೆ (ಕ). [4] ಪರುಣೀಂ (ಕ). [5] ಕಳಿ (ಕ.ಖ.ಬ). [6] ಗಿಯೊ (ಕ.ಖ.ಬ). [7] ನುಗೆ (ಖ). [8] ರುಂಬೆಳ್ಪೆಸೆದು ಪೂಗೆದಾಗಳಿ (ಖ.ಬ). [9] ಳೆಸುವ ಗೆಲವಸ (ಖ.ಬ), ಳೊಳ್ ತನಗೆಲವಶ (ಕ). [10] ಮಾಯ್ತ್ತೊಯ್ದು (ಅ). [11] ನುಗು (ಕ.ಖ.ಬ). [12] ತೋಱುತೆ (ಖ.ಬ). [13] ಪುರಿಪ (ಅ). [14] ಕ್ಷಾ (ಅ), ಕಾ೦ (ಖ.ಬ). [15] ವೇಂ (ಅ). * ಈ ಪದ್ಯ (ಕ) ಪ್ರತಿಯಲ್ಲಿಲ್ಲ. [16] ಕಳಿಯೆ ತೋರ್ಪುದನಂತೆ ತನೂದರಕ್ಕೆ (ಅ).

ಡದೆ ಕಡುವೆಳ್ಪುಮಂ ನಿಮಿರ್ದ ಸುಯ್ಯುಮನಾನನ ಪಂಕಜಕ್ಕೆ ಮಾ
ಡದೆ ಬಳೆದೊಂದು ಗರ್ಭಮೆ ಮನಂ[1]ಗೊಳ[1]ಲಾರ್ತುದು ಮಂದಯಾನೆಯಾ ॥ ೫೨

(ಆದಿಪುರಾಣಂ, ೮-೪೭.)

ತನು ತನುವಾದ ಗರ್ಭಿಣಿಗೆ ತತ್ಸಮಯೋಚಿತಮಂಗಳಪ್ರಸಾ
ಧನಮೆಸೆದತ್ತು ಕಪ್ಪುರದ ಕಂರಿಕೆ ಬಣ್ಣದ ಸಣ್ಣಮಾಲೆ ತೆಂ ।
ಗಿನ ತಿರುಳೋಲೆ ತಾಪರೆಯ ನೂಲುಡೆ ನೂಲ್ ಸಿರಿಖಂಡದಣ್ಪು ಮು
ತ್ತಿನ ತಿಸರಂ ಮೃಣಾಳಿಕೆಯ ಮುದ್ರಿಕೆ ಪೂವಿನ ಪಿಂಡುಗಂಕಣಂ ॥ ೫೩

(ಪಂಪರಾಮಾಯಣಂ, ೩-೧೦೬ ; ಮಲ್ಲಿನಾಥಪುರಾಣಂ. ೪-೧೦೮.)

ಸುದತಿಯ ಗರ್ಭಚಿಹ್ನಮನದೇಪ್ರೋಗಲ್ದಪ್ಪುದೊ ಬಾಸೆ ಕಪ್ಪನಾ
ಳ್ದುದು ನಡು ಕೂಡೆ ಪೊಂಗಿದುದು ಬೀಗಿದುದುರ್ಬಿ ಕುಚಂ ಮೊಗಂ ಬೆಳ ।
ರ್ತುದು ವಳಿ ಪಿಂಗಿ ಪೋಯ್ತು ನಯವೇಱಿದುದಂಗಶಲಾಕೆ ಗುಜ್ಜುಗೊಂ
ಡುದು ನಡೆ ಮೆಲ್ಪುಗೊಂಡುದು ನರಂ ಕುಡಿಗೊಂಡುದು ಕುಂತಳೋತ್ಕರಂ ॥ ೫೪

(ಜಗನ್ನಾಥವಿಜಯಂ, ೨-೯೫.)

ಕಣ್ಣಂ ಕವಿಯಳ್ ಚಿತ್ರದ
ಪೆಣ್ಣಂತಿರೆ ನುಡಿಯಳಣಮೆ ಕುಡಿಯಳ್ ಪಸಿವಿಂ ।
ಗುಣ್ಣಳೆಗಱುವಿನಂತಿರೆ
ಮಣ್ಣಂ ತಿನುತಿರ್ಪಳಬಲೆಯಿರುಳುಂ ಪಗಲುಂ ॥ ೫೫

ದೊರೆವಡೆದಾ ಕುಮಾರಕನ ಗರ್ಭದಿನೀ ಮೃಗಲೋಲನೇತ್ರೆ ಭಾ
ಸುರತರ ಚಂದ್ರಬಿಂಬಮುಖಿಯೆಂಬ ಪೊಗಟ್ಪಿಗೆ ರೂಢಿವೆತ್ತ ಸಿಂ ।
ಧುರಮೃಗಯಾನೆಯೆಂಬ ಮತಿಗುನ್ನತಿವೆತ್ತ ತಿವೃತ್ತಪೀನಪೀ
ವರಕುಚೆಯೆಂಬ ವರ್ಣನಕೆ ತಾನೆ ದಲಾಶ್ರಯಮಾದುದೊಪ್ಪದೇ ॥ ೫೬

[2]ಜ್ಞಾ[2]ನಮಯಂ ತೇಜೋನಿಧಿ
ತಾ[3]ನಿ[3]ರ್ದುಂ ತಾಯಗರ್ಭದೊಳ್ ಪೀಡೆಯನಂ ।
ತೇನಂ ಮಾಡಿದನಿಲ್ಲ ಕೃ
ಶಾನುವ ನೆಟಲಳುರದಂತೆಪ್ಪೊಲ್ ಕನ್ನಡಿಯಂ ॥ ೫೭

(ಆದಿಪುರಾಣಂ, ೭-೩೨.)

ಅರಸಿ ಕುಮಾರನಂ ಪಡೆದ ಭಂಗಿಯನೇವೆಸಗೊಳ್ವೆನೆಲ್ಲಪೆ
ಲ್ಲರ ತೆಱನಲ್ತು ಮಿಟ್ಟೆಯೊಳೆ ತಾಂ ಪಡದಂತೆ ಸುಖಪ್ರಸೂತಿಯೊ ।

---

[1] ದರ (ಅ). [2] ದಾ (ಖ.ಬ). [3] ನಾಗಿ (ಕ).

ಪ್ಪಿರೆ ಪಡೆದಳ್ ಭಯಂ ಗಡ ನಯಂ ಗಡ ಬೇನೆಯ ನೂಪ್ ಗಡೆಂದು ತ
ತ್ಪ್ರರದ ಪುರಂಧ್ರಿಯರ್ ಸತಿಗೆ ತೂಪಿಱಿದರ್ ಸ್ವಗೃಹಾಂತರಂಗದೊಳ್ ॥ ೫೮

ದೆಸೆಯಂ ತೆಕ್ಕನೆ ತೀವಿದತ್ತು ಘನಭೇರೀನಿಸ್ವನಂ ಭೋಂಕನಾ
ಗಸದೊಳ್ ಸಾಲ್ಪಡೆದತ್ತು ವೀಧಿಗತನಾರೀಮುಷ್ಟಿಪಿಷ್ಟಾತಕ ।
ಪ್ರಸರಂ ತೋರಣವೊಪ್ಪಿದತ್ತು ತರದಿಂ ದ್ವಾರಪ್ರದೇಶಂಗಳಂ
ಪೊಸತಂ ನ[1]ರ್ತಿ[1]ಸಿದತ್ತು ಮಾಲೆ ಗುಡಿ ಸೌಧೋತ್ಸಂಗರಂಗಂಗಳೊಳ್ ॥ ೫೯

ಎಳನಭದಂತೆವೋಲ್ ಸಸಿಯನಪ್ಪಿದುದಪ್ಪುಮನೀ[2]ಷ್ಯೆ[2]ಯಂತೆವೋಲ್
ತುಟಿದುದು ಧೂಮವಹ್ನಿ ಬಲವಂದುದು ದೈವತಭಕ್ತನಂತೆವೋ ।
ಲೆಳಸಿದುದಿಚ್ಛೆ ಬೆಳ್ಚಮರಿ [3]ಪಣ್ಣನೆಲರ್ ಸುಖ[3]ದಂತೆವೋಲ್ ಕರಂ
ಬೆಳಗಿದುದಂತರಿಕ್ಷವಳಯಂ ವಿಳಸ[4]ನ್ಮ[4]ಕರಂದದಂತೆವೋಲ್ ॥ ? ೬೦

ವಿಲಸನ್ನಿತ್ಯೋದಯಾಲಂಕೃತನಸಮಹಯಪ್ರೌಢನಕ್ಷುಣ್ಣಲಕ್ಷ್ಮೀ
ನಿಲಯಂ ಸನ್ಮಂಡಲಾಗ್ರಸ್ಫುರಿತಕರಹತೋದ್ವೃತ್ತರಾಜಂ ಮಹೀಭೃ ।
ತ್ಕುಲಮಸ್ತನ್ಯಸ್ತಪಾದಂ ಸಮುದಿತವಿನತಾನಂದನಂ ವೃತ್ತವೀತಾ
ಖಿಲದೋಷಂ ದ್ಯೋತಿತಾಶಾಂಬರಮುಖನೊಗೆದಂ ಭವ್ಯಲೋಕೈಕಮಿತ್ರಂ ॥* ೬೧

ತೊಟ್ಟಿಲ ತೂಕದೊಳ್ ಪೊಣರೆ ಕಂಕಣ ಝಂಕೃತಿ ದಿಟ್ಟಿ ಸೊರ್ಕೆಯಂ
ನಿಟ್ಟಿಸೆ ಜಿಹ್ವೆ ಕಾವಳನ ಕಾಕುಪಟುಧ್ವನಿರಾಗದಿಂ ಪದಂ ।
ಬಟ್ಟಿರೆ ದೇವಿಯರ್ ಕೆಲದೊಳಿರ್ದ ಕುಮಾರನ ಮುದ್ದು ಹರ್ಷಮಂ
ಪುಟ್ಟಿಸೆ ಕೂಡೆ ಪಾಡಿದುದು ಜೋಗುಳಮಂ ಪುರಕಾಮಿನೀಜನಂ ॥ ೬೨

ಅಬದಿರು ಕೃಷ್ಣ ಕೃಷ್ಣ ಮೊಲೆಯಂ ಕೊ[5]ಡು ಬಂದು ಯಶೋದೆ ಬಾಲನ[5]
ತ್ತಿ ಟಿಪಿಡು ಬಂದಳಕ್ಕನಿದೆ ಜೋಗುಳಮಂ ಶ್ರುತಿದೇವಿ ಕೂಡೆ ಪಾ ।
ಡೆಬಲೆ ತಗುಳ್ಚಿ ಕಟ್ಟು ಕುಲದೇವತೆ ರನ್ನದ ಚೆಂಡನೆಂದು ಮು
ದ್ದುಬುಗಿಸೆ ಗೋಪಿಯರ್ ಪಿಡಿದು ತೊಟ್ಟಿಲೊಳೊಯ್ಯನೆ ತೂಗಿ ಪಾಡಿದರ್ ॥ ೬೩

ಕಂದ ಜೋ ವಸುಪೂಜ್ಯವರ್ಧನ ಜೋ ಪುರಂದರನಾಥ ಜೋ
ಕುಂದಕುಟ್ಮಳದಂತ ಜೋ ಕಮಲಾಕ್ಷ ಜೋ ಪರಮಾತ್ಮ ಜೋ ।
ಮಂದರಾಗ್ರಮಹಾಭಿಷೇಕವಿಭೂತಿಸಂಗತಸತ್ವ ಜೋ
ಯೆಂದು ಪಾಡಿದರಬ್ಜಋಂ ನೆರೆದಿಂದುವಕ್ತ್ರೆಯರೀಶನಂ ॥ ೬೪

---

[1] ರ್ತಿ (ಕ). [2] ಷೆ (ಖ.ಬ). [3] ಪೊಣ್ಣನೆಲರ್ ಶುಕ (ಖ.ಬ). [4] ನ್ಮ (ಖ.ಬ).
* ಈ ಪದ್ಯ (ಕ) ಪ್ರತಿಯಲ್ಲಿಲ್ಲ. [5] ಕೊಡಬಂದಳೆಶೋದೆ ಬಾಲನಂ (ಖ.ಬ).

ಒದೆದು ಪಾಸಿಕೆಯಂ ಕಡಂಗಿ ಮರಳ್ದುವಳ್ಳಿಱಿದಾಡುವಂ
ವದನವುಂ ನೆಱಿ ನೋಡಿ ದಾಯೆನೆ ನೋಡುವಂ ದನಿದೋಱುವಂ ।
ಪದುಳವೆತ್ತಿದೊಡಕ್ಕೆ ತೊಟ್ಟನೆ ಪಿಂಗೆ ಮೆಲ್ನಗೆ ಬೀಱುವಂ
ನುದತಿಯರ್ಕಳನಿಂತು ಮೆಚ್ಚಿಸಿದಂ ಯಶೋದೆಯ ನಂದನಂ ॥ ೬೫

ಕವಡಿಕೆ ಭಾಳದಂಡದೊಳೊಡಂಬಡೆ ದಾದಿಯರಿಕ್ಕೆಲಂಗಳೊಳ್
ನವಡಿಸಿ ನಾರ್ಚಿ ದಟ್ಟಡಿಯೊಳೆಬ್ಬರುತಿರ್ದನನಾರ ಬೊಪ್ಪನೀ ।
ಕವಡೆಯ ಬೊಪ್ಪನೆಂದು ನಡೆನೋಡಿದರಬ್ಬಱೊಳಪ್ಪೆಯ್ದಿನಂ
ಕವಡೆಯ ಬೊಪ್ಪನೆಂಬ ಪೆಸರಗ್ಗಳವೊಪ್ಪಿದುದಾ ಕುಮಾರನೊಳ್ ॥ ೬೬

ಮಾಣದೆ ಧೂಳಿಮಾಳಿಗೆಗಡಂಗುವ ನಾರ್ಚಿದ ತಾಯ ಜಂಘೆ ನಿ
ಶ್ರೇಣಿವೊಲಾಗೆ ಮೆಟ್ಟಿ ತೊಡೆಯೇಱುವ ಚಿತ್ರದ ಪಣ್ಬಲಂಗಳಂ ।
ಕಾಣಿಸೆ ದಾದಿಯಂ ಬಿಡದೆ ಬೇಡುವ ಕಂಡರ ಹಸ್ತವಾದ್ಯಕ
ಲ್ಯಾಣರವಕ್ಕೆ ನರ್ತಿಸುವ ಮುದ್ದುಗಳೊಪ್ಪಿದುದಾ ಕುಮಾರನೊಳ್ ॥ ೬೭

ಅಪ್ಪಪ್ಪೆಂದೊಡೆ ಬಂದಮ
ರ್ದಪ್ಪುವ ಚುಂಬಿಸಿದಂತೊಡನೆ ಚುಂಬಿಸುವಂತೊದ ।
ಳಪ್ಪ ನುಡಿಯಡಸೆ ಮಾಣದೆ
ತುಪ್ಪದ ಕಡುಮುದ್ದು ಪೆಱಿರ್ಗೆ ಪಡೆದುದು ಮುದಮಂ ॥ ೬೮

ಮನ್ನಣೆವೆತ್ತ ದಾದಿಯರ ಕೈಗೆ ನೃಪಾಲನ ಕೈಗೆ ಸನ್ನೆಯಿಂ
ಸನ್ನೆಯ ಮಾಡೆ ನೀಱಿಯರ ಕೈಗೆ ತದಂತರದಿಂದ ಬರ್ಪನಂ ।
ಮುನ್ನಮೆನಿಪ್ಪ ಮುದ್ದುತನದಿಂ ಜಯದೇವಿಯ ಸೂನು ಕಂದುಕಂ
ಕನ್ನಡಿ ಹೊನ್ನ ವೀಣೆ ಪಿಡಿದಾಡುವ ತಾವರೆಯೆಂಬ ಮಾಟ್ಕೆಯಿಂ ॥ ೬೯

ಪರಮನುಖಾರ್ದ್ರಲೋಚನದಿನೀಕ್ಷಿಸಿ ನಂದನನಂ ಸರೋರುಹೋ
ದರನಿದಾರ ಮಾಣಿಕವಿದಾರ ನಿಧಾನವಿದಾರ ಮುದ್ದಿದಾ ।
ರರತ್ನನಿದಾರ ಬಲ್ಲಹನಿದಾರ ಕರೀಂದ್ರನಿದಾರ ಸಿಂಹವೆಂ
ದಿರದಮರ್ದ[1]ಪ್ಪಿದಳ್ಪ [1]ದಪಿನಿಂ ಪೊಲೆವಾಲ್ ತೊರೆದೆಚ್ಚು ಪಾಯ್ವಿನಂ ॥೭೦

(ಜಗನ್ನಾಥವಿಜಯಂ, ೩-೩೯.)

ಉದರಮೆ ತೊಟ್ಟಿಲಾಗೆ ಭುವನತ್ರಯಮುಂ ನೆಱಿ ತಾಳ್ದಿ ದೇಹವ
ರ್ಗದ ಕೃತಪಾಪಪುಣ್ಯಫಲಮುಂ ನಲಿ ತೂಗುವ ಕರ್ಮಸಾಕ್ಷಿಯಂ ।

---

[1] ಪ್ಪಿತತ್ಪ (ಖ.ಬ).

ಪದುಳದೆ ತೊಟ್ಟಿಲೊಳ್ [1]ಪಡಿಸಿ[1] ತೂಗಿದರಚ್ಯುತ ಜೋ ಮಹಾತ್ಮ ಜೋ
ಸದಮಲಬೋಧ ಜೋ ಪರಮ ಜೋ ಹರಿ ಜೋ ಎನುತುಂ ಲತಾಂಗಿಯರ್॥ ೭೧

(ಜಗನ್ನಾಥವಿಜಯಂ, ೩–೨೪.)

ಶಕಟವಿಮರ್ದ[2]ನಾ[2] ಮುಸಲಿ ಬಾರದ [3]ಮ್ಮುನ್ನಮೆ[3] ನಮ್ಮ ಹೇಮ ಘಂ
ಟಿಕೆ ಘಣಿಲೆಂಬ ನಂದಿನಿಯ ಪಾ[4]ಲನಿದಂ[4] ಕುಡಿಯಲ್ಕೆ ನಿನ್ನ ಚಂ ।
ಡಿಕೆ ಬೆಳೆದಪ್ಪುದೆಂ[5]ದೆನುತೆ[5] ನಂಬಿಸೆ ಪಾಲ್ಗುಡಿ[6]ದಬ್ಬೆಯೆನ್ನ[6] ಚಂ
ಡಿಕೆಯೆನಿತುದ್ದಮಾದುದೆನುತುಂ ಬೆಸಗೊಳ್ವ ಮುಕುಂದನೊಪ್ಪಿದಂ ॥ ೭೨

(ಜಗನ್ನಾಥವಿಜಯಂ, ೩–೫೨.)

ಘನಕುಚೆ ಗೋಪಿ ಪಾಲ್ಗಡೆಯುತುಂ ಮನೆವಾಪ್ತಿಗೆ ಪೋಗೆ ಗೆಜ್ಜೆಯಿಂ
ದನಿ ನಸುಪೊಣ್ಮದಂತು ಪರಿತಂದೆಡಗೆಯ್ಯೊಳೆ ತೋಡಿ ಬೆಣ್ಣೆಯಂ ।
ತಿನುತಿರೆ ಗೋಪಿ ಕಂಡೆಲೆಲೆ ಕಳ್ಳತನಂಗಳನಣ್ಣ ಕಂಡೆವಾ
ವೆನೆ ಕಡೆವಾಯ ಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ ॥ ೭೩

(ಜಗನ್ನಾಥವಿಜಯಂ, ೩–೫೧.)

ಬಿಂಬಫಲೋಪಮಾನ ರದನಚ್ಛದಮಂ ನಸುಗಚ್ಚಿ ದಾದಿ ಮ
ಣ್ಣಿಂಬನನಟ್ಟಿಯಿಂದೊಗೆಯೆ ಹೂಂಕೃತ ತರ್ಜನಿಯಂ ನೊಸಲ್ಗೆದಂ ।
ದಿಂ ಬಿಡಿದಪ್ಪೆನೆಂದೊಡಗಿದಪ್ಪಿ ಮುಗುಳ್ನಗೆ ನಕ್ಕು ಗೋಪಿಯಂ
ನಂಬಿಸಿ ನಾರ್ಚಿ ಚುಂಬಿಸುವ ಕೃಷ್ಣನ ಮುದ್ದು ಕರಂ ಮನೋಹರಂ ॥ ೭೪

ಅ[7]ಳರೆಲೆಯತ್ತಿ[7]ಕಾಯ್[6] ಪುಲಿಯುಗರ್ ನಿಗಳಂ ಕಿಱುಗೆಜ್ಜೆ ಬಂದಿ ಕಂ
ಗೊಳಿಸುವ ರಕ್ಕೆ ಸಂಕೊಲೆ ಘಣಿಲ್ಗರೆ[8]ಪೊ[8]ಪ್ಪುವ ಗಂಟೆ ನೇವುರಂ ।
ಪೊಳೆಪಳವಟ್ಟು ತೋರ್ಪ ಕುಱುಯುಣ್ಣಿಯ ಪೆಂ[9]ಡೆ[9]ರವೆಂಬಿವೊಂದಿ [10]ಗೊಂ[10]
ದಳಿಸಿರೆ ಬಾಲವಂದದ ತೆರಳ್ಕೆಯಿನಚ್ಯುತನಾದಮೊಪ್ಪಿದಂ ॥ ೭೫

ಎಡೆಗಿಱಿದಿರೆ ಪೊಂಗವಡಿಕೆ
*ಯುಡೆವಣಿ ಕಿಱುಗೆಜ್ಜೆ ಮಿಱುಗೆ ದಶನಾಂಶುವಮ ।
[11]ಳ್ದೆಡೆಯರಳಲ್ ನಡೆಗೊಂಡೊ[11]
ಳ್ನುಡಿಯ* ಬೆಡಂಗನುರವ್ಯೆರಿಗಡಿಗಡಿಗೆಸೆಗುಂ ॥ ೭೬

(ಜಗನ್ನಾಥವಿಜಯಂ, ೩–೪೫.)

---

[1] ನಿರಿಸಿ (ಖ.ಬ). [2] ನಂ (ಕ), ನೀ (ಖ.ಬ). [3] ಮುಂಕುಡಿ(ಖ.ಬ). [4] ಲದ ನೀಂ (ಅ). [5] ದೆಶೋದೆ (ಕ), ದಬಲೆ (ಅ). [6] ದೀಗಳಬ್ಬೆ (ಅ). [7] ಅರಳೆಲೆಮತ್ತಿ (ಖ.ಬ), ಅಳಕಡ್ಡಿಮತ್ತಿ (ಕ). [8] ನೊ (ಕ). [9] ಚ (ಕ.ಖ.ಬ). [10] ನಾಂ (ಕ). [11] ಳ್ದೆಡೆಯೆತಳರ್ನೆಡೆಗೊಂಡೊ (ಕ). *ಬಿಡೆ ಘಲ್ಕೆನೆ ಗೆಜ್ಜೆ ಮಿಱುಗೆ ದಶನಾಂಶು ಕುರುಳ್ ಜಡಿಯೆ ತೊದಲ್ನುಡಿಯ ತಳರ್ ನಡೆಯೆ (ಅ).

ಕನಕ[1]ಮಣಿ[1] ಕಿಂಕಿಣೀಮ್ಯದು
ನಿನದಂ ಕಟಿತಟದೊಳೆಸೆಯೆ ದಾದಿಯರೊಡವಂ ।
ದಿನಿಸಂ ನಡೆಯಿಸೆ ಲಲತೇಂ
ದ್ರನೀಲಮಣಿಭೂಮಿಯೊಳ್ ತಳರ್ದಡೆ [2]ನಡೆ[2]ದಂ ॥ ೭೭

(ಆದಿಪುರಾಣಂ, ೮–೨.)

ಶ್ರೀಪತಿ ಸುರದಾರಕರೊಡ
[3]ನೇ[3]ಪ್ಪೊಟ್ಟುಂ ನೆಱೆದು ರತ್ನಧೂಳೀಪಟಲ ।
ವ್ಯಾಪಿತ ತನು ಮೃದುಮುಗ್ಧಾ
ಳಾಪಂ ಬಳೆದಂ ಸರಸ್ವತೀಮಣಿಹಾರಂ ॥ ೭೮

(ಆದಿಪುರಾಣಂ, ೮–೧.)

ಓರಂತೆ ಮೆಚ್ಚಿದಂ ಕೃತಿ
ಸಾರಂ ಸುತವರ್ಣನಕ್ಕೆ ಹೊಯ್ಸಳವಂಶೋ ।
ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೭೯

ಇದು ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ಷ್ಟಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ಕುಮಾರೋದಯವರ್ಣನಂ ಸಪ್ತಮಾಶ್ವಾಸಂ ಸಂಪೂರ್ಣಂ.

---

[1] ಕಟಿ (ಕ.ಖ.ಬ). [2] ತಂ (ಕ.ಖ.ಬ). [3] ನಾ (ಅ.ಖ.ಬ).

ಚಂದ್ರೋದಯವರ್ಣನಂ

ಮೊದಲೊಳ್ ನೇಸಱ ಪಕ್ಕೆ ಕೋಕವಿರಹಂ ಸಂಕೋಚಪದ್ಮಂ ತಮಂ
ಪುದಿದಾ ಸಂಜೆಯ ತೂರ್ಯಮಾ ಕುಲಟೆಯರ್ ತಾರಾಳಿ ದೀಪಂ ಬಟೆ ।
ಕ್ಕುದಯಂ ಕೆಂಪೆಳಗರ್ಪು ಚಂದ್ರಿಕೆ ಚಕೋರಂ ನೈದಿಲಿಂದೂಪಲಂ
ಮದಿರಾಂದೋಳವಿಹಾರಲೀಲೆಯಿನಿತುಂ ಚಂದ್ರೋದಯಕ್ಕಾಸ್ಪದಂ ॥ ೧

ದಿವನಕ[1]ರಾಪ[1]ನಾರಣದೊಳೆಯ್ದಿಸಿ ಬೆನ್ನನೆ ಬರ್ಪ ಪೆರ್ಬಲ
ಕ್ಕವತಮಸಪ್ರಚಂಡಚರ[2]ರಿ[2]ಕ್ಕಿದ ಸೊಪ್ಪೆನೆ ಬೆಂ[3]ದುಱುಂ[3]ಬಿನೊಳ್ ।
ಕವಿ[4]ವ[4] ಬಿಸಿಲ್ಗಳೇಂ ಮಱಸಲಾರ್ತುದೊ ತೀವ್ರ ಕರಾಭಿಘಾತದಿಂ
ದವನಿಯ ಬೆಂದ ಪುಣ್ಣ ಕಲೆಗಳ್ ಮಿಗೆ [5]ಕೆಂಗಲೆಗಟ್ಟಿದಂದದಿಂ[5] ॥ ೨

(ಅನಂತನಾಥಪುರಾಣಂ, ೭–೬೦.)

ಒದವಿ ಪೊದಱ್ದು ಪಜ್ಜಳಿಪ ತೇಜದ ಸುಯ್ನಱಿ ಕಾಯ್ವೆಯೋಡಿ ಪ
ಣ್ತುದು ಬಿಸಿಲೆಂಬಿನಂ ಬಿಸಿಲೊಳಾದುದು ಕೆಂಪು ಬಟಿಕ್ಕ ಪಾಱುಪೋ ।
ದುದು ಬಿಸಿಲೊಪ್ಪಿದೊಂದರಿಸಿನಕ್ಕೆಣೆಯಾಯ್ತು ಬಿಸಿಲ್ ಬಿಸಿಲ್ಗೊಡ
ರ್ಚಿದ ವಿಹಗಾಳಿವೊಲ್ ಬಟಿಯವೊಂಬುಳಿಗೊಂಡುವು ಸೂರ್ಯರಶ್ಮಿಗಳ್ ॥ ೩

ನವ ನಳಿನೀವನಂಗಳ ಪರಾಗರಜಂಗಳನುಂಡು ಮುನ್ನ [6]ವಾಂ[6]
ತವ[7]ಗ[7] ವಿಯತ್ತಳಭ್ರಮಣವಿಹ್ವಲನಾಗಿ ಬಟಲ್ದು [8]ಕಾಱುವಂ ।
ತೆವೊಲಿರೆ[8] ಕೆಂಪು ತತ್ಕಮಳಕಾನನಕಂಟಕಲಗ್ನ ಪಾದ[9]ನಾ[9]
ದವೊಲುಡುಗುತ್ತ ಮಾತ್ಮಕರಮಂ ರವಿ ಪೊರ್ದಿದನಸ್ತಶೈಲಮಂ ॥ ೪

(ಪಂಪಭಾರತಂ, ೪–೪೬.)

ಇಳೆಯಿಂದಂ ಪೊಂಬಿಸಲ್ ಮೆಯ್ದೆಗೆದು ನಗನಿಕಾಯಾಗ್ರದೊಳ್ ಸಾಂದ್ರಧಾತು
ಸ್ಥ[10]ಳ[10]ಹರ್ಮ್ಯಾಘಾಗ್ರದೊಳ್ ಮಾಣಿಕದ ಶಿಖರಮುದ್ಯಾನ[11]ಶಾಖಾ[11]ಗ್ರದೊಳ್
[ಕೆಂ ।

[1] ರಪ್ರ (ಖ.ಬ). [2] ಗಿ (ಖ.ಬ). [3] ದಿಱುಂ (ಖ.ಬ). [4] ಲ (ಅ). [5] ಕಂಗೆಲೆ ಕಟ್ಟಿತೆಂಬಿನಂ (ಖ.ಬ). [6] ಮಂ (ಅ). [7] ನ (ಅ). [8] ಕಾಂಸದಂದದೊಳಿರೆ (ಕ), ಕಾಂಸವಂಡಪೊಲಿರೆ (ಖ.ಬ). [9] ವಾ (ಕ.ಖ.ಬ). [10] ಳ (ಕ). [11] ಮಾಲಾ (ಅ).

ದಳರಿಂಬಾತಂಕೆಯಂ ಮಾಟ್ಪಿನಮರುಣತೆ[1]ಯಂ ಪೆತ್ತು[1] ಚೆಲ್ವಾದುದಸ್ತಾ
ಚಳತುಂಗವ್ಯಾಪ್ರಜೃಂ[2]ಭಾವೃತವದನಮೆನಿಪ್ಪಂ[2]ದದಿಂ ಭಾನುಬಿಂಬಂ ॥ ೫

(ಜಗನ್ನಾಥವಿಜಯಂ, ೧೬–೯೩.)

ದಿನಲಕ್ಷ್ಮೀಕಾಂತೆ ಮೈವಿಟ್ಟಿ[3]ದು[3] ಗಗನರಂಗಾಗ್ರದಿಂ ವಾರುಣೀಸೇ
ವನೆಗೆಯ್ತರ್ಪಲ್ಲಿ ಕಾಲಂ ನವಮಣಿ[4]ಘನ[4]ಮಂಜೀರಕಂ ನು[5]ಣ್ಪುಮಂ[5] ತೀ ।
ವಿ ನಿಜಪ್ರದ್ಯೋತದಿಂ ಪಶ್ಚಿಮಶಿಖರಿಶಿರೋಭಾಗದೊಳ್ ಬಿಟ್ಟುದೆಂಬಂ
ತಿನಬಿಂಬಂ ರಂಜಿಸಿತ್ತಸ್ತಮಯ ಸಮಯದೊಳ್ ಮುಕ್ತಪಾದಾವಲಂಬಂ ॥ ೬

(ಕಾದಂಬರಿ, ಪೂ.ಭಾ; ೫೦೬.)

ವನಿತಾಪಾನಕದೊಂದು ಪೊಟ್ಟು ಸುವಿಟರ್ ಕಯ್ಗೆಯ್ದು ಲೀಲಾವಿನೋ
ದನದಿಂ ಕೇರಿಗೆ ಬರ್ಪ ಪೊಟ್ಟು ಗಣಿಕಾಸಂದೋಹಮೊಂದಾಗಿ ಮೆ ।
ಲ್ಲನೆ ಬಂದೊತ್ತೆಗೆ ನಿಲ್ವ ಪೊಟ್ಟು ಬಗೆ ಬಂದೀ ಪೊಟ್ಟು ತಂಪೊಟ್ಟು ಪೂ
ವಿನ ಪೊಟ್ತೆಂಬಿನಮಾಯ್ತು [6]ಧಾರಿ[6]ಣಿಗೆ ಭಾಸ್ವನ್ಮಂಡಲಂ ಕುಂಡಲಂ ॥ ೭

ಅಸುರರ ನೆತ್ತರೊಳ್ ಪೊರೆದ ಕೈದುಗಳಂ ತೊಳೆಯಲ್ ತಗುಳ್ದು ಧೂ
ಪಿಸಿದ ಹಯಂಗಳಂ ಜಲದೊಳಿಕ್ಕಲಿಳಾತಳಮಂ ನಿರಂತರಂ ।
ಬಿಸಿಗದಿರಿಂದೆ ನೋಯಿಸಿದ ಪಾಪಮನಿಲ್ಲಿಯೆ ನೀಗಲೆಂದು ಬಂ
ದೊಸೆದಪರಾರ್ಣವಕ್ಕೆ ಪರಿವಂತಿನನೆಯ್ದಿದನಸ್ತಶೈಲಮಂ ॥ ೮

ನಳಿದೀಸಂ ಪತ್ತೆ ನೂತಂ ಪೆಱಗುಡುಗೆ ಹಯಂ ಜಾಱುತೋಳ್ ಪಾಱುತೇರ್ ವ್ಯಾ
ಕುಳ ಚಕ್ರಂ ಸಿಲ್ಕೆ ಶೃಂಗಾಗ್ರದಿನಿಟಿವೆಡೆಯೊಳ್ ಪದ್ಮಿನೀದೇಶಕೋಶಾ ।
ವಳಯಂ ಕೈಕೊಂಡು ಬೆಂಬತ್ತಿಸೆ ತಿಮಿರಬಲಂ ಕಂಡು ತಾಂ ಸೂರ್ಯನಸ್ತಾ
ಚಳದೊಳ್ ಕೆಂಬಟ್ಟೆಯೊಂದಡ್ಡಣದೊಳೆ ಮಗುಟ್ಟಂತೆಡ್ಡಮಾಯ್ತರ್ಕಬಿಂಬಂ ॥ ೯

ಕಡುಬಿಸುಪಾಱುಬೆಳ್ಪಣಮೆ ಪಾಱುಕರಂ ಕರಮೆಲ್ಲಪಕ್ಕದಿಂ
ದುಡುಗೆ ನಿಜಾಂಗತುಂಗಧವಳಾಕೃತಿ ಕಾಸಿದ ಬಟ್ಟಿನಂತೆ ಕೆಂ ।
ಪಡರ್ದಿರೆ ತನ್ನ ಮುನ್ನೊಗೆದ ತತ್ತಿಯ ರೂಪನೆ ಪೋಲ್ತು ಜಾಜಿನೊಳ್
ತೊಡರ್ದವೊಲೊಪ್ಪಿದಂ ಗಗನವೃಕ್ಷದ ಪಣ್ಗಿಣಿಯಾಗಿ ಭಾಸ್ಕರಂ ॥ ೧೦

ಕುವಲಯ ಪೀಡೆಯಂ ಪಡೆದು ಪುಷ್ಪಿತಪದ್ಮಿನಿಗೋತು ಕಾಯ್ಪು ನಂ
ಭವಿಸಿರೆ ಮಂಡಲಾಗ್ರಕರಮಂ ಕುಲಗೋತ್ರಶಿರಕ್ಕೆ ನೀಡುತಿ ।

---

[1] ಪೆತ್ತಿರ್ದು (ಅ). [2] ಬಧ್ವನಿತವಿವರಮೆಂಬಂ (ಖ.ಬ). [3] ಯೆ (ಖ.ಬ). [4] ಮಯ (ಅ). [5] ಣ್ಪುತಂ (ಅ). [6] ವಾರು (ಖ.ಬ).

ರ್ವಗುಣದಿಂದಮೆಯ್ದಿದುದಧೋಗತಿಯೆಂದು ವಿರಕ್ತನಾದವೋಲ್
ದಿವಕರನಂಬರಂದೊಱೆದು ಪಶ್ಚಿಮವಾರ್ಧಿಗೆ ಮೆಯ್ಯನಿಕ್ಕಿದಂ ॥* ೧೧

(ಜಗನ್ನಾಥವಿಜಯಂ, ೧೬–೯೪.)

ಇನಿಸುಂ ಪೊಂಗಾಱಿ ಮೇಲುಚ್ಚಳಿಸೆ ಹಯಚಯಸ್ಕಂಧಮಂ ತೇರ ಕೋಳಾ
ರ್ವಿನೆಗಂ ಮಾರ್ಕೊಂಡು ನೇಣಂ ಮಲರೆ ತೆಗೆವಿನಂ ಸೂತನಶ್ವವ್ರಜಂ ತೊ ।
ಟ್ಟನೆ ಕೀೞಂ ಕರ್ಚಿ ಭೋರೆಂದುರುಳೆ ಪರಿವಿನಂ ಸಾರ್ದನಸ್ತಾದ್ರಿಯಂ ಕಾಂ
ಚನರಾಜಿಷ್ಣುಪ್ರಭಾಪಿಂಜರಿತಕಬಳಿತವ್ಯೋಮರಂಗಂ ಪತಂಗಂ ॥ ೧೨

ಪೂಡುವ ಕುದುರೆ ಬೆಸಂಗೊಂ
ಡೋಡುವ ತೇರ್ಗೊಂದೆಗಾಲಿ [1]ಪೊಡೆವಂ[1] ಪೆಱವಂ ।
ಕೇಡಿಂಗಲಸಿದೊಡಕ್ಕುಮೆ
ನೋಡಿರೆ ರವಿ ಕೆಡೆದನಸ್ತಗಿರಿ ಮಸ್ತಕದೊಳ್ ॥ ೧೩

(ಲೀಲಾವತಿ, ೧೦–೧೭ ; ನೇಮಿನಾಥಪುರಾಣಂ, ೫–೧೪).

---

* ಈ ಪದ್ಯವಾದ ಮೇಲೆ (ಖ.ಬ.) ಪ್ರತಿಗಳಲ್ಲಿ ಮುಂದಿನ ನಾಲ್ಕು ಪದ್ಯಗಳು ಹೆಚ್ಚಾಗಿವೆ :—

ಘಲಘಲನೆಂದು ಸಂಜೆವಱು ನಾಱು ಧರಾತಳದುಷ್ಣವಾಱ್ಕೆ ಮಾ
ರ್ಮಲೆವಪರಾಬ್ಧಿ ಕೆಂಪು ನಸುದೋಱೆ ಸರೋಜದ ಲಕ್ಷ್ಮಿ ಜಾಱೆ ನ್ಯೈ ।
ದೀ ಬಳಗಂ ಪ್ರೊದಬ್ದು ನಯವೇಱೆ ರಥಾಂಗವಗಲ್ದು ಪಾಱೆ ಕ
ತ್ತಲೆಯ ಸೆಱಂಗುದೋಱೆ ದಿನನಾಯಕನೇಱುದನಸ್ತಶೈಲಮಂ ॥ ೧

ಖಗತತಿ ಗೂಡ ಸಾರೆ ಬಿಗಿದಿರ್ದ ರಥಾಂಗಕೆ ಬಾಧೆ ಸಾರೆ ಕೇಳ್
ಗಗನಕೆ ತಾರೆ ಸಾರೆ ಯುವತೀಕುಚಮಧ್ಯಕೆ ಕಂತು ಸಾರೆ ಮೆ ।
ಲ್ನಗೆ ಕುಮುದಕ್ಕೆ ಸಾರೆ ಧರೆಗೆಯ್ದೆ ತಮಂ ನೆಱೆ ಸಾರೆ ಸಾಗರ
ಕ್ಕೊಗುಮಿಗೆ ಪೆರ್ಚು ಸಾರಲಪರಾಬ್ಧಿಯನೆಯ್ದುದನಾ ದಿವಾಕರಂ ॥ ೨

ಖಗತತಿಗೂಡನೆಯ್ದೆ ಪೊಣರ್ವಕ್ಕಿಗಳರ್ಕನೆಯೆಂಬುದಂ ।
ದುಗುಡಮನೆಯ್ದೆಯುತ್ಪಲನಿ ಹಾಸ್ಯಮನೆಯ್ದೆಯೊಱಲ್ದು ಪಾಣ್ಬರೊ ।
ಯ್ಯಗೆ ನಿಜಸೂಚಿಕಾಗೃಹಮನೆಯ್ದೆ ವಿಯೋಗಿಗಳಂಗಜಾಸ್ತ್ರದ
ಗ್ನಿಗೆ ಗುಱಿಯಾಗಲೆಯ್ದೆ ದಿನನಾಯಕನೆಯ್ದಿದನಸ್ತಶೈಲಮಂ ॥ ೩

ಸುಳಿವಳಿ ಪೂತ ಗೊಂಚಲೊಳಡಂಗೆ ಸುರುಳ್ದು ಮರಾಳಮಂಬುಜಂ
ಗಳ ಮಱೆಯೊಳ್ ಸುಯಿಲ್ಗಱೆಯೆ ಬಗ್ಗಿಸುವಗ್ಗದ ಕೋಕಿಳಾಳಿ ಕೆಂ ।
ದಳಿರೊಳೆ ದೂರಿಸುತ್ತಿರೆ ಶುಕಾವಳಿ ಪಣ್ಗಳನೊತ್ತುಗೊಂಡು ಕಂ
ಗಳನರೆ ಮುಚ್ಚಿ ತೂಂಕಡಿಸೆ ಸಾರ್ದನಹಸ್ಪತಿ ಪಶ್ಚಿಮಾದ್ರಿಯಂ ॥ ೪

[1] ನೂತಂ (ಅ), ಎಸೆಪಂ (ತ).

ಉರವಣಿಯಿಂ ಕಾಲಗಜಂ
ಮರವಾಯ್ದುದು[1]ವಸ್ತ[1]ವೆಂಬ ಚೆಂದೆಂಗಿಂದಂ ।
ಸರಸಿರುಹಮಿತ್ರಮಂಡಲ
ಪರಿಗತಫಲಮೋಡಿ ಬಿರ್ದುದಪರಾಂಬುಧಿಯೊಳ್ ॥ ೧೪

ಮುನಿಹಸ್ತಾಂಬುಜದಿಂದಮರ್ಘ್ಯಜಲಜಾಲಂ ಬೀಳೆ ನೀ[2]ಲಾಬ್ಜಕಾ[2]
ನನದೊಳ್ ಪಾಯ್ದಳಿ ಬೀಳೆ ಜಾರರೆದೆಯೊಳ್ ರತ್ಯುತ್ಸವಂ ಬೀಳೆ ಪ ।
ದ್ಮಿನಿ ಬೆಂಬೀಳೆ ಬಬಲ್ದು ಬೀಟ್ಪ ಹತಕೋಕಾನೀಕದಿಂದುರ್ಬಿ ಕ
ಣ್ಬನಿಗಳ್ ಭೋರೆನೆ ಬೀಳೆ ಬಿಟ್ಟನಪರಾಂಭೋರಾಶಿಯೊಳ್ ಭಾಸ್ಕರಂ ॥ ೧೫

[3]ಕಟಿ[3]ವದನಾದ ಭಾಸುರವಿಸಿಲ್ ತೆರೆಯಂತಿರೆ ಬಟ್ಟಲಿಟ್ಟು ತಂ
ದಿಟಿಪಿದ ಲೋವೆಯಂತಿರಪರಾಚಲಕೋಟಿ ನಿಶಾತಮಿ[4]ಸ್ರದೊಳ್ ।
ತೊಳ[4]ಗುವ ಧೂಳಿಸಂಜೆಯೆನೆ [5]ಸಾ[5]ರ್ದಿರೆ [6]ಪಿಂಬಗಲೆಂಬ[6] ಲಗ್ನಿಗಂ
[7]ಸುಟಿಸಿದ[7] ಬಟ್ಟಲಂತೆ ಮುಬುಗಿತ್ತ ಪರಾಬ್ಧಿಯೊಳರ್ಕಮಂಡಲಂ ॥ ೧೬
(ಅನಂತನಾಥಪುರಾಣಂ, ೭-೬೪.)

ಎನಗಂ ಭೂಪತಿಗಂ ಸಮಾನಮೆ ಕರವ್ಯಾಪ್ತಾಖಿಲಾಶತ್ವಮ
ತ್ಯನುರಕ್ತಪ್ರಕೃತಿತ್ವಮಭ್ಯುದಯವತ್ವಂ ಚಕ್ರಭೃತ್ವಂ ದಲೆಂ ।
ದಿನನುದ್ಯಾನಪಯೋವಿನೋದಸದೃಶತ್ವಕ್ಕಂ ಮನಂದಂದವೋಲ್
ವನಮಾಲಾಕುಲತೀರಮಪ್ಪಪರಪಾರಾವಾರಮಂ ಪೊರ್ದಿದಂ ॥ ೧೭
(ಚಂದ್ರಪ್ರಭಪುರಾಣಂ, ೮-೨.)

ಪ್ರತ್ಯಗ್ಭೂಧರವಾತ್ಮ
ಧಿತ್ಯಕದೊಳ್ ತಳೆದುದಸ್ತಗತಿಯಿಂ ಬೀಪ್ಪಾ ।
ದಿತ್ಯನನೆಂದುಮದಾ[8]ರ್ಗಂ[8]
ನಿತ್ಯಪರಾರ್ಥೈಕವೃತ್ತನಕ್ಕುಂ ಗ್ರಾ[9]ಹ್ಯಂ[9] ॥ ೧೮
(ಚಂದ್ರಪ್ರಭಪುರಾಣಂ, ೮-೩.)

ಅಚ್ಚಟದಿರೆ ಕಟಲೆ ಕೀಲ್ ನಡು
ವುರ್ಚಿ ನೊಗಂ ಮುಱಿಯೆ ಸುರುಳೆ ಸೂತಂ ನಸು ಕಣ್ ।
ಮುಚ್ಚೆ ಫಣಿ ಕುದುರೆ ಬಬಲಲ್
ಪಶ್ಚಿಮಮಿನಿಸಿನಿಸು ಜಾಱೆ ದಿನಕರನಿಟಿದಂ ॥ ೧೯

---

[1] ಮಸ್ತ (ಖ.ಬ). [2] ರಾಂಬುಜಾ (ಕ). [3] ತಳಿ (ಖ.ಬ). [4] ಪ್ರಯೋಗಬು (ಅ). [5] ಹೊ (ಅ). [6] ಪಿಂಗಲೆಯೆಂಬ (ಖ.ಬ). [7] ಘಟಿಗೆಯ (ಅ). [8] ರ್ಗಮ (ಖ.ಬ). [9] ಮ್ಯಂ (ಖ.ಬ).

ಕವಿದುವು ಧೇನು ಮುಂಚೆ ತುಱುಗಳ್ ಪೊಲದತ್ತಣಿನೂರ್ಗೆ ಬಾ[1]ನ[1]ಲಾ
ದುವು ಪಡುವಣ್ಗೆ ಪಾಱಿದುವು ಗೂಡಿನ ಸಾರ್ಕೆಗೆ ಪಕ್ಕ ಕೊಂಬುಗೊಂ ।
ಡುವು ಮೃಗಮೂರ ಪೊರ್ದುಗೆಯ ಬಚ್ಚೆಗೆ ಮೇೞಿನ ಕಾಪಿನಿಂ ಮರ
ಳ್ದುವು ದಿನನಾಯಕಂ ವರುಣ ದಿಙ್ಮುಗಮಂ ಮಱೆಗೊಳ್ವ ಕಾಲದೊಳ್ ॥ ೨೦

ಅಪರಾಶಾದ್ರಿಯ ಮೇಲೆ ಗೈರಿಕಶಿಲಾಶಲ್ಕಂಗಳಂ ನುರ್ಗುತುಂ
ತಪನಸ್ಯಂದನ ಚಕ್ರಮಾಕ್ರಮಿಸಿ ಪೋದಂತಾ ರಜಂ ವಾಜಿರಾ ।
ಜಿಪದಾಘಾತದಿನುರ್ಬಿ ಪರ್ಬಿದುದು ತದ್ದಿಕ್ಚಕ್ರಮಂ ಬೇಱೆ ಕೆಂ
ಪು ಪೊದ[2]ಳ್ತಿಂ[2]ತು ನಿಮಿತ್ತಮೇನೆನಿಸಿ ಸಂಧ್ಯಾರಾಗಮಾ ವೇ[3]ೞೆ[3]ಯೊಳ್ ॥ ೨೧

ಪರಿಣತದಿನಶಿರದಂ[4]ದದ[4]
ಖರಕಿರಣಂ ಕಾಲಚಕ್ರಹತಿಯಿಂ ಕೆಡೆಯಲ್[5] ।
ಸುರಿದು ಪರೆದರುಣಜಲದಂ
ತಿರೆ ಪಸರಿಸುತಿರ್ದುದಪರಸಂಧ್ಯಾರಾಗಂ ॥ ೨೨

(ಲೀಲಾವತಿ, ೧೦–೧೯.)

ಅಂಬರಮಣ[5] ಮುಱುಗಿದನಿಂ
ತಂಬುವಿನಿಂ[5] ಹಿಮಕರಾಂಶುಗಳ್ ಪತ್ತು[6]ಗುಮೆಂ[6] ।
ದಂಬರ ಹರಿ [7]ಪೊದೆದಾ[7] ಪೀ
ತಾಂಬರ[8]ಮೆನಿಸಿರ್ದುದಪರ[8]ಸಂಧ್ಯಾರಾಗಂ ॥ ೨೩

(ಲೀಲಾವತಿ, ೧೦–೨೦.)

ಅಂಬರವಧು ಮಿತ್ರವಿಯೋ
ಗಂ ಬೇಗದೊಳಾ[9]ಗೆ ಮನದೊಳುಮ್ಮಳದಿಂ ಕಾ ।
ಶಾಂ[9]ಬರಮಂ ಪೊದೆದುದು ತಾ
ನೆಂಬಿನೆಗಂ ಸಂಜೆಗೆಂಪಿನಿಂ ರಂಜಿಸುಗುಂ ॥ ೨೪

(ಕುಸುಮಾವಳಿ, ೪–೨೭).

ಬೞಸಿದುದರ್ಕವಾಜಿ ಖುರಘಟ್ಟಿತಮಾದಪರಾದ್ರಿಯಿಂದಮು
ಚ್ಚೞಿಸಿದ ಧಾತುರೇಣುವೆನೆ ಚಕ್ರಯುಗಂಗಳಗಲ್ಕೆಗಿಚ್ಚು ಪಾಂ ।

---

[1] ವ (ಕ.ಖ.ಬ), (ಕವಿಚರಿತ್ರೆ–I, ೩೩೬). [2] ೪್ಳಂ (ಖ.ಬ). [3] ಗ (ಕ). [4] ತಿರೆ (ಅ). [5] ಮುಱುಗಿದನಿಕರಂಬುವಿನಂ (ಕ), ಮುಱುಗಿದನಿಂಶುಂಬುವಿನ (ಅ). [6] ಪುವೆಂ (ಅ.ಕ). [7] ಪೊಡೆಯಲ್ (ಕ.ಅ). [8] ತೆಗೆದನೆನಿಸೆ (ಅ). [9] ಗಲುಬ್ಬೆಗ ದೊಳಂ ಕಾಷಾಯಾಂ (ಅ).

ಸುಳೆಯರ ರಾಗದೇಚ್ಗೆ ದೆಸೆವೆಣ್ಗಳ ರತ್ನವಿಭೂಷಣಾಂಶುವು
ತ್ಪಳಿನಿಯ ಕುಂಕುಮೋದಕದ ಸಿಂಪಿಣಿ ಸಂಜೆಯ ಕೆಂಪು ಲೋಕಮಂ ॥ ೨೫

(ಚಂದ್ರಪ್ರಭಪುರಾಣಂ, ೮–೪.)

ಒಂದದ ಪಗಲರುಳೆರಡಱ
ನಂದುಗಳಂ ವರುಣಶಿಲ್ಪಿ ರಕ್ತಾಂಬರದಿಂ ।
ಸಂದಿಸಿ ಪೊಲಿದವೋಲೆಸೆದುದು
ಮಂದ್ಯೈಸಿದ ಸಂಜೆಗೆಂಪು ಪಡುವಣ ದೆಸೆಯೊಳ್ ॥* ೨೬

(ಜಗನ್ನಾಥವಿಜಯಂ, ೧೬–೯೫.)

ಜಲರುಹಮಿತ್ರನೊಳ್ ನೆರೆವ ಸಂಜೆಯ ನಿರ್ಝರಕಂಠನಾದಮಂ
ನಲವಿನೊಳೆಯ್ದೆ ಕಲ್ತು ಪರಿಮಿಕ್ಕಿರೆ ಪಕ್ಕೆಗೆ ಸಾರ್ವ ಪಕ್ಕಿಗಳ್ ।
ಚಿಲಿವಿಲಿವಿಚ್ಚುವಿಚ್ಚುಚಿಲಿಚಿಲ್ಪಲಿ ಕರ್ಕುಕಹುಕ್ಕು ಬಾಕ್ಕುಳಿ
ರ್ಘುಲಘಲಲೆಂದದೇನುಲಿಯುತಿರ್ದುದೊ ನೀಳ್ದ ಮಹೀರುಹಂಗಳೊಳ್ ॥ ೨೭

---

* ಈ ಪದ್ಯವಾದಮೇಲೆ (ಖ.ಬ). ಪ್ರತಿಗಳಲ್ಲಿ ಮುಂದಿನ ೫ ಪದ್ಯಗಳು ಹೆಚ್ಚಾಗಿವೆ :

ದಿನಪಂ ತನ್ನನಗಲ್ದು ಪೋಗೆ ಹರಿದಿಕ್ಕಾಂತಾನನಂ ಕಂದಿದ
ತ್ತೆನೆ ಪರ್ವುರ್ವಿದುದಾತನೊಳ್ ನೆರೆಯೆ ರಾಗಂ ಪಶ್ಚಿಮಾಶಾವಿಳಾ ।
ಸಿನಿಗಾದತ್ತೆನೆ ಸಂಜೆ ರಂಜಿಸಿದುದೇನಾಶ್ಚರ್ಯಮಂ ತಾಳ್ದರಾ
ತಿನಿಯೇಂ ತನ್ನನಗಲ್ದೊಡಂ ನೆರೆದೊಡಂ ನೀರಾಗಮಂ ರಾಗಮಂ ॥ ೧

ತಡೆಯದೆ ದಿನಪತಿ ದಿಕ್ಸ್ತ
ಯೊಡಗೂಡಲ್ ಪೋದ ತೆಱನನಱಿದರುಣಂ ಕೆಂ ।
ಪಿಡಿದಿರ್ದ ಕಾಂಡಪಟಮಂ
ಪಿಡಿದಿರ್ದವೊಲಪರದಿಶೆಯ ಸಂಧ್ಯಾರಾಗಂ ॥ ೨

ಪವಳದ ಬಳ್ಳಿಯ ತುಱುಗಲ್
ಪವಣಿಲ್ಲದೆ ತಳ್ತು ಬೆಳದು ಕುಡಿಯಿಟ್ಟಪರಾ ।
ರ್ಣವದೊಳೆ ಬೆಳೆದಪವೆಂದೆಂ
ಬವೊಲೆಸೆದತ್ತಪರದೆಸೆಯ ಸಂಧ್ಯಾರಾಗಂ ॥ ೩

ಇನನಪರಾಂಗನೆಯಂ ಪಿಡಿ
ದನುಭವಿಸಲ್ ಪೋದ ತೆಱದಿನಡಗಿದನಾ ಕಾ ।
ಮಿನಿಯನುರಾಗಂ ಪರ್ಬಿ
ತ್ತೆನಲೆಸೆದತ್ತಪರದೆಸೆಯ ಸಂಧ್ಯಾರಾಗಂ ॥ ೪

ಇನನನ್ತಮಿಸಲ್ ದಿವಸಾಂ
ಗನೆ ಸಹಗಮನವನೊಡರ್ಚಲೊಟ್ಟಿದ ಪೆರ್ಗಿ ।
ಚ್ಚಿನ ಪರ್ಬಿದರುಣರುಚಿಯೆಂ
ಬಿನಮೆಸೆದತ್ತಪರದೆಸೆಯ ಸಂಧ್ಯಾರಾಗಂ ॥ ೫

ತವಕದಿನಪ್ಪಿ ತಲ್ಲಣದೆ ಚುಂಬಿಸಿ ನಿಲ್ಲದೆ ಕೂಡಿ ತೋಡಗ
ಲ್ಬುವ ದಿವಸಾವಸಾನಸಮಯಕ್ಕ ಕನಲ್ದುರಿದೇಳ್ವ ಸಂಜೆಯೊ ।
ತ್ತುವ ತಮವತ್ತಮಿತ್ತಲಳುರ್ದತ್ತಲೆ ಪೊರ್ದಿದ [1]ಹೊಳ್ಳಲೊಳ್[1] ಮಿಡುಂ
ಕುವ [2]ಬೆದೆವಾವಿ[2]ನಂತಗಲಲಾಱಿದೆಱಲ್ದವು ಜಕ್ಕವಕ್ಕಿಗಳ್ ॥ ೨೮

(ಅನಂತನಾಥಪುರಾಣಂ, ೭–೭೦.)

ಸುಯ್ದ [3]ಟ[3]ಲೆ ರಥಾಂಗಂ ಕ
ನ್ನೆಯ್ದಿಲನಲಗೆಂದು ಪಾಯಲೊಡರಿಸಿದುದು ಚೆ ।
ನ್ನೆಯ್ದಿಲು[4]ರಿ[4]ಯೆಂದು ಪುಗಲನು
ಗೆಯ್ದುದು ಪೆಣ್ಬಕ್ಕಿ ವಿಪುಳ ವಿರಹವ್ಯಥೆಯಿಂ ॥ ೨೯

ಬಿಸುಸುಯ್ದತ್ತೋಪನೊಳ್ ಪ್ರೋದಡೆ ಕಳವಳದಿಂ ಕಂಜಕಿಂಜಲ್ಕದೊಳ್ ಭಾ
ವಿಸಿ ಪೊಕ್ಕುಂ ಪ[5]ಜ್ಜೆ[5]ಯಂ ತಾವರೆಯೆಲೆವಱಿಯೊಳ್ ನೋಡಿ ಶೈವಾಳದೊಳ್ ಸೋ
[6]ದಿ[6]ಸಿ ನೀಲಾಂಭೋಜದೊಳ್ ನಿಟ್ಟಿಸಿ ತೆರೆಪ್ಪೊರೆಯೊಳ್ ಪೊಕ್ಕು ಸುತ್ತುಂ ತೊಱಲ್ದಾ
[7]ಲ[7]ಸಿ ನೀರ್ವೊ[8]ಯ್ಲಿಂ[8] ಬಟಲ್ದತ್ತಸಮಶರಸಮುತ್ಕ್ಷಿಲಿತಾಂಗಂ ರಥಾಂಗಂ ॥ ೩೦

ಒಱೆದುಗುವ ಬಾಷ್ಪವಾರಿ[9]ಯೊ
ಳ್[9]ಱಿಂಕೆಗಳ್ ನಾಂದು ಮಗುೞೆ ವಿರಹಾನಳನಿಂ ।
ನೆಱೆ ಬಱಿ[10]ವಾಗಿರೆ[10] ಪಡುನೇ
ಸಱೊ[11]ಳಳುರ್ದು[11]ವಗಲ್ದು ಚಕ್ರವಾಕದ್ವಂದ್ವಂ ॥ ೩೧

(ಚಂದ್ರಪ್ರಭಪುರಾಣಂ, ೮–೬.)

ಅರಮೆ ಮಱೆ ಪತಂಗಂಗಾಗೆ ತಚ್ಛೈಲಶೃಂಗಂ
ವಿರಹಪರವಶಾಂಗಂ ತ್ಯಕ್ತಜಾಯಾನುಷಂಗಂ ।
ಸ್ಮರವಿಶಿಖನಿಷಂಗಂ ಸಾಶ್ರುಪಾತಾಂತರಂಗಂ
ದರವಿಚಳದಪಾಂಗಂ ಮ್ಲಾನಮಾಯ್ತಾ ರಥಾಂಗಂ ॥ ೩೨

(ಚಂದ್ರಪ್ರಭಪುರಾಣಂ, ೮–೫೩.)

ತೆರೆ[12]ಯ ಸೆಳೆ[12]ಮಂಚದೊಳ್ ಬಿ
ತ್ತರಿಸಿದ ಗಳಿತಾಬ್ಜದಳದ ನುಣ್ಬಸೆಯೊಳ್ ಬೆ ।

---

[1] ಪೊಱಲೊಳ್ (ಅ). [2] ಬೆಳುಗಾವಿ (ಅ). [3] ಗ (ಕ). [4] ಲ (ಕ). [5] ಚ್ಚೆ (ಕ). [6] ವಿ (ಕ.ಖ.ಬ). [7] ರಿ (ಕ). [8] ಯ್ದಂ (ಕ). [9] ಯಿನೆ (ಅ). [10] ವರಾಗೆ (ಖ.ಬ) [11] ಳಿರ್ದು (ಅ). [12] ಸೆಳೆಯೆ (ಕ).

ಳ್ನೊರೆಯ ತೆರೆಸುತ್ತಿನೊಳ್ ಪ್ರಿಯೆ
[1]ನೆರೆದೊಳ್ಪಂ[1] ಬಯಸಿ ಕೋಕನಾಯ್ತು ಸಶೋಕಂ ॥ ೩೩
(ಚಂದ್ರಪ್ರಭಪುರಾಣಂ, ೮–೮.)

ಜಲಜದಳಪೀಠದೊಳ್ ನ
ಲ್ಲಳ ನುಣ್ಗುಱು ಸೋಂಕೆ ಸೋಂಕಿ ಕುಳ್ಳಿರ್ದಳಿನೀ ।
ಕಳಗೀತರವಮನಾಲಪ
ವಿಳಾಸಮಂ ನೆನೆದೊನಲ್ದುದೊಂದು ರಥಾಂಗಂ ॥ ೩೪
(ಚಂದ್ರಪ್ರಭಪುರಾಣಂ, ೮–೯.)

ಇನಿಯಳ್ ಪೋಗರಟಿದೊಡದಂ
ನೆನೆನೆನೆದುಂ ಸುಯ್ದುಸುಯ್ದು ಬಲ್ದಬ್ಬಬ್ಬ ।
ಬ್ಬಿನಿಯಂಬ್ಬಿನಿದಪ್ಪದೆ ನೋ
ಡಿ ನೋಡಿ ಜಾನಿಸಿದುದತುಳಶೋಕಂ ಕೋಕಂ ॥ ೩೫
(ಜಗನ್ನಾಥವಿಜಯಂ, ೧೬–೬೭.)

ಇದು ಮತ್ಪ್ರಾಣೇ[2]ಶೆಯೆ[2]ನ್ನೊಳ್ ನೆರೆದ ಪುಳಿನಮಾಯಿರ್ದುದಾ
ಕಾಂತೆ ಮೆ[3]ಲ್ಲೊ[3]ಲ್ಲದ ಮಾರ್ಣ್ಯಾಳಾ[4]ರ್ಧಮಿಾ[4] ತೋರ್ಪುದೆ ಪುಸಿಮುಳಿಸಿಂ ಕಾಡಲೆಂದಾಕೆ ಪೊಕ್ಕ
[5]ರ್ದುದಿದಾ[5]ನೀರೇಜಪರ್ಣೋತ್ಕರಮೆನುತೆ ಮೊದಲ್ಗೊಂಡುದಂಭೋಜ[6]ಸದ್ಮಾಂ[6]
ತದೊಳುದ್ಯತ್ಕಂತು[7]ಚೇತಂ[7] ತೊಟಲಲವಿರತಂ ಚಕ್ರವಾಕಂ ವರಾಕಂ ॥ ೩೬
(ಚಂದ್ರಪ್ರಭಪುರಾಣಂ, ೮–೧೦.)

ನಲ್ಲರಗಲ್ಕೆಯಿಲ್ಲದೆಡೆಯನ್ತಮಯಕ್ಕೆ ದಿನಾಧಿನಾಯಕಂ
ಸಲ್ಲದ ತಾಣಮಂಗಜಶರಾಹತಿ ಪೊರ್ದದ ದೇಶಮುಳ್ಕೊಡಂ ।
ತಲ್ಲಿಯೆ ಮಾಡ್ಕೆ ಮಜ್ಜನಮಂ ಬಿದಿಯೆಂದು ರಥಾಂಗಕಾಂತೆ ಹೃ
ದ್ವಲ್ಲಭವಿಪ್ರಯುಕ್ತೆ ಬಗೆಗೆಟ್ಟು ನೆಱಿಲ್ದುದು ಪದ್ಮಪತ್ರದೊಳ್ ॥ ೩೭
(ಚಂದ್ರಪ್ರಭಪುರಾಣಂ, ೮–೭.)

ಚಂಡಮರೀಚಿಗನ್ತಮಯಮಿಲ್ಲದುದೊಂದೆಡೆ [8]ನಿಮ್ಮ[8] ಕೇಳ್ದುದುಂ
ಕಂಡುದುಮುಳ್ಕೊಡಿಂ ಬೆಸಸಿಮಾಮಿರದಲ್ಲಗೆ ಪೋಪೆವೆಂದು ಮೆ ।
ಯ್ಗೊಂಡೊಲವಿಂದಗಲ್ಕೆ ಗಣಮಾಱಿದೆ ಪಕ್ಕಿಗಳೆಲ್ಲ[9]ಮೇಂ[9] ಮರು
ಳ್ಗೊಂಡವೊಲೂಳ್ದು ಕೂಡೆ ಬೆಸಗೊಂಡು ಬಱಿಲ್ದುವು ಜಕ್ಕವಕ್ಕಿಗಳ್ ॥ ೩೮
(ಪಂಪಭಾರತಂ, ೪–೪೮.)

---

1 ಗಿರಿದೊಳ್ಪನೆ (ಅ). 2 ಶನೆ (ಅ). 3 ಲ್ಲೊ (ಅ). 4 ರ್ತದಿಂ (ಖ.ಬ). 5 ರ್ದ ದಳಂ (ಖ.ಬ). 6 ಪ (ಕ). 7 ಚೆಂದಂ (ಖ), ಚಿಂತಂ (ಬ). 8 ನೀವು (ಕ). 9 ಮುಂ (ಅ), ಮುಂ (ಕ).

ನೋಡಿ ಕನಲ್ದೊನಲ್ದು ಪಡುನೇಸಱಿನುಣ್ಮುವ ಕಣ್ಣನೀ[1]ರೋಳೋ
ಲಾ[1]ಡುವ ಜಕ್ಕವಕ್ಕಿ ಬಗೆಗೆಟ್ಟು ವಿಯೋಗವಿಷಾದ[2]ವೇಗದಿಂ[2] ।
ಪಾಡಟಿದೆಂತೊ ಪಾಱಿದಪುವಾನಱಿದೆಂ ನಿಡುಸುಯ್ಯ ಗಾಳಿ ಕೊಂ
ಡೋಡಿದುವೊಂದನೊಂದೆಸೆಗದಲ್ಲದೊ[3]ಡೇಂ ಗಡ[3] ಪಾಱಿಲಾರ್ಪುವೇ ॥ ೩೯

(ಮಲ್ಲೆನಾಥಪುರಾಣಂ, ೭–೫೩.)

ಕೂಡಿದೆವಿಲ್ಲಿ ಕೂಡಿ ನಲಿದೋಕುಳಿಯಾಡಿದೆವಿಲ್ಲಿ ಸಂಗಡಂ
ಪಾಡಿದೆವಿಲ್ಲಿ ಪಂಕಜದ ಕೋಮಳಕೋಶದ ಬೀಜರಾಜಿಯಂ ।
ತೋಡಿದೆವಿಲ್ಲಿ ನೀಡಿ ಕುಟುಕಂ ಮನದಬ್ಕಿಱೊಳೀಗಳಿಕ್ಕಿ ಬಾ
ಯ್ಗೂಡಿದೆವೆಂದು ತಮ್ಮಿನಿಯರಂ ನೆನೆದಬ್ಬುವು ಜಕ್ಕವಕ್ಕಿಗಳ್ ॥ ೪೦

ಅಱಿಸಿ ಸುಟಿಸುಟಿದು ನಲ್ಲಳ
ನೆಱಂಕೆಗೊಚ್ಚೊಱಲಿಯೊಱಲಿ ದನಿಗೆಟ್ಟಟುತುಂ ।
ತೊಱಿತರ್ಪ ಕಣ್ಣನೀರ್ವರ
ಲೊಱಗಿದುದಚ್ಚೊಂದು ಮೂರ್ಛೆವೋಗಿ ರಥಾಂಗಂ ॥ ೪೧

ಎರಲಲೆಪಿಂದೆಸಟ್ ಮಿಸುಪ ನೆಯ್ದಿಲನೋಪಳೆಗೆತ್ತು ಗೆಂಟಱೊಳ್
ಕರೆದುದು ಬಾರಳಾಂ ಕರೆದೊಡಂ ಪ್ರಿಯೆಯೆಂದು ಕನಲ್ದು ಚಂಚುವಂ ।
ಮುರಿದುದು [4]ಬಂದ[4]ಡಂಗಿದಳೆ ಗೆತ್ತು ಬಿದಿರ್ದ ದಳಂಗಳಂ ತೆಱಂ
ದಿರಿದುದು ಜಕ್ಕವಕ್ಕಿ ಮಿಗೆ ಮೂರ್ಛೆಗೆ ಸಂದುದು ಕಾಣದೋಪಳಂ ॥ ೪೨

(ಅನಂತನಾಥಪುರಾಣಂ, ೭–೭೧.)

ಕಡುಬಿಸುಪನಹಿಮಕರನಿವ
ಱೊಡಲೊಳ್ [5]ಮಡಗಿಟ್ಟು[5] ಪೋದನೆನೆ ಮಱುಕಂ ನೂ ।
ರ್ಮಡಿಸಿದುದಗಲ್ಕೆಗಾಱಿದೆ
ಮಿಡುಮಿಡುಮಿಡುಕಿದುವು ಜಕ್ಕವಕ್ಕಿಯ ಪೊಣರ್ಗಳ್ ॥ ೪೩

ಪುಳಿನತಳಂಗಳೊಳ್ [6]ಸುಟಿದು[6] ನುಣ್ಮಳಲಂ ಜಲಶೀಕರಂಗಳಂ
ತಳಿದು ಕಬಳ್ದ ಪದ್ಮದಳಸಂಕುಳದಿಂದೆಸಱ್ವಾನನೊತ್ತಿ ಪೂ ।
ಗೊಳದೊಳಗಲ್ದ ಕೋಕವನಿತಾವ್ಯಥೆಗಂ ಶಿಶಿರೋಪಚಾರದೊಳ್
ಕೆಳದಿಯರಾದು[7]ವೋ[7] ತಳರ್ವ ತಣ್ಣೆಲರಿಂ ತರಳೋರ್ಮಿಮಾಲೆಗಳ್ ॥ ೪೪

(ಅನಂತನಾಥಪುರಾಣಂ, ೭–೭೧.)

---

[1] ರೊಳಲ್ಲಾ (ಕ.ಖ.ಬ). [2] ಬೇದದಿಂ (ಕ.ಖ.ಬ). [3] ಡೀಗಳೆ (ಖ.ಬ). [4] ಪಿಂ (ಖ.ಬ). [5] ಮರವಿಟ್ಟು (ಖ.ಬ). [6] ಸಳೆವ (ಅ). [7] ವಾ (ಅ).

ಇನನಸ್ಮತ್ಪ್ರಿಯನಾತನೊಳ್ ತವದ ಪೆರ್ಚಂ ನಿಚ್ಚಮಿಚ್ಛೈಪ ಕೋ
ಕನಿಕಾಯಕ್ಕಿನಿತಾಯ್ತು ಶೋಕಮವನಸ್ತಪ್ರಾಪ್ತಿಯಂ ನಾರ್ವು[1]ದ ।
ಕ್ಕಿ[1]ನಿತಾಯ್ತುತ್ಸವಮುತ್ಪಲಕ್ಕೆನುತವಂ ನೋಡಲ್ಕೆ ತಾನಾಪಿದ
ಬ್ಜಿನಿ ಕಣ್ಮುಚ್ಚುವ ಮಾಪ್ಕೆಯಿಂ ಮುಗಿ[2]ದುವೆ[2]ತ್ತಂ ಪದ್ಮಪತ್ರೋತ್ಕರಂ ॥ ೪೫

(ಚಂದ್ರಪ್ರಭಪುರಾಣಂ, ೮–೧೧.)

ಇದು ಕೋಕಶೋಕಮಂ ನೋ
ಡದ ಕೃಪೆಯಿಂ ಪದ್ಮನಯನಮಂ ಪದ್ಮಿನಿ ಮು ।
ಚ್ಚಿದಳೆನೆ ಭಾವಕದಿಂದ
ಲ್ಲದೆ ಭಾವಕಿ ತೊಱೆದಳಿನನಗಲ್ಕೆಯ ನೋವಂ ॥ ೪೬

(ಜಗನ್ನಾಥವಿಜಯಂ, ೧೬–೯೮.)

ಅಸಮಸಮವೃತ್ತಿಯಂ ಭಾ
ವಿಸುವಂದಲ್ಪತೆಯೆ ನಾಡೆ ಲೇಸೆಂಬವೊಲು ।
ಲ್ಲಸಿತೋತ್ಪಲಂಗಳೊಳ್ ಮುಗಿ
ದು ಸರೋಜಂ ನೆನೆಯಿಸಿತ್ತು ಚತು[1]ರಾಶ್ರ[3]ಮಮಂ ॥ ೪೭

(ಚಂದ್ರಪ್ರಭಪುರಾಣಂ, ೮–೧೨.)

ಪೊರೆಯದು ಜಾಡ್ಯದೊಳೆನಸುಂ
ಪಿರಿ[4]ದು[4]ಗುಣಂ ಸಿರಿಯುಮುಂಟು ತನಗೆನಿಪಾ ತಾ ।
ವರೆ[5]ಗಂ ಪೋದುದು[5] ನಲವೆನೆ
ಧರೆಯೊಳ್ ಕಾಲಮನದಾರೊ ಕಳೆಯಲ್ ಬಲ್ಲರ್ ॥ ೪೮

(ಚಂದ್ರಪ್ರಭಪುರಾಣಂ, ೮--೧೩.)

ಪಿರಿದುಂ ಬಿದಿ ನಿಜ ಜ[6]ನ್ಮಾ
ಕ[6]ರಮೆನಿಸಿದ ಪದ್ಮಜಾತಿಗಂ ಮ್ಲಾನತೆಯಂ ।
ದೊರೆಕೊಳಿಸಿದನೆನೆ ಮತ್ತಿತ
ರರೊಳಾತಂ ಮಾಟ್ಪ ಕೃಪೆ ಖಪುಷ್ಪಮದಲ್ತೇ ॥ ೪೯

(ಚಂದ್ರಪ್ರಭಪುರಾಣಂ, ೮–೧೪.)

ಇನನಸ್ತಂಗತನಾ[7]ಗೆಯು[7]ತ್ಪಲಿನಿ ಪೇೞ್ದುಂ ಲಕ್ಷ್ಮಿಯುಂಟೆಂಬುದ
ರ್ಕೆನ[8]ಗಿನ್ನಪ್ಪುದು[8] ರಾಜಬಾಧೆ ಬಟಿಕಂ ಲೇಸಲ್ತು ತಾನೆನ್ನ ಜೀ ।

---

[1] ದುಂ ಇ (ಅ). [2] ದುದೆ (ಅ). [3] ರಕ್ರ (ಅ). [4] ಯ (ಖ.ಬ). [5] ಗಮರೆಯಾಯ್ತು (ಅ), ಗದರೆಪೋಯ್ತು (ಕ). [6] ನ್ಮಾಂತ (ಕ.ಖ.ಬ). [7] ದನು (ಖ.ಬ). [8] ಗಂತಪ್ಪದು (ಅ).

ವನಕೆಂದುಬ್ಬೆಗದಿಂದೆ ನಂಜುರುಳಿಯಂ [1]ಪೋ[1] ನುಂಗಿದಳ್ [2]ಪಿಂಗದ[2]
ಬ್ಜಿನಿಯೆಂಬಂತೆವೊಲಾಯ್ತು ಕುಟ್ಮಳಿತಕಂಜಾತೋದರೇಂದಿಂದಿರಂ ॥ ೫೦
(ಚಂದ್ರಪ್ರಭಪುರಾಣಂ, ೮–೧೫.)

ಎನಗಾರಿರ್ದಪ[3]ರೋ[3] ರಥಾಂಗಮಿಥುನಕ್ಕೆಂತೊಲ್ಲ[4]ದೀ[4] ನೀಲಪ
ದ್ಮಿನಿಯೆನ್ನಂ ನಗುವಂತು ಮಾಡಿದೆ ಧರಿತ್ರೀನೇತ್ರ [5]ನೊಂದೆನ್ನ[5] ಕೇ ।
ಡನದೇ[6]ನೆಂ[6]ದಪೆಯೆಂದು ಸಂಕುಚಿತವಕ್ತ್ರಾನಕ್ತ ಭೃಂಗೀಕಲ
ಸ್ವನದಿಂ ಕೂಗಿಡುವಂತಿರಾಯ್ತು ದಿನಪಂಗಂಭೋಜಿನೀಕುಟ್ಮಲಂ ॥ ೫೧
(ಅನಂತನಾಥಪುರಾಣಂ, ೭–೬೮.)

ಬಿಸರುಹಮಿತ್ರನೆಂದೆನಿಸಿದೆಮ್ಮಿನ್[7]ನೋವದೆ[7] ರಾಜಬಾಧೆಗೊ
ಪ್ಪಿಸಿ ಪೆಱಸಾರ್ದನೋಲಗಿಪ ಭೃಂಗ[8]ಕುಲಾ[8]ವಳಿ ಬಿಟ್ಟು ಪೋಯ್ತು ತ ।
ಳ್ತೆಸೆವ ವಿಕಾಸಲಕ್ಷ್ಮಿ ಪಗೆಯಂ ನೆಱಿ ಪೊರ್ದಿ[9]ದಳೇ[9]ವೆನೆಂತು ಜೀ
ವಿಸು[10]ವೆನೆ[10]ನುತ್ತೆ ಮೂರ್ಛಿಸುವವೋಲ್ ಮುಗಿದತ್ತರವಿಂದಸಂಕುಳಂ ॥ ೫೨
(ಕುಸುಮಾವಳಿ, ೪–೧೯.)

ಆ ಸರಸೀಜಬಾಂಧವನ ಪಿಂಬಡಿನೊಳ್ ಕಡುವಿನ್ನನಾದವಿಂ
ತೀ ಸರಸೀರುಹಂಗಳವನೀ ಪದದೊಳ್ ಬಿಸುಟೆಂತು ಪೋಪೆವೆಂ ।
ಬೀ ಸಮಕಟ್ಟಿನೊಳ್ ನೆಲಸಿದಂ[11]ದದಿನಿರ್ದುವು[11] ಷಟ್ಪದಂಗಳು
ತ್ಕೇಸರಕೋಟಿಸಂಕಟಕುಶೇಶಯಕೋಶಕುಟೀರಕಂಗಳೊಳ್ ॥ ೫೩
(ಪಂಪಭಾರತಂ, ೪–೪೭.)

ರಸ[12]ಗೀತಾ[12]ತೋದ್ಯನೃತ್ಯಾನುಗದೊಳೆ ಕಹಳಾಶಂಖಭೇರೀಮೃದಂಗ
ಪ್ರಸರಂ ಮೇಳಾಪ[13]ದೊಳ್[13] ಘೂರ್ಣಿ[14]ಪ[14] ಮಣಿಶಿಖರಾಗಾರಪಾರಾವತಂಗ
ಳ್ಗಸಿತೋದ್ಯದ್ಧೂ[15]ಪ[15]ಧೂಮಚ್ಛವಿಗ[16]ಳೆ[16]ರವಮಂ ವಲ್ಲಭಾ[17]ಲೋಭ[17]ದಿಂ ಪು
ಟ್ಟಿಸೆ [18]ದೇವೋತ್ತಾ [19]ಲಯಂಗಳ್ಗೆಸೆದುದಸದಳಂ ಧೂ[19]ಪ[19]ವೇಳಾವಿಳಾಸಂ ॥ ೫೪
(ಅನಂತನಾಥಪುರಾಣಂ, ೭–೬೫.)

ಗಟಿಯಿಸುವ ತಮಂ ಮೂಡಲ್
ಪೊಡೆಗ[20]ಟ್ಟಿದ[20] ನಂಜೆಗೆಂಪು ಪಡುವಲ್ ಕೈಕೊಂ ।

---

[1] ಪೊಂ (ಕ.ಖ.ಬ). [2] ಪೇಬದ (ಅ). [3] ರಿ (ಅ.ಖ.ಬ). [4] ದರ್ (ಅ). [5] ನೆಂ ದನ್ನ (ಖ.ಬ), ನೋಡನ್ನ (ಅ). [6] ವೋ (ಅ.ಖ.ಬ). [7] ನೀಗಳೆ (ಅ). [8] ಭುತಾ (ಅ). [9] ದುದೇ (ಅ). [10] ಪುದೆ (ಅ). [11] ದಂತೆಱಗಿರ್ದವು (ಅ). [12] ಗಿತಾ್ತ (ಕ). [13] ಕಂ (ಅ). [14] ಸೆ (ಅ), ಸಿ (ಕ). [15] ತ (ಕ.ಖ.ಬ). [16] ಳ (ಖ.ಬ). [17] ರೋಚ (ಅ). [18] ಜ್ಯೆವೇಂದ್ರಾ (ಅ). [19] ಮಃ (ಅ). [20] ಟ್ಟುವ (ಅ).

ಡೆಟಲೆ ಧರೆಗರ್ಧನಾರಿಯ
ತಟೆವಿಡಿದಂತಾಯ್ತು ಗಗನಮಂಡಲಮಿನಿಸಂ ॥ ೫೫
(ಅನಂತನಾಥಪುರಾಣಂ, ೭–೭೨.)

ಅಂಗಂಗಳ್ ನಸು[1]ದೋಱು[1] ದಿ
ಗಂಗನೆಯರ ಮೇಲೆ ಕವಿದ [2]ಕಾ'ಟ್ಗತ್ತಲೆ ಚೆ ।
ಲ್ವಂಗುಟ್ಟ ಕರಿಯ ಕಾಗಿನ
ಭಂಗಿಯನನುಕರಿಸುತಿದ್ದವಂತಾ ಕ್ಷಣದೊಳ್ ॥ ೫೬
(ಲೀಲಾವತಿ, ೧೦–೨೬.)

ದಿನನಾಥಂ ಪೆಱಪಿಂಗೆ ಪೆತ್ತು ತೆಱಪಂ ಮೆಯ್ಪೆರ್ಚಿ ರಾಗಂ ನಿಶಾಂ
ಗನೆಯಿಂ ಮು[3]ನ್ನ[3] ಮೃಗಾಂಕನೊಳ್ ನೆರೆಯಲೆಂದಾಶಾವಧೂ[4]ದೂತ[4]ವ ।
ರ್ತನದಿಂದಂ ಗಗನಸ್ಥಳೀಕುಲಟೆ ಕೊಂಡಳ್ ನೀಲಚೇಲಾವಕುಂ
ಠನಮಂ ತಾನೆನೆ ದಟ್ಟಮಾಗಿರೆ ತಮಂ [5]ಪರ್ಬಿತ್ತು[5] ದಿ[6]ಕ್ಪಾಂ[6]ತಮಂ ॥ ೫೭
(ಅನಂತನಾಥಪುರಾಣಂ, ೭–೭೩.)

ಇನನುಟಿದಪರದಿಶಾಕಾ
ಮಿನಿಯೊಳ್ ಕೂಡಿದೊಡೆ ನೋಡಲಾಱಿದೆ ಪೂರ್ವಾಂ ।
ಗನೆ ಮುಚ್ಚಿದಕ್ಷಿಪಕ್ಷ್ಮದ
ತನಿಗರ್ಪಿನಿಸಿದುದು ಕೊನರ್ವ ಕಟ್ಟಲೆ ನಭದೊಳ್ ॥ ೫೮
(ಅನಂತನಾಥಪುರಾಣಂ, ೩–೬೭.)

ಪ್ರಾಚೀಮುಖಮ್ಮ[7]ಗ[7]ಮದಮು
ರ್ವೀಚಳದಳಕಂ ನಭಸ್ಥಳೀ[8]ನೀಳ[8]ವಿಭೂ ।
ಷೋಚಿತ ಮರೀಚಿ [9]ಪಸರಿಸೆ[9]
ನೂಚೀನಿರ್ಭೇದ್ಯಮಾದುದಂದಿನ ತಿಮಿರಂ ॥ ೫೯
(ಲೀಲಾವತಿ, ೬–೧೦೮.)

ದಿವಿಜೇಂದ್ರೇಭ[10]ಪ್ರಧಾನಂ[10] ಬಹಳದಹನದೂಮಂ ಯಮೋಚ್ಚೈರ್ಲುಲಾಯ
ಚ್ಛವಿಕಂ ಕ್ರವ್ಯಾದಕಾಯದ್ಯುತಿ ವರುಣಗೃಹಸ್ಥಾ[11]ಸ್ನು[11]ಕೃಷ್ಣಪ್ರಕಾಶಂ ।
[12]ಪ[12]ವನೋದ್ಯತ್ಕೃಷ್ಣಸಾರಪ್ರಭೆ ಧನದಪುರೀನೀಲ[13]ಶಾ[13]ಲಾಂಶುಜಾಲಂ
ಭವಕಂಠಚ್ಛಾಯೆ ಪರ್ಬಿತ್ತೆನೆ [14]ದಶದಿಶೆ[14]ಯಂ ಮರ್ಬು ಪರ್ಬಿತ್ತ ಗುರ್ಬಿಂ ॥ ೬೦
(ಲೀಲಾವತಿ, ೧೦–೨೭.)

---

[1] ದೆಱೆಯೆ (ಅ). [2] ತೆ (ಅ). [3] ನ್ನೆ (ಅ). [4] ದ್ಯೌತ್ಯ (ಅ). [5] ತಳ್ತತ್ತು (ಅ). [6] ಗ್ಪಾ (ಕ) [7] ದು (ಖ.ಬ). [8] ನಿಳಯ (ಅ). [9] ಬರೆವರೆ (ಅ). [10] ಪ್ರಭೇದಂ (ಅ). [11] ಶ್ಮ (ಖ.ಬ). [12] ಸ (ಕ). [13] ತ್ಮೆ (ಕ.) [14] ದೆಸದೆಸ (ಅ).

ಮೆಟ್ಟಿದನಿತ್ತೆ ಧಾರಿಣಿ ಚರಾಚರಭೇದ ಸುವಸ್ತು ರೂಪುಗಳ್
ಮುಟ್ಟಿದನಿತ್ತೆ ಬಕ್ಕ ಬಯಲಾಗಸವೆಂಬರ ಮಾತು ನಿಶ್ಚಯಂ ।
ಗೆಟ್ಟುದು ತಾನುಮುಂ ತನಗೆ ಸಂಶಯಮೆಂಬಿನಿತೊಂದು ಮೋಹನಂ
ಪುಟ್ಟೆ ಜನಕ್ಕೆ ಗಾಢತರಮಾದುದು ಘೋರತಮಂ ತಮಸ್ತಮಂ ॥ ೬೧

ಜಗುನೆಯ ಕರ್ಮಡು ನೆಲನಂ
ದಿಗಿಭದ ಮದವಟ್ಟೆ ದೆಸೆಗಳಂ ರಾಹುಶಿರಂ ।
ಗಗನಮನೆಡೆಗೊಂಡತ್ತೆನೆ
ಜಗಮಂ ಪರ್ಬಿದುದು ಬಹಳತಮಸಂ ತಮಸಂ ॥ ೬೨

(ಮಲ್ಲಿನಾಥಪುರಾಣಂ, ೭–೨೧.)

ದೆಸೆಯಿದು ಭೂವಳಯಮಿದಾ
ಗಸಮಿದು ತಾನೆಂಬ ಭೇದಮಿಲ್ಲೆನೆ ತಮಮ ।
ರ್ಬಿಸಿದುದು ಜಗಮಂ ಕೃ[1]ಷ್ಣಂ[1]
ಬಸಿಱೊಳಗಿಟ್ಟಂತೆ ರಜನಿ[2]ಚರ[2]ಭಯದಿಂದಂ ॥ ೬೩

(ಲೀಲಾವತಿ, ೧೦–೨೯.)

ಮಸಿಯಿಂದಂ ಜಗಮೆಲ್ಲಮಂ ದಿತಿಸುತಂ [3]ಮೇಣ್[63] [4]ಪೂಳ್ದನೋ[4] ಕಾಳಮೇ
ಘಸಮೂಹಂ ದೆಸೆಯೆಲ್ಲಮಂ [5]ಮುಸುಕಿತೋ[5] ಗಂದೇಭಚರ್ಮಂಗಳಂ ।
ಪ್ರಸರಂಗೆಯ್ದನೊ ಶಂಭುವೆಂಬ ಬಗೆಯಿಂ [6]ತಳ್ಪೊಯ್ದು ಕಪ್ಪೇಱು[6] [7]ಸೂ
ಚಿಸಲಾರ್ಗಂ ವಶಮಾಗದಂತು ಕವಿಯಿತ್ತು [7]ದ್ದಾಮ ಭೀಮಂ ತಮಂ ॥ ೬೪

(ಪಂಪಭಾರತಂ, ೪–೪೯.)

ಕರಿದತ್ತಾ ತುಂಬಿಗಂ ಕಾರ್ಮುಗಿಲ ಬಳಗಮಾ ತುಂಬಿಗಂ ಕಾರ್ಮುಗಿಲ್ಗಂ
ಪರಪುಟ್ಟಚ್ಛಾಯೆ ತಾಂ ನೋಱ್ಪೊಡೆ ಕಡುಕರಿದಾ ತುಂಬಿಗಂ ಕಾರ್ಮುಗಿಲ್ಗಂ ।
ಪರಪುಟ್ಟಚ್ಛಾಯೆಗಂ ಕಜ್ಜಳರುಚಿ ಕರಿದಾ ತುಂಬಿಗಂ ಕಾರ್ಮುಗಿಲ್ಗಂ
ಪರಪುಟ್ಟಚ್ಛಾಯೆಗಂ ಕಜ್ಜಳರುಚಿಗಮದೇಂ ಕಱ್ರನಾಯ್ತೋ ತಮಂಧಂ ॥ ೬೫

ಅಮಮ ಮಧುಕರ ಕದಂಬಕ
ಮಮಮಮತಿಸ್ನಿಗ್ಧರಂಜಿತಾಂಜನಪುಂಜೋ ।

---

[1] ಷ್ಣನ (ಕ). [2] ಜರೆ (ಕ). [3] ಮುಂ (ಅ). [4] ಪೂಣ್ದನೊ (ಕ). [5] ಕವಿದುದೊ (ಅ). [6] ತಳ್ಪೊಯ್ಗೆ ತಳ್ಪೊಯ್ದು (ಕ.ಖ.ಬ). [7] ಪುಂಜಿಸಲಕ್ಕಂ ಮಱಿಮಾನಿತುಳ್ಕೆ ಕವಿದತ್ತು (ಕ), ಪುಂಜಿಸಲಕ್ಕಪ್ಪಟಮಾಗದಂತು ಕವಿಯಿತ್ತು (ಖ.ಬ).

ಪಮಮಮಮಸತಿ ಸಮೂಹಾ
ಶ್ರಮಮಮದೇವೊಗಚ್ಪೆನುರ್ಬಿ ಪರ್ಬಿದ ತಮಮಂ ॥ ೬೬

ಬಿದಿ ಹರಿನೀಲ[1]ದೊಳ್[1] ಕಡೆದಜಾಂಡಮನಂಜನದೊಳ್ ಪೊರಳ್ಚಿದಂ
ತೊದವಿರೆ ಮರ್ಬು ಸಂದೆ[2]ಯ[2]ದೆ ತಮ್ಮೊಡಲಂ [3]ಬಿಡದಂದು[3] ನೋಲ್ಪರೆಂ ।
ಬುದನೆನೆ ನೋಡಿ ನಿಟ್ಟಿಸುವರಾರಿದು ಪರ್ವತಮೆಂಬಿದುರ್ವಿಯೆಂ
ಬಿದು ದೆಸೆಯಿಂಬಿದಭ್ರಪಥಮೆಂಬ ಚರಾಚರವಸ್ತುಭೇದಮಂ ॥ ೬೭

(ಮಲ್ಲಿನಾಥಪುರಾಣಂ, ೭–೨೨.)

ಈ ಮಂದಮಪ್ಪ ಕಟ್ಟಲೆ
ಕಾಮಾಂಧಕಜನದ ಮನದ ಕಟ್ಟಲೆಯಿಂದಂ ।
ಭೀಮಮೆನೆ ಕವಿದು ಕೂಡೆ ತ
ಮೋಮಯಮೆನಿಸಿದುದು ಸಕಲ ಭುವನಾಂತರಮಂ ॥ ೬೮

ಜಾರರ ಸಿರಿ ಚೋರರ ಸಿರಿ
ಕ್ರೂರಸರಂದೋಱುತಿರ್ಪ ಗೂಗೆಯ ಸಿರಿ ಮ ।
ತ್ತಾರ ಸಿರಿ ತಮದ ಸಿರಿ ದೃ
ಕ್ಸಾರತೆಗದು ನಾಡೆ ಗೆಂಟು ಕಷ್ಟನ ಸಿರಿವೋಲ್ ॥ ೬೯

ಘೋರಾಂಧಕಾರಮತಿದು
ರ್ವಾರಂ ನೆಲೆವೆರ್ಚಿ ಬಯಲೊಳಂ ಜಾ[4]ರರ[4] ಸಂ ।
ಚಾರಕ್ಕೆಡೆಗೊಟ್ಟಿತ್ತಪ
ಕಾರಿಯ ಸಿರಿ ಖಳರನಲ್ಲದೇಂ ತಣಿಪುಗುಮೇ ॥ ೭೦

(ಮಲ್ಲಿನಾಥಪುರಾಣಂ, ೭–೨೩.)

ಪದತಳಮಂ ತಳರ್ಚಲಿನಿಸಿಲ್ಲೆನೆ ಧಾರಿಣಿ ಮಾಯವಾದುದೋ
ವದನಮನುದ್ದವೆತ್ತಲಿನಿಸಿಲ್ಲೆನೆ ವಾರಿದವೀಧಿ ಮೇಲೆ ಬಿ ।
ಟ್ಟುದೊ ತನುವಿಂಗೆ ಸಾರಲಿನಿಸಿಲ್ಲೆನೆ ನಾಲ್ದೆಸೆ [5]ತಾ[5]ಪಿಸಿತ್ತೊ ಪೇ
ಟಿದು ವಿಪರೀತಮೆಂದು ಸುಟಿವರ್ ನೆಲೆ ಕಟ್ಟಲೆ ಪೆತ್ತುದೇಕ್ಷ್ಮಿಯಂ ॥ ೭೧

ಕರಿದು ಪಿಕಂ ಪಿಕಕ್ಕೆ ಕರಿದಾ ಭ್ರಮರಂ ಪಿಕದಿಂದೆ ತುಂಬಿಯಿಂ
ಕರಿದೆಸೆವಂಜನಂ ಪರಭೃತಕ್ಕಳಿಗಂಜನಕಿಂದ್ರನೀಲಮುಂ ।

---

[1] ದಿಂ (ಕ). [2] ಗ (ಅ). [3] ತಡವ್ಯತ್ತ (ಕ.ಖ.ಬ). [4] ರಾ (ಅ). [5] ವ್ಯಾ (ಕ).

ಕರಿದು ಪಿಕಾಳಿಯಿಂದಳಿಯಿನಂಜನದಿಂ ನೆಗಟ್ಟಿಂದ್ರನೀಲದಿಂ
ಕರಿದೆನಲುರ್ಬಿ ಪರ್ಬಿದುದಗುರ್ಬಿಸಿ ಸರ್ವದಿಗಂತಮಂ ತಮಂ ॥ ೭೨

ಹರಬರ್ಹಿಗಣಗಳಬ್ಜೋ
ದರಶಮನಶರೀರವನ್ಯೆಭೃತಷಟ್ಚರಣೋ ।
ತ್ಕರದ ದೊರೆಯಪ್ಪ ಕರ್ಪಿಂ
ಕರಮುಬ್ಬರಮಾಯ್ತು ಬಹಳತಮಸಂ ತಮಸಂ ॥ ೭೩

ಇದು ತಿಮಿರಾಪಹಾಂಜನಮುಲೂಕಕುಲಕ್ಕಿದು ಘಂಶ್ಟಲೀರತ
[1]ಕ್ಕುದಿತತಮಾಲ[1]ಮಂಟಪಮಿದುತ್ಪಲಲಕ್ಷ್ಮಿಯ ಮಂಡನಕ್ಕೆ ಸು ।
ತ್ತಿದ ನವನೀಲಕಾಂಡಪಟಮಿಂತಿದು ಚಕ್ರಯುಗ[2]ಕ್ಕಗಲ್ಬಲ[2]
ಕ್ಕಿದ ಕಿಸು[3]ರ್ವೆ೯ರ[3] ಕರ್ಬೊಗೆಯೆನಿ[4]ಸ್ಪವೊಲಾ[4]ಯ್ತು ಮಹತ್ತಮಂ ತಮಂ॥ ೭೪
(ಚಂದ್ರಪ್ರಭಪುರಾಣಂ, ೮–೧೯.)

ಇದು ಚೋರರದೃಶ್ಯಾಂಜನ
ಮಿದು ವೃದ್ಧಾಂಗನೆಯರೆಸೆವ ಪಲತೌಷಧಮಿಂ ।
ತಿದು ಕಾಮನ [5]ಕೂ[5]ರಲಗೆನಿ
ಸಿದುದಪ್[6]ಕೃತ್ಸ್ನ[6]ರಮಂಧಕಾರಮಪಾರಂ ॥ ೭೫
(ಚಂದ್ರಪ್ರಭ ಪುರಾಣಂ, ೮–೨೦.)

ಸರಳಂ ವಕ್ರಂ ತರಳಂ
ಸ್ಥಿರಮುಚ್ಚಂ ನೀಚಮಿಾಕ್ಷಣಕ್ಕೊದವೆ ತಮಂ ।
ಸರಿಯಾದುದಂತೆ ವಿಗತಾಂ
ತರವೆನಿಪನ [7]ಮೆಚ್ಚು[7] ಬಲ್ಲರಂ ಮೆಚ್ಚಿಕುಮೇ ॥ ೭೬
(ಚಂದ್ರಪ್ರಭಪುರಾಣಂ, ೮–೨೧.)

ಮುಟ್ಟಿದುದಲ್ಲದಿಲ್ಲುಟಿದ ಭೂತಳಮೆಣ್ದೆಸೆಗಳ್ ನಭಸ್ಥಳಂ
ತೊಟ್ಟನೆ ಮಾಯವಾಯ್ತು ತನುವಿರ್ದಪುವಿಲ್ಲೆನುತಂ ಕರಾಗ್ರದಿಂ ।
ಮುಟ್ಟಿದರಿರ್ದ ತಾಣದೊಳೆ ಸುಮ್ಮನೆ ವಿಸ್ಮಯದಿಂ ಜನೋತ್ಕರಂ
ನಟ್ಟವೊಲಿರ್ಪಿನಂ ನಿಮಿರ್ದು ಪರ್ಬಿದುದುರ್ಬಿ ಮಹತ್ತಮಂ ತಮಂ ॥ ೭೭

ಇನದೀಪಂ ನಂದಿರೆ [8]ಬಂ
ದು[8] ನಿಶಾರಾಕ್ಷಸಿ ಚರಾಚರೌಘಗ್ರಸನಾ ।

[1] ಕ್ಕೊದವಿದಕಾಳ (ಖ.ಬ). [2] ಕ್ಕಗಲ್ದೆ ಗಿ (ಖ). [3] ರ್ವಕ್ಕೆ (ಅ). [4] ಪ್ಪಿನಮಾ (ಅ) ಕಾ (ಅ.ಖ). [6] ದೃಕ್ಸಾ (ಅ). [7] ಪೆರ್ಚು (ಕ). [8] ದೇಗ (ಕ).

ರ್ಥಿನಿ ಭುವನಭವನಮಂ ಭೋಂ
ಕನೆ [8]ಪಿಡಿಗೆತ್ತಂದಮಾದುದಂದು[8] ತಮಂಧಂ ॥ ೨೯
(ಜಗನ್ನಾಥವಿಜಯಂ, ೧೬–೧೦೧.)

ಉದಯವಿಶಾಲಶೈಲದ ತಮಾಲವನಂ ನವನೀಲರತ್ನಚೂ
ಳದ ರುಚಿ ನೀರಜಾಗರದ ನೀರರುಹಂ ಮುಗಿದಿರ್ದುದಿಂದ್ರದಿ ।
ಙ್ಮದಗಜದಾನಸೌರಭಕೆ ಬಂದೆಱಗಿರ್ದ ಮದಾಳಿಮಾಕ್ಕೆಯೆಂ
ಬುದು ಬಗೆಗುಣ್ಮೆ ಪರ್ವಿದುದು ಪೂರ್ವದಿಗಂತಮನಾವಗಂ ತಮಂ ॥* ೨೯

ಇದು ಮಧುಕರನಿದು ಮಲ್ಲಿಗೆ
ಯಿದು ಕೋಕಿಲನಿದು ಮರಾಳನಿದು ಮದಗಜಮಿಂ ।
ತಿದು ಕಂಠೀರವನಿದು ಕರಿ
ದಿದು ಬಿಳಿದೆಂದಱಿಯಬಾರದುರ್ವಿದ ತಮದೊಳ್ ॥ ೮೦
(ಗಿರಿಜಾಕಲ್ಯಾಣಂ, ೪–೭೭.)

ನಸುಗಟ್ಟಲೆಯರೆಗಟ್ಟಲೆ
ವಸುಕುಂಗಟ್ಟಲೆ ಪೊದಪ್ಪಿ ಪೆರ್ಗಟ್ಟಲೆ ನಾ ।
ಲ್ಪೆಸೆಗಟ್ಟಲೆ ರಸಗಟ್ಟಲೆ
ಪೊನಗಟ್ಟಲೆಯೆನಿಸಿ ಕೂಡೆ ತೀವಿತು ತಿಮಿರಂ ॥ ೮೧
(ಗಿರಿಜಾಕಲ್ಯಾಣಂ, ೪–೭೩.)

ಗಿರಿಗಳ್ ನೀಲಾದ್ರಿಯೆಂಬಂತಿರೆ ನಿಖಿಳನದೀರಾಜಿ ಕಾಳಿಂದಿಯೆಂಬಂ
ತಿರೆ ವೃಕ್ಷಂಗಳ್ ತಮಾಲಾಕೃತಿಯಿನಿರೆ ಮೃಗಶ್ರೇಣಿ ಋಕ್ಷಂಗಳೆಂಬಂ ।
ತಿರೆ ನಾನಾಪಕ್ಷಿಗಳ್ ಕೋಗಿಲೆವೊಲಿರೆ ನಭಂ ಕಾರ್ಮ್ಮಗಿಲ್ಮಿಚ್ಚಿದಂತಾ
ಗಿರೆ ಭೂನೀಳಸ್ಥ[2]ಳಂ ಕು[2]ಟ್ಟಿಮವೆನೆ ನೆಗಟ್ಟಿತ್ತಂದು ಘೋರಾಂಧಕಾರಂ ॥ ೮೨

ಪರಸಿದರಿದಿರ್ಗೊಂಡರಲಂ
ಕರಿಸಿದರಾದರಿಸಿದರ್ ಕರಂ ನುತಿಗೆಯ್ದರ್ ।
ಬೆರಸಿದರಪ್ಪಿದರೆಳಸಿದ
ರೆರೆದರ್ ನಲನಲಿದು ಜಾರೆಯರ್ ಕಟ್ಟಲೆಯಂ ॥ ೮೩
(ಗಿರಿಜಾಕಲ್ಯಾಣಂ, ೪–೭೨.)

ವಾರಿಜಮಿತ್ರನಿಂ ಮಗುಟದಿರ್ಕೆ ತಮಂ ತವದೆಂದುಮಿರ್ಕೆ ನೀ
ರೇರುಹಮೈರಿಯಂ ಸೆಱಯಲಿಕ್ಕಾಗೆ ರಾಹು ಮನೋಜವಲ್ಲಭಂ ।

---

[1] ಪೊಕ್ಕಂತಾಗಳಾಯ್ತು ಬಹಳ (ಕ). * ಇಲ್ಲಿಂದ ಮುಂದಕ್ಕಿರುವ ನಾಲ್ಕು ಪದ್ಯಗಳು (ಕ) ಪ್ರತಿಯಲ್ಲಿಲ್ಲ. [2] ಳತ್ಕು (ಬ).

ಜಾರರಭೀಷ್ಟಮಂ ಕೊಡುಗೆ ಲಡ್ಡುಗೆಯಂ ಬೆನಕಂಗೆ ಹೆಂಡಮಂ
ಮಾರಿಗೆ ಬೊಮ್ಮಯಂಗೆ ಚರುವಂ ಪದೆದೆತ್ತುವೆನೆತ್ತಿ ಬೀಱುವೆಂ ॥ ೪೪

ಎಱಗುವ ಕಣ್ಣ ನನ್ನೆ ಬಗೆದೋಱುವ ಪುರ್ಬಿನ ಜರ್ಬು ಜಾರರಂ
ಸೆಱೆಯಿಡುವಾನನಂ ಪದಿರನಾಡುವ ಸೂಱ್ನುಡಿ ದುಷ್ಟಚೇಷ್ಟೆಯಂ ।
ಮುಱಿಯಿಪ ತಮ್ಮ ಭಂಗಿ ಮಱುವಾಟ ಮನೋಜಸುಖಕ್ಕೆ ಸಂತತಂ
ಮಱುಗುವ ಚಿತ್ತದಿಂ ರಜನಿರಂಜನಮಾದುದು ಬಂಧಕೀಜನಂ ॥ ೪೫

ಪುರುಷರ ಸಮಕ್ಷದೊಳ್ ಕುಚ
ಭರಮಂ ನೀವುವೊಡೆ ವಾಮಕರದಿಂ ಮುಡಿಯಂ ।
ಹರಿಣಾಕ್ಷಿ ಬಿಟ್ಟು ಮುಡಿವೊಡೆ
ನಿರಂತರಂ ಪಾಣ್ಬೆಯೆಂದು ಬಗೆಗಾ ವದುವಂ ॥ ೪೬

(ಮದನತಿಲಕಂ, ೬–೩೭.)

ಉಡೆಯಂ ಸಡಿಲಿಸಿಯುಡುವೊಡೆ
ನಡೆ ನೋಱ್ಪೊಡೆ ತನ್ನ ತಲೆಯುಮಂ ಕಿವಿಯುಮನಂ ।
ತಡಿಗಡಿಗೆ ತುಱುಸಿಕೊಳ್ವಡೆ
ಪಡಿಮಾತೇಂ ನಿರ್ವಿಚಾರದಱು ಪುಂಶ್ಚಲಿಯಂ ॥ ೪೭

ಬಾಲಾಲಿಂಗನ ಚುಂಬನ
ವಾಲೋಕಂ ಹಾಸ್ಯ ತಕ್ಕೆ ನನ್ನೆ ಪದಿರ್ ಬ ।
ರ್ಪಾಳಾಪಂ ಪುಟ್ಟುಗುಮಱು
ಲೋಲೇಕ್ಷಣೆ ಪಾಣ್ಬನಿದಿರೊಳನತಿಗಮೋಘಂ ॥ ೪೮

(ಮದನತಿಲಕಂ, ೬–೩೯.)

ನೋಡದ ಮಾಱ್ಕೆಯಿಂದಡರೆ ನೋಡುವ ಪುರ್ವಿನ ಜರ್ವಿನಿಂದೆ ಮಾ
ತಾಡುವ ಕೂಸನೆತ್ತಿ ಪರಿಚುಂಬಿಸಿ ತನ್ನ ರತೋಪಚಾರದೊಳ್ ।
ಮಾಡುವಳುರ್ಕೆ[1]ಗಳ್ ನೆಱೆಯೆ[1] ತೋಱುವ ನಂದಣಿಯಾಗೆ ಪೊರ್ದಿ ಬಾ
ಯ್ಗೂಡುಪ ಜಾರೆ ಜಾರನ [2]ನೆಗಟ್ಟೆಯ[2] ಕಾಮನ ಬಯ್ಕೆಯಲ್ಲಳೇ ॥ ೪೯

ಪ್ರತಿಮೆಯ ಪೂಜೆ ದೇವತೆಯನೆಯ್ದುವವೋಲ್ ನೆವದಿಂ ಪೆಱರ್ಗೆ ಮಾ
ಪ್ಪತಿಶಯ ಚಾಟು[3]ವುಂ[3] ಮುನಿನುಮಪ್ಪುಗೆಯುಂ [4]ಮನದಾಸೆಯೊಳ್ಪು[4] ನಂ ।

---

[1] ಕೈಗಱೆಯೆ (ಖ.ಬ). [2] ಗಲ್ಕೆತ್ತಿದ (ಕ). [3] ವಂ (ಕ.ಖ). [4] ಮನದಾ ತ್ಮ ನೊಳ್ನು (ಕ).

ಗತರತದಲ್ಲಿ ಸಂತಸಮನೀವವೋಲ್ ಗೋಷ್ಠಿಗೆ ಜಾತಿಜಾರೆಯರ್
ಚತುರೆಯರುಂ ಬೆಡಂಗಿಯರ ಭಂಗಿಗಳಂಗಜಗೂಢಹೇತುಗಳ್ ॥ ೯೦

ಕೂಡಲ್ಪಡೆಯದೊಡಂ ಮಾ
ತಾಡಿ ಮೊಗಂನೋಡಿಯವರ ಗುಣವರ್ಣನಮಂ ।
ಪಾಡಿಸಿ ಮತ್ತಂ ದಣಿಯದ
ನಾಡಾಡಿಯ ಪಾಣ್ಬೆಗೊಳವು ಕುಟಿಲಮನೇಕಂ ॥ ೯೧
(ಮದನತಿಲಕಂ, ೬–೪೮).

ವಿವಿಧಾನ್ನಪಾನ[1]ಖಾ[1]ನಾ
ದಿ ವಸ್ತ್ರಲೇಪನ ಸುಗಂಧಕುಸುಮಾದಿಗಳಂ ।
ನೆವಮಿಟ್ಟು ಪೆಱರ್ಗೆ ಕೊಟ್ಟ
ಟ್ಟುವ ಪಾಂಗಿನ ಪಾಣ್ಬೆಯಿರವನಾರ್ ಭಾವಿಸುವರ್ ॥ ೯೨

ಕುಱುಪಂ ಪುರ್ವಿನ ಜರ್ವು ತೋಱೆ ಬಗೆಯಂ ಕಣ್ಸನ್ನೆಗಳ್ ಪೇಟೆ ತ
ನ್ನೆಱಕಂ ತನ್ನ ಮನಕ್ಕೆ ಕೂಡೆ ಕೆಲಕಂ ಗಂಡಂಗಮೊಳ್ಪಂ ಕರಂ ।
ಮೆಱೆವಾ ಪೌ[2]ಢೆಯೆ ಜೋ[2]ಡೆಯಕ್ಕುಮೆಡೆಯೊಳ್ ದೂತಟ್ಟಿ ದೂಱುಂಗೆ[2] ಪೆ
ರ್ವಱೆಯಂ ಪೊಯ್ಸಿ ಕೆಲಕ್ಕೆ ನಾಣ್ಟಿ ತಲೆಗುತ್ತಿರ್ಪಾಕೆಯೇಂ ಜಾರೆಯೇ ॥ ೯೩
(ಪಂಪಭಾರತಂ, ೪–೮೨).

ನೆವದಿಂದಂ ಮನೆಯಾಣ್ಮನಂ ಮನೆಯುಮಂ ಗೆಲ್ದೆಯ್ದಿ ಸಂಕೇತಗೇ
ಹವನೊಲ್ದಂತಿರೆ ನಾಟಕಂನಲಿದು ಜಾರಂಗಿಂಬುಗೆಯ್ದಂಗಭಂ ।
ಗವ[3]ನೆಂದುಂ[3] ಪೊರೆದಾಟಿಗೊಂಡಱಿಸಿ ಬೆನ್ನೊಳ್ ಬಂದರಂ [4]ಬಂ[4]ದು ಸಾ
ಧುವಿನಂತಿರ್ಪಳೆ ಜಾತಿಜಾರೆ ನುಡು ದೂಱಿಂ ಪೇಟುವಳ್ ಜಾರೆಯೇ ॥ ೯೪

ಮನೆವಾರ್ತೆಯ [5]ಕೋಟಲೆಯೊಳ್[5]
ಜನಪದಗಮನಂಗಳೆಡೆಯೊಳಂಗಜರಾಗಂ ।
ಜನಿಯಿಕ್ಕುಮೆಂದು ಕೆಲರ್ ಸ
ಜ್ಜನದಿಂ ಮನೆವಾರ್ತೆಗೈಸಲೊಲ್ಲರ್ ಚದುರರ್ ॥ ೯೫
(ಮದನತಿಲಕಂ, ೬–೧೧.)

---

[1] ನಾ (ಬ). [2] ಡೆಯಕ್ಕುಮೆಡೆಯೊಳ್ ದೂಟಿಂದ ದೂಟಿಂಗೆ (ಅ), ಕೆಯಕ್ಕುಮೆಡೆಯೊಳ್ ದೂಱುಟ್ಟಿದೂಱುಂಗೆ (ಕ), ಡೆಕೂರ್ಮೆಡೆಯೊಳಂದೂತಟ್ಟಿದೂಱುಂಗೆ (ಖ.ಬ).
[3] ನೇನಾಂ (ಕ). [4] ಬಿಂ (ಕ). [5] ತೋಟಿಯೊಳಂ (ಖ.ಬ).

ಗುರುಗಳ ನಂಟರ ಕೆಳೆಯರ
ಪೊರೆವಾ[1]ಳ್ದನ[1] ಮೆಚ್ಚುದವರ ನಪತಿಯ ಕೆಲದೊಳ್ ।
ಪರಿಭವಿಸಲ್ ನೆಱನೆತ್ತಲ್
ಕರಮಱಲಿಸಲಾಗದಾತ್ಮ ಸತಿಯಂ [2]ಚದುರಂ[2] ॥ ೯೬

(ಮದನತಿಲಕಂ, ೬–೧೩.)

ನುದತಿಯರಾರುಂ ಸಂಸ
ರ್ಗದ ಕತದಿಂ ದೋಷಮಂ ಗುಣಂಗಳುಮಂ ಮಾ ।
ಣದೆ ಕೈಕೊಳ್ವು[3]ದಱಿಂದಂ[3]
ನುದತಿಗೆ ಯೋಜಿಸುಗೆ ನೀತಿಯಂ ಧರ್ಮಮುಮಂ ॥ ೯೭

(ಮದನತಿಲಕಂ, ೬–೧೪.)

ಲತೆ ಮೊದಲಾಗಿ ಸಮೀಪ
ಸ್ಥಿತವೃಕ್ಷಮ[4]ನೆಂ[4]ತುಟಾದೊಡಂ ಪರ್ಬುಗುಮಾ ।
ಸ್ಥಿತಿಯಿಂ ಸತಿ ಸಂಗತ್ಯದ
ಕತದಿಂ ಕೆಟ್ಟಾರೊಳಾದೊಡಂ ಪುದುವಾ[5]ಬ್ಜಂ[5] ॥ ೯೮

(ಮದನತಿಲಕಂ, ೬–೧೫.)

ಪತಿಭಕ್ತಿಯ ಧರ್ಮಜ್ಞೆಯ
ಮತಿವಂತೆಯ ಸಂದ ಶೌಚವಂತೆಯ ಸತ್ಯಾ ।
ನ್ವಿತವಚನೆಯ ಕತೆಯನೆ ಪೇ
ಳ್ದತಿಶಯದಿಂ ತನ್ನ ಸತಿಗೆ ಪಂಡಿತನಪ್ಪಂ ॥ * ೯೯

(ಮದನತಿಲಕಂ, ೬–೧೬.)

ಗುಣಮುಂ ಸುಂದರರೂಪಮುಂ ವಿಭವಮುಂ [6]ಸೌಭಾಗ್ಯಮುಂ[6] ಧಾಗ್ಯಲ
ಕ್ಷಣಮುಂ ಚಾರುಚರಿತ್ರಮುಂ ಕುಲಮುಮೊಳ್ಪಂ ಸತ್ಯಮುಂ ಧರ್ಮ ಭೂ ।
ಷಣಮುಂ ಸಂದ ಪತಿವ್ರತಾಮಹಿಮೆಯುಂ ದಾನತ್ವಮುಂ ಬಂಧುಲ
ಕ್ಷಣಮುಂ ಪೆಂಡಿರೊಳಕ್ಕುಮೆಯ್ದೆ ಪುರು[7]ಷರ್ ಯೋಜಿಪ್ಪುದೊಂದೋಜೆಯಂ ॥

(ಮದನತಿಲಕಂ, ೬–೧೭.)

ತನ್ನ ರೂಪನೆ ಪೋಲೆ ವಂಚಿಸಿ ದಾಸಿಯಂ [8]ಪಡ[8]ವೇಟ್ಟು ತಾಂ
ಚೆನ್ನ[9]ರ್[9]ಲ್ಲಗೆ ದಾಸಿಯಂದದೆ ಪೋಗಿ ರಾತ್ರಿಯೊಳೊಂದುವರ್ ।

---

[1] ಳ್ವರ (ಖ.ಬ). [2] ಪುರುಷಂ (ಕ). [3] ರುಮದಱುಂ (ಖ.ಬ). [4] ದೆಂ (ಕ).
[5] ಬ್ವರ್ (ಖ.ಬ). * ಈ ಪದ್ಯ (ಖ.ಬ). ಪ್ರತಿಗಳಲ್ಲಲ್ಲ. [6] ಬಿನ್ನಾಣಮುಂ (ಖ).
[7] ಷಂ (ಖ.ಬ). [8] ನಿಲ (ಖ.ಬ). [9] ನ (ಖ.ಬ).

[1]ಭ[1]ನ್ನ ಪಂಕಜವಕ್ತ್ರೆ ಕೇಳ್ ವಧುವರ್ಕಳಾರುಮನಾವನುಂ
ಬಿನ್ನಣಂ ಪೆಱತುಂಜೆ ನಂಬದೆ ನಂಬಿದಂತೆಸೆವಂ [2]ಬುಧಂ[2] ॥ ೧೦೧

(ಮದನತಿಲಕಂ, ೬-೨೨.)

ನಂ[3]ಬದ[3]ರೆನ್ನ ರಪ್ಪರುಮನೇತೆಱದಿಂ ನಲೆ ನಂಬೆ ಪಾಣ್ಬಿಯರ್
ನಂಬಿಪರಿಂತನೇಕವಿಧದಿಂದೆ ವಿಚಾರಿಸಿ ನೋಡಿ ಹೆಂಡಿರಂ ।
ನಂಬಲೆಯಾಗ ನಂಬದಿರಲಾಗವರಿಲ್ಲದೆ ಬಾೞಲಾಗದೇ
ನೆಂಬುದಿದಕ್ಕೆ ತಕ್ಕುದೆನೆ ಬಲ್ಲರನುಳ್ಳೊಡೆ ದೇವನಲ್ಲವೇ ॥ ೧೦೨

ಮನುಮತಮಂ ವೇದಾಂತಾ
ದ್ಯನೇಕ ಧರ್ಮಾಗಮಂಗಳಂ ಕಲಿತಿರ್ದಾ ।
ಮುನಿಪರುಮಳುಪವರೆಂದೊಡೆ
ವನಿತೆಯರಳುಪುವುದದೊಂದು ಚೋದ್ಯ[3]ಮೆ ಜಗದೊಳ್[3] ॥ ೧೦೩

(ಮದನತಿಲಕಂ, ೬-೨೩.)

ಗೊರತಿಯ ಕಂತಿಯ ಕುಂಟಣಿ
ಯರ ಮುಂಡೆಯ ಮಾಲೆಗಾರ್ತಿಯಗಸಿತಿ ಯೋಗೀ ।
ಶ್ವರಿಯರ [4]ಕುಲಗೇಡಿಯನಾ
ವರೀತಿಯೊಳ್[4] ನುಡಿಯಲೀಯಲಾಗದು ವಧುವಂ ॥ ೧೦೪

(ಮದನತಿಲಕಂ, ೬-೨೪.)

ಗೊರವರ ನವಣರ ಕಷ್ಟರ
ತಿರಿವರ ತೆಲ್ಲಿಗ[5]ರ ವಾದದವರ್ಗಳ ದೈವ[5] ।
ಜ್ಞರ [6]ಜೂಜುಗಾಱಿರೆಂಬರ[6]
ನೆರವಿಗಳಂ ಪೊರ್ದಲೀಯಲಾಗದು ವಧುವಂ ॥ ೧೦೫

(ಮದನತಿಲಕಂ, ೬-೨೫.)

ಬಳರಿಯ ನೋಂಪಿಗೆ ಬೀದಿಗೆ
ಮುಳಿವರ ಮನೆಗಳ್ಗೆ ಮದ್ಯಪೀಗಳೆಡೆಗೆ ಕೋ ।
ಮಳೆಯಂ ಪೋಗ[7]ಲ್ಕಿತ್ತೊಡೆ[7]
ಬಳ[8]ರಿ[8]ಗೆ ಪುಯ್ಯಲ್ಚ[9]ಬಂ[9]ದ ಕುಱಿಯಂತಕ್ಕುಂ ॥ ೧೦೬

(ಮದನತಿಲಕಂ, ೬-೨೯.)

---

[1] ಚೆ (ಅ). [2] ವಿಟಂ (ಖ.ಬ). [3] ಮದಲ್ತೇ (ಖ.ಬ). [4] ಕಿಡಿಕಿಡಿಯನಾವಿದಿ ತಿರಿಯರೊಳಂ (ಖ.ಬ). [5] ದ ಪಾರದವರ್ಗಳ ವೈದ್ಯ (ಕ). [6] ಖಳರ ಜೂಜುಗಾಱರ (ಕ). [7] ಲ್ವೇದ್ದೊಡೆ (ಕ). [8] ವಿ (ಖ.ಬ). [9] ಪೋ (ಕ).

ಗೊರವಿತಿ ತೊತ್ತು ರಂಡೆ ರಜಕಾಂಗನೆ ನೀರೆಱುವಾಕೆ ಚಿತ್ರಮಂ
ಬರೆವವಳೊತ್ತೆ ಗೊಳ್ವಳೆಲೆವಾಱುವ ಜತ್ತಕಿ ನೂಲಗಿತ್ತಿ ಗೋ ।
ವರ ವಧು ಮಾಲೆಗಾರ್ತಿ ಮುದಿಗುಂಟಣಿ [1]ವೇರಡ[1]ಗಿತ್ತಿಯೆಂಬ ಪೆಂ
ಡಿರ ನೆರೆಗೊಂಡೊಡಂದಱುಗೆ ಸಜ್ಜನವೆಂಡಿತಿ ಕೆಟ್ಟಳೆಂಬುದಂ ॥ ೧೦೭

ಲಲನೆಯರ್ಗೆ ರೂಪ ಹೀನಂ
ಕುಲಹೀನಂ ವೃದ್ಧನೆಯ್ದೆ ಪಡೆಯಂ ಶುಚಿ ಮೆ ।
ಯ್ಗಲಿ ದಕ್ಷನೆನಿಸುವವನಂ
ನಿಲಿಸುಗೆ ಕಾಪಿಂಗೆ ಬುದ್ಧಿವಂತನನೆಂದುಂ ॥ ೧೦೮

(ಮದನತಿಲಕಂ, ೬–೩೧.)

ರತಿಹೀನ ಪೆಱವ [2]ಕುಬ್ಜಂ[2]
ಮತಿವಂತಂ [3]ನಾಡೆ ವೃದ್ಧ ಕೃಶ [ಗರ್ಹಿ] ತನುಂ[3] ।
ಸತಿಯಂ ಕಾಯಲ್ಕಕ್ಕುಂ
ರತಿರಾಗಿಗಳುಟಿದ ಕಾಪಿನಿಂ ನಿಂದಪರೇ ॥ ೧೦೯

(ಮದನತಿಲಕಂ, ೬–೩೨.)

ಚೆನ್ನಿಗನಂ ಜವ್ವನಿಗನ
ನನ್ನಿಗನಂ ಪಾಣ್ಬನಂ ಕರಂ ಸೊಬಗನುಮಂ ।
ತನ್ನ ಸತಿಯ[4]ರ್ಗೆ ಕಾಪಿಡೆ
ನಿರ್ಣಯದಿಂ[1] ತನ್ನ ಮನೆಯೊಳಿಟ್ಟಂ ಕಿಟ್ಟಂ ॥ ೧೧೦

(ಮದನತಿಲಕಂ, ೬–೩೪.)

ಚಟ್ಟನೆ ಗುಜುಗುಜು ಲೋಗರೊ
ಳಬ್ಬೊತ್ತಿದ ತೆಱದಿನೆರವು ತೊಟ್ಟಿರೊಳಾಗಲ್ ।
ಪಚ್ಚುವ ಕಾಮಿನಿ ತಪ್ಪಲೊ
ಡರ್ಚುವಳಟ್ಟಟ್ಟಿ ಪೆಱರೊಳಾದೊಡೆ ನಿರತಂ ॥ ೧೧೧

(ಮದನತಿಲಕಂ, ೬–೩೮.)

ನಗೆಯಿಂ ನೋಟದಿನೊಳ್ಪಿನಿಂ ವಿಭವದಿಂ ಸೌಂದರ್ಯದಿಂ ಧೈರ್ಯದಿಂ
ಬಗೆಯಿಂ ಬಲ್ಪಿನಿನಿಂಬುಕೆಯ್ವ ರತಿಯಿಂ ಚಾತುರ್ಯದಿಂ ಶೌರ್ಯದಿಂ ।

---

[1] ವೇಡರ (ಬ). [2] ಗುಜ್ಜಂ (ಕ). [3] ವೃದ್ಧ ನಾಡೆ ಕುಷ್ಟನು ಹಿತನುಂ (ಕ), ...ಗೃಂಹಿತನುಂ (ಖ.ಬ). [4] ಳ್ಗೆ ಕಾಪಿಟ್ಟಂ ನಲ್ಲಳೆ (ಖ.ಬ).

ಮಿಗಿಲೀತಂ ಪೆಱರ್ಗೆಂದು ತನ್ನ ವಧುವಂ ನಚ್ಚಿಪ್ಪಿನಂ ಮಾಜ್ಕೆ ಭಾ
ಷೆಗಳಿಂ ಪ್ರೇರಕದಿಂ ಕುಲಾಂಗನೆಗೆ ಹೃತ್ಸಂತೋಷಮಂ ಸದ್ಬುಧಂ ॥ ೧೧೨

(ಮದನತಿಲಕಂ, ೬–೪೯.)

ಅನುಪಮ ಗುಣಗಣಯುಕ್ತೆಯ
ನನುಕೂಲೆಯನಧಿಕಪುಣ್ಯಲಕ್ಷಣೆಯಂ ಮಾ ।
ನಿನಿಯಂ ಸುರೂಪವತಿಯಂ
ಜನಪಂ ಮಾಬ್ಕುಂ ಕುಲಾಂಗನೆಯ ನಿಶ್ಚಯದಿಂ ॥ ೧೧೩

(ಮದನತಿಲಕಂ, ೬–೫೨.)

ನಿರುಪಮಲಕ್ಷಣಯುತೆಯರ‘
ಸುರೂಪೆಯರ್ ನೃತ್ಯಗೀತವಾದ್ಯಾದಿಕಳಾ ।
ಪರಿಣತೆಯರನೂನಾಂಗಿಯ
ರರಸಿಯರತಿಮುಗ್ಧೆಯರ್ಕಳಾಗಲೆಪೇಳ್ಕುಂ ॥ ೧೧೪

(ಮದನತಿಲಕಂ, ೬–೫೩.)

ಅನುಪಮ[1]ಮವರ್ಗಳ[1] ಕಾಮಂ
ಮನಕ್ಕೆ ಸುಖಮಿಲ್ಲ ನೆರೆಯೊಳಿಪ್ಪುದಱಿಂದಾ ।
ವನಿತೆಯರಿನಪಾಯಂಗ[2]ಳ
ನಿನಿತುಮನಱು[2]ದಾತ್ಮವಂತನಪ್ಪದು ಭೂಪಂ ॥* ೧೧೫

(ಮದನತಿಲಕಂ, ೬–೫೬.)

ಮಜ್ಜನದಡಪದ ಕರಗದ
ಸೆಜ್ಜೆಯ ಬಾಣಸಿನ ಬೆಸನುಮಂ ಕೋತಮುಮಂ ।
ಬೆಜ್ಜನದೆಡೆಯುಮಂ [3]ಪೆಱ[3]
ತುಜ್ಜುಗಮಂ ಕೂರ್ತು ವಧುಗೆ ಕೊಟ್ಟಂ ಕೆಟ್ಟಂ ॥ ೧೧೬

(ಮದನತಿಲಕಂ, ೬–೫೭.)

---

[1] ವಧುಗಳ (ಖ.ಬ). [2] ಳ‘ ಜನಿಯಿಕ್ಕುಮಱು (ಖ.ಬ). ಈ ಪದ್ಯ (ಕ) ಪ್ರತಿಯಲ್ಲಿಲ್ಲ. * ಈ ಪದ್ಯವಾದಮೇಲೆ (ಕ) ಪ್ರತಿಯಲ್ಲಮಾತ್ರ ಮುಂದಿನ ಪದ್ಯ ಹೆಚ್ಚಾಗಿದೆ. :—

ಅನಗವನೆ ಕೆಯ್ಗೆ ತೋಟ
ಕ್ಕೆ ನಮ್ಮಗಾಱುಗೈಹಕ್ಕೆ ಪೊಲವನೆಗಳ್ಗಾಂ ।
ಚಿನಪೋದೆನೆಂದು ಪುಶ್ಚಲಿ
ನುಸಿಲ್ಗೆವ್ಗೋಗುತ್ತ ವೀರ್ಕುಮದನಱಿಯಬಲೇ ॥

[3] ತಿಱಿ (ಖ.ಬ).

ಒಲವೆಂದುಂ ನಿಲಲಱಿಯದು
ಕೆಲವುದಿನಂ ನಡೆಗುಮದಱಿನೊಲ್ದಾಗಳ್ ತಾಂ ।
ಲಲನೆಗೆ ಪು[1]ರ[1]ವ್ಯದ್ಧಿಯುಮಂ
ಪಲವುಂ [2]ಹಾ[2]ಯಮುಮನಿತ್ತೊಡದು ಪಗೆಯಲ್ತೇ ॥ ೧೧೬

ಕಡುಗೂರ್ತೊರ್ಮೆಯೆ [3]ಮೊಕ್ಕಳಂ ಕ[3]ನಕಮಂ ತಾನೀಯಲಾಗಲ್ ಕರಂ
ಕೊಡುಗತ್ಯುತ್ತಮ ವಸ್ತ್ರಮಂ ಘನ್ಯಣಮಂ ಕಸ್ತೂರಿಯಂ ಪುಷ್ಪಮಂ ।
ಮುಡಿಯಂ ಚಂದನಮಂ ಫಲಾವಳಿಗಳಂ ಕರ್ಪೂರಮಂ ನಿಚ್ಚಲುಂ
ಪಡಿಮಾತೇಂ ಪರಿರಕ್ಷಮಾಗಿ ವನಿತಾಸಂಘಕ್ಕೆ ಭೂಪಾಲಕಂ ॥ ೧೧೮

(ಮದನತಿಲಕಂ, ೬–೬.)

ಪಲತೆಱಿದ ತೊಡಿಗೆ ಬಿಡುದಂ
ಬುಲವೋಳ್ಗುಣಿಸುಗಳನೆಯ್ದೆ [4]ಸಲಿ[4]ಸುಗೆ ಕೂರ್ತಂ ।
ತಲಸದೆ ಸಂಭೋಗದೊಳಂ
ಪಲವುಂ ಬಿನದದೊಳವರ್ಗೆ ಕಳೆವುದು ಪೊಟ್ಟಂ ॥ ೧೧೯

(ಮದನತಿಲಕಂ, ೬–೬೧.)

ಅವರ್ಗೆ ಬಹುವ್ಯಾಪಾರಮು
ಮವರ್ಗೆ [5]ಪರಿವ್ಪಂದ[5]ಮೆಂಬುದಂ [6]ಮಾಡಲ[6]ಬೇ ।
ಡವರಂ ಸಂಕುಚಿತದೆ ಸಂ
ತವಿಡಿಸಿ ಸಂತುಷ್ಟರಾಗೆ ಮಾಟ್ಟುದು ಚದುರಂ ॥ ೧೨೦

(ಮದನತಿಲಕಂ, ೬–೬೩.)

ನಸುಸೋಂಕಿಯು[7]ಮೊಲ್ದುಂ[7] ಬಂ
ದೆಸಗುವೊಡಂ ನೋಂಪಿ ಋತುಮಹೋತ್ಸಾಹದೊಳಂ ।
[8]ಬಸನದೊಳೋತೊಡ[8]ಗೂಡುವು
ದಸಿಯಳ ನೂಬಲ್ಲದೆನ್ನದೆಂದುಂ ಚದುರಂ ॥ ೧೨೧

(ಮದನತಿಲಕಂ, ೬–೬೪.)

---

[1] ರು (ಖ.ಬ). [2] ಪ್ರಿ (ಕ). [3] ಪೂತ್ಕಳತ್ಕ (ಕ). [4] ಸೂ (ಖ.ಬ). [5] ಮುಂಬುಧಂ (ಖ.ಬ). [6] ಪರಿಸ್ಕಂಧಮುಂ ಪರಿಗ್ರಹಮುಂ (ಮ. ತಿ. ಓಲೆಯ ಪುಸ್ತಕ). [7] ಮೆಲ್ಪುಂ (ಖ.ಬ). [8] ಪನದನದೊಮ್ಮೊಡ (ಅ), ಬೆಸನದೊಳೊಮ್ಮೊಡ (ಖ.ಬ).

ಹರಿಣಾಕ್ಷಿಗೆ [1]ಪದಪಂ ರಾ
ಗರತೋತ್ಸವಮುಮೆಯ್ದೆ [1] ನಡೆದಿಂಬಟಿಕಾ ।
ತುರನಾಗದೆ ಕೂಡಿದರ್ಗಾ
ದರಿಪುದು ಚದುರಂಗೆ ಬೇಱೆ ಕೋಡೆರಡೊಳವೇ ॥ ೧೨೨

(ಮದನತಿಲಕಂ, ೭–೮.)

ತವಕದಲವರೆಡೆಗಳ್ ಕಾ
ಣವು ಮುಂದಂ ಭೀತಿ ಬಟಿಕ ಪಲ್ಲವಿಸುತ್ತಿ ।
ರ್ಪುವು ಬೇಟದ ಕೂಟದ ಕೋ
ಟಿವಿಧದ ಕೋಟಲೆಗೆ ರೂಪು ಹಾದರಮಲ್ತೇ ॥ ೧೨೩

ನಱಕನೆ ನೀತಡೆ ಪೆಱರಂ
ಜಱೆದಡೆ ಕೆಮ್ಮಿದಡೆ ಕಯ್ಯ ವೀಳೆಯದೆಲೆಯಂ ।
ಹಱಿದಡೆ ಬಾಗಿಲ ದಿಕ್ಕಂ
ಮುಱಿದಡೆ ಕುಱುಪಿಂಗೆ ಪಾಣ್ಬರೆಸೆವರ್ ತಪ್ಮೊಳ್ ॥ ೧೨೪

ನೆರೆಯಲೆಡೆ ಪೊಟ್ಟು ದೂತರ್
ದೊರೆಕೊಳ್ಳದೊಡಂಗನಾಜನಂ ಶುಚಿಯಲ್ಲದೆ ।
ನೆರೆಯಲೆಡೆ ಪೊಟ್ಟು ದೂತರ್
ದೊರೆಕೊಂಡಡೆ ಶುಚಿಗಳುಂಟೆ ಪೆಂಡಿರ್ ಜಗದೊಳ್ ॥ ೧೨೫

ಎಸೆವ ಬಸಂತಮಾಸಮಿದಿರೇಱುವ ಜವ್ವನಮೂರಮಿಂಡರು
ಬ್ಬಸದ ವಿಳಾಸಿಗಳ್ ಮನೆಯ ಗಂಡನವಂ ಪ[2]ಗೆ[2]ಗಂಡನೆತ್ತಲುಂ ।
ಪೊಸಬನವಿಂಬು ಕುಪ್ಪಿಗೆಯ ಕಳ್ ಮನೆಯೊಳ್ ಪಿರಿದುಂಟು ತೋಂಟ ಕ
[3]ಣ್ಕಿ[3]ಸುರರ ಮಾತು ನೀತಿ ಗಡ ಹಾದರವಾಡದೆ ಸಾವಳೇ ಮಗಳ್ ॥ ೧೨೬

ಒಡೆಯರ ಕಾಪು ಕಟ್ಟಣಕಮೆಂದೊಡೆ ಬಂಧುಗಳಾಪ್ತರಾಗದೆಂ
ದೊಡೆ [4]ಮನ[4]ಮಿತ್ತಲೀಯಳವಳೆಂದೊಡಸಾಧ್ಯಮದೆಂದೊಡೊಲ್ಲಳೆಂ ।
ದೊಡೆ ಮೊಱೆಯಾಗದೆಂದೊಡೆ ಪರಾಂಗನೆಯೆಂದೊಡೆ ಸಾಮ್ಯವಲ್ಲವೆಂ
ದೊಡೆ ತಲೆಪೋಗೆಯುಂ ಬಸಿದು ಬೀಱದೆ ಸ್ಥೈರಿಸರಲ್ತೆ ಕಾಮುಕರ್ ॥ ೧೨೭

(ಅನಂತನಾಥಪುರಾಣಂ, ೧೧–೩೩.)

---

[1] ಪರಪುರುಷಂಗೆ ರತೋತ್ಸಾಹಮನೆಯ್ದೆ (ಖ.ಬ). [2] ಪೆ (ಖ.ಬ). [3] ಣ್ಕಿ (ಕ). [4] ಯುನಿ (ಖ.ಬ).

ವಧಮುಂ ಬಂಧನಮುಂ ಪರಾಭವಮುಮಂಗಚ್ಛೇದಮುಂ ಪೊರ್ದುಗುಂ
ವಿಧುವಿಖ್ಯಾತಿ [1]ಕ[1]ಲುಂಬುಗೊಳ್ಗುಮಪವಾದಾತೋದ್ಯನಾದಂ ದಿಶಾ ।
ವಧಿಯಂ ದಾಂಟುಗುಮನ್ಯಜನ್ಮದೊಳಮಕ್ಕುಂ ದುರ್ಗತಿಕ್ಲೇಶಮೆಂ
ದಧಿರಾಜರ್ ಕೆಲರಾಲಿಸರ್ ಮಱುದುಮನ್ಯಪ್ರೇಯಸೀವಾರ್ತೆಯಂ ॥ ೧೨೮

(ಪಂಪರಾಮಾಯಣಂ, ೧೨-೫೯.)

ರಾವಣನುಂ ಗಡ ಸೀತಾ
ದೇವಿಗೆ ಸೋಲ್ತುದಱ ಫಲಮನೈದಿದ[2]ನುಚಿದರ್[2] ।
ರಾವಣನಿಂದಧಿಕ[2]ರೆ[2] ಪೇ
[4]ಚೇ[4]ವುದೊ ಶುಚಿಯಿಲ್ಲದವನ ಗಂಡುಂ ತೊಂಡುಂ ॥ ೧೨೯

(ಪಂಪಭಾರತಂ, ೮-೮೨.)

ಶತ[5]ಧೃತಿ[5]ಪೌತ್ರನುಂ ಜಿತಜಗತ್ತ್ರಯವೀರನುಮಾಗಿ [6]ನೀಂ[6] ಮಹಾ
ಸತಿಗವನೀಜೆಗನ್ಯವಧುಗಾಟಿಸ ವಾಸವ ವಹ್ನಿ ಧರ್ಮ ನೈ ।
ರುತಿ ವರುಣಾನಿಲಾರ್ಧಪ ಹರರ್ ನಗುವರ್ ಮುಳಿಗುಂ ಮುರಾರಿ ವಾ
ಕ್ಪತಿ ಪಟಿಗುಂ ಮನೋಜರಿಪು ಪೇಸುಗುಮಗ್ಗದಕೀರ್ತಿ ಮಾಸುಗುಂ ॥ ೧೩೦

ನುಡಿಯಲ್ಕಕ್ಕುಮೆ ಪಾಟಿಗೆಟ್ಟು ಪಟಿಗಂ ಪಾಪಕ್ಕಮುಳ್ಳಳ್ಕದೀ
ನುಡಿಯಂ ಚಿಃ ಪರದಾರವನ್ಯತಯನಸ್ಥಾನಂ ಪೆಱರ್ ಮಿಂದ ನೀರ್ ।
ಮುಡಿದುತ್ಪಲ್ಲ ಕದಂಬಕಂ ತೊಡೆದ ಕಾಶ್ಮೀರಾಂಗರಾಗಾದಿಕಂ
ಮಡಗೂಱ್ ಬೀಟುಡೆ ಬಾಯ ತಂಬುಲಪಿದೇನಸ್ಪೃಶ್ಯಮೇನಲ್ಲವೇ ॥ ೧೩೧

(ಪಂಪರಾಮಾಯಣಂ, ೯-೧೮೧.)

ಹಣವಿಲ್ಲದೆ ಪೆಱರೆಳಸುವ
ಗುಣಮಿಲ್ಲದೆ ಗೂಢಮಪ್ಪ ಠಾವಿಲ್ಲದೆ ಕುಂ ।
ಟಿಣಿಯಿಲ್ಲದಂತೆ ಪೆಂಡಿರ್
ಗುಣವಂತೆಯರಲ್ಲದುಂಟೆ ವಸುಧಾತಳದೊಳ್ ॥ * ೧೩೨

ನೋಡಿಸಿ ನೋಡವೇಱ್ಪ ಭರಮಪ್ಪುದು ಗೆಗಟಱ ಕೋಣೆಗೇರಿಯೊಳ್
ಕೇಡಱಸಲ್ಕೆ ಪೋಪ ಭರಮಪ್ಪುದು ದೇವಿಗೆ ರಾತ್ರಿಯಾತ್ರೆಯಂ ।
ಮಾಡುವ ನೋಂಪಿಯೊಂದು ಭರಮಪ್ಪುದು ಜಾರೆಯರಾತ್ಮಜಾರರೊಳ್
ಕೂಡುವ ಚಿತ್ತದಿಂ ತೆಱಪನಾಗಿಸಿಕೊಳ್ವರನೇಕ ಭಂಗಿಯಿಂ ॥ ೧೩೩

---

[1] ಕ (ಅ). [2] ನಿವನಾ (ಅ). [3] ನೆ (ಅ). [4] ಟಾ (ಕ.ಖ.ಬ). [5] ನುತ (ಕ), ಯುತ (ಖ.ಬ). [6] ಯುಂ (ಖ.ಖ). * ಈ ಪದ್ಯ (ಖ.ಬ.) ಪ್ರತಿಗಳಲ್ಲಿಲ್ಲ.

ಕಱು ತಡೆದತ್ತು ಕಂಚನುಣಲೂಮನೆಯೂಕೆಗಳುಯ್ದುರಕ್ಕ ಮಿಂ
ದೆಱಿಯಪನಾ[1]ಱ್ಱು[1]ದಪ್ಪನಸಗಂ ಮು[2]ಡಿ[2]ದಾರನೆ ಕೂಸನೇತಕೆಂ ।
ದಱಿಯೆನದೊಂದು ಸೋಂಕಿದುದು ಪಾಡುವರಲ್ಲಿ ಬೆದಂಡೆ [3]ತೊ[3]ತ್ತನೆ
ತ್ತಱಿಸುವೆನೆಂದು ಪೋಪ ನೆವಮಂ ಸಮಕಟ್ಟುವರಲ್ಲಿ ಪಾಣ್ಬಿಯರ್ ॥* ೧೩೪

ಗಿಡುವಂ ಪಿತ್ತಿಲನೋಣಿಗೇರಿಡುಕುಱುಂ ಪ್ರಾಕಾರಮಂ ನುರ್ಗಿದಂ
ಗಡಿಯಂ ಬೇಲಿಯನಿಕ್ಕಿಸಿರ್ದ ತಳಯಂ ನೀರ್ದಾಣಮಂ [4]ತೋಟಮಂ[4] ।
ಮಡಲಟ್ಟಾರವೆಯಂ ಬಬಲ್ದ ಮದಿಲಂ ಮಣ್ಗೊಂಡ ತುತ್ತಲ್ಗಳಿ
ಟ್ಟಿಡೆಯಂ [5]ಬಿಟ್ಟ[5]ಟಿದೇಗುಲಂಗಳೆಡೆಯಂ ಕಾದಿರ್ಪ ಪಾಣ್ಬರ್ಕಳುಂ ॥ ೧೩೫

ದಾರಿಯೊಳಿಡುಕುಱುಮೊಳೋಣಿಯೊ
ಳಾರವೆಗಳ ತಳದೊಳಂಗಡಿ[6]ಯ ಮನೆಗಳೊಳಂ[6] ।
ಕೇರಿಯೊಳಾ[7]ವಿ[7]ಗೆಗಳೊಳಂ
ಬೇರೂಱುತು ಜಾರರನುಭವಂ ಕಟ್ಟಲೆಯೊಳ್ ॥ ೧೩೬

(ಗಿರಿಜಾಕಲ್ಯಾಣಂ, ೪–೮೨.)

ಒದವಿದ ಕಟ್ಟಲೆಯೊಳ್ ನ
ನ್ಮದದಿಂ ಪೊಱಮಟ್ಟ ಜಾರಮಿಥುನಾಳಿಗೆ ಕಂ ।
ಡುದೆ ಧರವೆಳಸಿತೆ ಮನವಿ
ರ್ದುದೆ ಮನೆ ಪಟ್ಟಿದುದೆ ಪಾಸು ಮುಟ್ಟಿತೆ ಮರ್ಮಂ ॥ ೧೩೭

(ಗಿರಿಜಾಕಲ್ಯಾಣಂ, ೪–೮೪.)

ಆಗಳುಮಾ ತಳೋದರಿಗೆ ಮೇಖಲೆಯಾಗಿ ನಿತಂಬದೊಳ್ ಕುಚಾ
ಭಾಗದೊಳೆಯ್ದೆ ಹಾರಲತೆಯಾಗಿ ರದಚ್ಛದಪಲ್ಲವಂಗಳೊಳ್ ।
ರಾಗವಿಶೇಷಮಾಗಿ ಪೊಳೆವೊಳ್ದೊಡೆಯೊಳ್ ನಿಜು ಸೋಂಕಿ ಸಂ
ಭೋಗಿಪ ಭಾಗ್ಯಮಿಲ್ಲೆನ[8]ಗೆಯಾದೊಡೆ ಸಲ್ಲದೆ[8] ಗಂಡನಿರ್ದೊಡಂ ॥ ೧೩೮

(ಅನಂತನಾಥಪುರಾಣಂ, ೧೧–೨೨.)

ಬಿಡಬೇಡಣ್ಣೆಲೆ ಬೀಡುಗೊಳ್ವೊಡೆನಸುಂ ಕಣ್ಗಾಣಲೆಮ್ಮತ್ತೆ ನೋ
ಟ್ಪಡೆ ಮಾವಂ ತತವೃದ್ಧನೆನ್ನ ಪತಿಯುಂ ಬೇರೂರ್ಗೆ ಪೋಗಿರ್ದನಾಂ ।

---

[1] ಡಿ. (ಕ), ಲ (ಖ.ಬ.) [2] ಟ (ಕ). [3] ನೊ (ಕ). * ಈ ಪದ್ಯದ ಪೊದಲನೆಯ ಪಾದವನ್ನು ಶಬ್ದಮಣಿದರ್ಪಣದ ೧೬೯ನೆಯ ಸೂತ್ರಕ್ಕೆ ಉದಾಹರಣೆಯಾಗಿ ಕೊಟ್ಟಿದೆ. [4] ತೊಟ್ಟಿದುಂ (ಖ.ಬ). [5] ಬಬ್ದ (ಕ). [6] ಗಳೊಳ್ ಮನೆಯೊಳ್ (ಅ.ಕ). [7] ಡಿ (ಖ.ಬ). [8] ಗಮಾಡದೆ ಸಾಲದೆ (ಖ.ಬ).

ಪಡುವೆಂ ಮೂಡಣ ಕೋಣೆಯಲ್ಲಿ ನುಟಿವರ್ ಮತ್ತೊಬ್ಬರಿಲ್ಲೇಕೆ ನೀಂ
ಬಿಡಬೇಡೆಂದತಿಜಾತಿಜಾರೆ ನುಡಿದಳ್ ಜಾರಂಗೆ ವಕ್ರೋಕ್ತಿಯಿಂ ॥ ೧೫೯

ಪಡುವಳ್ ಕೀಬಲೊಳೆಮ್ಮ ತೊಟ್ಟು ಪಡುವಳ್ ಮುತ್ತಬ್ಬೆಯಾ ಕೋಣೆಯೊಳ್
ಪಡುವಂ ಶಕ್ತಿವಿಹೀನನಂಧಬಧಿರಂ ಕೇ[1]ಳ್ ಮಾವನಾ[1] ಬಾಗಿಲೊಳ್ ।
ಪಡುವೆಂ ಬಾಲೆಯೆನೊರ್ವಳಿಲ್ಲಿ ಮನೆಯಾಣ್ಮಂ ಪೋದನಿಂದೂರ್ಗೆ ನೀಂ
ಪಡ[2]ಲೇನೆಂದೆ[2]ಡೆವೇಡುವಯ್ ಪಥಿಕ ಮತ್ತೀ ಪೊ[3]ತ್ತಿನೊ[3]ಳ್ ಗಾಂಪನೇ॥ ೧೪೦

(ಕಾವ್ಯಾವಲೋಕನಂ, ೬೧೬.)

ಉಗುರಂ ತೋಱಿದ ಕಯ್ಗಳಂ ಮುಗಿದ ಬಾಹಾಸ್ಪರ್ಶನಂಗೆಯ್ದು ಸ
ನ್ನೆಗಳಂ ಚಿತ್ತದೊಳಾಳ್ದು ಕೇತಕವನಾನೀಕಕ್ಕೆ [4]ದೇವಾಲಯಾ[4]।
ಳಿಗೆ ನಾನಾಲತಿಕಾಲಯಕ್ಕೆ ಕೆಲಬರ್ ದೂತಟ್ಟಿದರ್ ಪೋದರಾ
ಬಗೆಗಳ್[5]ದೂದವ[5]ರಾಗೆ ಕೈತವಕಲಾವಿಸ್ತಾರೆಯರ್ ಜಾರೆಯರ್॥ ೧೪೧

ಕಳಚಿ ಪಳಂಚಿ[6]ಪುಂ[6]ಗುರವನುಟ್ಟಳವಟ್ಟಿರೆ ಮಲ್ಲಗಂಟಿನೊ
ಳ್ಪಳವಡೆ ಕಟ್ಟಿ ಚೊಲ್ಲೆಯಮನನ್ನಿಗೆಯಂ ಸಮಕಟ್ಟಿ ತೊಟ್ಟು ಕೆಂ।
ದಳದೊಳಮರ್ಚಿ ಬಾರಿಸುತೆ ಬೊಂದುಗೆಯಂ ಕುಱುಪಿಂಗೆ ಪೋದಳ
ವ್ವಳಿಸುತಮಾಗಳೊರ್ವಳಭಿಸಾರಿಕೆ ವೀರಪಿಡಂಬಯಾನದಿಂ॥ ೧೪೨

[7]ನಱು[7]ಸುಯ್ಲಂ ತನುಸೌರಭ[8]ಕ್ಕಮ[8]ಳಿವ್ಯಂದಂ ಡಂಗುರಂಬೊಯ್ದು ಮುಂ
[9]ದಱು[9]ವಂ ತಪ್ಪವು ಕಾಳವೆಂಬ ಕಡಲೊಳ್ ಕಣ್ಣಿಂಬ ಮೀರ್ಗಳ್ ದುಡು।
[10]ಮ್ಮಿಱಿಯು[10]ತ್ತಿರ್ದಪವೆಂತು ನಲ್ಲನೆಡೆಗೊಯ್ವೆಂ ನಿನ್ನನಾವಂದದಿಂ
ದಱಿಯಿಪ್ಪೆಂ ಹಱುಗುಟ್ಟಿ ಹಾದರಮನಾಡಲ್ ಪೋಪರೇ ಜಾರೆಯರ್॥ ೧೪೩

ದೆಸೆಯಂ ನೋಡದಿರಕ್ಕ ನಿನ್ನ ಧವಳಾಪಾಂಗಂ ಪೊದಟ್ಟಿಪ್ಪುದಿ
ನ್ನುಸುರಲ್ವೇಡೆಲೆ ಮುಗ್ಧೆ ನಿನ್ನ ದಶನೇಂದುಜ್ಯೋತ್ಸ್ನೆ ನೀಳ್ದಪ್ಪುದೆಂ।
ದನಮಾಲಂಬಿಕೆ ಮೌನಮಾಡಿ ಸಖಿಯಂ ಸಂಕೇತಸದ್ಮಕ್ಕೆ ಪ
ಲ್ಲಿಸರಂದೋಱುತೆ ಮುಂದೆ ಮುಂದೆ ನಡೆ[11]ದೊಯ್ದಳ್[11] ದೂತಿ ಚಾತುರ್ಯದಿಂ॥

ಕ[12]ಳೆದು[12] ಪಳಂಚಿನುಂಗುರುಮನೇಱಿಮುಸುಂಕಿ ಮರಳ್ಚಿ ಸೆಕ್ಕಿ ಮೇ
ಖಲೆಯೊಳಡಂಗುವಂತೆ ನಿಱಿಯಂ ಸೆಱಗಿಂ[13]ಪೊದೆದುಟ್ಟು[13] ದೂತಿ ಕೈ।

---

[1] ಳಜ್ಜನೀ (ಅ). [2] ಲೆಂದೆಂತೆ (ಅ). [3] ಟ್ಟಱೊ (ಅ). [4] ದ್ಯೆವಗೃಹಾ (ಖ.ಬ). [5] ಧೂದವ (ಖ.ಬ). [6] ನುಂ (ಕ). [7] ನೆಱು (ಕ). [8] ಕ್ಕೆಯ (ಖ.ಬ). [9] ಗುರು (ಖ.ಬ). [10] ಮಿರಿವು (ಖ.ಬ). [11] ದಳ್ ತದ್ದೂ (ಕ). [12] ಳಚಿ (ಕ). [13] ಪೊಱಮಟ್ಟು (ಕ[6]), ಮಿಗೆ ಪೊರ್ದು (ಖ.ಬ).

ಕೊಳಿಸಿದ [1]ಬುದ್ಧಿ[1]ಯಿಂದೆಡಪಿ ನೊಂದೊಡ[2]ಮಾ[2]ಯೆನಲಮ್ಮ ದಂಘ್ರಿಯಂ
ತಳದೊಳವುಂಕುತಂ ನಡೆದು ಕಾಹಿನಗೇಹಮನೊರ್ವಳೆಯ್ದಿ ದಳ್॥ ೧೪೫

ಎಳಸಿ ಕಳವಳಸಿ ತಿಳಿಪುವ
ಮು[3]ಳಿವೆಡೆ[3]ಗೆಡೆಯಿಲ್ಲದಡರೆ [4]ಕೆಲ್ಲೈ[4]ಸಿ ಕವ ।
ಲ್ದೊಳಗೊಳಗೆ ಬಳೆದಲಂಪೊಡ
ನಳುರೆ ಪದಂ ಪದದೊಳೊದವೆ ಬೆರಸು[5]ತ ನಡೆದರ್[5] ॥ ೧೪೬

ಮುಳಿಸಾಗಳೆ ತಿಳಿವಾಗಳೆ
ಮನದಾಸಱಿನುಸುರ್ವ[6]ವೇಗ[6]ಮಾಗಳೆ ತರದಿಂ।
ನನೆಕೊನೆ[7]ವೋಪು[7]ದುಮಾಗಳೆ
ಮನಸಿಜನ ಮಹೇಂದ್ರಜಾಲವದು ಜಾರೆಯರೊಳ್॥ ೧೪೭

ಕರುಮಾಡಂ ಬಕ್ಕ ಬಯಲ್[೪]
ಸಿರಿ[೪]ಮಂಚಂ[೪] ಬೀದಿಯೆಂದು ಬಗೆಬಂದೆಡೆಯೊಳ್।
ನೆರೆಯಲ್ ಜಾರರ್ ಬಯಸುವ
ವರಮಂ ಸ್ಮರಿತ್ತನೆನಿಪ ಪೆರ್ಗತ್ತಲೆಯೊಳ್॥ ೧೪೮

ಗಳರುತಿ ತಾಲತತ್ಕೃತಿ ಸಚುಂಬನಸೀತ್ಕೃತಿ ಹಸ್ತತಾಡನಂ
ಗಳಪಿಲುತತ್ಕಟತ್ಕೃತಿ ಲಯಂಗಳೊಳೊಂದಿ ರತೋತ್ಸವಂಗಳಂ।
ಬಳೆಯಿಸಿ ಕಾದಲರ್ಗೆ ಮೆಱೆದರ್ ಬಹುವಾದಿತ ಭೋಗದೇವತಾ
ನಿಳಯದ ಪಕ್ಕದೊಳ್ ಚದುರೊಡಂಬಡೆ ಕೂಡುವ ಜಾತಿಜಾರೆಯರ್॥ ೧೪೯

ಎನಸುಂ ಜಾರರ್ಗದೇಂ ಪ್ರೀತಿಯನೊಡರಿಸಿತೋ ಸ್ಪೈರಿಣೀಸ್ಖಲ್ಪಕಂಠ
ಧ್ವನಿ ಕಿಂಚಿಚ್ಚುಂಬನಂ ಸೀತ್ಕೃತಿವದನರವಂ ಮಂದನಿಶ್ವಾಸನಂ ಗೂ।
ಢನಖೋಲ್ಲೇಖಾಂಕಮೀಷದ್ವಚನರಚನವಾಕ್ಪ್ರೌಢಿ ಶೀಘ್ರಾಕುಳಾಲಿಂ
ಗನಮೀಷತ್ತಾಡನಂ ಸಂಕುಚಿತರತಿ ಚಳಾಪಾಂಗಮುತ್ಕಂಪಿತಾಂಗಂ॥ ೧೫೦

ಜನಿತಾಹ್ಲಾದಾಕು[9]ಳಾ[9]ಲೋಕನಮುಪಚಿತಸಂಪರ್ಕತಾಂಬೂಲದಾನಂ
ಮುನಿಸಂ ಕೈಕೊಳ್ವ ಕಿಂಚಿತ್ಪ್ರಣಯಕಲಹ[10]ಮ[10]ತ್ಯುತ್ಸವವ್ಯಾವೃತಾಲಿಂ।

---

[1] ಬಚ್ಚೆ (ಖ.ಬ). [2] ಮಃ (ಖ.ಬ). [3] ಳುವಡಿ (ಕ). [4] ಕೇಡ್ಮೈ (ಕ). [5] ವಪ ದದೊಳ್ (ಕ). [6] ಮಾತು (ಖ.ತ). [7] ಯಪ್ಪು (ಖ.ಬ). [೪] ಮಾಡಂ (ಕ). [೦] ಳಂ (ಖ.ಬ). [10] ರ (ಖ.ಬ).

ಗನಮಸ್ಪ[1]ಷ್ಟೋಲ್ಲಸ[1]ಚ್ಚುಂಬನಮಸದೃಶವಾಗ್ಜಲ್ಪ[2]ಮವ್ಯ[2]ಕ್ತ ಕಂಠ
ಸ್ವನಮಿಾಷತ್ತಾಡನಂ [3]ಬಿತ್ತ[3]ರಿಸೆ ನೆರೆದುದೋರಂದದಿಂ ಜಾರವ್ಯಂದಂ॥ ೧೫೧

(ಕುಸುಮಾವಳಿ, ೪–೩೬.)

ಪಾರದೆ ಬರ್ಪ ದೂದವಿಯರಂ ತವಕಂ ತ[4]ವೆ[4] ಮಿಕ್ಕು ನೀವಿ[5]ಯಂ[5]
ಚಾರು ಕಳಾಪ[6]ದೊಳ್[6] ನಿಲಿಸುತುಂ ದೆಸೆಯಂ ನಸು ನೋಡುತುಂ ಪೊದ ।
ಬ್ಬೂರು[7]ತಟಂ[7]ಗಳಿಂದಿಟಿವ ನಾಣ್ಬದನಂ ನಿಱುಯಿಂದಮೊತ್ತುತುಂ
ಜಾರೆಯರೆಯ್ದುತಿರ್ದರುಪಕಾಂತರ[8]ನಾ ಬಹಳಾಂ[8]ಧಕಾರದೊಳ್ ॥ ೧೫೨

(ಕುಸುಮಾವಳಿ, ೪–೩೫.)

ಎಡಗಯ್ಯಿಂ ನೀವಿಯಂ ಸಾರ್ಚುತಮುರಸಿಜದೊತ್ತಂಬದಿಂ ಬಳ್ಕುತುಂ ಸೋ
ರ್ಮುಡಿಯಂ ಸೈತೊತ್ತುತುಂ ನೂಪುರಮನೆ ಪದದಿಂದುರ್ಚಿ ಕೈಗಿಕ್ಕುತುಂ ಕ ।
ಣ್ಗುಡಿಬೆಳ್ಪಿಂಗಂಜಿ ಚೀನಾಂಶುಕದ ಸೆಱಗನಡ್ಡೈಸುತುಂ ನಾಡೆಯುಂ ಮೆ
ಲ್ಲಡಿಗೆಂಪಿಂ ಧಾತ್ರಿಯಂ ಚಿತ್ರಿಸುತಮಸತಿಯರ್ ಪೋದರಂತತ್ತಮಿತ್ತಂ ॥ ೧೫೩

(ಕುಸುಮಾವಳಿ, ೪–೩೪.)

ಪೊದಬಿದ ಲಜ್ಜೆ ಪಲ್ಲಟಿಸದಾಸನಮುಳ್ಕದ ಬೈಗುಳುಣ್ಮಿ ಪೊ
ಣ್ಮಿದ ನಱುಸುಯ್ಗಳುಚ್ಚಳಿಸಿ ಪತ್ತದ ಬಾಯ್ ಪಿಡಿದಾಗಳಾರ್ಪ್ಪ ನಾಂ ।
ಟದ ನಖರೇಖೆ ಪಲ್ಲ ಕೊನೆದಾಗದ ಚುಂಬನವೆಂಬಿವಿಚ್ಚೆಯೊಳ್
ಪುದಿದಿರೆ ಮೆಚ್ಚದಳ್ ನೆರೆದು ಪೋಪವಳೋಪನ ಜಾಣಕೇಣಮಂ ॥* ೧೫೪

ಮೊಲೆಬಿಣ್ಪಿಂ ಬಳ್ಕುತುಂ ಮೆಲ್ಲನೆ ಪದವಿಡುತುಂ ನೀಳ್ದಪಾಂಗಂಗಳಿಂದಿ
ರ್ಕೆಲನಂ ನೋಡುತ್ತುಮೆತ್ತಂ ನುಡಿವ ನೆಬಲನಾರಯ್ಯುತುಂ ದೂರದಿಂ ಬ ।
ರ್ಪುಲಿಪಂ ಕರ್ಣಾವತಂಸಕ್ಕೆಱಗುವಳಿಗಳಂ ಸೋವಿ ನಿಂದಾಲಿಸುತ್ತುಂ
ಚಳವೇಣೀಭಾರದಿಂದೋಸರಿಸುವ ಮುಸುಕಂ ಸಾರ್ಚುತುಂ ಪಾಣ್ಟಿ ಪೋದಳ್ ॥

(ಲೀಲಾವತಿ, ೩–೧೩.)

ತಿಂಗಳ ಕಾಂತಿಯಂ ಪಟಿಗುಮೀ ಸೊಗಯಿಪ್ಪಲರ್ಗಣ್ಣ ಕಾಂತಿಯೆಂ
ದಂಗನೆ ತನ್ನ ಹಸ್ತಯುಗದಿಂದವನೊಯ್ಯನೆ ಮುಚ್ಚಿಕೊಂಡು ಕಾ ।
ಲುಂಗುರಮಂ ಪಳಂಚಲೆಯಲೀಯದೆ ದಾರದೊಳೆತ್ತಿ ಕಟ್ಟಿ ಜಾ
ರಾಂಗನೆ ಜಾರನಿರ್ದೆಡೆಗೆ ದೂತಿಸಿ ಪೋಪವಳೊರ್ವಳೊಪ್ಪಿದಳ್ ॥* ೧೫೬

---

[1] ಷ್ಟಾಲನಾ (ಖ.ಬ). [2] ವಭ್ಯ (ಖ.ಬ). [3] ಭೀಕ (ಖ.ಬ). [4] ರೆ (ಕ). [5] ಯೊಳ್ (ಕ). [6] ಮಂ (ಅ). [7] ಯುಗಂ (ಅ). [8] ನಂದು ಮಹಾಂ (ಅ).
* ಈ ಪದ್ಯಗಳು (ಕ) ಪ್ರತಿಯಲ್ಲಿಲ್ಲ.

ಕಲ್ಲೆನ್ನದೆ ಮುಳ್ಳೆನ್ನದೆ
ನಲ್ಲಲಿತಸ್ಥಾನಮೆನ್ನದಿರ್ದಿರ್ದೆಡೆಯೊಳ್ ।
ಪಲ್ಲವಿಸಿಯೆ ಪೂತುದು ಫಲ
ವಲ್ಲರಿಯಂ ತಳೆದುದಮಮ ಜಾರರ ಸುರತಂ ॥ ೧೫೭

(ಗಿರಿಜಾಕಲ್ಯಾಣಂ, ೪–೮೭.)

ಆಱಿದ ಬೆಮರಟಿದ ಕುರುಳ್
ಜಾಱಿದ ಮುಡಿ ಬಾಡಿದಧರ ನಖದೊದವಿಂ ಕೆಂ ।
ಪೇಱಿದ ಕಣ್ ಬಿಟ್ಟಿ ಮನಂ
ಮಾಱುತ್ತರವೆರಸಿವೆರಸಿ ಜಾರೆ ಜಗುಟ್ಟಿಳ್ ॥ ೧೫೮

ಜಾರಂ ಸಂಕೇತಗೇಹಾಂತರದೊಳುಳಿದು ತನ್ನೋೀಪವಳ್ ಬರ್ಪ ಸ್ಮೈಪಂ
ಪಾರುತ್ತಿರ್ಪನ್ನಮೊರ್ವಳ್ ತ್ವರಿತದೆ ಪರಿತಂದಾತ್ಮಚಿತ್ತೇಶನೆಂದಾ ।
ಜಾರಂ ತನ್ನಾಕೆಯೆಂದಂತೊಡವೆರಸಿ ಬಟಿಕ್ಕೆಯ್ದಿ[1]ಕಾ[1]ಮಗ್ಗಹಂ ತೀ
ರ್ದಾರಯ್ದೋೀರೊರ್ವರಂ[2]ದಂತ[2]ಹಹ ಎನುತವರ್ ನಕ್ಕು ಕೈಪೊಯ್ದು ಪೋದರ್ ॥

ಪದೆದಮರ್ದಪ್ಪಿಯಾತುರಿಸಿ ನೋಡಿದ ಕೂಡಿದ ಕೂಡೆ ಮಾತನಾ
ಡಿದ ಪದೆದಿತ್ತ ತಂಬುಲದ ಚುಂಬನದಿಂಬುಗಳಿಂದ್ರಜಾಲವ ।
ಲ್ಲದ ಕನಸಲ್ಲವಲ್ಲ [3]ನೆ[3]ನಸೆಂಬ ವಿಕಲ್ಪಮನಿಟ್ಟು ಚಿತ್ತದೊಳ್
ಕುದಿಪಮಡಂಗದೆಬ್ಬಿ ಸರಿದರ್ ತ್ವರಿತಂ ಸಲೆ ಸಂದ ಜಾರೆಯರ್ ॥ ೧೬೦

ಪೊದೆದ ನವೀನ ನೀಲಪಟವಿಕ್ಕಿದ ಕತ್ತುರಿಯಣ್ಣು ತೊಟ್ಟ ನೀ
ಲದ ತೊಡಪೊಪ್ಪೆ ಜಂಗಮತಮಃಕಳೆಯಂತೆ ತಮಸ್ತಮಾಲವ್ಯ ।
ಕ್ಷದ ಚಳಶಾಖೆಯಂತೆ ತಮದೊಡ್ಡಿನ ಲೋಲಪತಾಕೆಯಂತೆ ಪ
ರ್ಬಿದ ತಮ[4]ದೊಡ್ಡಿ[4]ನೊಳ್ ಸುಟಿದರಸ್ಫುಟಚಾರೆಯರಂದು ಜಾರೆಯರ್ ॥ ೧೬೧

(ಜಗನ್ನಾಥವಿಜಯಂ, ೧೬–೧೦೨.)

ಪದುಳಿಸದಂಗಮೆಟ್ಟಱಿದ ಕಣ್ಮಲರಾಱಿದ ಸೇದೆ ಮಗ್ಗುಲಿ
ಕ್ಕದ ಪುಳಕಂಗಳಿಂಗದ ಬೆಮರ್ ಮಿಡುಕೋಡದ ಪುರ್ವು [5]ಕೆತ್ತುಗುಂ ।
ದದ ಕುಚ ಬೀಗಿ ಬೀಯದಧರಂ[5] ನಡುಕಂಗಿಡದೂರು ಗಂದೆಯೇ
ಬದ ಕರಘಾತಮೊಪ್ಪೆ ಸುಸಿಲಿಂ ತಣಿದೊಯ್ಯನೆ ಜಾರೆ ಜಾಱಿದಳ್ ॥ ೧೬೨

(ಲೀಲಾವತಿ, ೩–೧೫.)

---

[1] ನಾ (ಬ). [2] ಕಂಡ (ಖ.ಬ). [3] ನ (ಕ.ಖ). [4] ದುರ್ವಿ (ಕ). [5] ಬೀಗಿ ಬೀಯದ ತುಟಿಕೆತ್ತುಗುಂದದ ಕುಚಂ (ಅ).

ಇಂದುಪವಲ್ಲಭಂ ಮುಳಿಯೆ ದೂದವಿಗಾದುದಜೀರ್ತಿ ಬಿದ್ದಿನರ್
ಬಂದರಿಯುತ್ತಮಿರ್ದಪುದು ಕೂಸಿನಿನಂ ತೊಲಗಂ ಗೃಹಾಧಿಪಂ ।
ಬೆಂದುದು ಸೂಚಿಶಾಲೆ ಪೊಸತಾಯ್ತು ತಳಾಱುಕೆಯಿಂದು ಮೂಡಿದಂ
ಒಂದಡಸಿರ್ದೊಡೇಱಡಸಿತೆಂಬುದು ತಪ್ಪುಗುಮೇ ತಳೋದರೀ ॥* ೧೬೩

ಎತ್ತುತ್ತುಂ ಕಟಿಸೂತ್ರಮಂ ನಸು ಬಟಿಲ್ದಿರ್ದುಟ್ಟುದಂ ಕೇಶದಿಂ
ದೊತ್ತುತ್ತುಂ ಪ್ರಿಯಚುಂಬಿತೋಷ್ಠಮಣಿಯಂ ವ್ಯಾಲಂಬದಿಂ ಮೆಲ್ಲನೊ ।
ಳ್ಗೊತ್ತುತ್ತುಂ ಪರೆದಿರ್ದ ಕುತ್ತುನವಿರಂ ದಿಗ್ಭಿತ್ತಿಯಂ ಬೆರ್ಚಿ ನೋ
ಡುತ್ತುತ್ತುಂಗ ನಿತಂಬೆ ಬಂದಳಿರುಳೊಳ್ ಜಾರೋಪಭೋಗಾಂತದೊಳ್ ॥ ೧೬೪

ಮದನಾಂಬುಪ್ಲವದುರ್ಕು ಮಟ್ಟಿದೆ ಲಸತ್ಪೀನಸ್ತನಂ ಕೆತ್ತುಗುಂ
ದದೆ ಸುಯ್ ನಿಲ್ಲದೆ ಕಣ್ಗಳೆಚ್ಚಱದೆ ಘರ್ಮಾಂಭಃಕಣಾನೀಕಮಿಂ ।
ಗದೆ ರಂಭೋರುವ ಕಂಪಮಟ್ಟಿದೆ ನಿಜೋಷ್ಮಸ್ಪಂದನಸ್ಫೂರ್ತಿ ಮಾ
ಣದೆ ಮೆಯ್ಸೇದೆಯದಾಱಿದಿಂತು ಸುಸಿಲಿಂದಾ ಪಾಣ್ಬೆಯರ್ ಪಿಂಗಿದರ್ ॥ ೧೬೫

(ಕುಸುಮಾವಳಿ, ೪-೩೭.)

ಒಂದೆರಡೊಳ್ನುಡಿ ತವಕದೊ
ಳೊಂದೆರಡಾಲಿಂಗನಂ ಮುಗುಳ್ನಗೆ ನೋಟಂ ।
ಸಂದಣಿಸುವ ಮುಂಬದನೊಳ
ಗಿಂದೀವರನಯನೆ ಪಾಣ್ಬನಂ ಬೀಜ್ಕೊಂಡಳ್ ॥ ೧೬೬

ನಿಡುಸುಯ್ಲುಂ ತನ್ನನೊತ್ತಂಬರಿಸೆ ನಿಲುಪುತುಂ ನೀಳ್ದ ನಲ್ಕೇಶದಿಂದಂ
ತೊಡೆಯುತ್ತುಂ ತೊಂಡೆವಾಯಂ ಶ್ರಮಜಲಕಣಮಂ ಪೀಲುದಿಂ ವಾರಿಸುತ್ತುಂ ।
ನುಡಿಯುತ್ತುಂ ಪಾಣ್ಬನೊಳ್ ಕೂಡಿದ ರತಿವಿಷಯಖ್ಯಾತಿಯಂ ತನ್ನೊಳಾಗಳ್
ನಡೆಯುತ್ತುಂ ಪಾಣ್ಬೆಯೊರ್ವಳ್ ನಿಜಮಣಿಭವನದ್ವಾರದೊಳ್ ಬಂದು ನಿಂದಳ್ ॥*

ವನರುಹಕಾಂ[1]ತ[1]ಕುಟ್ಮಳಕಮಂಡಲುರಾಜಿನಿ ಹಂಸಮಾಲಿಕಾ
ತನುಸಿತವಲ್ಕಭಾಜಿನಿ ಮೃಣಾಳಲತಾಲ[2]ತಿಕೋ[2]ಪವೀತರಂ ।
ಜಿನಿ [3]ಕಲಿ[3]ತದ್ವಿರೇಫ ನಿವಹಾಕ್ಷಸಮಾಜಿನಿ ಶೋಕದಿಂ ನರೋ
ಜಿನಿ ದಿನಕೃದ್ವಿಯೋಗದೆ ತಪಸ್ವಿನಿ[4]ಯಾದ[1]ವೊಲಾದಮೊಪ್ಪಿದಳ್ ॥ ೧೬೭

(ಕಾದಂಬರಿ, ಪೂ.ಭಾ., ೨೭೮.)

---

* ಈ ಪದ್ಯಗಳು (ಕ) ಪ್ರತಿಯಲ್ಲಿಲ್ಲ. [1] ತೆ (ಖ.ಬ). [2] ಲತೋ (ಅ). [3] ವಳಿ (ಅ). [4] ಯಂತೆ (ಅ).

ಮುಳಿದ ತಿಮಿರೇಭಕುಂಭ
ಸ್ಥಳಮಂ ಶಶಿಸಿಂಹಮೊತ್ತಿ ನೀಳಲ್ ಮುಕ್ತಾ !
ಫಲಮುದಿರ್ದಪೊ ನಭದೊಳಗೆನೆ
ಬೆಳಗಿದುವತಿ ಬಹಳ ತರಳ ತಾರಾನಿಕರಂ ॥ ೧೬೯

ತಾರಗೆಯ ಬೆಳ್ಪು ನವಸಂ
ಧ್ಯಾರುಣ ರುಚಿಯೊಳ್ ಪ[1]ಳಚ್ಚನೆಸೆಯೆ[1] ಮಹೋದ್ಯ ।
ದ್ದ್ವಾ[2]ರದೆ[2] ನಿಮಿರ್ಚಿ ಪರ್ಬಿದ
ಸಾರಂಗದ ತೊವಲವೊಲ್ ವಿರಾಜಿಸಿ ತೋರ್ಕುಂ ॥ ೧೭೦

ಲೀಲೆವಡೆದೆಸೆವ ತಾರಾ
ಮಾಲೆಯ ಜಲಜಲಿಸಿ ಪೊಳೆವ [3]ಪೊಳೆಪು[3]ಗಳಿಂದಂ ।
ಸೋಲಸೆ ಪೂವಲಿಗೆದಱಿದ
ನೀಲದ ರಂಗದವೊಲೆಸೆದುದಾಕಾಶತಳಂ ॥ ೧೭೧

ಅಂಬರತಳದಿಂದಿನನಪ
ರಾಂಬುಧಿಯೊಳ್ ಬೀಡೆ ನೆಗೆದ [4]ಸೀರ್ಪ[4]ನಿಗಳೊ ಪೇ !
ಡೆಂಬಿನೆಗಂ ತಾರಾನಿಕು
ರುಂಬಂ [5]ಸೊಗಯಿಸಿದುವೆಯ್ದೆ[5] ಗಗನಾಂತರದೊಳ್ ॥ ೧೭೨
(ಕಾದಂಬರಿ, ಪೂ.ಭಾ., ೨೭೯.)

ತರತರದಿಂದೆಂಟುಂ ದಿ
ಕ್ಕರಿಗಳ್ [6]ನೆರೆದೊಟ್ಟಿ[6]ಕೊಳ್ವ ಕರಪುಷ್ಕರ ಶೀ ।
ಕರಮೊಗೆದು ತೋರ್ಪುವೆನಲಂ
ಬರತಳದೊಳ್ ತುಱುಗಿ ಮಿಱುಗಿದುವು ತಾರಗೆಗಳ್ ॥ ೧೭೩
(ಕಾದಂಬರಿ, ಉ.ಭಾ., ೧೪೩).

ಇಳೆಗೆ ಪಟಗಾಲದಂಬರ
ಮೊಳ[7]ಜೋಲ್ಗುಂ[7] ಬೀಳ್ಗುಮೆಂದು ಧಾತ್ರಂ ಬಲ್ಪಂ ।
ದಳವಡೆ ಬೆಟ್ಟಿದ ಬೆಳ್ಳಿಯ
ಮೊಳೆಗ[8]ಳಿವೆನೆ[8] ತೊಳಗಿ ಬೆಳಗಿದುವು ತಾರಗೆಗಳ್ ॥ ೧೭೪
(ಜಗನ್ನಾಥವಿಜಯಂ, ೧೭-೬೯)

---

[1] ಳಂಡರೆಯೆ (ಖ.ಬ). [2] ರಿಧಿ (ಕ). [3] ಕದಪು (ಖ.ಬ). [4] ನೀರ್ವ (ಖ.ಬ).
[5] ಪಸರಿಸಿದುದೆಯ್ದೆ (ಖ.ಬ). [6] ನೀಳ್ದೆತ್ತಿ (ಖ.ಬ). [7] ನಾರ್ಗುಂ (ಅ). [8] ಳಿನರ್ (ಅ).

ಇರದುದಯಗಿರಿಯ ದರಿಯೊಳ್
ನುರಕರಿ [1]ಮಜ್ಜನ[1]ಕೆ ನಾರ್ದು ನುಯ್ಯೆಲೊಡಂ ಪು ।
ಷ್ಕರದಿನೊಗೆವತಿ [2]ವಿಶದ [2]ಶ್ರೀ
ಕರಮೆನಿಸಿದುವುದಯಿಪಮಳ ತಾರಾನಿಕರಂ ॥ ೧೬೫
(ಚಂದ್ರಪ್ರಭಪುರಾಣಂ, ೮–೨೨.)

ಗಗನಂ ಮಿತ್ರವಿಯೋಗದಿ
ನೊಗೆದಂತಶ್ಯಾನ್ಯಭಾವ[3]ದಿಂದೊಳ[3] ಮೆಯ್ಯೊಳ್ ।
ಮಿಗೆ ಪನಿತ [4]ಕಣ್ಣನಿಯಿದೆನೆ[4]
ಸೊಗಯಿಸಿದುವು ತರದಿನೊಗೆದು ತಾರಗೆ ಪಲವುಂ ॥ ೧೬೬
(ಚಂದ್ರಪ್ರಭಪುರಾಣಂ, ೮–೨೩.)

ಜವದಿಂ ಪೋದಿನನ ವರೂ
ಥವಾಜಿಗಳ ಮೊಗದೊಳೊಗೆದ ಫೇನಂಗಳ್ ವಾ ।
ಯುವಶದೆ ಪಱುವಱುಯಾಗಿ
ರ್ದುವು ಗಗನಾಂಗಣದೊಳೆನಿಸಿದುವು ಭಗಣಂಗಳ್ ॥ ೧೬೭
(ಚಂದ್ರಪ್ರಭಪುರಾಣಂ, ೮–೨೪.)

ನೆಟ್ಟನೆ ಬಂದಪನೆನ್ನಯ
ನಿಚ್ಚೆಯ ನಿಧಿ ಚಂದ್ರನೆಂದು ರಾತ್ರೀವಧು ತಾಂ ।
ಕಟ್ಟಿದ ಬಹುರತ್ನದ ಮೇ
ಲ್ಕಟ್ಟೆನಿಸಿದುದಂಬರಂ ಸುತಾರಾಗಣದಿಂ ॥ ೧೬೮
(ಗಿರಿಜಾಕಲ್ಯಾಣಂ, ೪–೯೩.)

ಸಂಕಳಿತ ಬಹಳ ತಾರಾ
ಸಂಕುಳದಿಂ ಪೋಲ್ತುದಭ್ರಮಾವೃತತಿಮಿರಂ ।
ತೇಂಕುವ ಮಲ್ಲಿಗೆ ಮುಕುಳದ
ಸಂಕುಳಮಂ ತಳೆದು ನಿಂದ ಜಗುನೆಯು ಮಡುವಂ ॥ ೧೬೯

ಓಸರಿಸೆ ಸಂಜೆ ಜವನಿಕೆ
ಯೋಸರಿಸಿದ ತೆಱದೆ ರಾತ್ರಿನರ್ತಕಿ ಪುಗುತಂ ।
ಸೂಸಿದ ಪುಷ್ಪಾಂಜಲಿಯೆನೆ
ಭಾಸಿಸಿದುವು ಗಗನರಂಗದೊಳ್ ತಾರಕಿಗಳ್ ॥ ೧೭೦
(ಲೀಲಾವತಿ, ೧೦–೨೪.)

---

[1] ಸೆಜ್ಜರ (ಅ). [2] ವಿತತಿ (ಗ.ಖ.ಘ). [3] ದಿನದೆ (ಅ). [4] ಪು ಕಣ್ಣನಿಯೆವೆ (ಖ.ಬ).

ಸ್ಥಿರರಾಜ್ಯಂ ಗೆಯ್ ಕತ್ತಲೆ
ಚಿರಕಾಲಮಿರೆಂದು ಜಾರೆಯರ್ ಪದಪಿಂದಂ ।
ಪರಸಿಡುವ ಸೇಸೆಯಂದದೆ
ಕರಮೆಸೆದುವು ಗಗನರಂಗದೊಳ್ ತಾರಕಿಗಳ್ ॥ ೧೮೧

ಶಶಿ ಬಂದನೆಂದು ವಾರಿಧಿ
ಯೆಸೆದೊಲವಿಂ ನರರ ದಿಟ್ಟಿ ನಟ್ಟಪವೆಂದಾ ।
ಸಸಿಗೆ ನಿವಾಳಿಸಿ ಚೆಲ್ಲಿದ
ಪ್ಪೊಸ ಮುತ್ತಿನ ಸೇಸೆಯಂತೆ ತಾರಗೆಯೆಸೆಗುಂ ೧೮೨

ಗಗನಂ ಪೂತುದೊ ತಮಮಂ
ಮಿಗೆ ನೋಡುವ ಭರದೊಳಂಬರಂ ನೆಱಿ ತಾನ ।
ಕ್ಷಿಗಳಂ ಪಡೆದುದೊ ಪೇಟೆನೆ
ಸೊಗಯಿಸಿದುವು ತೊಳಗಿ ಬೆಳಗಿ ತಾರಗೆ ನಭದೊಳ್ ॥ ೧೮೩
(ಗಿರಿಜಾಕಲ್ಯಾಣಂ, ೪-೯೦.)

ಅಂಬುಜನಿಜಸಖನಸ್ತಮ
ಯಂಬರವಂಬರದ ನಡುವೆ ಬಹುತರದಿಂ ನೆ ।
ಯ್ದಂಬರದೊಳ್ ಕಯ್ಗೊಳಿಸಿದ
ಚುಂಬಿತ ರತ್ನಂಗಳಂತೆ ತಾರಗೆಯೆಸೆಗುಂ ॥ ೧೮೪
(ಗಿರಿಜಾಕಲ್ಯಾಣಂ, ೪-೯೨.)

ತಮನೆಂಬ ರಾಹುಭಯದಿಂ
ದ್ಯಮಣಿ ಸ್ಥೂಲತೆಯನುಟಿದು ಕಿಱುಮೂರ್ತಿಗಳಂ ।
ಸಮುಚಿತದಿ ತಾಳ್ದನೆನೆ ಗೃಹ
ಸಮುಚಿತದೊಳ್ ತೊಳಗಿ ಬೆಳಗಿದುವು ದೀಪ್ತಿಕೆಗಳ್ ॥ ೧೮೫

ನೆಲಸಿ ನೆಲೆಗೊಂಡ ಪೆರ್ಗ
ಟ್ಟಲೆಯೊಳ್ ತೊಳತೊಳಗಿ ಬೆಳಗಿ ಮಿನಿಮಿನಿಸುತ್ತಂ ।
ಪಲವುಂ ದೀವಿಗೆಗಳ್ ಕ
ಟ್ಟಲೆ ಪೂತಂತೊಪ್ಪುತಿರ್ದುವಾ ಮನೆಮನೆಯೊಳ್ ॥ ೧೮೬
(ಗಿರಿಜಾಕಲ್ಯಾಣಂ, ೪-೮೦.)

ಆವರಿಸುತಿರ್ಪ ತಮಕೆ ತ
ಪೋವೈರಿ ಧರಿತ್ರಿಗಿಟಿದುಳಿಯಾ[1]ಳ[ದ]ನೆ[1] ದೀ ।

---

[1] ಳೆನೆ (ಖ.ಬ).

ಪಾವಳಿಗಳೆಸೆದವಖಿಳ ಗೃ
ಹಾವಳಿಯೊಳ್ ಬರ್ಪ ಶಶಿಗೆ ನೀರಾಜಿಪವೋಲ್ ॥ ೧೮೭

ಮಡದಿಯರೆಲ್ಲಂ ಪೊತ್ತಿಸಿ
ತಡೆಯದೆ ಕೈಮುಗಿದು ನೆನೆದು ಮನೆದೇವತೆಯಂ ।
ಕುಡಿವೆರಳೊಳಿಂಟುವಕ್ಕಿಂ
ದಿಡುವರ್ ಬಾಳಗೆರ್ಯಾ ಸೊಡಗುರ್ಡಿ ಕಪ್ಪಂ ॥ ೧೮೮

ಸೊಡಗುರ್ಡಿಗೆತ್ತಿ ಕೈಮುಗಿದು ಚೇಟಿಯರಂ ಬೆಸಗೊಂಡು ಸನ್ನೆಯಿಂ
ನಡೆದು ಗೃಹಾಂಗಣಕ್ಕಱಿಸಿ ತಾರಗೆಯಂ ನಡೆನೋಡಿ ಪಾಟಿಯಿಂ ।
ಕುಡಿವೆರಳಿಂದಮೊಲ್ದೆಳಸಿ ಕಾಂತೆಯರೊಯ್ಯನೆ ಸಂಜೆಮೋನಮಂ
ಬಿಡುವಿನಮುಬ್ಬಸಂಬಡುತಮಿರ್ದುದು ಪೊರ್ದಿದ ಕಾಮುಕವ್ರಜಂ ॥ ೧೮೯

ಜಗುನೆಯ ಪೂರಮೊತ್ತರಿಪ ಗಂಗೆಯಿನೊಡ್ಡಟಿವಂತೆ ಮರ್ಬಿನು
ರ್ಬುಗಿಬಗಿಯಾಗೆ ಬೆಳ್ಪು ನೆಗೆತಂದುದಯಾದ್ರಿಯ ಸೆಜ್ಜೆರಕ್ಕೆ ಪ ।
ಕ್ಕೆಗೆ ಬರುತಿರ್ಪ ದೇವಗಜದಂಗಮರೀಚಿಯ ಭಂಗಿವೆತ್ತಿರಲ್
ಬಗೆಗೊಳಿಸಿತ್ತು ಚಂದನರಸಂದೊಡೆದಂತಿರೆ ಪೂರ್ವಪಿಙ್ಮುಖಂ ॥ ೧೯೦

(ಜಗನ್ನಾಥವಿಜಯಂ, ೧೬–೧೦೩.)

ಉಡುಪತಿ[1][ಯಾ][1] ಪಿಂತನೆ ಬಂ
ದಡಸಿ ಮುಸುಂಕಿರ್ದ ತಿಮಿರನೀಲಾಂಬರಮಂ ।
ಪಿಡಿಯೆ ಭಯಮುತ್ತವೋಲ್ ಬೆ
ಳ್ಪಡ[2]ರ್ದುದು[2] [3]ವದ[3]ನಕ್ಕೆ ಪೂರ್ವದಿಗ್ಬಂಧಕಿಯಾ ॥ ೧೯೧

ಆರಯ್ಯದೆ ಖರಕರನೊಳ್
ವಾರುಣಿ ವಸುವಿಭವಹೀನನೊಳ್ ನೆರೆಯೆ ದರ ।
ಸ್ಮೇರಾನನೆಯಾದ್ಯೆಂದ್ರೀ
ನಾರಿಯ ನಗೆಯಂತೆ ನೆಗೆದುವಿಂದುಕರಂಗಳ್ ॥ ೧೯೨

(ಲೀಲಾವತಿ, ೬–೧೦೯.)

ಉದಯಂಗೆಯ್ದುತ್ಪಲಾಧೀಶ್ವರನನಮರಕಾಂತಾಳಿನೀರಾಜನಂ ಮಾ
ಡಿದ ಮಾಣಿಕ್ಯಪ್ರದೀಪಾವಳಿಯ ಬೆಳಗು ತದ್ವಾಮವಾಮೇತರಾಶಾ ।

---

[1] ಪತಿ (ಖ.ಬ), ಯಂ (ಗ). [2] ದಂದು (ಖ.ಬ). [3] ವೇ (ಕ).

ನುದತೀಪಿಷ್ಟಾತಕಾಕೀರಣಕಪಿಶರಜಃಪುಂಜಮೆಂಬಂದದಿಂ ಪೊ
ರ್ದಿದುದೋ ಕಂದರ್ಪಯಾತ್ರಾಬಳಚಳನಪರಾಗಂ ತದುದ್ಯೋತರಾಗಂ ॥ ೧೯೩

(ಅನಂತನಾಥಪುರಾಣಂ, ೭–೭೫.)

ಇದು ಘುಸೃಣಾರುಣಂ ಸುರಹರಿದ್ವನಿತಾನಿಟಿಲಂ ದಿಟಕ್ಕೆ ತಾ
ನಿದು ಬರೆದಿರ್ದ ಸಿಂಧುರದ ಕೆಂಪಡ[1]ರ್ದಿಂದ್ರ.[1] [2]ಗಜೇಂದ್ರ[2] ಕುಂಭಮ ।
ಲ್ತದು ಜನಿತೇರ್ಷ್ಯೆಯಿಂ ಮುಳಿಯೆ ತಾರಗೆ ಪಾಟಲಮಾದ ಯಾಮಿನೀ
ವದನಮೆನಿಪ್ಪಿನಂ ದಿಟದಿನುಣ್ಮಿದುದಿಂದುವ ರಕ್ತಮಂಡಲಂ ॥ ೧೯೪

(ಚಂದ್ರಪ್ರಭಪುರಾಣಂ, ೮–೧೪)

ವಿತತಪ್ರಾಚ್ಯಾದ್ರಿಪೀಠಾಗ್ನಿಮದರುಣಶಿಲಾವಿದ್ಧಲಿಂಗಂಬೊಲಿಂಬಾ
ಯ್ತು ತರಂಗೊಂಡೇಳ್ಗೆಯಿಂ ರಾಗದಿನುಪಚಿತಚೇತಶ್ಚಕೋರೀಕದಂಬಂ ।
ದ್ಯುತವಲ್ಲೀಸ್ತಂಭಮುಜ್ಜೃಂಭಿತಕುಮುದಕುಟುಂಬಂ ತಮಶ್ಶೈಲಶಂಬಂ
ರತಿಪಾಟೋಪಾವಲಂಬಂ ಜನಿತವಿಟವಿಡಂಬಂ ಸುಧಾಸೂತಿಬಿಂಬಂ ॥ ೧೯೫

(ಜಗನ್ನಾಥವಿಜಯಂ, ೧೬–೧೦೪.)

ಇದು ಸಂಕ್ರಂದನದಿಗ್ವಧೂನಿಟಿಲಸಿಂಧೂರಾಂಶುವೋ ನೋಡ ನೋ
ಡಿದು ಪುಷ್ಪಾಯುಧಪದ್ಮರಾಗಮುಕುರಪ್ರದ್ಯೋತಮೋ ಪೇಳಿದಿಂ ।
ತಿದು ವಿನ್ತಾರಿತ ಕಾಮಹೋಮಹುತಭುಕ್ಕೃಜ್ವಾಲೆಯೋ ಎಂಬ ಸಂ
ಪದಮಂ ಬೀಱಿದುದಿಂದ್ರದಿಗ್ವಳಯದೊಳ್ ಚಂದ್ರದ್ಯುತಿಪ್ರೋದ್ಭವಂ ॥ ೧೯೬

(ಗಿರಿಜಾಕಲ್ಯಾಣಂ, ೪–೯೫.)

ವಿರಹಿಗಳಂ ಮನೋಜನಲರಂಬುಗಳಂ ತೆಗೆದೂಱಿಕೊಂಡು ಕೊ
ಕ್ಕರಿನದೆ ಹೃತ್ಕವಾಟಪುಟಮಂ ಬಿರಿಯೆಚ್ಚೊಡೆ ತದ್ಗುಹೌಘದಿಂ ।
ಸುರಿವರುಣಾಂಬುವಂ ಕುಡಿದು ನರ್ತಿಸುತಿರ್ಪ ವಸಂತಡಾಕಿನೀ
ಕರದ ಕಪಾಲಮಿಂತಿದೆನೆ ಕಣ್ಗೆಸೆದಿರ್ದುದು ಚಂದ್ರಮಂಡಳಂ ॥ ೧೯೭

ಕಳಶದ ಬಾಯ ಕೆಂದಳಿರನಂಗಜವಿಪ್ರನ ಹೋಮಕುಂಡದೊಳ್
ಬಳೆದುರಿಯಂ ನಿಶಾಂಗನೆಯ ಬಟ್ಟಲ ಕುಂಕುಮಮಂ ಮನೋಜನ ।
ಗ್ಗಳಿಕೆಯ ಗಂಧಸಿಂಧುರದ ನೆತ್ತಿಯ ಸಿಂಧುರಮಂ ಪೊದಬ್ದು ಪೋ
ಲ್ತಳವಿಗಳುಂಬಮಾದುದು ಸುಧಾಕರಬಿಂಬದ ರಾಗಮೇಳ್ಗೆಯಿಂ ॥ ೧೯೮

(ಲೀಲಾವತಿ, ೨–೭.)

---

[1] ದಿರ್ದ (ಖ.ಬ). [2] ಕರೀಂದ್ರ (ಅ).

ದಿಕ್ಕಾಂತಾಧರಪಲ್ಲವಕ್ಕೆ ಬಟಿಕಾ ದಿಕ್ಕಾಮಿನೀಭಾಳಪ
ಟ್ಟಕ್ಕಂ ತಾಂ ಬಟಿಕಾ ದಿಶಾಂಗನೆಯ ಕಾಶ್ಮೀರಾಂಗರಾಗೋಜ್ವಲಾ ।
ಸ್ಯಕ್ಕಾರಯ್ಯೆ ಸಮಾನಮಾಗಿ ನಯನಕ್ಕಿಂಬಾಗಿ ಪೂರ್ವಾದ್ರಿಕೂ
ಟಕ್ಕೆಟ್ಟಿಂದನೊಡರ್ಚುತುಂ ಕುವಲಯಕ್ಕಾನಂದಮಂ ಚಂದ್ರಮಂ ॥ ೧೯೯

(ಪಾರ್ಶ್ವನಾಥಪುರಾಣಂ, ೧೦–೨೦.)

ಸ್ಮರಶಿಖಿಯಂ ವಿಯೋಗಿಹೃದಯಕ್ಕನುರಾಗಮನಾಗಳಾಗಳುಂ
ನೆರೆದೆಸೆದಿರ್ಪ ಕಾಮುಕಜನಾಶ್ರಯಕೊರ್ವೊದಲೀಯಲೆಂದು ಬಿ ।
ತ್ತರಿಸಿರೆ ತಾಳ್ದುದೆಂದುದಯಶೋಣತೆ ಶೋಭೆಯನೀಯೆ ಪೂರ್ವದಿ
ಕ್ತರುಣಿಯ ಪದ್ಮರಾಗಮಣಿದರ್ಪಣದಂತೆಸೆದಂ ಸುಧಾಕರಂ ॥ ೨೦೦

(ಪಾರ್ಶ್ವನಾಥಪುರಾಣಂ, ೧೦–೨೧.)

ನನೆಯಿಂ ನೆಯ್ದಿ [1]ಲನಾಲ[1]ನೀರ್ದಳಪದಿಂ ಕಾಮಾಗ್ನಿಯಂ [2]ನಂದಿಸಲ್[2]
ಮನಮಂ ತಂದ ವಿಯೋಗಿಜಾಲದೆರ್ದೆಯಂ ನಟ್ಟುರ್ಚಿಯೊಳ್ [3]ಜಾ[3]ಱಿ ಬೆ ।
ಚ್ಚನೆ ಪಾಯ್ತುಂದು ಪೊದಟ್ಟ ರಕ್ತಜಲದಿಂದಂ ತೊಯ್ದ ಕಂದರ್ಪದೇ
ವನ ಚಕ್ರಕ್ಕೆಣೆಯಾಯ್ತು ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ ॥ ೨೦೧

(ಲೀಲಾವತಿ, ೨–೫.)

ನೆರೆದೈ ಸಂಜೆಯೊಳೆಂದು ಕಾಯ್ದೊ [4]ದೆದೊಡೇನಾತ್ಮಾಂ[4]ಗದೊಳ್ ರೋಹಿಣೀ
ಚರಣಾಲಕ್ತಕರಾಗಮಚ್ಚಿಱುದುದೋ ಮೇಣ್ ಕಾಮಿಗಳ್ಗೀವ ಕಾ ।
ಮರಸಂ ಪೊಣ್ಮಿದುದೋ ತಮೋಗಜದ ಕೋಡೇಱುಂದೆ [5]ಮೇಣ್[5] ನೊಂದುದೋ
ಹರಿಣಂ ತಾನೆನಿಸಿತ್ತು ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ ॥ ೨೦೨

(ಆದಿಪುರಾಣಂ, ೧೨–೬.)

ಪುರುಡಿಂ ಕಾಯ್ದೊದೆಯಲ್ಕೆ ರೋಹಿಣಿಯ ಪಾದಾಲಕ್ತಕಂ ಮೆಯ್ಯನಾ
ವರಿಸಿತ್ತೋ ನಿಕಟಾಬ್ಧಿ ವಿದ್ರುಮ ಮಯೂಖಂ ತಳ್ತುದೋ ಪೂರ್ವಭೂ ।
ಧರಸಿಂಹಂ ಪೊಯೆ ನೊಂದುದೋ ಹರಿಣನೆಂಬಂತಾಗಳತ್ಯುಕ್ತ ಸೌಂ
ದರಮಾಗಿರ್ದುದು ಕಣ್ಗೆ ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ ॥ ೨೦೩

ಶೋಣತೆವೆತ್ತು ಮರೀಚಿ
ಶ್ರೇಣಿಯ ಕೆಂದಳಿರನಗ್ರದೊಳ್ ತಳೆದುದಯ ।

---

[1] ಲೆ ನಾರಿ (ಕ.ಖ.ಬ). [2] ಮಗ್ಗಿನರ್ (ಅ). [3] ಗಾ (ಅ). [4] ದೆಯಲಾತನ್ನಂ (ಖ.ಬ). [5] ಮೇಂ (ಅ).

ಕ್ಷೋಣೀಧ್ರಮೆಂಬ ಕಳಶದ
ಮಾಣಿಕಗನ್ನಡಿವೊಲಾಯ್ತು ಹಿಮಕರಬಿಂಬಂ ॥ ೨೦೪
(ಜಗನ್ನಾಥವಿಜಯಂ, ೧೬–೧೦೫.)

ಅಲೆದಮೃತದೊಡನೆ ತಾರಾ
ಲಲನೆಯರಡಿದಳಿರನೂಡಲೆಂದು ಪದಂಗೆ ।
ಯ್ದಲತಗೆಯ ಪಡಲದಂತೆವೊ
ಲಲೆದುದು ಪರಿಪಕ್ವ[1]ರಾಗದಿ[1]ಂ ವಿಧುಬಿಂಬಂ ॥ ೨೦೫
(ಲೀಲಾವತಿ, ೨–೮.)

ಪುದಿದಿರೆ ಪ[2]ಣ್ತ್ರೀವಿದ[2] ಬಿಂ
ಬದಾಲದಿಂ ಪಣ್ಗಳುದಿರ್ದುವೆನೆ ಸೊಗಯಿಸಿದ ।
ತ್ತುದಯದೊಳೊದವಿದ ಕೆಂಪಿಂ
ಪುದಿದೊಪ್ಪುವ ತಾರಕೋತ್ಕರಂ ಕೆಲಗೆಲದೊಳ್ ॥ ೨೦೬
(ಚಂದ್ರಪ್ರಭಪುರಾಣಂ, ೮-೨೮.)

ಅದು ಪೊಸಪವಳದ ಬಂಧೂ
ಕದ ಕೆಂದಾವರೆಯ ದಾಸಳದ ಪೂವಿನ ಬ ।
ಣ್ಣದ ಸಂಪದಮಂ ಮುದದಿಂ
ಪದೆದಂದೊಪ್ಪಿತ್ತು ಚಂದ್ರಬಿಂಬವಿಡಂಬಂ ॥ ೨೦೭
(ಗಿರಿಜಾಕಲ್ಯಾಣಂ, ೪–೯೯.)

ಇದು ವಿರಹ ವಾರ್ಧಿಮಧ್ಯ
ಪ್ರದೇಶದಿಂದೊಗೆದ ರಾಗವಡಬಾನಳಪಿಂ ।
ಡದವೋಲ್ಪರಹಿಗೆ ತೋಱಿ
ತ್ತುದಯಾದ್ರಿಯ ಮೇಲೆ ಮೆಱೆವ ಹಿಮಕರಬಿಂಬಂ ॥ ೨೦೮
(ಗಿರಿಜಾಕಲ್ಯಾಣಂ, ೪–೧೦೦.)

ಇದು ಮಾಹೇಂದ್ರೀಲತಾಕೋರಕಮಮರಹರಿದ್ವಲ್ಲರೀಪಲ್ಲವಂ ಪೂ
ರ್ವದಿಶಾವಲ್ಲೀಫಲಂ ತಾನೆನೆ ತರತರದಿಂದೇಱಿ ಕಣ್ಗೆಡ್ಡಮಪ್ಪಂ ।
ತುದಯಂಗೆಯ್ದತ್ತು ಸಂಧ್ಯಾರುಣರುಚಿರುಚಿರಂ ಕಾಮನಾಮ್ರಾಜ್ಯಲಕ್ಷ್ಮೀ
ಮದಲೀಲಾಲಂಬಮುಜ್ಜೃಂಭಿತ ಕುಮುದಕದಂಬಂ ಸುಧಾಸೂತಿಬಿಂಬಂ ॥೨೦೯
(ಮಲ್ಲಿನಾಥಪುರಾಣಂ, ೭–೨೮.)

---

[1] ಬಿಂಬಮಂ (ಅ). [2] ಣ್ತಿಂದುವ (ಅ).

ಉದಯೋರ್ವೀಧರಕುಂಕುಮೋದ್ಗಮರಜಂ ಪಾಯ್ವಂತೆ ಕೆಂಪೇಱಿ ಪೂ
ರ್ವದಿಶಾಕನ್ಯೆಯ ತೋಳೊಳಿರ್ದರಿಸಿನಂ ತಳ್ತಂತೆ ಪೊಂಬಣ್ಣವೇ ।
ಱಿ ದಿವೌಕಃಪ್ಲವದೊಳ್ ಮುಱುಂಗಿ ತೊಳೆದೇಳ್ವಂತೆಯ್ದೆ ಬೆಳ್ಪೇಱಿ ತ
ತ್ತ್ವದ್ಧಾಭ್ಯಾಸಿಯ ಚಿತ್ತದಂತೆ ತಿಳಿದಂ ತಾರಾಮನೋವಲ್ಲಭಂ ॥ ೨೧೦

(ಅನಂತನಾಥಪುರಾಣಂ, ೭–೮೩.)

ತೊರೆದುದು ಚಂದ್ರಕಾಂತಮೆಣೆವಕ್ಕಿಗಳಪ್ಪು ಸಡಿಲ್ದು ವಿಂಗಡಲ್
ತೆರೆ ಮಸಗಿತ್ತು ಮಿರ್ದುವೊಗೆತಂದುದು ಚಂದ್ರಿಕೆ ಕೂಡೆ ಮೀನ್ಗಳಂ ।
ಕುರಿಸಿದುವುತ್ಪಲಂ ನಗುತುಮಿರ್ದುವು ಕಣ್ಮುಗಿದಬ್ಜಮುಂ ತಮಂ
ಪರೆದುದು ಮನ್ಮಥಂ ನಲಿದು ನರ್ತಿಸಿದಂ ಶಶಿ ಬರ್ಪ ಪೊೞ್ತಿನೊಳ್ ॥ ೨೧೧

ಒಸಱಿಲ್ಕರ್ದುದು ಚಂದ್ರಕಾಂತಮರಲಲ್ಕರ್ದತ್ತು ಮುಗ್ಧೋತ್ಪಲ
ಪ್ರಸರಂ ಜಾದಿನ ಬಣ್ಣವಪ್ಪ ಬೆಳಗಂ ಕೈಕೊೞ್ಗೆ ಪೂರ್ವಾಸೆಯು ।
ದ್ದೆಸೆಯಂ ಕಂಡದಿದಾರ್ದರದಿರ್ದುವು ಚಕೋರಂ ಪಾಲ್ಗಡಲ್ಮೋರೆಯಂ
ಮಿಸುಗಲ್ಕರ್ದುದು ಮೂಡಲಿರ್ದ ಪದದೊಳ್ ತಾರಾಮನೋವಲ್ಲಭಂ ॥ ೨೧೨

ಸಂಗಡಿಸೆ ತನ್ನೊಳರುಣಪಿ
ಶಂಗಸಿತದ್ಯುತಿಗಳೆಂಬನುಕ್ರಮರುಚಿ ಶ ।
ಕ್ರಂಗೆತ್ತಿದ ಮಾಣಿಕಗೊಡೆ
ಪೊಂಗೊಡೆ ಬೆಳ್ಗೊಡೆಗಳೆನಿಸಿದುದು ವಿಧುಬಿಂಬಂ ॥ ೨೧೩

(ಜಗನ್ನಾಥವಿಜಯಂ, ೧೬–೧೦೬.)

ಶರದೊಳ್ ತಾರಾ[1]ಕಪೋಲಂ[1] ಪೊಳೆಯೆ ಕರಜತಾಜೂಟಮಿಂಬಾಗೆ ಜೊನ್ನಂ
ನುರಸಿಂಧುಸ್ರೋತಮಂ ಪೋಲ್ತರೆ ತೊಲಗೆ ತಮೋರಾಕ್ಷಸಂ ಚರ್ಮಚಿತ್ರಾಂ ।
ಬರ[2]ಬಂಧಂ[2] ಕೂಡೆ ಕಾಮಂ ಕರಮುರಿವಿನೆಗಂ ಮಂಡಲಂಗೊಂಡು ಪರ್ವು
ತ್ತಿರೆ ಸಂಧ್ಯಾರಾಗನೇತ್ರಾನಲನುದಯಿಸಿದಂ ಚಂದ್ರಚಂದ್ರಾರ್ಧ[3]ಜೂಟಂ[3] ॥೨೧೪

(ಲೀಲಾವತಿ ೧೦-೩೨.)

ಕುವಲಯದೀರ್ಘನೇತ್ರಮಲರುತ್ತಿರೆ ಮೂಡುವ ಮೀನ್ಗಳಾಕೆಯೊ
ಪ್ಪುವ ಮುಖಪದ್ಮದೊಳ್ ಮೊಡವಿ ಮೂಡಿದವೋಲಿರೆ ಕಾಲಮೆಂಬ ಶಂ ।
ಭುವಿನ ಶರೀರದೊಳ್ ಪುದಿದ ಗೌರಿಗೆ ರಾಗಮನೊಡ್ಡಿಕೊಂಡು ಮೂ
ಡುವ ಮೊಲೆಯಂತೆ ಮೂಡಿದುದು ಮೂಡಣದಿಕ್ಕಿನೊಳಿಂದುಮಂಡಲಂ ॥ ೨೧೫

(ಲೀಲಾವತಿ, ೨–೩.)

---

1 ಕಳಾಪಂ (ಅ), ಕಪಾಲಂ (ಬ). 2 ಖಂಡಂ (ಖ.ಗ.ಬ). 3 ಚೂಡಂ (ಅ).

ನೋಂಕಲೊಡಂ ನಿಶಾತರುಣಿಯಂ ತಶಿ [1]ಪೋದುದು[1] ಸಂಜೆ ಸೀರೆವೋಲ್
ಪಂಕಜಲೋಚನಂ ಮುಗಿದುವೆಟ್ಟುವು ಬಲ್ಬೆಮರಂತೆ ತಾರಕಾ ।
ಸಂಕುಳಮಿಂದುಕಾಂತವಿತತಾಚಳ ತುಂಗ ನಿತಂಬ ಬಿಂಬದಿಂ
ದಂ ಕೊಳನಾಗಿ ಸೂಸಿದುವು ತೆಳ್ವದದಂತೆ ನವದ್ರವಾಂಬುಗಳ್ ॥ ೨೧೬
(ಲೀಲಾವತಿ, ೨–೪.)

ನನೆಯಂಬುಂ ಮದವೇಱು ಕೈರವಕುಳಂ ನೀರೇಱು ಕಾಮಾರ್ಥಿಯ
ಪ್ಪನ ಜೀವಂ ನಡುನೆತ್ತಿಗೇಱು ಖರದಂಡಶ್ರೀಗೆ ಕರ್ಪೇಱು ಕಾ ।
ಮಿನಿಯರ್ ಸಂತಸದುಯ್ಯಲೇಱು ನೆಲೆಯಿಂದಂಭೋಧಿ ಮಿಕ್ಕೇಱು ಭೋಂ
ಕನೆ ಬಂದೇಱಿದನಲ್ತೆ ವಾಸವದಿಶಾಶ್ಯೆಲೇಂದ್ರಮಂ ಚಂದ್ರಮಂ ॥ ೨೧೭

ವಿದಳತ್‌ಕೈರವರಾಜಿ ರಾಜಬಲದಿಂ ಸಂತೋಷಮಂ ಮುಟ್ಟೆ ಸ
ನ್ಮದಮಂ ತಾವರೆಯೆತ್ತಿ ಕಟ್ಟೆ ತಮಮಂ ಶೀತಾಂಶುವೆಬ್ಬಟ್ಟೆ ಪೆ ।
ರ್ಚಿದಗುರ್ವಿಂ ವಿರಹಾಳಿಯಂ ಕುಸುಮಬಾಣಂ ಕಾಯ್ದು ಬೆನ್ನಟ್ಟೆ ಮೆ
ಟ್ಟಿದನಿಂದ್ರಾಚಲಚೂಡಮಂ ಕಿರಣವೀಧೀಸಾಂದ್ರಮಂ ಚಂದ್ರಮಂ ॥ ೨೧೮
(ಗಿರಿಜಾಕಲ್ಯಾಣಂ, ೪–೯೮.)

ತಿಮಿರಾತ್ಮದ್ಯುತಿ ಕರ್ಪುದೋರ್ಪ ತಿಲಕಂ ತಾರಾಗಣಂ ಬಂದು ನೋ
ಡುವ ಯೂಥಂ ಮಧು ತೆತ್ತಿಗಂ ವಿರಹಿ ಮಾಱುಂಕಂ ನೃಪಂ ಚಿತ್ತಸಂ ।
ಭವನಾಗಲ್ಕಡುಕೆಯ್ದು ಕಾಯ್ದು ಕಳನಂ ಬಂದೇಱುವಂತೇಱಿದಂ
ನವಸಂಧ್ಯಾಸುವಿಭಾಸಿ ವಾಸವದಿಶಾಶ್ಯೆಲೇಂದ್ರಮಂ ಚಂದ್ರಮಂ ॥ ೨೧೯

ನಿನದತ್ಸಂಧ್ಯಾನಕಂ ನಿಗ್ಗವಣೆಯ ಪಱು ಪೂರ್ವಾಚಲಂ ತುಂಗ ರಂಗಂ
ತನಗಾದತ್ತೆಂಬಿನಂ ನೀಲಿಯ ಜವನಿಕೆವೋಲ್ ಪಿಂಗೆ ಸಂಧ್ಯಾತಮಂ ಮೆ ।
ಲ್ಲನೆ ತಾರಾನೀಕಪುಷ್ಪಾಂಜಳಿಯನೆಸೆವಿನಂ ಸೂಸಿ ತತ್ಪೂರ್ವ ರಂಗ
ಕ್ಕನುಗ್ಯೈವುದ್ಯನ್ನಿಶಾನರ್ತಕಿಯ ವದನದಂತಿಂದು ಕಣ್ಗೆಡ್ಡಮಾದಂ ॥ ೨೨೦
(ಚಂದ್ರಪ್ರಭಪುರಾಣಂ, ೮–೩೦.)

ಮುದದಿಂ ತಂದಿಕ್ಕೆ ಪೂರ್ವಾಂಗನೆ ಗಿರಿಶಿರದೊಳ್ ಪೀಠಮಂ ಸತ್ಪ್ರಧಾನಂ
ಪದಮಂ ಕೈಗೊಟ್ಟು ಚೈತ್ರಂ ನಡೆತರೆ ಮದನಂ ಪುಷ್ಪಬಾಣಂಗಳಂ ಪೂ ।
ಡಿದ ಬಿಲ್ಲಂ ಪೊೞ್ತು ಪಿಂತಂ ಬರೆ ನವ ಕುಮುದಾಮೋದ ಮಾಧುರ್ಯದಿಂ ಷ
ಟ್ಪದಗಾನಂ ಪೊಣ್ಮಿಸುತ್ತುಂ ಶಶಿಯುದಯದೊಳೊಪ್ಪಿತ್ತು ರಾಜೋಪಚಾರಂ ॥
(ಗಿರಿಜಾಕಲ್ಯಾಣಂ, ೪–೯೭.)

---

[1] ಸೋರ್ದುದು (ಅ).

ಗಗನಮಹಾಂಬುರಾಶಿಯೊಳಗೊಯ್ಯನೆ ಕೊರ್ಬಿದ ಮುತ್ತು ಸುತ್ತಲುಂ
ಸೊಗಯಿಪ ಕೌಮುದೀಲತೆಯ ಬಿತ್ತು ವಿಧುಂತುದನುಂಬ ತುತ್ತು ಕಾ ।
ಮಿಗಳನನಂಗನಾಜ್ಞೆಯೊಳೆ ಫೋಣಿಸಿದೋಲೆಯ ಸುತ್ತು ನೋಟ್ಪೊಡಂ
ಬಗೆಗೊಳಿಸಿತ್ತು ವಾಸವದಿಶಾನನಕುಂಡಲಮಿಂದುಮಂಡಲಂ ॥ ೨೨೨

ಕರಮೆಸೆಯಿತ್ತು ಕೌಮುದಿಯ ಬಿತ್ತು ಚಕೋರಿಯ ತುತ್ತು ನೀರಜೋ
ತ್ಕರದ ವಿಪತ್ತು ತಾರೆಗಳ ತುತ್ತು ಸುಧಾಂಬುಧಿಯೊತ್ತು ಜಾರ·ಸೌಂ ।
ದರಿಯರ ಮಿತ್ತುವಂಬರ ಪುಳಿಂದಿಯ ಮೂಗಿನ ಮುತ್ತು ನೋಡಲ
ಚ್ಚರಿಯೆನಿಸಿತ್ತು ಮೂಡದೆಸೆಯಿಂದೆಸೆಯಿತ್ತು ಹಿಮಾಂಶು ಮಂಡಲಂ ॥ ೨೨೩

(ಗಿರಿಜಾಕಲ್ಯಾಣಂ, ೪–೯೬.)

ಮದನನ ನಚ್ಚು ವಾರಿಧಿಯ ಪೆಚ್ಚು ವಿಯೋಗಿಯ ಕಿಚ್ಚು ಕೈರವಾ
ಭ್ಯುದಯದರಲ್ಲು ನೀರಜದ ಮುಚ್ಚು ರಥಾಂಗದಗಲ್ಲು ಜಾರೆಯ ।
ರ್ಗೊದವಿದ ಬೆಚ್ಚು ಕಟ್ಟಲೆ ಕಟಲ್ಲು ಜಗತ್ತಿನ ಪುಣ್ಯದಚ್ಚು ಬಂ
ದುದಯಗಿರೀಂದ್ರಮಸ್ತಕದೊಳಿರ್ದುದು ಪೂರ್ಣಶಶಾಂಕಮಂಡಲಂ ॥ ೨೨೪

ನೆರೆದೆತ್ತಂ ಭಗಣಂ ನಿರೀಕ್ಷಿಸೆ ಬೆಸಂಬೆತ್ತೇ[1]ಱು[1] ಚಿತ್ತೊದ್ಭವಂ
ಬರೆ ಲಕ್ಷ್ಮಚ್ಛಲದಿಂದಮಬ್ದಪಥವೀಧೀಭಾಗದೊಳ್ ಬೇಗಮೊ ।
ತ್ತರಿನುತ್ತುಂ ಪರಿಕಾಱಿನಂ ತಿಮಿರ[2]ನಂ[2] ಬೆನ್ನಟ್ಟಿ ಪಾದಂಗಳಿಂ
ದೊರಸಿತ್ತೇನತಿ[3]ರೌದ್ರ[3]ಮೋ ವಿಧುಮದೋನ್ಮತ್ತೇಭವಿಕ್ರೀಡಿತಂ ॥ ೨೨೫

(ಚಂದ್ರಪ್ರಭಪುರಾಣಂ, ೮–೩೩.)

ರಜನೀಕಾಂತಾಪಯೋಭೃತ್ತಟಮಲಯಜಪತ್ರಂ ಮನೋಜಾಂಗನಾಶು
ಕ್ತಿಜಚಂಚತ್ಕರ್ಣಪತ್ರಂ ಸ್ಮರನೃಪವರಶುಭ್ರಾತಪತ್ರಂ ವಿ[4]ಯನ್ನೀ[4] ।
ರಜನೀಮಥ್ಯೋಲ್ಲಸತ್ಫಾಂಡುರತರಶತಪತ್ರಂ ಬೆಡಂಗಾಯ್ತು ಯುಕ್ತ
ವ್ರಜಗರ್ವೋರ್ವೀಧ್ರಶಂಬಂ ನಯನಸುಖಲತಾಸ್ತಂಭಮಾತ್ರೇಯಬಿಂಬಂ ॥

(ಚಂದ್ರಪ್ರಭಪುರಾಣಂ, ೮–೩೪.)

ದಿವಿಜಾಶಾಗಿರಿಕೂಟಕೇಸರಿ ವಿಯನ್ಮಂದಾಕಿನೀಹಂಸೆ ಮಾ ।
ನವತೀಲೋಚನಬಾಣಚಂದ್ರಿಕೆ ಚಕೋರೀಪಾನಲೀಲಾಮೃತಾ ।
ಪ್ಲವಕಾಸಾರಮನಂಗಮಂಗಲವಧೂಟೀದರ್ಪಣಂ ತಾನಿದೆಂ
ಬ ವಿಲಾಸಕ್ಕೆ ನಿವಾಸಮಾಯ್ತುದಯದೊಳ್ ಪೀಯೂಷರುಙ್ಮಂಡಲಂ ॥ ೨೨೬

(ಅನಂತನಾಥಪುರಾಣಂ, ೭–೮೨.)

---

[1] ಱು (ಅ). [2] ಮಂ (ಅ). [3] ಚೋದ್ಯ (ಅ). [4] ಯೋಗೀ (ಖ.ಬ).

ಕಾಡೆ ಮನೋಭವಂ ವಿರಹಿಯಂ ಸಕಲೋರ್ವಿ ಸುಧಾಂಶುವಿಂದೆ ತೇಂ
ಕಾಡೆ ಚಕೋರಮುಂ ಯುವತಿಲೋಚನ ಕೈರವಮುಂ ಪ್ರಮೋದಮಂ ।
ಮಾಡೆ ಶಶಾಂಕಕಾಂತಮಣಿಭಿತ್ತಿಗಳಂತೆ ದಿಶಾರಭಿತ್ತಿಗಳ್
ಕೂಡೆ ವಿಚಾರಿಸುತ್ತೆ ನೆಱೆ ಕಣ್ಗೆಸೆದಿತ್ತಮೃತಾಂಶುಮಂಡಲಂ ॥ ೨೨೪

(ಪಾರ್ಶ್ವನಾಥಪುರಾಣಂ, ೧೦–೩೧.)

ಕುಮುದವಿಲಾಸಹಾಸಪರಿಹಾಸಕನಬ್ಧಿಜಲಪ್ರವರ್ಧನೋ
ದ್ಯಮಿ ನಳಿನೀಪ್ರಮೋದಪರಿಹಾರವಿಶಾರದನುತ್ಕಕೋಕದು ।
ರ್ದಮವಿರಹಕ್ರಿಯಾವ್ಯಸನಿ ಚಾರುಚಕೋರವಿದೂರಪಾರಣ
ಕ್ಷಮನವವಲ್ಲಭಂ ಬೆಳಗಿದಂ ಪುರಮೊಂದೆನೆ ಲೋಕಮೆಲ್ಲಮಂ ॥ ೨೨೯

(ಚಂದ್ರಪ್ರಭಪುರಾಣಂ, ೮–೩೫.)

ಜಗದಾಲೋಕನದರ್ಪಣಂ ಪ್ರಥಮದಿಕ್ಕಾಂತಾನನಂ ಕಂತುರಾ ।
ಜಗಜೋದ್ದೀಪನಪಿಂಡಮಂಬರಸರಸ್ಯುತ್ತಂಸ[1]ಹಂಸಂ[1] ವಿಯೋ ।
ಗಿಗಣಾಕೂತಕುರಂಗಪ್ರೋತಭಯಭೃತ್ಕಂಠೀರವಂ ಚೆಲ್ವುವೆ
ತ್ತೊಗೆದತ್ತರ್ಣವವೀಚಿನರ್ತನನಟಂ ಬಿಂಬಂ ಸುಧಾಸೂತಿಯಾ ॥ ೨೩೦

(ಅಜಿತನಾಥಪುರಾಣಂ, ೬–೪೨.)

ಮನಸಿಜನಿಟ್ಟ ಚಂದನದ ಬೊಟ್ಟು ರತೀಶನ ಜೀವದಂಚೆ ಕಾ
ಮನ ಧವಳಾತಪತ್ರವಸಮಾಸ್ತ್ರನ ಭಾಸುರಚಕ್ರವಿಕ್ಷುಚಾ ।
ಪನ ಶಶಿಕಾಂತದರ್ಪಣವನಂಗನ ಮುತ್ತಿನ ಚೆಂಡು ಪುಷ್ಪಧ
ನ್ವನ ಕೃತಪುಣ್ಯಪುಂಜಮೆನೆ ಕಣ್ಗೆಸೆದಿರ್ದುದು ಚಂದ್ರಮಂಡಲಂ ॥ ೨೩೧

ಕರಿಯಂದಂ ಕಾಮನಂದಂ ಕಮಲಭವನೆಯಂದಂ ಖರಕ್ರೂರನಂದಂ
ಗಿರಿಯಂದಂ ಗೋತ್ರನಂದಂ ಗಿರಿಸುತೆವರನಂದಂ ಸರಿದ್ರಾಜನಂದಂ ।
ಶರದಂದಂ ಶಕ್ರನಂದಂ ಶಬರಿನಿಕರದಂದಂ ಮರುಚ್ಚಾಪದಂದಂ
ಸುರರಂದಂ ಪುಷ್ಪದಂತಂಬರವಳಯದೊಳೊಪ್ಪಿರ್ದುದಾ ಚಂದ್ರಬಿಂಬಂ ? ॥ ೨೩೨

[2]ಸಮದಂ ಸದ್ಗ್ರಹ[2] ಷಡ್ಜಷಟ್ಚರಣ ಮಂದ್ರನ್ಯಾಸಮುತ್ಕೀರಮ
ಧ್ಯಮತಾರಂ ಮೃದುತಾಡಿತೌಡವನವೋದ್ಭಿನ್ನಪ್ರಸೂನಂ ಸಪಂ ।
ಚಮ[3]ಚಂ[3]ಚತ್ಕಳಕಂಠಕಂಪಿತರುತಂ ತಾನೆಂಬ ಹಿಂದೋಳ ರಾ
ಗಮೆ ತಾನಾದ ವಸಂತಮೇನೆಸೆದುದೋ ಸಂಪೂರ್ಣ [4]ಸೋಮೋ[4]ದಯಂ ॥೨೩೩

(ಲೀಲಾವತಿ, ೨–೩೨.)

---

[1] ಹಸ್ಯಂ (ಬ). [2] ಸಮುದಂಚದ್ಗ್ರಹ, (ಅ). [3] ಸಂ (ಖ.ಬ). [4] ಚಂದ್ರೋ (ಖ.ಬ).

ಇನನಸ್ತಂಗತನಾಗೆ ಪಾಣ್ಬರಿಪು ಪುಷ್ಪಾಕಾರದಿಂ ರಾಗದಿಂ
ವನಜಾತಂಗಳ ಮೇಲೆ ಕಯ್ಯನಿಡೆ ಶೀತಂ ಪೋಗ್ಮೆ ಸಂಕೋಚಿತಾ ।
ನನಮಾಗಿರ್ದೊಡೆ ನೆಯ್ದಿಲೆಯ್ದೆ ನಗುತಂ ಕೇಳ್ ಭಾವ ನೀನೇಕೆ ಪ
ದ್ಮಿನಿಯೇಕೆಂದೊಡೆ ಬೆಳ್ಳನಾ[1][ಯ್ತು][1] ಮೊಗಮೆಂಬಂತಿರ್ದನಾ ಚಂದ್ರಮಂ ॥೨೩೪

ಕರುಣಂ ಚಕ್ರಕ್ಕೆ ಹಾಸ್ಯಂ ಕುವಲಯಕೆ ಭಯಂ ಜಾರೆಯರ್ಗದ್ಭುತಂ ಸಾ
ಗರಕಂ ಬೀಭತ್ಸು ನಕ್ತಂಚರವರತರುಣೀರಕ್ತಪಾನಕ್ಕೆ ವೀರಂ ।
ಸ್ಮರಭೂಪಾಲಂಗೆ ರೌದ್ರಂ ವಿರಹತತಿಗೆ ಶಾಂತಂ ಚಕೋರಕ್ಕೆ ಶೃಂಗಾ
ರರಸಂ ಕಾಂತಾಜನಕ್ಕಾಗಿರೆ ನವರಸಮಂ ಬೀಱುತಿರ್ದಂ ಶಶಾಂಕಂ ॥ ೨೩೫

ದೆಸೆಯಂ ಬಾಸಣಿಸುತ್ತೆ ಬೆಳ್ಗದಿರಿನಿಂ ಪಣ್ಯಾಂಗನಾವೀಥಿಯೊಳ್
ಕುಸುಮಾಸ್ತ್ರಾಸನಮಂ ಕೆದರ್ದು ಮದನಂ ²ವಿ²[ೀ]ಯೋಗಿಬೃಂದಂಗ³ಳೇಂ³ ।
ದೆಸೆಗೆಟ್ಟೋಡುವ ಮಾಪ್ಕೆಯಿಂದೆಸೆಯುತುಂ ತಾರಾಳಿದೀಪಂಗಳಿಂ
ಹಸನಾಯಿತ್ತು ಪುರಂ ಗೃಹಾಂಗನೆಯರಿಂ ಚಂದ್ರೋದಯಾನಂದದೊಳ್ ? ॥ ೨೩೬

ಪರೆದಿರೆ ತಿಮಿರಕಚಂ ನೆರೆ
ದಿರೆ ಭಗಣಸ್ವೇದಜಲಕಣಶ್ಲಾಘಂ ರಾಗಂ ।
ಬೊರೆದಿರೆ ಚಕೋರನಯನಂ
ಕರಮೆಸೆದಳ್ ನೆರೆದು ರಜನಿ ರಜನೀಪತಿಯೊಳ್ ॥ ೨೩೭

(ಚಂದ್ರಪ್ರಭಪುರಾಣಂ, ೮–೩೨.)

ತಾರಕಿಗಳರಸನಮೃತದ
ಸಾರೋದಯನಲರ ನೀಱಿನಿರುಳಿನ ನಲ್ಲಂ ।
ಜಾರೆಯರ ಮಿತ್ತು ಚೋರರ
ನಾರ್ಯೆವ ತಳಾಱಿಚಂದ್ರನುದಯಂಗೆಯ್ದಂ ॥ ೨೩೮

ಇರುಳ ಸಿರಿ ಸಿರಿಯ ಮೆಯ್ಯಿರಿ
ವಿರಹಿಗಳುರಿ ಕಮಲದರಿ ಮನೋಜನ ಕರಿ ಪಾ ।
ಣ್ಬರ ದಳ್ಳುರಿ ತಣ್ಗದಿರ್ಗಳ
ಹರವರಿ ತಾರಾಧಿನಾಥನುದಯಂಗೆಯ್ದಂ ॥ ೨೩೯

ನೆಯ್ದಿಲ್ ವಿಕಾಸಲಕ್ಷ್ಮಿಯ
ನೆಯ್ದಲ್ ತಳಿರ್ಗೆಂಪನಾಂತು ಮೂಡಣ ದೆಸೆ ಚೆ ।

---

[1] ಯ್ದು (ಖ.ಬ). [2] ವಿ (ಖ.ಬ). [3] ಳಂ (ಬ).

ನ್ನೆಯ್ದಲ್ ವಿರಹಿಯನಂಗಜ
ನೆಯ್ದಲ್ ನೆಯ್ದಿಲಸಹಾಯನುದಯಂಗೆಯ್ದಂ ॥ ೨೪೦

ಶೃಂಗಾರದುರುಳಿ ಜನಧೃತಿ
ರಂಗಂ ಪಂಕಜದ ಪೈರಿ ನೆಯ್ದಿಲ್ಗೆಳೆಯಂ ।
ಗಂಗಾಧರನ ಜಟಾಗ್ರದ
ಭೃಂಗಂ ಸಂಪೂರ್ಣಚಂದ್ರನುದಯಂಗೆಯ್ದಂ ॥ ೨೪೧

ಕಡಲಂ ಸುರಾಸುರರ' ಕಡೆ
ವೆಡೆಯೊಳ್[1]ಪಾಲ್ದೆ[1]ರೆಗಳೊಳಗೆ ಪುಟ್ಟಿದ ಚೆಲ್ವಿಂ ।
ಗೆಡೆಗೊಂಡು ನಿಱುಮುಗಿಲ್ಗಳ
ನಡುವೆ ಕರಂ ಮಿಱುಗಿದತ್ತು ಹಿಮಕರಬಿಂಬಂ ॥ ೨೪೨
(ಜಗನ್ನಾಥವಿಜಯಂ, ೪–೭೩.)

ಚಂದ್ರಿಕೆ ಸುರವರಕರಿಯೆನೆ
ಚಂದ್ರಂ ತತ್ಕರಿಯ ಕುಂಭಮೆನೆ ತಾರಗೆಗಳ' ।
[2]ಸಾಂ[2]ದ್ರನಯನನಂಗಳೆನೆ ವಿಯ
ದಿಂದ್ರನದೇಂ ಭುವನಜನ[3]ದ ಕಣ್ಗೊಪ್ಪಿ[3]ದನೋ ॥ ೨೪೩
(ಲೀಲಾವತಿ, ೨–೧೮.)

ಉದಯಂಗೆಯ್ದೊಡೆ ಕಂಡು ಕಾಮನಿದಿರೆದ್ದಾಲಿಂಗನಂ ಮಾಡಿದಂ
ದದೆ ಚ್ಛೈತ್ರಂ ತನಗಿತ್ತ ನೀಲಮಣಿಹಾರಂ ಪೇರುರಕ್ಕೇಱಿದಂ ।
ದದೆ ರಾತ್ರಿಪ್ರಿಯೆ ಸೂಡ್ಗೆವಂದು ಪದಪಿಂ ಪರ್ಯಂಕದೊಳ್ ನೆಮ್ಮಿದಂ
ದದೆ ಕಣ್ಗೇನಮೃತಾಂಜನಂ ಮೆಱೆದುದೋ ಲಕ್ಷ್ಮಂ ಮೃಗೀಲಕ್ಷ್ಮನೊಳ್॥ ೨೪೪
(ಅನಂತನಾಥಪುರಾಣಂ, ೭–೮೪.)

ಮೃಗಲಕ್ಷ್ಮಂ ಸಂಜೆಗೆಂಪಂ[4]ಪೊದೆ[4]ದುದಯಿಸಿ ಸರ್ವೋರ್ವಿಗಾನಂದಮಂ ವಾ
ರ್ಧಿಗೆ ಪೆರ್ಚಂ ಮಾಡಿ ಮುನ್ನಂ ಬಟಿಕೆ[5]ರ್ದೆ[5]ಗಱಿಯಂ ತೋಱಲುಂ [6]ಕಂಡರೆಲ್ಲಂ[6]।
ಬಗೆಗೊಂಡಾಲಂ ಮೊಲಂ ಪುತ್ತೆರಳೆಯೆನುತದಂ ಕೂರ್ತು ಕೈಗೆಯ್ಯೊಳನ್ನುಂ
ಪೊಗಬ್ದಪ್ಪರ್ ಭಾಪು ಲೋಕಕ್ಕುಪಕರಿಸುವನೊಳ್ ದೋಷಮುಂ ಸುತ್ಯಮಲ್ತೀ ॥
(ಲೀಲಾವತಿ, ೨–೧೦.)

---

[1] ತೆರೆತೆ (ಅ). [2] ರುಂ (ಅ). [3] ಕೆ ಕಣ್ಗೊಳಿಸಿ (ಅ). [4] ಪುದಿ (ಅ).
[5] ಳಿ (ಖ.ಬ). [6] ಡು ಲೋಕಂ (ಅ).

ತಿಳಿಗೊಳನಲ್ಲಿ ತೋಱುವಸಿತೋತ್ಪಲಮಂ ಫಣಿರಾಜತಲ್ಪದೊಳ್
ತೊಳಗುವ ಕೃಷ್ಣಕಾಂತವಪುವಂ ರತಿದೇವಿಯ ಕೇಳಿಗಿಟ್ಟ ನು ।
ಣ್ಬಳುಕಿನ ಬಟ್ಟವಂಜರದ ಕೋಗಿಲೆಯಂ ಗೆಲೆವಂದುದಿಂದುಮಂ
ಡಳದ ಕಳಂಕ[1]ಲೇಖನಮದಿಂದ್ರ[1]ವಧೂಮುಖಪ[2]ಕ್ಷ್ಮ[2]ವಿಭ್ರಮಂ ॥ ೨೪೭

(ಲೀಲಾವತಿ, ೨–೧೧.)

ಇದು ಹರಿಣಂ ದಿಟಂ ಹರಿಣನಲ್ತು ಮೊಲಂ ಮೊಲನಲ್ತದಾಲಮಾ
ಲದ ಮರನಲ್ತು ಪುತ್ತುಗಳೆ ಪುತ್ತುಮಿದಲ್ತೆನುತಿರ್ಪ ಮೂಢರೋ ।
ಕಡ ಪಡೆಮಾತದಿರ್ಕೆ ನೆವಮಿಟ್ಟು ಕೊಲಲ್ ಮದನಂ ವಿಯೋಗಿಗೊ
ಡ್ಡಿದ ಘಟನರ್ಪನೆಂದು ಬಗೆಯಿಂ ಹಿಮದೀಧಿತಿಹೃತ್ಕಳಂಕಮಂ ॥ ೨೪೮

ಮುನಿದೀಶಂ ನಲೆ ಸುಟ್ಟು ಮುಂ ಕರುಣದಿಂದಿತ್ತಂ ಪುನರ್ಜನ್ಮಮಂ ।
ನಿನಗೆಂದಾ [3]ರತಿ[3] ಪಾಪಮುಂ ಪಡಣಮುಂ ಪೋಕೆಂದು ಕಾಮಂಗೆ ಮ
ಜ್ಜನಕೆಂದೆತ್ತಿದ ಚಂದ್ರಕಾಂತಘಟ[1]ದಿ[4]ಂ ತಂದ[5]ಬ್ಕಱುಂ[5] ಪುಷ್ಪವಾ
ಸನೆಗೆಂದಿಕ್ಕಿದ ನೀಲ ನೀರರುಹಮಂ ಪೋಲ್ದತ್ತು ಕರ್ಪಿಂದುವಾ ॥ ೨೪೯

(ಪಂಪಭಾರತಂ, ೪–೫೧.)

ತಿಂಗಳ ಬಿತ್ತಿನಿಸುವ ಬೆ
ಳ್ದಿಂಗಳ್ ಪಾಲ್ಗಡಲನಿಟಿಪೆ ಮಂಗಳಶೇಷೋ ।
ತ್ತುಂಗಶಯನೀಯದಾ ಕೃ
ಷ್ಣಾಂಗಕರದ್ಯುತಿವೊಲೆಸೆದುದಿಂದುಕಳಂಕಂ ॥ ೨೪೯

ಕಾಮನ ದೀಹದ ಹರಿಣಂ
ಕಾಮೋರಗನಿರ್ಪ ಪುತ್ತು ಮೊಲಗಬ್ಬುಲೆಯಂ ।
ಕಾಮಿಗೆ ಪುಟ್ಟಿಸುವ ಮೊಲಂ
ಕಾಮಗ್ರಹದಾಲಮೆನಿಸಿತಿಂದುಕಳಂಕಂ ॥ ೨೫೦

(ಮಲ್ಲಿನಾಥಪುರಾಣಂ, ೭–೩೬.)

ಹುತ್ತಿನೊಳಿರ್ದ ನಾಗರ ಫಣಾಮಣಿರಶ್ಮಿಯೊ ರಾಹುದಂತಮೇಂ
ಪತ್ತಿತೊ ಕೊಂಬಿನಿಂ ಹರಿಣನೊತ್ತಿತೊ ಸಾನುಪುಳಿಂದನಿಂದಲೇಱ್ ।
ಪತ್ತಿತೊ ಮೇಣ್ ಶಶಂ ವಟುಮಹೀಜಮೆ ಪಣ್ತುದೊ ಪೇಚೆನಲ್ಕೆ ಮೆ
ಯ್ವೆತ್ತ ಕಳಂಕನೀಲರುಚಿಯಿಂದೆಸೆದಿರ್ದುದು ಚಂದ್ರಮಂಡಲಂ ॥ ೨೫೧

[1] ರೇಖೆಯುಮರೇಂದ್ರ (ಆ). [2] ತ್ರ (ಆ). [3] ದತಿ (ಆ). [4] ದೊಳ್ (ಆ).
[5] ಟ್ಟಿಯೊಳ್ (ಆ).

ಮುಂದೆ ತಮುಂಧವಿಟ್ಟಣಿಸಿ ರಾಹುವಿನಂತಿರೆ ಪೂರ್ವವೈರಮಂ
ಮುಂದುಗೊಳುತ್ತಮೆನ್ನನಿದು ಮಾಡುವ ಮಾಟ್ಕೆಯನಿಂದು ನೋಟ್ಪನಾ ।
ನೆಂದು ತದೀಯ ರೂಪನುಱಿ ನುಂಗೆ ತನುಚ್ಛವಿಯಿಂದೆ ತೋಱುತೆಂ
ಬಂದದೊಳೊಪ್ಪುತಿರ್ದುದು ನಿಶಾಕರಮಂಡಲದಲ್ಲಿ ಲಾಂಛನಂ ॥ ೨೫೨

ಪಸಿದ ಚಕೋರಿಗಳ್ ದ್ವಿಜಶರೀರಗಳೆಂದೆಱೆಯಲ್ಕೆ ಸಂಜೆ ಛಾ
ವಿಸೆ ಪೊಸ ಜೊನ್ನಮಂ ಶಶಿಯ ಕಪ್ಪಿನಿತಿಲ್ಲದ ಮಾಟ್ಕೆಯಿಂದೆ ಶೋ ।
ಧಿಸಲದು ಶುದ್ಧವಾಗೆ ಬಟಿಯಂ ಸದಕಿಕ್ಕಿದ ಧಾರೆವಟ್ಟಲಂ
ನಸಿಗಿರಿಸಿಟ್ಟವೋಲ್ ಮೃದುಕಳಂಕದಿನೊಪ್ಪಿದುದಿಂದುಮಂಡಲಂ ॥ ೨೫೩

ಮದನನ ರತ್ನದರ್ಪಣದ ಮಾರ್ಪೊಳೆಪಂಗಜಕಾಮಿನೀಕಪೋ
ಲದ ಮೃಗನಾಭಿಲೇಖೆ ತೊಡೆಯೇಱಿದ ಯಾಮಿನಿಯಂಗಕಾಂತಿಯ ।
ಪ್ಪಿದೊಡೆ ಸಡಿಲ್ದ ರೋಹಿಣಿಯ ಸೋರ್ಮುಡಿ ಮೈ ಮುರಿವೇಟ್ಪ ಪೂರ್ವದಿ
ಕ್ಕುದತಿಯ ಪೀವರಸ್ತನದ ಚೂಚುಕಮೊಪ್ಪಿದುದಿಂದುಲಾಂಛನಂ ॥ ೨೫೪

ಕರುಣಿಸದೆ ಬೇಟಕಾಱರ
ಶರಮಂ ಕೊಳ್ಳೆಂದು ಕಂತು ಮಧುವಿಂಗಟ್ಟಲ್ ।
ಪರೆದೆಲೆಗೊತ್ತಿರ್ದಂಡಿಗೆ
ಯರಗನೆ ಪೋಲ್ದತ್ತು ಶೀತಕರನ ಕಳಂಕಂ ॥ ೨೫೫

ಒತ್ತಂಬದೆ ವಿರಹಿಗಳಂ
ಚಿತ್ತಭವಂ ಬಂದಿವಿಡಿದು ಗಂಟಲ ಬಳೆಯಂ ।
ಪತ್ತಿಸಿದ ಚಂದ್ರಕಾಂತದ
ಕತ್ತರಿಯೆನೆ ತೊಳಗಿ ಬೆಳಗಿತೆಳವೆಱೆ ನಭದೊಳ್ ॥ ೨೫೬

ಸಿರಿ ಬಂದಾಶ್ಲೇಸಿದಳ್ ಮಾಧವನುದರದೊಳೊತ್ತಿಟ್ಟುಕೊಂಡಂ ದಿನೇಶಂ
ಪಿರಿದುಂ ಕೂರ್ಪಂ ಸುಧಾಸೂತಿಯೆ ಮುನಿವವನೆಮ್ಮನ್ನಯಕ್ಕೆಂದು ನೀರೇ ।
ಜರುಹಂ ಕಾಯ್ಪಿಂ ನಿಜಾಗ್ರಾಯುಧವನಿಡೆ ಸಿಡಿಲ್ದೊಂದುಭಾಗಂ ನಭೋಭ್ಯಂ
ತರದೊಳ್ ಸೂಸಿತ್ತೆನಲ್ಕೀನೆಸೆದುದೊ ಭಗಣಾನೀಕದಿಂದರ್ಧಚಂದ್ರಂ ॥ ೨೫೭

ಕಟಲೆ ಮನವಟಲೆ ಪಾಣ್ಬರ್
ಬಟಲೆ ಖಳರ್ ತೊಟಲೆ ದನುಜರುಡುಗಿ ಕರಂ ತ ।
ಲ್ಲಟಿಸೆ ವಿಯೋಗಿಗಳಂಬಂ
ಘಟಿಯಿನಲಂದೊಗೆದುವೊಂದಿ ಹಿಮಕರಕಿರಣಂ ॥ ೨೫೮

ಪಸಿದು ದಿನೇಶನೆಂಬ ಪಿಶಿತಾರುಣಖಂಡಮನೊರ್ಮೆ ನುಂಗಿ ರಾ
ಗಿಸಿ ಕಿಸುನಂಜೆಯೆಂಬ ನವಲೋಹಿತದೊಳ್ ಪೊರೆದೊಂದು ಬಾಯಗು ।
ರ್ಚಿಸಿ ತಮಮೆಂಬ ತನ್ನ ಮುನುಕಂ ಕಳೆದಿರ್ದಿರುಳೆಂಬ ಕಾಳರ
ಕ್ಕಸಿ ನಗಲೆಂದು ಪಲ್ದೆಱೆದ ಮಾಣ್ಕೆವೊಲಿರ್ದುವು ಚಂದ್ರರಶ್ಮಿಗಳ್ ॥ ೨೫೯

ತಾರೇಶ ತಾರ್ಕ್ಷ್ಯನಂಶುವಿ
ನಾರಿತಪಕ್ಷಂ ಬರಲ್ ನಭಶ್ಚಂದನಧಾ ।
ತ್ರೀರುಹಮಂ ಸುತ್ತಿದ ಕಾ
ಳೋರಗನೋಡುವವೊಲೋಡಿ ಪೋದುದು ತಿಮಿರಂ ॥ ೨೬೦

(ಜಗನ್ನಾಥವಿಜಯಂ, ೧೬–೧೦೬.)

ಘನಸಂಧ್ಯಾರುಚಿರಜ್ಜುವಿಂದುದಯಶೈಲಸ್ತಂಭದೊಳ್ ಕಟ್ಟಿ ತೊ
ಟ್ಟನೆ ಕೈಕೊಳ್ವ ಕಳಂಕವತ್ಸನನಲಂಪಿಂದೂಡಿ ತಾರಾನಿಬಂ ।
ಧನದಿಂದಂ ತಳೆಯಿಕ್ಕಿ ರಾತ್ರಿ ಕಱೆದಳ್ ಬ್ರಹ್ಮಾಂಡಭಾಂಡಂ ಪಳ
ಚ್ಚನೆ ತೀವುತ್ತಿರೆ ಚಂದ್ರಮಸ್ಸುರಭಿಯಿಂ ಜ್ಯೋತ್ಸ್ನಾಪಯಃಪೂರಮಂ ॥ ೨೬೧

ಹಿಮರೋಚಿರ್ಮಂಡಲಂ ಕುಂಡಲಿತ ಕುಸುಮಕೋದಂಡಮಂ ಪೋಲೆ ಶೃಂಗಾ
ರಮಯಂ ಭೂಲೋಕಮಪ್ಪಂತಿರೆ ವಿರಹಿಗೆ ಶಶ್ವದ್ಧನುರ್ವೇದವಿದ್ಯಾ ।
ಶ್ರಮಮಂ ತೋಱಲ್ ಕಳಂಕಸ್ಮರನಿನೆ ತುಱುಗಲ್ಕೊಂಡು ಪಾಯ್ವಂತೆವೋಲ್ ಕೌ
ಸುಮಬಾಣಾಸಾರದಂತೇಂ ಸುರಿದುದೊ ನವನೀಹಾರಕಾಂತಿಪ್ರವಾಹಂ ॥ ೨೬೨

(ಲೀಲಾವತಿ, ೨–೧೩.)

ಎಲೆ ಶೃಂಗಾರಾರ್ಣವಂ ನಗ್ಗದಿನಿಟಿದುದತಿಶ್ವೇತಮೆಂಬನ್ನೆಗಂ ಕ
ಟ್ಟಲೆಯಂ ಬೆಂಕೊಳ್ವಪ್ಪೋಲೆಱ್ದೆಸೆಯನನಿತುಮಂ ಬೇಱೆವೇಱೆಲ್ಲ ತಾರಾ ।
ವಲಿಯಂ ತಚ್ಕೈನುವಂತಾಗಸಮನನಿತುಮಂ ಪರ್ವಿದತ್ತೊರ್ವೊದಲ್ ನೆ
ಯ್ದಿಲನೆಲ್ಲಂ ಚುಂಬಿಪಂತುರ್ವರೆಯನನಿತುಮಂ ಚಂದ್ರಪಾದಪ್ರವಾಹಂ ॥ ೨೬೩

(ಲೀಲಾವತಿ ೨–೧೪.)

ಬಳವೈರಿಯೆಂಬ ನಾಧಕ
ನಿಳೆಯಂ ಪೊನಮೂಷೆಮಾಡಿ ನಸಿಮಂಡಲಮಂ ।
ಗುಳಿಗೆಯಿಡೆ ತಿಮಿರಕಾಳಿಕೆ
ತಿಳಿದಂತೆ ಜಲಕ್ಕನಾಯ್ತು ಪೊನವೆಳ್ದಿಂಗಳ್ ॥ ೨೬೪

(ಅನಂತನಾಥಪುರಾಣಂ, ೭–೮೫.)

ಅವನೀವಲ್ಲಭೆ ಕೊಂಡ ಬೆಳ್ವಸದನಂ ನೀರೇಜಗರ್ಭಂ ವಿಯ
ದ್ಧವಳಾಗಾರದೊಳಿಟ್ಟ ಪಾಲ್‌ಸೊದೆ ಕರಂ ಮಿಂಚಲ್ ದಿಗಂತಂ ಮುಟುಂ ।
ಗುವಿನಂ ನೂಸಿದ ಶಂಖಮೋಳ್ದಿಟದರಂ ಪಾರ್ದಾರ್ದೆಸಲ್ ನಾರ್ದ ಕಂ
ತುವಸಂ[1]ತರ್ ತೆರೆವೇಂಟೆಗಿಟ್ಟ[1] ದುಗುಲಂ ಪರ್ವಿತ್ತು ಚಂದ್ರಾತಪಂ ॥ ೨೬೫

(ಅನಂತನಾಥಪುರಾಣಂ, ೭–೮೬.)

ಇನನಸ್ತಾದ್ರಿಯನೆಯ್ದಲಾರುಣತೆಯಂ ಕೈಕೊಂಡು ಪೂರ್ವಾದ್ರಿಯೊಳ್
ಘನರಾಗಂ ಬೆರಸೆಯ್ದಿ ಪದ್ಮಿನಿಗೆ ಕಯ್ಯಂ ನೀಡೆ ತಚ್ಛೈತ್ಯದಿಂ ।
ದಿನಿಯಂ ತಾನಿವನಲ್ಲವೆಂದು ಮುಗಿಯಲ್ ಮೂಡಿರ್ದ ಕಾಮೋದಿ ಕಂ
ಡೆನಸುಂ ನಕ್ಕೊಡೆ ನಾಣ್ಚಿದಂತೆ ನಭದೊಳ್ ಬೆಳ್ಪೀಱಿದಂ ಚಂದ್ರಮಂ ॥ ೨೬೬

ತವಕದಿನಪ್ಪಲುತ್ಪಲಿನಿಯುಂ ಕರಮಾದುವು ಕೊ[ಲ್ವ]ಳ್ಳ [2]ಭೀಷು[2]ವಾ.
ದುವು ಪೊಣರ್ವಕ್ಕಿಗಿಕ್ಕಿ ವನಜಾವಳಿಯಂ ತುಟಿಯಲ್ಕೆ ಪಾದಮಾ
ದುವು ಸಲೆ ಕೇತುವಾದುವು ಪಿಯೋಗಿಗೆ ಲೋಕದ ಕಣ್ಗೆ ಧಾಮಮಾ
ದುವು [3]ಸುಧೆ[3]ಯಾದುವೀಂಟುವ ಚಕೋರಿಗೆ ಚಂದ್ರನ ಚಾರುಕಾಂತಿಗಳ್ ॥೨೬೭

(ಲೀರಾವತಿ, ೨–೧೬.)

ವನಜಂ ಬಂದುದು ಮುನ್ನವೆನ್ನ ಬಸಿಱಿಂದಂ ಕೋಚಿಕೂಸಿಂಗೆ ಗೋ
ಮಿನಿಗೆಂದುಂ ನೆಲೆಯಾಗಿ ನಿಂದುದಳಯಂ ನೀರೇಜನಾಭಂಗೆ ಲೋ ।
ಚನಮಾಗಿರ್ದುದದರ್ಕೆ ಮುಳಿಯಲ್ವೇಡೆಂದು ದುಗ್ಧಾಬ್ಧಿ ನಂ
ದನನಂ ಪ್ರಾರ್ಥಿಸಲೆಂದು ಬಂದ ತೆಱದಿಂ ಪರ್ವಿತ್ತು ಚಂದ್ರಾತಪಂ ॥೨೬೮

ಇಂದು ಜಲನಿಧಿಯ ಬಸಿಱೊಳ್
ಬಂದುದು ಪುಸಿ ಪೂರ್ಣಚಂದ್ರಮನ ಬಸಿಱೊಳ್ ತಾಂ ।
ಬಂದುದು ಬೆಳೆದಿಂಗಡಲೆಂ
ಬಂದದಿನೇಂ ಪಸರಿಸಿತ್ತೊ ಪೊಸವೆಳ್ದಿಂಗಳ್ ॥ ೨೬೯

(ಲೀಲಾವತಿ, ೨–೨೪.)

ಪುಗಿಸಿದುವಟ್ಟಿ ಪರ್ವತಗೃಹಾಂತರಮಂ ಕೆಲವಂ ಗವಾಕ್ಷದಿಂ
ದುಗಿದುವು ದೇವಸದ್ಮದೊಳಡಂಗಿದುವಂ ಬಯಲಿಂಗೆ ಬಿಟ್ಟುವಂ ।
ತಗುಳ್ದಱಿಯಟ್ಟಿ ನುಂಗಿದುವು ಪೆರ್ಮರದೊಳ್ ಸೆಱಿಗೆಯ್ದು ಪರ್ಣಸಂ
ಗಳೆಡೆಯಿಂದಲಿಚ್ಛೊಟಿಸಿ ಕೊಂದವು ಕಟ್ಟಲೆಯಂ ಹಿಮಾಂಶುಗಳ್ ॥ ೨೭೦

(ಮಲ್ಲಿನಾಥಪುರಾಣಂ,೭–೩೯.)

---

[1] ತಂ ತೆರೆಮೆಟ್ಟಿನುಟ್ಟ (ಖ). [2] ಭೀಕ್ಷು (ಅ). [3] ರುಚಿ (ಖ.ಬ).

ದಾಂಗುಡಿಯಿಟ್ಟುದಿಂಗಡಲ ಬೆಳ್ಪು ಕರಂ ಮೊಳೆವೋದುದಿಂದುಕಾಂ
ತಂಗಳ ಬೆಳ್ಪು ಪೋದಿದುದು ನೆಯ್ದಿಲ ಬೆಳ್ಪು ಮಡಲ್ತುದಚ್ಚವೆ ।
ಳ್ದಿಂಗಳ ಬೆಳ್ಪು ಬಳ್ಕವರಿದತ್ತೆಳವೆಂಡಿರ ಕಣ್ಣ ಬೆಳ್ಪು ಸೌ
ಧಂಗಳ ಬೆಳ್ಪು ಪರ್ಬಿದುದು ಬೆಳ್ಪಿನ ಬಲ್ಸರಿ[1][ಯಿಂ][1] ಸುಧಾಂಶುವಾ ॥ ೨೭೧

ಇಂಗಡಲೆ ಕಡಲ್ಗಳ್ ಸೌ
ಧಂಗಳೆ ಸದನಂಗಳಿಂದುಕಾಂತವೆ ಕಲ್ಗಳ್ ।
ಗಂಗೆಯೆ ತೊಱೆಗಳೆನಲ್ ಬೆ
ಳ್ಳಂಗೆಡೆದುದು ಕುಮುದವನದ ಸಿರಿ ಬೆಳ್ದಿಂಗಳ್ ॥ ೨೭೨
(ಮಲ್ಲಿನಾಥಪುರಾಣಂ, ೭-೪೨.)

ಲವಣಾಂಭೋನಿಧಿ ದುಗ್ಧವಾರ್ಧಿಚಯದಂತಿರ್ದತ್ತು ಕಾಳಿಂದಿ ಜಾ
ಹ್ನವಿಯಂತಿರ್ದುದು ನೀಲಪರ್ವತಮೆ ಕೈಲಾಸಾದ್ರಿಯಂತಿರ್ದುದೀ ।
ಭುವನಂ ಕಪ್ಪುರದಿಂದೆ ಕಂಡರಿಸಿದಂತಿರ್ದತ್ತು ಕೃಷ್ಣಂ ಸದಾ
ಶಿವನಂತಿರ್ದನೆನಲ್ಕದೇವೊಗಪ್ಪೆನೋ ಪೇೞಚ್ಚವೆಳ್ದಿಂಗಳಂ ॥ ೨೭೩

ನಳಿನೀಸಂಮೋಹನಾಸ್ತ್ರಂ ಕುಮುದನಯನಕರ್ಪೂರಕಾಂಡಂ ಚಕೋರೀ
ತಿಳಕಂ ಶೃಂಗಾರಸಿಂಧುಪ್ಲವಬಿಸಲತೆ ತಾರಾಪುರಂಧ್ರೀಕಪೋಲ ।
ಸ್ಥಳಪತ್ರಂ ಚಂದ್ರಕಾಂತೋಪಳ[2]ಪರಿಸಲಿಲಾಮೋದ[2]ಶಸ್ತ್ರಂ ಮನೋಜಾ
ನಳಜಿಹ್ವಾಕ್ಷೀರಧಾರಾಹುತಿ ಪಸರಿಸೆ ಪರ್ವಿತ್ತು ಚಂದ್ರಾಂಶುಜಾಲಂ ೨೭೪
(ಮಲ್ಲಿನಾಥಪುರಾಣಂ, ೭–೪೦.)

ಪಗಲಂತಿರ್ದಚ್ಚವೆಳ್ದಿಂಗಳೊಳಿನಕಿರಣಭ್ರಾಂತಿಗೆತ್ತಾಗಳಾಗಳ್
ಮುಗಿದಿರ್ದಂಭೋಜಮೋರೊಂದಲರ್ದುವು ಬಿಸುಸುಯ್ವುತ್ತಗಲ್ದರ್ದ ನೀರ್ವ ।
ಕ್ಕಿಗಳೆಲ್ಲಂ ಕೂಡಿ ತೋಡಾದುವು ಕುವಲಯಷಂಡಂಗಳಾತಂಕೆಯಿಂದಂ
ಮುಗಿಯಲ್ಕೆಂದಿರ್ದುವೇನುಜ್ವಲಿಸಿದುದೊ ಜಗಚ್ಚಕ್ರಮಂ ಚಂದ್ರಬಿಂಬಂ ॥ ೨೭೫
(ಆದಿಪುರಾಣಂ, ೧೨–೯.)

ಇದು ಮತ್ತೇನೆಂಬೆ ಬೆಳ್ದಿಂಗಳ ಬೆಳತಿಗೆಯಂ ಹಂಸೆ ಪಾಲ್ಗೆತ್ತು ಸಾರ್ದ
ಪ್ಪುದು ಮಲ್ಲೀಮಾಲೆಗೆತ್ತೆಯ್ದೆ ಅಗಿದಪುವು ಭೃಂಗಂ ಬಿಸಭ್ರಾಂತಿಯಿಂದಂ ।
ಕ[3][ದುಬು][3]ತ್ತುಂ ಕಯ್ಯೊಳಾರ್ಯೆದಪುವಿಭಕಳಭಂ ಸಾಂದ್ರಚಂದ್ರಾಂಶುವಂ ಜಾ
ಱೆ ದುಕೂಲಂ ಲೀಲೆಯಿಂದಂ ತೆಗೆದಪುದು ಕುಚಾಗ್ರಕ್ಕೆ ಕಾಂತಾಕದಂಬಂ ॥೨೭೬

---

[1] ಯಂ (ಖ.ಬ). [2] ಸಲಿಲಸಿರಾಮೋಕ್ಷ (ಅ). [3] ರ್ದುಕು (ಕ.ಖ.ಬ).

ತರತರದಿಂದ ನಾರುಗಿದು ತೋಳ್ವಳೆ ಮಾಡುವ ಕೊಯ್ದು ತಂದು ಪಾ
ದರಿಯೊಡಗಟ್ಟಿ ನೂಡುವಲರ್ಗಂಗಳೊಳೊತ್ತುವ ಕೀಸಿ ಮೆಲ್ವ ನೀ ।
ಳ್ದರೆ ಪೊರೆಯೆತ್ತಿಕೊಂಡರರೆ ಪೊಂಗೊಡದೊಳ್ ಮಡಗಿಟ್ಟು ಪೊಬ್ಬಳಿಂ
ಗಿರಿಸುವಲಂಪಿನಿಂ ಬಯಸಿದರ್ ಘನಚಂದ್ರಿಕೆಯಂ ಲತಾಂಗಿಯರ್ ॥ ೨೭೭

ಸುರತಾಂತಶ್ರಾಂತಿಯಿಂ ನೀರಡಿಸಿದಬಲೆಯಗರ್ಗಿಂಟುತೌತ್ಸುಕ್ಯದಿಂ ನ
ಲ್ಲರೊಳೊಂದಲ್ ಪೋಪ ನಾರೀಜನಕೆ ಪಱುಗಲಿಚ್ಚೀಱಲುದ್ಯಾನಮಾಲಾಂ।
ತರದೊಳ್ [1][ಪೊಚ್ಚಂಗ][1]ಳಂ ತಿರ್ದಿಸಲವಿರಳಘರ್ಮಾರ್ದ್ರಕಾಂತಾಜನಕ್ಕಾ
ದರದಿಂ ನೀರಾಟವಾಡಲ್ ನೆಱೆದುದೆನಿಸಿ ಪರ್ಪಿತ್ತು ಚಂದ್ರಾಂಶುಜಾಲಂ॥ ೨೭೮

[2]ಬೆಲಗಸೆ[2] ತೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರ್ದಿ ಬ
ಚ್ಚಲನೆಲೆದೋಟದೊಳ್ ಪರಿಯಿಸಲ್ ಪಱುಗೋಲ್ಗಳನಿಕ್ಕಿ ಪಾಯಿಸಲ್ ।
ನೆಲೆಯಿನಿತೆಂದು ನೋಡಲೊಳಪೊಕ್ಕು ದುಡುಮ್ಮಿಱಿದಾಡಲೀಸಲ
ಗ್ಗಲಿ[3]ಸುವಲಂಪಿನಿಂದೆಳಸಿದರ್ ಘನಚಂದ್ರಿಕೆಯಂ ಲತಾಂಗಿಯರ್[3] ॥ ೨೭೯

(ಅಜಿತನಾಥಪುರಾಣಂ, ೬-೪೫—ಕಾವ್ಯಾವಲೋಕನಂ, ೮ ೫೫.)

ಪಾರದದಿಂದೆ ಲೇಪಿಸಿದುದೋ ದೆಸೆ ನೀರದಮಾರ್ಗಮೆಯ್ದೆ ಕ
ರ್ಪೂರ ಪರಾಗದಿಂದಿಡಿಯೆ ತುಂಬಿದುದೋ ಸ್ಫಟಿಕೋಪಲಂಗಳಿಂ ।
ಧಾರಿಣಿ ಕೂಡೆ ಹಪ್ಪಳಿ[4]ಗೆಯೊ[4]ತ್ತಿದುದೋ ಸಲಿಲಾಶಯಂ ಪಯಃ
ಪೂರಮನಾಂತುದೋ ದಿಟಕೆ ತಾನೆನಿಸಿತ್ತಮೃತಾಂಶುರಶ್ಮಿಯಿಂ ॥ ೨೮೦

(ಚಂದ್ರಪ್ರಭಪುರಾಣಂ, ೮-೩೯.)

ಇದು ವಿರಹಕ್ಕಲ್ಲದೆ ಕಾ
ಯದ ಬಿಸಿಲಿದು ದಿಟ್ಟಿಗಲ್ಲದಿ[5]ನಿತೀಂಟಲ್[5] ಬಾ ।
ರದ ಸುಧೆಯಿದು ತಾಂ ಮನಕ
ಲ್ಲ್[6]ದುಡ[6]ಲ್ ಸಮನಿಸದ ದುಗುಲ[7]ಮೆಳ[7]ವೆಲ್ದಿಂಗಳ್ ॥ ೨೮೧

(ಚಂದ್ರಪ್ರಭಪುರಾಣಂ, ೮-೪೦.)

ದ್ಯುನದೀಸಂಮೋಹದಿಂದಂ ಜಡೆಗೆದಱಲುಮಾವಲ್ಲಭಂ ನಾಡೆಯುಂ ಪಾ
ರ್ವಿನೆಗಂ ಪೀಯೂಷವಾರ್ಧಿಪ್ಲವಪರಿಣತಿಯಿಂ ಸೆಜ್ಜೆಗಬ್ಜೋದರಂ ನಾ ।
ರ್ವಿನೆಗಂ ಹಂಸಂ ಮೆಲಲ್ಕೆಂದೆಳಸಿ ಬಿಸಲತಾಶಂಕೆಯಿಂ ಚಂಚು[8]ವಿಂ[8] ನೇ
ರ್ವಿನೆಗಂ ಪ್ರೋನ್ಮುದ್ರಿತಂ ಮುದ್ರಿಸಿದುದು ಜಗಮಂ ಚಾರುಚಂದ್ರಾಂಶುಜಾಲಂ॥

(ಚಂದ್ರಪ್ರಭಪುರಾಣಂ, ೮-೪೧.)

---

[1] ಪಚ್ಚಂಗ (ಕ.ಖ.ಬ). [2] ಬೆಳಸಿಗೆ (ಖ.ಬ). [3] ಸಿದಲಂಪಿನಿಂ ಬಗೆದುದಂದು ಜನಂ ಘನಚಂದ್ರಿಕಾಂಬುವಂ(ಅ). [4] ಕೆವ (ಖ.ಬ). [5] ದೀಂಟಲ್ಕಂ (ಅ). [6] ದೆದ (ಖ.ಬ). [7] ಮಾ (ಖ.ಬ). [8] ವಳ್ (ಖ.ಬ).

ಕೆಂಪಿಲ್ಲದ ಬಿಸಿಲುಣ್ಮುವ
ಕಂಪಿಲ್ಲದ ಸಾಂದ್ರಚಂದನಕ್ಷೋದಂ ಮ ।
ತ್ತಿಂಪಿಲ್ಲದ ಪಾಲ್ಗಡಲೆಂ
ಬೆಂ ಪೊಸವೆಳ್ದಿಂಗಳಂ ಬಟಿಕ್ಕೈನೆಂಬೆಂ॥ ೨೮೩

(ಚಂದ್ರಪ್ರಭಪುರಾಣಂ, ೮–೪೩.)

[1]ಎ[1]ಡೆನಾಣ್ಮುಚ್ಚದ ನಾಗವಟ್ಟಣಿಗೆ ಹೊಕ್ಕೀಸಾಡೆ ಮೈ ನಾನದಿಂ
ಗಡಲಾಸ್ಪಾದಿಸೆ ಹೊಟ್ಟೆ ತೀವದಮೃತಂ ಮೈಸಾರ್ಚಲುಷ್ಣತ್ವಮಂ ।
ಕುಡದರ್ಕಪ್ರಭೆ ನೋಡೆ ತೋಱು ಮಗುಟ್ಟಂತಲ್ಲಾಡದೊಳ್ಮಿಂಚೆನಲ್
ಕಡು ಚೆಲ್ವಾದುದು ಕಣ್ಗೆ ಸಾಂದ್ರರುಚಿಯಿಂ ಚಂದ್ರಾತಪಾಡಂಬರಂ ॥ ೨೮೪

ಉರುಳಿಸಿ ವೆಜ್ಜಮಂ ಕಳೆದು ಕೋದೊಡೆ ಮುತ್ತಿನ ಹಾರಮಪ್ಪ ಸೀ
ಳ್ದರೆ ಪೊರೆಯೆತ್ತಿ ಪಟ್ಟಣಿಗೆಯಪ್ಪುಗುರಿಂದೆ ಕಟಲ್ಟೆ ತೋರಗ ।
ಪ್ಪುರವಳುಕಪ್ಪ ಬಕ್ಕಬಯಲಂ ಕಡೆಯಲ್ ಧವಳಾರಮಪ್ಪ ಬಂ
ಧುರ ವರ ಸಾಂದ್ರಮಕ್ಕೆ ನೆಲೆಯಾದುದು ಚಂದ್ರಿಕೆಯೇಂ ವಿಚಿತ್ರಮೋ ॥ ೨೮೫

ಕರಗಿಸೆ ಬೆಳ್ಳಿಯಪ್ಪುದಿದು ತೆಳ್ಪೊರೆಯೆತ್ತೆ ದುಕೂಲಮಪ್ಪ ಕಂ
ಡರಿಸೆ ಮರಾಳಮಪ್ಪುರುಳಿಮಾಡಿ [2]ಸ[2]ರಂಗೊಳೆ ತಾರಹಾರಮ ।
ಪ್ಪರೆದೊಡೆ ಸೌಧಸಂತತಿಗೆ ಪಾಲ್ಪೊದೆಯ[3]ಪ್ಪುಗುರಿಂ ಕಟಲ್ಟೆ[3] ಕ
ಪ್ಪುರವಳುಕಪ್ಪಗುರ್ವನೊಳಕೊಂಡುದು ಚಂದ್ರಿಕೆ ಸಾಂದ್ರಭಾವದಿಂ ॥ ೨೮೬

(ಜಗನ್ನಾಥವಿಜಯಂ, ೧೬–೧೧೯.)

ಎಳಮಿಂಚಂ ಸಂತವಿಟ್ಟಂತೆನೆದುದು ಬೆಳಗಿಂ ಬಣ್ಣಮುತ್ತಣ್ಣವಾರಿಂ
ತೊಳೆದಂತಾದತ್ತು ಬೆಳ್ಪಿಂ ಪಳುಕಿನ ಬೆಳಗಂ ಬಿರ್ಚಿದಂತಾಯ್ತು ತೆಳ್ಪಿಂ ।
ಚಳವೀಚೀಕ್ಷುಬ್ಧದುಗ್ಧಾಂಬುಧಿಯನೆ ತೆಗೆದಂತಾಯ್ತು ಮೆಯ್ವೆತ್ತ ಪೆರ್ಚಿಂ
ಬಳವತ್ಪುಷ್ಪಾಸ್ತ್ರಕೀರ್ತಿಪ್ರಸವನಹಚರಂ ಚಂದ್ರಿಕಾಶ್ರೀವಿಲಾಸಂ ॥ ೨೮೭

ಕುಸುಮಂ ಗಂಧಾನುಮೇಯಂ ಗಮನಕಮನ ಹಂಸಾಳಿ ಶಬ್ದಾನುಮೇಯಂ
ರಸನಾಸ್ವಾದಾನುಮೇಯಂ ಮಧುಮಲಯರುಹಕ್ಷಾಮಕರ್ಪೂರಮುಕ್ತಾ ।
ವಿಸರಂ ಸ್ಪರ್ಶಾನುಮೇಯಂ ದಿಟಮೆನೆ ಘಟಿತಂಬೆತ್ತ ಬೆಳ್ದಿಂಗಳಂ ಭಾ
ವಿಸೆ ಲೋಕಂ ಚಂದ್ರಕಾಂತೋಪಳದ[4]ಮಯಣ[4]ದೊಳ್ ಮಾಡಿದಂತಿರ್ದುದಾಗಳ್ ॥

(ಅನಂತನಾಥಪುರಾಣಂ, ೭–೮೭)

---

[1] ಉ (ಖ.ಬ). [2] ತ (ಖ.ಬ.) [3] ಪ್ಪತಬಲ್ಟಕೂಡೆ (ಅ). [4] ನಯನ (ಅ).

ನವರತ್ನಾನೀಕಮೆಲ್ಲಂ ಸುರುಚಿರನವಮುಕ್ತಾಮಯಂ ಪುಷ್ಪಮೆಲ್ಲಂ
ಪ್ರವಿಭಾಸ್ವನ್ಮಲ್ಲಿಕೋಜ್ಜೃಂಭಿತ ಕುಸುಮಮಯಂ ಭೂಧರಶ್ರೇಣಿಯೆಲ್ಲಂ ।
ಸವಿಶೇಷೋತ್ಪೀತದಾಹೋತ್ಕರ ರಜತಮಯಂ ಭೂರಜೋಜಾಲಮೆಲ್ಲಂ
ಪ್ರವ[ಹತ್]ತಃಪ್ರಾಲೇಯಧೂಳೀಮಯಮೆನಿಸಿದುದಾ ಚಂದ್ರಿಕಾಶ್ರೀವಿಲಾಸಂ ॥

ಸುರರಾಜದ್ವಿಪದೇಹಕಾಂತಿ ಮದಲೇಖಾಕಾರ್ಷ್ಣ್ಯಸಂಯುಕ್ತಮಾ
ಹರಹಾಸಪ್ರಭೆ ಕಾಳಿಕೋಪಚಿತಮಾ ಶೇಷಾಹಿದೇಹಾಂಶುವು ।
ದ್ಗರಳವ್ಯಾವೃತಮಾ ಸುಧಾಬ್ಧಿರುಚಿ ಕೃಷ್ಣೋಪೇತಮೆಂದಿಂತು ಮಾಂ
ಕರಿಸುತ್ತಿರ್ಪುದು ನಿರ್ಮಳಪ್ರಕೃತಿಯಿಂ ಚಂದ್ರಾತಪಾಡಂಬರಂ ॥ ೨೯೦

ಭುವನಮನಾವಗಂ ಪುದಿದು ತೀವಿದ ತಣ್ಗದಿರ್ಗಳ್ ಪೊದಬ್ದ ಕೈ
ರವವನಮಾದುವೆಯ್ದೆ ಪೊಸಮಲ್ಲಿಗಯಾದುವು ಮೌಕ್ತಿಕಂಗಳಾ ।
ದುವು ಸುರಸಿಂಧುವಾದುವು ಸುಧಾರ್ಣವಮಾದುವು ಚಂದ್ರಕಾಂತಮಾ
ದುವು ಹಿಮವಾದುವಲ್ಲದೊಡೆ ಚಂದ್ರನ ಚಂದ್ರಿಕೆ ಮಾಯವಾದುದೇ ॥ ೨೯೧
(ಲೀಲಾವತಿ, ೩-೭.)

ಇದು ವಿಧುಬಿಂಬಮಪ್ಪುದಿನಮಂಡಲಮುಲ್ಲದರಲ್ಲ ನೆಯ್ದಿಲ
ಪ್ಪುದು ಸರಸೀಜಮುಲ್ಲದು ಶಶಿಪ್ರಭೆಯಪ್ಪುದು ಭಾನುದೀಪ್ತಿಯ ।
ಲ್ಲದು ಹಗಲಲ್ಲದಿಲ್ಲದಿರುಳಪ್ಪುದಿದಪ್ಪುದು ತಪ್ಪದೆಂದು ನೋ
ಡಿದರಭಿಶಂಕೆಯಂ ತಳೆಯೆ ಪಜ್ಜಳಿಸಿತ್ತು ಸುಧಾಂಶುಮಂಡಲಂ ॥ ೨೯೨

ಎಲೆ ನೋಡಲ್ ಸುರಗಂಗೆ ಕೋಟಿಪಮುಖದಿಂದೆಟ್ಟಿಂದಳಲ್ತಲ್ತು ನಿ
ರ್ಮಲ ದುಗ್ಧಾಬ್ಧಿಯೆ ಮೇರೆದಪ್ಪಿ ಕವಿಯಿತ್ತಲ್ತಲ್ತು ಗೌರೀಶನು ।
ಜ್ವಲ ಸತ್ವಂಚಮಮೂರ್ತಿ ಧಾರಿಣಿಯನಿಂದಪ್ಪಿರ್ದುದಲ್ತಲ್ತು ಕೇ
ಳಿಳೆಯೊಳ್ ಕೌತುಕಮಪ್ಪಿನಂ ಪಸರಿಸಿತ್ತಾನಂದಚಂದ್ರಾತಪಂ ॥ ೨೯೩

ಇಂದುಪ್ರಾಲೇಯಶೈಲದ್ಯುನದಿ ಶಶಿಶರನ್ಮೇಘಮುಕ್ತಾಂಬುಧಾರಾ
ವೃಂದಂ ಜ್ಯೋತ್ಸ್ನಾಪ್ರವಾಹಂ ಕವಿದುದು ವಿಧುಶಕ್ರೇಕ್ಷಿತಂ ಶೀತರೋಚಿಃ ।
ಕುಂದೋದ್ಯನ್ಮಂಜರೀನಿರ್ಗತನಿಬಿಡರಜಂ ಚಂದ್ರರುದ್ರಾಟ್ಟಹಾಸ
ಸ್ಪಂದಂ ಪ್ರೋದ್ಭಿನ್ನ ಸೋಮಾಮರಕರಟಿಶಿರೋಪಾಂತಮುಕ್ತಾಚ್ಛವರ್ಷಂ ॥
(ಲೀಲಾವತಿ, ೨-೧೨.)

ತಾರಗೆಗಳ್ ಮುಸುಂಕೆ ಕುಮುದೋಜ್ಜ್ವಲಕಾಂತಿ ತುಳುಂಕೆ ಕೂಡೆ ಪಂ
ಕೇರುಹರಾಜಿ ಕಂದೆ ಪೊಣರ್ವಕ್ಕಿಯ ಕಣ್ಬೊಣ[1][ರಟ್ಟಿ]ಗುಂದೆ ಶ್ಯಂ ।

[1] ರಲ್ತು (ಖ.ಬ).

ಗಾರದಡಪ್ಪು ಜಾರೆಯರ ಕೂರ್ಪು ಚಕೋರಿಗಳಂತೆ ಮಿಕ್ಕ ನೀ
ಹಾರದ ದೇಸೆ ಕಣ್ಗೆಸೆದುದುಜ್ಜ್ವಲದಿಕ್ಪ್ರಕರಂ ಸುಧಾಕರಂ ॥ ೨೯೫

ಮದನದವಾಗ್ನಿತಪ್ತೆಯರ ಸು[1]ಯ್ಯನಖಂಪಚಮಾಗಿ[1] ಬಪ್ಪವಿಂ
ಗದಿರನಲರ್ಚಿ ಚಂಚುವಿನೊಳೊಯ್ಯನರಲ್ದೊಲೆವುತ್ತಲಾಗ್ರಪ ।
ತ್ರದೆ ಮೊಗೆದೂಡಿ ಪಾಡಿ ನಲದಾ[2]ಲಿ[2]ಸಿ ತೋಱಿಸಿ ಸೋಂಕಿ ನೂಂಕಿ ಕೌ
ಮುದಿಯೊಳದೇಂ ಚಕೋರಿ ಪಿಳುಗಾಡಿಸಿದತ್ತು ನಿಜಾಗ್ರಶಾಬಮಂ ॥ ೨೯೬
(ಅನಂತನಾಥಪುರಾಣಂ, ೭–೮೧.)

ತೆರೆಮನಗುತ್ತಮಿರ್ಪ ಘನಚಂದ್ರಿಕೆಯಂ ಪರಮಾನುರಾಗದಿಂ
ಪರಿದಿದಿರೇಱಿಯೇಱಿ ನಗೆಗಣ್ಪೊಣರೊಳ್ ತೆಗೆದೆತ್ತಿಯೆತ್ತಿ ನಿ ।
ರ್ಭರತೆಯೊಳೀಂಟಿಯೀಂಟಿ ನೆರೆದೋಕುಳಿಯಾಡಿಯಾಡಿ ಮ
ಚ್ಚರದೊಳೆ ತುಳ್ಕಿ ತುಳ್ಕಿ ನಲಿದಪ್ಪುವು ಕೂಡೆ ಚಕೋರಸಂಚಯಂ ॥ ೨೯೭

ನೆರೆದು ಚಕೋರಪ್ರಕರಂ
[3]ಖ[3]ರಚಂಚುವಿನುಡಿದು ತಿನೆ ಸುಧಾಕರಕಿರಣಾಂ ।
ಕುರನಿಕರಮನಮರ್ದಿನ ಸೊನೆ
ಸುರಿದಪುದೆನೆ ಪನರಿಸಿತ್ತು ಪೊಸವೆಳ್ದಿಂಗಳ್ ॥ ೨೯೮
(ಲೀಲಾವತಿ, ೨–೨೩.)

ಅತ್ತಟಲೆ ರಥಾಂಗಾಸುರ
ರಿತ್ತೀಂಟೆ ಚಕೋರದಿವಿಜನಾಯಿಕರೇಂ ಸೂ ।
ಸಿತ್ತಾ ಗಗನಸ್ಥಲಿ ಹರಿ
ಯೆತ್ತಿದ ವಿಧುಕುಂಭದಮೃತಕರಧಾರೆಗಳಂ ॥ ೨೯೯
(ಲೀಲಾವತಿ, ೨–೨೦.)

ಕರೆದುವು ತಾಮರಲ್ದಗಿವ ತಾವರೆ ಕೂಡಿ ಕುಕಿಲ್ವ ಪಕ್ಕಿಗಳ್
ಪರೆದುವು ಮಾ[4]ಣ[4]ದಂಡಲೆವ ಹಂಸೆಗಳುಂ ತಡಿನಾರ್ದು[5]ವಿನ್ನುಮೈ ।
ಸಿರಿಬರಲುಂಟು[5] ಚಂದ್ರಬಲಮುಂಟು ನಿಶಾಬಲಮೆಂದು ರಾಗದಿಂ
[6]ಬರೆ[6]ವವೊಲೇನೆಸಪ್ ಮಸಗುತಿರ್ದುವೊ ನೀಳ ಸರೋಜಮಾಲೆಗಳ್ ॥ ೩೦೦
(ಅನಂತನಾಥಪುರಾಣಂ, ೭–೬೭.)

ವಿರಹವ್ಯಾಕುಳಮಾಗೆ ಚಕ್ರಮಿಥುನಂ ಸಂಕೋಚಮಂ ತಾಳ್ದು ತಾ
ವರೆ ಕಾಮಾತುರಮುಂ ರಜೋಧಿಕರಮುಂ ಖೇದಕ್ಕೆ . . . ॥

---

[1] ಯ್ಯುರಿಯುಂಬ ಚಕೋರಿ (ಖ.ಬ). [2] ರಿ (ಖ.ಬ). [3] ಕ (ಖ.ಬ.) [4] ಡಿ (ಖ.ಬ). [5] ವೆಮ್ಮನೀಸಿರಿ ಬಿಡಳೆಂದು (ಖ.ಬ). [6] ಬಿರಿ (ಅ).

ದೋಷಾಂಧರೆನ ತ್ತವಂ ನೆಗುವವೋಲ್ ನೈದಿಲ್ಗೊಳಂ ಮೇಲ್ಮರ
ಲ್ದರಲುತ್ತಿರ್ದುದು ಚಂಚಕಂ ಮಧುರದಬ್ಜಾಹಾರವಾಚಾಳಿಕಂ ॥ ೩೦೧

ಕೊಳಕೆ ತಳಾಱಿನಾಯ್ತು ಕುಮುದಂ ಗಗನಕ್ಕೆ ತಳಾಱಿನಾಯ್ತು ಜಾ
ವಳಪ ಚಕೋರಮೀ ಪೊಸ ತಳಾಱುಕೆಯೊಳ್ ಪ್ರಿಯೆ ಪೋದ ಪುಯ್ಯಲ ।
ಗ್ಗಳಿಸಿದೊಡಾರುಮೂಳಿಗಕೆ ಬರ್ಪವರಿಲ್ಲೆನಗೆಂಬ ಮಾಡ್ಕೆಯಿಂ
ದೊಳಱುವ ಕೋಕದೊಂದು ವಿಧಿಗಬ್ಬುವೊಲಾಯ್ತೊ [1]ಸ[ರ್ವ್ಯೆಂದ]¹ವೋಪಲಂ ॥

[2]ಮದಚಲ ಚಕೋರ[2]ಚಂಚೂ
ವಿದಳನದಿಂದಮೃತರಸದ [3]ಪೊನಲಿಡು[3]ತುಂ ನೂ ।
ಸಿದ ಬೆಳ್ದಿಂಗಳ ತಿರುಳಂ
ದದಿನಸದಳಮೆಸೆದುದೊಸರ್ವ ಶಶಿಮಣಿವಿಸರಂ ॥ ೩೦೩

(ಲೀಲಾವತಿ, ೨-೧೯.)

ಕರೆಯಲ್ಕಣ್ಮದೆ ಪೀಠಮರ್ದಕನುಮೆನ್ನಂ ಪಚ್ಚುವಂ ಮತ್ತೆ ನಾ
ಗರಿಕಂ ನೂಂಕಿದಪಂ ವಿಟಂ ಬೆರಲ ಕೊಂಕಿಂ ನನ್ನೆಗ್ಗೈದಪ್ಪನೆ ।
ಲ್ಲರ ಮಾತೇಂ ಭವದಂಘ್ರಿಪಲ್ಲವಮನೀ [4]ವಾತಾಯನೋಪಾತ್ತ [4]ಶೀ
ತರುಚಪ್ರಾಂಶುಕರಂ ಕರಂ ಪಿಡಿದುವೆನ್ನೀ ಸಲ್ಗೆಯಂ ಮನ್ನಿಸೈ ॥ ೩೦೪

(ಅನಂತನಾಥಪುರಾಣಂ, ೭-೮೮.)

ಎಂದು ವಿದೂಷಕನರಸನ
ಮಂದಸ್ಮಿತ ಲೋಚನಾಂಶು ಮ[5]ನದನುಮ[5]ತಿಯಂ ।
ಮುಂದಿಡೆ ಭೋಂಕನೆ ಕೈಗುಡು
ವಂದದೊಳೆ ಪಸಾದಮೆನುತೆ ಪೊಡೆವಡುತೆದ್ದಂ ॥ ೩೦೫

(ಅನಂತನಾಥಪುರಾಣಂ, ೭-೮೯.)

ಧವಳಾಪಾಂಗಮರೀಚ ಮಂಡಳಿಸಿ ನಿಂದಂತಿರ್ಪ ಕರ್ಪೂರಕ
ರ್ಣವತಂಸಂ ಹರಿಚಂದನಂ ವಿಚಕಿಳಂ ಮುಕ್ತಾಫಳಂ [6]ಕ್ಷೌಮ[6]ಮೆಂ ।
ಬವಱಿಂ ಭೂಭುಜನೊಪ್ಪಿದಂ ಮೆಱೆವ ಪೌರಶ್ರೀಯನಿಂತೆಂದು ಬಿ
ನ್ನವಿಸಲ್ ಚಂದ್ರಿಕೆ ಬಂದು ಸಲ್ಗೆವಡೆದೊಲ್ತಾಲಿಂಗನಂಗೆಯ್ದುವೋಲ್ ॥ ೩೦೬

(ಅನಂತನಾಥಪುರಾಣಂ, ೭-೯೦.)

---

1 ವಿಂದು (ಖ.ಬ). 2 ಮದದಚಕೊರಂ (ಖ). 3 ನೊನೆವಿಡು (ಖ.ಬ).
4 ವಾತಾಯ್ಯವಾಃಪಾತ (ಖ.ಬ). 5 ದನನಹ (ಖ.ಬ). 6 ಕ್ಷೋಧ (ಅ).

ಪೊಬಲನಿತುಂ ಪಳಚ್ಚನಮೃತಪ್ಲವದಿಂ ತೊಳೆದಂತೆ ಸೊಂಪು ಪೊಂ
ಪುಟಿಸೆ ವಿಮಾನಮಂ ನಭದೊಳಿಟ್ಟಭಿವೀಕ್ಷಿಸಲಿಂದುಬಿಂಬದಿಂ ।
ದಿಟವಮೃತಾಂಶುಮೂರ್ತಿಯೆನೆ ಸಾಂದ್ರ[1]ಸುಧೋ[1]ಜ್ವಲ ಚಂದ್ರಶಾಲೆಯಿಂ
ದಿಟಿದು ನರೇಂದ್ರಚಂದ್ರನೊಲವಿಂ ತಳರ್ದಂ ನಿಜರಾಜಗೇಹದಿಂ ॥ ೩೦೭

(ಅನಂತನಾಥಪುರಾಣಂ, ೭–೯೧.)

ಪರಿ[2]ವೇದಿ[2] ನಗರದೊಳ್ ನಾ
ಗರಕಂ [3]ರತ[3]ಕ್ಕೋವಿದಂ ವಿಟಂ ಪ್ರಹಸನತ ।
ತ್ಪರನೆನಿಸುವವಂ ವಿದೂಷಕ
ನರ[4]ಸನ ಪಡಿ[4] ಪೀಠಮರ್ದಕಂ ನಾಯಕರೊಳ್ ॥ ೩೦೮

(ಅನಂತನಾಥಪುರಾಣಂ, ೭–೯೨.)

ಅನುನಾಯಕರೀ ನಾಲ್ವರು
ಮನುಕೂಲಂ ದಕ್ಷಿಣಂ ಶಠಂ ದುಷ್ಟಂ ನೆ ।
ಟ್ಟನೆ ನಾಯಕ[5]ರಿಂತೆಣ್ಬರ್
ಜನ[5]ಭರ್ತುಗೆ ಲಲಿತನಾಯಕಂಗೆ ಸಹಾಯರ್ ॥ ೩೦೯

(ಅನಂತನಾಥಪುರಾಣಂ, ೭–೯೩.)

ಅನುಕೂಲಾದಿಗಳೆಂಬ ಮಂದಪವನಂ ಚಂದ್ರಂ ವಸಂತಂ ಮುಗು
ಳ್ತ ನವಾಮ್ರಂ ಪಿಕ ಕೀರ ಭೃಂಗ ಕಳಹಂಸಶ್ರೇಣಿ ಕೈಕೊಂಡು ಬ ।
ರ್ಪಿನೆಗಂ ಮನ್ಮಥಚಕ್ರವರ್ತಿ ನಡೆದೀಬಂದಪ್ಪನೆಂಬಂತೆ ಬಂ
ದನಲಂಪಿಂ ಪೊಱಮಟ್ಟು ರಾಜಗೃಹಮಂ ಸಾಹಿತ್ಯರತ್ನಾಕರಂ ॥ ೩೧೦

(ಅನಂತನಾಥಪುರಾಣಂ, ೭–೯೪.)

ಮುಗುಳ್ಗಳ ಕಂಪಿದಚ್ಚನನೆಗಂಪಿದು ಪೂಗಳ ಕಂಪಿ[6]ದಿಲ್ಲ್[6] ಮ
ಲ್ಲಿಗೆಗಳ ಕಂಪಿದುಬ್ಬರಿಪ ಜಾತಿಯ ಕಂಪಿದು ಬೇಱವೇಱೆ ಸಂ ।
ಪಗೆಗಳ ಕಂಪಿದೆಂಬವೊಲಳಿಸ್ವನಮೊಪ್ಪಿರೆ ಬಂದು ಕಂಪನೋ
ಲಗಿಸಿದುದೆ[7]ಯ್ದೆ[7] ಭೂಪತಿಗದೇನೆಲರೋ ಪೂಸಮಾಲೆಗಾಱನೋ ॥ ೩೧೧

(ಲೀಲಾವತಿ, ೨–೨೭.)

ಸಮಧಿಕ ಸೌಖ್ಯಮಾಗೆ ವನಲಕ್ಷ್ಮಿಗೆ ತಿರ್ದಿ ತಮಾಲಕೇತಕೇ
ಶಮನಿನಿಸುಳ್ಳರಲ್ಚಿ ಕಮಲಾನನಮಂ ಸ್ತಬಕಸ್ತನಾಗ್ರದೊಳ್ ।

---

[1] ನರೋ (ಅ). [2] ದ್ಯೈದಿ (ಅ). [3] ತರ (ಅ). [4] ಸಂಗನು (ಅ). [5] ರಿವರೆಣ್ಣ
ರುಮನು್ನ(ಅ). [6] ದಲ್ತು (ಖ.ಬ). [7] ತ್ತಿ್ದ(ಅ).

ರಮಿಯಿಸಿ ಪಾಟಲಾಧರ ಸುಧಾರಸಮಂ ಸವಿದಟ್ಟಿಹುಂ ಲತಾಂ
ಗಮನಮರ್ದಪ್ಪಿ ದಕ್ಷಿಣವಿಟಂಗೆಣೆಯಾದುದು ದಕ್ಷಿಣಾನಿಲಂ ॥ ೩೧೨

ಅಳಿಮಾಲಾಕೇಶಮಂ ಮೆಲ್ಲನೆ ಬರೆತೆಗೆದಬ್ಜಾನನಾಮೋದಮಂ ಪೀ
ರ್ದು ಲತಾಂಗಾಲಿಂಗನಂ ಸಂಗಳಿಸಿ ಕೃತಕಶೈಲೇಂದ್ರಶುಂಭನ್ನಿತಂಬ ।
ನ್ಥಲಮಂ ತನ್ನಿರ್ಘರಾಂಬುಸ್ಮರರಸಮೊಸರ್ವಂತೇಱಿ ನಿಚ್ಚಂ ವನಶ್ರೀ
ಗೊಲವಂ ಮಾಡುತ್ತುಮಿರ್ಕುಂ ಚತುರವಿಟನವೋಲ್ ದಕ್ಷಿಣಾಶಾಸಮೀರಂ ॥*

(ಜಗನ್ನಾಥವಿಜಯಂ, ೯–೯೧.)

ನವನೀಲೋತ್ಪಲಲಕ್ಷ್ಮಯಂ ನಗಿಸಿ ಮಲ್ಲೀರಾಮೆ[1]ಯೊಳ್[1] ಮೇಳವಾ
ಡಿ ವನೇಜಾತಿನಿಯಂ ವಿಡಂಬಿಸಿ ವಿನೋದಂಬೆತ್ತು ಬಂದತ್ತು ಸ ।
ಬ್ಬಕಾಱಿಂಗೆಣೆಯಾಗಿ ವಾರವನಿತಾಸೌಭಾಗ್ಯಘಂಟಾರುತಂ
[2]ಸುವಿಟಸ್ವೇದನವಾರುತಂ[2] ಕುಸುಮಚಾಪಜ್ಯಾರುತಂ ಮಾರುತಂ ॥* ೩೧೪

(ಜಗನ್ನಾಥವಿಜಯಂ, ೧೬–೧೧೦.)

ನಿಱಿಯ ಸೆಱಿಂಗನೆತ್ತಿ ಮಿಸುಪೊಳ್ಕೊಡೆಯಂ ನಸುಸೋಂಕಿ ಮೇಲುದಂ
ತೆಱೆದು ಕುಚಾಗ್ರದೊಳ್ ಪೊರಳಿ ಹಾರಮನೀಡಿಱಿದಾಡಿ ನಾಡೆ ಬಾ ।
ಯ್ದೆಱಿಯನಲಂಪಿನಿಂ ಸವಿದು ತೋರಕುರುಳ್ಗಳನೊಕ್ಕಲಿಕ್ಕಿ ಮುಂ
ದಱಿಯದೆ ಸೂಳೆಗೇರಿಯೊಳೆ ಸಂಚರಿಪಂ ವಿಟನಂತೆ ಮಾರುತಂ ॥* ೩೧೫

ಸುಟಿಗುರುಳೊಳ್ ತೊಡಂಕಿ ವದನಾಂಬುಜಸೌರಭದೊಳ್ ಮುಟುಂಗಿ ಪೊಂ
ಪುಟಿಗೊಳುತಿರ್ದ ಸೋರ್ಮುಡಿಯೊಳೊತ್ತಿದ ಕತ್ತುರಿಯಂ ಕಲಂಕಿ ಮೈ ।
ವಟಿಯೊಳೆ ಮೇಲುದಂ ತೊಲಗೆನೂಂಕಿ ಕುಚದ್ವಯದೊಳ್ ಪಳಂಚಿ ಪೊ
ಕ್ಕುಱೊಳಿಱಿದಾಡಿ ಕೂಡಿದುದು ವಲ್ಲಭನಂತಿರೆ ಮಂದಮಾರುತಂ ॥* ೩೧೬

ವನಿತಾಕೇಶಕಲಾಪನವ್ಯಕುಸುಮಾಮೋದಂಗಳೊಳ್ ಕಮ್ಮಕ
ಮ್ಮನೆ ನಾರೀನಿಬಿಡೋನ್ನತಸ್ತನತಟಪ್ರೋದ್ಭಟ್ಟದೊಳ್ ಮೆಲ್ಲಮೆ ।
ಲ್ಲನೆ ಕಾಂತಾಸುರತಪ್ರಮೋದಬಹಳಸ್ವೇದಾಂಬುವಿಂ ತಣ್ಣತ
ಣ್ಣನೆ ಬೀಸಿತ್ತು ವಿಲಾಸಿನೀಸದನದೊಳ್ ಬಂದೊಂದು ಮಂದಾನಿಲಂ ॥* ೩೧೭

ಯುವತೀಸಂತಾನನಾನಾಚಲದಳಕಲಸಲ್ಲಾಸ್ಯಲೀಲಾಪ್ರಬಂಧಂ
ವಿವಿಧಾಗಾರಾಂಗಣಪ್ರಸ್ಫುರಿತಕೃತಕಕಾಸಾರಪಾನೀಯಭಂಗೋ ।

---

* ಈ ಚಿಹ್ನೆಯಿರುವ ಪದ್ಯಗಳು ನಾಲ್ಕನೆಯ ಆಶ್ವಾಸದಲ್ಲಿಯೂ ಬಂದಿವೆ.

[1] ಯಂ(ಅ). [2] **ಸುವಿಟಸ್ವೈ ರರವಾರುತಂ** (ಅ).

ದ್ಭವಬಿಂದುವ್ರಾತಶೀತಾವರಣನೊಲವಿನಿಂ ತೀಡಿದಂ ಸ್ತ್ರೀಕುಲೋದ್ಯ
ನ್ನವಕಸ್ತೂರೀಹಿಮಪ್ರೋನ್ಮಲಯಜಘುಸೃಣಾಮೋದಭಾರಂ ಸಮೀರಂ ॥* ೩೧೮
(ಗಿರಿಜಾಕಲ್ಯಾಣಂ, ೪-೧೨೮).

ಕಳಕೇಳೀಕೀರಪಾರಾವತಕುಹರಣವಾಚಾಲಮುಜ್ಜೃಂಭಮಾ[1]ನೋ
ಜ್ವ[1]ಳರಾಜಂ ನಿಷ್ಕ[2]ಟಾಂ[2]ಭೋರುಹನಿಲಯಜ[3]ಲಾರ್ದ್ರ್ಯಂ[3] ರತಿಶ್ರಾಂತನಿರ್ಯ ।
[4]ಲ್ಲಲನಾನಿಶ್ವಾಸಪುಷ್ಪಪ್ರಸರದಗರು[4]ಸೌರಭ್ಯಸಂದೋಹ ಭಾರಾ
ಕಳಿತಂ ಬಂದೊಯ್ಯನೇನೂದಿದುದೊ ಪಣವಧೂಗೇಹದಿಂ ಗಂಧವಾಹಂ ॥ ೩೧೯
(ಚಂದ್ರಪ್ರಭಪುರಾಣಂ, ೮-೪೫.)

ಬೆಟ್ಟದ ಮೇಲೆ ಬಂದು ಸಿರಿ ನಿಲ್ಕೆರವಿಲ್ಲದೆ ಕೂರ್ತು ನಲ್ಲರಿಂ
ತೊಟ್ಟಿಯನಾಗಳಂತೆ ತಿಳಿಗಾಟ್ಟಿವನುಯ್ಯಲಮೇಲೆ ಚಂದ್ರ ನೀ ।
ರ್ದಟ್ಟಿಸಿ ನೋಪ್ಕೆ ಕಾಂತೆಯರ್ಗೆ ಬಂದ ಬಸಂತದಮೇಲೆ ಬಿಚ್ಚತಂ
ನಾಟ್ಟುಗೆ ಜಾಗಮೆಂದು ಕೆಲಬರ್ ತಳಿರುಯ್ಯಲನೇಱಿ ಪಾಡಿದರ್ ॥ ? ೩೨೦

ಸುಯ್ಯೆಲರುಯ್ಯಲಾಡಿಸೆ ಮದಾಳಿಯನುಯ್ಯಲ ನುಣ್ಚರಂ ಸ್ಮರಂ
ಗುಯ್ಯಲರ್ವಿಲ್ಗೆ ಕಯ್ಯನಿರದೆಂಬವೊಲುಣ್ಮೆ ಮರಲ್ದು ನೋಟಕರ್ ।
ಪುಯ್ಯಲನೊಯ್ಯನಾಕೆಯೊಡನಾಡಿಗಳೊಳ್ ಕುಡೆ ಮುತ್ತಿನ್ನೈಸರಂ
ಮೆಯ್ಯೊಲೆಪಕ್ಕೆ ರಯ್ಯಮೆನೆ ತೂಗೆ ವಿಲಾಸದಿನುಯ್ಯಲಾಡಿದಳ್ ॥ ೩೨೧
(ಚಂದ್ರಪ್ರಭಪುರಾಣಂ, ೮-೪೬.)

ಮೂಡಿದುದಿತ್ತಲೊಂದಭಿನವಂ ಶಶಿಬಿಂಬಮೆನಿಪ್ಪ ಶಂಕೆಯಂ
ಮಾಡೆ ಮನಕ್ಕೆ ಮುದ್ದುಮೊಗಮುಜ್ವಲಚಂದ್ರಿಕೆಯಲ್ಲ [5]ನಿಂದು ಮೇ[5] ।
ಲಾಡುವ ಲೀಲೆಯಿಂದೊಲೆ[6]ಯೆ ಮೈ[6] ಮೃಗಲಕ್ಷ್ಮಮೃಗಕ್ಕೆ ಗೋರಿಯಂ
ಪಾಡುವ ಮಾಟ್ಕೆಯಿಂ ಬಳೆಯೆ ಗೀತರವಂ ತಳಿರುಯ್ಯಲಾಡಿದಳ್ ॥ ೩೨೨
(ಚಂದ್ರಪ್ರಭಪುರಾಣಂ, ೮-೪೮.)

ಪದನಖಕಾಂತಿ ತಾರಗೆಯ ಕಾಂತಿಯನೇಳಿಸೆ ಸುಯ್ಯ ಕಂಪೆಲ
ರ್ಗೊದವಿಸೆ ಕಂಪನಕ್ಷಿಗಳ ಚಂದ್ರಿಕೆ ಚಂದ್ರಿಕೆಯಂ ಪಳಂಚೆ ಗೇ ।
ಯದ ರುತಿ ಕಂತುಚಾಪರುತಿಯೊಳ್ ತಡಮಾಗೆ ಮುಖೇಂದುವಿಂದುವಿಂ
ಗಿದಿರಿಡೆ ಕಾಂತೆ ಮಿಂಚು ಪೊಳೆದಾಡುವವೋಲ್ ಪೊಳೆದುಯ್ಯಲಾಡಿದಳ್ ॥ ೩೨೩
(ಜಗನ್ನಾಥವಿಜಯಂ, ೧೬-೧೧೩.)

---

[1] ಣೊತ್ಪ (ಅ). [2] ಟುಂ (ಖ.ಬ). [3] ಳಂಧ್ರಂ (ಖ.ಬ). [4] ನ್ನಳನಾರೀ ಶ್ವಾಸಪುಷ್ಪಂ ಪ್ರಸವದಗಮ (ಖ.ಬ.). [5] ನೀಡುಮೋ (ಅ). [6] ಯುಲೀ (ಅ).

ಈ ಪೊಸಸುಗ್ಗಿ ರಂಜಿಸಿದುದೀ ಪೊಸಜವ್ವನೆಯಿಂ[1]ದಮೊಳ್ಪಸಂ
ವ್ಯಾಪಿಸೆ ಜಾಗಮಂ ಮೆಱೆದು ಕಾಮಿನಿ ಕಾಮಧುಜಾಗ್ರಮಂ ಜಯ ।
ಶ್ರೀ ಪರಿದೇಱಲೇಱು ತಳಿರುಯ್ಯಲನಾ ಖಚರೀಜನಂಗಳೊಳ್
ರೂಪಿಡೆ ತನ್ನ ರೂಪೊಲದು ಪಾಡಿದಳಚ್ಯುತನಂಕಮಾಲೆಯಂ ॥ ೩೨೪

(ಜಗನ್ನಾಥವಿಜಯಂ, ೧೬–೧೪೪.)

ಬೀಱುದುದೊಂದೆ ಬಾಯಿನಮೆ ಬಾಲಕಿ ಬಾಲಕಿಯರ್ಗೆ ಗಾಡಿಯಂ
ನೀಱಿರ ಕಣ್ಗೆ ಸೋ[2]ಲ್ತ[2] [3]ಶ್ರುತಿಗಿಂಚರ[3]ಮಂ ನನೆವಿಲ್ಗ ಪಾಂಗಮೆಂ ।
ಬಾಱಿನೆಯಂಬನಾಸ್ಯರುಚಿ[4]ಯಿಂ[4] ನವಚಂದ್ರಿಕೆಗಿಂಪನಾಳ್ದು ತಂ
ಪಾಱಿದ ಬಾಯ ಕಂಪನೆಳದುಂಬಿಗೆ ಬೀಱುತಮುಯ್ಯಲಾಡಿದಳ್ ॥ ೩೨೫

(ಲೀಲಾವತಿ, ೨–೩೯.)

ತುದಿಕೊಳಿಸಿರ್ದ ವಾಮಚರಣಂ ಮಣಿಯಂ ಬಲದಂಘ್ರಿ ಮೆಟ್ಟೆ ಮಿಂ
ಚಿದ ತೊಡೆ ರಜ್ಜುವಂ ಪಿಡಿದ ತೋಳ್ಗಳೊದಲ್ ಪೊಗರಂ ತುಳುಂಕೆ ನೂಂ ।
ಕಿದ ಮೊಲೆಯೊಡ್ಡು ಕೊಂಕಿ ನಿಮಿರ್ದೊಳ್ನಡು ಕಣ್ಗೊಳಿಪನ್ನಮುಯ್ಯಲೇ
ಱುದಳಮ್ಮ ತಾಂಶುವಕ್ಕೆ ಕುಸಿದೇಱಿಸೆ ಮನ್ಮಥನಿಕ್ಷುಚಾಪಮಂ ॥ ೩೨೬

(ಅನಂತನಾಥಪುರಾಣಂ, ೮–೪.)

ಕಡೆಗಣ್ಣಿಂದಿಸುವಂತೆ ಚಂದ್ರಕರಮಂ ತಂಗಾಳಿಯಿಂ ಜೋಲ್ವ ಪೂ
ಮಿಡಿಯಂ ಜೊಂಪಿಸುವಂತೆ ಮುದ್ದುವೊಗದಿಂ ಪೂರ್ಣೇಂದುಬಿಂಬಕ್ಕೆ ಧಾ ।
ಟಿಡುವಂತೆಲ್ಲರ ಧೈರ್ಯಮಂ ಪೊಲೆಯ ಬಿಣ್ಪಿಂ ನುರ್ಗಿ ನೂಂಕಲ್ಕೆ ಧೀಂ
ಕಿಡುವಂತಾಡಿದಳುಯ್ಯಲಂ ತರುಣಿ ತಂದಳ್ ಕಾಮನಿಂ ಪುಯ್ಯಲಂ ॥ ೩೨೭

(ಅನಂತನಾಥಪುರಾಣಂ, ೮–೬.)

ಇವಳೀ ಲೋಚನಮೆನ್ನ ಬಾಣಮಿವಳೀ ಪುರ್ವೆನ್ನ ಪೂವಿಲ್ಲು ಮಾ
ಯ್ದಿವಳೀ ಸೋರ್ಮುಡಿಯೆನ್ನ ಕೇತನದ [5]ಚೆಲ್ವಂ ಕೊಂಡೊಡೇನೊಂದು[5] ದೋ ।
ಷವೆ ಎನ್ನೊಳ್ಪಳ ರೂಪನೀಕೆ [6]ಗೆಲಲೇಕೆಂದಂಗಜಂ[6] ಕಟ್ಟಿ ತೂ
ಗುವವೋಲ್ ತೂಗಿದನುಯ್ಯಲೇಱಿಸಿ ವಿಟಂ ವಿಭ್ರಾಂತೆಯಂ ಕಾಂತೆಯಂ ॥ ೩೨೮

(ಲೀಲಾವತಿ, ೨–೪೧.)

ತೂಗಿ ನಿಜೇಶ್ವರಾ ಸೊಬಗನಟ್ಟಿಸೆ ನೋಲ್ಪವರುತ್ತಮಾಂಗಮಂ
ತೂಗಿ ತಗುಳ್ದು ನೋಲ್ಪ ವಿಟಕೋಟಿಗೆ ಮನ್ಮಥನಾತ್ಮಬಾಣಮಂ ।

---

[1] ದೆನರ್ ಜ (ಅ). [2] ಲ್ತು (ಖ). [3] ಸುತಿಗಿಂದೊಳ (ಅ). [4] ಯಂ (ಅ).
[5] ಚೆಲ್ವಂ ಕೊಂಡವೆನ್ನೊಂದು (ಖ.ಬ). [6] ಸೆಳೆದಳ್ಗೇಕೆಂದಜಂ (ಖ.ಬ).

ತೂಗೆ ಪೊದಪ್ಪ ಮಾಂದಳಿರ ತೋರಣಮುಂ ನುಡಿತಪ್ಪ ತಂಬೆಲರ್
ತೂಗೆ ವಿಲಾಸದಿಂದೆ ಪೊಸಪೊಂಬೆಸದುಯ್ಯಲನೊರ್ವಳಾಡಿದಳ್ ॥ ೩೨೯

ನೆರೆದಳಿ ಪಾಡುವಂತಿರೆ ಕುರುಳ್ ಮೊಲೆಗಳ್ ಪೊಣರ್ವಕ್ಕೆ ಪಾಡುವಂ
ತಿರೆ ಪೊಳೆವಕ್ಷಿಗಳ್ ಚಳಚಕೋರಯುಗಂಗಳೆ ತಳ್ತು ಪಾಡುವಂ ।
ತಿರೆ ಶಿಖಿ ಪಾಡುವಂತಿರೆ ಒಲಲ್ಮುಡಿ ತಾನಲರಂಬು ಪಾಡುವಂ
ತಿರೆ ಮಿಗೆ ಕೀಡು ಪಾಡು ಗಗನೇಚರಿಯಂತೊಲೆದುಯ್ಯಲಾಡಿದಳ್ ॥ ೩೩೦

(ಲೀಲಾವತಿ, ೨–೩೮.)

ಸಿರಿಯ ವಿಳಾಸಮುಂ ಶಚಿಯ ಸಂಪದಮುಂ ರತಿಯೊಂದು ರಾಗಮುಂ
ಗಿರಿಜೆಯ ಗಾಡಿಯುಂ ಮದನ ಕೇಳ್ದೆಳಸುತ್ತಿರೆ ಕದ್ದನಿಲ್ಲ ಮೈ ।
ಸಿರಿಯೆಡೆಗೊಂಡನೇ ಕಱುಯ ಚಂದ್ರಮ ಚಂದ್ರಿಕೆ ಚೈತ್ರದಿಂದೆ ಪೀ
ವರಕುಚೆ ತೋರಣಂ ನುಗುಳ್ದು ಗೆಲ್ದಪಳೆಂಬಿನಮುಯ್ಯಲಾಡಿದಳ್ ॥ ೩೩೧

(ಅನಂತನಾಥಪುರಾಣಂ, ೮–೭.)

ಇದು ನಿನ್ನೀಯೇಣನೆನ್ನೀಕ್ಷಣಕೆ ನೆಣಸಿ [1]ತಳ್ಪೊಯ್ದು ನಿಂದಿರ್ದ[1] ದರ್ಪ
ಕ್ಕಿದು ನಿನ್ನೀಯಾಲವೆನ್ನೀಯಧರದಳದೊಳಾದೀರ್ಷ್ಯೆಯಿಂ ಪಣ್ತು ಗರ್ವ ।
ಕ್ಕಿದು [2]ನೀನೆನ್ನಾ[2]ಸ್ಯದೊಳ್ ಮಚ್ಚರಿಸುವ ಮಱುಕಕ್ಕೆಂದು ಕಾಲ್ಗಾಲೊಳೀವಂ
ದದೆ ಚಂ[3]ದ್ರಂಗುತ್ಪ[3]ಹಾರಂಗಳನೊದೆದೊಲವಿಂದುಯ್ಯಲಾಡುತ್ತುಮಿರ್ದಳ್ ॥

(ಲೀಲಾವತಿ, ೨–೪೦)

ನಯನಮರೀಚಯುಂ ಕಬರಿಕಾಂತಿಯುಮಿರ್ದೆಸೆಗಿಂದ್ರನೀಲಮಾ
ಲೆಯ ವರಮೌಕ್ತಿಕಾವಳಿಯ ರಜ್ಜುಗಳಂತಿರೆ ಚಂದ್ರನುಂ ರತಿ ।
ಪ್ರಿಯನುಮದೇಂ ತೊಡರ್ಚಿ ಪಿಡಿದೋಜೆ ವಿರಾಜಿಸೆ ತೂಗುವಂಗಥಂ
ಗಿಯೊಳೊಲೆದುಯ್ಯಲಾಡಿ ಕಡು ಬಾಡಿಸಿದಳ್ ವಿಟರಂತರಂಗಮಂ ॥ ೩೩೩

ರತಿಯುಂ ಕಾಮನುಮಂಬರೇಚರವಿಲಾಸಶ್ರೀಯನೊಲ್ದಂತೆ ಹೃ
ತ್ಪತಿ ಕುಳ್ಳಿರ್ದೆಡೆಗೊ[4]ಟ್ಟೊಡಂದು ತೊ[4]ಡೆಯಂ ತಳ್ತೇಱು ನೆಲ್ಲಳ್ ಪ್ರಧಾ ।
ಪ್ಲುತನೇತ್ರಂ ತೆರೆ ಸುತ್ತೆ ಪೀಠಮಣಿಮಂಚಂ ಚೆಲ್ವನಾಗುಯ್ಯಲಂ
ತತರಾಗಾಮೃತವಾರ್ಧಿಯೊಳ್ ಮರಲೆವಿಟ್ಟೀಸಾಡುವಂತಾಡಿದಳ್ ॥ ೩೩೪

(ಅನಂತನಾಥಪುರಾಣಂ, ೮–೫೫.)

---

[1] ತಾಂದೆರ್ದರ್ನೋದ್ದೊಂದು (ಅ). [2] ನಿನ್ನೀನಾ (ಖ.ಬ). [3] ದ್ರಾಂಶುಪ್ರ (ಖ.ಬ). [4] ಟ್ಟಬಟ್ಟಿದೊ (ಅ.)

ಪವಳದಿನಿಂಗಡಲ' ಶಫರದಿಂ ಕೊಳನುನ್ಮದಭೃಂಗನಾದದಿಂ
ದವಿರಳಪುಷ್ಪಭೂಜಮೆಸೆವಂತಿರೆ ಚಂದ್ರಿಕೆ ರತ್ನಭೂಷಣಾಂ ।
ಶುವಿನಲರ್ಗಣ್ಣ ಮಾರ್ಪೊಳೆಪಿನಿಂ ಮೃಮಗೇಯದಿನೊಯ್ಯನುಯ್ಯಲಾ
ಡುವ ಲಲಿತಾಂಗಿ ತನ್ನೆಡೆಗೆ ನೀಱರ ಚಿತ್ತಮನುಯ್ಯಲಾಡಿದಳ್ ॥ ೩೩೫

ನೋಡುವನೇಕ ಸದ್ವಿಟಜನಂಗಳ ಪೆಣ್ಗಳ ಕಣ್ಗಳಾಡೆ ಕೊಂ
ಡಾಡುವ ತತ್ಸಖೀಜನದ ಚಾಗದ ಭೋಗದ ರಾಗವಾಡೆ ತೂ ।
ಗಾಡುವ ಬಾಲಕೀವ್ರಜದ ಕಂಕಣಝಂಕೃತಿ ಭೋಂಕನಾಡೆ ತಾ
ನಾಡಿದಳುಯ್ಯಲಂ ಮುಖಶಶಿಪ್ರಭೆ ಮುಚ್ಚಿ ಮುಸುಂಕೆ ಚಂದ್ರನಂ ॥ ೩೩೬
(ಗಿರಿಜಾಕಲ್ಯಾಣಂ, ೪–೧೫೯.)

ಏಱಿದ ಮಱೆಯುದಯನಗಂ
ತೋಱಿದ ಮುಖಬಿಂಬವಿಂದುಬಿಂಬಮಪಾಂಗಂ ।
ಪಿಱಿದ ಚಂದ್ರಿಕೆಯೆನೆ ಕಳೆ
ಯೇಱಿದ ಪಡಿಚಂದ್ರನಂತೆ ಸೌಂದರಿಯೆಸೆದಳ್ ॥ ೩೩೭
(ಗಿರಿಜಾಕಲ್ಯಾಣಂ, ೪–೧೫೮.)

ದುಗುಲಮನುಟ್ಟು ತೊಟ್ಟು ಪೊಸಮುತ್ತನೆ ಚಂದನದಣ್ಪನಿಕ್ಕಿ ಮ
ಲ್ಲಿಗೆಯ ಸರಂಗಳಂ ಮುಡಿದು ಚಂಪಕಮಾಲೆಯನೆತ್ತಿ ಮೇಗೆ ತುಂ ।
ಬಿಗಳೆಡೆಯಾಡದಂತಱಿಯಲಾಗದವೋಲ್ ನವಚಂದ್ರಿಕಾಮರೀ
ಚಿಗಳೊಡಗೂಡಿ ಪೋದಳಭಿಸಾರಿಕೆ ಮುತ್ತಿನ ಬೊಂಬೆಯಂದದಿಂ ॥ ೩೩೮
(ಲೀಲಾವತಿ, ೨–೩೭.)

'ಅಂಗಜನೈದು ಶರಂಗಳ ಬಂದ ಬ
ನಂಗಳ ಪುಟಿಲ ತಳಿರುಯ್ಯಲಚ್ಚವೆ ।
ಳ್ದಿಂಗಳ ಮೇಲೆ ಸಿರಿ ನಿಲ್ಕೆ ॥ ೩೩೯
(ಲೀಲಾವತಿ, ೨–೩೪-೧.)

ಮನಮನಂಟುವ ರೂಪು ದನಿ ನಗೆ ಮೆಲ್ಪು ತಂ
ಪನುಗುಣಮುಳ್ಳ ವಧುವಿರೆ ಬೇಱೆ ಪೂ
ವಿನ ಸರ[1]ಲೇ[1]ಕೆ ಮದನಂಗೆ ॥ ೩೪೦
(ಲೀಲಾವತಿ, ೨–೩೪–೨.)

ಜಾತಿಸೂಳೆಗೆ ರಣಭೀತನ ಪುಸಿನುಡಿ
ವಾತನ ಖಳನ ಕೆಳೆಯನ ಬದಗನ
ಬೂತಿನ ಮಾತು ದಿಟಮಲ್ತು ॥ ೩೪೧
(ಲೀಲಾವತಿ, ೨–೩೪–೩.)

[1] ಲದೇ (ಅ.ಖ).

ಪತ್ತಿದ ಬೊಜಗರ ಚಿತ್ತವ ಕಡಲೀಯ
ದಿತ್ತುದೆ ಕೋಟಿ ತನಗೆಂಬ ಸೂಳೆಯ
ಹಿತ್ತಿಲೊಳಿರದೆ ಸುರಭೂಜ ॥ ೩೪೨

(ಲೀಲಾವತಿ, ೨–೩೪–೪.)

ಎಱಗಿಸುವುದು ಗೆಟ್ಟು ಪೆಱರ್ಗೆ ತಾನೆಱಗೆ ಪೊ
ಕ್ಕಱಿಯಲೆ ಪೋಗಿ ಮೂಗರಿವಡೆದರ
ತೆಱನಪ್ಪುದೆಲಗೆ ಬೆಲೆವೆಣ್ಣೆ ॥ ೩೪೩

(ಲೀಲಾವತಿ, ೨–೩೪–೫)

[1]ನಯವಿದನೊಪ್ಪುವ ಬಿಯಕಾಱನೊಳ್ಳಿದ
ಪ್ರಿಯತಮನಾಗೆ ತನ್ನ ಮುನ್ನೋಂತ ನೋಂ
ಪಿಯ ಫಲವೈಸೆ ಬೆಲೆವೆಣ್ಣೆ ॥ ೩೪೪

(ಲೀಲಾವತಿ, ೨–೩೪–೮.)

ಕೆಡುವುದು ಕುಡದೊಡೆ ನಡೆಯದು ಪಿರಿದೀಯೆ
ಸೊಡರ್ಗುಡಿಗೆಣ್ಣೆಯಿವಂತೆ ಬೆಲೆವೆಣ್ಗೆ
ಕುಡುವುದು ಹದಕೆ ಚದು[2]ರಿ[2]ಗಂ ॥ ೩೪೫

(ಅನಂತನಾಥಪುರಾಣಂ, ೮–೨೬.)

ಕಂಪೋಡಿದಲರ್ಗಳನಿಂಪೋಡಿದೊಲುಮೆಯಂ
ಸಂಪತ್ತು ಪೋದ ಬೊಜಗನ ಪಿಡಿದಿರ್ಪ
ಗಾಂಪು ಬೇಡೆಲೆಗೆ ಬೆಲೆವೆಣ್ಣೆ ೩೪೬

(ಲೀಲಾವತಿ, ೨–೩೪–೭.)

ನೆಲೆಮೊಲೆಯುಳ್ಪಿನಂ ನೆಲೆಯಕ್ಕು ಪೋಪರ್ಗೆ
ಎಲೆಪಣ್ತು ಬಿರ್ದ ಬಚ್ಚೆಯ ಮರನಂತೆ
ಮೊಲೆ ಬಿರ್ದ ಬಟಿಕೆ ಬೆಲೆವೆಂಡಿರ್ ॥ ೩೪೭

(ಲೀಲಾವತಿ, ೨–೩೪–೯.)

ಪರಿಹಾಸಮೊಪ್ಪುವಾದರ ನೆಲೆ ಗೀತಮ
ಕ್ಕರಗೊಟ್ಟಿಯಿಲ್ಲದಿರೆ ನಾಡ ಕೋ[3]ರಿ[3]ಯ ಕೊ
ಟ್ಟರವದು ಸೂಳೆವನೆಯಲ್ತು ॥ ೩೪೮

(ಲೀಲಾವತಿ, ೨–೩೪–೧೦.)

---

[1] ಬಿಯಕಾರನೊಪ್ಪುವ ಪ್ರಿಯತಮನಾಗೆ ಪೆ।
ರ್ಮೆಯ ಬೆಳಸು ಫಳಮಾ ಪೆಣ್ಣು ನೋಂತನೋಂ।
ಪಿಯ ಫಲಮೆಲಗೆ ಬೆಲೆವೆಣ್ಣೆ ॥ (ಅ).

[2] ರಿಂ (ಖ.ಬ).

[3] ಟಲೆ (ಅ).

ಅನುವಿಪ ತಾಯ ಮನ್ನಿಸುವ ತಂದೆಯ ಕಾಯ್ವನೊಳೆಕ್ಕೆಗುಟ್ಟುವ
ಕ್ಕನ ಪದಪೆತ್ತಿ ಬೈವ ಕಿಱುದಂಗಿಯ ಕಣ್ಣೊಳೆ ಕೀಱು ಕಲ್ಪಪ ।
ಣ್ಣನ ಬಿಯವಿಲ್ಲದವ್ವಳಿಪ ತಮ್ಮನ ನೆತ್ತಿಗೆ ಮೆಯ್ಯನೊಡ್ಡಿ ನಿ
ನ್ನನೆ ಪಿಡಿದಿರ್ದ ನಲ್ಮೆಗಿದು ತಕ್ಕುದೆ ನಲ್ಮೆಗೆ ದೋಷಮಾಗದೇ ॥ ೩೪೯

ಆಗಿದೆನಗಿಂತು ಸಂಜೆಯನೆ ಸಾಧಿಸಿ ನೂರುಳಿದಾಗಳೇಂ ಗಳೂ
ಳಿಗವೆನಗಿಲ್ಲ ಪೊಟ್ಟುಗುಣದಿಂ ನಿನ[1]ಗಾಂ ನೆಱೆಯೊಲ್ದೆ[1] ಕಾವನಾ ।
ಣೆ ಗಡೆಳಮಾವಿನಾಣೆ ಗಡ ಮಲ್ಲಿಗೆಯಾಣೆ ಗಡಿಂದುಬಿಂಬದಾ
ಣೆ ಗಡ ಬಸಂತನಾಣೆ ಗಡ ಬ[2]ಲ್ಲಡೆ ನಾನಟಿಗಂಡಳೆಂಬುದಂ[2] ॥ ೩೫೦

(ಲೀಲಾವತಿ, ೨-೫೬.)

ನೋಡೆನೆ ಕಣ್ಗಳಂಗವಿಸಲಾರ್ಪೊಡೆ ಗಂಡರ ಗಾಡಿಗೊಲ್ದು ಮಾ
ತಾಡೆನೆ ಬೆಂದ ಬಾಯ್ ಪೆಱಿರ್ಗೆ ಮುಚ್ಚಿ ಮುಸುಂಕಿದೊಡಿಚ್ಚೆಕಾಱಿರೊಳ್ ।
ಕೂಡೆನೆ ತೋಳ್ಗೆ ಕೊಕ್ಕರಿಕೆ ಪುಟ್ಟಿದೊಡೆನ್ನಯ ಲೀಸನೆನ್ನೊಳ
ಡ್ಯಾಡಿಪುದಟ್ತಿಯೇ ಹರಸಿ ಹುಟ್ಟಿದೆನೇ ನಿನಗೆಂದು ವಲ್ಲಭಾ॥ ೩೫೧

(ಅನಂತನಾಥಪುರಾಣಂ, ೮-೨೭.)

ಒಡಲುಂ ಜೀವಮುಮೊಂದಿದಂ[3]ತೆ ಮಲರುಂ ಕಂಪುಂ ಮಲರ್ದಂತೆ ಓ[3]
ತೊಡಗೂಟಂ ಸಮಸಂದ ನಮ್ಮೊಳಗೆ ತಪ್ಪಂ ಮಾಟ್ಟ ನಿನ್ನೊಂದು [4]ಸ್ಯೆ ।
ತಿಡುತಿರ್ಪಾನಿನಿತೆಯ್ದೆದೇಂ[4] ಕುಟಿಲ ಸೂ[5]ರು[5]ಳ್ ನಲ್ಮೆಯೇ ನಲ್ಮೆಯು
ಳ್ಳಡ[6]ದೇಕಪ್ಪುದು ವೀಣೆಯಂ ಪಱುಯೆ ಪಾಡುಂ ತೀರ್ದುದಿಂ[6] ನಾಲದೇ ॥ ೩೫೨

(ಅನಂತನಾಥಪುರಾಣಂ, ೮-೧೭.)

ಮನೆಗೆಲ್ಲಂ ಪಗೆಯಾದೆನಟ್ತಿಗೆ ಕರಂ ಗೆಂಟಾದೆನಿಂ ಮೆಚ್ಚಿದಂ
ಗನೆಯ[7]ರ್ಗೆ[7]ಳಾದೆನೋಪ ಗುಱಿಯಾದೆಂ ಪಂಚಬಾಣಕ್ಕೆ ಪ ।
ದ್ಮಿನಿಯಾದೆಂ ವಿಧುವಿಂಗೆ ನಿನ್ನ ಕತದಿಂ ಕೇಳಟ್ತಿಕಾಱಿಂಗೆ ಕೂ
ರ್ತೆನಗಿಲ್ಲಿಂ ಪಿರಿದಕ್ಕುಮೆಂದು ಸುರಿದಳ್ [8]ಭೋರೆಂದು[8] ಬಾಷ್ಪಾಂಬುವಂ ॥೩೫೩

(ಲೀಲಾವತಿ, ೨-೬೧.)

ನಸು ನಿಮಿರ್ದಿರ್ದ ಬಾಯ್ ನಿಮಿರ್ದ ಗೋಣೆವೆಯಿಕ್ಕದ ನೋಟಮೊಯ್ಯ
ದೆಸೆಗೊಱಿಗಿರ್ದ ಮೈ ಜಘನದಲ್ಲಿಯ ಕೈ ಮನವಟ್ಟ ಚೇಷ್ಟೆ ಕ । [ನೊಂ

---

[1] ಗೊಲ್ದುದು ಮಾತೆ (ಅ). [2] ಲ್ಲೊಡವಾನಟಿಗಂಡರೆಂಬುದಂ (ಅ). [3] ತಿರಲು ಕಂಪುಂ ಪೂವರಲ್ದಂತಿರೋ (ಅ). [4] ಬಾಯ್ಬಿಡುವೀನಾದಮಿದ್ಯೆದದೇ (ಅ). [5] ಳ್ಳ (ಖ.ಬ). [6] ದು ನಾಳಿಯೆ ಬೀಣೆಯಂ ಪಱುದು ಪಾಡುತ್ತಿರ್ದುದುಂ (ಖ.ಬ). [7] ರ್ಗೊಳ್ಳೆ (ಅ). [8] ಬೆಂದೆದ್ದು (ಕ.ಖ.ಬ).

ಣ್ಗೆಸೆದಿರೆ ಸುಯ್ಯಲುಂ ಮಱೆದು ಚಿತ್ರದ ಪೆಣ್ಣಪೊಲೊಂದು ಬಾಗಿಲೊಳ್
ಸಸಿಮುಖಿ ನೋಡುತಿರ್ದಳಿನಿಯಂ ತಡೆದಿರ್ದೊಡೆ ಬರ್ಪ ಬಟ್ಟೆಯಂ ॥ ೩೫೪

ಬಂಬಲಬಾಡಿ ಮುಂಬಗಲನೆಯ್ದಿದ ನೆಯ್ದಿಲವೋಲ್ ಕುರುಳ್ಗಳಾ
ತುಂಬಿಯ ಮಾಲೆಯೋಲ್ ಪೊಳೆಯೆ ದೂರಿಸಿ ತನ್ನನೆ ಕಣ್ಣ ನೀರ ಘ
ರ್ಮಾಂಬುವ ಕಾಟ್ಟುರಂಗಳೊಳೆ ತೇಂಕುವ ಕಾಂತೆಯನೆಯ್ದೆ ವಂದು ಚಂ
ದ್ರಂಬೊಲಲರ್ಚಿದಂ ಕರದಿನಪ್ಪಿ ಕಲಾನಿಳಯಂ ಮನಃಪ್ರಿಯಂ ॥ ೩೫೫

ನುಡಿದಂ ದೈನ್ಯದ ಮಾತನಾತನಿರದೆಬ್ದಳ್ ಮೌನದಿಂ ಮುಗ್ಧೆ ಕಾ
ಲ್ಪಿಡಿದಂ ವಲ್ಲಭನೋಪಳೆದ್ದೊದೆದು ಪೋದಳ್ ಮಾಱುದಳ್ ಬಲ್ಮೆಯಿಂ।
ಪಿಡಿದಾತ್ಮೇಶ್ವರನಿಕ್ಕಿದಂ ಕೊರಲೊಳೊಂದಂ ಹಾರಮಂ ಕಾದಲಳ್
ನಡುಗುತ್ತೆಕ್ಕಸರಕ್ಕದೊಂದು ಸರಮಂ ಬಾಷ್ಪಾಂಬುವಿಂದಿಕ್ಕಿದಳ್ ॥ ೩೫೬
(ಅನಂತನಾಥಪುರಾಣಂ, ೮–೯.)

ಮುಳಿವೆಂ ನಾನಾಗೆ ನನ್ನಂ ತಿಳಿಪುವ ಪಿರಿದುಂ ದಂದುಗಂ ಬೇಡವಿನ್ನಾಂ
ಮುಳಿಯೆಂ ನಿನ್ನಾಣೆ ನಿನ್ನೀ ನವನಖಪದಮಂ ಕುಂಕುಮಾದ್ಯಾಂಕತೋರ।
ಸ್ಥಳಮಂ ಸೊಪ್ಪಾದ ಬಿಂಬಾಧರಮನಿನಿತುಮಂ ಕಂಡು ಕಂಡಿನ್ನುಮಿನ್ನೇಂ
ಮುಳಿಸಿನ್ನೇಂ ಲಲ್ಲೆಯಿನ್ನೇಂ ಪುರುಡುಗಳೆನುತುಂ ತೀವಿದಳ್ ಕಣ್ಣನೀರಂ ॥ ೩೫೭

ಇನಿತುಂ ನಂಬೆಲೆ ಮನ್ಮನೋರಮಣಿ ನಿನ್ನೆನ್ನಂತರಂ ನೋಱ್ಪೊಡೀ
ತನು ಬೇಱಿಲ್ಲದೆ ಜೀವಮೊಂದೆಮಗೆನಿಪ್ಪೀ ಮಾತು ತಾನೀಗಳೋ।
ಪನೆ ಕೇಳ್ ನಿಶ್ಚಯಮಾದುದಲ್ಲದೊಡೆ ನಿನ್ನೀ ಮೆಯ್ಯೊಳೊಂದಿರ್ದ ನೂ
ತನಮಾಗಿರ್ಪ ನಖಕ್ಷತವ್ಯಥೆಗೆ ಪೇೞೆನ್ನೀ ಮನಂ ನೋವುದೇ ॥ ೩೫೮
(ಶೃಂಗಾರರತ್ನಾಕರಂ, ೩–೫೫.)

ನೆಱೆ ಬಂದೀ ಮಧುವೆನ್ನನಂಗಭವನೆನ್ನಂ ಚಂದ್ರನೆನ್ನಂ ದಲೆಂ
ದಱಿಯೆಂ ಕೇವಳನೆನ್ನನೆಂದಱಿಯದಂದೀಗಳ್ ವಿಯೋಗಾರ್ತೆಯಂ।
ನೆಱೆ ಬಂದೀ ಮಧುವೆನ್ನನಂಗಭವನೆನ್ನಂ ಚಂದ್ರನೆನ್ನಂ ಕೊಲಲ್
ತಱಿಸಂದಿರ್ದಪರಾತನೊಳ್ ನೆರಪು ನೀಂ ಶ್ರೀರೂಪಕಂದರ್ಪನೊಳ್ ॥ ೩೫೯
(ಲೀಲಾವತಿ, ೨–೪೪.)

ಮುಳಿಯಲ್ಪೇಡೆನ್ನನೇ ನೀಬ್ಕರಿಸದೆ ತಿಳಿಯೆಂದೆನ್ನನೇ ಬಾರನೇ ಮೇಣ್
ತಿಳಿಪಲ್ ಬೋಳ್ಕೆನೆನೇ ಕಾಲ್ಪಿಡಿಯನೆ [1]ಪಿ[1]ಡಿದೆಬ್ದಪ್ಪಿಕೊಂಡಾಗ[3]ಳೀ[2]ಗಳ್ ।

ಕೆಳದೀ ನೀಂ ಬಲ್ಲೆಯಿಂತೆಂದನುವಿಸಿದಪೆ ಬೇಸತ್ತೆ ನಾಂ ನಲ್ಲನಿನ್ನೀ
ಕೊಳಗಪ್ಪಂ ನೀನು[1]ಪಿಾಗಳ್[1]ಕೊಲುವ ಮದನನುಂ ಬಲ್ಲಿರಾನೆತ್ತ ಬಲ್ಲೆಂ ॥ ೩೬೦
(ಅನಂತನಾಥಪುರಾಣಂ, ೮–೧೨.)

ಮುನಿಸಂ ಮೆಯ್ದೋಱಿಸೆಂ ಕಂಡೊಡೆ ಕರಕರಿಸೆಂ ಪೊಯ್ದೊಡಂ ಬಯ್ಯೆನೀನೆಂ
ದನನಂ ಮಾರ್ಕೊಳ್ಗೆನೀ ನಾವಿನ ಸವಿಯಱಿ[2]ಯೆಂ ತಂದು ನೀನೊಮ್ಮೆ[2] ಕೂಡಾ ।
ತನನಾತಂಗೀವ ಮುಯ್ಯಂ ನಿನಗೆ ಕುಡುವೆನೇಱಕ್ಕ ಪೋಗೆಂಬುದುಂ ಭೋಂ
ಕನೆ [3]ಬಂದೊಲ್ದಪ್ಪಿದಂ ಚುಂಬಿಸಿದನವನಿದಂ[3] ಕೇಳುತಿರ್ದಾತ್ಮನಾಥಂ ॥ ೩೬೧
(ಅನಂತನಾಥಪುರಾಣಂ, ೮–೧೩.)

ಅರಗಳಿ ಮಾತನಾಡಿದುದು ನಿನ್ನೊಡನಂತೆಳಸುತ್ತಮಿರ್ದೆ ನೀಂ
ಪುರುಳಿಯ ಕೂಡೆ ಪಾರಿವದ ಲಲ್ಲೆಗೆ ಭುಲ್ಲಿಸುತಿರ್ದೆಯೆಂದು ಮಂ ।
ದರಗತಿಯಿಂದೆ ಹಂಸನೊಡನಾಡಿ[4]ದಳೆ[4]ಂದತಿ ಕೋಪದಿಂ ಪ್ರಿಯಂ
ಪುರುಡಿಸೆ ನಕ್ಕು ಚುಂಬಿ[5]ಸಿದೆನಾನವನೊಳ್ ನಗುತುಂ ತಳೋದರೀ[5] ॥ ೩೬೨
(ಅನಂತನಾಥಪುರಾಣಂ, ೮–೪೬.)

ಇನಿಯಂ ಕೂರ್ಮೆಯ ಕೂಟದೊಳ್ ಗುರು ಕಳಾಭಿಪ್ರಾಯದೊಳ್ ತಂದೆ ತಾಯ್
ತನುಸಂಸ್ಕಾರವಿಳಾಸದೊಳ್ ಸಖಿ ಸುಖಾಳಾಪಂಗಳೊಳ್ ಬಂಧು ನೆ ।
ಟ್ಟನೆ ಮುಟ್ಟಿರ್ದೆಡೆಯೊಳ್ ವಿಧಾತ್ರನೆನಗಿನ್ನೀಜೇಂಬು ಜನ್ಮಕ್ಕಮಾ
ತನೆ ಚಿತ್ತಪ್ರಿಯನಕ್ಕೆ ಸೂಕ್ತಿನಳಿನೀಹಂಸಂ ಸರೋಜೇಕ್ಷಣೇ ॥ ೩೬೩
(ಅನಂತನಾಥಪುರಾಣಂ, ೮–೪೭.)

ನನೆಯಾಗಿರ್ದಾಂ ಮನೋನಾಥನ ಸಿರಿಮುಡಿಯೊಳ್ ವಕ್ಷದೊಳ್ ಹಾರಮಾಗಿ
ರ್ದು ನಿತಂಬಾಭಾಗದೊಳ್[6]ವೇಷ್ಟಿ[6]ಸಿದ ದುಗುಲಮಾಗಿರ್ದು ಸರ್ವಾಂಗದೊಳ್ ಚಂ
ದನದಣ್ಪಾಗಿರ್ದು ಬಿಂಬಾಧರದೊಳರುಣಿಮಚ್ಛಾಯೆಯಾಗಿರ್ದು ಕಾಯಲ್
ನೆನೆವೆಂ ನೋಡಕ್ಕ ತಳ್ತಪ್ಪಿದೊಡೆ ಪೆಱರ ಕಣ್ಣೀಱಿನಾಶಂಕೆಯಿಂದಂ ॥ ೩೬೪
(ಅನಂತನಾಥಪುರಾಣಂ, ೮–೧೬.)

ಪದಪದನಾಗಿ ಪಾಂಗಱಿದು ಬರ್ದೆಯರಂ ತನಗಾಗುಮಾಡಲಾ
ಱಿದೆಯುಮಲಂಪು ಪೋಗೆ ಕುಡಲಾಱಿದೆಯುಂ ಬಸಮಂ ನಿಮಿರ್ಚಲಾ ।
ಱಿದೆಯುಮದೆಂತೊ ಕೆಮ್ಮನೆ ಕೆಲರ್ ಪುಱುವಾನಿಸರಕ್ಕಟಾ ಚದುರ್
ಚದುರೆನುತಿರ್ಪರಾ ಚದುರದೇಂ ಕರಿದೊ ಬಿಳಿದೋ ಕದಂಬುಮೋ ॥ ೩೬೫

---

[1] ಮಾನುಂ (ಅ). [2] ದೆಂ ನಾಲದೇ ತಂದು (ಅ). [3] ಬಂದಂ ತಳ್ಪಿದಂ ಚುಂಬಿಸಿದನೊಲದು (ಅ). [4] ದೆಯೆಂ (ಅ). [5] ಸುವೆನಾನುಱುತುಂ ಮೊಗಮಿವನಂತವಂ (ಅ). [6] ಪಂಟಿ (ಅ).

ಇತ್ತೊಡೆ ಬೇಟವೀಯದೊಡೆ ಕಾಟಮದುಂ ಬೆಲೆವೆಣ್ಗೆ ಬಾಟುಕಂ
ಬತ್ತುವ ಬೇಟಮಂ ಸುಡು ಪರಾ[1]ಕಿ[1]ಯ ನೋಂಪಿಯ ಗಂಡ[2]ರಿರ್ವರೊಳ್[2] ।
ಕತ್ತುರಿ ಕಪ್ಪುರಂ ತೊಡಿಗೆ [[3]ನಾಱು[3]]ವದಂಬುಲವಚ್ಚವಾಸಿಗಂ
ನುತ್ತುವ ಬಣ್ಣಸಣ್ಣಮಿವು ಬೇಟದ ಕೂಟದ ಸುಗ್ಗಿ[4]ಯಲ್ಲವೇ[4] ॥ ೩೬೬

(ಅನಂತನಾಥಪುರಾಣಂ, ೮-೪೮.)

ಹರ[5]ದನ[5] ಬ[6]ಡ್ಡಿ[6]ಗೊಚ್ಚೊಡವೆ ರಾಜಕುಮಾರನ ತೇಜದೇಳ್ಗೆ ನಾಣ್
ಬಿರುದನ ಚಿತ್ರವಿದ್ಯೆ ಕವಿಪಂಡಿತರೋದಿನ ಕೊಂಕು ಚೆನ್ನಪೊಂ ।
ಗರ ಕುಡಿಮುಂಜೆಱಿಂಗು ನಿಡುಬೈತಲೆ ಬಾಪ್ತೆಯೆ ತೋರ್ಪೊಡಂತವಂ
ಕರಹದ ಸೂಳೆ ಸುತ್ತುವಳೊ ಕುತ್ತುವಳೋ ಮನೆವಾರ್ತೆ[7]ಗೆಯ್ವ[7]ಳೋ ॥ ೩೬೭

(ಅನಂತನಾಥಪುರಾಣಂ, ೮-೪೯.)

ಸೂಳೆಯರ್ಗುಳ್ಳುದೇನೆಲವೊ ಕೂರದೊಡಂ ಕಡುಗೂರ್ತರಂದದಿಂ
ಮೇಳಿಸಿ ಗಂಡರಿಂ ಪಡೆವುದರ್ಥಮನಲ್ಲದೊಡೆಮ್ಮ ಪೆರ್ಮೆಗಂ ।
ಪಾಳಿಗವೊಲ್ದು ಕೊಟ್ಟಪರೆ ಕೂರ್ತೊಡಮೇಂ ಬೆಲೆವೆಣ್ಗೆ ಬೇಟಮೇಂ
ತಾಳದಮಕ್ಕುಮೋ ಕಟುವೆಯೋಗರಮಕ್ಕುಮೊ ತುಪ್ಪಮಕ್ಕುಮೋ ॥ ೩೬೮

(ಲೀಲಾವತಿ, ೨-೫೭.)

ಹರದಂ ಲೆಕ್ಕಿಸುವಂ ಧರಾಧಿಪತಿ ತೇಜಂದೋಱುವಂ ನಂದ ನಾಣ್
ಬಿರುದರ್ ಕಿತ್ತಲಗೆತ್ತಿ ಸೀವರಿಸುವರ್ ವಿದ್ವಾಂಸನೋದಿಂಗೆ ಬೋ ।
ನರಿಸಲ್ ಪೋಂದುವನೊಳಿಗಕ್ಕೆ ನಡೆವಾತಂ ಸಲ್ಗೆಯಂ ಪೇೞನೀ
ಪರಿ ತಾ ಲೋಭದ ಜಾತಿಯಿಚ್ಚೆಯಱಿದೀವಾತಂ ವಿಟಂ ಸದ್ವಿಟಂ ॥ ೩೬೯

ಎತ್ತಿದ ಬರ್ದೊ ಮೇಣ್ ಬದಗೊ ಪೇೞಿಮಿದೀಕೆಯ ಕೂರ್ಪೊ ಮೆಲ್ಪೊ ಚಿ
ಕ್ಕೊತ್ತೆಗೆ ಕೊಟ್ಟವಂ ಕುಡುವನಾಗಳೆ ಪಕ್ಕೆಗೆ ಪಕ್ಕೆಗರ್ಥಮಂ ।
[8]ತೆ[8]ತ್ತನೆ ನಣ್ಪಿನೊಳ್ ನಡೆವನಾ ಕಡುನಣ್ಪಿನ ಗಂಡನೋಹಿಯೊಳ್
ಪತ್ತುವ ನೋಹಿಗಿತ್ತವನೆ ಸಜ್ಜನಕಿತ್ತ[9]ವ[9]ನೆಂದು ಸುತ್ತುವಂ ॥ ೩೭೦

(ಲೀಲಾವತಿ, ೨-೭೨.)

ಬಿಯಮಂ ಬೇಡಿತನೀವರಗ್ಗದ ಬೊಜಂಗರ್ ಕೂರ್ತು ಕಣ್ಗಾಣದೊ
ತ್ತೆಯಮೇಲೊತ್ತೆ ಬರುತ್ತಮಿರ್ಪುದುಟಿದರ್ ಫೊಕ್ಕಾವಗಂ ಕೊಟ್ಟು ಕೋ ।

---

[1] ತಿ (ಅ). [2] ರೀವಕಳ್ (ಅ), [3] ವಾರ (ಕ.ಖ). [4] ಯೆನ್ನಿರೇ (ಅ).
[5] ಹ (ಖ.ಬ). [6] ಚ್ಚೆ (ಖ.ಬ). [7] ಗೀವ (ಅ). [8] ದಿ (ಖ.ಬ). [9] ಪೆ (ಖ.ಬ).

ಟಿಯುಮಂ ಕಾದೊಡನಿರ್ಪರಿಲ್ಲ ಪಡಪಿಂದೀ ಕೇರಿಯಂ ಬಿಟ್ಟು ಸೂ
ಳೆಯರೆಲ್ಲಂ ನೆರೆಪಳ್ಳಿಪೋದರಿವಳೀ ಮಾಧುರ್ಯಮಿನ್ನೆಂತುಟೋ ॥ ೩೭೧
(ಲೀಲಾವತಿ, ೨–೭೪.)

ಮನೆವಾಟ್ ಸಲ್ಪುದು ಕಾಮಧೇನು ಕಱುದಂತೊಲ್ದೀಯಲುಂ ಬಿಚ್ಚತಂ
ಮನೆವಾಟ್ ಸಲ್ಪುದು ಕಾಮದೇವನಳಿಯಂಬೊಕ್ಕಂತೆ ಸನ್ಮಾನದಿಂ।
ಮನೆಯುಂ ಮಕ್ಕಳುಮೊಪ್ಪುತಿರ್ಪುದು ಬನಂತಂ ಭಾವನಾದಂತೆ ಕಾ
ಮಿನಿಯಂ ನೋಂತಳೆ ದಲ್[1] ಮಗಳ್ ಪಡೆದಳೀಸಾ[2]ಭಾಗ್ಯೆಯಂ ಭಾಗ್ಯೆಯಂ॥೩೭೨
(ಅನಂತನಾಥಪುರಾಣಂ, ೮--೨೪)

ಏಱಿದ ಜವ್ವನಂ ನಸು ಬಟಲ್ದುದು ಬೇಟದ [2]ಬೇಗೆ[2]ಯಿಂದೆ ಬೆಂ
ದಾಱಿದುದ್ಯೆದೆ ಚಿತ್ತಮತಿಚಿತ್ರ[3]ರತಂ[3]ಗಳೊಳಿಚ್ಛೆಯಾಗಳುಂ।
ನೀಱರನೀಗಳಾಯ್ದೊಸುತಿರ್ದ[4]ಪು[4]ವೀಕೆಯ ಕಣ್ಗಳೀಕೆ ಕಾ
ಯ್ದಾಱಿದ ಪಾಲವೊಲ್ ಸವಿಯನಿನ್ನುಪಭೋಗಿಸಲಾರ್ಗೆ ಮಾಡಳೋ ॥ ೩೭೩
(ಲೀಲಾವತಿ, ೨–೯೦.)

ಧನಮುಳ್ಳನುಮಿಲ್ಲದನುಂ
ಮ[5]ನದಾ[5]ಣ್ಮನುವೊತ್ತೆಯಾಣ್ಮನುಂ ನೆರೆವೆಡೆಯೊಳ್।
ತನಗೆ[6]ಸರಿ[6]ಯೆನಿಪ ಬರ್ದಿನ
ವನಿತೆ[7]ಗೆ ಸಲೆ[7]ಸಂದುದುಚಿದರೊಳ್ ಸಂದಪುದೇ॥ ೩೭೪
(ಲೀಲಾವತಿ, ೨–೮೨.)

ಪಣಗೊಳ್ವಳ್ ಚೆಲ್ಲದಿಂದಂ ಚದುರನ ಚದುರಂ ಸೇಸೆಗೊಳ್ವಳ್ ರತಂ ತೋ
ರಣಮೆಂಬಂ[8]ತಿಕ್ಕಿ ಗೆಲ್ದುಬ್ಬಸದ ಬೆ[8]ಸನಿಯಂ ಕೂರ್ತನಂ ತೊಂಡಿನಿಂ ಕುಂ।
ಟಣಿ ಮಾಬ್ಪಳ್ ಕೇಣದಿಂ ನಾಣೊಡೆಯನನೆಡೆಯೊಳ್ ನಿರ್ಧನಂ ಮಾಬ್ಪಳಿಂತೀ
ಗಣಿಕಾಸಂದೋಹದೊಳ್ ತೇಪೆಯೆ ಪುರುಷಗುಣಶ್ರೀಗಳಗ್ರಾ[9]ಹಿಯ[9]ಲ್ತೇ॥ ೩೭೫
(ಲೀಲಾವತಿ, ೨–೯೭.)

ತೀಡುವ ಗಾಳಿಯಂ ಪಿಡಿದು ನೋಡುವ ಸಿಂಗಮನಾಗಳಂತೆ ನಾಯ್
ಮಾಡುವ ಬನ್ನಮೇಲೆ ಬಯಲಂಗವನಾಡುವ ಬೆಟ್ಟನಣ್ಣಕ
ಲ್ಲಾಡುವ ಚಂದ್ರನಂ ಪಿಡಿದು ಸೂಡುವ ಬೊಮ್ಮನನಾದೊಡಂ ಮರುಳ್
ಮಾಡುವ ಕಾಳುಗುಂಟಣಿಯರಾರುಮನೇಳಿಸಿ ಕಾಡದಿರ್ಪರೇ ॥ ೩೭೬

---

[1] ಸಜ್ಜನಚಿಂತಾಮಣಿಯಂ (ಅ). [2] ಬೆಂಕಿ (ಅ). [3] ತರಂ (ಖ.ಬ). [4] ದೀ (ಖ.ಬ). [5] ನೆಯಾ (ಖ.ಬ). [6] ಮನೆ (ಖ.ಬ). [7] ಯರೊಳ್ (ಖ.ಬ). [8] ತೀಗ ಸೋಲೊರ್ಬಸದಬ (ಅ). [9] ಹ್ಯಮ (ಖ.ಬ).

ಪೆಣಕಟಲಾರ್ಪರಾರ್ ಪೆಣಕೆ ಬಾಯಣಮುಳ್ಳೊಡೆ ಪೋದ ಜೀವಮುಂ
ಪಣಮೆನೆ ಬರ್ಕುಮಂತರದಿನೊಯ್ವ ಜವಂ ಪಣಮುಳ್ಳೊಡೊಯ್ವ ಕುಂ।
ಟಣಿಯರನೊಯ್ಯಲಾಱಿನಣಮೆಂಬಣದಾರಕೆ ಸಂದ ಲೋಭಿಗುಂ
ಟಣಿಯರನಾವ ದೈವ ಮುಱುಗುಂ ನೆಱಿಯಲ್ಕವರಂತು ಗಂಡರಾರ್ ॥ ೩೭೭

ಆರಿವುದು ಮೂಗನಿಕ್ಕುಟೊಳೆ ಕೀಟ್ವುದು ಪಲ್ಗಳನೇಟು ಬಟ್ಟೆಯಾ
ಗಿರೆ ಕಿಱಿದೆಂಟು ನೂಪ್ ಬಗಟಿ ಕೊಯ್ವುದು ಮಂಡೆಯನುಟ್ಟ ನೀರೆಯೊಂ
ದರೆಪೊದೆದಿರ್ದುದಂ ಸುಲಿದು ಕೊಳ್ವುದು ಕುಂಟಣಿಯಂ ಕುಟುಂಬದೊಳ್
ನೆರಪುವುದಲ್ಲದಂದು ಮುದುದೊತ್ತಿರ ಬಾಧೆಯೊಳಾರೊ ಬರ್ದಪರ್ ॥ ೩೭೮

ಕರೆಯದೆ ಕಾಡಿ ಕಂಟಿಸುವ ಕುಂಟಣಿಯಂ ನೊಣಗಚ್ಚಿ ತಿಂಗೆ ಬಿಂ
ಗಿರಿಟಿ ಬಳಾರಿ ಬಾಧಿಸುಗೆ ಚಂಡಿಕೆ ನುಂಗುಗೆ ಮಿಟ್ಟು ಕೂರ್ತು ಗು।
ಕ್ಕರಿಸುಗೆ ಕಾ[1]ಳಿ ಕೊಳ್ಗೆ [1]ಱಿಯಪಂ ಮುಱುದಿಕ್ಕುಗೆ ಮಾರಿ ಭೈರವಂ
ಹರಹುಗೆ ಮೇಳೆಯಂ ಪಿಡಿಗೆ ಮಾಳಚಿಗಾಂ ಪೊಗವಾರವೆತ್ತುವೆಂ ॥ ೩೭೯

(ಲೀಲಾವತಿ, ೨–೧೦೬.)

ಮಾರಿ ಹೊಡೆದುಣ್ಗೆ ಕನ್ನೆಕು
ಮಾರಿಗೆ ಕುಱಿಯಾಗಿ ಬೇಳ್ಗೆ ಸಿಡಿಲೆಱಿಗುಗೆ ರೌ।
ದ್ರೋರಗನೊರ್ಮೆಯೆ ನುಂಗುಗೆ
ಬಾರಿಸಲಾ ಬಿರುದ ನುಡಿವ ಮುದುಗುಂಟಣಿಯಂ ॥ ೩೮೦

ಭಾವಿಪ ಸೇವಿಪಾದರಿಪ ಪೇಳಿಪ ಮೇಳಿಪೊನಲ್ವ ಗೆಲ್ವ ಸೋ
ಲ್ವಾವರಿಪೇವಮಂ ಪಡೆವ ಪೊತ್ತಿಪ ಜೊತ್ತಿಪಟಲ್ವ ನೇಲ್ವ ಮಾ
ಯಾವಿಗಳಪ್ಪ ಮುತ್ತ ಮುದುಗುಂಟಣಿಯರ್ಕಳ ಕೃತ್ರಿಮಂಗಳಂ
ಭಾವಕಚಕ್ರವರ್ತಿ ಕವಿಕೇಶವದೇವನೆ ಬಲ್ಲನುರ್ವಿಯೊಳ್ ॥ ೩೮೧

ಇಟಿದೇಟುಮೊಟಂ ಗಂಡರೊ
ಳಟಿಪೆಂಬುದು ತನಗೆ ಮುತ್ತ ಮುದುಗೊಂಟಣಿ ತಾಂ।
ಕಟಿವಣ್ ಮುತ್ತದ ಪಣ್ತೆಲೆ
ಪಟವಱುಗೋಲ್ ಪಱುದ ಭೇರಿ ನೀರ್ ತೆಗೆದ ಕೊಳಂ ॥ ೩೮೨

ನಗುವೊಡೆ ಪಲ್ ಕಟಲ್ದ ಪುವು ಡೊಳ್ಳಿನೊಳಪ್ಪುವ ಗಂಡರಟ್ಟಪರ್
ಪುಗುವೊಡೆ ಪಾನಲುಂ ಪೊದೆಯಲುಂ ಮೊಲೆ ಸಾಲ್ವುವು ನಿದ್ರೆಯಲ್ಲಿ ಮೆ।

---

[1] ಳೆಕೊಳ್ಗೆ (ಖ).

ಲ್ಲಗೆ ತೊಡೆಮೇಲೆ ಬೀಜ ಮಹನಾಮಿ ಬೊಜಂಗತನಕ್ಕೆ ನೋಡೆ ನೂ
ಳಿಗೆ ಕೊಡವೇಳ್ದರೀ ಪಟಬಳಾರಿಗೆ ಕೊಟ್ಟನದೊರ್ವನೊತ್ತೆಯಂ ॥ ೩೮೩

ಕಟ್ಟಿದ ಪಲ್ಗಳಿಚ್ಚೆಡೆಯ ಕೀಱಿಗಳಿಂ ಕೊಡೆನಾರ್ವ ಬಾಯ್ ಸುರು
ಳ್ದೊಟ್ಟಿದ ರೇಜೆ ಬಿಟ್ಟು ನಿಱಿಗೊಂಡ ಕುಚಂ ನಱಿಗೊಂಡ ಪೆರ್ಬನಿಱಿ
ಬಿಟ್ಟ ಪುಗೆಟ್ಟ ತೋಳ್ ತೊಡೆ ತೆರಳ್ದ ಮೊಗಂ ನರೆ ಮತ್ತೆ ಮಾಣಳೀ
ಬಚ್ಚೆಯ ಚಿಕ್ಕಣಿಕ್ಕೆ ಪೊಸ ಬರ್ಬರ ಸೂಳೆಯರಾಳಿಗೊಂಬುದಂ ॥ ೩೮೪

ಕಾವುದು ದೇವ ಯಾಚಕನನಂಜದಿರಂಜದಿರೇಕೆ ನೇಲ್ವ ತೋ
ಳ್ವಾವಲೊ ಮತ್ತವಾರಣದ ಸೊಂಡಿಲೊ [1]ಕೋ[1]ದೆರ್ದೆವುತ್ತಿನಿಂದೆ ಪೆ।
ರ್ಬಾವೆರಡೊಡ್ಡುಗೊಂಡು ಪೊಱಮಟ್ಟವೊ ಪೋದೊಡೆ ಪೊಯ್ವುವೆನ್ನನೋ
ವೋವತಿಭೀತಿಯಾದಪುದು ಸೂಳೆಯ ಸೋರ್ಮೊಲೆಗಂಡು ಭೂಪತೀ ॥ ೩೮೫
(ಲೀಲಾವತಿ, ೨–೧೦೮.)

ಪಿಡಿ ನಡೆಯೊತ್ತೆಯೇಂ ನಿನಗೆ ನೀನೊಲಿದಿತ್ತುದೆ ತೋಱಿ ಸೂಳೆಯಾ
ವೆಡೆ ಸುಡು ಕಾಣ ಕಣ್ಣೊಡೆದುವೇ ಹರೆಯಂ ಪಿರಿದಬ್ಬೆ ನೀಮುಮೇಂ।
ಪಡುವಿರೆ ಮೂರ್ಖ ಮುಪ್ಪೆ [2]ಮನಕಂ ನಿಮಗಂ[2] ಪೊಸವೆಂಡಿರಿರ್ದವೋಲ್
ಕುಡುವರೆ ಕಾಯ್ಗಳಿಂದಱಿಯ ಪಣ್ಣಿನ್ನಿದೆಂಬುದ[3]ನೆಯ್ದೆ ಲೋಕದೊಳ್[3] ॥ ೩೮೬
(ಲೀಲಾವತಿ, ೨–೧೨೫.)

ಇದು ಚಿತ್ರಂ ಮೃದುಪಾದಪಲ್ಲವದ ಮೆಲ್ಪುಂ ನೋಟ್ಪೊಡೀ ಕೇಶಪಾ
ಶದ ನೀಳ್ಪುಂ ಮೊಲೆಯಲ್ಲಿ ಲೋಚನದ ಬೆಳ್ಪುಂ ಮಧ್ಯದಲ್ಪತ್ವಮ
ಪ್ಪುದ[4]ದಿಂತೀ ಮುಡಿಯಲ್ಲಿ ಮಾನಿನಿ ಕರಂ ಲಾವಣ್ಯವಾರಾಶಿ ಬ
ತ್ತಿದೊಡಂ ಮೇಣ್ ತೆರೆ ಕಾಣಲಾದಪುದದೇಂ ನಿನ್ನೊಂದು ಸಾಮರ್ಥ್ಯಮೋ ॥

ಅಡರ್ದ ಕುಚದ್ವಯಂ [5]ಲಲನೆ[5] ಬಿ[6]ಟ್ಟು [6]ವಿವೇಕನೆ ಬರ್ದೆಯೆಂದಳಿಂ
ತಡಿಗಡಿಗೋಪ ನೀಂ ಸರಸಕಾಮನಿವಾಸದೊಳಿಟ್ಟ ಕೈಯನಿಂ॥
ಪಿಡಿದಿರೆ ತಮ್ಮೊಳಿಟ್ಟುನವಿದೋಱಿದ ದೂಸಱಿ[7]ನಿಂ[7]ದಹರ್ನಿಶಂ
ಕೆಡೆದಪುವಲ್ಲಿಗಾ ನವಿಗೆ ಪೆರ್ಮೊಲೆಯಲ್ಲದೊ[8]ಡೇಕೆ ಬಿಟ್ಟುವೋ[8] ॥ ೩೮೭
(ಲೀಲಾವತಿ, ೨–೧೦೯.)

ಮೊಲೆಗಳ್ ಬಿಟ್ಟುವಿದೊಪ್ಪದೆಂದು ಮನದೊಳ್ ಕಂಡಿರ್ದಳಿಲ್ಲೆಯ್ದೆ ಮುಂ
ದಲೆ ಬೆಳ್ಪೇಱಿದುದೆಂದು ನೊಂದು ಮನದೊಳ್ ಬತ್ತಿರ್ದಳಿಲ್ಲಂತು ಮು।

---

[1] ಕಾ (ಅ). [2] ಧನವಂನಿಮಗೀ (ಅ). [3] ನಣ್ಣಕಾಣೆರೇ (ಅ). [4] ನಿಂ (ಖ.ಬ). [5] ದಯಿತೆ (ಅ). [6] ರ್ದು (ಅ). [7] ನೊಂ (ಅ). [8] ಡಿಂತು ಬೀಟ್ಗುಮೆ (ಅ).

ಸ್ಪಲೆದಾರ್ಪಂದವೋಲಾಗಿ ಮತ್ತಮೆನಗಂ ತಾಂ ಮೇಳಮಂ ತೋರ್ಪ ನಾ
ಣಿಲಯಂ ನೋಡವೊ ವೃದ್ಧೆಗೆನ್ನ ದೊರೆಯರ್ ಮೊಮ್ಮಕ್ಕಳಿಲ್ಲಾಗದೇ ॥ ೩೮೯

ನಂಬಿಸಲಾನೆ ಬಲ್ಲೆನಿದಿರಂ ಧನಮಂ ಪಡೆದಾನೆ ಬಲ್ಲೆನಿ
ನ್ನೆಂಬುದೆ ಲಜ್ಜೆ [1]ಹಾಗದ ಪಸುರ್ಮಣಿಯಂ ತೊಡವಿಲ್ಲದಂತು[1] ಬಾಯ್[1]।
ತಂಬುಲಮೆಂಬುದಂ ಪಡೆಯದಂತುಟೆ ಮಾಱುಡೆಗಾಣದಂ[2]ತುಮ[2]
ಟ್ಟುಂಬರಿಗೊಂಡು ತೇದಪುದು [3]ಬೇಟಮೊ ಪೇಟಿದು ದೈವಕಾಟಮೋ[3]॥ ೩೯೦
(ಲೀಲಾವತಿ, ೨–೧೧೬)

ನತೊಡೆ ಪೋಕುಮಲ್ಲದೆಡೆಯೊಳ್ [4]ಕಡಿವೋಕುಮೆ[4] ಬೇಂಟ[5]ವಕ್ಕ[5] ಬೇ
ನತೊಡೆ ಮತ್ತೆ ಲಜ್ಜೆ ಗಡ ಮತ್ತೆ ಚಲಂ ಗಡ ಮತ್ತೆ ನಾಣ್ ಗಡಂ।
ಮತ್ತೆ ಬೊಜಂಗಗೊಟ್ಟಿ ಗಡ ಮತ್ತೆ ಸೊಗಂ ಗಡ ಮತ್ತೆ [6]ತಾ[6]ಯ್ ಗಡಂ
ಮತ್ತೆ ಬರ್ದುಂಕುವಾಸೆ ಗಡ ಪೇಟಿದು ಬೇಟಮೊ ದೈವಕಾಟಮೋ ॥ ೩೯೧
(ಲೀಲಾವತಿ, ೨–೧೧೯.)

ಮನೆ ಹೊಱಗಿಕ್ಕಿ ಕೇರಿ ನಗೆ ನಕ್ಕರೆ ನಾಣಿಲಿಯೆಂದು ದೂಱಿ ನಾ
ಣನೆ ತೊಱಿದಾರುಮಂ ತೊಱಿದು ನಂಟರ ನಲ್ಲರ ಮಾತುಗೇಳದೋ।
ಪನೆ ಪರಮಾತ್ಮನೋಪನೆ ಮನೋಭವನೋಪನೆ ದೈವಮೆಂದು ಬೆ
ನ್ನನೆ ಬರೆ ತನ್ನನೊಲ್ಲನಿದ ನೋಪ್ಪೊಡೆ ಬೇಟಮೋ ದೈವಕಾಟಮೋ ॥ ೩೯೨

ಕಡು ಮುಳಿದಿರ್ದ ನಲ್ಲನಿದಿರಂ ಬರೆ ನಲ್ಲಳ ಬಾಯ ತಂಬುಲಂ
ಪುಡಿಯಿಡವೇಟ್ಕು ಮೈ ಬೆಮರವೇಟ್ಕು ಮೊಗಂ ಕಿಱಿದಾಗವೇಟ್ಕುಮೊ
ಳ್ನುಡಿ ತೊದಳಾಗವೇಟ್ಕು ನಡನೋಡುವ ದಿಟ್ಟಿ ಕಲಂಕವೇಟ್ಕು ನಾ
ಣ್ದೆಡೆ ತಲೆದೋಱವೇಟ್ಕುಮಿನಿತಿಲ್ಲದೊಡೊಲ್ಮೆಯನಿಕ್ಕು ಕಿಚ್ಚಿನೊಳ್ ॥ ೩೯೩

ಕಟಿವದನಾದ ಮಚ್ಚು ಗಱಿಗಟ್ಟಿದ ಮೆಲ್ಲೊಳಗಾಱಿದಾಸೆ ಮೈ
ಯಟಿಪದ ಸೋಂಕು ಸಂದುದೆಱಿದಪ್ಪುಗೆ ಬಾಯ್ ಸವಿಗೆಟ್ಟ ಚುಂಬನಂ
ಪಟಿಸಿದ ಮಚ್ಚುಮಗ್ಗಲಿಪ ನಾಣ್ಣುಡಿಯುಂ ಸತಿಗಾಗೆ ಬೇಟದಿಂ
ಪಟಿದಟಿನಣ್ಪಿನೊಳ್ ತೊಡರ್ದು ನೇಲ್ವವನೆಗ್ಗಿನ ಸುಗ್ಗಿಯಲ್ಲನೇ ॥ ೩೯೪

ಏಗೆಯ್ವೆನೆಂಬ ಚುಂಬನ
ವಾಗುಳಿಸುತ್ತಪ್ಪವಪ್ಪ ಪದನಿಲ್ಲದ ಸಂ ।

---

[1] ಪಚ್ಚೆಯ ಪಸುರ್ಮಣಿಯಂ ಕುಡಲಲ್ಲದಂತು (ಅ). [2] ತಿರ (ಅ). [3] ಬೇಟಮಿ ದೆನ್ನಯ ಪಾಪಮಲ್ಲದೆ (ಅ). [4] ಬಿಡೆಪೋಕುಮೆ (ಖ.ಬ). [5] ಕ್ಕೆ (ಖ.ಬ). [6] ಮೆ (ಖ.ಬ).

ಯೋಗಂ ಸಾಲದೆ ವಿಟನಂ
ಪೋಗೆಂದುಂ ಪುಯ್ಯಲಿಡುವಳೇ ನೂಂಕುವಳೇ ॥ ೩೯೫

ಮನಮದು ಮನದನ್ನನ ಬೆ
ನ್ನನೆ ಪೋಗಿರೆ ತನ್ನ ಬಸನದಿಂ[1]ದವಳೊಳ್ಪಂ[1] ।
ಮನಮಂ ಬಿಡೆ ಬಳೆಯಿಪ ಬೆ
ಳ್ತನಮಿದು ಪಾಟ್ಮನೆಗೆ ಬಾಯಿನಂಗುಡುವಂದಂ ॥ ೩೯೬
(ಚಂದ್ರಪ್ರಭ ಪುರಾಣಂ, ೮–೫೯.)

ಆರ್ದ್ರವನಿತಂಬಮನಿಶಂ
ನಿದ್ರಾಂಕಿತ ಮುಕುಳನಯನವನ್ಯತಾಲಾಪಂ ।
ಮುದ್ರಿತವದನಂ ವಿಟಜನ
ಹೃದ್ರೋಗಂ ಕಪಟಕಾಮಿನೀಸಂಯೋಗಂ ॥ ೩೯೭

ಅಮೃತದ ಕಂಡನಕ್ಕರೆಯಕೂಟ[2]ಮುಮೊಲ್ಪಳ್[2]ಕೂಟಮುಂ ಸಮಾ
ನಮೆ ವಲಮೊಲ್ಲ[3]ದಳ್ಗೆ ವಿಟನೇ[3]ಟವಿಟಂ ಬರೆ ಕೂಟಮಿಂಪನೀ ।
ಗುಮೆ ಬೆಲೆ[4]ಗೊಂಡೆ[4]ನಾಂ [5]ಬೆಲೆಗೆ ಮೆಯ್ವೆಲೆ ಮೆಯ್ ನಲಿದಿತ್ತೆ [5]ನೆಂಬ ಕೂ
ಟಮನದನೊಂದು ಕೂಟಮೆನಲಕ್ಕುಮೆ ನಂಜಿನ ಕಾಳಕೂಟಮಂ ॥ ೩೯೮
(ಕಾವ್ಯಾವಲೋಕನಂ, ೧೪೪.)

ಬೆಲೆ ತಲೆಯುದ್ದಮಿಲ್ಲವನರಂ ಮನೆವೊಕ್ಕೊಡೆ ಸೂಳೆಬಂಟರ
ಗ್ಗಲಿಸಿದ ಮಾತೆ ಪಕ್ಕೆದಲೆಯೊಳ್ ವಿಷಮಂ ರತಿ ವಾರನಾರಿಯೊಳ್
ಬೆಲೆ ಖರ ತುಚ್ಛವುಂಟವನರಂ ಮನೆವೊಕ್ಕೊಡೆ ಪೊಕ್ಕನಿಚ್ಛೆಯ
ಗ್ಗಲಿಸಿದ ಮಾತೆ ಪಕ್ಕೆದಲೆಯೊಳ್ ವಿನುತಂ ರತಿಯಿಲ್ಲ ಮಿಂಡಿಯೊಳ್ ॥ ೩೯೯

ಕಾಲ ಪಳಂಚನುಂಗುರದ ಮುತ್ತಿನ ಹಾರದ ಚೆನ್ನನಪ್ಪ ಹೊ
ನ್ನೊಲೆಯ ವಜ್ರದುಂಗುರದ ಕಂಕಣದೊಳ್ಪನೆ ತೋಱಿ ಪೋಪರಾ ।
ಬಾಲೆಯರೇವರೊಲ್ದೊಲಸಿ ಪತ್ತಿಸಿ ಚಿತ್ತಮನಿಂಬುಗೆಯ್ವ ಕೀ
ಸೋಲೆಯ ಕಾಚನುಂಗುರದ ಚುಂಚಯ ಬಂದಿಯರೆಮ್ಮ ನಲ್ಲೆಯರ್ ॥ ೪೦೦

ಹಸನಹ ರೂಪು ತಕ್ಕ ಹರೆಯಂ ಕಡು ಚೊಕ್ಕಳಿ ಜಾಣ್ ಹಕ್ಕಿಪೊಲ್
ಕೊಸರುವ ಲಾಗು ಕೂಡಿ ತಣಿವಿಲ್ಲದ ಬಾಕುಳಿ ಗಂಡರಿಚ್ಛೆಯಂ

---

[1] ದೊರ್ವಳ್ಸಂ (ಬ). [2] ಮದೊಲ್ದಳ (ಖ.ಬ). [3] ದಂಗನೆಗೆನೇ (ಖ).
[4] ಯಿತ್ತೆ (ಖ.ಬ). [5] ನಿನಗೆ ಮೆಯ್ವೆಲೆಯಂ ಮಿಗಿಲೀವೆ (ಖ.ಬ).

ಪೊನಯಿಪ ಬೇಟಮಂ ಬೆಳಸುವಿಚ್ಚೆಯ ಜತ್ತಕಿ ತಾನೆ ಲೋಕದೊಳ್
ಬಸನದ ಬಿತ್ತೆನಿಪ್ಪೊಡಗೂಡಿದೊಡಲ್ಲದಲಂಪು ಪೋಪುದೇ ॥ ೪೦೧

ತೆಱನಱಿದೀವ ಕಾರ್ಯವಱಿದಂಜುವ ನೋಂತಱಿದಿಂಬುಗೆಯ್ವ ಮಾ
ತಱಿದುಚಿತೋಕ್ತಿಯಂ ನುಡಿವ ಮುಂದಱಿವಲ್ಲಿಗೆ ಕೊಟ್ಟು ನೋಟ್ಪ ಕ।
ಣ್ಣಱಿದೆರ್ದೆಗೊಳ್ವ ಚಿತ್ತವಱಿದಾಲಿಪವೂರ್ಜಿತಬುದ್ಧಿಯಲ್ಲದಿಂ
ಬಱಿಯದ ಗಾವಿಲಂಗೆ ದೊರೆಕೊಳ್ವರೆ ಸೂಳೆಯರೆಂಬ ಡಾಳೆಯರ್ ॥ ೪೦೨

ಒದವಿದ ಕೂರ್ಮೆಯಿಲ್ಲದಳಿಪಾರಯಮಿಲ್ಲದ ಪಾಳಿ ರಾಗಮಿ
ಲ್ಲದ ಸುಸಿಲಬ್ಕಱಿಲ್ಲದ ಸೊಗಂ ನೆವಮಿಲ್ಲದ ಕಾಯ್ಪು ಬೇಂಟಮಿ।
ಲ್ಲದ ಪುರುಡೇವಮಿಲ್ಲದಬಲುಬ್ಬೆಗಮಿಲ್ಲದ ಕಣ್ಣನೀರ್ ಕರಂ
ಚದುರರುಮಂ ಮನಂಗೊಳಿಪುದೇಂ ಕಡುಜಾಣೆಯರೋ ಲತಾಂಗಿಯರ್ ॥೪೦೩

(ಆದಿಪುರಾಣಂ, ೧೨–೪೬.)

ಆರೆಬರಿದಚ್ಚಮಲ್ಲಿಗೆಯ ಚೊಲ್ಲೆಹಮಿಕ್ಕಿದ ಮಿಂಚಿನೋಲೆ ಕಂ
ಡರಣೆಯ ಬೊಟ್ಟು ಕಪ್ಪುರದ ಮೂಗುತಿ ಮುತ್ತಿನ ಗಾಜುಗೊಪ್ಪ ಪಾ।
ಲ್ನೊರೆಯವೊಲಪ್ಪ ಪಟ್ಟಣಿಗೆ ಚಂದನದಣ್ಪು ಬೆಡಂಗುವೀಱೆ ನೋ
ಟ್ಪರ ಬಗೆ ಬೆಳ್ಳನಪ್ಪಿನೆಗಮೊತ್ತೆಗೆ ನಿಂದಳದೊರ್ವಳೊಪ್ಪಿದಳ್ ॥ ೪೦೪

ತನುಲತೆ ಶೋಭೆಯಂ ತಳೆದು ನಿಲ್ವಿನೆಗಂ ಮುಖಲಕ್ಷ್ಮಿ ಪೂರ್ಣಚಂ
ದ್ರನನಿಳಿಕೆಯ್ದು ನಿಲ್ವಿನೆಗಮಾಭರಣ ಪ್ರಭೆಗಳ್ ಪೊದಟ್ಟು ನಿ ।
ಲ್ವಿನೆಗಮಪಾಂಗಮಾಲಿಕೆ ವಿಜೃಂಭಿಸಿ ನಿಲ್ವಿನೆಗಂ ಮನೋಭವಂ
ನನೆಗಣೆದೊಟ್ಟು ನಿಲ್ವಿನೆಗಮೊತ್ತೆಗೆ ನಿಂದಳದೊರ್ವಳೊಪ್ಪಿದಳ್ ॥ ೪೦೫

ಕತ್ತುರಿಯಡ್ಡಬೊಟ್ಟಿಸೆಯೆ ಮುತ್ತಿನ ಮೂಕುತಿಯೊಪ್ಪೆ ಚುಂಚುಗಳ್
ಕತ್ತರಿವೀಲಿಯಂ ನಯದಿ ಜೋಲ್ದರೆ ಚೊಲ್ಲೆಹಮೊರ್ಮೆ ನೀಱಿರಂ।
ಸುತ್ತುತುಮೊರ್ಮೆ ಕನ್ನಡಿಯನೀಕ್ಷಿಸುತುಂ ಕಡೆಗಣ್ಣೊಳಾಗಳಂ
ದೊತ್ತೆಗೆ ನಿಂದ ವೃತ್ತಕುಚೆಯಂ ನಡೆ ನೋಡಿದನಾ ಕುಮಾರಕಂ ॥ ೪೦೬

ವಿಲಸಿತ ಚಂದ್ರಮಂಡಲಮನೊಪ್ಪಿರೆ ರೋಹಿಣಿಯಪ್ಪಿದಂತೆ ನಿ
ರ್ಮಲ ಮುಖಚಂದ್ರನೊಳ್ ಮುಬುಗಿ ಮುತ್ತಿನ ಮೂಕುತಿ ಲೋಲಲೋಚನೋ।
ತ್ಪಲರುಚಿವಿಭ್ರಮಂ ಭ್ರಮರಸಂಕುಲಮಂ ತೆಗೆಯುತ್ತಮೊಪ್ಪೆ ಕೋ
ಮಲೆ ಮದನಾಗ್ನಿ ಮೂರ್ತಿವಡೆದಿರ್ದವೋಲೊತ್ತೆಗೆ ನಿಂದಳೊಪ್ಪಿದಳ್ ॥ ೪೦೭

ತೊಳಗುವ ಪಾಟಲಾಧರದ ಚಂದನಗಂಧದ ಕೇತಕೀಲಸ
ದ್ದಳನಖದಬ್ಬವಕ್ಕದ ರಥಾಂಗಕುಚಂಗಳ ಭೃಂಗಕುಂತಳಾ ।
ವಳಿಯಲಗರ್ಗಣ್ಣ ಪಲ್ಲವಕರಂಗಳ ಸಂಗತಿವೆತ್ತ ಚೆಲ್ವು ಕಂ
ಗೊಳಿಸೆ ಮನೋಜನಿರ್ಪ ವನಿತಾ[1][ವ][1]ನಮೆಂಬಿನಮೊರ್ವಳೊಪ್ಪಿದಳ್ ॥ ೪೦೮

ಮಿಸುನಿಯ ಕಂಕಣಂ ಪೊಳೆವ ಪೊಂಬಳೆಯೊಪ್ಪುವ ನಾಗಚಂಪಕ
ಪ್ರಸರದ ಜೊಲ್ಲೆಹಂ ಹಳದಿಯಂಬರಮೊಪ್ಪುವ ದೋರೆವಲ್ ಕರಂ।
ಮಿಸುಗುವ ಪುಷ್ಯರಾಗಮಣಿಮುದ್ರಿಕೆಯಿಂದಮಲಂಪುಗೊಂಡು ನಿಂ
ದಸಿಯಳು ಪೋಲ್ತಳಂಗಜನ ವಲ್ಲಭೆಯರ್ಚಿಪ ಪೊನ್ನಬೊಂಬೆಯಂ ॥ ೪೦೯

ಮುತ್ತಿನ ನೂನಕಂ ಮುಡಿದ ಮಲ್ಲಿಗೆಯಿಕ್ಕಿದ ಮಿಂಚಿನೋಲೆ ಮೆ
ಯ್ಪೆತ್ತಿದ ಚಂದನಂ ಸುಲಿದ ಪಲ್ ಕಡೆಗಂಗಳ ಕಾಂತಿ ಕಾಲುಗು।
ರ್ಗೆತ್ತಿದ ಮಿಂಚುವುಟ್ಟ ದುಗುಲಂ ಘನಸಾರದ ಹಾರಮೊಪ್ಪೆ ಬಂ
ದೊತ್ತೆಗೆ ನಿಂದ ವೃತ್ತಕುಚೆ ಮುತ್ತಿನ ಪುತ್ತಳಿಯಂತಿರೊಪ್ಪಿದಳ್ ॥ ೪೧೦

ಕುಡಿವುರ್ವಂ ನಸು ನೀವುತುಂ ತಿಲಕಮಂ ತಿದ್ದುತ್ತುಮಾಸ್ಯಾಬ್ಜಮಂ
ತೊಡೆವುತ್ತುಂ ಕುಟಿಲಾಳಕಾವಳಿಗಳಿಂ ಸೈತೊತ್ತಿ ಚೆಲ್ವಾಗೆ ನೇ
ರ್ಪಡಿಸುತ್ತುಂ ಮದಿರಾಲಸೇಕ್ಷಣೆ ಮದಸ್ತಂಬೇರಮಾಕಾರದಿಂ।
ನಡಪಾಡುತ್ತುಮುಪಾಂಗಣಪ್ರಘಣದೊಳ್ ತನ್ವಂಗಿ ಕಣ್ಗೊಪ್ಪಿದಳ್ ॥ ೪೧೧
(ಶೃಂಗಾರರತ್ನಾಕರಂ, ೨–೫೯.)

ನಗೆಗಣ್ ನೂಸೆ ವಿಲಾಸಮಂ ನಗೆಮೊಗಂ ಲಾವಣ್ಯಮಂ ಬೀಱಿ ನಾ
ವಗಿನುತ್ತುಂ ಕಚಬಂಧಮಂ ಶಿಥಿಲನೀವೀಬಂಧಮಂ ಕಾಂಚಿಯೊಳ್।
[2]ನೆಗಪುತ್ತುಂ ಸ್ಮರಮಂತ್ರದೇವತೆಯವೋಲ್ ಬಾಹಾಲತಾಂದೋಳನಂ
ಬಗೆಯಂ ಬಲ್ಸೆಱೆಗೆಯ್ವೆ ಬಾಲೆ ಮೆಱೆದಳ್ ಲೀಲಾಪದನ್ಯಾಸಮಂ[2] ॥ ೪೧೨
(ಮಲ್ಲಿನಾಥಪುರಾಣಂ, ೮–೬೮.)

ಕರಿಕುಂಭೋರೋಜೆ ಕಂಜಾನನೆ ಮಧುಕರಮಾಲಾಂಶು ಧಮ್ಮಿಲ್ಲೆ ಹಂ[3]ಸೀ[3]
ವರಲೀಲಾಯಾನೆ ಹೇಮೊತ್ತೆಯ ಬೆಲೆಯನೆನಲ್ ಸಿಂಹವಿಕ್ರಾಂತ ರಾತ್ರೀ।

---

[1] ಜ (ಖ.ಬ). [2] ತೆಗೆಯುತ್ತುಂ ಪ್ರಣಯಾನುಬಂಧಮಖಿಲೋರ್ವೀಶಂಗೆ ಶೃಂಗಾರಜೇ।
ಷ್ಟೆಗಳಿಂ ಕಣ್ಗೆಸೆದಿರ್ದುದೆರ್ದು ಕೆಲದೊಳ್ ನಿಂನಿರ್ದ ಕಾಂತಾಜನಂ ॥ (ಅ)
ಅಚ್ಚಿನ ಪ್ರತಿಯಲ್ಲಿಯೂ ಲೈಬ್ರರಿಯಲ್ಲಿರುವ ಮಲ್ಲಿನಾಥಪುರಾಣದ ಮತ್ತೆರಡು ಕೈಬರಹದ ಪ್ರತಿಗಳಲ್ಲಿಯೂ ಈ ಪದ್ಯದ ಉತ್ತರಾರ್ಧವು ಇಲ್ಲಿ ಪುಟದಡಿಯಲ್ಲಿ ಪಾಠಾಂತರವಾಗಿ ಕೊಟ್ಟಿರುವಂತೆ ಇದೆ. ಸೂಕ್ತಿಸುಧಾರ್ಣವದ ಎರಡು ಪ್ರತಿಗಳಲ್ಲಿಯೂ ಮೇಲೆ ಮೂಲಪಾಠವಾಗಿ ಕೊಟ್ಟಿರುವಂತೆಯೇ ಇದೆ. ಇಲ್ಲಿ ಎರಡು ಪದ್ಯಗಳ ಪೂರ್ವಾರ್ಧ ಉತ್ತರಾರ್ಧಗಳು ಸೇರಿ ಹೀಗಾಗಿರಬಹುದೇ ? [3] ಸೆ (ಖ), ನಾ (ಬ).

ಶ್ವರರೋಚಿರ್ಧಾಮ ಕೀರ್ತಿಪ್ರಿಯತಮ ವಿಕಸಚ್ಚಂಪಕಾಮೋದ ಧಾರಾ
ಧರನಾದಾಯೇಂ ಬೆಸಂ ಕುಳ್ಳಿರಿಮೆನೆ ಚದುರಂ ಪೋದನಾಂದೋಳಶೀರ್ಷಂ ॥

ಕೈರವನೇತ್ರೆ ಚಕ್ರಮಿಥುನಸ್ತನೆ ಕೀರವಚಃಪ್ರಯುಕ್ತೆಯಂ
ಭೋರುಹಲಾಸ್ಯೆ ಪೇಟ್ ನಿನಗೆಯೊತ್ತೆ ಯದೇನೆನೆ ಲೋಕಮಿತ್ರ ತಾ ।
ರಾರಮಣಪ್ರಕಾಶ ಖಗವೈರಿವಿಹಂಗಮಸಾಳ್ವ ಅಷ್ಟದಿ
ಗ್ವಾರಣಸತ್ವ ಕುಳ್ಳಿರೆನೆ ತಾಂ ತಲೆದೂಗಿಯೆ ಪೋದನಾ ವಿಟಂ ॥ ೪೧೪

ವನಜಾತಾನನೆ ಪೇಟ್ ಸುಧಾಂಶುಯತ ಕೇಳ್ ಹಂಸಾಂಗನಾಯಾನೆ ಪೇಟ್
ಘನನಾದಾನ್ವಿತ ಕೇಳ್ ಮದದ್ವಿರದಕುಂಭೋರೋಜೆ ಪೇಟ್ ಸಿಂಹಶೌ ।
ರ್ಯನೆ ಕೇಳ್ ಮತ್ತಮದಾಳಿಕಾಕಬರಿ ಪೇಟ್ ಚಂಪಕಾಮೋದ ಕೇ
ಳೆನಲಾ ಕಾಂತೆಯನಂತೆ ಬಿಟ್ಟನದನಿನ್ನೇನೆಂಬೆನಾಶ್ಚರ್ಯಮಂ ॥ ೪೧೫
(ಪುಷ್ಪದಂತ ಪುರಾಣಂ, ೮–೧೧೧).

ಸಂಗೀತೋತ್ಸವ ಜೀವಿತೇಶ ವರವಿದ್ಯಾವಾಸ ಕಾಂತಾಜನಾ
ನಂಗಾಧ್ಯಕ್ಷ [1]ಲ[1]ಸದ್ವಿಲಾಸಗುಣಜಾಲೋಪೇತ ಸತ್ವಾಧಿಕಾ ।
ಶೃಂಗಾರಾನ್ವಿತ ಲೋಕರಕ್ಷಕ ಎನುತ್ತೊರ್ವಳ್ ಮಹಾಪ್ರೌಢೆಯು
ತ್ತುಂಗೋರೋಜೆ ಮರಾಳಯಾನೆ ವಿಟನಂ ಕೊಂಡಾಡೆ ನಕ್ಕಂ ನೃಪಂ॥ ೪೧೬

ತರುವಲಿ ಬೇಡ ಪಿಂಬರೆಯದಂ[2]ಗ[3]ನೆಯಾದೊಡೆ ಬೇಡ ಜವ್ವನಂ
ಗರಗರನಪ್ಪ ಸೊಂಪುತನವುಳ್ಳವ[3]ಳಾ[3]ದೊಡೆ ಬಂದು ಮುಂದೆ ಸಂ ।
ಚರಿಸುಗೆ ನೋಡಿ ಗಾಡಿ ಬಗೆಗೆಟ್ಟುದುದೆ ಬಟಿಕೊತ್ತೆ ಗೊಂಡಪೆಂ
ಪರಮುಖಮಲ್ತು ಮೆಚ್ಚು ಮುಸುಕೊತ್ತೆ[4]ಯೆ[4]ನಿಪ್ಪುದನಿಕ್ಕು ಕಿಚ್ಚಿನೊಳ್ ॥ ೪೧೭

ನರೆಯ ಬೊಜಂಗನುಮಾನುಂ
ನೆರೆದಿರ್ದೊಡೆ ನೆರೆದು ಬಿನದದಿಂ ನೋಟ್ಪವರಿ ।
ನ್ನರಗಿಳಿಯುಂ ಬೆಳ್ಪೊಱಸುಂ
ನೆರೆದಂದಮನಱಸಿಕೊಳ್ವರೆಮ್ಮೊಳಮೋಘಂ ॥ ೪೧೮

ಒತ್ತೆಗೆ ನಿಲ್ಪುದೆಂದುಟಿಯವೇಟ್ಟಪಳೋಪಳನೆನ್ನನಿಂತೆ ತಾಯ್
ಮುತ್ತಳೆ ಪುಟ್ಟುವಂದು ಬೆರಳೊಂಬತು ತನ್ನಯ ತೋಳೊಳಾದುವೇಂ।
ಕುತ್ತದೊಳಾದ ಚುಚ್ಚುಗಲೆಯೇ ಎದೆಗಗ್ಗಳ ಕಪ್ಪು ಕಾಡಿ ಮೇಣ್
ಕುತ್ತಿಸಿಕೊಂಡುವೇ ನುಡಿವ ಕುಂಟಣಿಯಂ ಜವನೊಯ್ಯದಾದನೇ ॥ ೪೧೯

---

[1] ರ (ಕ.ಖ.ಗ.ಬ) [2] ನ (ಖ. ಬ). [3] ನಾ (ಖ. ಬ). [4] ಯ (ಖ. ಬ).

ನಿಮತಿನಿತೇಕೆ ಹೊಂದವಕಮಿತ್ತನಿನ[1]ಗ್ಗ [1]ಳವೀವರಾರಿಗೇ
ಕಮರ್ದನೆ ನಂಜು ಮಾಬ್ಪುರುಳಿಯೆಂಬುದೆ ಕೊಟ್ಟನೆ ಕಾಣಲಕ್ಕು ಮಾ ॥
ನಮೆ ಮಱಿಯಾಗೆ ನೋವಿನೊಳಗಂದುಟಿಯೆಂ ಬಳಿಕೇವಿರೊಳೊಕ್ಕ ತು
ಪ್ಪಮ[2]ನುಡು[2]ಗಲ್ಕೆ ಬಂದಪುದೆ ನೀವಱಿಯಲ್ ಚಲವೊಳ್ಳಿಕೆಯ್ಯುವೆಂ ॥? ೪೨೧

ಇವಳಂ ಪೆತ್ತೆನೆ ಕುತ್ತುವೆತ್ತೆನಿವಳಿಂದಂ ಲಜ್ಜೆಗೆಟ್ಟೆನ್ನರಾ
[3]ರಿ[3]ವಳಂ ನುಂಗದು ದೈವಮೆನ್ನೆ ತಲೆಯಂ ಮೇಣ್ ಕೊಳ್ಳದೇನೆಂದು ಸಾ ।
ಱುವುದಂ ಸಾಧನ ಮೋನಮೆಂದು ನಿಲೆ ಕೂರ್ತಾ ಕೂರ್ತೆ ನೀನಿನ್ನು ಮಾ
ಡುವುದಂ ಮಾಡೆನೆ ಮುದ್ರಿಸಿತ್ತು ಮಗಳಿಂದಂ ತಾಯ ವಕ್ತ್ರಂ ಕರಂ ॥? ೪೨೧

ಹರೆಯದಿನಗ್ಗಳಂ ಹಣದ ಮೇಗಣ ಮೋಹಮಿವಳ್ಗೆ ಬಪ್ಪಿನಂ
ತುರಿಪಮೆಯರ್ಥಮಂ ಕ್ರಮದಿನಾ ಮುದುಪಂ ಗಡ ಕೊಟ್ಟನೊತ್ತೆಯಂ ।
ಗರಗರನಾಯ್ತು ಬಲ್ಮೆ ಮುದುಗೂಗೆಯ ಬಾರಿಗೆ ಕೈ[4]ನ[4] ತಾನೆ ಮೈ
ಗರೆದೆನಗೊತ್ತೆಗೊಟ್ಟ ಸುಖ ಮಾಪ್ಕೆವೆಟ್ಟದನಕ್ಕ ಬಬ್ದಿಪೆಂ ॥? ೪೨೨

ತಲೆ ಹುಟಿತ ನಾಯ ಸುಡು ಗಾ
ವಿಲ ಬಟ್ಟೆಯ ಚಿಕ್ಕಣಿಕ್ಕೆ ಬೆಳ್ಗತ್ತೆಯ ನಾ ।
ಣಿಲಿ ನೆಲ್ಲಹೆಡಿಗೆ ಸಡಿಫಡ
ಚೆಲುವರಿಯದ ಕುಡದ ಕಾಮದೇವನ ದೇವಂ ॥? ೪೨೩

ಮುಡುಹಿನ ಮು[5]ಕ್ಕಿ[5] ಸೊಕ್ಕದಿರದೇನಭಿಮಾನದ [6]ಬೊಡ್ಡಿ[6] ಬಾಲಮಂ
ಬಡಿದಪೆ[7]ಯೆ[7]ತ್ತ [8]ಚಿಃ[8] ಬಿಸುಡು[9]ಗೊಯ್ಕೆ[9]ಯರುಟ್ಟುದಜೊದ್ದೆ [10]ಬೀಕ್[10]ಬೆರಳ್ ।
[11]ಗಡಿಕೆ[11]ಯರಂಟಸುಂಟಿ ಸುಡು ಪಂ[12]ಜೆ[12]ಗಳೆಂಜಲ ಹಂ[13]ಜೆ[13]ಯೆಂದು ಬ
ಯ್ದೊಡನೊಡನೆತ್ತಿದರ್ ಮನಗಿ ಬೇಂಟದ ಬನ್ನಮನಕ್ಕ ತಂಗಿಯರ್ ॥? ೪೨೪
(ಅನಂತನಾಥಪುರಾಣಂ, ೮–೩೧).

ಇದು ತಲೆಗೊಯ್ದಿದತ್ತು ಮುಡಿಯಲ್ ನೆಱೆ ಕಲ್ಲದು ಬೇಕುಬೇಕಿದೆಂ
ದದೆ ತನುವೆಲ್ಲಮಂ ಕಿಡಿಸಿಕೊಂಡು ಮುಡಲ್ ನೆಱೆ ಕಲ್ಲದಾಯ್ತು ಬೇಂ ।
ಱೊಳಿದು ಬೆಳ್ಪಿಲಂ ಕಿಱಿಯರಾರೊಳಲ್ಲದು ನೋಡ ಬಂದ ಕಾ
ಲದ ಪರಿಯಂ ಮುಗುಳ್ ಮೊಲೆಯ ಮೂಲಮುಮಾಡುವುದಕ್ಕೆ ಗೋಷ್ಮಮಂ॥?

ಇದು ನೆಲಮುಕ್ಕು ತಾ ಪಸಿದೊಡಲ್ತುಣವೇಳ್ವುದು ತಾಯೊ ನೋಪ್ಪೊಡಿಂ
ತಿದಱಿ ಗೃಹಕ್ಕೆ ಬಪ್ಪ ಮುಸುಕಂ ಬರವಿದ್ದವಿದಾವ ಲಗ್ನದೊ ।

---

[1] ಗ (ಗ). [2] ನುಂ (ಖ). [3] ತಿ (ಖ.ಬ.ಗ). [4] ಗೆ (ಬ). [5] ಕ್ಕೆ (ಅ). [6] ಜೋಡೆ (ಅ). [7] ಯಿ (ಅ). [8] ಚುಂ (ಅ). [9] ಗೋರಿ (ಅ), [10] ಪೆಬ್ಬೆ (ಅ). [11] ಕಡಿಯದ (ಅ). [12] ಚಿ (ಅ). [13] ಚೆ (ಅ).

....ಳುದ....ಕಲ್ತು ತನಗೆ ಪತ್ತಿಪ ಜೊತ್ತಿಪ ಕೇಣವೆಮ್ಮ ಕಾ
ಲದೊಳಿನಿತೊಂದ ನಾವಱಿಯೆವಿಂದಿನ ಕೋರಿಗಳಂದವದ್ಭುತಂ ॥? ೪೨೬

ಮಾರ್ಮುಗಿಲಾಡಿದಪ್ಪುದು ಬೊಜಂಗರ ಸಂದಣಿ ಪ[1]ಟ್ಟಪಟ್ಟಿಕಾ
ಕರ್ಮದ ರತ್ನಭೂಷಣದ ಕಾಂತಿ ತಳಿರ್ತರ್ಪುದಿಂತು ಮೂಲನೀ ।
ಪೆರ್ಮೆಗೆ ನೋಂ[2]ತುದೀ ಪರೆಯವೀ ಪದಪೀ ಸೊಬಗೀ ವಿಲಾಸಮೇಂ
ಕಾರ್ಮಱೆಯೊಳ್ ಬಸಂತನಿವಳಂಗಣದೊಳ್ ನೆಲಗೊಂಡುದಕ್ಕುಮೇಂ ॥ ೪೨೭
(ಅನಂತನಾಥಪುರಾಣಂ, ೮-೧೯.)

ಪರಿಣತೆಗಿನ್ನುಮಿಲ್ಲ ಬಳೆ ತಾನಿದು ಮೈನೆರೆದೊಂದು ಸುಗ್ಗಿ ಬಿ
ತ್ತರಿಸುಗುವಣ್ಣ ನಿಮ್ಮ ದೆಸೆಯಿಂ ಕಳೆಯೊಳ್ ಶ್ರಮಮುಂಟು ಮುನ್ನ ಬ ।
ಲ್ಲರ ಹುಸಿಶಿಕ್ಷೆಯಿಂದೆ ಮಱಿಮುಚ್ಚಿಸಲಾರ್ಪುವೆ ನಿಮ್ಮನನ್ನೆಗಂ
ಸರಸರಗೊಟ್ಟಿಗಟ್ಟಿ ಪಿರಿದಾದುದು ನೋಡಿರೆ ತನ್ನ ಪುಣ್ಯಮಂ ॥ ೪೨೮

ಮನಮಂ ಮೋಹಿಸು ನೋಟದೊಳ್ ನುಡಿಯೊಳಿಂಪಂ ಬೀಱು ಮೈಯ್‌ಮೇಳ
ದೊಳ್
ತನುವಂ ಮೆಚ್ಚಿಸು ಕೂಟದೊಳ್ ಪದೆದ ಮೆಯ್ಯಾಗೊಲ್ದವೊಲ್ ಸುತ್ತು ಸು ।
ಸ್ವನನಿತ್ತಳ್ಕವ ಲೋಭನಂ ಪುಗದಿರಾರ್ಗಂ ಕೂಡದಿರ್ ನಾಣ ಹೆಂ
ಪನೆ ಕಾಯೆಂದೆಳಸೂಳೆಗೋದಿಸುತಲಿರ್ದಳ್ ಸೂಳೆಸಿದ್ಧಾಂತಮಂ ॥ ೪೨೯

ಅಲಸದೆ ಬಿಚ್ಚತಂ ಬೆಸನಿಯೆಂದುದಗೆಯ್ವುದು ಕೂರ್ತ ಭಂಗಿಯಿಂ
ದೊಲಿಸುವುದುಳ್ಳನಂ ಮುಳಿವುದಿಂಬಱಿದೀವನೊಳಾಳಕಾಱನಂ ।
ಸುಲಿದು ಬಿಸುಟ್ಟುದೋಜೆವೆರಸೆಂದು ವಿದಗ್ಧೆಯದೊಬ್ಬವಳ್ ಮುಗು
ಳ್ಮೊಲೆಗಳವಳ್ಗೆ ವೈಸಿಕಮನೋದಿಸುತಿರ್ದಳತಿಪ್ರಬಂಧದಿಂ ॥ ೪೩೦

ನೋಡುವರಂ ಮನಂಬಯಸಿದಂತಿರೆ ನಲ್ಮೆ ತುಳುಂಕೆ ಬಿಂಕದಿಂ
ನೋಡುವುದೆಯ್ದೆ ಮಾತನೊಸೆದಾಡುವರೊಳ್ ಬಗೆ ಪೆರ್ಚುದೋಱೆ ಮಾ ।
ತಾಡುವುದಿತ್ತು ಕೂಡುವರೊಳಿಲ್ಲದ ಬೇಂಟಮನುಂಟುಮಾಡಿ ನೀಂ
ಕೂಡುವುದೆಂದು ಮುತ್ತಮುದುಗುಂಟಣಿ ಪುತ್ರಿಗೆ ದೀಕ್ಷೆಯಿಕ್ಕಿದಳ್ ॥ ೪೩೧

ಚಲನ[3]ಪ್ರೋದ್ಭಾಗಮಿಶ್ರಾಂಜನ ಜಲಚರಭಾಗಸ್ಥಿತೋಚ್ಚಸ್ತನದ್ವಂ
ದ್ವಲಸತ್ಕಾಶ್ಮೀರರಾಗಂ ಭುಜಶಿಖರಿಬಹಿರ್ವ್ಯತ್ತಭಾಳೇಯಚಂಚ ।
ತ್ತಿಲಕಾಂಗಂ ಚಾರುಗಂಡಸ್ಥಗಿತ ಭುಜಲತಾಶ್ಲಿಷ್ಟ ಕೇಯೂರಚಿಹ್ನಂ
ಕಳೆದತ್ತಾತ್ಮೇಶ್ವರಂ ಪ್ರಾರ್ಥಿಸಿ ತಿಳಿಪದೆಯುಂ ಕೋಪಮಾ ಕಾಂತೆಗಾಗಳ್ ॥೪೩೨

---

[1] ಟ್ಟಿತ (ಅ). [2] ತಳೀಹ (ಅ). [3] ತ್ಪ್ರೋ (ಖ.ಬ).

ಒಲವಿನೊಳುರ್ಕಿ ಕಾದಲರ ಗಾಡಿಯ ಮೆಯ್ಸಿರಿಯಲ್ಲಿ ಕಾಣ್ಬ ಕ
ಣ್ಮಲರ ಬಸಂತಮಲ್ತೆ ಬೆಳುದಿಂಗಳ ಹಣ್ಣೆಲೆಯಲ್ತೆ ನೋಟ್ಪೊಡ ।
ಗ್ಗಲಿಸದ ಕೂರ್ಮೆವೀಱದೊಡನೆನ್ನರ ಗಾಡಿಯುಮಕ್ಕು ತುಯ್ಯಲ
ಟ್ಟೊಲೆ ನಿಧಿ ಪೋದ ಪಾಟ ಕುಟಿ ಬತ್ತಿದ ಜೇಂಗೊಡ ಬೀತ ಮಾಮರಂ ॥೪೩

ಒದವಿದಲಂಪು ಪೋಪಿನವನಂಕದ ಬಿಂಕದ ಪೆರ್ಚು ಪೊಚ್ಚಱಂ
ಗದ ಸಱುಮಿಂಡಿಯೊಳ್ ಪೊರಳಿ ಪೊರ್ಕುಳಿಯಾದೊಡೆ ಪೊದ್ದು ಗರ್ದುರಾ ।
ಡದೆ ನಲಿಗಚ್ಚು ಕಚ್ಚಿ ಕುಡಿಯಾಗಡೆಯಾಳನೆ ನೀಳ್ದು ಸಿಱುಂಬುಳಾಡದಂ
ಟದೆ ನೆಱನೆಂದು ಭಾವದೊಳೆ ಬಳ್ಕುವ ಸೋಂಬೆಯನಿಕ್ಕು ಕಿಚ್ಚಿನೊಳ್ ॥? ೪೩

ಕೊಡುವ ಗುಣಕ್ಕೆ ತಾನೊಡೆಯನೊಲ್ಮೆಗೆ ತಾನೊಡೆಯಂ ಚಲಕ್ಕೆ ತಾ
ನೊಡೆಯನೆಶಕ್ಕೆ ತಾನೊಡೆಯನಟ್ಟಿಗೆ ತಾನೊಡೆಯಂ ದಲೆಂಬ ನಾ ।
ಱೊಡೆಯನನಪ್ಪಿಯುಂ ಮಗುಟ್ಟು ನಿ[1]ರ್ಜ[1]ಗಂಡರನಪ್ಪುತಿರ್ಪ ಪೆ
ಣ್ಬಡಣದ ಮುನ್ನಮುಳ್ಳನಿತು ಭಾಗ್ಯಮುಮೇನಱಿಯಾಗಿ ಪೋಗದೇ ॥? ೪೩

ಮನೆ ಸಲೆ ಹೇವಿಳಂಬಿ ಸಹಕಾರಿ ವಿಕಾರಿ ವಿರೋಧಿಕೃತ್ಸುಹೃ
ಜ್ಜನಮೆ ಸಮಾನಮನ್ನಣೆ ವಿರೋಧಿ ಪರಾಭವಿ ಶರ್ವರಿ ಶಾಲಿ ಮಾವ ಮ್ಮೆ ।
ದುನನೆ ಕರಂ ಪ್ರಮಾಥಿ ನಿಜವಲ್ಲಭೆ ದುರ್ಮುಖಿಯೆಂದೊಡೆನ್ನ ಪೆಂ
ಪಿನ ವಿಭವಂ ಪ್ಲವಂಗದವೊಲಾದುದು ಮನ್ಮಥಚಿತ್ರಭಾನುವಿಂ ॥ ೪೩

ಮುನುಕಿಟ್ಟೊತ್ತೆಗೆ ನಾರ್ದ ವೃದ್ಧನೊಳೊಡಂಬಟ್ಟೊತ್ತೆಯಂ ಕೊಂಬ ತಾ
ಯ್ಗೆ ನರೋಜಾರುಣನೇತ್ರೆ ಯವ್ವನೆ ಲನತ್ಕಾದಂಬರೀಮತ್ತ [2]ಧೀ[2] ।
ವಸೆಯೊರ್ವಳ್ ಮುದುನಾಯ ಮುತ್ತಮುದುವೃದ್ಧಂಗೆನ್ನನಿಂತೋವದೊ
ಪ್ಪಿಸಿ ಪೊಂಗಟ್ಟುವ ಚೀಲದೊಳ್ ಮುಡುಗರಂ ತಂದಿಕ್ಕುವೆಂ ನಿಕ್ಕು[3]ವಂ[3] ॥ ೪೩

ಮದನನ ಕೂ[4]ಡಿ ಕಾಯ್ದುಪುದದೇಕೆಗೆ[4] ಕಾಯ್ದುಪುರ್ವೆನ್ನ ಕೂಡೆ ಪಾ
ಡಿದ ಮಱುದುಂಬಿಯೆ[5]ನ್ನಸರ[5]ಮೇಳದ ಕೋಗಿಲೆಯೆನ್ನ ಕಯ್ಯೊ[6]ಳಾ ।
ಡಿದ[6] ಗಿಳಿಯೆನ್ನ ಪಿಂದೆ ನಡಪಾಡಿದ ಹಂಸೆಗಳಿಂತಿವಕ್ಕೆ ತ
ಕ್ಕುದನುಸಿ[7]ರ್ದಪ್ಪೆನೆ[7]ನ್ನಿನಿ[8]ಯನಂ ಕರೆ ನೀಂ ತಿಳಿ ನೀಂ[8] ತಳೋದರೀ ॥ ೪೩

(ಅನಂತನಾಥಪುರಾಣಂ, ೮-೨೩.)

---

[1] ರ್ಜರ (ಖ.ಬ). [2] ದೇ (ಬ). [3] ವೆಂ (ಬ). [4] ಡಿತಾಮುಮೆನಗೀಕೆಗೆ (ಅ). [5] ನ್ನೆಸವ (ಅ). [6] ಳ್ದೋದಿದ (ಅ). [7] ರ್ದೆನ್ನನೆ (ಅ). [8] ಯಂಕರೆಗೇಂತಿಳಿದೇಂ (ಖ.ಬ).

ನೆವದಿಂ ಕಾಯ್ದು ಕನಲ್ದು ಪೋದಿನಿಯನಂ ಕಣ್ಮುಟ್ಟಿನೊಳ್ ಕಂಡು ಕೈ
ರವಪತ್ರಾಯತನೇತ್ರೆ ಕೀಲಿಸಿದಃಪೊಲ್ ಕಾಲ್ಸೀಡುಗೊಂಡಳ್ ಚಳ
ತ್ಪವನಾಪಾತ ಪತಾಕೆವೊಲ್ ನಡುಗಿದಳ್ ಘರ್ಮಾಂಬುವಿಂ ತೇಂಕಿದಳ್
ನವಲಜ್ಜಾರಸದೊಳ್ ಮುಟುಂಗಿದಳನಂಗಸ್ರೋತದೊಳ್ ಕೂಡಿದಳ್ ॥ ೪೩೯
(ಅನಂತನಾಥಪುರಾಣಂ, ೮–೨೨.)

ಅರಲಂಬಿಂ ಗಱಿಸನ್ನೆದೋಱುವನನಂಗಂ ಚಂ[1]ದ್ರಮಂ[1] ಕೂಂಕುವಂ
ಕರದಿಂ ತಂಬೆಲರೆಂಬನಡ್ಡಳಿಸುವಂ ಚೈತ್ರಂ ಪಿಕಾರಾವದಿಂ ।
ಕರೆವಂ ನಲ್ಲನಗಲ್ದೊಡಂ ಮುಳಿದು ತಾವೇಗೆಯ್ದೊಡಂ ಪಲ್ಲವಾ
ಧರೆ ಕೇಳಂಜು[2]ವೆನಲ್ಲಳೀ[2] ಹದಿರನೋಪಂ ಕಾಣ್ಗುಮೆಂದಂಜುವೆಂ ॥ ೪೪೦
(ಅನಂತನಾಥಪುರಾಣಂ, ೮–೨೧.)

ನವನಖರೇಖೆಗಳ್ ಬರೆದ ಗಲ್ಲದ ರೇಖೆಗಳಂತೆ ತೋಱೆ ಮೂ
ಡುವ ಮೊಲೆಯಾಡುವಳ್ಳೆರ್ದೆಗಳೊಳ್ ಸೆಱೆಸಾರಿಪೊಲಾಗೆ ನಾಡೆ ನೋ ।
ಡುವರೆಡಗಣ್ಣ ಢಾಳದೊಳೆ ಹಾಸಗೆವಾಯೆ ಮನಂ ವಿಟಗೆರ್ದೆ ಹೋ
ದುವು ರವಣಂ ಗುಣಕ್ಕವಳ ಜವ್ವನನೆತ್ತ ದೊಳಾರೊ ಸೋಲದರ್ ॥ ೪೪೧

ನೆತ್ತದ ಸಾರಿಯಂತೆ ಮೊಲೆ ಮೂಡಲೊಡಂ ಗುಣವೇಱಿ ಲಜ್ಜೆ ನಾಣ್
[3]ಸ[3]ತ್ತವು ಗಾ[4]ಳು[4]ಗಣ್ ಪರಿದುವಾಸೆಯ ಪಾಸಗೆಯಂತೆ ಬೇಡಳೊಂ।
ದೊತ್ತೆಯನಿಲ್ಲ ಪೆಣ್ತನಕೆ ಪಾವುಗೆಯಂ ಗಡಿಗೆಟ್ಟ ರೇಖೆಗಳ್
ಪತ್ತಿದುವಾದೊಡಂ ಬಱಿಯ ಸೋಲಮೆ ನೋಡಿರೆ ಮೂಳನಾಟಮಂ ॥ ೪೪೨
(ಅನಂತನಾಥಪುರಾಣಂ, ೮–೧೫.)

ನುಡಿ ನುಡಿಯೆಂ ಚಲಂ ಚಲಮೆ ಬೇಟ್ಟುದೆ ಬೇಟ್ಟುದದೇಕದಂತೆ ಚಿಃ
ಪಡಪುಟಿದೆಲ್ಲರಂ ನಗಿಸಿಕೊಂಡಪೆಯಾಗದದಾಗದಿ . . . .
ರ್ದೆಡೆ ಮುಳುಗೆತ್ತು ಬಿಬ್ಬುಡಿದು ಕೊಂಬಟಿದಲ್ಲದು ಚೆನ್ನಜಾಲನಂ
ಬಿಡು ಬಿಡೆನೆಂಬ ಕುಂಟಣಿಯ ಸೂಳೆಯ ಸೂಬ್ನುಡಿಯಿತ್ತುದಟ್ಟಿಯಂ ॥ ೪೪೩

ಕುಂಟಣಿದೊಟ್ಟೆ ಕೊರಿಸಿದ ಕಾದಲನಂ ಬಿಸುಡೆಂದು ಕೀಱಿ ಬಾ
ಯುಂಟೆನಗೆಂದು ಬಗ್ಗಿಸುವೆ ಕೂರದ[5]ರಾರ್ ಕಿಱಿ[5]ಯಂದು ನಿನ್ನನೇಂ ।

---

[1] ದುವಂ (ಅ). [2] ವಳಲ್ಲನೀ (ಅ). [3] ಪ (ಅ). [4] ಳ (ಅ). [5] ರಾರಿಱಿ (ಖ.ಬ).

ನಾಂಟವೆ ಪೂವಿನಂಬು ಕಡುಸೋವಡಿಯಾದಪೆ ನಿನ್ನ ಮೆಯ್ಯ ನು
ಣ್ಗಂಟೊಡವುಟ್ಟೆ ಮುಟ್ಟಮಿರೆ ಮೀಱುವರಾರೊ ಮನೋಜನಾಜ್ಞೆಯಂ॥ ೪೪೪
(ಮಲ್ಲಿನಾಥಪುರಾಣಂ, ೭–೭೪.)

ನುಡಿ ಸವಿ ನೋಟವೊಂದು ಸವಿ ಸೋಂಕು ದಿಟಂ ಸವಿ ತೋಟಿಯಾವಗಂ
ಕಡುಸವಿ ಪೊಯ್ಯೆ ಮುನ್ನ ಸವಿ ಬಯ್ಯೆ ಕರಂ ಸವಿಯಪ್ಪ ಚುಂಬನಂ
ಗಡಣಮಿವಿಂತುಮೆಯ್ದೆ ಸವಿಯಪ್ಪವು ತನ್ನ[1]ಪಸಾದ'ದಿಂದಮೆಂ
ದೊಡೆ ಸವಿ ಬೇಟದಿಂದೆ ಪೆಱಿತಾವುದೊ ಭಾವಿಸಿ ನೋಡೆ ನಾಡೆಯುಂ ॥ ೪೪೫
(ಚಂದ್ರಪ್ರಭಪುರಾಣಂ, ೮–೫೫.)

ಪ್ರಣಯದಿನಾದ ಹೋರಟೆಯೆ ಹೋರಟೆ ಮಾಣ್ದೊಡೆ ಕೂಟದೊಳ್ ಮನಂ
ತಣಿಯದದೊಂದು ಕೋಟಲೆಯೆ ಕೋಟಲೆ ಮಾಣ್ದೊಡಗಲ್ದ ಪೊಟ್ಟಿನೊಳ್ ।
ರಣರಣಕೋತ್ಥವೇದನೆಯೆ ವೇದನೆ ಮಾಣ್ದೊಡೆ ಮತ್ತಮಿನ್ನವ
ಪ್ಪಣಕಮೆ ಪುಟ್ಟುಗೆಂದೊಡಕಟೇನಪಸೌಖ್ಯರೋ ಕೂರ್ತ ಮಾನಸರ್ ॥ ೪೪೬
(ಚಂದ್ರಪ್ರಭಪುರಾಣಂ, ೮–೫೪.)

ಕೊರೆದೊಡೆ ಬೆಟ್ಟುಗಳ್ [2]ಬಿರಿ[2]ವುವುಣ್ಮುವ ಲೋಳೆಯ ಲಾಳೆಗಳ್ ಪೊನ
ಲ್ಪರಿವುವು ಕೆವಿ್ಮ ಕುಮ್ಮಿದೊಡೆ ತೋಳೊಳೆ ಜೀವವಿಯೋಗಮಪ್ಪು[3]ದೆಂ ।
ದಿರದೆರ್ದೆ[3]ಗಪ್ಪುದತ್ತಳಗಮಾ [4]ಮುದುಪಂ ಬಿಡೆ[4] ಬಂದು ಪೊಂಗಳಂ
ಸುರಿದೊಡಮಾರೊ ಸೈರಿಸುವರಾತನ ಪಲ್ಲಲವಾಯ ನಾತಮಂ ॥ ೪೪೭
(ಪಂಪಭಾರತಂ, ೪–೧೦೦.)

ಒಡನೆಯ ಪುಣಿಸೆಯ ಮರಗಳ್
ಕೆಡೆದುವು ನಿಮಗಿನ್ನುಮಜ್ಜ ಪೆಂಡಿರ ಕಜ್ಜಂ।
ನಡೆವುದಕೆ ತೆಱಿಹದಲ್ಲದು
ನಡೆಯೆಂದೊಡೆ ಬಿಟ್ಟು ಬಿದಿರ್ದು ಪೋದಂ ಮುದುಪಂ ॥೪೪೮

ಕೊರೆವಳ್ ಪಲ್ಲಂ ಬಲ್ಮೈ
ಗರೆವಳ್ ಕನವರಿಸಿ ಬಳ್ಳುಗರೆವಳ್ ಬಾಯಿಂ ।
ಸುರಿವುದು ನೊರೆ ಕೇಳ್ವಟ್ಟ
. . . . ಳೊರ್ವಳಕೆಯ್ತ ಕಂಜಿ ಪೊಱಮಟ್ಟಿರ್ದಂ ॥ ೪೪೯

---

[1] ಹಸಾರ (ಗ.ಘ). [2] ಪರಿ (ಕ). [3] ದಂತಿರಮೆಮ (ಖ.ಬ). [4] ನರೆಪಂ ನರೆ (ಅ).

ಮನಣದ ಬೂದಿಯಂ ತಳಿದರೋ ತಲೆಸೇಸೆಗೆ ಮಿಂಡರೊತ್ತೆಯೇಂ
ಬನಲೆಯ ಬಾಡೊ ಚೌಕಿಗೆಗೆ ಬಪ್ಪುದುಮಾಗುಳಿ ಮುನ್ನ ಬಪ್ಪುದು
ದ್ದೆಸದೆ ಬೊಜಂಗನೊಳ್ ನುಡಿಯುತುಂ ಕೊರೆವಳ್ ಕಡುನಿದ್ರೆಗಣ್ಣಿಯೇಂ
ಕಿಸುಕುಳಿ ಕುಂಭಕರ್ಣನೊಡವುಟ್ಟಿದಳೋ ಹಡೆದುಂಬ ನೂಳೆಯೋ ॥ ೪೫೦

ಕುಡಿದೊಡೆ ಪೊಚ್ಚೆಯಿಂದೆ ಬಟಿನೀರ್ ಪೊಱಪಾಯ್ವುವೆ ಸುತ್ತಿ ಕಾಲನೇಂ
ತೊಡರ್ವುವೆ ದಾಂಟುವಲ್ಲಿ ನಿಱು ಪುತ್ತುರಿಯೂದಿದೊಡಂತೆ ಬಾಯನೇಂ ।
ಸುಡುವುದೆ ಮುಟ್ಟೆ ದೇವರೊಳೆ ಕೀಲಿಪುದೇ ಕರಮೇಕೆ ನೂರುಳೆಂ
ದೊಡರಿಸ[1]ಲನ್ನದೇಕೆಲೆಗೆ ಮನ್ನಿಪ ಮನ್ನಣೆಯುಳ್ಳಡೆಯ್ದವೇ[1] ॥ ೪೫೧

(ಚಂದ್ರಪ್ರಭಪುರಾಣಂ, ೮–೬೦.)

ನುಡಿಯೆಲ್ಲಂ ಪೋಗೆ ನೂರುಳೊಳ್ ನಿಱು ಪೊಸಂತಿಲ್ [2]ಪುತ್ತುವಾಯ್‌ಪೊಂಗೊ
ಕುಡಿನೀರೊರ್ಮೆಗೆ[2] ಕಮ್ಮನಪ್ಪ ಬಟಿನೀರೂರೂರ ದೈವಂಗಳುಂ । [ಬಲ್
ಪಡಿಗೆತ್ತೊಡಿದುವೀಕೆಗಂಜಿ [3]ವಿಟರೆಂ[3]ದುಂ ಗೆಂಟು ತಮ್ಮಜ್ಜಿ ಸ
ತ್ತೊಡಮಿಾ [4]ಮಾಯದ[4] ಪೆಣ್ಣ ಕಣ್ಗೆ ಪುಸಿಕಣ್ಣೀರಲ್ಲದೇಂ ಬರ್ಕುಮೇ ॥ ೪೫೨

(ಲೀಲಾವತಿ, ೨–೧೦೨.)

ಸಿರಿ ಚೆಲ್ವಂ ಸಿರಿಯಲ್ಲಿ ರೂಪು ಮಿಗೆ ಚೆಲ್ವಂ ರೂಪಿನೊಳ್ ಮತ್ತೆ ಮುಂ
ಬರೆಯಂ ಚೆಲ್ವಮಿನಿತ್ತುಮೆಯ್ದೆ ಕಡು ಚೆಲ್ವಂ ಬೇಟದಿಂ ಬೇಂಟಮೆಂ
ಬರಸಂ ಮನ್ನಿಸದಂದನಾಯಕಮದೇಕಾ ಲಕ್ಷ್ಮಿಯಾ ರೂಪುಮಾ
ಹರೆಯಂ ಬೇವಿನ ನುಗ್ಗಿ ಪಾಟ್ಮನೆಯ ಚಿತ್ರಂ ಕಾಡ ಚಂದ್ರಾತಪಂ ॥ ೪೫೩

(ಅನಂತನಾಥಪುರಾಣಂ, ೮–೫೮.)

ಮತ್ತೆ ಬೊಜಂಗರಿಲ್ಲ ಪೊಱ[5]ಗೊ[5]ಚ್ಚತವೇಂ ನಿನಗುಂಟು [6]ಕೊಳ್ಳೆ[6] ಚ
ಕ್ಕೊತ್ತೆಗೆ[7]ಯೊತ್ತೆಯಿತ್ತು [8]ಶನಿ[8]ಯಂತಿರೆ [9]ನಿಲ್ವರೆ[9] ನೂಳೆ ಕೇಳ್[10]ದೀ[10] ।
ಯೊತ್ತೆಗೆ ನಾಣ್ಚಿಯುಂ ಪೊಱಮಡಾಂ ಪೊರೆಯಿಟ್ಟಪೆನೆಂದು ಸುತ್ತಿದಳ್
ಮುತ್ತಿದಳಬ್ಬೆ ಚೌ[11]ಕ[11]ಗೆಯನೊರ್ಬಳೆ ಮಾರಿಯ ಮೂರಿಯಂದದಿಂ ॥ ೪೫೪

(ಲೀಲಾವತಿ ೨–೧೨೨.)

---

[1] ಲಣ್ಣಪೆಣ್ಣ ಪುಸಿಮನ್ನಣೆಯುಳ್ಳೂಡಮಂತದೆಯ್ದುದೆ (ಅ). [2] ಪೊಂಗೊಳಲ್ ಪತ್ತು ವಾಯ್‌ಕುಡಿನೀರೀಕೆಗೆ (ಅ). [3] ದಿಟಮೆಂ (ಖ.ಗ.ಬ). [4] ನಂಜಿನ (ಅ). [5] ಸೊ (ಕ.ಖ). [6] ತೋಳ (ಅ). [7] ಪೊಕ್ಕೆಯಿಂತು (ಅ). [8] ಸುನಿ (ಅ). [9] ನಿಲ್ತರೆ (ಖ.ಬ). [10] ರೋ (ಅ). [11] ರಿ (ಖ.ಬ).

ಹಡಣಂ ಪೋದತ್ತು ಕುತ್ತಂ ಕಟಿದುದು ಶನಿ ಪಿಂಗಿತ್ತು ಗುಹ್ಯಾಂಗದಿಂ ಮು
ತ್ತೆಡೆಗಪ್ಪಿತ್ತೆಂದು ಜನ್ಮಂ ಹಱಿದುದುಟಿದುದೆಂತಾನುಮೇೞಾಳಿ ಭಂಡಂ ।
ಕಡು ಭಂಡಂ ಕೂಸಿಗೀಗಳ್ ಬಿನದದ ತಡೆ ಬಿಟ್ಟಿತ್ತವಳ್ಗೆಂದದೊರ್ವಳ್
ನುಡಿವಳ್ ನಿಶ್ಚಿಂತದಿಂ ಕುಂಟಣಿ ನೆರೆಯವರೊಳ್ ಸ್ವೇಚ್ಛೆಯಿಂದಂ ನಗುತ್ತಂ ॥

ಗಾಳಿಸು ಗೆಲ್ವನಂ ಹರಹು ಹೂಜೆಗನಂ ಸುಲಿ ಸುತ್ತು ಗಾಱಿನಂ
ತಾಳಿಸು ತೇ[1]ಪೆಯಂ[1] ಕುಡದೆ ಕಾಡುವನಂ ರಸಬೋನವೆತ್ತು ಮಾ ।
ಕಾಳಿಗೆ ಢಾಳನಂ [2]ನೆ[2]ಗಪು ಟಕ್ಕಿಪನಂ ತುಟಿ ಮೇಕುದೋರ್ಪ್ಪನಂ
ಮಾಳ[3]ಚ್ಚಿ[3]ಗಿಕ್ಕು ಪೂಪ್ ಪುಸಿವನಂ ಪೊ[4]ಸತಿ[4]ಕ್ಕು ಗೆ ಪ[5]ಚ್ಚೆಗಾ[5]ಱಿನಂ ॥ ೪೫೬

(ಲೀಲಾವತಿ, ೨–೧೦೭.)

ಮನೆಯೊಳ್ ಕಾಲ್ ನೆಲೆಗೊಂಡು ನಿಂದಱಿಯನೀ ಜೋಕಾಱಿಯಂತಿರ್ಕೆ ಸೊಂ
ಬನೊಳೊಲ್ದಾಡುವಳೊಲ್ಲಳಾ ಹರಳಿಗಂ ಕದ್ದೊ[6]ಯ್ವ[6]ನೇನಿರ್ದೊಡಂ ।
ತನಗಿಂಬಿಲ್ಲದೆಗೆ[7]ಯ್ವ[7]ನಂತದಱಿನೀ ಪೆಣ್ ಪೆ[8]ಣ್ಣ್ಣಿನೊಳ್ ಗಂ[8]ಡುಗಂ
ಡಿನೊಳಾವಾವ ಮುಹೂರ್ತದೊಳ್ ಪಡೆದನೀ ಪಾಟಾದ ಮೂಳಂಗಳಂ ? ॥ ೪೫೭

ಪೂವಿನ ಸುಗ್ಗಿ[9]ಯಂತೆ[9] ಪೋಸಬೇೞ್ಟಮದಾದೊಡೆ [10]ಕಣ್ಣಿ[10]ಳ್ಗೋಪರಂ
ಕಾವುದು ಸುತ್ತಿ ಮುತ್ತಿ ಸವಿಯೊಳ್ ಸೆಱೆಗೆಯ್ವುದು ಜೀವಮಂ ತಡಂ ।
ಗಾವುದು ಮೆಚ್ಚಿತಂ ಸಲಿಸಿ ನಲ್ಲರ ಮೆಯ್ಯುಖಕೆಂದು ದೇಹಮಂ
ತೇವುದು ತಾನೆ ತನ್ನ ಪಗೆಯಪ್ಪು[11]ದೆ[11] ಬರ್ಪುದೆ ಪೋದ ಜವ್ವನಂ ॥ ೪೫೮

(ಲೀಲಾವತಿ, ೧೪=೪೩.)

ಬೇೞ್ಟದ ಸುಗ್ಗಿ ನಾಲ್ಕುದಿನವಾ [12]ದಿನದೊ[12]ಳ್ [13]ಬಸ[13]ಮಾದ ಗಂಡರೊಳ್
ಕೂಟಮೆ [14]ಕೋ[14]ಟಿಯೆಂದು ಸಮಸಂದೆವೆಯಂ ಮಱಿಯಾಗದಂತು ಬಾಯ್ ।
ನಾಟಿರೆ ಬಾಯೊ[15]ಳಿರ್ಪು[15]ಡುಗದಂತೆ ತೊ[16]ಡರ್ದಿ[16]ರದೇಕೆ ತೋಟಿಯಂ
ಪಾಟಿಸಿ ತಾಮೆ ತಮ್ಮಗಳನಾಱಿಡಿಗೊಳ್ವರೊ ನಾಡ [17]ನಾಡೆಯರ್[17] ॥ ೪೫೯

(ಲೀಲಾವತಿ, ೧೪–೪೦.)

ನನುನೋಟಂ ಜನವಶ್ಯಮಾಕೃತಿ ಗತಿಸ್ತಂಭಂ ವಚಃಪ್ರೌಢಿ ಭಾ
ವಿಸೆ ಸಮ್ಮೋಹನಮಂತ್ರವಾದರಣೆ ಚಿತ್ತಾಕರ್ಷಣಂ ಕೂಟವ ।

---

[1] ಮನಂ (ಅ). [2] ತೆ (ಖ.ಬ). [3] ಬೆ (ಅ). [4] ಸೆದಿ (ಅ). [5] ಚ್ಚಕಾ (ಖ.ಬ.ಗ). [6] ಯ್ವೆ (ಖ.ಬ). [7] ಯ್ಯ (ಖ.ಬ). [8] ಣ್ಣಿನೊಳಂ (ಖ.ಬ). [9] ಯಲ್ತೆ (ಅ). [10] ಕಾಣ (ಖ.ಬ). [11] ದು (ಖ.ಬ). [12] ದೆಸೆಯೊ (ಅ). [13] ವಶ (ಖ). [14] ತೋ (ಅ). [15] ಳಪ್ಪು (ಅ). [16] ಡಂಕಿ (ಅ). [17] ಗೊಟ್ಟಿಯರ್ (ಅ).

ನ್ಯಸುಖೋತ್ಪಾದನಮಂತ್ರ ದುರ್ಧರ ವಿಯೋಗಂ ಮಾರಣೋದಾರಯಂ
ತ್ರಸಮಂ ತಾನೆನಿಸಲ್ಕೆ ನಾಲದೆ ಪುರಂದ್ರೀಮಾತ್ರಮೆಂಬಾರ್ತೆಯೊಳ್ ॥ ೪೬೦

ಅರುಣಾಧರೆ ಶಶಿಮುಖಿ ಕನ
ಕರೋಚಿ ಪುಂಖಾಂಗಿ ಗುರುಕುಚದ್ವಯೆ ಸಿತವಿ ।
ಸ್ಫುರಿತದೃಶೆ ಮಂದಯಾನೆಯ
ನುರುಮುದದಿಂ ವಾರವನಿತೆಯೆನ್ನದರೊಳರೇ ॥ ೪೬೧

ಅತಿರಕ್ತರ್ವರುಂ ಗಡ
ರತಿ ಗಡ ರಾಗೋತ್ಕಟಂ ಗಡೇಕಾಂತಗೃಹ ।
ಸ್ಥಿತಿಗಡಮೇನೆಂಬುದೊ ಪೇಪ್
ನತತಂ ತಂತಮ್ಮ ಪದದ ಮೆಯ್ಯಱಿದವರಾರ್ ॥ ೪೬೨

ನೆರೆ ಪಱಿದೋಡೆ [1]ಕೇರಿ[1] ಪೊಱಗಿಕ್ಕೆ ಜನಂ ಬೆಱಗಾಗೆ ಬೀದಿಯೊಳ್
ನೆರೆಯೆ ಕುಕಿಲ್ವ ಕೂಕಿಱಿದು ಕೊಂದೊಡೆ ಸಾವವೊಲಾರ್ದು ಕೂಡದೊಂ !
ದರಸಿಯದೊಂದು ಹಾದರಮೆ [2]ಜಕ್ಕಿಯ ಕೂ[2]ಟಮೆ ಕೂಟದೇದ್ಗೆಯೊಳ್
ಸುರಕೆನಬಾರದೆಂಬ ಬೆಲೆವೆಣ್ಣಿನ ಕೂಟದೊಳಿಕ್ಕು ಕಿಚ್ಚುಮಂ ॥ ೪೬೩
(ಅನಂತನಾಥಪುರಾಣಂ, ೮–೫೭.)

ಬಾರ ಮುರಾಳಿಕಾಗಮನೆ ನೋಡ ಚಕೋರವಿಲೋಲನೇತ್ರೆ ನಿಂ
ದಾರಯ ಪೀವರಸ್ತನನಿತಂಬಭರಾಲಸೆ ಕೇಳ ಕಾಮಕಾ ।
ಳೋರಗ ಕೇಶಪಾಶೆ ಎನಗುತ್ತರಮಂ ಕುಡ ಚಾರುವೇಣುವೀ
ಣಾರವೆ ನೀನದಾರ ಮಗಳೆಲ್ಲಿಗೆ ಪೋದಪಯಾವುದಾಶ್ರಯಂ ॥ ೪೬೪
(ಶಬ್ದಮಣಿದರ್ಪಣಂ, ೧೨ಲನೆಯ ಸೂತ್ರಕ್ಕೆ ಉದಾಹರಣೆ.)

ಸರಸಿಜನೇತ್ರೆ ಪೂರ್ಣಶಶಿಮಂಡಲವಕ್ತ್ರೆ ಗಭೀರವಾಣಿ ದಿ
ಗ್ವರವರಕೀರ್ತಿನಾಥವರವಂಶಗುಣಾಸ್ಪದಚಿತ್ರಪುತ್ರಿಯಾ ।
ಸುರತವಿಲಾಸವಲ್ಲಗವನಿರ್ದುದೆ ಮಂದಿರವೇಕೆ ದೂರದಿಂ
ಪರಿಕಿಸಿ ಬಂದು ರಾಗದೆ ತಳಾಱಿಕೆ ನಿನ್ನಯ ಬೆನ್ನೊಳೋಪಳಾ ॥ ೪೬೫

ಮಿಡಿಯಂ ನಾರ್ಚಿ ಪಳಂಚಿ ಸೋರ್ಮುಡಿ ತಡಂಗಾಲ್ವೊಯ್ಯೆ ಸಂವ್ಯಾನಮು
ಳ್ಳುಡೆಯಂ ವಾಮಕರಾಗ್ರದಿಂ ಪಿಡಿದು ವ್ಯತ್ಕ್ರೋತ್ತುಂಗವಕ್ಷೋಜದಿ ।
ಚ್ಚೆಡೆಯೊತ್ತೊತ್ತಿನೊಳೆತ್ತಲುಂ ಕೆದಱಿ ಮುಕ್ತಾಮಾಲೆ ಬಂದೋಪವಳ್
ಪಿಡಿದಪ್ಪಾಡಿ ಕನಲ್ದು ಪಕ್ಕೆದಲೆಯಂ ಪೋಪೋಪನಂ ಕೋಪದಿಂ ॥ ೪೬೬

---

[1] ಕೀಱಿ (ಅ). [2] ಜಕ್ಕಿಯರೂ (ಅ).

ನಡುಗೆ ತನು ಪೊಡರೆ ಬಿಸುಸುಯ್[1]
ಗುಡುಗುಡನುಗೆ ಬಾಷ್ಪವಾರಿ ಕಾಲತ್ರಯಮಂ ।
ಪಡೆದೋಪಳ ಮುಳಿಸಿತ್ತುದು
ಕಡು ಚೆಲ್ವಂ ಪ್ರಿಯತಮಂಗೆ ಬಕ್ಕಂಬಯಲೊಳ್ ॥ ೪೬೭

ನವಿ ತವದನ್ನೆಗಂ ಮನದ ಪತ್ತುಗೆಗಳ್ ಕಿಡದನ್ನೆಗಂ ಪೆಱಂ
ಗವಳೆಡೆಯಾಡದನ್ನೆಗಮೊಡಂಬಡುಮೇವಮುಮಿಲ್ಲದನ್ನೆಗಂ ।
ತವಿಪುದು ತನ್ನನೊಪ್ಪಿಸುವುದೆಂದುದನೆಂಬುದು ಕೂರೆ ಕೂರ್ಪುದೋ
ಱುವುದು ಪಲುಂಬಿ ಪೋದ ಬಟಿಕಂ ಪರಪು[1]ಬ್ಬೆಗ[1]ಯಾಗಯಂಗಳಂ ॥? ೪೬೮

(ಚಂದ್ರಪ್ರಭಪುರಾಣಂ, ೮-೮೧.)

ವ್ಯಾಳಬಿಡಾಳದಂತುಗುರ್ಗಳಂ ನಲಿಯಾಡುವ ಸೊಕ್ಕಿ ಬಂದ ಶುಂ
ಡಾಳದ ಮಾಡ್ಕೆಯಿಂದೆ ಕರದಿಂದೆ ತುಡುಂಕುವ ಮೆಯ್ಯ ಢಾಳ ಕೊಂ ।
ಡಾಲದೊಲೆನ್ನನೋಲಗಿಪ ಬರ್ಪದೊಳಿಂದುಟಿದುವೊ ಡಾಳಚಂ
ಡಾಳನುಢಾಳವಾದಿನಿಯನುಂ ಕೆಲನುಂ ನಗುವಂತೆ ಮಾಡಿದ್ಯೆ ॥? ೪೬೯

[2]ಉರದಿಂ[2] ಬರಿಯಿಂದಗ್ರಂ
[3]ಒರೆ ಕೆಂಪೆಸೆಯಲ್ಕೆ[3] ನೀಳ್ದ ನಖರೇಖೆಯೆನಟ್ ।
[4]ಪೊ[4]ರೆಯೆನಿಸೆ ಪದ್ಮಕುಟ್ಮಳ
ದಿರವಂ ಪರಿಭವಿಸಿ[5]ದತ್ತು ತ[6]ತ್ಕುಚಯುಗಳಂ ॥ ೪೭೦

(ಚಂದ್ರಪ್ರಭಪುರಾಣಂ, ೮-೫೬.)

ಮಿಱುಗುವ ವಿದ್ರುಮಾಧರದ ಮಧ್ಯದೊಳಾಯತವೃತ್ತಮಾದ ನು
ಣ್ಗಱಿಯಿದು ಮನ್ಮನಕ್ಕೆ ಪಡೆದಪ್ಪುದು ಮನ್ಮಥವಹ್ನಿತಾಪದಿಂ ।
ಮಱುಕಮನಪ್ಪುಕೆಯ್ದೆರ್ದೆಯೊಳಿರ್ಪುದನೊಲ್ಲದೆ ಬಾಯ ಬಾಗಿಲಿಂ
ನೆಱೆ ಪೊಱಮಟ್ಟು ಪೋದಿವಳ ಲಜ್ಜೆಯ ಪಜ್ಜೆಯಿದೆಂಬ ಪೋಲ್ವೆಯಂ ॥ ೪೭೧

(ಚಂದ್ರಪ್ರಭಪುರಾಣಂ, ೮-೫೭.)

ಚುಂಬಿ[6]ಸಿ[6] ಬೀಗಿ ಬೆಳ್ಪಡರ್ದ ಬಾಯ್ದೆಱೆಯಾಳ್[7]ಸಿ[7]ದಪ್ಪಿನೊತ್ತಿನಿಂ
ದಂ ಬಿಡೆ ಗುಜ್ಜುಗೊಂಡ ಮೊಲೆ ಪೋರ್ಕುಳಿ[8]ಯಿಂ[8]ದಮೆ ಹಂತಿದಪ್ಪಿ ತಾ ।

---

[1] ತ್ತರೆ (ಅ), ದ್ಧಗ (ಚಂ.ಪ್ರ.ದ ಓಲೆಯಪ್ರತಿ). [2] ಕೊರಲಂ (ಅ). [3] ಬರೆಗಂ ಕೆಂಪೆಸೆಯೆ (ಅ). [4] ಗೊ (ಅ). [5] ತೀಕೆಯು (ಅ). [6] ಸೆ (ಖ). [7] ಸ (ಖ.ಬ). [8] ಯಂ (ಖ.ಬ).

ಱುಂಬಟಿಯುಂ ತೆರಳ್ದ ಕುರುಳುಣ್ಮೆ ಬೆಮರ್ ನಸುಬಾನಲಾದ ಬೊ
ಟ್ಟೆಂಬಿವು ಕೂಟದೊಂದು ಸವಿಯಂ ಪಿಸುಣಾಡಿಪುವೀ ಲತಾಂಗಿಯಾ ॥ ೪೭೨
(ಚಂದ್ರಪ್ರಭಪುರಾಣಂ, ೮–೭೨.)

ಱುನ್ನತಿಯಿಂದುತ್ಕಂಠತೆ
ಯನ್ನೆಱೆ ನಿನಗೀವುದಿವರ್ಗೆ ಮಾಡವೆ ಕೊರ್ಬಂ ।
ನಿನ್ನನೆರ್ದೆಗಿಡಿಪುವುಟಿದರ
ನಿನ್ನೆರ್ದೆಗಿಡಿಸವೆ ಲತಾಂಗಿ ಕಠಿನಕುಚಂಗಳ್ ॥ ೪೭೩
(ಚಂದ್ರಪ್ರಭಪುರಾಣಂ, ೮–೭೩.)

ಒಸೆದಪ್ಪುವ ಪದದೊಳ್ ಮೆಯ್
ನಸುಸೋಂಕದ ಮುನ್ನಮೆ[1]ದೆಯೊಳೆಡೆವ್ಗೊಕ್ಕವೊ[1]ಲು ।
ರ್ವಿಸುವ ಪುಳಕಕ್ಕೆ ಕಂಟಕ
ವೆನರಂ ಕೊಟ್ಟಜನ ಸುಜನತೆಗೆ ಬೆಲಿ[2]ಗಾದೆಂ[2] ॥ ೪೭೪
(ಚಂದ್ರಪ್ರಭಪುರಾಣಂ, ೮–೭೪.)

ಪತ್ತು ಗೆಗೆಟ್ಟುಮೊಂದು ನುಡಿಗೊಂಬತನೆಂದೆರಡೆಂಟನೀಗಳಾ
ನೆತ್ತ ಱುವಂದಮೆಂಬ ತೆಱಿದಿರ್ದಪೆ ನಲ್ಲನ ತಾಯ ತಂದೆಯ ।
ಚ್ಚೊತ್ತಿದ ಮೂಱು ಮೋಹಮುಮನೇಱೆಗೆವೋಗದೆ ಕಲ್ತೆ ನಾಲ್ಕು ಸೂಱ್
ನತ್ತೊಡ[3]ದಾರೆಯೆಂದಱುಪ[3]ಲ್ಮೈದೊಲವೆಯ್ದುಗುಮಿನ್ನೆಗಂ ಪ್ರಿಯಂ ॥ ೪೭೫
(ಚಂದ್ರಪ್ರಭಪುರಾಣಂ, ೮–೭೯.)

ಒಲವೊಳಗಾಗೆ ದೈವದಿನದಂ ಬಡವಂ ನಿಧಿಗಂಡ ಮಾಡ್ಕೆಯಿಂ
ನಲಪಲುಮೋವಲುಂ ಸುಖಮನಾರ್ಜಿಸಲುಂ ಬಗೆದಾರದೊಳ್ಪನೊ ।
ಕ್ಕಲಸಿಕೆಯಂ ನಿಮಿರ್ಚಿ ಪುರುಡಂ [4]ಪೊಸೆದೆಯೆ್ದಿ ಪೊಲಂಬುದಪ್ಪಿ[4] ಕೋ
ಟಲೆಗೊಳಗಪ್ಪ ಪಾಟ್ಮನದ ಮಾನಸರಂ ಸುಡು ಸಂದ ಗೊಡ್ಡರಂ ॥ ೪೭೬
(ಚಂದ್ರಪ್ರಭಪುರಾಣಂ, ೮–೮೦.)

ತಿವುರಾತ್ಮದ್ಯುತಿ ತೋರ್ಪ ಕರ್ಪು ತಿಲಕಂ ತಾರಾಗಣಂ ಬಂದು ನೋ
ಡುವ ಯೂಥಂ ಮಧು ತೆತ್ತಿಗಂ ವಿರಹಿ ಮಾಱಾಂಕಂ ನೃಪಂ ಚಿತ್ತಸಂ ।
ಭವನಾಗಲ್ ಕಡುಕೆಯ್ದು ಕಾಯ್ದು ಕಳನಂ ಬಂದೇಱುವಂತೇಱಿದಂ
ನವಸಂಧ್ಯಾರುಣಭಾಸಿ ವಾಸವದಿಶಾಶ್ಯೆಲೇಂದ್ರಮಂ ಚಂದ್ರಮಂ ॥ ೪೭೭

---

[1] ಡೆಯೊಳೆಡೆಗುಡದವೊ (ಅ). [2] ಗಪ್ಪೆಂ (ಅ), ಗಾಗೆಂ (ಖ.ಬ). [3] ವಾರ್ತಿ
ಯಿಂತಿವಳ (ಖ.ಬ). [4] ಪೊಸತೇವಮನುಂಟುಮಾಡಿ (ಖ.ಬ).

ತೊಲಗೆ [1]ಮನ[1]ನ್ತಮಂ ಕಿಡೆ ನಿಜೇಕ್ಷಣರಾಗದ ಸಂಜೆಗೆಂಪು ನಿ
ರ್ಮಲ ದರಹಾಸಚಂದ್ರಿಕೆಯುಮಂ ಕುಡೆ ಕಾಲ್ವಡಿದೋಪ[2]ನೋಪಳಂ[2] ।
ತಿಳಿಪುವುದಂ ಪ್ರಸನ್ನತೆಯಿನೋಪಳ ವಕ್ತ್ರಹಿಮಾಂಶುಮಂಡಳಂ
ಬೆಳಗಿದುದುಣ್ಮೆ ಪೊಣ್ಮೆ ಜಘನದ್ರವಚಂದ್ರಶಿಲಾಂಬುನಿರ್ಝರಂ ॥ ೪೭

(ಜಗನ್ನಾಥವಿಜಯಂ, ೧೬–೧೨೨.)

ಶಕುನಿವ್ರಾತಾರವಂ ಮನ್ಮಥರಥಬಲವದ್ಭೀಂಕೃತಂ ಕಂಠನಾದಂ
ಮಕರಾಂಕಜ್ಯಾಲತಾಟಂಕೃತವತಿದೃಢಹಸ್ತಪ್ರಹಾರಸ್ವನಂ ದ ।
ರ್ಪಕಭೇರೀಭಾಂಕೃತಂ ತಾನೆನೆ ಯುವತಿರತಾರಂಭ ಕೋಲಾಹಲಧ್ವಾ
ನಕಮಂತಾ ಕಂತುಸೇನಾಕಳಕಳದವೊಲಾಶ್ಚರ್ಯಮಂ ತಂದುದಾಗಳ್ ॥ ೪೮

(ಜಗನ್ನಾಥವಿಜಯಂ, ೧೬–೧೨೩.)

ಪೊಡವ್ರುತ್ತುಂಗಸ್ತನಂ ಕೊಂಕಟಿದು ನಿಮಿರ್ದ ನೀಲಾಳಕಂ ಜೋಲ್ದ ಬಂಬ
ಲ್ಮುಡಿ ಬೆಳ್ಪೇಱಿರ್ದ ಬಿಂಬಾಧರಮಣಿ ನಸುಕೊಂಕಿರ್ದ ಕಣ್ಗೊತ್ತಲಂ ಕೆಂ ।
ಪಡರ್ದಾಲೋಲೇಕ್ಷಣಂ ಕಂಪಿಸುವ ತನು ರತಿಶ್ರಾಂತಿಯಿಂದಂ ಬೆಡಂಗಂ
ಕುಡೆ ನೆಮ್ಮಿರ್ದೊಪನಂ ಮೆಯ್ಬೆ ಮರನೆಲರೊಳಂದಾಱಿಸುತ್ತಿರ್ದಳೊರ್ವಳ್ ॥

(ಜಗನ್ನಾಥವಿಜಯಂ, ೧೬–೧೨೪.)

ಮದಿರಾಪಾನಕ್ಕೆ ಮೆಯ್ದಾರದೆ ಸುಟಿವೆಲರಂ ಪಾರದುದ್ಯಾನಮಂ ಸಾ
ರದೆ ಮಲ್ಲೀದಾಮಮಂ ನೂಡದೆ ಹಿಮರುಚಿಯಂ ನೋಡದಾನಂದದಿಂ ಪಾ ।
ಡದೆ ಕೆಯ್ಗೊಯ್ವಂದಲಂಪಿಲ್ಲದೆ ಕೆಳದಿಯರೊಳ್ [3]ಸ[3]ಲ್ಲದೇಕಾಂತದೊಳ್ ನಿ
ಲ್ಲದಿರಾಂ ಬರ್ಪನ್ನವಾಯಂ ನಿನಗಿದು ವಿಗತಾಪಾಯ[4]ಮಿಾ ಪೇೞ್ದು[4]ಪಾಯಂ ॥

(ಜಗನ್ನಾಥವಿಜಯಂ, ೧೬–೧೨೬.)

ಮುಕುಳಂ [5]ಮಾದಲರಾ[5]ಯ್ತು ಮೆಯ್ಯರಿಸಿನಂ ಕಂಪೋಡಿತೀ ಬೆಂದ ದೀ
ಪಿಕೆಯುಂ ಕರ್ಗುಡಿವಟ್ಟುದೆನ್ನಿನಿಯನಿನ್ನುಂ ಬಾರನೇಕೆಂದು ದ ।
ರ್ಪಕದಾವಾನಲದ[6]ಗ್ಧೆ[6] ತುಂಗಕುಚಶೈಲಾಗ್ರಕ್ಕೆ ಸುಯ್ದಂಬಕಾಂ
ಬುಕಣ್ಣಾ[7]ಸಾರ[7]ಮನಿಕ್ಕಿದಳ್ ಮದನಮೋಹಾಸಾರಮೆಂಬಂ[8]ದದಿಂ[8] ॥ ೪೯

(ಲೀಲಾವತಿ, ೨–೪೮.)

ನಗಲೀ ನಾಯಕಸಾರಕೀನಯನವ್ರಂದಂ ಸುತ್ತಿನೊಳ್ಪಾದ ಮೈ
ಲಗೆವೆಳ್ದಿಂಗಳ ಸೋಂಕು ಸೈರಿಸದವೊಲ್ ಪೊಂಕಲ್ ಮಡಲ್ವಂದು ರಾ

---

[1] ತಮ (ಖ.ಬ). [2] ಳೋಪನಂ (ಖ.ಬ). [3] ಸೊ (ಅ). [4] ಮಪ್ಪೊಂದು (ಅ). [5] ಬಾಯ್ದರರಾ (ಖ.ಬ). [6] ಗ್ಧ (ಅ) [7] ನೀಕ (ಅ). [8] ತೆವೋರ್ (ಅ).

ಜಗೃಹದ್ವಾರನಿವಿಷ್ಟನಾಗಿ ಸುಖನಂದೋಹಕ್ಕೆ ಬೀಜೊಕ್ಕುಟ್ಟು ಸೆ
ಜ್ಜೆಗೆ ಬಂದಂ ಸ್ತಿಮಿತಾಗತೋತ್ಕಂಪಿತಕಾಂತಾಪಾಂಗಮಾಲಾಹತಂ ॥ ೪೮೩

ಜಗದಧಿಪತಿಯರಮನೆಯಂ
ಪುಗುವಲ್ಲಿ ಗೃಹಪ್ರವೇಶಮಂಗಳತೂರ್ಯಂ ।
ಮಿಗೆ ಮೊಳಗಿತ್ತೆನೆ ಪೊಣ್ಮಿದು
ದು ಗಭೀರಂ [1]ತತ್ತ್ರಯೀಯಭೇರೀನಾದಂ[1] ॥ ೪೮೪

(ಚಂದ್ರಪ್ರಭಪುರಾಣಂ, ೮–೯೩.)

ಮುನಿದು ಕಟಾಕ್ಷದಿಂದಡ[2]ರೆ[2] ನೋಡೆ ಭಯಾದೃತನಂತೆ ತೋಱಿ ಸ
ಮ್ಮನಿಸದೆ ಮತ್ತೆ ಕಾಯ್ದೊದೆಯೆ ಕಾಲ್ಪಿಡಿದೋವದೆ ಬಯ್ಯೆ ತಳ್ತು ಚುಂ ।
ಬನಮನೊಡರ್ಚಿ ತತ್ತದುಚಿತಕ್ರಿಯೆಯಿಂದಮೆ ನಂದೆವೊಯ್ದು ತ
ನ್ಮನಮುಮನಂತೆ ಸಂತಸಮನೆಯ್ದಿಸಿದಂ ರತಿಸೌಖ್ಯ[3]ದಿಂ[3] ನೃಪಂ ॥ ೪೮೫

(ಚಂದ್ರಪ್ರಭಪುರಾಣಂ, ೮–೯೪.)

ಸುದತಿ ರತಾಂತಸೌಖ್ಯಮನಧೀಶನ ದೇಹದಿನಂದು ಪೋಗಲೀ
ಯದೆ ಪಿಡಿದಂದದಿಂ ತೊಡೆಯ ತೋಳ ತಗುಳ್ಪಮದೊಪ್ಪೆ ನಾಡೆಯುಂ ।
ಪದೆದಮರ್ದಪ್ಪಿದಂತಿರಮರ್ದಪ್ಪಿರೆ ಬಂದ ಸುಷುಪ್ತಿ ಚಿತ್ತಮಂ
ಪುದಿಯೆ ಮಹೀಶನಿರ್ದನಿನಿಸಂ ನಿಜಯೋಗದೆ ಯೋಗಿಯಿರ್ಪವೋಲ್ ॥ ೪೮೬

(ಚಂದ್ರಪ್ರಭಪುರಾಣಂ, ೮–೯೫.)

ನೊರೆಯೊಡನೆ ತಡಿಗೆ ಬೆಳ್ದಾ
ವರೆಯ ಕಟಲ್ದೆಸಟ್ಗಳ್ಳೈದೆ ಕೊಳನೊಳ್ ಸಾರ್ವಂ ।
ತಿರೆ ಪಡುವಣ ದೆಸೆಗಿರದೋ
ಸರಿಸಿರ್ದುವು ತಿಂಗಳೊಡನೆ ಮಿನ್ಗಳ್ ನಭದೊಳ್ ॥ ೪೮೭

(ಚಂದ್ರಪ್ರಭಪುರಾಣಂ, ೮–೯೬.)

ರತಿನಾಟಕಾಭಿನಯಮಂ
ಕೃತಕೃತ್ಯಂಮಾಡಿ [4]ಯೊಯ್ಯನಾ[4]ಗಿರೆ ದೀಪ ।
ದ್ಯುತಿ ಯುವತಿಯರೊಳ್ ನಿದ್ರಾ
ವತಾರಮಾದತ್ತು ಮೂಡವೆಳಗಪ್ಪಾಗಳ್ ॥ ೪೮೮

(ಜಗನ್ನಾಥವಿಜಯಂ, ೧೬–೧೩೭.)

---

[1] ತತ್ರಿಯಾಮ ತೂರ್ಯಾರಾವಂ (ಅ). [2] ರಿ (ಖ.ಬ). [3] ಮಂ (ಖ.ಬ). [4] ರಯ್ಯಮಾ (ಅ).

ತೆರೆವೊಯ್ಲಿಂದೆಟ್ಟಿ ಕಾಸಾರದ ಪರಿಸರದೊಳ್ ನಿದ್ರೆಗೆಯ್ವಂಚೆವಿಂಡಂ
ದರಹಾಸಶ್ರೀಯನಂಭೋಜಿನಿಗೆ ಪಡೆದು ನೆಯ್ದಿಲ್ಗಳಿಂದುಳ್ಳಲರ್ವಂ ।
ಬುರುಹಕ್ಕೆಟ್ಟರ್ಪ ಭೃಂಗಂಗಳ ಗಱುಯೆಲರಿಂ ಕೊರ್ಬಿ ಚಾಂಡಾಲಗೇಯ
ಸ್ವರದೊಳ್ ತಳ್ಪೊಯ್ದ ತಿಸ್ಪೈರದೆ ಸುಟಿದುದು ಮೈಭಾತಿಕಂ ಮಾತರಿಶ್ವಂ ॥ ೪೮೯

(ಜಗನ್ನಾಥವಿಜಯಂ, ೧೬–೧೩೬.)

ಕೂಡೆ ಮನೆಮನೆಯೊಳೊಯ್ಯನೆ
ಬಾಡಿದುವೋಡನೊಡನೆ ಮಿಥುನತತಿಯಿರುಳೊಲವಿಂ ।
ಸೂಡಿದ ಪೂಮಾಲೆಗಳುಂ
ಮಾಡದ ಸೊಡರ್ಗುಡಿಗಳುಂ ನಿಶಾನಿರಸನದೊಳ್ ॥ ೪೯೦

(ಚಂದ್ರಪ್ರಭಪುರಾಣಂ, ೮–೯೮.)

ಓರಂತೆ ಮೆಚ್ಚಿದಂ ಕೃತಿ
ಸಾರಂ·ಶಶಿವರ್ಣನಕ್ಕೆ ಹೊಯ್ಸಳವಂಶೋ ।
ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೪೯೧

ಇದು ನರಸ್ಪತೀನವಾರ್ಥಂಗದರ್ಪಣಾಯಮಾನ ಪ್ರತಿಭಾನನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ಷ್ಟಾದಶನ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ನಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ಚಂದ್ರೋದಯವರ್ಣನಂ ಅಷ್ಟಮಾಶ್ವಾಸಂ ಸಂಪೂರ್ಣಂ.

ಸೂರ್ಯೋದಯವರ್ಣನಂ

ಕುಮುದಂ ಮೈರ್ ಚಂದ್ರಮಂ ಚಂದ್ರಿಕೆ ಕಳೆಯಱಿತಂ ಜ್ಯೋತಿಸನ್ಯಂ ನಯಂಗುಂ
ದೆ ಮನಂ ಪಂಕೇರುಹಂ ತಣ್ಣೆಲರವಸರತೂರ್ಯಂ ರಥಾಂಗದ್ವಯಂ ಸಾಂ ।
ಧ್ಯಮಯೂಖಂ ಪೆರ್ಚೆ ಮರ್ಬುಂ ಸುಸಿಲ ಮಱಿಪು ಪಕ್ಷಿಸ್ವನಂ ಭೈರವೀರಾ
ಗಮಗುರ್ವಂ ಬೀಱೆ ಪಾಂಥರ್ ನಡೆಯೆ ಕವಿಯಿನರ್ಕೋದಯಸ್ತೋತ್ರಮಕ್ಕುಂ॥

ಹಳಹಳನಿರ್ದ ತಾರೆ ಕಳೆಗುಂದಿದ ಚಂದ್ರನಲರ್ಕೆಗುಂದಿದು
ತ್ಪಲ[1]ಮತಿ[1]ಶೈತ್ಯಮಪ್ಪೆಲರು ನಂದುವ ದೀಪ್ತಿಯಗಲ್ವ ಜಾರೆಯರ್ ।
ಗಱುವುವ ಕೋಟಿ ಶಂಖಮರುಣಚ್ಛವಿ ಕೆಂಪಿನಮಂಡಲಂ ರತ
ಕ್ಕೆಳಸುವ ಕೋಕಮಬ್ಜ[2]ವಿಕಸಂ[2] ಸಲೆ ಸೂರ್ಯನ ವರ್ಣನಕ್ರಮಂ ॥ ೨

ನಿರುಪಮ ಸುಕುಮಾರತೆಯಂ
ಧರಣಿಗೆ ನೆಱೆಯಱಿಪಲುಷ್ಣಕರನ ಕರಂಗಳ್ ।
ಪರೆಯದ ಮುಟ್ಟದ ಮುನ್ನಮೆ
ಮುರುಟಿದುವೆನೆ ಮುಗಿದುವುತ್ಪಲಪ್ರಕರಂಗಳ್ ೩

(ಲೀಲಾವತಿ, ೩–೮.)

ಪೊಳ[3]ಪಂಚೆ[3]ವ್ಪೋಯ್ತು ತಾರಗೆ
ಬೆಳಗ[4]ಱಿತು[4]ದು ಹಿಮಕರಂಗೆ [5]ನಾಡೆ[5] ಚಕೋರಾ ।
ವಳಿ ಬೆಱಗಾದುವು ಕುಮುದಂ
ಗಳ ನಗೆಯಗೆಯೆತ್ತಿ ಪ್ಪೋಯ್ತು ಮುನ್ನೀಸಱಿನೊಳ್ ॥ ೪

(ಲೀಲಾವತಿ, ೩–೫.)

ನಿಲ್ಲದೆ ತಮೋಗಜಂ ಕಿಱಿ
ದಿಲ್ಲದೆ ಬೆಳೆದೊಗೆದ ಪಡುವಣವನೀ ಜನಮಂ ।
ತಲ್ಲಿ ಮರವಾಯೆ ಪಡುಗಡ
ಲಲ್ಲುದಿರ್ದುವು ಬಹಳ ತರಳ ತಾರಾಕುಸುಮಂ * ॥ ೫

[1] ವನ (ಗ.ಘ). [2] ದುದಯಂ (ಖ.ಬ). [3] ಪಿಂದೆ (ಖ.ಬ.) ಪಿಂಬು (ಅ).
[4] ಗುಳಿ (ಅ). [5] ಮಾಯ್ದು (ಅ). * ಈ ಪದ್ಯ (ಖ.ಬ). ಪ್ರತಿಗಳಲ್ಲಿಲ್ಲ.

ಒದವಿದ ತಾರಗೆಗಳ್ ನಿ
ಲ್ಲದವೆಲ್ಲಂ ಪರೆದು ಪೋಗೆ ಬೆಳಗಪ್ಪಾಗಳ್ ।
ಚದುರಂಗದ ಬೆಳ್ಗರುವುಡು
ಗಿದ ನೀಲದ ಮಣಿಯ ಮಾಟ್ಕೆಯಾಯ್ತಾಕಾಶಂ ॥ ೬

ಒದವಿದ ಗಗನಾಂಗಣದೊಳ್
ಕೆದಱಿದ ಪೂವಲಯ ಕಸವನೇಂ ಕಳೆದರೊ ದಿ ।
ಕ್ಕುದತಿಯರೆಂಬಂದದಿನೊ
ರ್ವೊದಲೊಳ್ ಮಿರ್ಕೆ ಪರೆದು ಪೋದುವರುಣೋದಯದೊಳ್ ॥

ಎನಗಿದುದು ತಣ್ಣೆಲರ್ ನಾ
ಲ್ದೆಸೆ ಪಳಚನೆ ತೊಳಗಿ ಬೆಳಗಿ ತುಱುಗಿದ ತಾರಾ ।
ಪ್ರಸರಮವು ಕಂಚಗಾಱಿ
ಪ್ರಸರಮನುಡುಗಿದವೊಲುಡುಗಿ ಪೋದುವು ನಭದೊಳ್ ॥ ೮

[1]ಲತಿಕಾಲಾಸ್ಯೋ[1]ಪದೇಶವ್ಯಸನಿ ನವಲತಾಂದೋಳಿಕಾಮೋದನಂತ
ರ್ಪಿತ ಚಂಚಚ್ಚಂಚರೀಕಂ ಕಮಲವನರಜೋರಂಜಿತಾಂಗಂ ಪುಳಿಂದೀ ।
[2]ರತಘರ್ಮ[2]ಸ್ವೇದವಿಚ್ಛೇದನಪಟು ಮೃಗನಂದೋಹರೋಮಂಥಫೇನೋ
ದ್ಗತಬಿಂದುಸ್ಯಂದಿ ತೀಡಿ[3]ತ್ತೆಸಗಿ ಸುರಭಿ[3]ಮೈಭಾತಿಕಂ ಮಾತರಿಶ್ವಂ ॥ ೯
(ಕಾದಂಬರಿ, ಪೂ.ಭಾ ; ೧೪೫.)

ತೀರ್ದುದು ಸುವರ್ಣಮುಡುಪನೊ
ಳಿರ್ದೊಡೆ ಪಡಪಾ[4]ಗ[4]ದೆಂದು ರವಿಯಂ ಕರೆಯ ।
[5]ಲ್ಕರ್ದ[5]ಲರ [6]ಧಾರೆ[6]ಯುಟಿದವೊ
ಲಿರ್ದಪ[7]ನುಱಿ ಕಂದಿ ಪಡುವದೆಸೆಯೊ[7]ಳ್ ಚಂದ್ರಂ ॥ ೧೦
(ಅನಂತನಾಥಪುರಾಣಂ, ೮–೬೦.)

ಪೆಱದೆಗೆದು ಚಂದ್ರಿಕಾಜಲ
ಮಱಿತುದು ಕೆಸಱಿಂತೆ ತೋಱಿ ಗಗನಚ್ಛವಿ ಬಾಂ ।
ದೊಱೆಯಪರತಟದೊಳೆಳಮೀಂ
ಗುಱುಕುವ ಬಕನಂತಿರ್ದುದಿಂದುವ ಬಿಂಬಂ ॥ ೧೧
(ಲೀಲಾವತಿ, ೭–೯೯.)

---

[1] ರತಿಕಾಲಾನ್ಯಾ (ಖ.ಬ). [2] ರತಿದೇದ (ಖ.ಬ). [3] ತಂದಗುರ್ವಿಂನೆಗಳ್ದ ಘನವ (ಕ.) [4] ಱ (ಖ.ಬ). [5] ಲ್ಪೇಱ್ದ (ಅ). [6] ದಾರಿ (ಕ.ಖ.ಬ.ಗ). [7] ನಿದೆ ಕಂದೆ ಪಡುವಗಡೆಯೊ (ಅ).

ಇಡಿದುದ್ದಂ ಬೆಳೆದೇಚ್ಛೆವೆಟ್ಟದ ಬಿದಿರ್ಗಾಡೆಲ್ಲಮಂ ಬೇಗೆ ನಿ
ಚ್ಚಡವರ್ಪಂತಿರ್ದುದು ಸಂಜೆಗೆಂಪದಱಿ ಬಿಸ್ತೊಂದೊಂದರಲ್ ತೋರ್ಪಿನಂ ।
[1]ಪಿಡಿದಂತಿರ್ದುವು[1] ನಟ್ಟ ಬಾಂದೊಱೆಯ ಮೀನೆಲ್ಲಂ ಕ[2]ಬಲ್ ತಂದ[2] [3]ಹೆಂ
ಗೊ[3]ಡೆಯಂತಿರ್ದುವು ಪಕ್ಕೆವೆಟ್ಟದೆಡೆಯೊಳ್ ನೀಹಾರರುಜ್ಮಂಡಲಂ ॥ ೧೨

ರಸಮೊಸರ್ವ ಜೇನ ಬಱಿವು
ಟ್ಟಿ ಸುರಿದು ಕವಿದಿಟ್ಟ ಕಂದುವೆಳ್ಳಿಯ ಕೊಡನಾ ।
ಟಿಸಿ ಮುಡಿಗೆ ಸುತ್ತಿ ಬಿನದದೆ
ಬಿಸುಟ್ಟ ಪೂಮಾಲೆಯೆನಿಸಿದುದು ವಿಧುಬಿಂಬಂ ॥* ೧೩

ವಾರುಣಿ ಕಳ್ಳನೀಂಟಿ ಮಱೆದಿಕ್ಕಿದ ಬಟ್ಟಲೊ ಭೀತಿಯಿಂ ನಿಶಾ
ಸ್ತ್ರೈರಿಣಿ ಪೋಗೆ ಬಿರ್ದ ಕಿವಿಯೋಲೆಯ ಪತ್ರಮೋ ನಭೋ ।
ವಾರಣಮೊಲ್ಲದೊಕ್ಕ ದಧಿಪಾಂಡುರಪಿಂಡಮೊ ಪೇಚೆನಲ್ಕೆ ನೀ
ಹಾರಮಯೂಖಮಂಡಲಮದೇನೆನೆದಿರ್ದುದೊ ಪಶ್ಚಿಮಾದ್ರಿಯೊಳ್ ॥ ೧೪

(ಲೀಲಾವತಿ, ೩–೩.)

ಪುಡಿಯಡ[4]ರೆ[4] ನಿಮಿ[5]ರ್ದ[5] ಪುತ್ತಿನ
ಕುಡಿ ಕೆಡೆದತ್ತಾಲವೊಲೆದುದದಱಿಡಿಯೊಳ್ ತೂಂ ।
ಕಡಿ[6]ಸಿ[6] ಮಿಗಂ ಮುಂದಣಿಗೊ
ರ್ಗುಡಿಸಿದು[7]ದಾ[7] ಪಡುವ ಪಡುವಮ್ಮೃಗಲಾಂಛನನಾ ॥ ೧೫

(ಲೀಲಾವತಿ, ೩–೪.)

ಆವರಿಸಿ ನಿಂದ ನಿಜಕಿರ
ಣಾವಳಿಗಳನುಡುಗಿಕೊಂಡು ತೀವಿದ ಕೊಳದೊಳ್ ।
ಕಾವುಡಿದ ಬಿಳಿಯ ತಾವರೆ
ವೂವಾಬ್ದವೊಲಾಬ್ದನಂಬುನಿಧಿಯೊಳ್ ಚಂದ್ರಂ ॥ ೧೬

ತಳರ್ದ ವಿಯೋಗಿನೀ[8]ನಯನ[8]ವಾಃಕಣಸಂಕುಳದಂತೆ ತಾರಕಾ
ವಳಿ ಮಸುಳ್ದತ್ತು ಯಾಮಿನಿಯ ಬೆನ್ನನೆ ಪೋಪ ದುಕೂಲಚೇಲದಂ ।
ಚಳಮೆನೆ ಪೋಯ್ತು ಚಂದ್ರಿಕೆ ನಭೋವಧು ನೂಡಿ ಬಿಸುಟ್ಟ [9]ಮಾಲ್ಯಮಂ
ಡಳದವೊ[9]ಲರ್ದುದಸ್ತಗಿರಿಮಸ್ತಕದೊಳ್ ತುಹಿನಾಂಶುಮಂಡಳಂ ॥ ೧೭

(ಜಗನ್ನಾಥವಿಜಯಂ, ೧೬–೧೩೫.)

---

[1] ಇಡಿತಂದಿರ್ದುವು (ಕ). ಸಿಡಿತಂದಿರ್ದುವು (ಖ.ಬ). [2] ಬಲ್ವಚ್ಚ (ಗ.ಘ). [3] ಜೇನೊ (ಕ). * ಈ ಪದ್ಯ (ಖ.ಬ.) ಪ್ರತಿಗಳಲ್ಲಿಲ್ಲ. [4] ರಿ (ಖ.ಬ). [5] ರ್ದ (ಖ.ಬ). [6] ಪ (ಅ). [7] ದೋ (ಅ). [8] ಹೃದಯ (ಖ.ಬ). [9] ಮಾಲೆಮಂಡಳಿಸಿದೊ (ಖ.ಬ).

ವಾರುಣಿಯನೊಲ್ದು ಮುಟ್ಟಿದ
ಕಾರಣದಿಂ ಮುಬುಗುವಂತೆ ತನ್ನಯ ಕಱುಯಂ ।
ನೀರೊಳಲೆವಂತೆ ಪಶ್ಚಿಮ
ವಾರಿಧಿಯೊಳ್ ಮಗ್ನನಾದನಂದಮ್ಯತಕರಂ ॥ ೧೮

(ಲೀಲಾವತಿ, ೩–೬.)

ಭುವನಮನಾವಗಂ ಪುದಿದು ತೀವಿದ ತಣ್ಗದಿರ್ಗಳ್ ಪೊದಟ್ಟಿ ಕೈ
ರವವನವಾದುವೆಯ್ದೆ ಪೊಸಮಲ್ಲಿಗೆಯಾದುವು ಮೌಕ್ತಿಕಂಗಳಾ ।
ದುವು ಸುರಸಿಂಧುವಾದುವು ಸುಧಾರ್ಣವವಾದುವು ಚಂದ್ರಕಾಂತಮಾ
ದುವು ಹಿಮಮಾದುವಲ್ಲದೊಡೆ ಚಂದ್ರನ ಚಂದ್ರಿಕೆ ಮಾಯವಾದುದೇ ॥ ೧೯

(ಲೀಲಾವತಿ, ೩–೭.)

ತಾರಗೆಯ ಕುಮುದವನದ ಚ
ಕೋರಂಗಳ ಕಣ್ಗೆ ಕವಿದ ಕಟ್ಟಲೆಯೆನೆ ನೀ ।
ಹಾರಕರನಲಸಿ ಪಕ್ಕೆಗೆ
ಸಾರಲೊಡಂ ಮಗುಪೆ ಮರ್ಬು ಪರ್ಬಿತ್ತಾಗಳ್ ॥ ೨೦

(ಲೀಲಾವತಿ, ೩–೯.)

ಜಲಜಲಿಸುವ ಬೆಳ್ದಿಂಗಳ್
ತೊಲಗಲೊಡಂ ಮು[1]ಂದು[1]ಗೆಟ್ಟು ಶಶಿಮಂಡಲದೊಳ್ ।
ಮೊಲನೆಡಪೆ ಹರಿಣ[2]ನೆಡೆ[2]ಗಿಡೆ
ಮೊಲಗತ್ತಲೆಯಾಯ್ತು ಯಾಮಿನೀ[3]ನಿ[3]ರಸನದೊಳ್ ॥ ೨೧

(ಅನಂತನಾಥಪುರಾಣಂ, ೮–೬೪.)

ಮೂಡಣ ಸಂಜೆ ಕೆಂದಳಿರ ಕಾವಣದಂತಿರೆ ಚಂದ್ರಮಂಡಲಂ
ಬಾಡಿದ ಮಾಧವೀಮಧುರಮಂಜರಿಯಂತಿರೆ ತಾರಕಾಳಿ ನೀ ।
ರೋಡಿ ಕಬಿಲ್ದು ಬಿಟ್ಟ ಕಟಿವೊಗೆಣೆಯಾಗಿರೆ ತಣ್ಣನಪ್ಪೆಲರ್
ತೀಡೆ ತಪೋವನಂಬೊಲತಿ ಪಾವನಮಾಯ್ತು ನಭಂ ಪ್ರಭಾತದೊಳ್ ॥ ೨೨

(ಮಲ್ಲಿನಾಥಪುರಾಣಂ, ೧೦–೧೫.)

ಮಿರ್ದ ಗಗನಾಗ್ರದೊಳ್ [4]ಪಟೆಯ[4]ಮುತ್ತುವ್ಪೋಲೊಂದೆರಡಿರ್ದುವಚ್ಚವೆ
ಳ್ದಿಂಗಳನೀಂಟಿ ಬಿಟ್ಟವು ಬಬಿಲ್ದ ಚಕೋರಿಗಳಸ್ತಶೈಲದೊಳ್ ।

---

[1] ಟ್ಟು (ಖ.ಬ). [2] ನಡಿ (ಅ). [3] ವಿ (ಅ). [4] ಪೊಳೆಯೆ (ಗ.ಘ).

ತಿಂಗಳೊಸರ್ತ ಜೇನಬಿಲುವುಟ್ಟಿವೊಲಿರ್ದುದು [1]ತತ್ಪ್ರಭಾತದೊಳ್[1]
[2]ಕಂಗೊ[2]ಳಿಸಿತ್ತು ಮೂಡದೆಸೆ ಕಾಡೆಳವೆಕ್ಕಿನ ಕಣ್ಣಬಣ್ಣದಿಂ ॥ ೨೩

ಶರನಿಧಿಯಲ್ಲಿ ಸಂಭವಿಸಿದೆಂ ಕಮಲೋದರನೆಮ್ಮ ಭಾವನಿಂ
ದಿರೆಯೊಡವುಟ್ಟಿದಳ್ ಶಿವಲಲಾಟದ ಚಂದ್ರಮನಣ್ಣನೆಂಬುದಂ ।
ಪರಿಕಸದಂಧನೊತ್ತಿ ಪಿಡಿದಾಸ್ಯದೆ ಕಚ್ಚಿದನೆಂದು ಶಂಖವಾ
ಧರಣಿಧರಂಗೆ ಪುಯ್ಯಲಿಡುವಂದದಲಿರ್ದುದು ಸುಪ್ರಭಾತದೊಳ್ ॥* ೨೪

ವಾರಿಧಿಗರ್ಭನಂ ಹರಿಕರಾಶ್ರಯನುನ್ನತ ದೇವಪೂಜೆಗಾ
ಕಾರಣನಂ ಕರಂ ಶುಚಿಯನುಜ್ವಲನಂ ದುರಿತೋಪಹಾರಿಯಂ ।
ಕಾರಣಮಿಲ್ಲದೀಯಧಮನೆಂಜಲಮಾಡಿದನೆಂದು ಶಂಖವಾ
ಚಾರಧರಂಗೆ ಪುಯ್ಯಲಿಡುವಂದದೊಲಿರ್ದುದು ಸುಪ್ರಭಾತದೊಳ್ ॥* ೨೫

ತೆಗೆ ತೆಗೆ ಕಾಳಗತ್ತಲೆ ತೆರಳ್ದಿರದೋಡೆಲೆ ಸಂಜೆ ಪೋಗು ಪೋ
ಗಗಿಯದ ತಾರಕಾಳಿಯಿನಿಸುಂ ನಿಲವೇಡೆಲೆ ನಿದ್ರೆ ಬಂದಪಂ ।
ಪಗಲ ಬೊಜಂಗನೆಂದವನಿಗುತ್ಸವದಿಂ ನೆಱೆ ಸಾಱುವಂದದಿಂ
ನೆಗೆದುದು ದೇವವೇಶ್ಮದೊಳೆ ರೋಗಭಯಂಕರ ಶಂಖನಿಸ್ವನಂ ॥* ೨೬

ಮುಟ್ಟುಪಡಾಯ್ತು ಜೊನ್ನದುಣಿಸುಂಬ ಚಕೋರಚಯಕ್ಕೆ ಬಂಧನಂ
ಬಿಟ್ಟುದು ಪದ್ಮಕೋಶವೊಳಕೊಂಬ ಮದಾಳಿಗೆ ಚಕ್ರವಾಕ ನೀಂ ।
ಬಿಟ್ಟಿರಬೇಡ ನಿಮ್ಮಿನಿಯರೊಳ್ ನೆರೆಯೆಂದುಱೆ ಸಾಱುವಂತೆ ಬೊ
ಬ್ಬಿಟ್ಟು ಕಡಂಗಿ ಕೂಗಿದುದುವಾಗಳು ಕುಕ್ಕಟನೊಂದು ನಿಚ್ಚಟಂ ॥* ೨೭

ವಾರಿಜಮಿತ್ರನಿಂ ಬಹನೆ ಕೂ ಶಶಿ ನೀಂ ಪೆಱಸಾರು ಸಾರು ಕೂ
ನಾರಿಯರಂಗದೊಳ್ ಪುದಿದ ಜಾರರೆನಿಪ್ಪವರೋಡಿಯೋಡಿ ಕೂ ।
ಕೀರ ಮದಾಳಿ ಕೋಗಿಲೆ ವಿಹಂಗ ಕಳಿಂಗಗಳೇಟಿಯೇಟಿ ಕೂ
ತಾರೆ ತಮಂಧ ಸಾರೆನುತೆ ಕೂಗುತಲಿರ್ದುದು ತಾಮ್ರಚೂಡನುಂ ॥* ೨೮

ಸರಸಿಜಮಿತ್ರ ಕೂ ತಮವಿದಾರಣ ಕೂ ಹಿಮಧೂಮಕೇತು ಕೂ
ನರರ ಜಡಾರಿ ಕೂ ಖಗಮೃಗಂಗಳ ಜೀವನರಕ್ಷಪಾಲ ಕೂ ।
ಪಿರಿದುಮುದಾರದಿಂದೆ ತಿಮಿರಂಗಳ ನುಂಗಿಪ ಜಾರಚೋರರಾ
ಹರಣವಿರೋಧಿ ಕೂ ಎನುತ ಕೂಗುತಲಿರ್ದುದು ತಾಮ್ರಚೂಡನುಂ ॥* ೨೯

---

[1] ಚಂದ್ರಮಂಡಲಂ (ಗ.ಘ). [2] ಸಂಗ (ಕ.ಖ.ಬ).

* ಈ ಪದ್ಯಗಳು (ಕ) ಪ್ರತಿಯಲ್ಲಿಲ್ಲ.

ಪಕ್ಕ ದ್ವಂದ್ವಂಗಳಂ ಝಾಡಿಸಿ ಕೆಲಕೆ ನಿಮಿರ್ದೊತ್ತಿ ಮೂಗಿಂದೆ ಗೋಣಂ
ಪಿಕ್ಕುತ್ತಂ ಬಂದು ಗೇಹಂಗಳನಡರಿ ನಿಶಾದೇವಿ ನೀಂ ಪೋಗು ಪೋಗಂ ।
ದರ್ಕಂ ಪೂರ್ವಾಚಲಕ್ಕೆಯ್ದಿದನೆನುತೆ ಕರಂ ಸಾಱುವಂದಂದದಿಂದಂ
ಕುಕ್ಕೂಕೂ ಎಂಬ ನಾದಂ ನೆಗಪೆ ನಗರದೊಳ್ ಕೂಗಿತಾ ತಾಮ್ರಚೂಡಂ ॥ ೩೦

ಬೆಳಗಾಗಲೆಟ್ಟು ಗಟಿಪುವ
ಗಿಳಿಗಳ [1]ಜಱುಚುವ[1] ಪಿಕಂಗಳೆಳಸುವ ಕೋಕಂ ।
ಗಳ ಕಳಕಳದಿನಿಸೊಱಗಿದ
ಕುಳಚೆಯರೆಬ್ಬಿತ್ತು ಭಯದೆ ತಳವೆಳಗಾದರ್ ॥ ೩೧

(ಲೀಲಾವತಿ, ೩–೧೧.)

ರಸದ ಮಳಯಜದ ಘುಸೃಣದ
ಕುಸುಮದ ಕಪ್ಪುರದ ಕವಿವ ಸೊವಡಿಂಗಳಿಗಳ್ ।
ಮುಸುಱಿ ನವನೀಲಪಟಮಂ
ಮುಸುಕಿದವೋಲಸತಿಯೊರ್ವಳಡಿಯಿಡುತಿರ್ದಳ್ ॥ ೩೨

(ಲೀಲಾವತಿ, ೩–೧೨.)

ಉಗುತುಂ ಪೂಮಾಲೆಯಂ ಸೋರ್ಮುಡಿಯಿನೆಡೆಗೆ ಬಿಣ್ಪೆಂಬವೋಲ್ ನೀವಿ
ವಗಿಸುತ್ತುಂ ತೂಕದಿಂದಂ ನಡೆಗೆಡಿಪ ನಿತಂಬಂಗಳಂ ಕಟ್ಟುವಂತ । [ಯಂ ಸಾ
ಕ್ಷಿಗಳಂ ಮುಚ್ಚುತ್ತೆ ನಿದ್ರಾಜಡತೆಯಿನಡಿ[2]ಗೊರೊರ್ಮೆ[2] ಭೂಛಾಯೆಯಂ ನುಂ
ಗುಗುಮೆಂಬಂತಾಗಳರ್ಕೋದಯಭಯವಶದಿಂ ಪಾಣ್ಬೆ [3]ಪೋತಂದಳೊರ್ವಳ್[3] ॥

(ಲೀಲಾವತಿ, ೩–೧೪.)

ಇನಿಯನಲಂಪಿನಿಂ ತೆಗೆದು ಚುಂಬಿಸಿ ತಂಬುಲಮಿಕ್ಕಿ ಸುಯ್ದು ಪೊ
ಯ್ದನುವಿಸಿ ಕೂಡೆ ನೊಂದ [4]ತುಟಿಯಂ[4] ತುದಿನಾಲಗೆಯಿಂದೆ ಪತ್ತಿದಿಂ ।
ಪನೆ ಸವಿವಂತಿರೀಂಟಿ ಕುಚದೊಳ್ ನಸುನಾಂಟಿದ ತನ್ನಖಾಂಕಮಂ
ತನುರುಹದೇಚ್ಛೆಯಿಂದೆಳ್[5]ಸಿ[5] ನೋಡುತದೇಂ ಕಿಱುಜೋಡೆ ಪೋದಳೋ ॥ ೩೪

(ಲೀಲಾವತಿ, ೩–೧೬.)

ರಮಣ[6]ರ ಸತಿಯರ[6]ನಿನನ
ನ್ತಮಿಸಲೊಡಂ ಬಂದು ಪುಗಿಸಿ ಮಗುಟ್ಟುಂ ವಿಧುವ ।

---

[1] ಗಜಱುವ (ಖ.ಗ.ಬ.) [2] ಗೊರ್ಮೊರ್ಮೆ (ಖ). [3] ಯೆಯ್ತಂದಳಾಗಳ್ (ಖ).
[4] ಧರಮಂ (ಖ.ಗ.ಬ). [5] ವಿ (ಖ.ಬ). [6] ವನಿತೆಗಳ (ಅ).

ಸ್ತಮಿಸೆ ಪೊಱಮಡಿಸಿ ಕಳೆದುದು
ತಿಮಿರಂ ಪಾಣ್ಬೆಯರ ದೂತನಾಗಲೆವೇಱ್ಕುಂ ॥ ೩೫

(ಲೀಲಾವತಿ, ೩–೧೦.)

ನಸು[1]ನೆನೆಪೊ[1]ಯ್ಯನುಳ್ಳಲರೆ ಪೋಪ್ಪೆಲೆ ಕಂದದೆ ಕೂಡೆ ಬಣ್ಣದಿಂ
ರಸಮೊಸರ್ವಂತಿರೊಕ್ಕ ನಱುದಂಬುಲಕಂ [2]ಮುಡಿಯಿಂ[2] ಕನಲ್ದು ಬಿ।
ಡ್ದೆಸೆವಲರ್ಗಂ ಮದಾಳಿ ಪೊತ್ತೆ[3]ದೆಪ್ಪೆ[3]ಱಗುತ್ತಿರೆ ಬೀದಿಗಳ್ ಜನ
ಕ್ಕನತಿಯರೆಬ್ಬಿ ಪೋದುದನೆ ಪೇೞ್ವವೊಲಿರ್ದುವು ಸುಪ್ರಭಾತದೊಳ್ ॥ ೩೬

(ಲೀಲಾವತಿ, ೩–೧೭.)

ಉಗುಬ್ಬುವು ಪೀರ್ದ ಕಬ್ಬುಲೆಯನಟ್ಟಿಸಲಾಱದೆ ಕಾಱುವಂತೆ ಕಾ
ಡಿಗೆಗಳನಾಗಳೋಪವರ ಕೇ[4]ೞ್ಪ[4]ಗಳಂ ಕೊರಲೆತ್ತಿ ನೋಡುವಂ।
ತೊಗೆದುವು ನೋಡಿ ನಾಣ್ಚಿ ತಲೆಯಂ ತೆಗೆವಂತಿರೆ ಪಾತ್ರಮಧ್ಯದೊಳ್
ತೆಗೆದುಡಗಿರ್ದುವೊಳ್ಗುಡಿಗಳಂ [5]ರತ[5]ದೀಪಿಕೆಗಳ್ ನಿಶಾಂತದೊಳ್ ॥ ೩೭

(ಲೀಲಾವತಿ, ೩–೧೮.)

ಕಡುನಲ್ಲಂ ನೆರೆ[6]ದಿರ್ಪನೆ[6]ಣ್ಣೆ ಸವೆದತ್ತಿಲ್ಲೆನ್ನುವೋವೆತ್ತ ಸೋ
ರ್ಮುಡಿಯಿಂ [7]ಬಿ[7]ಬ್ಬುದು ಪುಷ್ಪಮಾಲೆಯೆನುತುಂ ಮುಗ್ಧಾಕ್ಷಿ ಚಿಂ[8]ತಾತು[8]ರ।
ಕ್ಕೆಡೆಯಾಗಿರ್ಪಿನಮೆಚ್ಚಿ ಅಂಕೆಯೆಲರಿಂದು[9]ದ್ಬುದ್ಧ[9] ಪಾರಾವತಂ
ಸೊಡರಂ [10]ಬೀಸಿದುದೆಯ್ದೆ ಕೇೞಲೆನಸುಂ[10] ತಾನಟ್ಟಿವಟ್ಟಂದದಿಂ ॥ ೩೮

(ಲೀಲಾವತಿ, ೩–೧೯.)

ಬೆಳಗಪ್ಪ ಜಾವದ್ಯೆಕಿ
ಲ್ಗೊಳೆ ಶೀತಕ್ಕಾಟದಳ್ಕಿ ತೊಟ್ಟಿರ್ದ ಧರಾ।
ತಳವೆಂಬ ಪೆಣ್ಣ ಪೊನಕಂ
ಚುಳಿಕೆಯ ಪೊಸಮುತ್ತಿನಂತಿರಾದುವು ಪನಿವುಲ್ ॥ ೩೯

ಯೋಗಿಜನಕ್ಕೆ ತತ್ವಗತಿಸಂಸ್ಥಿತಿಯುಂ ಕಳೆಯೊಳ್ ಕಳಾವಿದ
ರ್ಗಾ ಗುರುವೇಧೆಯುಂ ಕವಿಜನಕ್ಕೆ ಕವಿತ್ವದ ಸಾರಮುಂ ಬಹೂ।
ದ್ಯೋಗಿ ಜನಕ್ಕೆ ತದ್ವಿಷಯಸಿದ್ಧಿಗಳುಂ ನೃಪರ್ಗನ್ಯರಾಜರಾ
ಜ್ಯಾಗಮವ್ಯ[11]ದ್ಧಿ[11]ಯುಂ ಮನಕೆ ಪೆರ್ಚುವುದೊಪ್ಪುವ ಸುಪ್ರಭಾತದೊಳ್ ॥ ೪೦

---

[1] ನನೆಯು (ಕ.ಖ.ಬ). [2] ಕುರುಳಿಂ (ಅ). [3] ದೆರ್ದೆ (ಅ). [4] ರಿ (ಅ). [5] ತರ (ಖ.ಬ). [6] ದಪ್ಪೊಡೆ (ಅ). [7] ನೋ (ಅ). [8] ತಾಂತ (ಅ.) [9] ದ್ಧೂತ (ಕ.ಖ.ಬ). [10] ಪೊಯ್ದುದು ಕೇಳಲಾಕೆಯಳಸಂ (ಅ). [11] ತ್ತಿ (ಖ.)

ಮುಂದೆ ಮಹಾಸುರಮಥನಂ
ಬಂದೇಱಿದನಮರಗಿರಿಶಿಖಾಗ್ರಮನೆಂದೋ ।
ರಂದದೆ ಮೊರೆವಳಿಯಿಂದರ
ವಿಂದೌಘದ ಮುಂದೆ ನಿದ್ದೆ ತಿಳಿದುವು ಕೊಳಗಳ್ ॥ ೪೧

ಹರಗಿರಿಯಂ ಪರಿದೇಱುವ
ಹರಿಪಾದಕ್ರಮಮ ಸರಸಿ ಪರಪಿದ ನೀಲಂ ।
ಬೆರಸಿದ ಪೀತಾಂಬರಮೆನೆ
ಬಿರಿದಲರ್ದುವು ತುಂಬಿವೆರಸಿ ಪೊಂದಾವರೆಗಳ್ ॥ ೪೨

ಕೆಂಗದಿರನ ಕರಕಿಸಲಯ
ನಂಗದಿನಾರಕ್ತಮಾದ ಕೆಂದಾವರೆಗಳ್ ।
ಸಂಗಡಿಸಿಯಲರ್ದವಂಗಜ
ನಿಂಗಳಮಂ ವಿರಹಿಗಳ್ಗೆ ನಲಿಗೆದಱಿದಪೋಲ್ ॥ ೪೩

ಹರೆಯದ ಕಬ್ಬಲೆ ಪೋ ಪಲ್
ಮೊರೆದಪುವುಟಿದಿರ್ದ ಜೊನ್ನವಱುಗಳ್ಗೆಂಬಂ ।
ತಿರೆ ಧವಳ ಜಲಜವಲರ್ದುವು
ಪರಿಹರಿಪಂತವಱಿ ಪುಟ್ಟುತನಕಲರ್ಗೊಳದೊಳ್ (?) ॥ ೪೪

ನಡು ನಸುಪೊಂಗಿ ಸುತ್ತಿಱಿಯೆ ಪೊತ್ತಿದೆಸಱ್ಮೊನೆವೆರ್ಚಿ ತಣ್ಣೆಲ
ರ್ಗೆಡೆದೆಱಿಪಾಗೆ ಪೊಕ್ಕು ಸುಟಿಯುತ್ತಿರೆ ತಳ್ಪು ಸಡಿಲ್ದ ಗಲ್ದರಲ್ ।
ಪಿಡಿದುಡುಗಿರ್ದ ಕೇಸರದ ನುಣ್ಗೊನೆ ಸೂ[1][ನ][1] ಮರಲ್ದು ಚೆಲ್ವಿನೊಳ್
ಗಡಣಿಸಿದತ್ತು ಮುಂಬಗಲೊಳಂಬುರುಹಂ ಸರಸೀಸಮೂಹದೊಳ್ ॥ ೪೫

ಜಗಮಂ ಬೆಳಗುವ ಮಗನಂ
ಗಗನಂ ಪಡೆದೊಸಗೆಗಂದು ವಾ[2]ರಿ[2]ನೃಪಂ ತೊ।
ಟ್ಟಗೆ ಬಿಟ್ಟ ತಮದ ಸೆಱೆಯೆನ
ಲೊಗೆದುವು ಮುಂ ಸಿಲ್ಕಿದಳಿಗಳಲರ್ದಂಬುಜದಿಂ ॥ ೪೬

ಇನನ ವದೂಟಿಯರೆಂಬೀ
ಮುನಿಸಿಂದಿರದೆಯ್ದೆ ಮುತ್ತಿ ಗಳಗರ್ಜನೆಗೆ ।

---

[1] ನೆ (ಕ), ನು (ಖ.ಬ). [2] ರೆ (ಕ), ಲೆ (ಖ.ಬ.)

ಯ್ವನುಪಮ ತಮೋ ಭಟಾರ್ತಮಿ
ವೆನೆ ಜಿನಗುತ್ತಿರ್ದುವಳಿಗಳಬ್ಜಾಕರದೊಳ್ ॥ ೪೭

(ಕುಸುಮಾವಳಿ, ೧–೪೮.)

ತನಿ[1]ವಂಡಂ ತೊ[1]ರೆವಿಟ್ಟು ಕುತ್ತೆಸಬ್ಗಳೊತ್ತಿಂದೋಡಿ ನಿಂದೂಡುವ
ಬ್ಜಿನಿಯೊಳ್ ಗೋಸಗೆಯುಂಡು ಪಾಡುವಳಿಯಿಂ ಚಂಡಾಳಬಾಳಾಕಳ ।
ಧ್ವನಿಯೊಳ್ ಮಂದ್ರತೆಯಂ ತಗುಳ್ಚಿ ಕಿವಿಪೊಕ್ಕೀ[2]ಶಂಗವೇಂ[2] [3]ಸೌಖಶಾ
ಯನಿಕಂ[3] ತಾನೆನಿಸಿತ್ತೊ ಸೆಜ್ಜೆವನೆಯೊಳ್ [4]ಪ್ರಾಭಾತಶೀ[4]ತಾನಿಲಂ ॥ ೪೮

(ಅನಂತನಾಥಪುರಾಣಂ, ೮-೬೯.)

ಅಟ್ಟಳೆಯಂ ಪಳಂ[5]ಚಲೆದು[5] ಗೋಪುರಮಂ ಪರಿದೇಱಿ ಕೋಂಟೆಯಂ
ಮೆಟ್ಟಿ ಸುಧಾ[6]ಶ್ರಮಾ[6]ವಳಿಗೆ ಲಂಘಿಸಿ ಹರ್ಮ್ಯತಳಕ್ಕೆ ಪಾಯ್ದು ಚೌ ।
ವಟ್ಟದೊಳೆಯ್ದಿ ದೇವಕುಲ[7]ದಾ[7]ದಲೆಯಿಂ ಗಗನೋ[8]ದ[8]ರಕ್ಕೆ ಧೀಂ
ಕಿಟ್ಟುದು ದುಂದುಭಿಸ್ವನಮನೇಳಿಸಿ ಭೋಂಕನೆ ಶಂಖನಿಸ್ವನಂ ॥ ೪೯

(ರಾಮಚಂದ್ರಚರಿತಪುರಾಣಂ, ೫–೧೦೭.)

ಪಾಡಟಿದಂತರಂಗವಿರಹವ್ಯಥೆ[9]ಯಿಂ[9] ಬಱಿತೋಡುವಂತೆ ಬಾ
ಯ್ಗೂಡಿ ಪೊದಟ್ಟ ಕಂಬನಿಯ ಮುಂಬ[10]ನಿಯಿಂಬಿನೊಳಂ[10] ಮಱುಂಗಿ ತೇಂ ।
ಕಾಡಿ ಕೊರಲ್ ಪೊಣರ್ಚಿ ಪುಳಕಂ ನೆಗೆತಪ್ಪಿನ ಹಮ್ಮದಂಗಳಿಂ
ಕೂಡುವ [11]ನಲ್ಲಳಪ್ಪೆಯಱಿದೊಂದಿನಿಸಿರ್ದುವು[11] ಜಕ್ಕವಕ್ಕಿಗಳ್ ॥ ೫೦

(ಅನಂತನಾಥಪುರಾಣಂ, ೮–೬೮.)

ಎಱಿಕೆ ನೆಱಿಲ್ದಿರೆ ಕೊರಲೊಡ
ನೊಱಿಗಿರೆ ಮದನಾಂಬು ಸುರಿಯೆ ಕಂಗಳ್ ಸುಖದಿಂ ।
ಕಱುಕಿಱುದೆಱಿದಿರೆ ಸುರತದ
ಮು[12]ಱುಕಂ[12] ಪೊಸತಾಯ್ತು ಜಕ್ಕವಕ್ಕಿಯ ಪೊಣರೊಳ್ ॥ ೫೧

ಬರಲಿದಿರ್ವಂದು ಮೈಗಳೆರಡಿಲ್ಲದೆ ಪಕ್ಕದಿನಪ್ಪಿ ಕಂಗಳಿಂ
ಸುರಿಯೆ ಮುದಶ್ರು ಮುಂದಲೆಯ ತುಪ್ಪುಟನೊಯ್ಯನೆ ಕಚ್ಚಿ ಚಂಚುವಿಂ ।

---

[1] ವಣ್ಣಂ ಪೊ (ಅ.) [2] ಸಂಗದಿಂ (ಅ.) [3] ಸೌಖ್ಯಸಾಯನಿಕಂ (ಅ), ಸೌಖ್ಯತಾನೆನಿಸಂ (ಕ), ಸೌಖ್ಯನಾನಿನಿಕಂ (ಖ.ಬ). [4] ಸುಪ್ರಾತಗೀ (ಅ), ಸುಪ್ರಾತಶೀ (ಕ). [5] ಚಿಪುರ (ಅ). [6] ಗೃಹಾ (ಅ). [7] ಕಾ (ಕ). [8] ತ್ಕ (ಕ.ಖ.ಬ). [9] ಯಂ (ಅ). [10] ದದಿಂ ಪೊನಲೊಳ್ (ಅ). [11] ಗಗ್ಗರಿಕ್ಕೆ ಮೆಱಿದೊಂದಿ ನಿಮಿರ್ದುವು (ಅ). [12] ಱುತಂ (ಕ).

ಸರಸಮ್ಯಣಾಳನಾಳದ ಕುಸುಂಕುಜಿನತ್ತೆಳವೊಯ್ದು ಕಾಂತನೊಳ್
ನೆರೆದು ರಥಾಂಗ ಕಾಂತೆಯೆರ್ದೆಯಾಱಿದುದಾದಮೆಗಂ ಪ್ರಭಾತದೊಳ್ ॥ ೫೨

ಎತ್ತಣಿನಕ್ಕೆ ಬಂದು ದನಿದೋಱೆ ಸಮುತ್ಸುಕಲೋಲಲೋಚನಂ
ಪತ್ತೆ ಸಮಂತು ತಳ್ತೆಱಗಿ ಪಕ್ಕದಿನೊರ್ವೊದಲಪ್ಪೆ ಚಂಚುವಿಂ ।
ನೆತ್ತಿಯ ತುಪ್ಪಟಂ ಕರ್ದುಕಿ ಮೆಯ್ವಿಡೆ ಕೂಡಿ ಸಮಾನ ಹರ್ಷದಿಂ
ದುತ್ತರಮಪ್ಪಿನಂ ಕೊಳಡೊಳಿರ್ದುವು ಸಂಧಿಸಿ ಜಕ್ಕವಕ್ಕಿಗಳ್ ॥ ೫೩

ಪರೆಯೆ ಕುರುಳ್ಗಳಂತೆ ತಿಮಿರಂ ಮುಗಿಯುತ್ತಿರೆ ನೆಯ್ದಿಲ[1]ಕ್ಷಿ[1]ಯಂ
ತಿರೆ ಬೆಮರಂತಿರಾಱುತಿರೆ ತಾರಗೆ ತೀರೆ ವಿಭಾತಕಾಂತನೊಳ್ ।
ನೆರೆದು ಸುಖಾಂತ್ಯದೊಳ್ ಕರಗುತಿರ್ಪ ಮನೋಹರಿಯಾರ್ದ್ರಕುಂಕುಮಾಂ
ಬರಮೆ [2]ಜಗುಟ್ಟಿ[2]ವೋಲ್ ಬೆಳತುದ್ಯೆಂದ್ರಿಯ ಸಾಂದ್ಯಮಯೂಖಪಲ್ಲವಂ ॥ ೫೪

(ಲೀಲಾವತಿ, ೩–೮೦.)

ಇನನ ಬರವಿಂಗೆ ಪೂರ್ವಾಂ
ಗನೆ ಕುಂಕುಮಪಂಕದಿಂದಲಂಕರಿಸಿದಳೋ ।
ತನುವನೆನೆ ಸಂಜೆ ರಂಜಿಸಿ
ತಿನನುದಯಮನಱಿಪುವಂತೆ ಮೂಡಣ ದೆಸೆಯೊಳ್ ॥ ೫೫

ಕಮಲಿನಿಗಂ ಕೋಕದ್ವಯ
ಸಮುದಯಕಂ ಕೆಟ್ಟರಳಿದರೆಂದಿನನೆ ಪಸಾ ।
ಯಮನಟ್ಟಿದಂತೆ ಮೆಱಿದುದು
ನಿಮಿರ್ದರುಣೋದಯದೊಳೆಸೆವ ಸಂಧ್ಯಾರಾಗಂ ॥ ೫೬

(ಅನಂತನಾಥಪುರಾಣಂ, ೮–೬೫.)

ಪಡುವಲ್ ಚಂದ್ರನ [3]ಬೆ[3]ಳ್ಳೆಳ
ಗೊಡರಿಸುವರುಣೋದಯಾಂಶು ಮೂಡಲ್ ಕೈಕೊಂ ।
ಡೆಡೆಯಣ ತಮಮೊಪ್ಪಿದುದಿರು
ಳುಡುಗಿದ ಕಟ್ಟಲೆಯ [4]ಬಟಿಯ ಮಱಿಗಳಿವೆನಿಸಲ್[4] ॥ ೫೭

(ಅನಂತನಾಥಪುರಾಣಂ, ೮–೬೩.)

ವಾಯಸಕೋಟಿಯೂರ ಬನದಿಂ ಪಥಿಕರ್ ನಲೆ ಕೇಳುವಂತೆ ಕಾ
ಕಾಯೆನುತೂರನೆಯ್ದಿದುವು ಗೂಗೆಗಳೋಡಿ ಘು ಘುಮ್ಮೆನುತ್ತೆ ನೀ ।

---

[1] ಚ್ಚಿ (ಅ). [2] ಬಳಲ್ದ (ಅ). [3] ಕೊ (ಕ.ಖ.ಬ). [4] ಬೆಳೆಯಮಱಿಯೊಗುವೆಳೆಯೊಳ್ (ಕ.ಖ.ಗ.ಬ).

ಡಾಯಮವೋದುದೀ ಜಗಮುಮೆಲ್ಲಿಯುಮಿಲ್ಲೆನೆ ನುಂಗಿ ನೀಲಶೈ
ಲಾಯತಮಾದ ಕಟ್ಟಲೆಯಡಂಗಿದುದೇಕ್ಷ್ಗೆಯ ಸುಪ್ರಭಾತದೊಳ್ ॥ ೫೮

ತೆಱೆದುವು ಗೋಪುರಪ್ರತತಿ ಸೆಜ್ಜರದಿಂ ಗಜರಾಜಿಯತ್ಪಮೆ
ಟ್ಟುಱೆ ದನಿದೋಱಿದೌ ಬಿಡದೆ ನೇಲ್ದುದು ಜಾಯಿಲನುಕ್ಕಡಕ್ಕೆ ಪೊ ।
ಕ್ಕಱಿವುಲಿ ಕಾಣಿಸಲ್ಕಣದೆ ಸಂಚರಮಾದುದು ರಾಜಗೇಹದಿಂ
ಪೊಱಮಡುತಿರ್ದುದುದ್ಧತವಿಳಾಸದೆ ಪಾಳಿಯದಂಗನಾಜನಂ (?) ॥ ೫೯

ತೊಡೆ ತೊಡೆಯೊಳ್ ಮರಳ್ದು ನಿಲೆ ಪೇರುರಮುಂ ಮೊಲೆಯುಂ ಮರಲ್ದೊಱ
ಲ್ದಡಸಿರೆ ವಂಧ್ಯಭಾಗಯುಗಳಂ ನಳಿತಂದು ತಗುಳ್ದು ಪತ್ತಿ ಚೆ ।
ಲ್ವಡೆದಿರೆ ಕಂದದೊಳ್ ಭುಜಲತಾವಳಿ ತಳ್ತಿರೆ ಬಾಯೊಳಗೊಂದಿ ಬಾಯ್
ತೊಡರ್ದಿರೆ ಕೂಡೆ ನಿದ್ದೆ ತಿಳಿದರ್ದುವು ನಲ್ಲವೊಣರ್ ನಿಶಾಂತ್ಯದೊಳ್ ॥ ೬೦

ಅಳಿದ ಕುರುಳ್ ತಡಂಮುಡಿದ ಸೋರ್ಮುಡಿ ಬೀಗಿ ಬೆಳರ್ತ ದೋರೆವಾಯ್
ಮಳಮಳಿಸುತ್ತಮಿರ್ಪ ನಗೆಗಣ್ ನಸುಜೋಲ್ದುಡೆ ಕೊಂಕಿದೋಲೆ ಚ ।
ಪ್ಪಲರ್ದ ಘನಸ್ತನಂ ನವನಖಾಂಕಮಲಂಕರಿಸಲ್ ನಿಜೇಚ್ಛೆಯಿಂ
ನುಳಿವಬಲಾಜನಂ ದಿನಕರೋದಯಕಾಲದೊಳೊಪ್ಪಿ ತೋಱುಗುಂ ॥ ೬೧

ಊದಿದುದು ತಣ್ಣೆಲರ್ಗಳಳಿ
ನಾದಂ ಗಾಂಧರದೊಳೊಂದಿ ನೆಗಟ್ಟುದು ಪದ್ಮಾ ।
ಮೋದಮಿನಿಸಿಂ ತೊವರ್ತೊವ
ರಾದುವು ಕೂಗಿದುವು ತಾಮ್ರಚೂಡಚಯಂಗಳ್ ॥ ೬೨

ಪರೆದುದು ಮರ್ಬು ಪರ್ಬಿದುದು ಕೆಂಬೆಳಗಿಂದ್ರದಿಶಾವಿಭಾಗಮಂ
ನುರಭಿ ಸಮಿಾರನೂದಿದುದೆಸಪ್ಮಿಸುಕಲ್ ತೊಡಕಿತ್ತು ಪಂಕಜಂ ।
ಸರಮಟಿದೊಂದನೊಂದೆಳಸುತರ್ದುವು ಕೋಕಮುಲೂಕಸಂಕುಳಂ
ಚರಿಯಿಸಿ ಬಂದಡಂಗಿದುವು ಪಕ್ಕಗಳೆದ್ದುವು ಸುಪ್ರಭಾತದೊಳ್ ॥ ೬೩

ಕಱಿದುವು ಪನಿ[1]ಪುಲ್ಲೊಳ್[1] ಕಂ
ದೆಱೆದುವು [2]ನಪಿಲೆರ್ದುಕರಿಣಿಕರ್ಣಂಗಳನೆ[2] ।
ಚ್ಚಱಿಸಿದುವಾಗುಳಿಯಿಂ ಬಾಯ್
ದೆಱೆದುವು ಸಿಂಗಂಗಳಲ್ಲಿ ಮುನ್ನೀಸಱಿನೊಳ್ ॥ ೬೪
(ಕಾದಂಬರಿ, ಪೂ.ಭಾ., ೧೪೨.)

---

[1] ಪುಲ್ಗಳ (ಅ), ವುಲ್ಗಳ್ (ಕ), ಪುಲ್ಲಗೆ (ಖ.ಬ). [2] ಪುಲಿಗಳ್ ನವಿಲ್ಗಳುಂ ಕರಿಗಳನೆ (ಕ.ಖ.ಬ).

ಧೃತನಿದ್ರಾಲಸ್ಯಭಾರಂ ತೊಲಗೆ ಬಿದಿರ್ದಲರ್ ಪಂಕಮಂ ಕೂಡೆ ತೀನೆ
ರ್ದ ತನುಸ್ಥಾನಂಗಳಂ ಕೊಂಕಿನೊಳಡಿಗಡಿಗಂದಂಟಿ ಸೋಂಕೆತ್ತಿ ಕೂಗಿ
ತ್ತ ತಿರಾಗಂ ಕುಕ್ಕುಟಂ ಕುಂಟಣಿಯರ ಬೆಸದಿಂದೊತ್ತೆಗೊಂಡನ್ಯಕಾಂತಾ
ರತಿರಾಗಶ್ರಾಂತೆಯರ್ಗಂದುದಯದೊಸಗೆಯಂ ಸಾಱುವೊಂದಂದದಿಂದಂ ॥ ೬೫

ಒದವಿದ ನಿದ್ರೆ ಪಿಂಗೆ ಕುಸಿದೊಯ್ಯನಡಂಗಿದ ಗೋಣನೆತ್ತಿ ನೀ
ರದಪಥದತ್ತ ಲೊಗ್ಗುಡಿಸಿ ನೋ[1]ಡಿ ಶಿರೋಧರ[1]ಕೇಸರಂಗಳಂ ।
ಬಿದಿರ್ದು ತಟಂತಟೆಂದೆಱಿಕೆಗುಟ್ಟಿ ತಗುಳ್ದೊಡನೊತ್ತಿ ಕೋಟಿ ಕೂ
ಗಿದುದಮರ್ದಪ್ಪಿದೋಪರೆರ್ದೆ ಪವ್ವನೆ ಪಾಱಿ ನಿಶಾವಸಾನದೊಳ್ ॥ ೬೬

ಕಲಸಿದ ಕೂಟ ತಂಬುಲದಲಕ್ಕಿಯ ಮೊಟ್ಟೆಯ ಮೊಟ್ಟೆ ಬೆನ್ನೊಳ
ಗ್ಗಲಿಸಿರೆ ಕಯ್ಯ ಕ್ಕೈದು ಪಸುರ್ವಟ್ಟಿಸೆವಕ್ಷತೆ ತೊಟ್ಟ ಕೆರ್ಪುಗಳ್ ।
ಬಲದ ಹಸುಂಬೆ ನಾಂದೆ ವಳಯಕ್ಕಧಿದೇವತೆ[2]ಕೂರ್ಗೆ[2] ಬಂಧುಗಳ್
ನೆಲಸುಗೆನುತ್ತೆ ಮೇಲ್ ಪರಸಿದರ್ ಪಥಿಕರ್ ನಡೆದರ್ ಪ್ರಭಾತದೊಳ್ (?)॥ ೬೭

ಅರೆರಥ ಹೊನ್ನಗಾ[3]ಲಿ[3] ನಸು ಪಿಂಜ[4]ಳು[4]ಕುತ್ತಿರೆ ರನ್ನದೀಸು ಮೇ
ಲ್ಮರಲೆ ರಥಾಗ್ರದೊಳ್ ಪದುಳಮಿರ್ದರುಣಂ ನಸುಬಿಟ್ಟು ನೇಣನ ।
ಚ್ಚರರೆಯೆನುತ್ತು ಮಾ[5]ಲ್[5] ನಭಮಂ ತುಡುಕುತ್ತಿರಲಾ ಹರಿವ್ರಜಂ
ಹರಿದಡರ್ದೀಱೆ ಬಂದುದಯಶೈಲಮನೇಱುದನಬ್ಜಿನೀಪ್ರಿಯಂ ॥ ೬೮

ಒಳವು ಮಣಿನಿಕರಮುದಯಾ
ಚಳದೊಳ್ ಗಡಮೆಂದು ಬಂದು ನಿಂದಳ್ಗಿಂದ್ರಂ ।
ಕುಳಿಶದೊಳೆ ಮೀಂಟಿ ಮಗುಳ್ದು
ಚ್ಚಳಿಸಿದ ಮಾಣಿಕಮನರುಣಕಿರಣಂ ಪೋಲ್ತಂ ॥ ೬೯

ತಡೆಯದೆ ತಮಮೆಲ್ಲಮನೊಂ
ದೆಡೆಯೊ[6]ಳ್[6] ತಂದೊಟ್ಟಿ ಪೂರ್ವದೆಸೆಯೊ[7]ಳ್[7] ಧಾತ್ರಂ ।
ಸುಡಸುಡಲುರಿವೆರಸಿದ ಬ
ಲ್ಗಿಡಿಯಂ ಪೋಲ್ತೆಸೆದನರುಣಕಿರಣಸಹಸ್ರಂ ॥ ೭೦

ಜಲಧಿಚಳೋರ್ಮಿಚಾಮರಚಯಂಗೆ ದಿಶಾಧಿಪದಿಗ್ಗಜೇಂದ್ರಸಂ
ಕುಳಪರಿವಾರ[ಣ]ಭೋ[8]ಗಿಗೆ ನಭೋಮಣಿಮಂಟಪಮಂಡನಂಗೆ ಕ ।

---

[1] ಡುತನೆತ್ತಿಯ (ಗ.ಘ). [2] ದೂರ್ಕೆ (ಖ.ಙ). [3] ಡಿ (ಕ). [4] ಳಿ (ಕ).
[5] ರಿ (ಖ.ಙ). [6] ಳೆ (ಕ). [7] ಳೆ (ಖ.ಙ). [8] ಥಾ (ಅ).

ಣ್ಗೊಳಿಸೆ ಜಗನ್ಮಹಾಪ್ರಭುಗಭೀಕ್ಷಿಸಲೆತ್ತಿದ ಸುಪ್ರಭಾತಮಂ
ಗಳ ಮಣಿದರ್ಪಣಕ್ಕೆ ದೊರೆಯಾಯ್ತುದಯಾದ್ರಿಯೊಳರ್ಕಮಂಡಲಂ ॥ ೭೧
(ಲೀಲಾವತಿ, ೩–೮೨.)

ಸುರದಿಕ್ಕಾಮಿನಿ ಪೊಯ್ಯೆ ಮೇಗೊಗೆದ ಶೋಣಂ ಕಂದುಕಂ ತಾನಿದೆಂ
ಬರ ಮಾತಿ[1]ರ್ಕೆಮ[1] ಮೀಂಗಳೆಂಬಲರ್ಗಳಂ ಕೊಯ್ಯಲ್ಕೆ ತತ್ಕಾಂತೆ ಬಿ ।
ತ್ತರದಿಂದೆತ್ತಿದ ಕೆಂದಳಂ ದಲೆನೆ ಕಣ್ಗಾದಂ ಬೆಡಂಗಾದನಂ
ಬರಲಕ್ಷ್ಮೀವ್ಯತಚಂದ್ರಿಕಾ[2]ಧವ[2]ಳವಾಸಸ್ತಸ್ಕರಂ ಭಾಸ್ಕರಂ ॥ ೭೨
(ಚಂದ್ರಪ್ರಭಪುರಾಣಂ, ೮–೧೪೦.)

ಮುರರಿಪು ಪಾರಿಜಾತಕುಜಮಂ ಕೊಳೆ ಬಿಲ್ವಿಡಿದಂದು ಸೋಲ್ತೆನಿಂ
ಪರಿಣತನಪ್ಪೆನಡ್ಡಣದೊಳೆಂದೊಸೆದರ್ಚಿಸಿ ಮೂಡವೆಟ್ಟದೊ ।
ಳ್ಗರುಡಿಯೊಳಿಂದ್ರನಾಂತ ಪೊಸಮಾಣಿಕದಡ್ಡಣಮಿಂತಿದೆಂಬಿನಂ
ಕರಮೆಸೆದಿತ್ತು ಶೋಣರುಚಿಯಿಂದುದಯಾದ್ರಿಯೊಳರ್ಕಮಂಡಲಂ ॥ ೭೩
(ಜಗನ್ನಾಥವಿಜಯಂ, ೧೬–೧೩೯)

ಸ್ಮರಪರಿತಾಪದಿಂ ಮಱುಗಿ ಕೋಟಲೆಗೊಂಡೆರ್ದೆಯಾಱು ಸುತ್ತಲಂ
ಪರಿಪರಿದಾತ್ಮವಲ್ಲಭೆಯನೀಕ್ಷಿಸಿ ಕಾಣದೆ ಜಕ್ಕವಕ್ಕಿಗಳ್ ।
ನರಸಮೃಣಾಳಮಂ ಶಿಖಿಗೆ ತೋಱಿದವೋಲ್ ಕರಗುತ್ತಮಿರ್ಪುದುಂ
ಕರುಣಿಸಿದಂತೆ ಬಂದುದಯಶೈಲಮನೇಱಿದನಂಬುಜಪ್ರಿಯಂ ॥ ೭೪

ನಿಶಿ ಬಿಚ್ಚೋಡೆ ಶಶಾಂಕನುನ್ನತಕರಂಗಳ್ ಬಾಡೆ ಕಂಜಾಳಿ ಸಂ
ತಸಮಂ ಸೂಡೆ ಮರಾಳಿ ಪಾಡೆಯೊಲವಿಂ ಚಕ್ರದ್ವಯಂ ಕೂಡೆ ಶೈ ।
ತ್ಯಸಮೀರಂ ನೆಱೆ ತೀಡೆ ಕೈರವನಿಕಾಯಂ ಬಾಡೆ ಪೂರ್ವಾದ್ರಿ [3]ಕೆಂ
ಬಿಸಿಲಿಂದೊಪ್ಪಿರೆ ಮೂಡಿದಂ[3] ಭಗಣಶೋಭಾತಸ್ಕರಂ ಭಾಸ್ಕರಂ ॥ * ೭೫

ನಗೆಯಂ ಪಂಕಜವಕ್ತ್ರದೊಳ್ ದುಗುಡಮಂ ನೈದಿಲ್ಗಳೊಳ್ ಲಲ್ಲೆಯ
ಪ್ಪುಗೆಯಂ ಕೋಕಯುಗಂಗಳೊಳ್ ಪದಪಿನಿಂ ಕಣ್ಪೀನೆಯಂ ಗೂಗೆಯೊಳ್ ।
ಸೊಗಸಂ ದಿಕ್ಕತಿಯೊಳ್ ಪ್ರೇದಟ್ಟ ಜಯಮಂ ರಾಜಾಂಗನಾನೀಕದೊಳ್
ಮಿಗೆ ಮೂಡುತ್ತುದಯಾದ್ರಿಯೊಳ್ ನೆಲಸಿದಂ ಪಂಕೇಜಿನೀವಲ್ಲಭಂ ॥ * ೭೬

ಎಳದಳಿರಂತೆ ಪೆರ್ಮರದ ಕೊಂಬುಗಳೊಳ್ ನವಧಾತುನಿರ್ಝರಂ
ಗಳ ಪೊನಲಂತೆ ಶೈಲಶಿಖರಂಗಳೊಳುಜ್ವಲಮಪ್ಪ ಮಾಣಿಕಂ ।

---

[1] ರ್ಕದು (ಕ.ಖ.ಬ). [2] ವಿಮ (ಕ.ಖ.ಬ). [3] ಯಾಗಸಮಂ ಬಂದಿರದೇಱುದಂ (ಖ.ಬ). * ಈ ಎರಡು ಪದ್ಯಗಳು (ಕ) ಪ್ರತಿಯಲ್ಲಿಲ್ಲ.

ಗಳ ರುಚಿ ಪರ್ವಿದಂತೆ ಸುರ[1]ಗೇಹ[1]ಕನತ್ಕಳಶಂಗಳೊಳ್ ತಳ
ತ್ತಳಿಸಿದುದೀಷದುನ್ಮಿಷಿತಮಂಡಳಚಂಡಕರಾಂಶುಜಾಳಕಂ ॥ ೭೭

(ಲೀಲಾವತಿ, ೩–೮೧.)

ಒನಗೆಯನಂಬುಜಪ್ರತತಿಗುಬ್ಬಸಮಂ ಪೊಸನೆಯ್ದಿಲೋಳಿಗು
ರ್ಬಿಸುವೆಡರಂ ತಮಸ್ಸಮಿತಿಗೋತೊಡಗೂಟಮನಾ ವಿಯೋಗದಿಂ ।
ದೆನಗುವ ಚಕ್ರವಾಕಮಿಥುನಕ್ಕೆ ದಿಶಾನನದುಜ್ಜ್ವಳಿಕ್ಕೆಯಂ
ಬಿಸಿಗದಿರ್ಗಳ್ ಕವಿಲೊತ್ತಡನೆ ನೂಸಿದುವಾದಮೆ ಸುಪ್ರಭಾತದೊಳ್ ॥ ೭೮

ಇದೆ ಹೇಷಾಘೋಷದಿಂ ವಾಹಳಿಗೆ ಕರೆವವೋಲ್ ಕಟ್ಟಿ ಬಂದಶ್ವಮಾಯಿ
ರ್ದುದೆ [2]ಗುರ್ಬಿಂ[2] ಪಣ್ಣಿ ಬಂದೋಜೆಗೆ ನಿಱಿಸಿದ ಕಟ್ಟಾನೆ ಸೇಪಾರತೋಶ್ಚೇ ।
ಕದಿನೀಗಳ್ ದೇವ ಬಂದಿರ್ದಪುದು ಸಕಳರಾಜನ್ಯಕಂ ಮಂತ್ರಿವರ್ಗಂ
[3]ಪದನಂ ಪಾ[3]ರ್ದಿರ್ಪುದಿನ್ನುಪ್ಪವಡಿಸು ಜನತಾನೇತ್ರನೀರೇಜ[1]ಭಾನೂ[4] ॥ ೭೯

(ಲೀಲಾವತಿ, ೩–೮೪.)

ದಾನೇಭಂ ಪುಂಗವಂ ಕೇಸರಿ ಸಿರಿ ಸುಮನೋಮಾಲೆ ಚಂದ್ರಂ ದಿನೇಶಂ
ಮೀನಂ ಕುಂಭಂ ಕೊಳಂ ಪಾಲ್ಗಡಲಿಭುರಿಪುಪೀಠಂ ಸುರೋದ್ಯದ್ವಿಮಾನಂ ।
ಶ್ರೀನಾಗಾವಾಸಮುಚ್ಚಂ ಮಣಿ[5]ಚ್[5]ಯಮನಲಜ್ವಾಲೆಯೆಂದಿಂತಿವೆಲ್ಲಂ
ಮಾನಾಲಂಕಾರನೊಳ್ ಮಾಡುಗೆ ಜಿನಜನನೀಷೋಡಶಸ್ವಪ್ನದೊಳ್ಪಂ ॥ ೮೦

(ಲೀಲಾವತಿ, ೩–೭೫.)

ನವರೋಮಾಂಚದ ಕೀಲ್ ನಡಿಲ್ದು ತೊಡೆ [6]ತೋಳ್[6]ಮೆಯ್ಯೆಲ್ಲಮೆಚ್ಚತ್ತು ಚಿ
ತ್ತವಧೂಬಾಲಮೃಣಾಳಬಾಹುಲತಿಕಾಸಂಶ್ಲಿಷ್ಟರತ್ಯಂತಿಕೋ ।
ತ್ಸವಸಂಸ್ಕಾರಿಕಮಾಗೆ ಕಣ್ದೆಱೆದುವೊಂದೇ[7]ಕ್[7]ಷಣಂ ನಿಂದು ಮೈ
[8]ನವಿದೆಲ್ದಿಂ[8] ಮಣಿಮಂಚತಳ್ಪತಳದಿಂ ಸಾಹಿತ್ಯರತ್ನಾಕರಂ ॥ ೮೧

(ಅನಂತನಾಥಪುರಾಣಂ, ೮–೭೦.)

ಮಧುರಾಜ್ಯಾವೇಕ್ಷಮಂ ನೀನೊಡರಿನು ತಲಸಂಸ್ಪರ್ಶನಂ ಮಾಡು ಸಂಧ್ಯಾ
ವಿಧಿಯಂ ನಿರ್ವರ್ತಿಸಚ್ಛಾರುಣಮಣಿಗಣದಿಂದರ್ಘ್ಯಮಂ ಭಾಸ್ಕರಂಗೆ ।
ತ್ತು ಧರಾದೇವೋತ್ತಮಾವರ್ಚನ ವಿರಚನೆಯಂ ತಾಳ್ದು ಶುದ್ಧಾತ್ಮನಾಗಿ
ರ್ದಧಿದೈವಾರಾಧನಂಗೆಯ್ ವಿವಿಧವಿಧಿಸಪರ್ಯೋಪಚರ್ಯಾಂಶದಿಂದಂ ॥ ೮೨

---

[1] ಕೂಟ (ಅ). [2] ಪರ್ವಿಂ (ಅ.ಕ). [3] ಸದನಂಸಾ (ಕ.ಖ.ಬ). [4] ಮಿತ್ರಂ (ಖ.ಬ). [5] ಮ (ಕ). [6] ಗಳ (ಕ.ಖ.ಬ). [7] ತ (ಕ.ಖ.ಬ). [8] ನಿಮಿರ್ದೆದ್ದಂ (ಕ.ಖ.ಬ).

ಹಳಚಿತು ಸೂರ್ಯೋದಯಮೀ
ಸ್ಥಳಕೆಲ್ಲಂ ಕಾವ್ಯಸಾರಪೊಳಗೆಂದುದು ಹೊ ।
ಯ್ಸಳವಂಶಮೇರು ಯಾದವ
ಕುಳಾಂಬರದ್ಯುಮಣಿ ಸೋಯಿದೇವನೃಪಾಲಂ ॥ ೮೩

ಇದು ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ಷ್ಟಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕುಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ವಿರಚಿತಮಪ್ಪ ಸೂಕ್ತಿ
ಸುಧಾರ್ಣವದೊಳ್

ಸೂರ್ಯೋದಯವರ್ಣನಂ ನವಮಾಶ್ವಾಸಂ ಸಂಪೂರ್ಣಂ.

ಋತುವರ್ಣನಂ

ವಸಂತೋದಯವರ್ಣನಂ

ತರು ಮೃಗ ಪಕ್ಷಿ ಮೇಘ ಜಲ ವಾಯು ದಿಶಾಜನ ಕಾಯಭೋಗ ಭಾ
ಸ್ಕರ ವಿಧು ರಾತ್ರಿ ವಾಸರ ಸುರಾಲಯ ಪರ್ವ ರತೋಪಚಾರ ಸಿಂ।
ಧುರಮದಜನ್ಮ ಯಾನ ಮದನೋದಯ ಸನ್ಯವಿಶೇಷಭಾವದೊಳ್
ಪರಿಣತನಪ್ಪವಂಗೆ ಋತುವರ್ಣನವಿಸ್ತರವೊಪ್ಪಿ ತೋಱುಗುಂ॥ ೧

ಪದದೊಳ್ ಠಾಯಿಗಳೋ[1]ಯರಂ[1]ಬಡೆಯೆ ವಾಕ್ಯಾರ್ಥಕ್ಕೆ ಪಕ್ಕಾಗೆ ರಾ
ಗದ [2]ಮರ್ಯಾದೆಯ[2]ನುಕ್ರಿಯಾಂಗುಳಿವಿಳಾಸಂ ಭಾವಮಂ ತಾ[3]ಳ್ಪಿ[3] ಕ।
ಬ್ಬದ ನಿರ್ವಾಹದ ಮೇ[4]ಗೆ[4] ಬೈಸಿಕೆ ಬೆಡಂಗಂ ಬೀಱಿ ನಿಂದೊರ್ವಳೋ
ದಿದಳಾಂದೋಳದೆ ಪಲ್ಲವಾಧರೆ ವಸಂತೋತ್ಪದ್ಯಮಂ [5]ಪ[5]ದ್ಯಮಂ॥ ೨

(ಅನಂತನಾಥಪುರಾಣಂ, ೬–೭೧.)

ವಿಕಸತ್ಪುಷ್ಪಾಟ್ಟಹಾಸಂ ಸ್ಮಿತಕುಸುಮರಜೋಭಸ್ಮ [6]ವಿಭ್ರಾಜಿ[6] ಮಾದ್ಯ
ತ್ಪಿಕನಾದಂ ಭೃಂಗಸಿದ್ಧಾಂಜನರಸಘುಟಿಕಂ ಪಲ್ಲವೋದ್ಯಜ್ಜಟಂ ಕ।
ಯ್ಯ ಕಪಾಲಂ ಚಂದ್ರಬಿಂಬಂ ತನಗೆನೆ ಜಗತೀಚಕ್ರಮಂ ಚ್ಯೈತ್ರಕಾಪಾ
ಲಿಕನೆಂಬಂ ಬಂದದೇಂ ವೋಹಿಸಿದನೊ ಮಧುಬಿಂದೂದ್ಗಮಂ ಗಂಧವಾಹಂ॥ ೩

(ಲೀಲಾವತಿ, ೯–೧೧೯.)

ನನೆದೋಱುತ್ತದಿ[7]ರ್ಮುತ್ತೆ[7] ಮುಂತೆ ಪನೆಗಳ್ ತೋರ್ಪಂತೆ ತಂಗಾಳಿ ಕೆಂ
ಗೊನ[8]ರೊ[8]ಳ್ ದಟ್ಟಡಿಯಿಟ್ಟುದೊಳ್ನಗೆ ಪೋದಬ್ದತ್ತಬ್ಜದೊಳ್ ಕೋಕಿಲಂ।
ಕೊನರಂ ಕರ್ಚಿ ತೊದಳ್[9]ನರಂಗೆಡೆದುದೆತ್ತಂ ನಂದನಶ್ರೀಯ ನಂ
ದನನಾನಂದ[9]ನ[9]ನನ್ಯಜಂಗಣುಗನಾಯ್ತಿಂತೀ ವಸಂ[10]ತೋದಯಂ[10]॥ ೪

(ಅನಂತನಾಥಪುರಾಣಂ, ೬–೭೨.)

---

[1] ರಣಂ (ಅ). [2] ಮಾಧುರ್ಯಮ (ಅ). [3] ೞ್ದ (ಅ). [4] ಲೆ (ಅ). [5] ಗ (ಅ).
[6] ವೈಭಾಸಿ (ಖ.ಘ). [7] ರ್ಗಂತಿ (ಅ). [8] ಯಾ (ಕ.ಖ.ಬ). [9] ಮ (ಕ.ಖ.ಬ).
[10] ತಾಗಮಂ (ಅ).

ಎಳವೆಱೆ ದಾಡೆ ಕೆಂದಳಿರೆ ನಾಲಗೆ ಮಾಮರನಳ್ಳಿಗೊಂಬಿನೊಳ್
ಮಿಳಿರ್ವೆಳವಳ್ಳಿ ಬಾಲಮಲರ್ದೊಂಗಲೆ ಕೇಸರಮೆಂಬಿನಂ ಮನಂ।
ಗೊಳೆ ಮಧುಮಾಸಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ
ಗೊಳಿಸಿದುದುತ್ಕಕೀರ ಮದಕೋಕಿಲ ಗರ್ಜಿತ ತರ್ಜಿತಂಗಳಿಂ॥ ೫

(ಅಜಿತನಾಥಪುರಾಣಂ, ೬--೨೩ ; ಶಬ್ದಮಣಿದರ್ಪಣಂ, ಪುಟ ೫೫.)

ಮಧುಲಕ್ಷ್ಮೀನೃತ್ಯಹಸ್ತಂ ರತಿಯುವತಿಪಯಃಕೇಳಿಶೃಂಗಂ ಸುಧಾಂಭೋ
ನಿಧಿಫಕ್ಕಾವಾದ್ಯಕೋಣಂ ಮನಸಿಶಯಮಹಾತ್ರಸ್ತಹಸ್ತಾಂಕುಶಂ ವಾ।
ರಿಧರಾಧ್ವಕ್ಷೇತ್ರಸೀ[1]ರಂ[1] ಹಿಮಕರಸಲಿಲಾಧಾರಲೀಲಂ ತಟಾಕಾ
ವಧಿಯೆಂಬೊಂದಂದದಿಂದಂ ಪೆಱೆ ನೆಱೆ ಮೆಱೆದತ್ತಾರ ಕಣ್ಗಂ ಮನಕ್ಕಂ॥ ೬

ಸಿರಿ ಬಂದಾಶ್ರೈಸಿದಳ್ ಮಾಧವನುದರದೊಳೊತ್ತಿಟ್ಟುಕೊಂಡಂ ದಿನೇಶಂ
ಪಿರಿದುಂ ಕೂರ್ಪಂ ಸುಧಾಸೂತಿಯೆ ಮುನಿದಪನೆಮ್ಮನ್ವಯಕ್ಕೆಂದು ನೀರೇ।
ಜರುಹಂ ಕಾಯ್ವಿಂ ನಿಜಾಗ್ರಾಯುಧವನಿಡೆ ಸಿಡಿಲ್ದೊಂದು ಭಾಗಂ ನಭಾಭ್ಯಾಂ
ತರದೊಳ್ ಸೂಸಿತ್ತೆನಲ್ಕೀನೆಸೆದುದೊ ಭಗಣಾನೀಕದಿಂದರ್ಧಚಂದ್ರಂ॥ * ೭

ವಿರಹಿಯ ಗಂಟಲಗಾಳಂ
ಸ್ಮರವೀರನ ಮಸೆದ [2]ಸೆಂ[2]ಡುಗೋಲ್ ಮಧುಲಕ್ಷ್ಮೀ।
ತರುಣಿಯ ಸೆಳ್ಳುಗುರೆನೆ
ಕರಮೆಸೆದತ್ತಂದು ಕೊಂಕಿದೆಳವೆಱೆ ನಭದೊಳ್॥ ೮

ಒತ್ತಂಬದೆ ವಿರಹಿಗಳಂ
ಚಿತ್ತಭವಂ ಬಂದಿವಿಡಿದು ಗಂಟಲ ಬಳೆಯಂ।
ಕೆತ್ತಿಸುವ ಬೊಮ್ಮಪಾತದ
ಕೃತ್ತಿಗೆಯೆನೆ ತೊಳಗಿ ಬೆಳಗಿತೆಳವೆಱೆ ನಭದೊಳ್॥ ೯

ತಿಳಿಪಲ್ ವಾಸಂತಿಯಂ ಸಂದಿ[3]ಸಿ[3] ಪುಗಲೆನೆ ಪುಂಸ್ಕೋ[4]ಕಿಲಂ ಧಾಷ್ಟ್ರ್ಯದಿ[4]ಬಂ
ದೊಳಪೊಕ್ಕಡ್ಡೈಸಿ ಮಲ್ಲೀಮುಕುಳಕಲಿತಭೃಂಗಾವಳೀನೀಲಮುಕ್ತಾ।

---

[1] ಲಂ (ಬ). [2] ಸಿಂ (ಕ.ಖ.ಬ).

* ಈ ಪದ್ಯವು ಎಂಟನೆಯ ಸಂಧಿಯ ೨೫೯ನೆಯ ಪದ್ಯವಾಗಿ ಹಿಂದೆಯೇ ಬಂದಿದೆ. ಎಲ್ಲ ಪ್ರತಿಗಳಲ್ಲಿಯೂ ಈ ಸ್ಥಳದಲ್ಲಿ ಪುನಃ ಉಪಯೋಗಿಸಿರುವುದರಿಂದಲೂ ಇದರ ಮೂಲ ಸ್ಥಾನವು ಇದೋ ಅದೋ ಎಂಬುದನ್ನು ಸ್ಪಷ್ಟವಾಗಿ ನಿಷ್ಕರ್ಷೆಮಾಡಲು ಸಾಧ್ಯವಿಲ್ಲವಾದುದರಿಂದಲೂ ಇದನ್ನು ಇಲ್ಲಿ ಉಳಿಸಿಕೊಂಡಿದೆ. [3] ಸ (ಅ). [4] ಕಿಲಡ್ಡಂಡಿಮಂ (ಕ.ಖ.ಬ).

ಫಳಮಂ ತಂದಿತ್ತು ಪಾದಂಬಿಡಿದು ನೆಗೆವಿನಂ ಕಂಟಕಂ ಚೂತಿಕಾಕ್ಕೋ
ಮಳೆಯಂ [1]ನಿಶ್ಶೇಷದೋ[1]ಷಂ [2]ಮೆ[2]ಱೆಯೆ ತಿಳಿಪಿದಂ ಪ್ರೇಮಕಾಂತಂ ವಸಂತಂ॥
(ಅನಂತನಾಥಪುರಾಣಂ, ೬–೭೪.)

ಮದನಂಗೀ ಲೋಕಮಂ ಸಾಧಿಸುವೆಡೆಗೆ ನೆರಂ ಬಂದುದೆಂಬಂದದಿಂದು
ನ್ಮದಕರ್ಣಾಟದ್ವಿ[ಜೋ][3]ತ್ಕೂಜಿತಕಳನಿನದಂ ಬಂದುದೆಂಬಂದದಿಂ ಪೊ।
ಣ್ಮಿದ ಭಾಸ್ವಚ್ಚಂದ್ರಬಿಂಬಕ್ಕಭಿನವಕಿರಣಂ ಬಂದುದೆಂಬಂದದಿಂ ಬಂ
ದುದು ನೀಳಾಂದೋಳಕೇಳೀವಿಳಸನಲಲನಾಗೀತಕಾಂತಂ ವಸಂತಂ॥ ೧೧

ಸ್ಮರರಾಗಾಂಧತ್ವದಿಂದಂ ಪಗಲೊಳಮನತೀಕೇಳಿ ಪೊಣ್ಮಲ್ ವಿಯೋಗಾ
ತುರಜೀವಾಹಾರದಿಂದಂ ರತಿಪತಿ ತಣಿಯಲ್ ಪುಷ್ಪಚಾಪಾಸ್ತ್ರಟಂಕಾ।
ರರ[4]ವ್ಯೋದ್ಭಿನ್ನಪ್ರಪಾಂಥ[4]ಪ್ರಕರಹೃದಯರಕ್ತಾಂಬುಗಳ್ ಕೂಡೆ ಮಾರ್ಗಾಂ
ತರದೊಳ್ ಸೂಸುತ್ತಿರಲ್ ಬಂದುದು ಶಿಶಿರನೃಪೋದ್ಯತ್ಕೃತಾಂತಂ ವಸಂತಂ॥೧೨
(ಕಾದಂಬರಿ, ಪೂ.ಭಾ., ೬೨೦.)

ಕಳಿಕಾಸಂಜಾತಚೂತಂ ಮುಕುಳಿತವಕುಳಂ ಪಲ್ಲವೋಲ್ಲಾಸಿ ಕಂಕೆ
ಲ್ಲಿ ಲತಾಂತಾಕ್ರಾಂತವಾನಂತಿಕಮೆನೆದುದು ಯೋಗಿವ್ರಜಸ್ವಾಂತಕುಂತಂ।
ವಿಲಸನ್ಮಲ್ಲೀಲತಾಂತಂ ರಟದಳಿಪಟಲಧ್ವಾಂತಮಿಂದುಪ್ರಭಾಸಂ
ಕುಲಭಾಭಾಸ್ಪದ್ದಿಗಂತಂ ಜಿತಸಕಲಜಗತ್ಕಂತುಕಾಂತಂ ವಸಂತಂ॥ ೧೩
(ಜಗನ್ನಾಥವಿಜಯಂ, ೧೪–೪೨.)

ಬನಮಂ ಕೆಂದಳಿರಿಂದೆ ಬಾಸಣಿಸುತುಂ ದಿ[5]ಗ್ಭಿತ್ತಿ[5]ಯಂ ಬಂದ ಮಾ
ವಿನ [6]ಕ[6]ಪಿಂದಮೆ ಪೂಸುತುಂ ವಿರಹಿಯಂ [7]ಮತ್ತಾ[7]ಳಿನೀ ಕೋಕಿಲ।
ಧ್ವನಿಯಿಂದಂಜಿಸುತುಂ ಸಮಸ್ತಜನಮಂ ಪುಷ್ಪಾಸವಾಸಾರದು
ರ್ದಿನದಿಂ ಸೊರ್ಕಿಸುತುಂ ಪೊದಟ್ಟುದು ಜಗತ್ಕಾಂತಂ ವಸಂತಾಗಮಂ॥ ೧೪
(ಕಾದಂಬರಿ, ಉ ಭಾ , ೭೮೧.)

ಬೆಳಪೀ ಚಂದ್ರಾಂಶು ಪೂತೀ ವಿಚಕಿಳ[8]ಮಲೆವೀ[8] ತಂಬೆಲರ್ ಬಗ್ಗಿಪೀ ಕೋ
ಕಿಳವೆನ್ನೊಳ್ ತಾವೆ ಮಾಟ್ಕುಂ ಭುವನಜಯಮನಾಂ ಕಯ್ದುಗೆಯ್ವನ್ನಮೇನೆಂ।
ದೆಳಮಾವಂ ನೆಮ್ಮಿ ತನ್ನೊಳ್ಪಳ ಮೊಲೆಗೆಲನಂ ನೋಡುತುಂ ತುಂಬಿಯಿಂದಂ
ಗಿಳಿಯಿಂದಂ ಬೀರಮಂ ಪಾಡಿಸಿ ಪೊಗಟಿಸುವಂ ಜೈತ್ರದೊಳ್ ಜೈತ್ರಮಿತ್ರಂ॥ ೧೫
(ಜಗನ್ನಾಥವಿಜಯಂ, ೧೪–೪೧.)

---

[1] ವಿಶ್ಲಿಷ್ಟರೋ (ಅ). [2] ಮ (ಅ). [3] ಜ (ಅ). [4] ವಂ ಪ್ರೌದ್ಭಿನ್ನಪಾರ್ಥ (ಖ.ಬ). [5] ಗ್ರಾಜಿ (ಅ). [6] ಕೆಂ (ಕ.ಖ.ಬ). [7] ಮುಕ್ತಾ (ಕ.ಖ.ಗ.ಬ). [8] ಲತೆಯಂ (ಕ.ಖ.ಗ.ಬ).

ಅಲರ್ವದನಾಯ್ತು [1]ಮುನ್ನೆನೆ ತಮಾಲದ ಕಿಲ್ಗವಲಿಂ[1] ತಳಿರ್ತ ಮಾ
ವಲೆದುದು ಬೆಳ್ಪುಗೂಡಿದುದು ಮಲ್ಲಿಗೆ ತುಂಬಿಯ ನಂತೆ ನಂಭ್ರಮಂ।
ನಿಲೆ ನೆರೆದತ್ತು ಬಾನವೆಱೆ ಕೇದಗೆ ಬೆಳ್ಗಱಿಗಟ್ಟಿದಂತೆವೋಲ್
ಜಲಕನೆ ಮೇಲೆಮೇಲೆ ಕಳೆವೊತ್ತುದು ಬಂದ ವಸಂತಮಾಸದೊಳ್॥ ೧೬

ಒದವಿ ಧರಾತಳಕ್ಕೆ ಬರುತಿರ್ದ ಬಸಂತನ ಕೂಡೆ ಮಾವು ಬಂ
ದುದು ಮಧುದೂತಿ ಬಂದುದೆಳಮಲ್ಲಿಗೆ ಬಂದುದಶೋಕವಲ್ಲಿ ಬಂ।
ದುದು ಸುರಹೊನ್ನೆ ಬಂದುದಿನಿತುಂ ನೆಱೆ ಬಂದುವು ಜಾತಿಯೊಂದೆ ಬಾ
ರದು ಕುಸುಮಾಸ್ತ್ರಭೂಪನದನಾವ ಜಗದ್ವಿಜಯಕ್ಕೆ ಹೇಳ್ವನೋ॥ ೧೭

ನನೆಯ ತೊಡಂಬೆ ಮಲ್ಲಿಗೆಯೊಳೊಂದೆರಡಾದುವು ಮಾಮರಂಗಳೊಳ್[2]
[2]ಕೊ[2]ನಗೊನೆ ಮೂಱು ನಾಲ್ಕು ತಲೆದೋಱಿದುವುಂಡಿಗೆ ಸಾಧ್ಯಮಾದುದಿಂ।
[3]ದೆ[3]ನಗೆ ಜಗತ್ತ್ರಯಂ ಮಲೆವರಾರೆನುತುಂ ಕುಸುಮಾಯುಧಂ ರತಿ
ಸ್ತನಪರಿರಂಭಣಪ್ರಣಯಿ ಪಾಡಿಸುವಂ ಬಿರುದಂ ಮದಾಳಿಯಿಂ॥ ೧೮
(ಮಲ್ಲಿನಾಥಪುರಾಣಂ, ೫-೨೪.)

ಚದುರರ ಪೆಚ್ಚನೆಚ್ಚಱಿಪ ಮಾಧವಲಕ್ಷ್ಮಿಗೆ ಪತ್ರಭಂಗಮಾ
ದುದು ವನಮಾಲಿ ಪಂಕ್ತಿಗುರುಳಾದುದು ತುಂಬಿಗಳೋಳಿ ನಾದಮಾ।
ದುದು ಪಿಕನಾದಮು[4]ಟ್ಟ[1] ಬಿಳಿದಾದುದು ಚಂದ್ರಿಕೆ ನಲ್ಮೆ ದಿ[5]ಟ್ಟಿ[5]ಯಾ
ದುದು ಮಲಯಾನಿಳಂ ತಿಲಕಮಾದುದು ಶೀತಮರೀಚಿಮಂಡಲಂ॥ ೧೯

ವನರುಹ[6]ಮೆ[6]ಡ್ಡಮಪ್ಪ ಮೊಗಮಾದ ತಳಿರ್ ತಳಮಾದ ಕೋಕಿಳ
ಧ್ವನಿ [7]ದನಿಯಾ[7]ದ ಪಣ್ಣುಡಕೆ ಬಾಯ್ದೆಱಿಯಾದೆಳವಳ್ಳಿ [8]ಮಿಕ್ಕ[8] ನೂ।
ತನತನುವಾದ ಮಲ್ಲಿಗೆಯ ತುಂಬಿಯ ಕೂಟಮೆ ನೋಟಮಾದ ನಂ
ದನ ವನಲಕ್ಷ್ಮಿ [9]ಮಾಧವಮಹೀಶನ ಕಾಂತೆಯೊ ಕಂತುಕಾಂತೆಯೋ[9]॥ ೨೦
(ಶಾಂತಿಪುರಾಣಂ, ೭-೧೦.)

ಕಳಹಂಸೀರಾಜಗೇಹಂ ಮಧುಪಮದ[10]ವ[10]ತೀಪಾನಕೇಳೀಗೃಹಂ ಮಂ
[11]ಡ[11]ಳಲಕ್ಷ್ಮೀಮಂಡ[12]ನಾ[12]ಸ್ಥಾಯಿಕೆ ಮಲಯಮರುದ್ವಾ[13]ಹಿನೀ[13]ಭೂಮಿ
[14]ಕೋ[14]ಕೀ।

---

[1] ಮುಂನೆನೆಸೆಮಾಳಧವಿಕಿಳ್ಗಮಂ (ಕ). [2] ಕ (ಅ). [3] ನ್ನೆ (ಅ). [4] ಟ್ಟೆ (ಕ.ಖ.ಗ.ಬ) [5] ಟ್ಟ (ಕ), ಟ್ಟೆ (ಖ.ಬ). [6] ವೆ (ಕ.ಖ.ಬ). [7] ಸರಮಾ (ಅ). [8] ಯೇಳೆ (ಅ). [9] ಕಣ್ಗೆಸೆದು ತನ್ನನೆ ನೋಡಿಸಿದಳ್ ತಯಾರ್ಯರಿಂ (ಅ). [10] ರ (ಬ). [11] ಗ (ಅ). [12] ನಾ (ಆ). [13] ಹಳೀ (ಕ.ಖ.ಬ). [14] ಕೇ (ಕ.ಖ.ಗ.ಬ).

ಕುಳನದ್ಮಂ ಕಾಮುಕಾಳೋಕನದವದಹನಂ ಕಾಮಚಕ್ರೇಶಚಾತು
ರ್ಬಳಚಕ್ರಂ ಜೈತ್ರ[1]ಜೈತ್ರ[1]ಧ್ವಜಚಯಮಲರ್ದುದ್ದಂಡಪಾಯ್ತು ಬ್ಬಷಂಡಂ॥ ೨೧
(ಅನಂತನಾಥಪುರಾಣಂ, ೬–೭೫.)

ಸ್ಮರಕಾಂತಾಪ್ರೇಯಸೀಸ್ಥಾಸಕಘುಸೃಣಲತಾಮಂಟಪಂ ದರ್ಪಕಾಧೀ
ಶ್ವರದಿಗ್ಜೈತ್ರೋತ್ಸವೋತ್ತಂಚಿತ ಮಣಿಮಯದೂಷ್ಯಂ ಮೃಗೀಭೂತಕಾಮಾ।
ತುರದಾವಜ್ವಾಳಿಕಾಮಂಜರಿ ಮಧುಮಧುಪಾನಪ್ರಮತ್ತಾ ಟವೀಪಿಂ
ಜರಿತಾಸ್ಯಾಡಂಬರಂ ಪೂತೆಸೆದುದಸದಳಂ ಪ್ರೌತ್ಪಲಾಶಂ ಪಲಾಶಂ ॥ * ೨೨
(ಅನಂತನಾಥಪುರಾಣಂ, ೬–೭೬.)

ಇನಿಯರ ಕಂತ`ರಾಗರಸಮಂ [2]ದಳ[2]ವೇಱಿಸುವಂತೆ ಕಾಮುದೇ
ವನ ಕರವಾಳ್ಗೆ ಕಾಮಿಹೃದಯಾರುಣವಾರಿಯನೆತ್ತುವಂತೆ ನಂ ।
ದನವನಲಕ್ಷ್ಮಿಯಂ ಘುಸೃಣದಿಂ ಪೊರೆವಂತೆ ಸುಧಾಂಶು ಸಂಜೆಗೆ
ತ್ತನುವಿಸುವಂತೆ ಕೆಂದಳಿರ ಪೊಂಪುಟಿ [3]ಪಪ್ಪ[3]ಕಮಾಯ್ತು ಶೋಕೆಯೊಳ್॥ ೨೩
(ಅನಂತನಾಥಪುರಾಣಂ, ೬-೭೭.)

ಎಳಲತೆಯ ಲಾಸ್ಯ[4]ಲೀಲೆಯೊ
ಳ್[4]ಳಿನೀಗೀತಕ್ಕೆ ನಿಂದು ಬಾಜಿಪ ಮಂದಾ ।
ನಿಳನಟನ ಪೊನ್ನ ತಾಳಂ
ಗಳಿವೆನಿಸಿದುವಲರ್ದ ಕರ್ಣಿಕಾ[5]ಪ್ರಸರಂಗಳ್[5] ॥ ೨೪
(ಅನಂತನಾಥಪುರಾಣಂ, ೬–೭೮.)

ಸೊಡ[6]ರ ಕುಡಿ[6]ಯಗೆ[7]ಗಳಂ ಪಸು
ರ್ವ[7]ಡಲಗೆಗಳೊಳಡಕಲಿಟ್ಟು ರತಿ ಪೊಯ್ದುವೊಲೇಂ ।
ಜಡಿದುದೊ ಸಂಪಗೆ ನನೆಯಿಂ
ಜಡಿದುದು ಮಧುಲಕ್ಷ್ಮಿ ತೊಟ್ಟ ಪೊಸಪೊಂದೊಡವಂ ॥ ೨೫
(ಅನಂತನಾಥಪುರಾಣಂ, ೬–೭೯.)

ಪನೆಗಳ್ ಪಣ್ಣನೆ ತೋರ್ಪ ಮೆಲ್ನನೆ ಮುಗುಳ್ವಾಯ` ನುಂದ್ದಿರ್ ಕೋಕಿಲ
ಧ್ವನಿ ಮುದ್ದಾದ ತೊದಳ್ನರಂ ಪೊಳೆವ ಮಾಂಗಾಯ್ ಕಾಯಿ ಲಾಲಾಜಲಂ ।

---

[1] ರಾಜ (ಅ). * ಈ ಪದ್ಯ (ಖ.ಬ) ಪ್ರತಿಗಳಲ್ಲಿಲ್ಲ. [2] ಮದ (ಖ.ಬ). [3] ಪಂಪ (ಕ.ಖ.ಗ). [4] ದಲೆಯೊಳಗ (ಅ). [5] ರಪ್ರಸರಂ (ಅ). [6] ರ್ಗುಡಿ (ಅ). [7] ಯಂ ಪಚ್ಚೆಯಪ (ಅ).

ಸೊನೆ ಪೆಣ್ದುಂಬಿಯ ಜಿಂಕು ತುಂಬಿಗಳಪಂ ಕೈಸಾರ್ಕೆ ಕೈವರ್ಪ ಚೆ
ಲ್ವನೆ ಪೋಲ್ತಿರ್ದುವು ನಂದನಾವಳಿಗಳೊಳ್ ಮಾಕಂದಮಾ ಕಂದನಂ ॥ ೨೬

ಅರಗಿಳಿ ದರ್ಭೆ ಪೂತರಳ್ದ ಮಲ್ಲಿಗೆ ಜನ್ನಿವರಂ ತಳಿರ್ ಮನೋ
ಹರತರಮಪ್ಪ ಕಾಸೆ ಕಬ್ಬಲ್ದಲ್ಲೊಗುವೊಳ್ಳಲರಕ್ಷತಂಗಳಾ ।
ಗಿರೆ ಮಱುದುಂಬಿಯಿಂಚರಮೆ ನಾಮರವಕ್ಕೆಣೆಯಾಗೆ ಕಾಮನಂ
ಪರಸುವಿಳಾಮರಂಬೊಲೆಸೆದಿರ್ದುದು ಚೂತಕುಜಂ ವಸಂತದೊಳ್ ॥ ೨೭

ರವದಳಿ ಗೆಜ್ಜೆ ಸೋಗೆಗಳೆ ಚುಂಚು ನವಾಂಕುರ ರಾಜಿ ದಾಡೆ ಪ
ಲ್ಲವಮುರಿಗಣ್ ಪಿಕಂ ಡಮರುಗಂ ಸೆಳೆಗೊಂಬು ಭುಜಾಸಿ ಕಿಂಕಿಣೀ ।
ರವಸಮುದಾರಕೀರತತಿ ಪಣ್ಗಳೆ ಪಂದಲೆಮಾಲೆಯಾಗೆ ಭೈ
ರವನವೋಲೇಂ ವಿಯೋಗಿಗತಿಭೈರವಮಾದುದೊ ಬಂದ ಮಾಮರಂ ॥ ೨೮

ಪೊಸ ನನೆಯೊಳ್ ಪಸುರ್ಪಲರೊಳಂ ಚಿರಮಲ್ಲದ ಬೆಳ್ಪು ಪಲ್ಲವ
ಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು ತುಂಬಿಯೊಳ್ ।
ಮಿಸುಗುವ ಕರ್ಪು ಬರ್ಬಿಸಿದವೊಲ್ ಬಗೆಗೊಳ್ವಿನೆಗಂ ಬಸಂತದೊಳ್
[1]ಬಸದಿಯ ಬಾಗಿಲಂ ತೆಱೆದ ಮಾಪ್ಕೆ[1]ಯೊಳಿರ್ದುದು ಬಂದ ಮಾಮರಂ ॥ ೨೯

(ಆದಿಪುರಾಣಂ, ೧–೬೬.)

ಎಳಗಿಳಿವಿಂಡಿನೋದುವ ಮಠಂ ಭ್ರಮರಂಗಳ ಗೀತಶಾಲೆ ಕೆಂ
ದಳಿರ್ಗಳ ಜನ್ಮಭೂಮಿ ವನಲಕ್ಷ್ಮಿಯ ಪೆರ್ಮಗನೋತಗಲ್ದ ಕೋ ।
ಮಳೆಯರ ಜೂಜು ಭೂತಳದ ಕಲ್ಪಕುಜಂ ಸಕಲಾವನೀರುಹಂ
ಗಳ ತಲೆನಾಯಕಂ ತುಱುಗಿ ಬಂದುದು ಚೂತಕುಜಂ ವಸಂತದೊಳ್ ॥ ೩೦

ನನೆಗೊಂಬಾಣತಿಮಾಡಿ ಪಾಡುವವೊಲಿರ್ದತ್ತು ಭೃಂಗಾಂಗನಾ
ಧ್ವನಿಯಿಂದಂ ತಳಿರ್ಗೊಂಬು ಪೆರ್ಚಿ ನಗುವಂತಿರ್ದತ್ತು ಪುಂಸ್ಕೋಕಿಲ ।
ಧ್ವನಿಯಿಂದಂ ಮಿಡಿಗೊಂಬು ಬಾಜಿಸುವವೋಲಿರ್ದತ್ತು ಕೀರೋಲ್ಲಸ
ದ್ಧ್ವನಿಯಿಂದಂ ಪೊಸಸುಗ್ಗಿಯುತ್ಸವಮನಾದಂ ಬೀಱುವಿಮ್ಮಾವಿನೊಳ್ ॥ * ೩೧

ತಳಿರೊಳ್ಗೊಂಬಿನೊಳೂಳ್ದ ಕೋಕಿಳಕುಳಂ ಪೂಗೊಂಬಿನೊಳ್ ಪಾಡುತಿ
ರ್ಪಳಿವೃಂದಂ ತುಱುಗಿರ್ದ ಬಲ್ಮಿಡಿಯ ತೂಗುಂಗೊಂಬಿನೊಳ್ ಪಾಯ್ದು ಬಂ ।

---

[1] ಬಸಮಾಳ್ತೆ ಬಾಳ್ತೆಗಳ ಬಾಪ್ಕೆ (ಕ), ಬಸತಿಗಳ ಬಾಳ್ತೆ ಬಾಳ್ತೆಗಳಬಾಳೆ (ಖ.ಬ).
* ಈ ಪದ್ಯ (ಕ) ಪ್ರತಿಯಲ್ಲಿಲ್ಲ.

[1]ದೆಳ[1]ಸುತ್ತಿರ್ಪ ಶುಕಾಳಿ [2]ಕೆಯ್ವ ಬೆಸದೊಳ್[2] ತಂತಮ್ಮ ಠಾಣಾಂತರಂ
ಗಳೊಳಿರ್ದಂಗಜತಂತ್ರದಂತೆಸಪಿ[3]ನಂ[3] ಹೆಲ್ವಾದುದಿಮ್ಮಾವುಗಳ್ ॥ ೩೨

(ಆದಿಪುರಾಣಂ, ೧೧–೯೬.)

ಅಲರಂಬಾದುದು ನಿನ್ನ ಕೋರಕದಿನೆ[4][ನ್ನಾ][4] ಚೆನ್ನವಿಲ್ ನಿನ್ನ ಗೊಂ
ಚಲ ಪೂವಿ ತಳೆದತ್ತು ತೋಮರಮು[5]ನಿನ್ನೆನ್ನಾ[5]ಜ್ಞೆ ನಿನ್ನಿಂದ ಸ ।
ತ್ಫಲಮಾಯ್ತೆಂದು ಮನೋಜರಾಜ[6]ನೆ[6] ಪಸಾಯಂಗೊಟ್ಟ ಕೆಂಬಚ್ಚೆಯಂ
[7]ತಳೆದಂತಾದುದು[7] ನೀಳ್ದ ಕೆಂದಳಿರ್ಗಳಿಂದಂ ಬಂದ ಮಾಕಂದದೊಳ್ ॥ ೩೩

(ಅನಂತನಾಥಪುರಾಣಂ, ೬–೮೬.)

ರತಿಗವತಂಸಮಾದ ತಳಿರಾವ ಮರಕ್ಕೊಳವೆನ್ನ ಬಿಲ್ಗೆ ಸಂ
ಗತಶರಮಾದ ಪೂಗುಡಿಗಳಾವ ಮರಕ್ಕೊಳವನ್ಯಪುಷ್ಪಮೂ ।
ಕತೆಗಗದಂಗಳಾದ ಕೊನರಾವ ಮರಕ್ಕೊಳವೆಂದು ಮನ್ಮಥಂ
ಸ್ತುತಿಯಿಸಿ ಮಾಮರಕ್ಕೆ ಕುಜರಾಜಸಮಾಖ್ಯೆಯನಿತ್ತನಟ್ಟಿಯಿಂ ॥ ೩೪

(ಚಂದ್ರಪ್ರಭಪುರಾಣಂ, ೭–೪೫.)

ವನಮಾಲಾ[7]ಕ[8]ಳಿತಂ ಸುಪ[9]ರ್ಣಮಿ[9]ಳಿತಂ ಸತ್ಕಾಂತಿಪೀತಾಂಬರಂ
ಘನಸುಚ್ಛಾಯನನಂತಭೋಗಿನಿಳಯಂ ಲಕ್ಷ್ಮೀಸಮೇತಂ ಸುದ ।
ರ್ಶನಸೇವ್ಯಂ ಸುಮ[10]ನಸ್ಸಮೂಹಶರಣಂ[10] ತೋಡಾಯ್ತು [11]ಪೇಂದ್ರಂಗೆ[11] ಮ
ಜ್ಜನಕಂಗೀ ಮರನೆಂದು ಮಾಮರಕೆ ಕಾವಂ ಕೊಟ್ಟನಾ[12]ತಿಥ್ಯ[12]ಮಂ ॥ ೩೫

(ಪುಷ್ಪದಂತಪುರಾಣಂ, ೮–೮೦.)

ತಳಿರೊಳ್ ನೀನೆ ಬೆಡಂಗನಯ್ ನನೆಗಳೊಳ್ ನೀಂ ನೀಱನಯ್ ಪುಷ್ಪಸಂ
ಕುಳದೊಳ್ ನೀನೆ ವಿಳಾ[13]ಸಿಯಯ್[13] ಮಿಡಿಗಳೊಳ್ ನೀಂ [14]ಚೆಲ್ವನಯ್[14] ಪಣ್ತ ಪ।
ಣ್ಗ[15]ಳೊಳ್ಗೋ[15]ವೋ ಪೆಱತ್ತೇನೊ ನೀನೆ ಭುವನಕ್ಕಾರಾಧ್ಯನಯ್ ಭೃಂಗಕೋ
ಕಿಳಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ [16]ಚೆನ್ನಂ[16]ಗಳೇ ॥ ೩೬

(ಆದಿಪುರಾಣಂ, ೧೧–೯೮.)

---

[1] ಡುಳಿ (ಅ). [2] ತಮ್ಮ ಬೆಸದಿಂ (ಅ). [3] ನಿಂ (ಅ). [4] ನ್ನಂ (ಕ.ಖ.ಬ). [5] ನೆನ್ನೊಂದಾ (ಅ). [6] ನ (ಅ), ನು (ಕ.ಖ.ಬ). [7] ಚಲದಂತಾದುವು (ಅ). [8] ಮಿ (ಅ). [9] ರ್ವಲು (ಅ). [10] ನಃಪ್ರತಾನನಿಚಿತಂ (ಆ). [11] ನೋಡಲ್ಕೆ (ಕಾ.ಸಾ). [12] ತೋದ್ಯ (ಕಾ.ಸಾ). [13] ನನ್ಯೆ (ಕ.ಖ.ಬ.ಗ). [14] ಸೊಂಪನ್ಯೆ (ಖ.ಬ). [15] ಳಿನೋ (ಅ). [16] ಚಿಹ್ನಂ (ಕ.ಖ.ಬ).

ಒಂದೆರಡು ಮೂಱು ನಾಲ್ಕರ
ಲಿಂದ್ಯೈದಾಱೇಱು ಮಿಡಿಗಳಿರದೆಂಬೊಂಬ ।
ತ್ತೊಂದಿದ ಪಣ್ಗೊನೆಯಿಂ ಪ
ತ್ತುಂ ದೆಸೆಗಂ ಮಾವು ಬೀಱುತಿರ್ದುದು ಸಿರಿಯಂ ॥ ೩೭

ಕಳಿಕೆ ಕೊನರ್ ತಳಿರ್ ಮುಗುಳಲರ್ ಮಿಡಿ ಕಾಯ್ ನನುದೋರೆ ದೋರೆಪ
[1]ಣ್ಗಳಿನಿರದಾ[1]ಗಳಾವ ಪರಿಯಿಂ ನಡೆ ನೋಟ್ಪರ ಮಾತೆ ತಾನೆ ಕ ।
ಣ್ಗಳ ಸಿರಿ[2]ಯಾಗಿ[2] ರಮ್ಯಮೆನಿಸಿರ್ದು ವಿಯೋಗಿಜನಕ್ಕೆ ವಲ್ಲಭಾ
ವಳಿಗದು ಡಾಮರಂ ಮದನತೋಮರಮಾದುದು ಬಂದ ಮಾಮರಂ ॥ ೩೪

(ಜಗನ್ನಾಥವಿಜಯಂ, ೧೪–೨೭.)

ಎಸೆವ ನವಾಂಕುರಂ ಕಳಿಕೆ ಪೆರ್ಚು ಕೊನರ್ ಕೊನೆ ಕೆಂದಳಿರ್ ತಳಿರ್
ಪಸುರೆಲೆ ಚಿಕ್ಕ ಸಣ್ಣನನೆ ಬಲ್ಮನೆ ಮೊಗ್ಗೆ ಮರಳ್ವ ಮೊಗ್ಗರಂ ।
ನನುಮಿಡಿ ಸಿಂಪು ಪೂಮಿಡಿ ಬಬಿಲ್ಮಿಡಿ ಕಾಯ್ ಪೊದಟ್ಟಿ ಕಾಯ್
ನನುಪರೆದೋರೆ ದೋರೆಯರೆವಣ್ ತನಿವಣ್ಣಿಸೆದತ್ತು ಮಾಮರಂ ॥ ೩೯

ಸೊನೆಯಿಂ ಗಂಧದಿನಗ್ರಪಲ್ಲವದಿನಾದಂ ನೀಳ್ದ ಕೊಂಬಿಂ ಜಗ
ಜ್ಜನಮಂ ಬೆರ್ಚಿಸುತಿರ್ಪ ಕಾಯಬಲದಿಂ ಭದ್ರತ್ವಮಂ ತಾಳ್ದಿ ತೊ ।
ಟ್ಟನೆ ಮಾಡಿತ್ತ ತಿಪೂತ ಚೂತಮಹಿಜಾತಂ ಪ್ರೀತಿಯಿಂ ಕಂತುಗಿಂ
ತು ನಿತಾಂತಂ ಮದದಂತಿಯಂತಿರೆ ತದೀಯಸ್ವಾಂತವಿಭ್ರಾಂತಿಯಂ ॥ ೪೦

ತುಱುಗಿ ತಳಿರ್ತ ಕೊಂಬು ನೆಱೆ ಪೂತು ಮರಲ್ದುಮರಲ್ದ ಕೊಂಬು ಕಿ
ಕ್ಕಿಱುಗಿಱುದಳ್ದಿಗೊಂಬು ಸೆಳೆಗೊಂಬೆಳಗೊಂಬು ಕವಲ್ತ ಕೊಂಬು ಕಾ ।
ಯ್ತೊಱಗಿದ ಕೊಂಬು ಪಣ್ಗೊನೆಯ ಪಿಂಗೊನೆಯಂ ಕೆಳೆಗೊಂಡ ಕೊಂಬು ವಿ
ತ್ತಱಿಯದ ಬೀಜಗೊಂಬೆಸೆದುದಾಮ್ರವನಾಂತರದೊಳ್ ನಿರಂತರಂ ॥* ೪೧

ಅವಿರಳಮಾದ ಮೆಯ್ವಸುರೆ [3]ಪಚ್ಚೆದಿಮಿರ್[3] ತಳಿರುಟ್ಟ ಪಚ್ಚೆಯೊ
ಪ್ಪುವ ತಿಳಕಂ ಮಧುವ್ರತಮಲರ್ದಲರ್ಗೊಂಚಲೆ ದಂಡೆ ಕೋಕಿಲಾ ।
ರವಮದು ಬೀರಮದ್ದಳೆಯ ನಿಸ್ವನಮಾಗಿರೆ ಕಟ್ಟಿ ಬಂದ ಕಂ
ತುವ ಬಿರುದಂ[4]ಕರಂತೆ[4] ಕರವೊಪ್ಪಿದುವಂದಿನ ಬಂದ ಮಾವುಗಳ್ ॥ ೪೨

(ಚಂದ್ರಪ್ರಭಪುರಾಣಂ, ೭–೪೨.)

---

[1] ಣ್ಬಳಸಿರಲಾ (ಅ). [2] ತಾನೆ (ಅ). * ಈ ಪದ್ಯ (ಕ) ಪ್ರತಿಯಲ್ಲಿಲ್ಲ.
[3] ಪತ್ತಿದುವುರ್ (ಖ.ಬ). [4] ದದಿಂದೆ (ಅ).

ಮಿಳಿರ್ವೆಳಗೊಂಬು ಕೈ ಕುಳಿರ್ವ ಕೆಂದಳಿರೊಂದಿದ ಕರ್ಣತಾಳಮಿ
ಟ್ಟಳಮೆನೆ ಸೋರ್ವ ಸೋನೆ ಮದಭೃಂಗ[1]ಕು[1]ಲಧ್ವನಿ ಭೃಂಗಮಾದ ಕೋ ।
ಕಿಳರುತಿ ಬೃಂಹಿತಸ್ವನ ಬಿಗುರ್ತು ತಳರ್ತೆಳವಳ್ಳಿ ಶೃಂಖಲಾ
ವಳಿಯೆನೆ ಮುಟ್ಟಿಬಂದುದೆಳಮಾಮರನೆಂಬ ಮದಾಂಧಸಿಂಧುರಂ ॥ ೪೩

ಎಳದಳಿರೆಂಬ ಮೇಲು[2][ದಲಸಲ್][2] ಸೆಳೆಗೊಂಬುಗಳೆಂಬ ತೋಳ್ಗಳಿಂ
ದಳಿಕುಳಮೆಂಬ ಕುಂತಳಮನೋಸರಿಸುತ್ತಲರೆಂಬ ಕಣ್ಮಲರ್ ।
ಪೊಳೆಯೆ ಪೊದಟ್ಟ ಪಣ್ಣೆಲೆಯ ಪೆರ್ಮೊಲೆಯೊತ್ತಿನದೊಂದು ಭಾರದಿಂ
ತೊಲಗದೆ ನಿಂದು ಚೂತಲತೆ ನೋಡಿದಳಂದು ವಸಂತರಾಜನಂ ॥ ೪೪

ಬಂದೆಳಮಾವೆ ಚಿತ್ತಜನ ಬೀಡಿನೊಳಾವುದು ರಾಜವಾರ್ತೆ ಕಾ
ಮಂ ದಯೆಗೆಟ್ಟು ಕಾಮುಕಜನಕ್ಕುಱು ಜರ್ವಿ ವಸಂತರಾಜ ಕೊ ।
ಲ್ಲೆಂದುಱು ದಂಡುವೇಟ್ಟನದುವಲ್ಲದೆ ಮನ್ಮಥಚಕ್ರವರ್ತಿಯೆ
ಯ್ತೆಂದಪನಿಂದು ನಾಳೆ ಬದುಕಿಲ್ಲ ವಿಯೋಗಿಗೆ ಪಂಕಜಾನನೇ ॥ ೪೫

ಅಲರ್ದೊಂಗಲ್ಗಳೆ ನೂಪುರಂಗಳೆನಿಸಲ್ ಮಾಂಗಾಯೆ ಮಾಂಗಾಯವೊಲ್
ಪೊಳೆಯಲ್ ಕೆಂದಳಿರೆಂಬ ಕೆಂಜೆಡೆ ಮರಲ್ದಲ್ಲಾಡೆಯುಂ ಕೋಕಿಲಂ ।
ಗಳ ಹುಂಕಾರದೊಳಂ ತೊದಳ್ ನುಡಿಯುತುಂ ಮುದದಿಂದಮುದ್ಯಾನಲಕ್ಷ್ಮೀ
ಯೆಳಕಯ್ಯಿಂದೆಱೆತಂದ ಕಂದನವೊಲೇಂ ಚೆಲ್ವಾದುವಿಮ್ಮಾವುಗಳ್ (?) ॥ ೪೬

ಪುದಿದೆಳಗಾಯ್ ವಸಂತದ ಮೊದಲ್ ನೆರೆದೊಪ್ಪುವ ದೋರೆಗಾಯ್ ವಸಂ
ತದ ನಡು ಪಣ್ ವಸಂತದ ಸೆಱಂಗೆನೆ ತನ್ಮಯಮಪ್ಪಿನಂ ವಸಂ ।
ತದ [3]ಪುದಿದಾ[3]ದಿಮಧ್ಯಮವನಾನಮೊಡಂಬಡೆ ತನ್ನೊಳಂ ವಸಂ
ತದೊಳಮಿದೇಂ ವಸಂತ[4]ದದಗುಂತಿಗೆ ಬಾಱ್ಮೊದಲಾಯ್ತೊ[4] ಮಾಮರಂ ॥ ೪೭
(ಶಾಂತಿಪುರಾಣಂ, ೭–೧೪೩.)

ಮಾವಿನ ಕೊನೆ ಮಾವಿನ ನನೆ
ಮಾವಿನ ಪೂ ಮಾವಿನೆಳೆಯ ಮಿಡಿ ಮಾವಿನ ಕಾಯ್ ।
ಮಾವಿನ ಪಣ್ಣಿಂದೆ ಜನಂ
ಭಾವಿಸೆ ಸರ್ವಾಂಗಸೌಂದರಂ ಮಾವೆಲ್ಲಂ ॥ ೪೮
(ಕಾವ್ಯಾವಲೋಕನಂ, ೪೮೭.)

ಕೋರಕಜಾಲದಿಂದೆಸೆದು ಕೆಂದಳಿರೇಱು ಮಡಲ್ತು ಕೂಡೆ ಕಾ
ಯ್ತಾರಮನಕ್ಕವಿಾ ಮಱುಯ ಬಲ್ಮಿಡಿಯಾಗಿ ಪಸುರ್ಪುಗೆಟ್ಟು ಕಾಯ್ ।

---

[1] ಕ (ಕ). [2] ಡೆಲಸತ್ (ಕ.ಖ.ಬ). [3] ನಿವಿದಾರ್ (ಅ). [4] ದೊಳಗಾಡಿಯ್ ವೊರಾಯಿತು ಬಂದ (ಕ.ಖ.ಬ).

ದೋರೆಗಳಾಗೆ ದೋರೆಯಿನಿತುಂ ತನಿವಣ್ಗಳುಮಾಗೆ ಮಾಮರಂ
ಪೌರಜನಕ್ಕೆ ಬೀಱುವುವು ಸತ್ಕವಿಯಂತೆ ರಸಾಯನಂಗಳಂ ॥ ೪೯

ತುಱುಗಿದುದೊಂದು ಕೊಂಬು ನನೆಯಿಂ ತಳರಿಂ ಪೆಱತೊಂದು ಕೊಂಬು ಸು
ತ್ತಿಱಿದುದು ತಳ್ತ ಬಲ್ಮಿಡಿಯ ಕಾಯ್ಗಳ ಗೊಂಚಲಿನೊಂದು ಕೊಂಬು ಪೂ ।
ತೊಱಗಿದುದೊಂದು ಮಾಮರದೊಳೊಂದೆಳಗೊಂಬದು ಕೂಡೆ ನಾಡೆ ಪ
ಣ್ತೊಱಗಿದುದೇನದಂಗಜ ಮಹೀಭುಜನಿರ್ಕೆಯ ಚಿತ್ರಶಾಲೆವೋಲ್ ॥ ೫೦

ಉಗುರೊತ್ತಿಂ ಸೋರ್ವ ಸೊರ್ಕುಂಗೊನರ ಸೊನೆಗೆಯೇಪ್ಪೈಸಿ ಬಾಯ್ದಾ
[ರೆಯಂ ತಾ
ಳುಗೆ ಮುಟ್ಟುತ್ತಿರ್ಪಂತಿ ಬಾಯಂ ತೆಱೆದು ಪರಭೃತಂ ಕಾಯ್ದು ಕಿಱ್ಕೊಂಬಿ
[ನೊಳ್ ಕೈ ।
ಮಿಗೆ ಪೊಕ್ಕುರ್ವೆಱೆ ತುಪ್ಪುಟ್ ಮಡಗೆದಱಿ ಕುಳಿರ್ ಪೋಪುಗಿಲ್ ಪೋಪು
[ಗಿಲ್ಪೋ
ಪುಗಿಲೆಂದಿಮ್ಮಾವಿನೊಳ್ ಕಣ್ಮಲೆದುದುಲಿದು ತನ್ನಿಚ್ಛೆಯಿಂದನ್ಯಪುಷ್ಟಂ ॥ * ೫೧
(ಅನಂತನಾಥಪುರಾಣಂ, ೬–೭೩.)

ಸೊನೆವನಿ ಚುಂಚುವಿಂ ಪನಿಯೆ ಮಾಂಗೊನರಂ ನ[1]ಲಿ[1]ಗರ್ಚಿ ಸೊರ್ಕಿನಿಂ
ತನು ದಳವೇಱೆ ಕಂಠವಿವರಂ ತೊವರೇ[2]ಱೆ[3] ಪಟುತ್ವವೇಱೆ ಕಾ ।
ಮನ ನನೆಯಂಬುಗಳ್[5] ವಿರಹಿವ್ಯಂದದ ಮೆಲ್ಲೆರ್ದೆಯಂ ಪುಗಲ್ ನಿಜ
ಧ್ವನಿ ಬಗೆಯಂ ಪುಗಲ್ ಬಿಡೆ ಪುಗಲ್ ಪ್ರಗಲೆಂದುದು ಕೋಕಿಲವ್ರಜಂ ॥ ೫೨
(ಜಗನ್ನಾಥವಿಜಯಂ, ೧೪–೩೮.)

ಪ್ರಣವೋತ್ಥಶ್ರುತಿಮಧುರ
ಕ್ವಣಿತಂ ದ್ವಿಜಮುಖ್ಯವೃತ್ತಿ ಕೃಷ್ಣರುಚಿತ್ವಂ ।
ಪೆಣ್ದಿರೆ ಪುರೋಹಿತಬ್ರಾ
ಹ್ಮಣನೆನಿಸಿತ್ತ ತನುನೃಪತಿಗೀ ಪರಪುಷ್ಟಂ ॥ † ೫೩
(ಚಂದ್ರಪ್ರಭಪುರಾಣಂ. ೭–೮೮.)

ತನಿವಣ್ಣಿಂ ಮಾರುತಾಂದೋಳ್[3]ದಿನೊ[3]ಸರ್ವ ರಸಾಸಾರಮಂ ದೂರದಿಂಭೋಂ
ಕನೆ ಕಂಡೆಯ್ತಂದು ಕಂಠಂ ನಿಮಿರ್ದಮರ್ದಿತೆ ಪಕ್ಷದ್ವಯಂ ಜೋಲೆ ಕಣ್ ವಿಾ।

* ಈ ಪದ್ಯವು (ಖ.ಬ.) ಪ್ರತಿಗಳಲ್ಲಿಲ್ಲ; (ಕ) ಪ್ರತಿಯಲ್ಲಿ ಬಹಳ ಸ್ಖಾಲಿತ್ಯವಿದೆ.
[1] ನು (ಅ.) [2] ಱಿ (ಅ). † ಈ ಪದ್ಯವು (ಕ) ಪ್ರತಿಯಲ್ಲಿಲ್ಲ. [3] ದೊಳೊ (ಕ.ಖ.ಬ).

ಲನದೊಳ್ ನಮ್ಮೀಳನಂಬೆತ್ತಿರೆ [1]ತನಿರಸಮಂ ಪೀರ್ದು ಪೀರ್ದಾರ್ದು[1] ಕಿಱ್ಗೊಂ
ಬಿನೊಳಡ್ಡಂ ಮೆಟ್ಟಿ [2]ತೆ[2]ಟ್ಟುಂದೆಱಿಯೆ ಗಱಪಿದತ್ತಾಮ್ರದೊಳ್ [6]ತಾಮ್ರತುಂಡಂ ॥
(ಚಂದ್ರಪ್ರಭಪುರಾಣಂ, ೭–೮೭.)

ಅಳಿ ಗಿಳಿ ಕೋಗಿಲೆ [3]ಕರ್ದುಕಿದೊ
ಡೆ[3]ಳವೆಱಿಯಂ[4]ಕುಶಮನಗ್ರ[4]ಪಲ್ಲವದೆಡೆಯೊಳ್ ।
ಕೊಳಿಸಿ ಬಸಂ[5]ತನ[5] ಬರವಿಂ
ಗೆಳಮಾವಿನ ಗಜಮನಿಟಿದು ಸರಿದಂ ಶಿಶಿರಂ ॥ ೫೫
(ಅನಂತನಾಥಪುರಾಣಂ, ೬–೮೧.)

ಕನರ್ಗಾಯಂ ಕಚ್ಚಿ ಮೆಯ್ಯೊಕ್ಕರಿಸಿರೆ ಸೊನೆಯಂ ಮೊಕ್ಕಳಂ ಕಚ್ಚಿ ಕಿಱ್ಗೊಂ
ದೆನುತುಂ ಕಿಱ್ಗೊಂಬಿನಿಂಬಂ ಬಿಸುಟು ತುರಿಪದಿಂ ಲಂಘನಂಗೆಯ್ದು ಮೇಲ್ಗೊಂ।
ಬಿನ ಪಣ್ಣಂ ಚಂಚುವಿಂ ಪೀರ್ದೊಸರ್ವ ರಸಮನೊಲ್ದಂದದಿಂದೀಂಟಿ ಕೈಮಿ
ಕ್ಕೆನಸುಂ ಕೈಗಣ್ಮಿ ತೆಟ್ಟುಂದೆಱಿದು ಗಱಪಿದತ್ತಾಮ್ರದೊಳ್ ತಾಮ್ರತುಂಡಂ॥ ೫೬

ಸಯ್ಗೊಂಬಿನ ತಳಿರ್ವುದುವಿನ
ಮಯ್ಗರೆದಿರೆ ಗಿಳಿಯ ಶಿಶುಗೆ ಪಣ್ಗಳ ರಸದಿಂ ।
ಬಾಯ್ಗಿಣ್ಣಲಾಗಿ ಮಾಣದೆ
ತಾಯ್[6]ಗಿಳಿ ತಂದೆಱಿದುದೊಂದು ಚೂತದ್ರುಮದೊಳ್ ॥ ೫೭

ಗಿಳಿಯ ಹಸುಗೂಸು ಮಾವಿನ
ಸೆಳೆಗೊಂಬಿನ ತಳಿರ ತೊಟ್ಟಿಲೊಳಗಱುತಿರೆ ಕಂ ।
ಡಳಿನಿವಹಮಲ್ಕಱಿಂ ಪೋ
ಗುಳಮಂ ಪಾಡಿದುವು ತೂಗಿದುದು ಗಂಧವಹಂ ॥ ೫೮

ಮಳಯಾನಿಲನಿಂದಲುಗುವ
ಸೆಳೆಗೊಂಬಿನ ಪಣ್ಣನಂತುಮಿಂತುಂ ಕರ್ದುಕ ।
ಲ್ಕಳವಳಿಪರಗಿಳಿ ಪೋಲ್ತುದು
ಮುಳಿದೋಪಳ ವದನಚುಂಬನೋತ್ಸುಕ ವಿಟನಂ ॥ ೫೯

ಪಸರಿ[6]ಸಿ[6] ಚೂತ ಕಟ್ಟು ಗುಡಿಯಂ ಪೊಸಮಲ್ಲಿಗೆಗಾಯ್ತು ನೂತನ
ಪ್ರಸವವಿಭೂತಿ ನಿನ್ನರಸಿಗೆಂ[7]ದುಱಿ ಪೇೞ್ದ[7]ವೊಲತ್ತಣಿಂದೆ ಬಂ !

---

[1] ತಣಿವಿನೆಗಂ ಪೀರ್ದು ಮೆಯ್ಯೆಱ್ಚಿ (ಅ). [2] ತ (ಕ.ಖ.ಬ). [3] ಕರೆದೊಡೆಎ (ಅ). [4] ಕುಶವದಗ್ರ (ಅ), ಕುಸುಮವಗ್ರ (ಖ.ಬ). [5] ತಂ (ಖ.ಬ). [6] ನು (ಅ). [7] ದೆಡೆವೇೞ್ವ (ಅ).

ದೊಸೆದಳಿಕಾಂತೆ [1]ಪೇಪ್ ಸೆಳೆದುಕೊಂಡು[1] ನವೀನದಳೋತ್ತರೀಯಮಂ
ಪೊಸಯಿಸಿ ಸೂಜಿಗೊಂಡುದಲರ್ಗಂಪುಗಳಂ ಸಹಕಾರಕಾಂತನಾ ॥ ೬೦
(ಲೀಲಾವತಿ, ೯–೧೦೩.)

ಮುಳಿದುಟಿದೋಪರಳ್ಳೆರ್ದೆ ಪುಗುಳ್ತು ರಿವಂತೆ ಮುಗುಳ್ತು [2]ನಾಣ ಜಾ[2]
ಣೊಳಗೆ ಸಡಿಲ್ವಿನಂ ಪೊರೆ ಸಡಿಲ್ದು ಕದಂಪು ಬೆಳರ್ತು ಬಾ[3]ಡಿ[3] ಪೊ ।
ಟ್ಟಳಿಸಿ ಬೆಳರ್ತು ಮುದ್ರಿಸಿದ ಬಾಯ್ಗಳ್[4]ಲರ್ವಿ[4]ರಿವಂತೆ ಕಂಪು ಕೈ
ಕೊಳೆ ಬರಿದತ್ತು ತುಂಬಿ ನೆರೆವಲ್ಲಿಗೆ [5]ಮ[5]ಲ್ಲಿಗೆ ಸಂತೆಯಂತೆವೊಲ್ ॥ ೬೧
(ಅನಂತನಾಥಪುರಾಣಂ, ೬–೮೪.)

ಪನ್ನೆರೊಳಸೋರೆ ಬೆಳ್ಪು ಬಳೆಯುತ್ತಿರೆ ತೆಂಕಣಗಾಳಿಯಿಂ ಸಡಿ
ಲ್ವಸು [6]ಪೊರೆಯಾಗೆ[6] ಸಂಜನಿತ ಕಾಮಶಿಳೀಮುಖಪಾತದಿಂ ರಸಂ ।
ಪೊಸತು ಪೊದಟ್ಟು ಪೊಣ್ಮೆ ವಿರಹಾತುರೆಯಂತೆವೊಲೇಂ ಸುಗಂಧನಿ
ಶ್ವಸಿತಮನೆತ್ತಿ ತೋ ಬಿರಿದ ಮಲ್ಲಿಗೆ ಬಂದ ಬಸಂತಮಾಸದೊಳ್ ॥ ೬೨
(ಲೀಲಾವತಿ, ೯–೧೦೫.)

ಕುಸುಮಕುಳಕ್ಕೆ [7]ನಿನ್ನ ರಸೆ[7] ನಿನ್ನ ವಿಳಾಸಮೆ ನಿನ್ನ ಚೆಲ್ವೆ ನಿ ।
ನ್ನೆನಕಮೆ ನಿನ್ನ [8]ಸ್ಮೈಪೆ[8] ಮಧುಲಕ್ಷ್ಮಿ[9]ಯುಮಾ[9]ಮಲಯಾನಿಲೇಂದುಗಳ್
[10]ಪಸರಿಕೆ[10] ನಿನ್ನ ಸೌರಭ[11]ದಿ[11]ನೆಂದಭಿಷೇಕಪುರಸ್ಸರಂ ಸ್ಮರಂ
ನಸು ಬಿರಿದಿರ್ದ ಮಲ್ಲಿಗೆಗೆ ಕಟ್ಟಿದ[12]ನೊಲ್ದ ಧಿರಾಜ[12]ಪಟ್ಟಮಂ ॥ ೬೩
(ಶಾಂತಿಪುರಾಣಂ, ೭–೧೪೨.)

ಪರೆಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱಿ ತೆಂಬೆಲರ್
ಪೊರೆ[13]ವೊರೆಯಂ ಸಡಿಲ್ಚೆ[13] ನಡು ಪೊಂಗಿರೆ ಮಲ್ಲಿಗೆಗಳ್ ಬಸಂತದೊಳ್ ।
ಬಿರಿದೊಡೆ ನಲ್ಲರಂ ನೆನೆದ ನಲ್ಲರ ಮೆಲ್ಲೆರ್ದೆಗಳ್ [14]ನಿರಂತರಂ[14]
ಬಿರಿ[15]ವುವವೆಂ[15]ತೊ ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುದೋ ॥ ೬೪
(ಪಂಪಭಾರತಂ, ೫–೩೩.)

ಬನದ ವಿಭೂತಿ ತಂಬೆಲರ ಮೆಯ್ಸಿರಿ ತುಂಬಿಯ ಗೀತಶಾಲೆ ಚೈ
ತ್ರನ ತೊಡವೋತಗಲ್ದರೆರ್ದೆದಲ್ಲಣವೋಪರ ಸೈಪು ಕಾಮನಂ ।

---

[1] ಯೇಂ ಸೆಳೆದುದೊಂದೆ (ಅ). [2] ನಂದನಾ (ಅ.) [3] ಡೆ (ಕ.ಖ.ಬ). [4] ಳಲ್ವ (ಕ.ಖ.ಬ). [5] ವ (ಖ), ಯ (ಬ). ಪೊಱಯಾಗಿ (ಕ.ಖ.ಬ.ಗ). [7] ನೀನರಸಿ (ಕ.ಖ.ಬ). [8] ಸಲ್ಗೆ (ಅ). [9] ಯೊಳಾ (ಅ). [10] ಪ್ರೊಸಯಿನೆ (ಅ). [11] ಮ (ಅ). [12] ನಂಕದರಾಜ್ಯ (ಅ). [13] ಪೊಳೆಯಿಂ ನಡಿಲ್ಚೆ (ಖ.ಬ). [14] ಬನಂತದೊಳ್ (ಅ). [15] ದುವದೆಂ (ಅ).

ಬಿನ ಕಣಿ ಪುಷ್ಪಸಾಯಕನ ಕೀರ್ತಿಯ ಬಿಟ್ಟು ಮೊದಲ್ ಮೃಡಾರಿವೀ
ರನ ಜಯಶಕ್ತಿ [1]ಯಂತ[1]ಲರ್ದ ಮಲ್ಲಿಗೆಯಂ ಹರಿ ಮೆಚ್ಚಿ ನೋಡಿದಂ ॥ ೬೫

(ಜಗನ್ನಾಥವಿಜಯಂ, ೧೪–೭೦.)

ಅರಲ ಸರಲ್ ಸರಲ್ಗಡೆಸೆವಿಕ್ಷುಧನುರ್ಲತೆ ಬಿಲ್ಗಡಲ್ಲಿಯುಂ
ತಿರು ಗಡ ಪದ್ಮಸೂತ್ರಮೆಸೆವಂ ಗಡ ತಾನುಮನಂಗನೆಂದುಮಾ ।
ಪರಿ ಪರಿಹಾಸ್ಯವಾಡಿಮೆನುತುಂ ನಗೆಯೊಳ್ ಪೊಗೆಯೋಗಿ ಬಿಚ್ಚತಂ
ಬಿರಿವವೊಲಂತದೇಂ ಬಿರಿದುದೋ ಪೊಸಮಲ್ಲಿಗೆಗಳ್ ಬಸಂತದೊಳ್ ॥ ೬೬

ಬಲ್ಲಹನಾದನುರ್ವಿಗೆ ಬಸಂತನವಂಗೆ ಸಹಾಯನಾತನಿಂ
ಮಲ್ಲಿಗೆಗಾದುದಗ್ರಮಹಿಷೀಪದವಿಂ ಪೆಱತಾವುದೆಲ್ಲಿಯುಂ ।
ಮಲ್ಲಿಗೆಯಾಣೆ ಮಲ್ಲಿಗೆಯ ಘೋಷಣೆಯೆಂದು ಕಡಂಗಿ ನಲ್ಲರ
ಲ್ಲಲ್ಲಿಯೆ ನೂಡಿ ನೋಡಿ ನಡೆ ಸೌರಭದಿಂ ದಳವೇಱಿ ಸೊಕ್ಕುವರ್ ॥ ೬೭

ಪೊಸ ಸಿರಿಗಂಧದೊಳ್ ತೊಡೆದು ಕರ್ಪೂರದೊಳ್ ಪು[2]ಳಿ[2]ಗರ್ಚಿ ಕೂಡೆ ಬೆ
ಳ್ಪೆಸೆಯೆ ಹಿಮಾನಿಳಂ ತೆಗೆಯೆ ಪೂರ್ಣನಿಶಾಕರನೆಂಬ ಸಾಣೆಯೊಳ್ ।
ಕುಸುಮಶರಂಗೆ ಜಾಣ್ ನೆಱಿಯಲೆಂದು ವಸಂತಕನೆಂಬ ಕಮ್ಮಱಂ
ಮಸೆದಲಗೆಂಬಿನಂತೆಸೆಯುತಿರ್ದುಷ್ಣ ಮಲ್ಲಿಗೆಗಳ್ ಬಸಂತದೊಳ್ ॥ ೬೮

ಚಳಕಿಗೆಯಾದುವಾವವಱಿ ಬಲ್ಮುಗುಳಾವವಱಗ್ರಪಲ್ಲವಾ
ವಳಿ ಮುಡಿಯೊಳ್ ತೊಡರ್ಚಿ ರತಿಗೊಪ್ಪಮನಿತ್ತುವು ಪುಷ್ಪವಲ್ಲಿಯುಂ ।
ಫಳತರುವುಂ ದಿಟಕ್ಕೆ ಪೆಱತಾವುದೊ ಮಲ್ಲಿಗೆ ಚೂತಮೆಂದೆ ಕಂ
ಗಳ ಪಸವೋಡುವನ್ನಮೆಮೆಯಿಕ್ಕದವಂ ಮಧು ನಿಂದು ನೋಡಿದಂ ॥ ೬೯

(ಮಲ್ಲಿನಾಥಪುರಾಣಂ, ೫–೨೫.)

ಕಳಶಂ ಪದ್ಮಾಕರಂ ಕನ್ನಡಿ ಹಿಮರುಚಿ ಕಾಮಾಗ್ನಿ ಹೋಮಾಗ್ನಿ ಪುಂಸ್ಕೋ
ಕಿಳನಾದಂ ವೇದಮಂತ್ರಂ ಕುಡಿ ಗುಡಿ ಮಧು ಮೌಹೂರ್ತಿಕಂ ಪೂತವಲ್ಲೀ ।
ಕುಳಮೆಲ್ಲಂ ನಿಬ್ಬಣಂಬಂದಬಲೆಯರೆನೆ ಚೂತಂಗಮಾ ಮಲ್ಲಿಕಾಕೋ
ಮಳೆಗಂ ಕೊಂಡಾಡಿ ಕೈನೀರೆಱೆದನತನು ಲಾವಣ್ಯಪುಣ್ಯಾಂಬುವಿಂದಂ ॥ ೭೦

(ಮಲ್ಲಿನಾಥಪುರಾಣಂ, ೬–೪೪.)

ಇದು ಧಾತ್ರೀಪಾರಿಜಾತಂ ಸಕಲಸುಕವಿವೃಂದಪ್ರಣೂತಂ ವಸಂತಾ
ಭ್ಯುದಯಪ್ರೀತಂ ಮನೋಭೂನೃಪವಿಜಯರಥಖ್ಯಾ[3]ತ[3]ಸೂತಂ ವನಶ್ರೀ ।

---

[1] ಯೆಂದ (ಅ). [2] ಡಿ (ಖ.ಬ). [3] ತಿ (ಕ.ಖ.ಬ).

ನುದತೀಪ್ರೇಮಾತ್ಮಜಾತಂ ಫಲತರುವರವ್ಯಂದಾರ[1]ಕೋದ್ಯದ್ಯು[1]ಪೇತಂ
ಮದಭೃಂಗೀಗೀತ[2]ಗೀ[2]ತಂ ಕೃತವಿರಹವಿಘಾತಂ ದಲೀ ಬಾಲಚೂತಂ ॥ ೭೧

(ಚಂದ್ರಪ್ರಭಪುರಾಣಂ, ೭–೯೦.)

ರತಿಮದನಂ ವಸಂತಸಮಯಂ ಪುಳಿನಂ ನಳಿನಂ ಕೊಳಂ ಹಿಮ
ದ್ಯುತಿಲತೆ ಮಾವು ಕೀರಕಳಭಂ ಕಳಕಂಠರವಂ ರಥಾಂಗದಂ ।
ಪತಿ ತಳಿರುಯ್ಯಲೋಪರ ಸುಸಿಲ್ ನನೆ[3]ವಿಲ್ ನನೆಯಂಬು ಮಂದ[3]ಮಾ
ರುತ ನಳಿನೀನಿನಾದಮಿವಱುಂ ಪೊಸಮಲ್ಲಿಗೆಗಕ್ಕೆ ಮಂಗಳಂ ॥ ೭೨

(ಮಲ್ಲಿನಾಥಪುರಾಣಂ, ೬–೪೬.)

ಜನಸಮ್ಮೋಹನವಿದ್ಯೆ ತನ್ನ ಮಧುವಿಂ ಪುಟ್ಟಿತ್ತು ಪುಷ್ಪಂಗಳು
ಳ್ಳನಿತುಂ ನೋಂತ[4]ವೆ[4] ತನ್ನ ಕೀಚೆಸಬ ಸೌಭಾಗ್ಯಕ್ಕೆ[5]ನಿಪ್ಪಗ್ಗದೀ[5] ।
ವನದೇವೀ[6]ಸಖಿಗೀ[6] ವಸಂತವಿಜಯಶ್ರೀದೇವಿಗೀ ಚೂತರಾ
ಜನ ಮಾದೇವಿಗೆ ಮಲ್ಲಿಕಾರಮ[7]ಣಿ[7]ಗಂ ಭದ್ರಂ ಶುಭಂ ಮಂಗಳಂ ॥ ೭೩

(ಮಲ್ಲಿನಾಥಪುರಾಣಂ, ೬–೫೧.)

ಮುರಿದ ತೊಡಂಬೆಯೊಳ್ ಮೊ[8]ಗ[8]ಸಿ ತೋರ್ಪ ಪಸುರ್ನನೆ [9]ನಾಡೆ[9] ಬೆ
ಳ್ಕರಿಸಿದ ಮೊಗ್ಗೆ ಕೂಡೆ ಬಿಳಿದಾದ ಮುಗುಳ್ ಪೊರೆವೋದ ಕುಟ್ಮಳಂ ।
ಬಿರಿದಲರೆಂಬಿವಂ ತಿಱಿದು ಮಲ್ಲಿಗೆಯೊಳ್ ಶರಪಂ[10]ಚಕಂ[10]ಗಳಂ
ವಿರಚಿ[11]ಸಿ[11] ಪಂಚಬಾಣವೆಸರಂ [12]ಪಡೆ[12]ದಂ ಮದನಂ ಬಸಂತದೊಳ್ ॥ ೭೪

(ಮಲ್ಲಿನಾಥಪುರಾಣಂ, ೬–೪೭.)

ಅಸದಳಮಾದ ಮಲ್ಲಿಗೆಯ ಬಂಧುರಗಂಧಮನಾಂತು ತೆಂಕಣಿಂ
ದೆಸಗುವ ಗಾಳಿ ಗಂಧವಹನಾದುದು ಮಾಗಿಯ ಪೋಗು ಕಾಟ್ಪುರಂ ।
ಮಸಗುವ ಮಲ್ಲಿಕಾಮಧುವಿನಿಂ ಮಧುಮಾಸಮುಮಾಯ್ತು ಕೈದುವಂ
ಪೊಸಯಿಸಿ ಮಲ್ಲಿಕಾಕುಸುಮದಿಂ ಕುಸುಮಾಯುಧನಾದನಂಗಜಂ ॥ ೭೫

(ಮಲ್ಲಿನಾಥಪುರಾಣಂ, ೬–೪೮.)

ಸುರಭಿಸಮೀರಣಂಬೆರಸು ಬೇಗದೆ ಬಂದಲರ್ಗಣ್ಣ ಸನ್ನೆಯಿಂ
ಕರೆಯೆ ವಸಂತದೂತಿ ಸಹಕಾರನ ಕ್ಕೈವಿಡಿದಿರ್ದ ಮಲ್ಲಿಕಾ ।

---

[1] ಕತ್ಯಾಭ್ಯು (ಅ). [2] ನೂ (ಖ.ಬ). [3] ಯಂಬುಗಳಿಂದ ಬಂದ (ಖ.ಬ). [4] ದೆ (ಕ.ಖ.ಬ). [5] ತನ್ನೇಷ್ಟಗಿಯಂ (ಖ.ಬ). [6] ಸುಖದೀ (ಖ.ಬ). [7] ಣ (ಕ.ಖ ಗ.ಬ). [8] ನ (ಅ). [9] ಮೇಗೆ (ಅ). [10] ಜರಂ (ಕ.ಖ.ಬ). [11] ಸೆ (ಕ.ಖ.ಬ). [12] ತಳೆ (ಅ).

ಪರವಧುವಂ ವಿನೀಳಪರಿಧಾನಮನಾಕೆ ಮಧುಪ್ರನಂಗಕಾ
ತರೆ ಮುಸುಕಿಟ್ಟವೋಲ್ ಮುಸುಱಿ ಪೀರ್ದುವು ಸೌರಭಮಂ ಮದಾಳಿಗಳ್॥ ೭೬
(ಮಲ್ಲಿನಾಥಪುರಾಣಂ, ೬–೪೧.)

ಬಿರಿಮುಗುಳೊಳ್ ಮುಸುಂ[1]ಬ[1]ನಲೆದೊಯ್ಯನೆ ಕರ್ಣಿಕೆಯಂ ಕರ್ದುಂಕಿ ಕೇ
ಸರಮನೆಱಿಂಕೆ[2]ಯಿಂ[2] ಕೆದಱಿ ಬಂಡನುರಂಬರಮುಂಡು ತಳ್ತೆಸಱ್ ।
ಪೊರೆಯೊಳಡಂಗಿ ನುಣ್ಬರದಿನಾಣತಿಮಾಡಿದುದುನ್ಮದಾಳಿ ತಾ
ವರೆಯೊಳಗಿರ್ಪ ಲಕ್ಷ್ಮಿಯ ಮನಂಬಡೆವೆಕ್ಕಲಗಾಣನೆಂಬಿನಂ ॥ ೭೭
(ಮಲ್ಲಿನಾಥಪುರಾಣಂ, ೬–೯೯.)

ಸರಸಪಲಾಶಪುಷ್ಪಚಯದೊಳ್ ವನಲಕ್ಷ್ಮಿಯ ರತ್ನನೂಪುರ
ಸ್ವರಮೆನೆ ಮಲ್ಲಿಕಾಮುಕುಳದೊಳ್ ರತಿಕಾಂತನ ಬಾಣಭೀಂಕೃತ ।
ಸ್ವರಮೆನೆ ಹೇಮತಾಮರಸದೊಳ್ ಜಲದೇವಿಯ ವಕ್ತ್ರಕೂಜಿತ
ಸ್ವರಮೆನೆ ಪೊಣ್ಮಿದತ್ತು ಮಧುರಂ ಮಧುಮತ್ತಮಧುವ್ರತಸ್ವನಂ ॥ ೭೮

ರಾಗದೆ ಕೂಡೆ ಝೀಂಕರಿಸಿ ಪುಷ್ಪರಸಂಗಳನುಂಡು ಸೊರ್ಕಿ ಬೆಂ
ಡಾಗಿ ತಳಿರ್ಗಳೊಳ್ ಕೆಡೆದು ಪೂಮರನಂ ಮುಸುಕಿಟ್ಟು ಜೋಗುಳಂ ।
ತೂಗಿಯರಲ್ಗೆ ಬಂದು ನೆಗೆವಂಬರದೊಳ್ ವನಲಕ್ಷ್ಮಿಗಟ್ಟಿಯಿಂ
ಮೇಗೆ ಮನೋಜನೆತ್ತಿಸಿದ ಪೀಲಿಯ ಸತ್ತಿಗೆವೊಲ್ ಮದಾಳಿಗಳ್ ॥ ೭೯

ಎತ್ತುಂಗೋಲಂ ವಿರಹಿಗೆ
ಚಿತ್ತಭವಂ ತೊಟ್ಟನಿಕ್ಕಿದಂತಿರೆ ಬನದಿಂ ।
[3][ದೆತ್ತಿ][3] ಗಗನಕ್ಕೆ [4][ಪಾಱು][4]ವು
ವೆತ್ತಂ ಮಧುಮತ್ತಚಿತ್ತ ಷಟ್ಚರಣಂಗಳ್ ॥ ೮೦

ವಿರಹಿಗಳಿತ್ತ ಸಾರದಿರಿ ತಣ್ಣೆಟಲೀ ಬನಮೆಲ್ಲ ಮನ್ಮಥಂ
ಗಿರಲಿದೆ ದುರ್ಗ ಮಾಮರನೆ ಡೆಂಕಣಿ ಕಾಯ್ದುರಿಯೆಣ್ಣೆ ಕೆಂದಳಿ ।
ರ್ವುರಿಯೆಳಮಾಳೆ ದಳ್ಳಿಸುವಶೋಕೆ ಧನುರ್ವಸಿತೇಕ್ಷುದಂಡ ಷ
ಟ್ಚರಣದ ನಾಳಿಗೋಲೆನುತ ಕೋಗಿಲೆ ಸಾಱೆ ಬಸಂತಮಾಸದೊಳ್ (?) ॥ ೮೧

ಮಗುಟ್ಟಂ ಮಗುಟ್ದಾ ಪೊಸಮ
ಲ್ಲಿಗೆಯರಲಂ ಸಿರಿಯ ದೇಸೆಯಂ ಕಂದರ್ಪಂ ।

---

[1] ಕ (ಖ.ಬ). [2] ಯೊಳ್ (ಖ.ಬ). [3] ದಿತ್ತು (ಕ.ಖ.ಬ). [4] ಸಾರ್ದು (ಕ.ಖ.ಬ).

ಪೊಗಟ್ಟಿಂ ರತಿಗಂ ತಂಗಾ
ಳಿಗಮಳಿಗಂ ಗಿಳಿಗಮಿಂದುಗಂ ಕೋಗಿಲೆಗಂ ॥ ೮೨

ಮೊದಲೊಳ್ ತಂಬೆಲರ್ಗಾನೆ ಬೋದಣಿಗೆಗಂಪಂ ಬೀಱುದೆಂ ನುಗ್ಗಿಬ
ರ್ಪುದು[1]ಮೀ[1] ನಂದನಕಾನೆ ಮುಂದು[2]ಗೆಡೆದೆಂ[2] ಪುಷ್ಪೋಪಗಂ ಪುಷ್ಪಬಾ ।
ಣದ ಮುಂಗಾ[3]ಣ್ಕೆಯನಿತ್ತೆ[3]ನಾನೆ ಪೆಱ[4]ವೆ[4]ನ್ನಂತಾದುವೇ ಮ್ಯೆವೆಗಾ
ಸ್ಪದಮೆಂಬಂತೆವೊಲಾಯ್ತು ಮಾಧವಿ ಮದಾಳಿಧ್ವಾನಸಂತಾನದಿಂ ॥ ೮೩
(ಜಗನ್ನಾಥವಿಜಯಂ, ೧೪–೬೩.)

ನಿನಗೆ ವಸಂತದೂತಿವೆಸರೊಪ್ಪುವುದೆಂತೆನೆ ಮುಂದೆ ಬಂದು ನೀ
ನೆನಗೆ ವಸಂತನಾಗಮನಮಂ ನೆಱೆ ಸೂಚಿಸಿಕೊಟ್ಟೆಯೆಂದು ನಂ ।
ದನವನಲಕ್ಷ್ಮಿ ಕೀರರವದಿಂ ಪೊಗಟ್ಟಿತ್ತ ಪಸಾಯದಚ್ಚಮು
ತ್ತಿನ ಪೊಸಪಚ್ಚಮಂ ತಳೆದವೋಲದಿರ್ಮ್ಮತ್ತೆ ಮುಗುಳ್ತು ದೆತ್ತಲುಂ ॥ ೮೪
(ಚಂದ್ರಪ್ರಭಪುರಾಣಂ, ೭–೪೧.)

ಮಲಯಮರುಚ್ಚಮೂಪತಿಗರಲ್ಗಳ ಸೌರಭದಂಗಚಿತ್ತಮಂ
ಕಲಪಿಕನಾಯಕರ್ಗೆ ಪೊಸಮಾಂಗೊನರಂಗಡಿನೂಱುಯಂ ಶುಕಾ ।
ವಳಿಯ ಪದಾತಿಗಿತ್ತು ತನಿವಣ್ಗಳ ಪೊಟ್ಟಣಮಂ ವಸಂತನ
ಗ್ಗಳಿಕೆಗೆ ಬಂದು ಸಂವರಣೆದೋಱಿ ಮನಂಬಡೆದಂ ಮನೋಜ[5]ನಾ[5] ॥ ೮೫
(ಅನಂತನಾಥಪುರಾಣಂ, ೬–೮೫.)

ಹರನುರಿಗ[6]ಣ್ಗೆ ನೀಂ[6] ಸೊನೆಯ ಸೋನೆಯನಾಗಿಸು ಚೂತ ಕಂಠದೊಳ್
ಗರಳದ ಕರ್ಪನೊತ್ತಿ ಕಳೆ ಚಂದ್ರ[7]ಮ[7] ಪೂಸಿದ ಬೂದಿ ಪಾ[8]ಱು[8] ಮ್ಯೆ ।
[9]ಕರಲಿಡೆ ಬೀಸು[9] ಗಂಧವಹ ಕೆಂದಳಿ[10]ರೊಂದಲಗಿಂ[10] ಕಪರ್ದಿಯೊಳ್
ಬೆರಸು ಬಟಿಕ್ಕೆ ನೀನೆನುತೆ ನೋಡಿದನಂಗಭವಂ ವಸಂತನಂ ॥ ೮೬
(ಅನಂತನಾಥಪುರಾಣಂ, ೬–೮೬.)

ಬಂದಪನಿಂದು ನಾಳೆ ಮದನಂ ವನಕೇಳಿಗೆ ರಾಜಕೀರ ಮಾ
ಕಂದದ ಕಾಪು ನಿನ್ನದು ಮದಾಳಿಯೆ ಪೂಗಳ ಕಾಪು ನಿನ್ನದೆ ।
ಟ್ಟಿಂದಿರು ಬಾಗಿಲೊಳ್ ಪಿಕ ಸರೋವರಮಂ ಕಳಹಂಸ ಕಾಪುಗೊಳ್
ವಂದಿಸಿ ಗಂಧವಾಹ ಕೊಳಲೆಂದು ನಿಯಾಮಿಸಿದಂ ವಸಂತಕಂ ॥ ೮೭

---

[1] ನೀ (ಅ). [2] ದೆಗೆದಂ (ಅ). [3] ಣಿಕೆಗೊಟ್ಟೆ (ಅ). [4] ತೆ (ಅ). [5] ನಂ (ಖ.ಬ). [6] ಣ್ಣಿನಿಂ (ಕ.ಖ.ಬ). [7] ನ (ಅ). [8] ಱು (ಅ). [9] ಮರೆವಡೆನುತ್ತ (ಅ), ಮರೆದೊಡೆ ಬೀಸು (ಕ.ಖ.ಬ). [10] ರ್ದೊಂಗಲನೀಂ (ಕ.ಖ.ಬ).

ವೈಶಾಖವರ್ಣನಂ

ವನಜ[1]ಲ[1]ಕೇಳಿಗಿಂಬುಗುಡುವಂತೆ ಪಗಲ್ ಪಿರಿದಾದುದೊಯ್ಯನೊ
ಯ್ಯನೆ ಕಿಱಿದಾದುದಂದಿನಿರುಳಾಱಿಸುವಂತಿನನಿಂದ[2]ಗಲ್ದ[2] ಪ ।
ದ್ಮಿನಿಯ ನಿರೋಧಮಂ ಶಿಶಿರನಿಂ ಮುಳಿದಿಟ್ಟ ಪಸವ್ಯಗಂಧವಾ
ಹನ ಕರಚಕ್ರದಂತೆ ಬಡಗ[3]ಲ್ ನಡೆದ[3]ತ್ತು ಹಿಮಾಂಶುಮಂಡಲಂ ॥ ೮೮
(ಅನಂತನಾಥಪುರಾಣಂ, ೬–೮೯.)

ಇನಿತಾನುಂ ಮೃಗತೃಷ್ಣೆಯಂ ಪಡೆಯುತುಂ ದಿಗ್ಭಾಗದೊಳ್ ತಳ್ತ ಕಾ
ನನದೊಳ್ ಬೇಗೆಯನಿಕ್ಕುತುಂ ಕದಡುತುಂ ನೀರ್ದಾಣಮಾದಂತುಟಂ ।
ಬಿನ[4]ದಂ ತ[4]ಪ್ಪೆಡೆಯೊಳ್ ತೆರಳ್ಚಿ ತೊವಲಂ ತಂದಿಕ್ಕುತುಂ ಬೇಂಟೆಗಾ
ಱಿನವೋಲ್ ಬೇಸಗೆ ಬಂದು ಪೊಕ್ಕು [5]ಕವಿದತ್ತೆತ್ತಂ ಮಹೀಭಾಗಮಂ[5] ॥ ೮೯

ಪಾವಸೆಯಾಗಿ ಪೋಯ್ತು ನಗನಿರ್ಝರಣಂ ತೊಱೆಗಳ್[6] ಪದಪ್ಪಮಾ
ಯ್ತಾವಗಮೀಕ್ಷಿಸಲ್ಕೆ ಕೆಸಱಾಯ್ತು ಕೊಳಂ ಕೆಱೆ ಬತ್ತಿ ಪೋದುವಿ ।
ರ್ಪಾವೆಡೆಯೆಂಬಿನಂ ಬಱಿತು ಬೀಟೆಯನಾಳ್ದುದು ಬೆಂಚೆ ದೂರ ಪೆ
ರ್ಬಾವಿಯೊಱಿಂತೆ ತೋಡುವಿನೆಗಂ ತಳ್[6]ಕೋಡಿದು[6]ದಾ ನಿದಾಘದೊಳ್ ॥ ೯೦

ತನುಪಂಕಾಗ್ರಮುಹುರ್ಮುಹಚ್ಛಫರಮಾಬದ್ಧಾಶ್ಮಸಂಧ್ಯಂತರಾ
ಳನಿವಿಷ್ಟೋರುಕುಳೀರಕಂ ತಳ್[7]ನದೀ[7]ನಿರ್ಮಗ್ನಕೂರ್ಮಂ ಚಿರಾ ।
ಭ್ಯನುಸಂಧಾನವಿ[8]ಲೀನ[8]ದೀನಮುಖ[9]ಹಂ[9]ಸಂ ಮ್ಲಾನ[10]ಕಲ್ಹಾರ[10]ಕೋ
ಕನದಂ ಕಣ್ಗಿ[11]ಳಿ[11]ದಾಯ್ತು ತತ್ಸಮಯದೊಳ್ ಶುಷ್ಯತ್ಸರಸ್ಸಂಚಯಂ ॥ ೯೧
(ಚಂದ್ರಪ್ರಭಪುರಾಣಂ, ೯–೮೨.)

ಬೆಟ್ಟದ ಕಲ್ಲ ಸಂದಿಯೊಳಗೊಯ್ಯನೆ ಪೊಣ್ಮುವ ನಿರ್ಝರಕ್ಕೆ ಕ
ಯ್ಯಿಟ್ಟು ಪಿಪಾಸೆಯಿಂದ [2]ಲ[12]ರೆಮೀಲಿತಲೋಚನನಾದ ದಂತಿಯಂ ।
ತೊಟ್ಟನೆ ಮುಟ್ಟೆ ಕಂಡದಱಿ ಮೈನೆಟಲಾಸೆಗೆ ಜಾತಿವೈರಮಂ
ಬಿಟ್ಟೊಳಪೊಕ್ಕು ಪಟ್ಟಿತು ಬಿಸಿಲ್ಗಗಿದೊಂದು ಗಜಾರಿ ಬಿಚ್ಚತಂ ॥ ೯೨

---

[1] ದ (ಕ.ಖ). [2] ದಗ್ಧ (ಖ.ಬ). [3] ಲ್ಲಡರ್ದ (ಗ.ಖ). [4] ದಕ್ಕ (ಗ.ಘ). [5] ದುಮದೆತ್ತೆತ್ತಂ ದಿಶಾಭಾಗದೊಳ್ (ಖ.ಗ). [6] ಪೋದುದು (ಕ), ಕೋಯ್ತುಡಿ (ಖ.ಬ). [7] ತಟೀ (ಅ). [8] ನಾಶ (ಅ). [9] ಹಾ (ಕ.ಖ.ಗ.ಘ.ಬ). [10] ಕಾಹ್ಲಾದ (ಕ.ಖ.ಬ). [11] ನಿ (ಕ.ಖ.ಗ.ಘ.ಬ). [12] ರ (ಕ), ಡ (ಖ.ಬ).

ಬಚ್ಚೆಯ ಪಳ್ಳದೊಳ್ ಪಲವೋಜಿಂತೆಗಳಾದುವು ಕಾಡೊ[1]ಳಿರ್ದ[1] ಕಾ
ಲ್ಬಚ್ಚೆಗಳೆಲ್ಲಮೆ[2]ಯ್ದುವುವು[2] ನೀರ್ನೆಲೆಯಂ [3]ಪಬವಾಬು[3]ಬಾವಿಯೊಳ್ ।
ಪುಟ್ಟಿದ ಸೊಪ್ಪು ಪೇಟ್ದುದು ಜಲೋದಯ[4]ಲೋ[4]ಭಮನೆತ್ತಿ ಪೊತ್ತು ಡೋ
ಣಿಟ್ಟು ದನಕ್ಕೆ ನೀರೆಱೆವ ಸಂಭ್ರಮಮುಣ್ಮಿದುದೂರ ಪಕ್ಕದೊಳ್ ॥ ೯೩

ಕಾನನಮುರಿದುದು ರವಿಕಾಂ
ತಾನಳನಿಂ ನಗದ ಶಿಖರವೊಡೆದುದು [5]ಸಿಡಿಲ್ದ[5] ।
ತ್ತಾನೆಯ ತಲೆ ಬಿರಿದುದು ಮು
ಕ್ತಾನೀಕಂ ತೋಱೆ ಬೆಟ್ಟಬೇಸಗೆ ಬಿಸಿಲೊಳ್ ॥ ೯೪

ಬಿರಿಯದ ಬೆಟ್ಟಮಿಲ್ಲ ಮಟಿಲಾಗದ ಪೆರ್ದೊಱೆಯಿಲ್ಲ ಬೆಂದೊಗಲ್
ಪೊರೆವೊರೆಯೆರ್ದು ಸಾಯದ ಮೃಗವ್ರಜಮಿಲ್ಲ ಬಿದಿರ್ ತಗುಳ್ದು ಮಾ ।
ಱೊರಸಿದ ಕಿಚ್ಚಿನಿಂದಡಸಿ ಬೇಯದ ಕಾನನಮಿಲ್ಲ ತೃಷ್ಣೆಯಿಂ
ದುರುಳದ ಪಾಂಥರಿಲ್ಲ ವಿಷಮಾರ್ಕಕರೌಘದೊಳಾ ನಿದಾಘದೊಳ್ ॥ ೯೫

ವಿಸರದ್ದಾವಾಗ್ನಿಜಿಹ್ವಾಕಬಳಿತಲತಿಕಾನೋಕಹಶ್ರೇಣಿ ನಿರ್ನೀ
ರಸರಸ್ಸಂತಪ್ತಪಂಕಾಕುಲಿತಕಮಠಪಾಠೀನಸಂತಾನಮತ್ಯ ।
ಗ್ರಸಮೀರಾಘಾತಜಾತಸ್ಫುರದವನಿರಜಃಸ್ಪರ್ಶದುರ್ದರ್ಶಮುರ್ವೀ
ರಸಪಾನೋತ್ತಾನಭಾನುದ್ಯುತಿಯೆನಲೆಸೆದತ್ತತ್ತಮೇಘಂ ನಿದಾಘಂ ॥ ೯೬

ಸುರರಾಜಂ ಬಟಿಯಟ್ಟಲಾತುರಿಸುವಂ ಮೇಘಕ್ಕೆ ಕಾಯ್ದುಕ್ಕಿ ಸಾ
ಗರದಿಂ ಪೋಗಲೊಡರ್ಚುವಂ ವರುಣನುಗ್ರಂ [6]ವ್ಯಗ್ರ[6]ನಾತ್ಮೀಯಭೂ ।
ಧರದಿಂದಂ ಹಿಮವನ್ನಗಕ್ಕೆಳಸುವಂ ಪಿಂಗಂ [7]ವಟ[7]ಚ್ಛಾಯೆಯಿಂ
ಹರಿಣಾಂಕಂ ಭುವನಕ್ಕದೇಂ ಭಯದಮಾಯ್ತೋ ಘೋರ ಘರ್ಮಾಗಮಂ ॥

[8]ಕೂರ್ಪೇಱಿದ[8] ಕಡುವಿಸಿಲ ಪೊ
ಡರ್ಪಿಂಗಿಟಿದಂತೆ ತೀರತರುಗಳ್ ತರದಿಂ ।
ಮಾರ್ಪೊಳೆವ ನೆವದಿ ನೀರ್ವೊ
ಕ್ಕಿರ್ಪುವದೇಂ ಪಿರಿದೊ ಭುವನಭೀಷ್ಮಂ ಗ್ರೀಷ್ಮಂ ॥ ೯೮

ನಟ್ಟನಡುವಗಲ ಬಿಸಿಲುರಿ
ಯಿಟ್ಟೊಡೆ ಸುಟ್ಟಪ್ಪುದೆಂಬವೊಲ್ ಪಸರಿಪುದಂ ।

---

[1] ಳೆದ್ದ (ಗ.ಘ). [2] ಯ್ದಿರದು (ಗ.ಘ). [3] ಪಾಳ್ಬಾವಿ (ಕ.ಖ.ಬ). [4] ಲಾ (ಗ.ಘ). [5] ಸೀಳ್ದ (ಖ.ಬ). [6] ಪ್ರಜ್ಞ (ಅ.ಕ.ಬ). [7] ತಟಿ (ಗ.ಘ) [8] ತೂಪಿ ಱಿದ (ಕ).

ಬಿಟ್ಟುಡುಗಿಯೊಂದೆ ಮೆಯ್ಯಂ
ಮೆಟ್ಟಿರ್ಪವೊಲಿರ್ಪುವಂದು ತಾಟ ನೆಟಲ್ಗಳ್ ॥ ೯೯

ಪಾಱುವ ಪಕ್ಕಿ ಕೋಡ ಗಱು ಸೀಯ್ಯದವಿಲ್ಲೆಲೆಯಿಕ್ಕಿ ಪೆರ್ಮರಂ
ತಾಱದವಿಲ್ಲರಣ್ಯಮೃಗಯೂಥದ ಬೆನ್ [1]ಪುಳಿಚೆರ್ದು[1] ಬಾಯ್ಗಳಿ ।
ಪಾರ್ಱದವಿಲ್ಲ ಬಿ[2]ಜ್ಜೊ[2]ಡೆದು ಪಾಱದವಿಲ್ಲ ಪಯೋಧಿ ತಾಯ್ಮಣಲ್
ತೋಱದವಿಲ್ಲದೇಂ ಪ್ರಳಯಕಾಲಮೊ ತೀವ್ರನಿದಾಘಕಾಲಮೋ ॥ ೧೦೦

ಕುಲಗಿರಿ ಕಾಯ್ದ ಕರ್ಬುನದ ಬೆಟ್ಟುವೊಲಿರ್ದುವು ಧಾತ್ರಿ ಕಾದ ಕಾ
ವಲಿಯವೊಲಿರ್ದುದಂಬುನಿಧಿ ದಿಬ್ಬೆಗೆ ಕಾಸಿದ ತೈಲದಂದದಿಂ ।
ತಲೆದಳೆದುಕ್ಕುತಿರ್ದುವು ದಿಶಾವಿವರಂ ನಲೆ ಕಾಜುಗಾಱಿನ
ಟ್ಟೊಲೆಯವೊಲಿರ್ದುವೇಂ ಪ್ರಳಯಕಾಲಮೊ ತೀವ್ರನಿದಾಘಕಾಲಮೋ ॥ ೧೦೧

ಒಲೆಗಲ್ಪೊಲ್ ಕಾಯ್ದುವೆಂಟುಂ ದಿಗಿಭದ ಬಿದುಗಳ್ ಕಾಯ್ದ ಕರ್ಬೊನ್ನ ಪೆಗರ್ದ
ವಲ[3]ವ್ಗೋಲಾಯ್ತಾ [3] ನೆಲಂ [4]ಸಂ[4]ಪಳೆಯನೆಱೆದವ್ಗೋಲ್ ಕಾಯ್ದು
ಚುಯ್ಯೆಂದುವೇಟುಂ ।
ಕುಲಪಾರಾವಾರಮೀ ಬೇಸಗೆಯ ಬಿಸಿಲೊಳಿನ್ನೆಂದಿ[5]ದೇ[5]ಕಾರ್ಣವಂ ಭೂ
[6]ತಳಮಕ್ಕುಂ ಪೇಟೆನಲ್ ಪರ್ಸಿದು[6]ದತಿಶ[7]ಯಿತ[7]ಗ್ಲಾನಿದಾಘಂ ನಿದಾಘಂ ॥
(ಜಗನ್ನಾಥವಿಜಯಂ, ೭೧–೭೩.)

ರಸದಾಳಿಂಬದ ಪಣ್ಣ ಬಿತ್ತು ಬಿರುಕಿಂ ತೋರ್ಪಂತೆಯುರ್ಬೆಟ್ಟ ಪೆ
ರ್ಬಿಸಿಲಿಂದಿರ್ಬಗಿಯಾದ ಮಸ್ತಕದೊಳಾ ಸದ್ಭಕ್ತಮುಕ್ತಾಳಿಗಳ್ ।
ನಸುದೋಱುತ್ತಿರೆ ನೆಮ್ಮಿ ಪೆರ್ಮರನನೊಂದಂ ಕಣ್ಗಳಂ ಮುಚ್ಚಿ ಮೂ
ರ್ಛಿಸಿದಂತಿರ್ದುದು ದಂತವೇಷ್ಟಿತಕರಂ ಮತ್ತೊಂದು ಮತ್ತದ್ವಿಪಂ ॥ ೧೦೩

ಬಿಸಿ[8]ಲಳುರೆ[8] ಬಿರಿದ ಬಿದುವಿಂ
ನಸುದೋಱುವ ರಕ್ತ [9]ಸಿಕ್ತ [9] ಮುಕ್ತಾಫಳಮಂ ।
ರಸದಾಳಿಂಬದ ಬಿಚ್ಚೆಂ
ದೊಸೆದು ಕರ್ದುಂಕುವುವು ಶುಕಕುಳಂ [10]ಮದ[10]ಗಜದಾ॥ ೧೦೪
(ಜಗನ್ನಾಥವಿಜಯಂ, ೧೬–೬೯.)

---

[1] ಪುಳಿಲೆರ್ದು (ಕ), ಪುಣಿಲೆರ್ದು (ಖ.ಬ), ಪುಣ್ಚಿರ್ದು (ಘ). [2] ರ್ದೊ (ಖ.ಬ), ಟ್ಟೊ (ಗ.ಘ). [3] ಯೊಲ್‌ಕಾಯಿದತ್ತೀ (ಕ), ಯೊಲ್ಕಾಯ್ದಾ (ಖ.ಬ). [4] ಸಿಂ (ಅ). [5] ಗೇ (ಖ.ಬ). [6] ತಳಮಕ್ಕುಂ ಪೇಟಿದೆಂಬುವ್ಗೋಲುರ್ಬಿದುದ (ಕ), ತಳಕಂಪೇಟೆಂಬ ವ್ಗೋಲುರ್ಬಿದುದ (ಖ.ಬ). [7] ಯದ (ಅ), ಯಿಕ (ಖ.ಬ). [8] ಲೊಳರೆ (ಖ.ಬ). [9] ಯುಕ್ತ (ಖ ಬ). [10] ವನ (ಖ.ಬ).

ರದನಂ ಚುಱ್ಱುಂಬನಂ ಕಾಯ್ದೊದೆದು [1]ಬಿರಿಸಿಗಾಲ್ವೀಡಿರಿರ್ದಿ[1]ರ್ಪ ಸೊಪ್ಪಾ
ಱಿದ ಬಾಯಂ ಬಿಟ್ಟು ಬಕ್ಕಂಬಯಲನುದಕವೆಂದೂಡಿ ಕುಂಭಸ್ಥಲಂ ತೀ ।
ವಿದ ಮುಕ್ತಾಜಾಲಕಂ [2]ಬಿಬ್ಬರನೆ[2] ಬಿರಿದರ[3]ಲ್ಪೋಗೆ[3] ಸೈತಾದ ಮಧ್ಯಾ
ಹ್ನದೊಳಿರ್ದತ್ತೊಂದದುದ್ಯದ್ಭನಕರಿ ದರಿಯಂ ನೆಮ್ಮಿ ಘರ್ಮಾಂಬುವಿಂದಂ (?) ॥

ಪಟು ಬೇಗೆವೋಗೆ ತನ್ನಯ
ನೆಟ[4]ಲಂ[4] ಬೇಱೊಂದುಗೆತ್ತು ಸಾರ್ವಳಿಪಿಂ[5]ದಂ[5] ।
[6]ಸುಟಿದೆಡಕಂ ಬಲಕಂ ಬನ[6]
ವಟಿದುದು ಬೇಸಗೆಯ ಬಿಸಿಲೊಳೊಂದಿಭಕಳಭಂ ॥ ೧೦೬

(ಚಂದ್ರಪ್ರಭಪುರಾಣಂ, ೯–೭೪.)

ಅಱಿಯದರವಿಂದದಲರಂ
ಪಱಿದುದ ನೆವಮಿಟ್ಟು ಸುಟ್ಟಪಂ ರವಿಯೆನುತುಂ ।
ಮಱುಗಿ ಮೊಱೆಯಿಡುವ ತೆಱದಿಂ
ಮುಱುದೆತ್ತಿದುದಗ್ರಕರದಿನಿಭವೆಳದಳಿರಂ ॥ ೧೦೭

ಭಾನುಕರೋಷ್ಣದಿಂದೊಡೆದು ಕೊಂಬು ಶಿರಂ ಬಿರಿಕೇಱೆ ತೋರ್ಕೆವೆ
ತ್ತಾನನದೊಳ್ಪು ಬಲ್ಪಟಿಯೆ ಬೆಂಗಡಿ[7]ವಂ ಕಿ[7]ಱುಪೀಡೆವೀಱೆ ನ
ಟ್ಟಾನಿಸಿದಂತೆ ಕಾಲ್ಗಳಿರೆ ಕಾಡಟಿದೇವ[8]ರ[8] ನೋಂಪಿಗಿಟ್ಟ ಮ
ಣ್ಣಾನೆಯ ಮಾಱ್ಕೆಯಿಂ ಮಿಡುಕದಿರ್ದುದು ದಂತಿ ನಿದಾಘಕಾಲದೊಳ್ ॥ ೧೦೮

ಗಂಟಲುರಂಬರಂ ಬಱಿತು ಗೋಣ್ಗಟುಲ್ ಕಡುಸೇದೆಯಿಂದೆ ಮೈ
ಕಂಟಣಿಸುತ್ತೆ ಕೋಡ ಗಱಿ ಸೀದು ಮುರುಂಟಿ ವಿಹಂಗಸಂಕುಲಂ ।
ಗೆಂಟಱೊಳೊಂದಿ ತಾಱಿದ ಮರಂಗಳ ತೂಱಿಲುಗೊಂಬುಗೊಂಬಿನೊಳ್
ಸುಂಟಗೆಗೋದ ಮಾಱ್ಕೆಯವೋಲಿರ್ದುವು[9][ಡುಂ][9]ಗಿ ನಿದಾಘಕಾಲದೊಳ್ ॥ *

[10]ಅಡೆವ್ಪೊ[10]ತ್ತುವ ಬೇಸಗೆಯೊಳ್
ಪೆಡೆವಣಿ ಬಿಡೆ ಕಾಯ್ದು ನೆತ್ತಿ ಧಿಟಿಧಿಟಿಲೆನುತುಂ।
ನಡೆಗೊಳ್ಳಿಯಂತೆ ನಡೆದುದು
ಗಿಡುಗಳ ನೆಲಲಾಸೆಗಹಿಪ ನನುವಿಡುತುಸಿರಂ ॥ ೧೧೦

---

[1] ಸ್ಯೆಗಾಲ್‌ಪಿಡಿದಿರ್ಪ (ಕ). [2] ಬಿಕ್ಕನೆ (ಕ). [3] ಲ್ದೊಗೆ (ಕ). [4] ಲನೆ (ಅ). [5] ಡಂ (ಬ). [6] ಸುಟಿಸುಟಿದೆಡಬಲಕಂಬಲ (ಖ.ಬ). [7] ವಕ್ಕಿ (ಬ). [8] ತೆ (ಕ). [9] ಡೂ (ಕ.ಖ.ಬ). * ಈ ಪದ್ಯ (ಕ) ಪ್ರತಿಯಲ್ಲಿಲ್ಲ. [10] ಡಿಯೊ (ಕ.ಖ.ಬ).

ಪೆಡೆಯ ಮೊದಲ್ಗೆ [1]ತಂದ[1]ಡರೆ ಮಂಡಳಿಸಿತ್ತ ಹಿ [2]ಕಾಯಮೆಲ್ಲಮಂ[2]
ಕೊಡೆವಿಡಿ[3]ದಂ[3]ತರಲ್ಬಿದುದು ಸೋಗೆಯನೋವದೆ ಸೋಗೆ ಪೀರ್ದುದೋ ।
ಗಡಿಸದೆ [4]ಸೋ[4]ರ್ವ ನಾಲಗೆಯ ಬಿಂದುವನಂದೆರ್ದೆಯಾಜಿ ಸಿಂಗಮಂ
ತುಡುಗದದೇನಲಭ್ಯತರವೋ ನೆಟಲುಂ ಜಳಮುಂ ನಿದಾಘದೊಳ್ ॥ ೧೧೧

(ಚಂದ್ರಪ್ರಭಪುರಾಣಂ, ೯–೮೦.)

ಉಱೆ ಕಾಯ್ದ ಸೂರ್ಯರಶ್ಮಿಗೆ
ಮೊಱೆಯಿಡಲೆಂದೆತ್ತಿ ಪಿಡಿದ ತೊವಲೆಂಬಿನೆಗಂ ।
ತುಱುಗಿರ್ದಾವರೆಗೊಂಬಂ
ಮುಱುದು ನೆಟಲ್ಮಾಡಿಕೊಂಡು ನಡೆವರ್ ಪಥಿಕರ್ ॥ ೧೧೨

(ಜಗನ್ನಾಥವಿಜಯಂ, ೧೭–೭೧.)

ಉರಿವ ನಿದಾಘದಾಘದೊಳೆ ಮೇರುನಗಂ ಪೊರೆವೋಗಿ ಸುತ್ತಲುಂ
ಕರಗಿ ಬಟಿಕ್ಕಿಳಾವಳಯದೆಣ್ದೆಸೆಗಂ ನೆಱೆ ಸೂಸಿ ಕಾಟ್ಪುರಂ ।
ಬರಿದು ಬಿಲಸ್ಥಲಂಗಳೊಳಪೊಕು ಟಿದಿರ್ದದವಲ್ಲದಂದು ಪೇಟ್
ಜರಗಿನ ಪೊಂಗಮೀ ನೆಲಕಮಾವುದೊ ನಂಗತಿವೆತ್ತ ಕಾರಣಂ ॥ ೧೧೩

(ಚಂದ್ರಪ್ರಭಪುರಾಣಂ, ೯–೭೦.)

ನೆತ್ತಿಯೊಳಾವಗಂ ತಳೆದ ಬಾಂದೊಱೆ ಮಾಣದೆ [5]ನಿಲ್ಲೆ[5] ಚೂಡನೊಳ್
ಪತ್ತಿಸಿದಾ ಹಿಮಾಂಶುಕಳೆಯಪ್ಪಿದ ಹೈಮವತೀಲತಾಂಗಮೊ ।
ಪ್ಪತ್ತಿರೆಯುಂ ಪೊದಟ್ಟುರಿವ ಬೇಸಗೆ[6]ಗೊರ್ಮೆ[6]ಯೆ[6] ಬೆರ್ಚಿ [7]ರೌಪ್ಯ[7]ಭೂ
ಭೃತ್ತಟನಂದನಾವಳಿಯ ತ[8]ಣ್ಣೆ[8]ಲಂ ಬಿಡ[9]ನೊರ್ಮೆ[9]ಯುಂ ಮೃಡಂ ॥

(ಚಂದ್ರಪ್ರಭಪುರಾಣಂ, ೯–೮೧.)

ಹಿಮಕರನಂ ತುಱುಂಬಿ ಹಿಮವಾರಿಯ ಗಂಗೆಯನಿಟ್ಟು ಜೂಟದೊಳ್
ಹಿಮಗಿರಿಪುತ್ರಿಯಂ ಮುದದಿನಪ್ಪಿ ಹಿಮಾಂಗದ ನಾಗಮಂಡನೌ ।
ಘಮನೊಸೆದಾಂತು ತಾಪಹರ[10]ನಪ್ಪು ದ[10]ನೀಶನುದರ್ಕದರ್ಶಿ ಮು
ನ್ನಮೆ ಸಮಕಟ್ಟಿ [11]ನಿಂದ[11]ನೆನೆ ಬೇಸಗೆ ಬೇಸಱಿಸಿತ್ತು ಲೋಕಮಂ ॥ ೧೧೫

(ಜಗನ್ನಾಥವಿಜಯಂ, ೧೭–೭೭.)

---

[1] ಕಂಡ (ಕ.ಖ.ಬ). [2] ಶೇಷಕಾಯಮಂ (ಅ). [3] ವಂ (ಕ.ಖ.ಬ). [4] ಪೀ (ಖ.ಬ). [5] ಭಾಳ (ಅ). [6] ಯುಮ್ಮೆಗೆ (ಅ). [7] ಧೂರಿ (ಕ.ಖ.ಬ). [8] ಣ್ಣುಟಿ (ಅ). [9] ನಾಡೆ (ಖ.ಬ). [10] ನೊಪ್ಪುವ (ಅ). [11] ಕೊಂಡ (ಅ).

ಜಲನಿಧಿತಲ್ಪನುಂ ಜಲರುಹೋದರನುಂ ಜಲಜಾತನೇತ್ರನುಂ
ಜಲಧಿಸುತೇಶನುಂ ಜಲದವರ್ಣನುಮೆಂಬುದೀ ನಿದಾಘಮಂ ।
ಕಳೆಯಲೆ ಪಣ್ಣಿಕೊಂಡನಸುರಾರಿವೊಲಾವನನಾಗತಜ್ಞನೆಂ
ದಿಳೆ ನುಡಿವಂತು ಪೆರ್ಬಿಸಿಲನುರ್ಬಿಸಿತುರ್ಬಿ ನಿದಾಘಮುರ್ಬಿಯೊಳ್ ॥ ೧೧೬
(ಜಗನ್ನಾಥವಿಜಯಂ, ೧೭–೭೬.)

ಅಳುರ್ವ ನಿದಾಘ[1]ದಿಂ[1] ತ್ರಿಭುವನಂ ನೆಱೆ ನಿರ್ಜಲಮಾದೊ[2]ಡಂ[2] ಕಮಂ
ಡಳುಜಳಶೀತದಿಂ ತೃಷೆಯನಾಱಿಪೆನೆಂದರವಿಂದಜಂ ಕಮಂ ।
ಡಳುವಿನೊಳಂದು ಬಯ್ತು ಪಿಡಿದಾ ಜಲಮಿಂದುಪಕಾರಿಯಾಯ್ತೆ[3]ನಲ್[3]
ತಿಳಿದೆನಿದೊಂದ[4]ನೆಂದೊತೆ[4] ನಿದಾಘದ ದಾ[5]ಘಮನೇನ ಬಣ್ಣಿ[5]ಪೆಂ ॥ ೧೧೭
(ಜಗನ್ನಾಥವಿಜಯಂ, ೧೭–೭೫.)

ಸುರಪಂ ನೇತ್ರವ್ರಜವ್ಯಾಜದೆ ಕುಮುದದಳಶ್ಲಿಷ್ಟನಾದಂ ನಿದಾಘಾ
ತುರದಿಂದಬ್ಧಿಸ್ಥನಾದಂ ಶಿಖಿ ಯಮನಗಲಂ ಛಾಯೆಯಿಂದಂ ತಪಿಸ್ವಾ ।
ಚರನಾದಂ ರಾಕ್ಷಸಂ ಪಾಶಕರನುದಧಿಯಂ ಪೊರ್ದಿದಂ ಮಾರುತಂ ತಂ
ಬೆರಲಾದಂ ಕಿನ್ನರೇಶಂ ಹಿಮನಗಮನೆ ಸಾರ್ದಂ ಹರಂ ಗಂಗೆವೊತ್ತಂ ॥ ೧೧೮

ರವಿಕಾಂತೋಪಳವಹ್ನಿಯಿಂದಡವಿಗಳ್[5] ಭಸ್ಮಾವಶೇಷಂಗಳಾ
ದುವರಲ್ಕೋದುವು ಬೆಟ್ಟುಗಳ್ ನದನದೀ ದ್ರೋಣೀಜಲಂ ಕಾಸಿದೆ ।
ಣ್ಣೆ ಪೊಲು[6]ರ್ವೆಬ್ದು[6]ವು ಮೂಷೆಯಿಟ್ಟ ತೆಱದಿಂ ಗ್ರಾವಸ್ಥಲಂ ಲೋಹಮಾ
ದುವು ರೇಣುಸ್ಥಲಿ ಕಾಜುವಿಟ್ಟುವು ನಿದಾ[7]ಘದ್ರಾಘಿಪೋದ್ರೇಕದೊಳ್[7] ॥ ೧೧೯
(ರಾಮಚಂದ್ರಚರಿತಪುರಾಣಂ, ೭–೭೯.)

ಮೃಗಕುಳಮಾಸೆಗೆಯ್ದು ಮೃಗತೃಷ್ಣಿಕೆಯಂ ಜಲಮೆಂದು ತೃಷ್ಣೆಯಿಂ
ಪಗಲಿಟಿವನ್ನೆಗಂ ಪರಿದು ಗಂಟಲುರಂಬರಮಾಱೆ ಬೆಂದೊವಲ್ !
ತೆಗಳಿಗೆ ಬೀಳೆ ಬಾಯ್ಗೆ ಕ[8]ರಿಸಂ ಬರೆ ನಾಲಗೆಗಿಟ್ಟು ನಟ್ಟಿದ
ಟ್ಟಿಗಳೊಡನಳ್ಳೆಪೊಯ್ಯೆ ನಡೆಗೆಟ್ಟವು ತೃಷ್ಣೆಯಿನಾರೊ ಬೇಯದರ್ ॥ ೧೨೦
(ರಾಮಚಂದ್ರಚರಿತಪುರಾಣಂ, ೭–೯೩.)

ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆವಂ ಮತ್ಸ್ಯಾವತಾರಕ್ಕನಂ
ತುಹಿನಾದ್ರೀಂದ್ರಮನೊತ್ತು ಗೊಂಡು ನಡೆವಂ ದೇವರ್ಕಳಾಗ್ನೇಯಮೆಂ ।

---

[1] ಮಂ ಖ.ಬ). [2] ಡೀ (ಅ). [3] ಲೇ (ಅ). [4] ನೆನ್ನದೋ (ಖ.ಬ). [5] ಹಮ
ನೇನನೆಂದ (ಅ). [6] ರ್ಬೆರ್ದು (ಖ.ಬ). [7] ಘೋದ್ರೇಕದಿಂದಂ ಕರಂ (ಖ.ಬ).
[8] ರು (ಖ.ಬ).

ದು ಹವಿರ್ಭಾಗಮನೊಲ್ಲದಿಂದುಕಲೆಯಂ ಕೊಳ್ವರ್ ಮೃಡಂ ಪಾರ್ವತೀ
ಸ್ಪೃಹೆಯಂ ಬಿಟ್ಟು ಮರುತ್ತರಂಗಿಣಿಯನಂದಾಲಿಂಗನಂ ಮಾಡುವಂ ॥ ೧೨೧
(ರಾಮಚಂದ್ರಚರಿತಪುರಾಣಂ, ೭–೯೮.)

ಹುತ್ತಿನೊಳುಬ್ಬೆಗೊಂಡು ಪೊಱಮಟ್ಟು ಪಗಲ್ ಬಿಸಿ[1]ಲಬ್ಬೆ[1] ಕೆಂಡಮಂ
ಪತ್ತಿಸಿದಂತೆ ಕಾಯ್ವ ಮಣಿಯಿಂ ಪೆಡೆ ಬೇಯೆ ಪೊದಟ್ಟ ಧೂ[2]ಳ್[2]ಯೊಳ್ ।
ಪೊತ್ತಿದ ಧೂಳಿವಟ್ಟೆಯೊಳುರಂ ಪು[3]ಗು[3]ಳ್ದೀಚೆ ಪೊ[4]ರ[4]ಳ್ದು ಪೋಗಿ [5]ಪೊ
ಕ್ಕತ್ತ[5]ದೊಂದು ಪಾಟ ಪಟವಾವಿಯ ನೀರ್ದೆಗೆದಿರ್ದ ಬೀಡೆಯಂ ॥ ೧೨೨

ಅತಿತಪ್ತೋದ್ದೃಪ್ತ ಧೂಳೀಪಿಹಿತಮಹಿತಳಂ [6]ತುಂಗ[6]ವಾತೂಳಿಕಾಲಿಂ
ಗಿತ ರೋದೋಮಂಡಲಂ ಪ್ರೋಚ್ಚಲಿತಮರುಮರೀ[7]ಚಿವ್ರಜವ್ಯಾಪ್ತ[7]ದಿಕ್ಸಂ ।
ತತಿ ಬಂದತ್ತ ಗುರ್ವಿಂ ಬಗೆಗೆ ಪತೆದವೋಘಂ ಸಮುದ್ಭೂತ[8]ಮಾಘಂ[8]
ಹೃತನದ್ಯೌಘಂ ವಿಮೇಘಂ ಜನಿತಜನಮನೋಗ್ಲಾನಿದಾಘಂ ನಿದಾಘಂ ॥ ೧೨೩
(ಚಂದ್ರಪ್ರಭಪುರಾಣಂ, ೯–೬೫.)

ಅರ್ಕಾಂಶುವಿಂದೆ ಪಾಲ್ಗಡ
ಲುಕ್ಕಲ್ ನೀರ್ದಳಿಯಲುದಕಮಿಲ್ಲದೆ ಹರಿ ತಾಂ ।
ತಪ್ಕೈಸಿಕೊಂಡು ಪೋದಂ
ಪಪ್ಕೆಯನೆನಿಸಿತ್ತು ಲೋಕಭೀಷ್ಮಂ ಗ್ರೀಷ್ಮಂ ॥ ೧೨೪

ಹಿಮತಾಂಬೂಲೋರುರಾಗಾಧರಮದೃಢನಿತಂಬಾಂಬರಂ ತಾಲವೃಂತೋ
ತ್ಥಮರುದ್ವ್ಯಸ್ತಾಲಕಂ [9]ಸಿಸ್ಯ[9]ತಮಧುಲವಸಾ[10]ರ್ದ್ರೋದ್ಗ[10]ಮಾಲಂಬಿಕೇಶಂ ।
ವಿಮಲೋದ್ಯದ್ಯಂತ್ರಧಾರಾಜಲಕಲುಷಿತನೇತ್ರಾಂಜನಂ ಚಂದನಾಪಾಂ
ಡಿಮಗಾತ್ರಂ ಗ್ರೀಷ್ಮಸಾಯಂಸಮಯದೊಳೆಸೆದತ್ತಂದು ಬಾಲಾಕಳಾಪಂ ॥ ೧೨೫
(ಚಂದ್ರಪ್ರಭಪುರಾಣಂ, ೯–೮೨.)

ತುಱುಗಿ ನದೀನದಂಗಳ ಜಲಂಗಳೆ ಕಾ[11]ಯ್ದೆ[11]ನರೆಣ್ಣೆಯಂದದಿಂ
ಬಱಿತವು ಮೀಂಗಳಟ್ಟ ತೆಱದಿಂ ಕುದಿಗೊಂಡುವು ನಾಗಲೋಕದಿಂ ।
ಪೊಱಮಡಲಾಸೆಗೆಯ್ದನಹಿನಾಯಕನಂಬುಧಿ ಬತ್ತೆ ಮಾಣಿಕಂ
ಮಿಱುಗಲದೊಂದು ಕೆಂಡದೊಲೆಯಿರ್ಪವೊಲಿರ್ದ[ನಹೀಶ]ನಾವಗಂ ॥ ೧೨೬

---

[1] ಲೆಳ್ವ (ಕ), ಲೇಳೆ (ಖ.ಬ). [2] ವೆ (ಕ). [3] ನ (ಕ), ರು (ಖ.ಬ). [4] ದ (ಖ.ಬ). [5] ತಾಂಪೊತ್ತನಿ (ಕ.ಖ.ಬ). [6] ತೂಲ (ಖ). [7] ಚೀಜಾಲ (ಅ). [8] ಮೋಹಂ (ಖ.ಬ). [9] ವಿಶ್ರು (ಖ.ಬ). [10] ರ್ದ್ರೋತ್ತ (ಕ.ಖ.ಖ). [11] ಯ್ವೆ (ಖ.ಬ).

ಸ್ಮರರಾಗಕ್ಕಂತರಾಯಂ ಜಲನಿಧಿಗೆರ್ದೆಗಿಚ್ಚಿೞ್ಕ್ಷಣಕ್ಕಂಕುಶಂ ಹು
ಲ್ಲುರಿ ದಿಗ್ವಾಲಕ್ಕೆ ಶೈಲಕ್ಕಶನಿ ಕರಗಸಂ ಹಸ್ತಿಮಸ್ತಕ್ಕೆ ಪಾಂಥ ।
ರ್ಗುರಿಗುಯ್ಯೆಲ್ ತಾರು[1]ಗು[1]ತ್ತಂ ತರುಗೆ ತಪನರಾಜೀಸಮೂಹಕ್ಕೆ ದಾಹ
ಜ್ವರಮತ್ಯುದ್ದಾಹಭೀಮಾತಪಮೆನಲುರಿದತ್ತಂದಿಳೌಘಂ ನಿದಾಘಂ ॥ ೧೨೭

ನದನದ್ಯೌಘಾಂಬುವಂ ಪೀರ್ದೆಳೆ ನೆಱಿಯದೆ ಬಾಯ್ಬಿಟ್ಟವೋಲ್ ಬೀಡೆಗಳ್ ಪ
ರ್ವಿದುವುಷ್ಣಾಂ[2]ಶುಪ್ರಭಾಮಂಡಲದ ಪುದುವಿನಿಂ ಬೆಂದವೋಲಾಗಸಂ ಕಂ
ದಿದುದಾದಂ ದಿಗ್ವಧೂಸಂತತಿಯೊದವಿದ ತಾಪಕ್ಕೆ ಮೆ[3]ಯ್ಯಾನದಬ್ಬಂ[3]
ದದ ಭೇರಿರಾವಮುರ್ವಿರ್ದುದು ದೆಸೆಗಳೊಳೇಂ ಗ್ರೀಷ್ಮಮಾದತ್ತೊ ಭೀಷ್ಮಂ ॥
(ಚಂದ್ರಪ್ರಭಪುರಾಣಂ, ೯–೬೬.)

ಜ್ವಲನೋಷ್ಮಗ್ರೀಷ್ಮತಾಪಕ್ಕಗಿದಡವಿಗಳೊಳ್ ಬೈಗುವೊಟ್ಟಿಪ್ಪಿನಂ ಪ
ಲ್ವಲತಯ್ಯೋದ್ದೇಶಮಂ ಪೊರ್ದಿದುದಿರದೆ ಮುಹುಶ್ಶೃಂಗನಿಸ್ತಾಡನ ಪ್ರೋ ।
ಚ್ಚಲಿತಾಂಭಶ್ಶೀಕರಂ ಸ್ಫೆರಿಭವಿಸರಮಗಾಧಸ್ರವಂತೀಹ್ರದಾಂತ
ರ್ಜಲದೊಳ್ ನಿಷ್ಕಂಪಿತಾಂಗಂ ಮುಟುಗಿದುದು ಬಹಿಃಪುಷ್ಕರಂ ಹಸ್ತಿಯೂಥಂ ॥
(ಚಂದ್ರಪ್ರಭಪುರಾಣಂ, ೯–೬೮.)

ಬಿಡದಿನ್ನುಂ ತನ್ನನೆಮ್ಮನ್ವಯದ ಗಜಮವೆಂಟುಂ ಕೊರಲ್ಗೊಂಡು ಪೊತ್ತಿ
ರ್ದೊಡಮೆಮ್ಮೊಳ್ ಕಾ[4]ಯ್ವುನಿಂ[4]ತೀಯವನಿ [5]ಮೆ[5]ಱಿದಪಳ್ ಮಾಣದೆಂದೆಂದು
ಲ್ಗುಡುವಂತಾತ್ಮಾಗ್ರಹಸ್ತಂಗಳೊಳಿನಕಿರಣೋದ್ಭೀತಿಯಿಂ ಪಲ್ಲವಂಗ [ಪುಯ್ಯ।
ಲ್ಪಿಡಿದುಗ್ರಗ್ರೀಷ್ಮದೊಳ್ ಸಾಮಜವಿತತಿ ತೊಬಿಲ್ದತ್ತು ವಾರ್ವಾಂಛೆಯಿಂದಂ ॥
(ಚಂದ್ರಪ್ರಭಪುರಾಣಂ, ೯–೬೯.)

ನಯನೌಘಚ್ಛಲದಿಂದೆ ನ್ಯೆದಿಲೆಸಳಂ ಶಕ್ರಂ ಮುಸುಂಕಿಟ್ಟನ್ಯೆ
ದೆ ಯಮಂ ಛಾಯೆಯನೊಂದಿನಿತ್ತಗಲದಿರ್ಪಂ ಪಾಶಹಸ್ತಂ ಪಯೋ ।
ಧಿಯನಾಶ್ಯೆಸಿದನಾವಗಂ ತುಹಿನಭೂಮೀಧ್ರಕ್ಕೆ ಸಾರ್ದಂ ಹರ
ಪ್ರಿಯನಾವರ್ತಿಸೆ ತಳ್ತು ನಾಲ್ದೆಸೆಯುಮಂ ಗ್ರೀಷ್ಮಪ್ರತಾಪೋದಯಂ ॥ ೧೩೧
(ಚಂದ್ರಪ್ರಭಪುರಾಣಂ, ೯–೬೭.)

ಬೇಸಗೆಯ ಬಿಸಿಲೊಳಾ ಕೈ
ಲಾಸನಗಂ ನೆಱಿಯೆ ಕರಗಿ ಕ[6]ಣ್ಣ್[6]ಟ್ಟು ಕರಂ ।

[1] ತು (ಖ.ಬ). [2] ವಶ್ಮಾಂ (ಖ.ಬ). [3] ಯ್ಯನ್ನದಳ್ವಂ (ಅ), ಯಾನರಳ್ವಂ (ಖ.ಬ). [4] ಯ್ವಳಿಂ (ಖ.ಬ). [5] ಮ (ಖ.ಬ). [6] ಣ್ಗೆ (ಅ).

ಸೂಸಿ ಪರಿದಪುದು ದೆಸೆಗೆನೆ
ಮಾನಸರಮಾಗಿರ್ದುವೊಗೆದ ಮೃಗತೃಷ್ಣಿಕೆಗಳ್[4] ॥ ೧೩೨
(ಚಂದ್ರಪ್ರಭಪುರಾಣಂ, ೯–೭೧.)

ಬಿಸಿಲಳುರೆ ಕರಗಿ ಹರಿವ
ಶ್ಮಸಾರಮಂ ಗಿರಿಯ ನಿರ್ಝರಂಗೆತ್ತೀಂ ಚುಂ ।
ಬಿಸಿ ಚಂಚು ಬೇಯೆ ತಲೆ[1]ಬಿದಿ[1]
ರ್ದಸುವರೆಯಾದುದೊ ತೃಷಾರ್ತನೊಂದು ಮಯೂರಂ ॥ ೧೩೩
(ಚಂದ್ರಪ್ರಭಪುರಾಣಂ, ೯–೭೨.)

ಕಡುವಿಸಿಲ ಕಾಯ್ವಿನಿಂ ಬಿ[2]ರಿ
ದೊ[2]ಡೆದುಗೆ ಬಿಸುಮುತ್ತು ಸೋರ್ವ ಸೀರ್ಪನಿಗೆತ್ತೊಂ ।
ದೆಡೆಮಡಗದೆ ನೊಣೆದು ನವಿಲ್
ಮಿಡುಕಿದುದತಿತೃಷ್ಣೆಯೀಗು[3]ಮೆರ್ದೆಗದವಟಲಂ[3] ॥ ೧೩೪
(ಚಂದ್ರಪ್ರಭಪುರಾಣಂ, ೯–೭೩.)

ಪರಿಪೂರ್ಣಗರ್ಭಭರದಿಂ
ಬರಲಾರದೆ ನಿಂದೊಡೈದಿ ನದಿಯಂ ಜಲಮಂ ।
ಪಿರಿದೂಡಿ ಬಂದು ತೆಗೆತೆಗೆ
ದಿರದೆಱೆದುದು ಕರಣಿಯಿಂದೆ ಕರಿಣಿಗಿಭೇಂದ್ರಂ ॥ ೧೩೫
(ಚಂದ್ರಪ್ರಭಪುರಾಣಂ, ೯–೭೬.)

ಒದವಿದ ಬೆಟ್ಟಬೇಸಗೆಯ [4]ಕೂ[4]ರ್ವಿಸಿಲರ್ವಿಸೆ ಬೆರ್ಚಿ ವಾಯುವೇ
[5]ಗದೆ[5] ಹರಿಣಂ ನಮು[6]ತ್ಪ್ಲ ತ[6]ದಿನಿಂದುವ ಬಿಂಬಮನೋಡಿ ಪೊಕ್ಕು ಮ ।
ಧ್ಯದೊಳೊಸಱುತ್ತು ಮಿರ್ಪ ಸುಧೆಗಂ ಕುಳಿರ್ವಾಲನೆಟಲ್ಗುಮಲ್ಲಿ ಪೋ
ಗದೆ ನೆಲಸಿರ್ದುದಲ್ಲದೊಡದೆಲ್ಲಿಯದೇಣಶಶಾಂಕಸಂಗಮಂ ॥ ೧೩೬
(ಚಂದ್ರಪ್ರಭಪುರಾಣಂ, ೯–೭೭.)

ಬಿಸಿಲೊಳೆ ಬಿಬ್ಬರಂ ಬಿರಿದ ಮನ್ಮತಶುಕ್ತಿ[7]ಕೆಯಿಂದೆ ಮುತ್ತು[7]ಮುಂ
ದೆಸೆ [8]ಕವಿತಂದೊಡಾಂತಿರುತೆ[8] ನೋವ್ವುಮನಿಂತಿದಪೂರ್ವತೋಯಭೃ ।
ದ್ವಿಸರದೆ ವಾಃಕಣಂಗಳುಗುತಂದಪುವೆಂದೆ ನೊಡರ್ಪುಗೆಯ್ದು ಪೂ
ರಿಸುವಳಿ[9]ಪಿಂದೆ[9] ಪುಷ್ಕರಮನೆತ್ತಿದುದಂದು ನಭಕ್ಕದೊಂದಿಭಂ ॥ ೧೩೭
(ಚಂದ್ರಪ್ರಭಪುರಾಣಂ, ೯–೭೫.)

---

[1] ವಿಡಿ (ಖ.ಬ). [2] ದುಪ್ಪೊ (ಅ). [3] ಮಂತೆರ್ದೆಗಟಲಂ (ಖ.ಬ). [4] ಪ (ಕ.ಖ.ಬ). [5] ಱುದ (ಅ). [6] ತ್ಪ್ಲಕ (ಕ.ಖ.ಬ). [7] ಯಮುತ್ತಿನಿಂದೆ (ಖ.ಬ). [8] ಗುರುದಂತ ರಂದುಱುದೆ (ಖ.ಬ). [9] ಬಂಧ (ಖ.ಬ).

ನೀಱಿಯರೆತ್ತಿ ತಂದೆಱಿವ ತಣ್ಣ[1]ರಗಂ[1]ಗಳನಗ್ರನಾಳದಿಂ
ದೂಱಿದ ಧಾರೆಯೊಡ್ಡಿದ ಕರಾಗ್ರದಿನಾನನದತ್ತ ತುಂತುಱಿಂ ।
ತೋಱಿ ಕೊರಳ್ ತಗುಳ್ದು ಮಿಡುಕಾಡೆ ವಿಲೋಚನಮೊಯ್ಯನೇಪೆ ಮೆ
ಯ್ಯೂಱಿ ನಿಜೇಚ್ಛೆಯಿಂದುಸಿರ್ದು ನೀರ್ಗುಡಿವಂದಗದಿಂದಮೊಪ್ಪುಗುಂ (?) ॥

ಪೂಸಿದ ಚಂದನಂ ಮುಡಿದ ಪಾದರಿ ತೊಟ್ಟೆಳಮುತ್ತು ಸುತ್ತಿನೊಳ್
ಮಾ[2]ಸ[2]ದ ತೆಂಗಿನೋಲೆ ಹದನಾಱಿದ ಬೆ[3]ಳ್ಮ[3]ಡಿ ಮೆಲ್ಲಪಚ್ಚೆನೀ ।
ರ್ವಾಸು ತಗುಳ್ದ ಗಂಜಱಿಯೊಳೊಂದಿದ ಬಾಳದ ಬೇರ ಚಪ್ಪರಂ
ಬೀಸಗೆ ನಂದ ಭೋಗಿಗೆ ವಿಲಾಸದ ದೇಸೆಯನುಂಟುಮಾಡುಗುಂ ॥ * ೧೩೯

ಪೂಸುವ ಬೀಸುವ ಮಡಿಯಂ
ಪಾಸುವ ನೀರ್ಗುಡಿಯಲೆಱಿವ ಕಿಪ್ಪೈವೆಸದೊಳ್ ।
[4]ವಾಸಂತಂ[4] ವಿಟಗರ್ಗಾದುದು
ಬೀಸಗೆಗಾದುದು ಬೊಜಂಗತನಮಬಲೆಯರೊಳ್ ॥ ೧೪೦

ಮದನವಿಕಾರಮಂ ವಿರಚಪಲ್ಲಗೆ ಬೀಸಗೆ ಸೂಳೆಬಂಟನಾ
ದುದು ವಿಟಗರ್ಗಂಗನಾಜನದೊಳೆಂತೆನೆ ವಿಶ್ಲಥಮುತ್ತರೀಯಮಾ ।
ದುದು ಬಱಿತ[5]ತ್ತು[5] ಬಾಯ್[6] [6]ನಿಡುಪನಾ[6]ಳ್ದುದು ಸುಯ್ ನಿಮಿರುತ್ತುಮುಣ್ಮಿ ಪೊ
ಣ್ಮಿದುದು ಪರಿಶ್ರಮಂ ತನುಗೆ ಸಂಗಳಿಸಿತ್ತು ನಿಜಪ್ರಸಂಗದಿಂ ॥ ೧೪೧

ಕ್ರಮನುಸ್ನಾತ[7]ಪ್ರಸಾಸ್ಯ[7]ದ್ವಿಚಕಿಳದತನಂ ಪಾಟಲಾಶೀತಿಬಿಂದೂ
ದ್ಗಮದಿಂ ಮಂದಾರ್ಕತೇಜೋನಯನರುಚಿ ಸಮುತ್ಪಾತವಾತಂ ವಿಧೂ[[8]ನ್ಯ
ದ್ಧೂಮಪಾದಂ][8] ಶಾಲ್ಮಲೀತೂಳಕಪರಿತಪಪುಃಕೇಶಜಾಲಂ ನಿದಾಘಾಂ
ತಿಮಕಾಲಂ ವೃದ್ಧನಂ ಪೋಲ್ತುದು ಶಿಥಿಲಜರಾಜೀರ್ಣವಲ್ಲೀಶರೀರಂ (?) ॥

---

[1] ಳನಂ (ಖ.ಬ). [2] ಸಿ (ಖ). [3] ಳ್ಮ (ಕ), ಳ್ಪ (ಗ.ಘ). * ಈ ಪದ್ಯವಾದ ಮೇಲೆ (ಕ) ಪ್ರತಿಯಲ್ಲಿ ವರ್ಷಾಕಾಲದ ವರ್ಣನೆಗೆ ಸೇರಬೇಕಾದ ಒಂಬತ್ತು ಪದ್ಯಗಳಿವೆ. ಅವು (ಖ.ಬ.) ಪ್ರತಿಗಳಲ್ಲಿ ಆ ಪ್ರಕರಣದಲ್ಲಿಯೇ ಇರುವುದರಿಂದ ಅವುಗಳನ್ನು ಅಲ್ಲಿಯೇ ಸೇರಿಸಿದೆ. [4] ಪಾಶತ್ವಂ (ಕ.ಖ). [5] ದ್ದು (ಖ.ಬ). [6] ನುಡಿಸುವಾ (ಕ). [7] ಪ್ರಸಸ್ಯಾ (ಕ.ಖ). [8] ಸ್ಪದ್ಧೂಮಮಮಂದೆಂ (ಕ.ಖ.ಬ).

ವರ್ಷಾಕಾಲವರ್ಣನಂ

ತಱಗೆಲೆ ಕೋಡದತ್ತಿಡಿಯೆ ಧೂಳಿವೊಲಂ ನಱುವೀಕೆ ಧೂಳಿಯಿಂ
ಕಿಱುಗಿಡುಗಳ್ ಮುಸುಂಕೆ ಮಱಲೊಕ್ಕದವೋಲಿರೆ ಬಟ್ಟಗಣ್ಣ ಪಾ ।
ನ[1]ಱು[1]ಯೆಡೆಗಂಟಿ[2]ನಿಂದೊ[2]ಡೆಯೆ ತೂಱಲನಿಬ್ಬರಗೊಂಬು ಪಾಂಥರ
ಳ್ಕಱು ಬಿರುಗಾಳಿ ಬೀಸಿದುದು [3]ಕೋ[3]ಡೊಳೆ ಪೊಕ್ಕು ನಿದಾಘದಂತ್ಯದೊಳ್ ॥

ಕೆದಱುತ್ತುಂ ಮಣಲಂ ತೆ[4]ರಳ್ಚಿ[4]ಕೊಳುತುಂ ಭೂರೇಣುವಂ [5]ತುಳ್ಕು[5]ತುಂ
ನದನದ್ಯಚ್ಛಜಲೌಘಮಂ ಮುಱಿಯುತುಂ ಭೂಜಂಗಳಂ ನುರ್ಗುತುಂ ।
ಪೊದಱಿಂ ಸೀಳುತುಮೆಯ್ದಿ ವಂಶವನಮಂ ಕಾಡಾನೆಯಂ ಪೋಲ್ತು [6]ಬೀ
ಸಿದುದೆತ್ತಂ[6] ಲಯಕಾಲಕಾಲವಿಚಲದ್ಭೀಮಾರುತಂ ಮಾರುತಂ ॥ ೧೪೪
(ಕಾವ್ಯಾವಲೋಕನಂ, ೪೦೯.)

ಒದವಿದ ಕಾರೊಳದ್ರಿಗಳ ಬೇಗೆ ತೆರ[7]ಳ್ಚಿ[7]ದು[8][ದೇಡು]ಮುಂ[8]ಡನಾ
ದುದು ಬಿಸಿಲೇಱ್ಗೆ ಕಟ್ಟಿದುದು ಸಂಬಳಮಂ ಕಳಹಂಸಮಾಲೆ ಮೆ ।
ಟ್ಟಿದುದು ತುಡುಂಕ ಸೋಗೆ ಮೊಳೆಯೊಳ್ ಮಿಡುಕು[9]ತ್ತೆ[9]ಳ್ಪಿಂಚು ಕೆ[10]ತ್ತ[10]ಲೆ
ತ್ತಿದುದು ಪಯೋಧರಾವಳಿ ತಳರ್ದಡೆಯಿಟ್ಟುದು ಪಶ್ಚಿಮಾನಿಳಂ॥ ೧೪೫
(ಅನಂತನಾಥಪುರಾಣಂ, ೯–೫೫.)

ವರುಣವಧೂ[11]ರತ[11]ಶ್ವಸಿತಗಂಧವಹಂ ಮಕರೇಶಚಾರುಚಾ
ಮರಮರುತಂ ಜಳೇಶಮಕರೋದ್ಗತಪುಚ್ಛಸಮೀರನಂ[12]ದ[12]ನ ।
ದ್ವಿರದನಕರ್ಣತಾಳಪವಮಾನನಿದೆಂದು ವಿತರ್ಕಿಪನ್ನಮಾ
ಸ್ಫುರಿತದವಾನಳಂ ಸುಟಿದುದೊಯ್ಯನೆ ಪಶ್ಚಿಮದಿಗ್ಭವಾನಿಳಂ॥ ೧೪೬
(ಜಗನ್ನಾಥವಿಜಯಂ, ೪–೨.)

ಮುಗುಳ ತೊಡಂಬೆ ಗಂಟೊಡೆಯೆ ಮೊಲ್ಲೆಗೆ ಬೆಳ್ಪುಟಿ[13]ಯೊತ್ತಿ [13]ಪುಟ್ಟೆ ಕೇ
ದಗೆ[14]ಗತಿ[14] ಸೊರ್ಕು ಚೇತರಿಸೆ ಚಾದಗೆಗಂ ಚಿರಮಾಗೆ ರಾಗಮಂ ।
ಚೆಗೆ ಕಿಱುವೀಲಿ ಕಣ್ದೆಱೆಯೆ ಸೋಗೆಗೆ ತಣ್ಣನು ಪುಟ್ಟೆ ಬೆಟ್ಟಬೇ
ಸಗೆಯ ಬಿಸಿಲ್ಗೆ ತೀಡಿದುದು ತಣ್ಣನೆ ಪಣ್ಣನೆ ಪಶ್ಚಿಮಾನಿಳಂ॥ ೧೪೭
(ರಾಮಚಂದ್ರಚರಿತಪುರಾಣಂ, ೭–೧೨೯ ; ಮಲ್ಲಿನಾಥಪುರಾಣಂ, ೮–೭೬.)

---

[1] ಱು (ಖ.ಬ). [2] ನೊಂದೆ (ಕ). [3] ಕಾ (ಖ.ಬ). [4] ಮಳ್ಚಿ (ಅ). [5] ನೂನು (ಅ). [6] ಪೊಕ್ಕುದು ಬೀಡಂ (ಅ). [7] ಳ್ದಿ (ಅ). [8] ದೆಡಹುಂ (ಅ), ದೆಡೆಮುಂ (ಖ.ಬ). [9] ತ್ತಿದೆ (ಅ). [10] ಚ್ಚಲೊ (ಅ). [11] ವರ (ಅ). [12] ಜ (ಅ). [13] ಪುಟ್ಟೆ (ಅ). [14] ಗೆಳ (ಅ).

ಮುತ್ತುದು ನೇಸಱ ತೇಜಂ
ನತ್ತುದು ದಾವಾಗ್ನಿ ಪಡುವದೆಸೆ ಮಱೆಮುಗಿಲಂ।
ಸೊತ್ತುದು ಕಡ[1]ಲಿನ ತಂ[1]ಪಂ
ಪೊತ್ತುದು ಮಧುಕರಕುಲಕ್ಕೆ ಪಶ್ಚಿಮಪವನಂ॥ ೧೪೮

ಎಟ್ಟುದು ತಣ್ಣೆಲರ್ ವರುಣದಿಙ್ಮುಖದಿಂದದಱೊಂದೆ ಕಿಟ್ಟದಿಂ
ಬಟ್ಟುದು ತೃಷ್ಣೆಯಿಂದಟಿದ ಚಾತಕಜಾತಕಚಿತ್ತಮೆಕ್ಕೆಯಿಂ।
[2][ದಿ][2]ಟ್ಟುದು ಬಟ್ಟೆ ಸಂಬಳಕೆ ಬಾಳಮೃಣಾಳಮನಂಚೆ ತಣ್ಣೆಲರ್
ಬಿಟ್ಟುದು ಕೂಡೆ ಧಾತ್ರಿ ಮೃಗಶೀರ್ಷವಿಭಾಗಮನರ್ಕನಾಳ್ವುದುಂ॥ ೧೪೯

ಮೊದಲಿಡೆ ಕಾರ್ಮುಕಂ ಗಿಳಿಯೆಱಂಕೆಯ ಬಣ್ಣದ ಪುಲ್ಗೊನರ್ ಪೊದ
ಟ್ಟುದು ಪೊಲದೊಳ್ ವಿರಾಜಿಸುವ ಮಾಣಿ[3]ಕವರ್ಣದ ಕೋ[3]ರಕಂಗಳಿಂ।
ಪುದಿದೆಸೆದತ್ತು ನಾಳತರು ಮುತ್ತಿನ ಬಣ್ಣದ ಕುಟ್ಮಳೌಘವಾ
ದುದು ಕುಟಜಂಗಳೊಳ್ ಪವಳವರ್ಣದ ಪೂಗಳನಾಂತುದರ್ಜುನಂ॥ ೧೫೦

(ಜಗನ್ನಾಥವಿಜಯಂ, ೪–೬.)

ಕೆಂಗೊನರಾಯ್ತು ಸಲ್ಲಕಿ ಕದಂಬಮರಲ್ದುದು ಜಂಬು ದೋರೆವ
ಣ್ಣೊಂಗಲನಾಂತುದತ್ತ [4]ಮಳಕಂ' ಪರಲೊತ್ತಿದುದಿತ್ತ ಕೇತಕಂ।
ಪೊಂಗಱುಗಟ್ಟಿ[5]ದತ್ತು ವನಲಕ್ಷ್ಮಿಯ[5]ನೀಕ್ಷಿಸುವಂತಿರಾದುವೆ
ತ್ತಂ ಗಿರಿಕುಂಜದೊಳ್ ಕುಣಿದು [6]ಕೇ[6]ಗುವ ಸೋಗೆಯ ಕಣ್ಣ ಪೀಲಿಗಳ್॥ ೧೫೧

(ಅನಂತನಾಥಪುರಾಣಂ, ೯–೬.)

ಬೆಟ್ಟದ ತೋಳನಿಂಬಱಿದು ಸಾರ್ದುವು ಬೇಡರ ಪಳ್ಳಿ ಕಾಗೆ ಗೂ
ಡಿಟ್ಟುವು ತತ್ತಿಯಿಕ್ಕಿದುವು ಪೋದಗೆ ಮೆಲ್ಲನೆಯಲ್ಲಿ ಹಂಸೆಗಳ್।
ತೊಟ್ಟನೆ ಪಾಱುಪೋದುವು ಜಲಾಶಯದಿಂ ಮರದಿಂ ಮರಕ್ಕೆ ಧಿಂ
ಕಿಟ್ಟು ಕಳಾಪಿ ಕೇಗಿದುವು ಚಾದಗೆಯೇಱಿದುವಭ್ರಮಾರ್ಗಮಂ॥ ೧೫೨

ಮುಗಿಲಿದಿರೇಱೆ ಕಾದಲಲರೇಱೆ ಪೊಲಂ ಪಸುರೇಱೆ ಕಾಡಮ
ಲ್ಲಿಗೆ ನನೆಯೇಱೆ ಮೊಲ್ಲೆ ನಯವೇಱೆ ಬಿಸಿಲ್ ಕಡುದಣ್ಣಸೇಱೆ ಕೇ।
ದಗೆ ಸುಟಿಯೇಱೆ ಹಂಸೆ ಭಯವೇಱೆ ನವಿಲ್ ನಲವೇಱೆ ಕಾಮಬಾ
ಹುಗೆ [7]ಬಲ[7]ವೇಱಿದತ್ತು ವಿರಹಿಪ್ರಕರಕ್ಕಬಲೇಱಿತರ್ಜಿನಂ॥ ೧೫೩

(ಜಗನ್ನಾಥವಿಜಯಂ, ೪–೪.)

---

[1] ವಿನಕಂ (ಖ ಬ). [2] ಪ (ಕ.ಖ.ಬ). [3] ಕಂಗಳಂ ಕಾ (ಕ.ಖ.ಬ). [4] ಕತರಂ (ಅ). [5] ತೆಂದುಪಲವೊಯ್ಯೆಯಿ (ಅ). [6] ಕೂ (ಅ). [7] ಜಯ (ಅ).

ಅಱಿದಿನಿ[1]ಸುಂ[1] ಬೆಟ್ಟದ [2]ತೋ
ಳ್ಸಱಿ[2]ಗೊಂಡಿರಲೆಂದು ಭಿಲ್ಲಪಳ್ಳಿಗಳೆಲ್ಲಂ।
ತೊಱೆದುವು [3]ತೊಱೆದಡಿಗಳನಾರ್[3]
ತೊಱೆಯದರನುಕೂಲವೃತ್ತಿಗೆಟ್ಟೆಸಗುವರಂ॥ ೧೫೪

(ಜಗನ್ನಾಥವಿಜಯಂ, ೪–೧೦.)

ಘನ[4]ವಜ್ರ[4]ಜ್ವಾಲಧೂಮಾವಳಿಯೊ ಗಗನಗಂಗಾತಟೋದ್ಯತ್ತಮಾಳೀ
ವನಮೋ ವಿದ್ಯುನ್ನಟೀಕರ್ಬುರಜವನಿಕೆಯೋ ಚಾರುಮೇಘಾಗಮಶ್ರೀ।
ವನಿತಾಪಿಂಛಾತಪತ್ರಪ್ರಕರಮೊ ವಿಯದುತ್ತುಂಗಮಾತಂಗ[5]ಭೂಷಾ[5]
ಜಿನಪಕ್ಷತ್ರಾಣಮೋ [6]ಪೇಪೆ[6]ನೆ ನೆಗೆದುದಳಿಶ್ಯಾಮಳಂ ಮೇಘಜಾಳಂ॥ ೧೫೫

(ಚಂದ್ರಪ್ರಭಪುರಾಣಂ, ೪–೩೧.)

ಒಟ್ಟಿದ ವಾರಿದೇರುಗಳವೋಲ್ ಕೆಲವೊಪ್ಪಿರೆ ದೂರಭಾಗದೊಳ್
ಕಟ್ಟಿದ ಗಂಧವಾರಣದವೋಲ್ ಕೆಲವೊಪ್ಪಿರೆ ತಳ್ತ ಕರ್ಪೂಡಂ।
ಬಟ್ಟೆಸೆದೆತ್ತಿದೋಳಿಗುಡಿವೋಲ್ ಕೆಲವೊಪ್ಪಿರೆ ನೀರದಂಗಳೊಂ
ದಿಟ್ಟಳವೊಪ್ಪಿದತ್ತು ಮಟೆಗಾಲದ ಬೀಡಿನವೋಲ್ ನಭಸ್ಥಳಂ॥ ೧೫೬

ವರುಣನ ಕೀಲಾರದ ತುಱು
ಖರಕರಕೃತ ನಿರತ [7][ನೀರದಾಂ][7]ಬರ ವಿಪಿನಾಂ।
ತರಮನಡರ್ದೆಱಿದಪುವೆನೆ
ವರುಣಾಶೆಯಿನಭ್ರಪಥವನೇಱಿದುದಭ್ರಂ॥ ೧೫೭

ಜಳದೌಘಶ್ಯಾಮಧೂಮಪ್ರತತಿ ಚಳತಟಿನ್ಮಾಳಿಕಾಲೋಲಕೀಲಾ
ವಳಿ ಸಂಜಾತೇಂದ್ರಗೋಪಪ್ರಸರವಿಸರ[8]ದ[8]ರ್ಚಿಃಕಣಂ ಪಶ್ಚಿಮಾಶಾ।
ನಿಳ್[9]ವಾ[9]ತೋಜ್ಜೃಂಭಿತಂ ಬಂದುದು ವಿರಹಿತರುವ್ಯಾತಮಂ ಪರ್ವುವುಗ್ರಾ
ನಳನೆಂಬಂತಬ್ದಕಾಲಂ ಸ್ತನಿತಧಗಧಗಧ್ವಾನರೌದ್ರಾಯಮಾಣಂ॥ ೧೫೮

(ಚಂದ್ರಪ್ರಭಪುರಾಣಂ, ೪. ೨೯.)

ಸ್ತನಿತಘನಬೃಂಹಿತಂ ದು
ರ್ದಿನಮದಪೂರಂ ಪಯೋದ[10]ಗಜ[10]ಘಟೆ ಸು[11]ಟಿ[11]ದ।

---

[1] ನಂ (ಅ). [2] ತಾಪ್ಸಱಿ (ಅ). [3] ತೋಱೆದಡಿಗಳಾ (ಕ.ಖ.ಬ). [4] ವಹ್ನಿ (ಅ). [5] ರುಕ್ಷಾ (ಕ), ಋಕ್ಷಾ (ಖ.ಬ). [6] ಮೇಣ್ (ಅ). [7] ನಿರತಾಂ (ಕ.ಖ.ಬ). [8] ಮ (ಖ.ಬ). [9] ಪಾ (ಅ). [10] ಘನ (ಕ.ಖ.ಬ). [11] ರಿ (ಖ.ಬ).

ತ್ತಿನಲುಚಪಲ್ಲವಕುಳಕಬ
ಳಿನಲೀಲೆಯಿನಂತರಿಕ್ಷಕಕ್ಷ್ಯಾಂತರದೊಳ್ ॥ ೧೫೯

(ಚಂದ್ರಪ್ರಭಪುರಾಣಂ, ೪–೩೨.)

ಮುಂ ಬಿಸಜೋದ್ಭವಂ ಸಮೆದನಂಬುದಮಂ ಪವಮಾನಧೂಮತೇ
ಜೋಂಬುಗಳಿಂದಮೆಂಬ ನುಡಿ ಸತ್ಯಮದಲ್ಲದೊಡುಂತೆ ಕಾರ ಕಾ।
ದಂಬಿನಿ ಮಾಟ್ಕುಮೇ ಬಿರಯಿಗಂಗಜವಹ್ನಿ ವಿಜೃಂಭಮಂ ವಿಳೋ
ಳಾಂಬಕವಾರಿಯಂ [1]ತನುನಿದಾಘ[1]ಮನುತ್ಕಳಿಕಾಪ್ರಪಂಚಮಂ॥ ೧೬೦

(ಚಂದ್ರಪ್ರಭಪುರಾಣಂ, ೪–೩೨.)

ಇಂಬುಗಿಡಿಸಿದುವು ದೆಸೆಗಳ
ನಂಬರಮಂ ಪೀರ್ದು[2]ವಹಿಮ[2]ಹಿಮಕರಕಿರಣಾ।
ಡಂಬರಮಂ ನೊಣೆದುವು ಪಿರಿ
ದುಂ ಬೇಸಱಿಸಿದುವು ಬಿರಯಿಯಂ ಜಲದಂಗಳ್॥ ೧೬೧

(ಚಂದ್ರಪ್ರಭಪುರಾಣಂ, ೪–೩೪.)

ನಲ್ಲರನಪ್ಪೆ ಮುಗ್ಧೆಯರು ದುರ್ಭಯಸಂಭ್ರಮದಿಂದೆ ಹಂಸೆಗಳ್
ನಿಲ್ಲದೆ ಪಾಱುಪೋಗೆ ಕೊಳದಿಂ ನವಿಲ್ ಪೊಱಮೆಯೆ ಕೇಳ್ದು ನರ್ತನೋ।
ತ್ಪುಲ್ಲತೆಯಂ ನೆಗಪ್ಪೆ ಮೊಱಗಿತ್ತು ಮುಗಿಲ್ ಘನಕಾಲಭೂಮಿಭೂ
ವಲ್ಲಭದಿಗ್ವಿಯೋದ್ಯಮಮಹೋತ್ಸವದುಂದುಭಿ ತಾನಿದೆಂಬಿನಂ॥ ೧೬೨

ಹರಿಗೋಪಾಲಪದಕ್ಕೆ ತೂರ್ಯಪಟುಘೋಷಂ ಕೇಕಿನಾಟ್ಯಕ್ಕೆ ಬಂ
ಧುರ ಢಕ್ಕಾನಿನದಂ ವಿಯೋಗಿನಿವಹಕ್ಕಂಗೋದ್ಭವಜ್ವಾಲತೋ।
ದ್ಧುರನಾದಂ ಕಳಹಂಸಯೂಥಗಮನೋದ್ಯೋಗಕ್ಕೆ ಭೇರೀಗಭೀ
ರರವಂ ತಾನೆ[3]ನಿಸಲ್ಕೆ[3] ಮೇಘನಿನದಂ ಪೊಣ್ಮಿತ್ತು ರೋದೋಂತದೊಳ್॥ ೧೬೩

(ಜಗನ್ನಾಥವಿಜಯಂ, ೪–೮.)

ಪಿಕಮೌನವ್ರತದುಂದುಭಿಧ್ವನಿ ಬಲಾಕಾದೃಶ್ಯಚೂಡೋದಯಾ
ನಕರಾವಂ ಶಿಖಿನೃತ್ಯವಾದ್ಯರುತಿ ಪೋತಕ್ಯುದ್ಭಗರ್ಭೋತ್ಸವೋ।
ತ್ಪುಲ್ಲಕವಾದಿತ್ರರವಂ ಮರಾಳಗಮನಾತೋದ್ಯಸ್ವನಂ ಚಾತಕೋ
ದಕಕೇಳೀಕೃತತೂರ್ಯನಾದಮೆಸೆದತ್ತಂಭೋದನಿರ್ಘೋಷಣಂ॥ ೧೬೪

(ಚಂದ್ರಪ್ರಭಪುರಾಣಂ, ೪–೩೫.)

---

[1] ಹೃದಯತಾಪ (ಅ). [2] ವಹ್ನಿ (ಖ.ಬ). [3] ನೆನವ್ಯ (ಅ).

ರನನಾಲಂಪಟನಾಜ್ಯವಾಂಛಿತನಸಂತುಷ್ಟಂ ಸದಾನರ್ವಭ.
ಕ್ಷಸಮಸ್ತಾಟವಿಭುಂಜಿತೋಗ್ರನೆನಿಪೀ ದಾವಾಗ್ನಿಯಂ ಕಾಲ್ಗಳಿಂ।
ಪೊಸೆವೆಂ ಕಾಪ್ಪೊನಲಿಂ ಪೊರಳ್ಚುವೆನರಣ್ಯಶ್ರೀಯೆ ಕೇಳೆಂದು ಗ
ರ್ಜಿಸಿ ಮೇಘಂ ನುಡಿವಂದದಿಂ ಸ್ತನಿತಘೋಷಂ ಪೊಣ್ಮಿತಂದೆತ್ತಲುಂ॥ ೧೬೫

ವಾದನದಂಡಂ ಕುಡುಮಿಂ
ಚಾದುದು ನೇಣಾದುದಮರಚಾಪಂ ವರದಂ।
ಭೋದಮದು ಢಕ್ಕೆಯಾದುದು
ವಾದಕನಾದುದು ನಟತ್ಕಲಾಪಿಗೆ ಗಗನಂ॥ ೧೬೬

ರಾಗದ ಬಳ್ಳಿ ಚಾದಗೆಗೆ ಕಾಂಚನಚಂಚಲಲಾಸ್ಯ[1]ತರ್ಜನಂ[1]
ಸೋಗೆನವಿಲ್ಗೆ ಮೇಖಲೆ ಘನಾಗಮೇ ಕ್ಷ್ಮಗೆ ದೀಪಮಾಲೆ ಜಾ।
ರಾಗಮನಕ್ಕೆ ಜಂತ್ರದುರಿಯೆಣ್ಣೆ ವಿಯೋಗಿಜನಕ್ಕೆನಲ್ ನಭೋ
ಭಾಗಮನೆಯ್ದೆ ಬಿತ್ತರಿಸಿದತ್ತು ತಟಿಲ್ಲತೆ ಲಾಸ್ಯಲೀಲೆ[2]ಯಿಂ[2]॥ ೧೬೭
(ರಾಮಚಂದ್ರಚರಿತಪುರಾಣಂ, ೭–೧೪೮ ; ಮಲ್ಲಿನಾಥಪುರಾಣಂ, ೮–೮೮.)

ಘನಘನಚಾಪದೊಳ್ ಸ್ಫುರಿತ ಮನ್ಮಥರಾಗಸುವರ್ಣರೇಖೆ ನೂ
ತನಜಳವಾಹಕೇಶಯುಗಳಂ ನವಚಂಪಕಮಾಲೆ ವಾರಿಭೃ।
ಜ್ಜನಪತಿಹಸ್ತ ಖಡ್ಗಲತೆ ಮೇಘ[3]ನೃಪೋ[3]ಜ್ವಳದೀಪಮಾಲೆ ತಾ
ನೆನೆ ಕಡುಗಾಡಿಯಿಂದಿಟಿದು ಮಿಂ[4]ಚೆಸೆ[4]ದತ್ತು ನಭೋವಿಭಾಗದೊಳ್॥ ೧೬೮

ಜಳಮಂ ವಾರಾಶಿಯೊಳ್ ಮಿರ್ಪಬೆರಸು ಮೊಗೆತರಲ್ ಮೇಘವಾ ಬಾಳೆಮೀನ್ಗಳ್
ಪೊಳೆದಾಡುತ್ತಿರ್ದುವಾಕಾಶದೊಳೆ[5]ನಲವಿ[5]ಭಿನ್ನಾಂಜನಚ್ಛಾಯೆಯಿಂ ಗೊಂ।
ದಳಿಸಿರ್ದಂಭೋದ[6]ದಿಂದುಚ್ಚಳಿಸಿ[6] ಪೊಳೆವ ವಿದ್ಯುಲ್ಲತಾಜಾಲಮಾಗಳ್
[7]ತ[7]ಳೆದತ್ತಾಶ್ಚರ್ಯಮಂ ಕಟ್ಟಲೆ ಬಿಡೆ ಬಿಸಿಲಂ ಕಾ[8]ಱಿಬೊಂದಂ[8]ದದಿಂದಂ॥ ೧೬೯
(ಜಗನ್ನಾಥವಿಜಯಂ, ೪–೧೫.)

ಸಕಲಾಬ್ದಾಂಭಸ್ಸಿರಾಮೋಚನಸುನಿಶಿತಶಸ್ತ್ರಂ ಪ್ರಯಾಣೋತ್ಕಹಂಸ
ಪ್ರಕರಪ್ರಸ್ಥಾನಭೇರೀಕನಕಮಯಕನತ್ಕೋಣಮಾಸಾರಲಕ್ಷ್ಮೀ।
ಪ್ರಕಟಾಂಭೋದಾವಳೀವಿಶ್ಲಥಕಬರಿಭರಸ್ರಂಸಿದಾಮಂ ಚಳಚ್ಚಾ
ತಕರಾಜ್ಯಶ್ರೀಕಟಾಕ್ಷದ್ಯುತಿಲತಿಕೆ ತಟಿನ್ಮಾಲೆ ಬೆಲ್ವಾದುದಾದಂ॥ ೧೭೦
(ಚಂದ್ರಪ್ರಭಪುರಾಣಂ, ೪–೩೧.)

---

[1] ಜರ್ಝರರ (ಖ.ಬ). [2] ಯಂ (ಕ). [3] ಗೃಹೋ (ಖ.ಬ). [4] ಚಿಸಿ (ಖ.ಬ). [5] ನೆನೆವ (ಖ.ಬ). [6] ದೊಳ್ ತಾಂಬಳಸಿ (ಅ). [7] ಮೊ (ಖ.ಬ). [8] ಱುತಿಪ್ಪೊಂ (ಅ).

ಗಗನಶ್ರೀಯ ವಿಚಿತ್ರವಸ್ತ್ರವಿಲಸತ್ಸಂವ್ಯಾನಮೆಂಬಂತೆ ಕಾ
ರ್ಮುಗಿಲೆಂಬಾನೆಯ ರನ್ನದಗ್ಗವಣೆಯೆಂಬಂತಬ್ಜಗರ್ಭಾಂಡಭೂ
ರಿಗೃಹದ್ವಾರ[1]ದ ರತ್ನ[1]ತೋರಣಮಿದೆಂಬಂತಭ್ರದೊಳ್ [2]ನಾ[2]ಡೆ ದಿ
ಟ್ಟಿಗೆ ಚೆಲ್ವಾಯ್ತು ಬಹುಪ್ರಭಾಶಬಳಿತಂ ಗೀರ್ವಾಣಬಾಣಾಸನಂ॥ ೧೭೧

(ಜಗನ್ನಾಥವಿಜಯಂ, ೪–೧೬.)

ನನೆಗೋಲ್ ಕರ್ಬಿನ ಬಿಲ್ ಮದಾಳಿಕುಳಲೇಖಾಮೌರ್ವಿಯೆಂಬರ್ ಮನೋ
ಜನ ಬಿ[3]ಲ್ ಮುಂ[3] ಪುಸಿಯಲ್ತು ಮೂಡುತಿದೆ ನಾನಾವರ್ಣದಿಂ [4]ಮಿಟ್ತು ವೆಂ[4]।
ದೆನಸುಂ ಬಾಯ್ಬಿಡೆ ಕಾಮುಕಾವಳಿ ಪಯೋಭೃತ್ಕೃಷ್ಣವಕ್ಷಃಸ್ಥಳೀ
ವನಮಾಲಾ[5]ಯತ[5]ಮೇಂ ಪೊದಳ್ದೆಸೆದುದೋ ಗೀರ್ವಾಣಬಾಣಾಸನಂ॥ ೧೭೨

(ಅನಂತನಾಥಪುರಾಣಂ, ೯–೧೧.)

ಮಾರ್ಮುಗಿಲೊಡ್ಡಿದತ್ತು ತುಱುಗಾರ್ತಿಯ ಕೋಣೆ ಕಡಂಕಿ ಮಿಂಚಿದ
ತ್ತೊರ್ಮೆಯೆ ನಿಂದ ನೀರ್ತೆಗೆದುದೊರ್ಮೆ ಬಿಸಿಲ್ಗೆ ಪೊದಟ್ಟುದೋಳಿಯಿಂ।
ಘರ್ಮಮರೀಚಿಮಂಡಳತರಂಗಿತ ಮೈವಳಿಯಾಯ್ತು ನೀರ್ಗದಿರ್
ಪೆರ್ಮಟೆಯಾಗದೀಗಳೆನುತಿರ್ದುದು ರಾಗದಿನುರ್ಬಿದಾ ಜನಂ॥ ೧೭೩

ಥಟಥಟಿಸೆ ಮಿಂಚು ಮಿಂಚಿದ
ಬಟೆಯನೆ ದಳದಳಿಸಿ ಮೊಱಗಿ ಮಿಗೆ ಮೊಱಗಿದವಂ।
ಬಟೆಯನೆ ಕಡಲಂ ಮೆಲ್ದೆಗೆ
ದೆಱಲಿಕ್ಕಿದ ತೆಱದಿನೆಱಗಿಕೊಂಡುವು ಮುಗಿಲ್ಗಳ್॥ ೧೭೪

ಮೇ[6]ಲೇ[6]ಲ್ಬ್ಬ[6] ಮುಗಿಲ [7]ಹೇ[7]ಱಿನ
ಮಾಲೆಗಳಂ ನೆಗೆದು ಕೊರಡುಗೊಂಡವೊಲೆತ್ತಂ ।
ನಾಲಿಟ್ಟು ವೆರಲ್ವಟ್ಟೆಯೊ
ಳಾಲಿವರಲ್ವೆರಸು ತೋರವನಿ [8]ಮುಂಗಾ[8]ರೊಳ್ ॥ ೧೭೫

(ಅನಂತನಾಥಪುರಾಣಂ, ೯–೮.)

ಉಪಶಾಂತರಜೋವಿಕೃತಿಯ
ನುಪ[9][ಗತ] ಕಾ[9]ಳಿಮಪಯೋಧರಸ್ಮಿತೆಯಂ ಮ ।
ತ್ತುಪಚಿತಜಡವೃತ್ತಿಯನೆ
ಯ್ದೆ ಪೋಲ್ತುದಭ್ರಾಗಮಂ ಸಗರ್ಭಾಂಗನೆಯಂ ॥ * ೧೭೬

---

[1] ದುದಾರ (ಅ). [2] ನೋ (ಅ). [3] ಲ್ಲಂ (ಅ . [4] ಬಿಲ್ಲುಮೆಂ (ಕ.ಖ.ಬ). [5] ಮಯ (ಅ). [6] ಲಲೆವ (ಅ). [7] ಹೊದಱಿನ (ಅ). [8] ಕೊಳ್ಗಾ (ಅ). [9] ..... ತಾ (ಖ.ಬ). * ಈ ಪದ್ಯವು (ಕ) ಪ್ರತಿಯಲ್ಲಿಲ್ಲ.

ವಿಳಸಿತ ಕಂ[1]ದಳಂ[1] ವಿ[2]ನಿಪತತ್ಕ[2]ರಕಂ ಕ್ಷುಭಿತೋರುವಾಹಿನೀ
ಕುಳನಿನದಂ ಗಳಚ್ಛರಸಮಗ್ರಮುದಗ್ರಸುಪರ್ವಚಾಪಮಂ ।
ಡಳಲಲಿತಾಂಬರಂ ವಿಹರಿದಶ್ವಸಮುತ್ಕ[3]ರ[3]ಮಂದಗುರ್ವನೇಂ[3]
ತಳೆದುದೊ ಪೋಲ್ತು ಯುದ್ಧ[4]ದ ಸಮ[4]ಕ್ರಮಮಂ ಜಲದಾಗಮಕ್ರಮಂ ॥ ೧೭೭
(ಚಂದ್ರಪ್ರಭಪುರಾಣಂ, ೪–೪೪.)

ಘನಸಮಯಶಬರ ಕರಗತ
ಕನತ್ತಟಿದ್ದಂಡಪಾತವಿಗಳನ್ನೀಳ ।
ಸ್ತನಯಿತ್ನುಕುಳತಮಾಳೀ
ವನಪ್ರಸೂನಂಗಳೆನಿಸಿದುವು ಕರಕಂಗಳ್ ॥ ೧೭೮
(ಚಂದ್ರಪ್ರಭಪುರಾಣಂ, ೪–೩೭.)

ಬಿಟ್ಟು ಸಿಡಿಲ್ದುವಾಲಿವರಲಾಲಿವರಲ್ಗಳ ಪಿಂತೆ ಧಾರೆಗಳ್
ಬಿಟ್ಟುವು ಧಾರೆಯಂ ಬೆಳಗಿ ತೋಱುವವೋಲ್ ಪೊಳಹೇಱಿ ಮಿಂಚು ಮಿಂ ।
ಚೆಟ್ಟುವು ಮೇಘದೊಳ್ ಮೊಱಗೆ ಮೇಘದ ಸಂದಣಿಯಿಂದೆ ಭೋರೆನು
ತ್ತೆಟ್ಟುಱಿ ಕೊಳ್ವ ಪೆರ್ಮಱೆಯ ಘೋಷವದೇನೆಸೆದತ್ತೊ ಕಾರ್ಮೊಗಂ ॥ ೧೭೯

ತೀಡುವ ಪಶ್ಚಿಮಾನಿಳನ ತೀಟ[5]ದಿನು[5]ತ್ಕಟಮಾಗೆ ರಾಗಮಿ
ಪ್ಪೋರ್ಗಡಿದ ಚಂಚುವಂ ತೆಱಿದೆಱಿಂಕೆ ನೆಱಿಲ್ದಿರೆ ಕಂಠನಾಳಮಂ ।
ನೀಡಿ ವಿಯತ್ತಳಕ್ಕೊಗೆದು ಕಾರ ಮುಗಿಲ್ವನಿಯಂ ಮನಂ ಕುಳಿರ್
ಕೋಡುವಿನಂ ಕರ್ದುಂಕಿ ನಲಿ[6]ವಾಱಿದು ವಾಱಿದುವಂದು[6] ಚಾತಕಂ ॥ * ೧೮೦
(ರಾಮಚಂದ್ರಚರಿತಪುರಾಣಂ, ೭–೧೪೭ ; ಮಲ್ಲಿನಾಥಪುರಾಣಂ, ೮–೮೭.)

ಗಱಿಗಳ್ ಮಿಳ್ಕಿಸೆ ಗೋಣ್ ಮರಲ್ದು ಮಡಪಿಟ್ಟಂ ಬಿರ್ಚಿ ಚಂಚೂಪುಟಂ
ದೆಱಿದಳ್ಳೆತ್ತಿದಿವಾಱಿ ಪೀರ್ದು ನಭದೊಳ್ ವಾರ್ಧಾರೆಯಂತೇಱಿ ಮೈ ।
ಮಱಿಕಂ ಸೊರ್ಕಿನಳುರ್ಕೆಗಾಲಿವರಲಂ ಪೊಯ್ದುಣ್ಣೆ ಕಲ್ಲಾಡಲುಂ
ತಿಱಿಕಲ್ಲಾಡಲದೇಂ ತಗುಳ್ದುವೊ ಮನಸ್ಸಂಪ್ರೀತಿಯಿಂ ಚಾತಕಂ (?) ॥ ೧೮೧
(ಅನಂತನಾಥಪುರಾಣಂ, ೯–೯.)

ಮನುದನುರಾಗದಿಂ ನೆಗೆದು ನೀಡಿದ ಕಂಠಮರಲ್ದ ತುಪ್ಪುಟು
ರ್ಬನಿಮಿಷಮಾದ ಕಣ್ ತೆಱಿದ ಚಂಚು ವಿಜೃಂಭಿಪೆಱಿಂಕೆ ರಂಜಿಸಿ ।

---

[1] ಧರಂ (ಕ.ಖ.ಬ). [2] ನೀತಪಕ್ಕ (ಖ.ಬ). [3] ದಂಡುಗುರ್ಬಿಗೇಂ (ಖ.ಬ)
[4] ಸಮಯ (ಅ). [5] ದೊಳು (ಅ). [6] ದಾಡಿದು ಪಾಱುದುದೊಂದು (ಅ). * ಈ ಪದ್ಯದಿಂದ ಮುಂದಿನ ಹತ್ತು ಪದ್ಯಗಳು (ಕ) ಪ್ರತಿಯಲ್ಲಿ ಗ್ರೀಷ್ಮವರ್ಣನಾಭಾಗದಲ್ಲಿ ಸೇರಿಹೋಗಿವೆ. (ಖ.ಬ) ಪ್ರತಿಗಳಲ್ಲಿ ಈ ಪದ್ಯವಿಲ್ಲ.

ತ್ತೆನೆ ನಲವೇಱಿ ತೋರವನಿ ತಣ್ಬನಿ ಮುಂಬನಿಯೆಂಬ ಕಾರ್ಮುಗಿ
ಲ್ವನಿಯನಲಂಪಿನಿಂದಮಿದಿರ್ಗೊಂಡು ಕರ್ದುಂಕಿದುದ್ಧಚಾತಕಂ ॥ ೧೮೨
(ಜಗನ್ನಾಥವಿಜಯಂ, ೪–೧೭.)

ಇದಿರ್ಗೊಂಡಾಯ್ಕುಳಿಗೊಂಡು ಕೊರ್ಬಿದ ನವಾಂಬೂದ್ಬಿಂದುವಂ ನುಂಗಿ ಪೆ
ರ್ಚಿದಲಂಪಿಂ ಜಲಧಾರೆಯಂ ಕರ್ದುಕಿದತ್ತೆಯ್ತಂದು ಮುಂಡಾಡಿದತ್ತೊ ।
ದೆದತ್ತೀಡಿಱಿದತ್ತು ಚಂಚುಪುಟದಿಂ ಪೊಯ್ದತ್ತು ಪಕ್ಷಾಗ್ರದಿಂ
ಬಿದಿರ್ದತ್ತೊರ್ಕುಳಿಯಾಡಿದತ್ತು ನಿಜತೃಷ್ಣಾಘಾತಕಂ ಚಾತಕಂ ॥ ೧೮೩

ಜಳಧರಮುಕ್ತನವ್ಯಜಳಬಿಂದುಗಳಂ ನೆ[1]ಗೆ[1]ದಾಯ್ದು ನುಂಗಿ ಕ
ಣ್ಮಲರ್ಗೊಳೊಳೋ[2]ವಿ[2]ಕೊಂಡು ಕುಣಿದಾಡಿದುದುಜ್ವಲಮಪ್ಪ ಧಾರೆಯೊಳ್ ।
ಗಿಲಿಗಿಲಿಗಂಬವಾಡಿದುದೆಱಿಂಕೆಗಳಂ ಕೆದಱಿತ್ತು ಮುದ್ದಿನಿಂ
ಕೆಲಕೆ ನಿರಾಕುಳಂ ತೆಗೆದುದಪ್ಪಿದುದೊಪ್ಪಿದುದೊಂದು ಚಾತಕಂ ॥ ೧೮೪

ವಸುಧಾವಲ್ಲಭೆ ಮೇಘಕಾಲವಿಟನೊಳ್ ಸಂಭೋಗಮಂ ಮಾಡೆ ಬಂ
ಣ್ಣಿಸರಂ ಪೋರ್ಕುಳಿಯಿಂದಲೇ ಪಱಿದು ಸೂಸಿತ್ತಲ್ಲದಂದೆತ್ತಣಿಂ ।
ಪೊಸಮುತ್ತುಂ ಕಿಸುಗಲ್ಗಳುಂ ಕೆದಱಿ ಕಣ್ಗಿಂಬಾದುವೆಂಬಂತದೇ
ನೊಸೆದೊಪ್ಪಿರ್ದುವ್ಹೊ ಸೂಸಿದಾಲಿವರಲುಂ ತಳ್ತಿಂದ್ರಗೋಪಂಗಳುಂ ॥ ೧೮೫
(ರಾಮಚಂದ್ರಚರಿತಪುರಾಣಂ, ೭–೧೪೬ ; ಮಲ್ಲಿನಾಥಪುರಾಣಂ, ೮–೮೬.)

ವಾಸವಚಾಪಮೆಂಬ ಮಣಿಮಂಟಪದೊಳ್ ಮೊಟಗೆಂಬ ವಾದ್ಯಮಂ
ಗೋಸನೆ ಮೇಘಮೆಂಬ ತೆರೆಯಿಂದೆ ತಟಿನ್ನಟಿ ಬಂದು ನಾಟ್ಯವಿ ।
ನ್ಯಾಸದೆ ಕೊಂಕಿ ನಿಂದು ಕುಸುಮಾಂಜಳಿಯಂ ಕುಡೆ ಮುತ್ತು ಮಾಣಿಕಂ
ಸೂಸಿದುವೆಂಬಿನಂ ಪರೆದುವಾಲಿವರಲ್ಗಳುಮಿಂದ್ರಗೋಪಮುಂ ॥ ೧೮೬
(ಅನಂತನಾಥಪುರಾಣಂ, ೯–೧೨.)

ಅಂಬರದ ನಡೆಮುಗಿಲ್ ದಾ
ಳಿಂಬದ ಬಿಡುವಣ್ ನಕಾಯಚಿತ್ತಂ ಸಾರ್ಚಿ ।
ತ್ತೆಂಬಂತೆ ಬಲಾಹಕದಿಂ
ದಂ ಬಿಟ್ಟಪುವಿಂದ್ರಗೋಪಮಾಲಿವರಲ್ಗಳ್ ॥ ೧೮೭

ಉಗುಟುತ್ತುಂ ಸಿಡಿಲೆಂಬ ತೋರಗಿಡಿಯಂ ಕಾಲೂಱಿ ಭೂಭಾಗದೊಳ್
ಗಗನಾಭೋಗಮನೆಯ್ದಿ ನೀಳ್ದ ಘನವೇಣೀ ಬಂಧಮಂ ಬಿರ್ಚಿ ಮಿಂ ।

[1] ನೆ (ಗ.ಘ). [2] ತ್ರಿ (ಗ.ಘ).

ಚುಗಳೆಂಬುಳ್ಕುವ ದಾಡೆಗಳ್ ಪೊಳೆಯೆ ಚಂದ್ರಾದಿತ್ಯರಂ ನುಂಗಿ ಬೇ
ಸಗೆಯಂ ಬೆರ್ಚಿಸಿ ಗರ್ಜಿಸುತ್ತು ಮೊಗೆದಂ ಕಾರೆಂಬ ಕಾಳಾಸುರಂ ॥ ೧೪೪

(ರಾಮಚಂದ್ರಚರಿತಪುರಾಣಂ, ೭–೧೫೨; ಮಲ್ಲಿನಾಥಪುರಾಣಂ, ೮–೯೪.)

ಎಳಮಿಂಚಂ ತಳೆಯಿಕ್ಕಿ ಚಾದಗೆಗಳಂ ಬಿಟ್ಟಾಡಿ ಬಲ್ಗೆಚ್ಚಲಿ
ಟ್ಟಳಿನೀಳಾಂಬುದವಿಂ ಬೆಳಲ್ದ ಗಗನ ಶ್ರೀಧೇನುವಂ ಕೋಮಳಾ ।
ಮಳದೀರ್ಘಾಮೃತಧಾರೆಗಳ್ ಸುರಿಯೆ ಭೋರ್ ಭೋರೆಂಬಿನಂ ಶಕ್ರಚಾ
ಪಲತಾದಾಮಕದಿಂದೆ ಕಟ್ಟಿ ಕಱೆದಂ ಕಾರೆಂಬ ಗೋಪಾಲಕಂ ॥ ೧೪೯

ನವನೀಳಾಂಭೋದವಂಭೋದದಿನೆಱಗುವ ಧಾರಾಳಿ ಧಾರಾಳಿಗಳ್ ಸೂ
ಸುವಿನಂ ತಳ್ಪೊಯ್ವ ಜಂಝಾನಿಳನನಿಳನಿನಾವೋದಮಂ ಪೇಱಿ ಪೂವೇ ।
ಱುವ ಕುಂದಂ ಕುಂದದೊಳ್ ತಳ್ತಳಿಗಳಳಿಗಳಂ ಪಣ್ಗಳಿಂ ಗೆಲ್ದ ಜಂಬೂ
ನಿವಹಂ ಚೆಲ್ವಾಗೆ ಚೆಲ್ವಾದುದು ಚಟುಲತಟಿಜ್ಜಾಲವಂಭೋದ[1]ಕಾಲಂ[1] ॥ ೧೯೦

(ಜಗನ್ನಾಥವಿಜಯಂ, ೪–೨೭.)

ನೆರೆದ ಮುಗಿಲ್ ಕಲಂಕುವುದನೀಕ್ಷಿಸಿ ತನ್ನ ಮನಂ ಕಲಂಕಿ ಕ
ರ್ಗಿರೆ ಮಱುದುಂಬಿವಿಂಡನೊಳಕೊಂಡಿರುಳೊಳ್ ಮುಗಿದಿರ್ದ ಪಾಂಡುಪಂ ।
ಕರುಹದ ಭೃಂಗಿಯಂ ತಳೆದು ವಿಸ್ಮಿತಮಾನಸರಾಗಿ ಮಾನಸರ್
ಪರಿಕಿಸೆ ಮಾನಸಕ್ಕೆ ನಡೆಗೊಂಡುದು ಕೂಡೆ ಮರಾಳಮಂಡಲಂ ॥ ೧೯೧

ವಸುಧಾಚಕ್ರಕ್ಕೆ ಕಾಳಾಯಸಗೃಹ[2]ವಿಲಸಂ[2] ಚಂದ್ರಬಿಂಬಕ್ಕೆ ರಾಹು
ಗ್ರಸನಂ ಚಂಡಾಂಶುಬಿಂಬಕ್ಕ[3]ಸಮಯ[3]ರಜನೀಪ್ರೋದ್ಗಮಂ ವಜ್ರವೆಹ್ನಿ ।
ಪ್ರಸರಕ್ಕಾದ್ಯಾಮಧೂಮೋದಯಮಖಿಳವಿಯೋಗಾತುರರ್ಗಂಧಕಾರೋ
ಲ್ಲಸನಂ ತಾನೆಂಬಿನಂ ಬಂದುದು ಬಹುಳತಟಿಜ್ಜಾಲಮಂಭೋದಕಾಲಂ ॥ ೧೯೨

(ಕಾದಂಬರಿ, ಉ. ಭಾ., ೫೨೯.)

ತಿರುವಂ ಮುಪ್ಪುರಿಗೊಂಡು ಮಿಳ್ಕಿಸುವ ಮಿಂಚಿಂ ಮಾಡಿ ನೀಡುಂ ಭಯಂ
ಕರಮಾಗೇಱಿಸಿಕೊಂಡು ಶಕ್ರಧನುವಂ ಧಾರಾಶರಾಸಾರಮಂ ।
ಸುರಿಯುತ್ತುಂ ಘನಘೋಷಗರ್ಭರತರಪ್ರಧ್ವಾನದಿಂದಾರ್ದು ಪಾ
ರ್ದಿರ[4]ದುದ್ದಾಮ[4] ನಿದಾಘಮಂ ಬೆದಱಿ ಬೆಂಕೊಂಡತ್ತು ಮೇಘಾಗಮಂ ॥ ೧೯೩

(ಕಾದಂಬರಿ, ಉ. ಭಾ., ೫೩೦.)

---

[1] ಜಾಲಂ ಕ.ಖ.ಘ). [2] ವರಣಂ (ಅ.) [3] ವಮೆಯ (ಅ.) [4] ದುಂಗಾಹ (ಖ.ಬ).

ಧರೆಯೊಳ್ ಶಾಲೂರಸಂಘಂ ಪವನಪಥದೊಳಂಭೋಧರಾನೀಕವಾಶಾ
ತರದೊಳ್ ಜಂಝಾನಿವಾರಂ ವನಸಮುದಯದೊಳ್ ಕೇಕಿಸಂಘಾತಮುರ್ವೀ।
ಧರ[1]ವಪ್ರ[1]ಪ್ರಾಂತದೊಳ್ ನಿರ್ಝರತತಿ ತಟಿನೀವ್ಯೂಹದೊಳ್ ವಾರಿಪೂರಂ
ವಿರಹಿವ್ರಾತಕ್ಕಗುರ್ವಂದೊಡನೊಡನನಿತುಂ ಗರ್ಜಿಸುತ್ತಿರ್ದುದೆತ್ತಂ ॥ ೧೯೪
(ಕಾದಂಬರಿ, ಉ. ಭಾ., ೫೩೨.)

ಸ್ಫುರಿತ ತಟಿತ್ಪ್ರಭಾಪ್ರತತಿ ಕಟ್ಟಲೆಯಂ ಸುರಗೋಪಕಾಂತಿ ಪಾಂ
ಡುರತೆಯನಂಬುವಾಹತತಿ ಶೋಷಣಮಂ ಘನವಾರಿಧಾರೆ ನಿ ।
ರ್ಝರ ಪರಿ[2]ತೋದ[2]ಮಂ ಕುಟಜಕುಂದ ನವೋದ್ಗಮ[3]ರಾಜಿ[3] ರಾಗಮಂ
ವಿರಹಿಜನಕ್ಕೆ ಮಾಡಿದುದು ನೋಡುವೊಡೆಯ್ದೆ ವಿರುದ್ಧಮೆಂಬಿನಂ ॥ ೧೯೫
(ಕಾದಂಬರಿ, ಉ. ಭಾ., ೫೩೪.)

ಪಸುರ್ವುಲ್ಲಂ ಮೇದು ಸಂದೊಂದೆಡೆಯೊಳಮೊಡಲಿಂಬಿಲ್ಲೆನಲ್ ಕೊರ್ವಿ ಕೆಚ್ಚಲ್
ಕುಸಿವನ್ನಂ ಬೀಗಿ ಪಾಲಂಬಿರಿವಿಡೆ ಮೊಲೆಯಿಂ ವತ್ಸಪೀತಾವಶೇಷಂ ।
ಪೊಸಗಾರೊಳ್ ತಾಱುಲೊಳ್ [4]ಕಣ್ಮಲರ್ ಮುಗುಳ್ದಿರೆ[4] ನೃಕ್ವಂಗಳಿಂ ಸೂಸೆ ಫೇನ
ಪ್ರಸರಂ ಮೆಲ್ಕೊತ್ತುತುಂ ನಿಂದುದು ವನಮಹಿಷೀವ್ಯಂದಮಾನಂದದಿಂದಂ ॥
(ರಾಮಚಂದ್ರಚರಿತಪುರಾಣಂ, ೭–೫೭; ಮಲ್ಲಿನಾಥಪುರಾಣಂ, ೮–೯೯.)

ಬಯಲೊಳ್ ಪರ್ವುಗೆದೋಱಿ [5]ಮುಂಬನ[5]ಲೆಯೊಳ್ [6]ಮೆಲ್ವೇ[6]ಱಿ ನೀರ್ದಾರ್ಣ
[ದೊಳ್
ನಯಮಂ ಬೀಱಿ ಮಹೀಧ್ರದೊಳ್ ಮಸಕಮಂ ಕೈಕೊಂಡು ಶಾಖಾಸಮು ।
ಚ್ಚಯದೊಳ್ ಸಂದಣಿಗೊಂಡು ತಾಟವನದೊಳ್ ಕಾರ್ಕಶ್ಯಮಂ ಕೂಡಿಕೊಂ
ಡು ಯಥಾ[7]ಧಾ[7]ರನಿಪಾತಮುಣ್ಮಿದುದು ಮೇಘೋನ್ಮುಕ್ತಧಾರಾರವಂ॥ ೧೯೭
(ಕಾದಂಬರಿ, ಉ. ಭಾ., ೫೩೩.)

ಬಲ್ಸರಿ ಬಿಱುಸರಿ ಪೆರ್ಮಱೆ
ಮೆಲ್ಸರಿ ತುಂತುಱು[8] ತುಷಾರಮಿಡುಕುಂಬನಿ ತಂ ।
ದಲ್ಸೋನೆ ನಟ್ಟ ಬಡಪಮೆ
ನಲ್ ಸುರಿದುವು ಬಿಡದೆ ಮಱೆಗಳಿರುಳುಂ ಪಗಲುಂ ॥ ೧೯೮
(ಜಗನ್ನಾಥವಿಜಯಂ, ೪-೩೨.)

ಪರಿವ ಮುಗಿಲ್ ಪಳಂಚೆ ಖಚರೀನಿಚಯಸ್ತನತಾರಹಾರವ
ಲ್ಲರಿ ಪಱಿಯಲ್ ಪೊದಪ್ಪಿ ಬಿಡುಮುತ್ತು ಘನೋಪಲದೊಂದು ರೂಪದಿಂ ।

---

[1] ಚಕ್ರ (ಅ). [2] ತಾಪ (ಅ.) [3] ವಾಟಿ (ಅ). [4] ಕಣ್ಣರೆ ಮುಗಿದಿರೆ (ಅ).
[5] ನುಣ್ಪಸ (ಅ). [6] ಮೆಯ್ವೇ (ಅ). [7] ಸಾ (ಅ).

ಸುರಿಯಲನಂತರಂ ಬಱಿಯದಾರವೆಱಿದ್ದಪುದೆಂಬ ಚೆಲ್ವನಾ
ವರಿಸಿದುವಂದು ಸಂದಣಿಸಿ ನೀಳ್ದ ಪಯೋಧರವಾರಿಧಾರೆಗಳ್ ॥ ೧೯೯

(ಜಗನ್ನಾಥವಿಜಯಂ, ೪–೩೧.)

ಪುರಮಂತದ್ವೀಪಮೆಂಬಂತಿರೆ ವಿಪಿನಚರಾನೇಕಪಾನೀಕಮಂಭಃ
ಕರಿಯೂಥಂ ತಾನಿದೆಂಬಂತಿರೆ ನಗನಿಕರಂ ಪಕ್ಷಕುತ್ಕೀಳಮೆಂಬಂ ।
ತಿರೆ ಮತ್ತಂ ಲೋಕಮೇಕಾರ್ಣವಮೆನಿಸಿದುದೆಂಬಂತಿರೆತ್ತೆತ್ತಲುಂ ಕಾ
ಱ್ಪುರಮಾದಂ ಕೊರ್ವಿ ಬಿರ್ದಂ ಕಱಿದುದು ಬಹಳಾಸಾರಮಂ ನೀರದೌಘಂ ॥

(ಚಂದ್ರಪ್ರಭಪುರಾಣಂ, ೪–೪೧.)

ಬಱಿಬಱಿನಾಗಿ ತಾಳಿಸಿದುದುರ್ವರೆಯಂ ರವಿ ಸುಟ್ಟನೆಮ್ಮನಿಂ
ತಱಿಗುಲಿಯೆಂದು ವಾರಿದಕೆ ಮುಟ್ಟಿಸಿ ಪುಯ್ಯಲನಿಕ್ಕುವಂದದಿಂ ।
ಟಱಿಟಱಿ ಱೊಂಕು ಱೊಂಕುಟ ಟಱಿಟ್ಟಱಿ ಱಿಟ್ಟಱಿಯೆಂದುಮೆತ್ತಲುಂ
ಕೆಱಿಕೆಱಿ ಬಾವಿಬಾವಿ ತೊಱಿಪೆರ್ದೊಱಿದಪ್ಪುದೆ ದರ್ದುರವ್ರಜಂ ॥ ೨೦೧

(ಅನಂತನಾಥಪುರಾಣಂ, ೯–೧೨.)

ಅಡರ್ದೊಂದೊಂದಱಿ ಬೆನ್ನಂ
ಪಡಿಮೊಗದಿಂ ಪತ್ತಿಕೊಂಡು ವಿಷಯಾತುರದಿಂ ।
ಗಡರ್ಗಬಕು ಗಬಕುಱಿಹಕೆಂ
ದೊಡನೆಂದುವು ಕಾರಗಪ್ಪೆ ಕೆಱಿಗಳ ತಡಿಯೊಳ್ ॥ ೨೦೨

ಮೊಲ್ಲೆ ಮುಗುಳ್ತುದಂದು ಗಿರಿಮಲ್ಲಿಗೆ ಮೆಲ್ಲನರಲ್ದುದಂದು ಕಂ
ಕೆಲ್ಲ ಪಸುರ್ತುದಂದು ಬಿದಿರೊಳ್ ಕುಡಿ ಮೂಡಿದುವಂದು ಕೆಂದಳಿರ್ ।
ಸಲ್ಲಕಿಗಾದುದಂದು ರಸವೇಱಿದ ನೇಱಿಲ ದೋರೆವಣ್ಣಳಂ
ತಲ್ಲುಗುತಂದುವಂದು ತಲೆದೋಱಿದುವಂದು ಶಿಲೀಂಧ್ರಕಂದಳಂ ॥ ೨೦೩

ತಿರುವಿಲ್ಲದ ಸುರಧನುವಂ
ಸುರಭಿಶರಂ ಪಿಡಿದು ಗೆಲ್ದು ಭೂಪರ ಕೊಡೆಯಂ ।
ಪಿರಿದಿನಿತೆಂದುಂ ರತಿಪತಿ
ವಿರಚಿಸಿದಂತಿರ್ದುವೆಱ್ದು ಕಳ್ಳನ ಕೊಡೆಗಳ್ ॥ ೨೦೪

ಹಿಮರೋಚಿಃಕಳಿಕಾಕದಂಬಕಮನಿಂಬಿಂ ತಿರ್ದಿ ಮೇಳೈಸಿ ಕುಂ
ಕುಮದಿಂ ಭಾವಿಸಿ ಚಂದನಾಂಬುಗಳ ನೀರಂ ಪೊಯ್ದು ಹಾರೀತರ ।

ತ್ನಮು[1]ಯೀಶು[1]ಕ್ತಿಯೊಳೊತ್ತಿ ಬಯ್ತನಜನೆಂಬಂತಾಯ್ತು ಹೂತೇಪ್ಪ[2]ಯಿಂ[2]
ಸುಮನಸ್ಸಾಯಕ[3]ಶಸ್ತ್ರನಾಭರಣ[3]ಮಾ [4]ಸಂ[4]ಕೇತಕಂ ಕೇತಕಂ ॥ ೨೦೫

(ಅನಂತನಾಥಪುರಾಣಂ, ೯–೧೪.)

ಕುಸುಮಾಸ್ತ್ರಪ್ರಥಿತಾಜ್ಞೆಯಂ ತಲೆಯೊಳಾಂಪಂ ತನ್ನ [5][ನಾ][5]ರಿಂತಿದಂ
ಬಿಸುಟಂ ಬೂದಿಯ ಜೋಗಿ ಭೂತಗಣನಾಥಂ ಚರ್ಮವಾಸಂ ಕಪ ।
ರ್ದಿ ಸಮಂತೆಂದು ಮಧುಪ್ರಮತ್ತತೆ ಕರಂ ತಳ್ಪೊಯ್ವಿನಂ ಬೈದು ಪಾ
ಡಿಸುವಂತಿರ್ದುದು ಬಂದ ಕೇದಗೆ ನದದ್ಭೃಂಗಾಳಿಯಿಂ ಶೂಲಿಯಂ ॥ ೨೦೬

ಎಱಗದೆ ತಮ್ಮೊಳ್ ಮಧುಕರ
ನೆಱಗಿರೆ ಕೇದಗೆಯೊಳೆಯ್ದೆ ಕಂಬನಿವಟೆಯಂ
ಕಱುವಂತಿರೆ ಕಟಿವೂಗಳ್
ನೆಱೆ ಬೀತುವು ಸುರಗಿ ಹೊನ್ನೆ ಮಲ್ಲಿಗೆ ಬನದೊಳ್ ॥ ೨೦೭

(ಜಗನ್ನಾಥವಿಜಯಂ, ೪–೪೫.)

ಬಡಪಂ ಬೆಂಬತ್ತೆ ಮೇಪಂ [6]ತೊ[6]ಱೆದು ಬಿಡದೊಡಲ್ ಕೂಡಿ ತನ್ನಿಚ್ಚೆಗೆ[7]ಟ್ಟೊ
ಳ್ದೊ[7]ಡೆಯೊಳ್ ಬೆಚ್ಚಂತೆ ಬಾಲಂ ನಿಲೆ ನ[8]ವಿರೊ[8]ಡೆದುರ್ವೆಟ್ಟು ಬೆಂಡಾಗಿ
[ಕಾಲೊಳ್ ।
ನಡುಕಂ ಮೈವೆರ್ಚಿ ಗಂಟಲ್ ಕುಸಿದು ಕವಿಯೆಟಲ್ತಂದು ನಿಂದಿರ್ದುದೋರೊಂ
ದೆಡೆಯೊಳ್ [9]ನಾನಲ್ಗ[9]ಳೊತ್ತಂಬಿಡಿದು ಮೃಗಮೃಗೀವ್ಯಂದಮೋರಂದದಿಂದಂ ॥

(ಚಂದ್ರಪ್ರಭಪುರಾಣಂ, ೪–೪೭.)

ಹೆಟವುಗೊಳಿಸಿತ್ತು ಜನಮಂ
ಮಟೆಗಾಲಂ ತೀವ್ರಪವನನಿಂ ದುರ್ದಿನದಿಂ ।
ಮೊಟಗಿಂ ಮಿಂಚಿಂ ಸಿಡಿಲಿಂ
ಮಟೆಯಿಂ ದೆಸೆದೆಸೆಗೆ ಪರಿವ ಪೊನಲಿಂ ಕೆಸಱಿಂ ॥ ೨೦೯

ಇನನಿದಿರೇಳ್ವ ಕಾರ್ಮುಗಿಲ ಬಾಧೆಗೆ ಬಿಟ್ಟಿನೊ ತಳ್ತ ಬಳ್ಳಿಮಿಂ
ಚಿನ ಬಲೆಯಲ್ಲಿ ಸಿಲ್ಕಿದನೊ ಪೊಯ್ವ ಸಿಡಿಲ್ಗೊಳಗಾಗಿ ನಿಂದನೋ ।
ಘನಜಲಧಾರೆಯೊಳ್ ಕರಗಿಪೋದನೊ ತನ್ನನೆ ಕಾಣನೆಂದು ಪ
ದ್ಮಿನಿ ನಲವೋಡಿ ತನ್ಮಧುಕರಧ್ವನಿಯಿಂದೆ ಪಲುಂಬಿ ಪಾಡಿದಳ್ ॥ ೨೧೦

---

[1] ಯಾಸೂ (ಖ.ಬ). [2] ಯೊಳ್ (ಅ). [3] ನಸ್ತ್ರಸೌರಭರ (ಅ). [4] ಸಾ (ಅ). [5] ದಾ (ಕ.ಖ.ಬ). [6] ಮೆ (ಅ). [7] ಟ್ಟಿರ್ದೆ (ಕ.ಖ.ಬ). [8] ಲಿವೊ (ಕ.ಖ.ಬ). [9] ತಾಱಲ್ಗ (ಅ).

ಅವಿ[1]ಶಾಲಾ[1]ಂಬರವಪ್ರಸನ್ನ ದಿವವಸ್ಪಷ್ಟಾಧ್ವವಸ್ಪಚ್ಛತೋ
ಯವನುದ್ಯೋಗಜನೌಘವಸ್ತದವವಸ್ಮೇರಾಬ್ಜವಶ್ಲಕ್ಷಣ ಕೈ ।
ರವವಕ್ರೀಡಿತಹಂಸವಸ್ಫುರಿತ ಚಂದ್ರಾದಿತ್ಯವಶ್ಲಿಷ್ಟಕೋ
ಕವಯೂನಾಧ್ವಗವಸ್ಪರಾನ್ಯಭೃತವಂದೊಪ್ಪಿರ್ದುದಭ್ರಾಗಮಂ ॥ ೨೧೧

(ಜಗನ್ನಾಥವಿಜಯಂ, ೪–೨೬.)

ಕೆಸಱೊಳ್ ಜಾಱುವ ಜಾಱು ಬೀೞ್ವ ಮಱೆಯೊಳ್ ಮ್ಯೆನಾಂಬ ನಾಂದೊಚ್ಚತಂ
ಬಸಿಯುತ್ತಿರ್ಪ ಜನಂಗಳಂ ಸುರತಲೀಲಾಗೇಹನಿರ್ವ್ಯೂಹ[2]ದು ।
ದ್ದೆಸದೊಳ್ ತಟ್ಟಿಸಿ[2] ನಂತಮಿರ್ದಿನಿಯರೋರೊರ್ವರ್ಗೆ [3]ಕಣ್ಣಿತ್ತಿ[3] ತೋ
ಱಿ ಸಖೀಸಂಗ[4]ತ[4]ಹಾಸ್ಯದಿಂ ನಲಿಯೆ ರಯ್ಯಂ ತತ್ಪಯೋದಾಗಮಂ॥ ೨೧೨

ಪರೆದ ಕಚಂ ಮುಗಿಲ್ ಕರತಳಾಹತಿಯಿಂ ಪಱಿದೊಕ್ಕ ಮೌಕ್ತಿಕಾ
ಭರಣದ ಮುತ್ತು[5]ಮಾ[5]ಲಿವರಲಾ ಸುಗಳಧ್ವನಿ ಮೇಘನಿಸ್ವನಂ ।
ಸುರಿವ ಬೆಮರ್ ತಗುೞ್ವ ಮಱೆ ಕಾಮರಸಂ ಪೊನಲಾಗೆ ಕಾದಲರ್
ನೆರೆವೆಡೆಯೊಳ್ ಮನೋಭವನ [6]ಸೃ[6]ಷ್ಟಿವೊಲಾದುದದೊಂದು ಕಾರ್ಮೊಗಂ॥ ೨೧೩

ಬಂದಪೆನೆಂದು ಪೋದನಿನಿಯಂ ಜಲದಾಗಮನಕ್ಕೆ ಕಾರ್ಮುಗಿಲ್
ಬಂದುದು ಶಕ್ರಚಾಪಲತೆ ಬಂದುದು ಪೆರ್ಚಿದ ಸೋಗೆಯಿಂಚರಂ ।
ಬಂದುದು ಚೆಲ್ವುವೆತ್ತು ನಭದೊಳ್ ಪೊಳೆದೊಪ್ಪುವ ಬಳ್ಳಿಮಿಂಚು ತಾಂ
ಬಂದುದು ಬಂದನಿಲ್ಲ ಪತಿಯೆಂದು ಲತಾಂಗಿ ಪಲುಂಬಿ ಪಾಡಿದಳ್ ॥ ೨೧೪

ಇನಿಯಂ ಬಾರದೆ ಮಾಣ್ದನಿನ್ನೆವರಸಿನ್ನೀಂ ಕಾರಿರುಳ್ ಪೋಗಿ ಕಾ
ಮನ ಸಾಮ್ರಾಜ್ಯವನಟ್ಟಿದಪ್ಪ ಮಗಳೇ ಕಾಬ್ಪೂರದೊಳ್ ಕುಂಗೆ ಮಿಂ ।
ಚಿನ ಕಣ್ಣೇಱಿಱಿದಾಗದೊರ್ಮಿಡಿಯೆ ಭಿನ್ನಂ ಚಾಪವೃತ್ತಸ್ತನಂ
ಸ್ತನಿತಕ್ಕೊಡ್ಡಿಸಲಾರ್ಪವೇ ಮಱೆಯೊಳೇಱುಂಜವ್ವನಂ ನಾನದೇ ॥ ೨೧೫

ಬಱಿಸಿಡಿಲೇಕ್ಕೆ ಸುತ್ತಿಱಿದ ಕಟ್ಟಲೆ ಕಾರ್ಮುಗಿಲೊಡ್ಡು ಬಂದುಬಂ
ದೆಱಗುವ ಬಲ್ಲಿತಪ್ಪ ಸರಿ ಕಂಗಳೊಳುಣ್ಮುವ ಮಿಂಚು ಮಾಣದ ।
ೞ್ಕುಱೆ ಗಜಱಿತ್ತಮಿರ್ಪ ಘನಗರ್ಜನೆಯೆಂಬಿವು ಕಾತರತ್ವಮಂ
ಮಱಿಯಿಸಲೆಂತುಮಾಱಿವು ನಿಜೇಶ್ವರನಲ್ಲಿಗೆ ಪೋಪ ನಲ್ಲಳಾ ॥ ೨೧೬

(ಶೃಂಗಾರರತ್ನಾಕರಂ, ೩–೬೧.)

---

[1] ಳಾನಾಂ (ಖ.ಬ). [2] ಮದ್ವೆಸದೊರಳ್ಚಿಸಿ (ಕ) ಮದ್ವೆಸದೊತ್ತಳ್ಕಿಸಿ (ಖ.ಬ).
[3] ಕಣ್ಗೆತ್ತಿ (ಕ), ಕಂಗೆತ್ತಿ (ಖ.ಬ). [4] ಡ (ಖ.ಬ). [5] ವಾ (ಗ.ಘ). [6] ವೃ (ಗ.ಘ).

ತಳದರ್ಶಾತ್ಮಾಲಯದಿಂದಿರುಳ್ ಸುಟಿವ ಜಾರಸ್ತ್ರೀಯ ವಕ್ತ್ರೇಂದುವಂ
ಚಳವಿದ್ಯುನ್ನಯನಾವಲೋಕ[1]ನದೆ[1] ಕಂಡನ್ಯಾಯಮಾಯ್ತೀ ವಿಯ ।
ತ್ತಳಚೂಡಾಮಣಿ ಚಂದ್ರ[2]ನೇಂ[2] ಕಱೆದ[3]ನೀ[3] ವರ್ಷಾಂಬುವಂ ಕೂಡೆ ಭೂ
ವಳಯಕ್ಕೆಂ[4]ದುಲಿ[4]ವಂತದೇಂ ಮೊಱಗಿತೋ ಮೇಘಂ ನಿಶೀಥಂಗಳೊಳ್ ॥ ೨೧೭

(ಜಗನ್ನಾಥವಿಜಯಂ, ೪–೨೮.)

ಭವಲಾಲಾಟವಿಲೋಚನಾಗ್ನಿಶಿಖೆಯಿಂ ಬೆಂದಳ್ಕಿ ಮತ್ತಂ ಮನೋ
ಭವನೆಬ್ಬಿತ್ತೊಡೆ ಕಾಮಕಾಂತೆ ಬಟಿಯಂ ತನ್ನಿಚ್ಛೆಯಿಂ ಮೆಚ್ಚಿ ಬ ।
ಣ್ಣವುರಂ ತೀವಿದ ಮಾಕ್ಕೆಯಾಯ್ತು ನ[5]ವಿಲಿಂ[5] [6]ತಂದಲ್ಗಳಿಂ[6]ದಿಂದ್ರಗೋ
ಪವಿಳಾನಂಗಳಿನಾಲಿಕಲ್ಲ ಪರ[7]ಪಿಂ[7] ಕಾರೊಳ್ ಮಹೀಮಂಡಳಂ ॥ ೨೧೮

(ಪಂಪಭಾರತಂ, ೭–೨೪.)

ಮೊಳೆವುಲ್ ಮೆಯ್ಯ್ನವಿರಾಲಿ ಲೋಲನಯನಂ ಗೀರ್ವಾಣಬಾಣಾಸನಂ
ನಳಿತೋಳಾಡುವ ಸೋಗೆ ಸೋರ್ಮುಡಿಪೊನಲ್ ರೋಮಾಳಿ ಮಿಂಚೋಲೆವೊಲ್ ।
ಜಳದಂ ಪೆರ್ಮೊಲೆ ಶಕ್ರ[8]ಗೋ[8]ಪಮಧರಂ ತಾನಾಗೆ ಕಾರೆಂಬ ನ
ಲ್ಲಳೆ ಬಪ್ಪಂತತಿಕಾಮುಕರ್ಗೆ ಮನದೊಳ್ ಮಾಡಿತ್ತತಿಪ್ರೀತಿಯಂ ॥ ೨೧೯

ಕಡವಲದರ್ದುವು ಮೊಲ್ಲೆಯ ಪೂ
ಗುಡಿ ನಿಮಿರ್ದುವು ಸೋಗೆ ಕೇಗಿದುವು ಕೇದಗೆ ಬೆ ।
[9]ಳ್ಪೊಡೆ[9]ವ್ರೋದುವು ಚಾದಗೆಗಳ್
ಕಡಂಗಿ ನುಂಗಿದುವು ತೋರವನಿಯಂ ಕಾರೊಳ್ ॥ ೨೨೦

(ರಾಮಚಂದ್ರಚರಿತಪುರಾಣಂ, ೨–೫೨.)

ನಿಳಯದ ಸೂರ್ಗಳೊಳ್ ತರದೆ ಮುತ್ತಿನ ಸೂಸಕದಂತೆ ನಂದನಂ
ಗಳ ತರುಪತ್ರದೊಳ್ ಮುಕುಳಮಂಜರಿಯಂತೆ ಚರತ್ಪುರಾಂಗನಾ ।
ವಳಿಯ ಕುರುಳ್ಗಳೊಳ್ ತಳಿದ ಸೇಸೆಗಳಂತೆಳವುಲ್ಗಳೊಳ್ ಘನೋ
ಪಳಕುಳದಂತೆ ತೋಱಿದುವು ನವ್ಯಘನಚ್ಯುತ ತೋಯಬಿಂದುಗಳ್ ॥ * ೨೨೧

(ಜಗನ್ನಾಥವಿಜಯಂ, ೪–೧೯.)

ಸುರಗೋಪಂಗಳುಮಾಲಿಕಲ್ಲುಮೆಳವುಲ್ಲುಂ ಕೆಂಪಿನಿಂ ಬೆಳ್ಪಿನಿಂ
ಹರಿತಚ್ಛಾಯೆಯಿನಲ್ಲಗಲ್ಲಗೆಸೆಗುಂ ವಾಣಿಕ್ಯದಿಂ ಮುತ್ತಿನಿಂ ।

---

[1] ದೊಳೆ (ಅ). [2] ನಂ (ಅ). [3] ನೋ (ಅ). [4] ಬಿನ (ಅ). [5] ಲವಿಂ (ಖ.ಬ). [6] ಕುಂದಂಗಳಿಂ (ಅ). [7] ಲಿಂ (ಅ). [8] ಚಾ (ಕ). [9] ಳ್ಗುಡಿ (ಅ).
* ಈ ಪದ್ಯ (ಕ) ಪ್ರತಿಯಲ್ಲಿಲ್ಲ.

ಗರುಡೋದ್ಗಾರದ ಪಚ್ಚೆಯಿಂ ಸಮೆದ ನಾನಾಭೂಷಣಾನೀಕಮಂ
ಧರಣೀವಲ್ಲಭೆಗಂಬುದಾಗಮವಿಟಂ [1]ಕೈಗೆಯ್ಸಿ[1]ದೊಂದಂದದಿಂ ॥ ೨೨೨
(ಜಗನ್ನಾಥವಿಜಯಂ, ೪–೨೦.)

ಕೆಱೆ ಕಾಟ್ಪುರದಿಂ ತೀವಿರೆ
ಕೆಱೆಗಳ ಕಡೆಗೋಡಿ ಪಳ್ಳಮಂ ಪಳ್ಳಂಗಳ್ ।
ತೊಱೆಯಂ ತೊಱೆಗಳ್ [2]ಬಾಂದೊಱೆ
ಯೆಱೆಯನನೊಲವಿಂದೆ ಕೂಡಲಳ್ಕುಱೆ[2] ಪಥಿಕರ್ ॥ ೨೨೩
(ಜಗನ್ನಾಥವಿಜಯಂ, ೪–೩೩.)

ಘನರಾವಂ ಪೊಣ್ಮೆ ಮಾನುಂ ಮೊಸಳೆಯುಮೊಡವಿಟ್ಟತ್ತೆನಲ್ ಮೇಗಣಿಂದಂ
ಬಿನ ಕಟ್ಟಂಬಿಟ್ಟವೋಲ್ ಸಂದಿಸಿಕೊಡಗೊಡಮೊಳ್ ಪೊಯ್ದ ಪೋಲಾಗೆ ಭೋರ್ಭೊರ್ಗೀ।
ರೆನುತುಂ ಸಂವರ್ತಮೆತ್ತಂ ಜಳಚಳಕುಳದೊಂದಂದದಿಂ ಗೋಕುಲಂ ಬ
ಲ್ಪೊನಲೊಳ್ ತೇಂಕಾಡುವನ್ನಂ ಕಱೆದುವು ಮಱೆಯಂ ನೂತಜೀಮೂತಜಾಲಂ ॥

ಶರದ್ವರ್ಣನಂ

ತೊಲಗದ ಮೋಡವೋಡಿದುದು ತಂದಲಗುಂದಲೆಯಾಯ್ತು ಮೇಘಮಂ
ಡಲವಳಱಿತ್ತು ಮಿಂಚುವೆಳಗುಂ ಬಱಿಮಾಯ್ತು ಶಿಖಂಡಿ ತಾಂಡವ ।
ಕ್ಕಲಸಿದುದಂದು ಕುಂದಲತೆ ಕುಂದಲೊಡರ್ಚಿದುವಂಚೆ ಚಂಚುವಿಂ
ನಲಿದು ಮೃಣಾಳಮಂ ಸವಿದುದಾಯ್ತು ಶರತ್ಪ್ರಥಮಪ್ರವೇಶದೊಳ್ ॥ ೨೨೫
(ಜಗನ್ನಾಥವಿಜಯಂ, ೪–೩೭.)

ಚಾದಗೆಯ ಸೊಕ್ಕು ತೀರ್ದುದು
ಕೇದಗೆಯಗೆಯೆತ್ತಿ ಪೋಯ್ತು ಗಿರಿಮಲ್ಲಿಗೆಯಾ ।
ಮೋದಂ [3]ತಳೆದುದು[3] ದರ್ಬಿಸಿ
ಪೋದುದು ನುಣ್ದನಿ [4]ನವಿಲ್ಗೆ[4] ಶರದಾಗಮದೊಳ್ ॥ ೨೨೬

ಮಱೆಯಿನ್ನೆತ್ತಣದೆಂಬಿನಂ ಬೆಳಗುಗುಂ ಬಾನೊರ್ಮೆ ಮತ್ತೊರ್ಮೆ ಪೆ
ರ್ಮಱೆ ಕೊಳ್ಗುಂ ರವಿ ಕೂ[5]ಡೆ ಪಣ್ತು ಮುಗಿಲಿಂ ಸೀಳ್ದಂದದಿಂ ಬಿಸಿಲ್ ।
ಮಱೆ ಕೊಳ್ಗುಂ ಗಿಳಿಸೋವ ಪಾಮರಿಯರಂ ಕೈಪಿಂಪಱೆ ನೀರವ್ರಜಂ
ಸುಟಿಗುಂ ಶಾದ್ವಳಮಾದ ಶಾಳಿವನದೊಳ್ ನೀರಾಜನಂ ಮಾಟ್ಪವೋಲ್ ॥ ೨೨೭

---

[1] ತಂದಿಕ್ಕಿ (ಅ). [2] ತಾಂಬಾಂದೊಱೆಗೊರೆಯೆನಲುರ್ಬೆಪ್ಪೊಕ್ಕರಱ್ಕುರೆ (ಅ).
[3] ತಳಿತುದು (ಖ.ಬ). [4] ನವೀನ (ಕ.ಖ.ಬ). [5] ಡಿ (ಕ).

ನಡೆದುದು ಬಟ್ಟೆ ಬಟ್ಟೆಯ ಕೆಸಱ್ ಸಱುವಿಱ್ದುದು ನಂದನಂ ನಯಂ
ಬಡೆದುದು ಪೂಗೊಳಂ ತಿಳಿದುವಭ್ರಪಥಂ ಬೆಳಗಿತ್ತು ಪಳ್ಳಮು ।
ರ್ಕುಡಿದುದು ಕೂಡೆ ಬೊಂಬೆ ನಸಿಯಾದುವು ಕೆಯ್ ಪಸುರ್ವೊಂದ ಪುಲ್ಗಳಂ
ಪಿಡಿದುವು ಶಾಲಿ[1]ಗಾ[1]ಪಿಯರ ಗಾವರಮುಬ್ಬರಮಾಯ್ತು ಸುತ್ತಲುಂ ॥ ೨೨೪

ನೀರದವಿಟಂಗೆ ವಿದ್ಯು
ನ್ನಾರಿಯ ವಿರಹಂ ಪೊಣರ್ಚೆ ಬಡವಾಗಿ ಕರಂ ।
ದೂರಿಸಿ ಬೆಳರ್ತ ತೆಱದಿಂ
ಶಾರದ ಜಳಧರದ ತುಱುಗಲೊಗೆದುವು ನಭದೊಳ್ ॥ ೨೨೯
(ಲೀಲಾವತಿ, ೫–೨೪.)

ಜೀವನಮುಳ್ಳಿನಮಿತ್ತ ಖಿ
ಳಾವನಿಗಂ ಕೀರ್ತಿಶೇಷಮಾಯ್ತೆ [2]ನಲಂದ[2] ।
ಬ್ಯಾವಳಿ ಬೆಳರ್ತು ಬಾನಂ
ತೀವಿದುವು ಪರೋಪಕಾರಿ ಕೆಟ್ಟೆಡೆಯುಂಟೇ ॥ ೨೩೦
(ಲೀಲಾವತಿ, ೫–೨೬.)

ತರದಿಂ ನಲಿನಲಿದಾಡುವ
ಸರಸದ ಮಕ್ಕಳವೊಲಂಚೆಗಳ್ ಮಾನಸದಿಂ ।
ಬರೆ ಮೆಱುದು ಶರದದವನಿಪ
ನರಮನೆಯಂಗಣಮಿದೆನಿಸಿ ಬೆಳಗಿತು ಗಗನಂ ॥ ೨೩೧

ಪಿಂದೆ ತಲೆ[3]ಗರೆ[3]ದ ಕದಿರ್ಗಳ್
ಸಂದಣಿಗೊಂಡರ್ಕಬಿಂಬದಿಂ ಪೊಱಪೊಣ್ಮಿ ।
ತ್ತೊಂದೊಂದನೊಱಿಸಿ ಕಿಡಿವಿಡು
ವಂದದೆ ಕಡುವಿಸಿಲ ಪೊಳಪುವಡೆದುದು ಕಾಯ್ವಂ ॥ ೨೩೨
(ಲೀಲಾವತಿ, ೫–೩೮.)

ಮುನ್ನುಂಗಿ ದಹನನಂ [4]ತಪ
ನನ್ನೆಲಕು[4]ಗುಬ್ಬಿಂತೆ ಬಿಸುಗದಿರ್ಗಳ್ ನೆಱೆ ಕಾ ।

---

[1] ಗೋ (ಕ.ಖ.ಗ.ಬ). [2] ನೆ ತುಂಗಾ (ಅ.ಕಾ). [3] ದೆಗೆ (ಅ). [4] ದಹನಂ ನುಗುಳ್ದು (ಖ.ಬ).

ಯ್ವನ್ನಂ ಸುಡುತಿರೆ ಪಥಿಕರ್
ಬೆನ್ನಂ ಕೊಂಡೋಡಿ ಮೆಳೆಯ ನೆಬಲಂ ಸಾರ್ದರ್ ॥ ೨೩೩
(ಲೀಲಾವತಿ, ೫–೪೦.)

ತಿಂಗಳ ಯೌವನ ವಿಭವಮ
ನಂಗನ ಸಿರಿಹುಟ್ಟಿದಮೃತವಾರಾಶಿ ಚಕೋ ।
ರಂಗಳ ಕಂಗಳ ಹಬ್ಬಂ
ಶೃಂಗಾರಂಬಡೆದ ಸೈಪು ಶರದದ ಜೊನ್ನಂ ॥ ೨೩೪

ಅರಗಿಳಿಯ ಹಿಂಡು ಬಂದುಗೆ
ಯರಲಂದದ ಚಂಚುವಿಂದೆ ಕಬುಮೆಯ ತೆನೆಯಂ ।
ಬರೆ[1]ತೆಗೆದು ಕರ್ಚಿ ನೆಗೆದುವು[1]
ಶರದಂ ಪುಗೆ ಪಾಱು ಪೋಪ ಸುರಚಾಪದವೊಲ್ ॥ ೨೩೫
(ಲೀಲಾವತಿ, ೫–೪೧.)

ಪೊಳೆವ ಬಿಸಿಲ್ಗೆ ಮೆಯ್ವೆಳಗು ಚಂದನಪಾಂಡುಪಯೋಧರಾಗ್ರದಿಂ
ಬಳೆದಿಟಿತರ್ಪ ಬೆಳ್ಸರಿಗೆ ಹಾರಮೆ ಸಾ[2]ಲ್ತ[2]ರೆ ಪೋಲ್ವೆಯಿಂ ಸಮು ।
ದ್ದಳಿತಸರೋಜಗಂಧಿ ಕಳಹಂಸಮನೋಹರಯಾನೆ ಸಸ್ಮಿತೋ
ತ್ಪಳಧವಳಾಕ್ಷಿಯೇಂ ಸುರಿದಳೋ ಶರದಂಗನೆ ಕಣ್ಗೆ ಶೋಭೆಯಂ ॥ ೨೩೬
(ಲೀಲಾವತಿ, ೫–೪೨.)

ಹೇಮಂತವರ್ಣನಂ

ಅರೆವಸುರಾಯ್ತು ಹುಲ್ಲೆಸೆಯೆ ನಿಂದುವು ಕಾಯ್ ಪೊಡೆ ಕೊಯ್ಯಲಾಯ್ತು ಬಂ
ಧುರತರ ಶಾಳಿ ನೀರಱಿಕೆ ತೊಟ್ಟನೆ ಮಾಣ್ದುದು ಚಂದನಕ್ಕೆ ಮೆ ।
ಯ್ಯರಸಿದುದಂಗರೇಖೆ ಹೊಱಿಹಕ್ಕಿಗಳೋವರಿವಕ್ಕವಾವಗಂ
ಶರದದ ಮಾತು ಪಿಂಗಿದುದು ಪೊಕ್ಕುದು ಮಾಗಿ ಮಹೀವಿಭಾಗದೊಳ್ ॥ ೨೩೭

ಅಣಿಯರಮಾಡಿ ಮೂಡಗಡಲೊಳ್ ತೆರೆಮಾಲೆಯನೆತ್ತಿ ದೇವವಾ
ರಣಕರಶೀಕರೋತ್ಕರಮನಾಂತು ಶಚೀರಮಣಾಭಿಷೇಕವಾಃ ।
ಕಣನಿಕುರುಂಬಮಂ ತಳೆದು ಬಂದೆಸಗಿತ್ತ ತಿಶೈತ್ಯಕಾರಣಂ
ಪ್ರಣಯವಿಮುಕ್ತವಲ್ಲಭವಿದಾರಣನಿಂದ್ರದಿಶಾಸವೀರಣಂ ॥ ೨೩೮
(ಜಗನ್ನಾಥವಿಜಯಂ, ೧೪–೪.)

---

[1] ಕರ್ಚಿ ಪಾಱುತಿರ್ದುವು (ಅ). [2] ರ್ತಿ (ಖ.ಬ).

ಗಗನಂ ದಿಗ್ವಳಯಂ ದಿನೇಶ[1]ವಳಯಂ[1] ಶೈಲಾಳಿ ತೋಯಾ[2]ಶ[2]ಯಂ
ನಗರಂ ನಂದನಮೆಂಬ ವಸ್ತುಗಳನಾರುಂ ಕಾಣದಂತಾಗಿ ತೊ ।
ಟ್ಟಗೆ ಕಣ್ ವಂಚಿಸಿ ನುಂಗಿ ತೋರ್ಪ ಚಪಲಂ ಹೇ ವಂತಮೆಂಬಿಂದ್ರಜಾ
ಲಗನಿರ್ದೂದಿದ ಧೂಮದಂತಸದಳಂ ಪರ್ಬಿತ್ತು ಮುಂಚೆತ್ತಲುಂ ॥ ೨೩೯

ಬಿಟ್ಟು ಸರೋಜಮಂ ಕುವಲಯಕ್ಕಡಿಯಿಟ್ಟುದು ತುಂಬಿ ಜಾತಿ ಕಂ
ಪಿಟ್ಟುದು ದಿಕ್ತಟಂಗಳನಶೇಷ ನದೀನದ ನಿರ್ಝರಾಂಬು ರೂ ।
ಪಿಟ್ಟುದು ಚಂದ್ರಕಾಂತಹಿಮವಾರಿಗೆ [3]ಚಿಂತಿ[3]ಸಿ ಜಕ್ಕವಕ್ಕಿ ನಾ
ಲಿಟ್ಟುದು ಕಣ್ಣ ನೀರನೆನೆ ಮಾಗಿ ಬರಲ್ ಮೊದಲಿಟ್ಟುದೆಂಬಿನಂ ॥ ೨೪೦

(ಜಗನ್ನಾಥವಿಜಯಂ, ೧೪-೬.)

ಮುಗಿಯೆ ಕರದ ಕಂಜಂ ವಾಜಿಗಳ್ ಸುರ್ಕೆ ಸೂತಂ
ಸುಗಿದು ಪೆಱವನಾದಂತ್ಯೆಕಲಿಂ [4]ಹೊನ್ನ[4]ರಂಗಳ್ ।
[5][ತ][5]ಗೆಯೆ ರಥದ ಕೀಲಂ ಕಿಱ್ತು ಪೊತ್ತಿಕ್ಕೆ ಕಣ್ಣೊಳ್
ಪುಗೆ ಪೊಗೆ ರವಿಸಾರ್ತಂದೂದುವಂ ಪೋಪ ಕಿಚ್ಚಂ ॥ ೨೪೧

(ಲೀಲಾವತಿ, ೯-೬.)

ಮಾಸರಮೆನೆ ಪಾರದದಿಂ
ಪೂಸಿದವೊಲ್ ಪೊನ್ನ ಮುಕುರಮಂ ಹಿಮಲಿಪ್ತಂ ।
ನೇಸಱಬಿಂಬಂ ತಿಂಗಳ
ಕೂಸಿನವೊಲ್ ಮೂಡುತಿರ್ಪುದಂದಿನ ದಿನದೊಳ್ ॥ ೨೪೨

(ಲೀಲಾವತಿ, ೯-೮.)

ಹಿಮಮನಲರ್ಚಿ ತೀಡೆ ಪವನಂ ವನಮಾಲೆಗೆ ಪೋಯ್ತು ವಿಭ್ರಮಂ
ಭ್ರಮ[6]ರನಿಷ್ಠೇ[6]ವ್ಯಮಾಯ್ತು ಕುಮುದಂ ಮುದಮಂ ಪಡೆದತ್ತು ಪಣ್ತ ಕ ।
ರ್ಬಮ್ಯತರಸಾವಿಳಂ ವಿಳಯಮೆ[7]ಯ್ದಿದುದಬ್ಜ[7]ವನಾಳಿ ನಾಳಿಕೇ
ರಮನವಳಂಬಿಸಿರ್ದುವು ಫಲಂ ರಸಪೂರಿತಮಾಗಿ ಮಾಗಿಯೊಳ್ ॥ ೨೪೩

(ಜಗನ್ನಾಥವಿಜಯಂ, ೧೪-೫.)

ಗಿರಿತಟದೊತ್ತುಗೊಂಡು ಮೃಗಸಂಕುಲಮಿರ್ದುವು ಜೀರ್ಣಕೋಟರಾ
ವರಿತಟದೊತ್ತುಗೊಂಡು ಖಗಸಂಕುಲಮಿರ್ದುದು ಮಾಗಿಯೊಳ್ ಸರೋ ।
ವರತಟದೊತ್ತುಗೊಂಡು ಪೊಣರ್ವಕ್ಕಿಗಳಿರ್ದುವು ಕಾಮಿನೀಪಯೋ
ಧರತಟದೊತ್ತುಗೊಂಡು ವಿಟನೀಟಕರಿರ್ದುದು ಮುಂಬಗಲ್ವರಂ ॥ ೨೪೪

---

[1] ಶಶಿಯಂ (ಖ.ಬ). [2] ಸಿ (ಕ). [3] ಮಿಂಚಿ (ಖ ಬ). [4] ಪೆರ್ನ (ಕ.ಖ.ಬ),
[5] ತೆ (ಅ.ಕ.ಖ.ಬ). [6] ರಿಗೆಸೇ (ಖ.ಬ). [7] ಯ್ದುವುದುಂಜ (ಖ.ಬ).

ತಳರ್ದು ಕುಳಾಯದಿಂ ಬಿದಿರ್ದೆಱಂಕೆಯ ನೀರ್ವನಿಯಂ [1]ತೆರಳ್ದ[1] ತು
ಪ್ಪಲನೊ[2]ನೆದಂಟಿ[2] ಚಂಚುಪುಟದಿಂ ಬಿಸಿಲತ್ತಿ ದಿರಾಗಿ ನಿಂದು ಕ ।
ಣ್ಗಳನರೆಮುಚ್ಚಿ [3]ತೋದ[3] ಗಱಿಯಂ ನಸು ಜೋಲಿಸಿ ಪಕ್ಕಿಗಳ್ ಮರಂ
ಗಳ ತುದಿಗೋಡಮೇಲೆ ದನಿಗೆಯ್ಯುತಮಿರ್ದುವು ಮುಂಬಗಲ್ವ[4]ರಂ[4] ॥ ೨೪೫

(ಜಗನ್ನಾಥವಿಜಯಂ, ೧೪–೧೦.)

ಖಂಡಿ[5]ಸಿ[5] ಬಿನಕಳಿಕೆಗಳಂ
ತುಂಡಂ ಕುತ್ತಿಱಿಯೆ [6]ಬರಿದು[6] ಬಳ್ಕಿಸಿ ತಲೆಯಂ ।
ಕೊಂಡೋಡಿ [7]ಕೊಡಹಿ[7]ಕೊಂಡುವು
ಮಂಡಳಿಸಿದ ಪಕ್ಕ[8]ದಿಂದೆ[8] ಕಳಹಂಸಂಗಳ್ ॥ ೨೪೬

(ಲೀಲಾವತಿ, ೯–೧೫.)

ತುದಿಗೋಡಿಂಗೇಱಿ ಕೊಂಬಂ ಪಿಡಿದು ಜಡಿದು ಪುರ್ವಿಕ್ಕಿಯುಃಪೆಂದು ಮುನ್ನೇ
ಱಿದ ಕೊಂಬಂ ನೋಡಿ ಮೆಯ್ಯಂ ಸುಗಿದುಗಿದುರಮಂ ಪಿಕ್ಕ ಪೇಸ್ವಿಂಡನಾಯ್ದು ।
ರ್ಬಿದ ಮೆಯ್ಯಂ ಕಯ್ಯಿನೆತ್ತಂ ತುಱಿಸಿ ಮಱಿಗಳಂ ಸಾರ್ಚಿ ಮುಂದಣ್ಗೆ ಕುಳ್ಳಿ
ರ್ದುದು ಕೋಡಂ ಕೋಡಿ ಹೇಮಂತದೊಳೆಳವಿಸಿಲಂ ಕಾಯಲೆಂದೊಂದು ಧೂರ್ತಂ

ಪಲ್ಗರಿದು ಪುರ್ವನುರ್ವಿ ಬೆ
ರಲ್ಗೊನೆಯಿಂ ತುಱಿಸಿ ಬರಿಯ ನೀರ್ದುಪ್ಪಟಿ ಬಂ ।
ಬಲ್ಗಳನುಗುರಿಂ ಪಿಕ್ಕಿ ಬಿ
ಸಿಲ್ಗಾದುದದೊಂದು ಮರದ ಕೋಡೊಳ್ ಕೋಡಂ ॥ ೨೪೭

(ಜಗನ್ನಾಥವಿಜಯಂ, ೧೪–೧೧.)

ಮಱಿಗಳನಿಱುಂಕಿ ಮೋಹದಿ
ನೆಱಿಂಕೆಯಿಂ ಗೂಡುಗೊಂಡು ಗೂಡಿನೊಳ್[9]ರುಳ್ದೇ[9] ।
[10]ನೊ[10]ಱಿಗಿರ್ದುದೊ ಕೂಗದೆ ಕಣ್
ತೆಱೆಯದೆ ಕುಕ್ಕುಟ ಕುಟುಂಬಿನೀ ನಿಕುರುಂಬಂ ॥ ೨೪೯

(ಜಗನ್ನಾಥವಿಜಯಂ, ೧೪–೧೩.)

ಪೋಱಿಮಟ್ಟು ತೊಱೆಯ ನಡುವಣ
ಕುಱುವಂಗಳ [11]ತಡಿಯೊ[11]ಳಿರ್ದು ಕಾಯ್ದುವು ಬಿಸಿಲಂ ।

---

[1] ತಳರ್ದು (ಖ). [2] ನೆದುಂದು (ಖ.ಬ). [3] ಕೋಡ (ಕ.ಖ.ಬ). [4] ರಲ್ (ಅ). [5] ನೆ (ಅ). [6] ಬಿದಿರ್ದು (ಅ). [7] ತೊಡೆದು (ಅ). [8] ದಲ್ಲಿ (ಅ). [9] ರುಳುಂ (ಕ.ಖ.ಬ), ರುದ್ದೇಂ (ಅ). [10] ಪೊ (ಕ.ಖ.ಬ). [11] ಕೆಲಧೊ (ಅ).

ಮಱುಗಳ್ ಪಕ್ಕಂ [1]ಬೆಂಬಿಡ
ದೊಱಗಿರೆ[1] ಕುಂಭೀರ ಕಮಠ ಕರ್ಕಟಕಂಗಳ್ ॥ ೨೫೦
(ಜಗನ್ನಾಥವಿಜಯಂ, ೧೪–೧೨.)

ನಂದುವ ಪುಲ್ಲ ಕಿಚ್ಚಿನೊಳೆ ಕಪ್ಪಡಮಂ [2]ಪಱು[2]ದಿಕ್ಕಿ ಪಾಂಥುನುಃ
ಪೆಂದಿರದೂದಿ ಪೊಣ್ಮೆ ಪೊಗೆ ಕಣ್ಣೊಳಗಂ ಪುಗೆ ಬಾಷ್ಪ[3]ವಾರಿ[3] ಬೀ ।
ಟ್ಟಂದು ತದಗ್ನಿಯಂ ನದಿಪಿದತ್ತ ಕಟಾತನ ಬೆನ್ನ ಕಪ್ಪಡಂ
ಬೆಂದುದು ಬೆಂದು[4]ವೀಟ್ಟುದು[4] ಪಿಮಾನಳ[5]ನಿಂತುಟು ಪಾಪದುಜ್ಜುಗಂ[5] ॥ ೨೫೧
(ಲೀಲಾವತಿ, ೯–೧೯.)

ಪೊಸ[6]ಗಿಚ್ಚಂ ಪುಲ್ಲೊಳಿ[6]ಟ್ಟೂದಿದೊಡುರಿದು[7]ರಿ ಕೂರ್ಚಾ[7]ಗ್ರಮಂ ಪತ್ತೆ
[ಕಯ್ಯಿಂ
ಪೊಸೆದುಂ ವಸ್ತ್ರಾಂತದಿಂ ಮೋದಿಯುಮುಗುಟ್ಪಿಱಿಯಿಂ ಮೊಕ್ಕಳಂ ನಾಂದಿ
[ಯುಂ ನಂ।
ದಿಸಲೆಂತುಂ ಪಾಂಥನಂದಾಱಿದೆ [8]ನ[8]ಡುಮಡುವಂ ಪೊಕ್ಕು ಬಿರ್ದ್ಯೆಕಿಲಿಂ ಕಂ
ಪಿಸುತಿರ್ದಂ ಪುಲ್ಲ ಕಿರ್ಚುಂ ಪೊಲೆಯನ ಕೆಳೆಯುಂ ಮಾಡದಾವಂಗೆ ಕೇಡಂ ॥
(ಲೀಲಾವತಿ, ೯–೨೦.)

ಗಂಗೆಯ ಸೂಡನಂದುಟಿದು ಸೂಡಿದ ಚಂದ್ರಕಲಾವತಂಸಮಂ
ಪಿಂಗಿಸಿ ಸುಟ್ಟು ಮನ್ಮಥನೊಳಾದ ವಿಭೂತಿಯನೊಟ್ಟಿಕೊಂಡು ವಾ ।
ಮಾಂಗದೊಳಿಟ್ಟು ಪಾರ್ವತಿಯನೀಶ್ವರನಗ್ಗಳಗಣ್ಣ ಬೆಂಕಿಯಿಂ
ಭಂಗಿಸುವಂ ಕುಬೇರಗಿರಿಗಹ್ವರದೊಳ್ ಶಿಶಿರಾತಿರೇಕಮಂ ॥ ೨೫೩

ಕರಿಣೀಪೇಚಕಮಂ ತುಡುಂಕದೆ ವನೇಭಂ ಕಾಮುಕರ್ ಕಾಮಿನೀ
ಪರಿರಂಭಸ್ಪೃಹರಾಸೆಗೆಯ್ಯರೆ ರತವ್ಯಾಪಾರಮಂ ಪುಲ್ಲೆಯಂ ।
ಹರಿಣಂಗಳ್ ನಡೆನೋಡ[9]ವಿಂತು ತುಹಿನವ್ಯಾಘಾತದಿಂ[9] ಬಿಲ್ಲೆ ಕೈ
ದರಲೇನಾಱಿನೊ ಪೂವಿನಂಬು ತನಗಿಲ್ಲಾಗಿರ್ದನೋ ಮನ್ಮಥಂ ॥ ೨೫೪
(ಲೀಲಾವತಿ, ೯–೪.)

ತಳೆದ ಸುವರ್ಣಭೂಷಣದ [10]ಪೂಸಿದ ಕುಂಕುಮದಿ[10]ಟ್ಟ ರೋಚನಾ
ತಿಳಕದ ರಾಗದಿಂ ಮದನರಾಗಮೆ ಮೂರ್ತಿಯನಾಂತವೊಲ್ ಮನಂ ।

---

[1] ಬಿಡದೆಡೆಗಿಱಿದಿರೆ (ಅ). [2] ಪಿರಿ (ಅ). [3] ಬಿಂದು (ಅ). [4] ದಾಗಳೆ (ಅ). [5] ನಂತುಟುಪಾಂಥರುಬ್ಬಸಂ (ಅ). [6] ಪುಲ್ಲೊಳ್ ಕಿಚ್ಚನಿ (ಅ) [7] ಕಚಾಗ್ರಾ (ಅ), ವಕ್ಷೋಜಾ (ಗ.ಪ). [8] ಕ (ಖ.ಬ). [9] ಲೊಲ್ಲವೆ ಹಿಮವ್ಯಾಘಾರದಿಂ (ಅ). [10] ಕುಂ ಕುಮಪಂಕದೊಳಿ (ಖ.ಬ).

ಗೊಳಿಪೆಳವೆಂಡಿರಂಗಣದ ಹೇಮವಿತರ್ದಿಯೊಳಿರ್ದು ಕಾದರಂ
ದೆಳವಿಸಿಲಂ ಮನಂಬಯಸಿ ಕಾಯೆ ವಿಟಪ್ರಕರಕ್ಕೆ ಮನ್ಮಥಂ ॥ ೨೫೫
(ಜಗನ್ನಾಥವಿಜಯಂ, ೧೪–೯).

ಪಿರಿದುಂ ಕಾರ್ಯಾತುರಂ ಮಾಣದೆ ಕರೆದೊಡವಿಾ ಬಂದೆನೀ ಬಂದೆನೆಂದೊಂ
ದರೆಜಾವಂ ಕಾಮಿನೀಕರ್ಕಶನಿಬಿಡಕುಚಾಲಿಂಗನಾಲಿಂಗಿತಂ ರಕ್ತವಸ್ತ್ರಾ ।
ಸ್ತರಣಂ ಕಾಶ್ಮೀರರಾಗಾವಿಳನತಿಮೃದುಶಯ್ಯಾತಳಂ ನಕ್ತಭೀತಾ
ತುರಚಿತ್ತಂ ಕಾಂತನಿರ್ದಂ ಸಹಚರಗಮನೋದ್ಯೋಗ[1]ಭಂಗಂ[1] ಭುಜಂಗಂ ॥

ಅಡಿಯಡಿಯೊಳ್ ತೊಡೆ ತೊಡೆಯೊಳ್
ನಡು ನಡುವಿನೊಳುರಮುರೋಜದೊಳ್ ತೋಳ್ ತೋಳೊಳ್ ।
ತೊಡರ್ದಿರೆ ಬಾಯ್ವಾಯೊಳ್ ಮನ
ದೊಡಕಿನೊಳಿರೆ ಮಾಗಿಗೀಗಿಯೇಗೆಯ್ದುಪುದೋ ॥ ೨೫೭

ಒಕ್ಕುಡಿತೆಗಂಗಳಬಲೆಯ
ನುಕ್ಕುಂಗುರುಳವಳ ಪಲ್ಲವಾಧರದವಳಂ ।
ಕಕ್ಕಸಕುಚದವಳಂ ತಾಂ
ತಕ್ಕೈಸಲು ಮಾಗಿಗೀಗಿಯೇಗೆಯ್ದುಪುದೋ ॥ ೨೫೮

ನೆಲವಾಸು ತಂಬುಲಂ ಪೆ
ರ್ಮೊಲೆಗಳ ನಱುಮಿಂಡಿ ಸುಪ್ಪತಿಗೆ ಧವಳಾರಂ ।
ಕೆಲದ ಸಿಗಳಿಗೆಯಿನಿಂಬಿಂ
ಸಲೆ ಸವಿಪೊಡೆ ಮಾಗಿಗೀಗಿಯೇಗೆಯ್ದುಪುದೋ ॥ ೨೫೯

ಗಳರವಮಾಗಿ ಮುದ್ದುಮೊಗಮಾಗಿ ದರಸ್ಮಿತನೇತ್ರಮಾಗಿ ಕೋ
ಮಳ ಕಚಮಾಗಿ ಪೀನಕುಚಮಾಗಿ ಸಮುಚ್ಚನಿತಂಬಮಾಗಿ ಸಂ।
ಚಳತನುಮಧ್ಯಮಾಗಿ ತನುಗಂಗಜರಾಗಮುಮಾಗಿ ನೀಱುಯಂ
ತೊಳಪುಗುವಂತೆ ಮಾಗಿ ಬರೆ [2]ಬಾನಿಲೆ[2]ಯೆಂಬರೆ ಭೋಗಭಾಗಿಗಳ್ ॥ ೨೬೦

ಅಂಬುಜನೇತ್ರೆಯರ್ಕಳ ಘನಸ್ತನದೊತ್ತು ನಿತಂಬದೊತ್ತು ನು
ಣ್ಪಿಂಬಳವಟ್ಟ ಪೆರ್ದೊಡೆಗಳೊತ್ತು ಭುಜಂಗಳ ತಣ್ಪಿನೊತ್ತು ಬಿಂ ।
ಕಂಬಡೆದಿರ್ದ ತೆಳ್ಗದಪಿನೊತ್ತು ವಿಟರ್ ನೆಱಿ ಕಾವುದಲ್ಲದೀ
ಕಂಬಳಿ ದಟ್ಟಿ ಬೂರವಡವೆಂಬಿವು ಕಾವುವೆ ಶೀತಕಾಲಮಂ ॥ ೨೬೧

---

[1] ಕುಂಭಾ (ಖ.ಬ). [2] ಬಾಗಿಲ (ಖ.ಬ). ಮಾಗಿಲ (ಗ.ಘ).

ನೆನೆಯಲೊಡನೆತ್ತಿ ಮನದೊಳ್
[1]ತನುಗಿಚ್ಚಿಂ[1] ಹಿಮವನೋಡಿಸುವ ನವಯುವತೀ ।
ಸ್ತನಭರಮಂ ತೆಗೆದಪ್ಪಿದ
ಮನುಜರಿಗೇನರಿವುದರಿದೆ ಮಾಗಿಯ ಮೂಗಂ ॥ ೨೬೨

ಇನಿಸುಗುರ್ವೆಚ್ಚನಪ್ಪುಣಿಸು ಕುಂಕುಮದ[2]ಣ್ಪು[2] ಕದಂಬದಂಬುಲಂ
ಕನಕವಿಭೂಷಣಾಳಿ ಪೊಸ ಜಾದಿಯ ಪೂ ಧವಳಾರವಟ್ಟ[3]ಮಿಂ[3] ।
ಜನಿಯಿ[4]ಸಲಂಚೆ[4]ವಾಸುಗಳೊಳೋಪಳ ಪೆರ್ಮೊಲೆವೆಂಕೆಯಿಂದದೇಂ
ತನತನಗಿಕ್ಕಿ ಮೆಟ್ಟಿದುದೊ ಭೋಗಿಜನಂ ಶಿಶಿರಾತಿರೇಕಮಂ ॥ ೨೬೩

(ಜಗನ್ನಾಥವಿಜಯಂ, ೧೪-೧೯.)

ಕೃತಶೀಘ್ರಸ್ನಾನರಾವರ್ತಿತವಿಕೃತಕರಾಕೃಷ್ಟವಸ್ತ್ರಾಂತರಾವಿ
ಸ್ಮಿತಗರ್ಭರ್ ಗದ್ಗ[5]ದೋಚ್ಚಾರ್[5]ಿತ ಜಪಮುಪಸಂಜಾತರೋಮಾಂಚಮಾಕುಂ ।
ಚಿತಗಾತ್ರರ್ ವಹ್ನಿಸಂದೀಪನಪಟುವಟುದತ್ತೇಕ್ಷಣರ್ ನೀರತೀರ
ಸ್ಥಿತರಿರ್ದತ್ತಂದು ಮೈಭಾತಿಕವಿಧಿವಿಹಿತಾಪೋಘಮಾಘಂ ದ್ವಿಜೌಘಂ ॥ ೨೬೪

(ಲೀಲಾವತಿ, ೯–೨೫.)

ಬಿಸಿಬಿಸಿಯೋಗರಂ ಕೆಲದ ಸೋಡಗೆತೆಳ್ಪೊಳುದುಪ್ಪಮುಪ್ಪುಗಾಯ್
ಮೊಸರಿನಿದಪ್ಪ ಮಜ್ಜಿಗೆ ನಿವಾತದ ಶಯ್ಯೆ ಕದಂಬದಂಬುಲಂ ।
ರಸಿಕರ ಗೋಷ್ಠಿ ಒಟ್ಟಮೊಲೆಯೋಪಳ ತಳ್ತಮರ್ದಪ್ಪು ತಾವೆ ಬ
ಗ್ಗಿಸದೆ ಹಿಮಾಗಮೋಕ್ತಿಕ [6]ಜಡೋ[6]ದಯಮಂ ಸುಕೃತಾತ್ಮರಪ್ಪರಾ ॥ ೨೬೫

ರವಿರುಚಿಯಂ ಹಿಮಾಂಶುರುಚಿಯೆಂದು ಚಕೋರಚಯಂಗಳೀಂಟುತಿ
ರ್ಪುವು ಬಡಬಾಗ್ನಿಯಂ ಪವಳಮೆಂದಿರದಂಬುಚರಂಗಳೊಂದಿ ನಿ ।
ಲ್ಪುವು ಹರಭಾಳಲೋಚನಮನಂಗಜನೀಕ್ಷಿಸಿ ರಕ್ತಚಂದನ
ದ್ರವದ ಲಲಾಮಮೆಂದಿ[7]ಟಿಪನೇ[7]ವೊಗಪ್ಪೆಂ ಶಿಶಿರಪ್ರಭಾವಮಂ ॥ ೨೬೬

(ಜಗನ್ನಾಥವಿಜಯಂ, ೧೪–೧೮.)

ಎಸೆವಿಂದ್ರಾಶಾನವಿಮಾರಂ ತೊಲಗಿಸೆ ಕೆಲಸಾರ್ದಂತಿರತ್ಯಂತ ಶೀತ
ಪ್ರಸರಕ್ಕುಳ್ಳಿಕ್ಕಿ ಮೇಣಗ್ನಿಯ ದೆಸೆಗೆಳಸಿರ್ದಂತಿರಾಶ್ಚರ್ಯಮಂ ಪು ।

---

[1] ತನಿಗಿಚ್ಚಿಂ (ಖ.ಬ), ಘನಗಿಚ್ಚಿಂ (ಗ.ಘ). [2] ಣ್ಕೆ (ಅ). [3] ಱಿಂ (ಕ.ಖ. ಗ.ಘ.ಬ). [4] ಸೆಹಂಸೆ (ಕ.ಖ.ಬ). [5] ದಾಚೋದಿ (ಖ.ಬ). [6] ಚರೋ (ಗ.ಘ). [7] ಹನದೇ (ಖ.ಬ).

ಟ್ಟಿಸುತುಂ ತೆಂಕಣ್ಗೆ ಸಾರ್ದರ್ಕ್ಕನ ಬಿಸುಗದಿರ್ಗಳ್ ಮಾಗಿಯೊಳ್ ತಣ್ವನಾ[1]ಳ[1]ಲ್
ಬಿಸಿಲಂ ಬೆಳ್ದಿಂಗಳೆಂದೀಕ್ಷಿಸುವುವು ತರಳೋತ್ತಾ[2]ನ[2]ತಾರಂ ಚಕೋರಂ ॥ ೨೬೭

(ಜಗನ್ನಾಥವಿಜಯಂ, ೧೪–೧೩.)

ಓರಂತೆ ಮೆಚ್ಚಿದಂ ಕೃತಿ
ಸಾರಂ ಋತುವರ್ಣನಕ್ಕೆ ಹೊಯ್ಸಳವಂಶೋ ।
ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೨೬೮

ಇದು ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧನಾರೋದ್ಧಾರಮುಮ
ಷ್ಟಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತ್ಯ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ಋತುವರ್ಣನಂ ದಶಮಾಶ್ವಾಸಂ ಸಂಪೂರ್ಣಂ.

[1] ಳ್ದ (ಅ). [2] ರ (ಖ.ಬ).

೧

ವನವಿಹಾರವರ್ಣನಂ

ವನಪಾಲರ್ ಪೇೞ್ದ ಭೂಪರ್ ತರುಣಿಯರೊಡನಾನಂದ[1]ದಿಂದೆ[1]ಯ್ದೆ ಪೋಪಾ
ಬನದೊಳ್ ಪೂಗೊಯ್ವ ಪೂವಿಂ ತು[2]ಡು[2]ಗೆಯನೊಲವಿಂ ಮಾಟ್ಪ ತೂಗುಯ್ಯ
[ಲಂ ಮಾ ।
ವಿನೊಳಾಡುತ್ತಿರ್ಪ ಬೆಟ್ಟೇಱುವ ಮರನಡವರ್ವಾ ಕಾವಣಕ್ಕೊಪ್ಪ ತಂತ
ಮ್ಮಿನಿಯರ್ [3]ಸಯ್ತುಂ[3]ಬುದಂ ವರ್ಣಿಸುಗೆ ಕವಿ ವನಕ್ರೀಡೆಯೊಳ್ ನಾಡೆ ರಮ್ಯಂ॥

ಅದಿರ್ಮುತ್ತೆಯ ನನೆಯಿಂ ಚೂ
ತದ ಕಳಿಕೆಯಿನೆಸೆವ ಕರ್ಣಿಕಾರದ ಪೂವಿಂ ।
ಕದಳಿಯ ಸುಟಿಯಿಂದೋಲಗಿ
ಸಿದನೋಲಗದೊಳ್ ನೃಪಾಲನಂ ವನಪಾಳಂ ॥ ೨

ಕುರವಕದಂಕುರಂ ತಿಲಕದುಜ್ಜ್ವಳಪುಷ್ಪವಶೋಕದೊಳ್ದಳಿರ್
ಮರುಗದ ನುಣ್ಗೊನರ್ ದವನದೊಳ್ಗುಡಿ ಮಾವಿನ ಕೆಂದಳಿರ್ ನವಾಂ ।
ಬುರುಹದ ಮೊಗ್ಗೆ ಸಂಪಗೆಯಲರ್ ಸುರಹೊನ್ನೆಯ ಪೂಗಳೆಂಬಿವಂ
ಮುರರಿಪುಗಿತ್ತು ಮೆಚ್ಚುವಡೆದುತ್ಸವದಿಂ ನುಡಿದಂ ಪ್ರಿಯೋಕ್ತಿಯಂ ॥ ೩
(ಜಗನ್ನಾಥವಿಜಯಂ, ೧೪–೪೪.)

ಎಸಗಿದುದೀಗಳೀಗಳಿನಿಸೊಯ್ಯನೆ ತೆಂಕಣಗಾಳಿ ಕೋರಕ
ಪ್ರಸರದೊಳೀಗಳೀಗಳೆಸೆದಪ್ಪುದು ಚೂತಮಹೀಜಮೆಯ್ದೆ ರಾ ।
ಗಿಸೆ ದೆಸೆಗೀಗಳೀಗಳುಲಿದಪ್ಪುದು ಕೋಗಿಲೆ ಕಂತು ಬಿಲ್ಲನೇ
ಱಿಸಿದಪನೀಗಳೀಗ[4]ಳಿದು[4] ನುಗ್ಗಿಯದೊಂದು ಪೊಡ[5]ರ್ಪಿದಾಗದೇ[5] ॥ ೪
(ಕಾವ್ಯಾವಲೋಕನಂ, ೩೭೬.)

ಪಗಲೆಲ್ಲಂ ವನಕೇಳಿಯಿಂದಮಿರುಳೆಲ್ಲಂ ಚಂದ್ರಿಕಾಶ್ರೀವಿಳಾ
ಸಗತಾಂದೋಳವಿನೋದದಿಂ ದವತಿ .... ದರ್ಪಕಂಗಕ್ಕೆ ಕಂ ।
ತುಗೆ ಮಾಱಾಂತೊಡೆ ಭಾಳನೇತ್ರನುರಿಗಣ್ಣಂ ಕಾಮಿನೀಕಾಂತಿವಾ
ರಿಗಳಿಂ ನಂದಿಸಲೆಂದು ಬಂದುದು ಬಸಂತಂ ಸಂತತೋತ್ಸಾಹದಿಂ ॥ ೫

[1] ನಕ್ಕೆ (ಗ.ಘ). [2] ಡಿ (ಖ.ಬ.ಗ). [3] ತ್ಯೆತುಂ (ಗ.ಘ). [4] ಳೆಲೆ (ಅ).
[5] ರ್ಪುಗಾಣ್ಬುದಂ (ಕ.ಖ.ಗ.ಘ.ಬ).

ಕೋಗಿಲೆಗಾಯ್ತು ಮಾವಿನೊಳುದೊಂಗಲಿನಿಂ ದನಿ ತುಂಬಿಗಾಯ್ತು ಮೇ
ಲಾಗಿರೆ ಬಂದ ಮಲ್ಲಿಗೆಯ ಸೌರಭದಿಂ ದನಿ ದೇವನಾಲೆ ತಾಂ ।
ಕೋಗಿಲೆ ಬಂದು ಬಿನ್ನವಿಸಲೆದ್ದುದು ಮಾವು ತಳಿರ್ತ ಭಂಗಿಯಂ
ರಾಗಿಪ ತುಂಬಿ ಬಿನ್ನವಿಸವೇಳ್ಪುದು ಮಲ್ಲಿಗೆ ಪೂತ ಭಂಗಿಯಂ ॥ ೬

ಮಾವಿನ ಬಂದ ಮಲ್ಲಿಗೆಯ ಬಾಲತಮಾಳಕುಜಾತಷಂಡಮಂ
ತೀವಿ ತಗುಳ್ದು ನುತ್ತಿದಡಿರ್ಮುತ್ತೆ ಕವುಂಗಿನ ನಾಲ ಪಕ್ಕದೊಳ್ ।
ನಾವುಮನಾಳ್ದ ಸಂಪಗೆ ಮನಕ್ಕೆ ಮನೋಹರಮೆಂಬ ಮಾತೆ ಕೇಳ್
ದೇವರ ಪಾದದಾಣೆ ಬನದೀಸುಳ ಮೈಸಿರಿ ಪೇಟಲಗ್ಗಳಂ ॥ ೭

ಪಿರಿದುಮನಂಗನಾ[1]ದರಿಸಿ[1] ತಮ್ಮನೆ [2]ನೂ[2]ರ್ಗಣೆಮಾ[3]ಡಿ ಪೊಂಗುವಂ
ತಿರೆ ಕಡುನಲ್ಲರಂ ಬಿಗಿಯೆ[3] ತಾಗಿ ಕರಂ ಬಿರಿವಂತೆ [4]ಬೇಗದಿಂ[4] ।
ಬಿರಯಿಯ ಚಿತ್ತಮಂ [5]ತಗುಳ್ದು[5] ನುಂಗಲೆ ಬಾಯ್ದೆಱವಂದದಿಂದದೇಂ
ಬಿರಿದುವೊ ತೋರಮಲ್ಲಿಗೆಗಳುಬ್ಬರವಾಗಿ ಬಸಂತಮಾಸದೊಳ್ ॥ ೮

(ಲೀಲಾವತಿ, ೯-೧೦೪.)

ಮಗಮಗಿಸಲ್ಕೆ ಮಂದಯಿಸಿ ದಿಕ್ತಟಮಂ ಬಟಸಲ್ಕೆ ಪೀರ್ವ ತುಂ
ಬಿಗೆ ತಣಿಪಲ್ಕೆ ನಮ್ಮ ಜಸಮಂ ಬೆಳಗಲ್ಕಿದೆ ಸಾಲ್ಗುಮೆಂದು ತ ।
ಳ್ತಗಲದಲಂಪಿನಿಂ ಮಧುಮನೋಭವರಿರ್ವರುಮಟ್ಟಿವಟ್ಟು ಮ
ಲ್ಲಿಗೆಗೆ ಬಸಂತದೊಳ್ ಬಯಸಿ ಕಟ್ಟಿದರೊಲ್ದ ಧಿರಾಜಪಟ್ಟಮಂ ॥ ೯

(ಆದಿಪುರಾಣಂ, ೧೧-೧೦೭.)

ಎಕ್ಕಲದುಂಬಿಯಿಂ ಜವಳಿದುಂಬಿಯಿನಟ್ಟುವ ಮಾಲೆದುಂಬಿಯಿಂ
ದಿಕ್ಕುವ ಕುಂಭದಂತೆಸೆವ ಗೊಂದಣದುಂಬಿಯಿನಾವಮೆಯ್ಯೊಳಂ ।
ಮೊಕ್ಕಳಮೆಂಬಿನಂ ಕವಿವ ಗಾವರದುಂಬಿಯಿನಾದ ಗಾವರಂ
ತೆಕ್ಕನೆ ತೀವಿ ಕೂಡೆ ಬಗೆಗೊಂಡುದು ಕೂಡೆ ಬನಂ ಬಸಂತದೊಳ್ ॥ ೧೦

ಭುವನದೊಳೆಮ್ಮ ಮುಟ್ಟದಲರಾವುವೆಱಂಕೆಯ ಗಾಳಿ ಮುಟ್ಟೆ ಕಂ
ದುವುವೆನಸೊರ್ಮೆ ಪೀರಲೊಡಮಾಗಳೆ ಸೋರ್ವುವು ಕಂಪು ಸೋಂಕೆ ಕಂ ।
ದವು ದಳಮೆಯ್ದೆ ಪೀರೆ ತವದುಣ್ಮುವ ಸೌರಭಮೆಂದು ಪೀರ್ದುಪೀ
ರ್ದವಚಱಿದೇಂ ತೆಱಂದಿರಿದು ಪಾಯ್ದುವೊ ಕೇದಗೆಯೊಳ್ ಮದಾಳಿಗಳ್ ॥ ೧೧

(ಆದಿಪುರಾಣಂ, ೧೧-೧೨೦.)

---

[1] ಮಸಿರಿ (ಅ). [2] ಕೂ (ಅ). [3] ಡೆ ನಲ್ಲರಂ ಬಿರಿಯಿಗಳಂ ಮನಂಬಿರಿಯೆ (ಅ).
[4] ಥೇಷ್ಟದಿಂ (ಖ.ಬ). [5] ಬಿರಿದು (ಅ).

ಪಡೆದೊಡೆ ಕಂಪಂ ಬಣ್ಣಂ
ಬಡೆಯವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ ।
ಪಡೆಯವುಚಿದಲರ್ಗಳಿರಡುಮ
ನೊಡೆವೆಳೆದೀ ಚಂಪಕಕ್ಕೆ ಪೂಗಳ್ ದೊರೆಯೇ ॥ ೧೨

(ಆದಿಪುರಾಣಂ, ೧೧–೧೧೮.)

ಪೊಂಬೆಸದಿಂದಮೆಯ್ದೆ ಸಮೆದಂದದೊಳೊಪ್ಪುವ ಬಣ್ಣಮುಂ ಕರಂ
ಪಂಬಲಿಸಲ್ಕೆ ತಕ್ಕವಚಱಾಗಿಸದೋರ್ಗರಗಂಪುಮಾವ ಪೂ ।
ವಿಂ [1]ಬಗೆಗೊಳ್ವುದಂತ[1]ವಱೊಳಗ್ಗಳಮಾದೊಡಮಕ್ಕಟಾ ಮರು
ಳ್ದುಂಬಿಗಳೀಕೆ ಸಂಪಗೆಗಳೊಳ್ ಪಗೆಗೊಂಡವೊ ನಿರ್ನಿಮಿತ್ತದಿಂ ॥ ೧೩

(ಕಾವ್ಯಾವಲೋಕನಂ, ೨೩–೧೩೮.)

ಗಟ್ಟಿನೆ ಕೊಳೆ ಕಡುಗಂಪಿನೊ
ಳಟ್ಟಿಮೆಗೊಳಗಪ್ಪೆವೆಂದು ಮಧುಪಂಗಳ್ ತಂ ।
ಮುಟ್ಟಿಮೆ[2]ಯಭೀತಿಯಿಂದಮೆ[2]
ನೀಟ್ಟರಿಸಿದುವುಂತೆ ಚಂಪಕಕ್ಕೆಱಗದುವೇ ॥ ೧೪

(ಆದಿಪುರಾಣಂ, ೧೧-೧೧೯.)

ಮೊಗೆದುಣ್ಬೆ ಮಧುವಂ ಮಲೀನವಪು ದಾನಂಗೊಂಬೆ ಮಾತಂಗಜಾ
ತಿಗಳೊಳ್ ಪೇಸದೆ ಮಾಪ್ಪೆ ಪುಷ್ಪಿತಲತಾಸಂಭೋಗಮಂ ನಿನ್ನೊಳಾ ।
ವಗುಣಂ ಷಟ್ಪದ ಪೋಗು ಮುಟ್ಟದೆನುತಂ ಕೈಸನ್ನೆಗೆಯ್ವಂತೆ ಸಂ
ಪಗೆ ಚೆಲ್ವಾಯ್ತು ಸಮೀರಸಂಚರಣಸಂಚತ್ಪಲ್ಲವೋಲ್ಲಾಸದಿಂ ॥ ೧೫

ಅರಲಂಬಿಂದೆಮ್ಮೊಳ್ ಮೆ
ಯ್ಯರೆದಿಸು ಬಿರಯಿಗಳನೆಂದು ಕೈಗೊಟ್ಟುವು ಶಂ।
ಬರರಿಪುಗೆನ್ನದೆ ಮಾವಿನ
ತರುಗಳ್ ಕೈವಂದುವೆಂಬವರ್ ಮರುಳಲ್ತೇ ॥ ೧೬

(ಚಂದ್ರಪ್ರಭಪುರಾಣಂ, ೭–೪೩.)

ಅಳಿನಿನದ [3]ಗೀತ ಮದಕೋ
ಕಿಳನಿನದಂ ವಾದ್ಯಮಭಿನಯಂ[3] ನೆಗಟ್ಟಿನೆಗಂ ।

---

[1] ಬಗೆವಾಗಳಿಂತಿ (ಅ). [2] ಯೆಚೌತಮಾಗಿರೆ (ಅ). [3] ದ ಮದಕೋಕಿಳ ಕಳನಿನದದ ಜತಿಯೊಳಭಿನಯಂ (ಅ).

ಲಳಿತಮನೇನಾಡಿಸಿದನೊ
ಮಳಯಾನಿಳನರ್ತಕಂ ಲತಾನರ್ತಕಿಯಂ ॥ ೧೭
(ಆದಿಪುರಾಣಂ, ೧೧–೯೩.)

ಏಣಿಯನಿಕ್ಕಿದೆಂ ನಿಮಿರ್ದ ಪೂಮರಗಳ್ಗೆ ವಿನೋದವಾಗಿ ನಿ
ಶ್ಶ್ರೇಣಿಯನುಣ್ಮಳಲ್ಪಿನ ಮಾಡಿಸಿದೆಂ ನೆಲೆಗೊಳ್ವ ನೀರ್ಗಳೊಳ್ ।
ಜಾಣಮರ್ವಂತು ಱೇಡಕುಟಿಯಂ ಪರಿಶೋಧಿಸಿದೆಂ ನರೋವರ
ಕ್ಷೋಣಿಗಳೊಳ್ [1]ಕುಳಿರ್ಕೊಳಿಸುವೋಲಗಶಾಲೆಯನೊಪ್ಪಿ ಮಾಡಿದೆಂ ॥ ೧೮

ತರುಣೀಪಾದಪ್ರಹಾರಕ್ಕಸುಕೆ ಕುರವಕಂ ವಾರನಾರೀಕುಚೋದ್ಯ
ತ್ಪರಿರಂಭಕ್ಕಂಗನಾದೃಕ್ಪದವಿಗೆ ತಿಲಕಂ ಕಾಮಿನೀ ದುಗ್ಧಗಂಡೂ ।
ಷರಸಾಸ್ವಾದಕ್ಕೆ ಚಾಂಪೇಯಕಮೆಳಸಿ ಬರಲ್ವೇಱೆ ನಿಮ್ಮಂ ಪಿಕಾ[1]ನೀ
ಕ[1]ರವಂ ಮಂದಾನಿಲಂ ಬಿನ್ನವಿಸಿ ಕರೆದಪಂ ಸೌರಭಾ[2]ದರ್ಶ[2]ಹಸ್ತಂ ॥ ೧೯
(ಅನಂತನಾಥಪುರಾಣಂ, ೮–೧೧.)

ವಸುಧಾಮಂಡಳಮಂ ಮರುಳ್ಗೊಳಿಪ ರೂಪಾಶ್ಚರ್ಯದಿಂ ಮುತ್ತಿನೆ
ಕ್ಕಸರಂ ಮಲ್ಲಿಗೆ ಚಂದನಂ ಮೆಱು[3]ಯೆ[3] ಚೆಲ್ವಿಂ ಕಂಪು ಸೊಂಪಾದ ಮೆ ।
ಯ್ವೇಸದಿಂ ಮನ್ಮಥ ಚಂದ್ರ ಚೈತ್ರರೆ ವನಕ್ರೀಡಾರ್ಥಮೇೞ್ಪಂತಿರೇ
[4]ೞ್ವ[4] ಸಭಾಮಂಡಲದಿಂ ತ್ರಿವಿಷ್ಟಪಸಭಾಮಾಣಿಕ್ಯದೀಪಾಂಕುರಂ ॥ ೨೦
(ಅನಂತನಾಥಪುರಾಣಂ, ೬–೯೨.)

ಹಯಮಂ [5]ರಾಜಕುಮಾರರ[5]ಶ್ವ[6]ರಥ[6]ಮಂ ವಿದ್ಯಾವತೀವ್ಯಂದಮಾ
ನೆಯನುರ್ವೀಶತನೂಜರಂದಣಮನಾ ವಾರಾಂಗನಾಶ್ರೇಣಿ ರಾ ।
ಣಿಯವಾಸಂ ಶಿಬಿಕೌಘಮಂ ಪಿಡಿಯ ಪಿಂಡಂ ಪೆಂಡವಾಸಂ ನೃಪಾ
ನ್ವಯಚೂಡಾಮಣಿ ಪಟ್ಟಗಂಧಗಜಮಂ ಮುನ್ನೇಱಿ ತಾಮೇಱಿದರ್ ॥ ೨೧
(ಅನಂತನಾಥಪುರಾಣಂ, ೬–೯೩.)

ಅರಸಿ ಪೆಱಗೇಱಿ ಮದವ
ತ್ಕರಿಧವಳಮನೇಱಿ ಮೆಱೆದನವನಿಪಧವಳಂ।
ಶರದಂಬುದಮಂ ರೋಹಿಣಿ
ವೆರಸೇಱಿದ ಚಂದ್ರನಂತೆ ಪೂರ್ವಾಸನದೊಳ್॥ * ೨೨
(ಅನಂತನಾಥಪುರಾಣಂ, ೬–೯೪.)

---

[1] ರಾವ (ಅ). [2] ಹರ್ಷ (ಖ.ಬ). [3] ವ (ಅ). [4] ರ್ದು (ಅ). [5] ನಾಗರ ಕಾದಿಯ (ಅ). [6] ಚಯ (ಕ.ಖ.ಬ). * ಈ ಪದ್ಯವಾದಮೇಲೆ (ಕ.) ಪ್ರತಿಯಲ್ಲಿ ಬರುವ ಮೂರು ಪದ್ಯಗಳು (ಖ.ಬ.) ಪ್ರತಿಗಳಲ್ಲಿ ೨೮–೨೯–೩೦ನೆಯ ಪದ್ಯಗಳಾಗಿವೆ. (ಖ.ಬ.) ಪ್ರತಿಗಳ ಕ್ರಮವೇ ಸರಿಯಾಗಿರುವುದರಿಂದ ಅದನ್ನೇ ಇಲ್ಲಿ ಅನುಸರಿಸಿದೆ.

ಬನಮಾಯ್ತಂಗಡಿಬೀದಿ ಪೀಲಿದಱೆಯೊಡ್ಡಿಂ [1]ಪಂಕಜಾನ್ಯಂಗಳಿಂ[1]
ವನಜಾತಾಕರಮಾಯ್ತು ವಾರವನಿತಾಪಾಂಗಾಂಶುವಿಂ ಸೌಧಸಾ।
ರನಿಕಾಯಂ ಮಧುಮಾಸಮಾಯ್ತು ಪುರಮೆಲ್ಲಂ ಮಲ್ಲಿಕಾಮಾಲೆ ಭಾ
ರನಿಜಾಮೋದದಿನೆಂಬಿನಂ ತಳರ್ದನುರ್ವಿಮಂಡಲಾಖಂಡಳಂ॥ ೨೩

(ಅನಂತನಾಥಪುರಾಣಂ, ೬–೯೫.)

ಕುಮುದರಜಂಗಳೊಳ್ ಪೊರೆದು ವಾಃಕಣಜಾಳಮನಾಂತು ಕೂಡಿ ವಿ
ಶ್ರಮಿಸಿ ತರಂಗಮಾಳಿಕೆಗಳೊಳ್ ಕಳಹಂಸನಿಕಾಯದೊಳ್ ಭ್ರಮ।
ದ್ಭ್ರಮರ ರಜಂಗಳೊಳ್ ಬೆರಸಿ ಮಾರುತನೊಯ್ಯನೆ ಬಂದು ತೀಡಿದ
ತ್ತಮರ್ದೊಸೆದಪ್ಪಿಕೊಂಡು ಕರೆವಂತೆವೋಲಾ ಮನುಜೇಂದ್ರಚಂದ್ರನಂ॥ ೨೪

(ಕಾದಂಬರಿ, ಪೂ.ಭಾ.; ೬೩೩.)

ಸಮದೇಭವ್ರಜದಾನವರ್ಷನಬಲಾಸಂದೋಹನೇತ್ಯಾಬ್ಜಷಂ
ಡಮನೇಕಧ್ವಜಮೇಘಡಂಬರಚಯಂ ಶುದ್ಧಾಂತಕಾಂತಾಮುಖೇಂ।
ದುಮಯೂಖಂ ಚಮರೀಜವೀಜನಬಳಾಕಂ ತಳ್ತು ಕಾರುಂ ಬನಂ
ತಮುಮುದ್ಯಾನವನಕ್ಕೆ ಬಪ್ಪ ತೆಱದಿಂ ಬಂದಂ ಮಹೀವಲ್ಲಭಂ॥ ೨೫

(ಅನಂತನಾಥಪುರಾಣಂ, ೬–೬೬.)

[2]ಮ[2]ಡದಿಂದೊತ್ತಿ ಮದಾಂಧಗಂಧಗಜಮಂ ಪಿಂತಿರ್ದ ನಲ್ಲಳ್ಗೆ ಕೈ
ಗುಡುತುಂ ಮೆಲ್ಲನಿಟಿಂಪಿ ಕಯ್ಯಲಗನತ್ತಲ್ ನೀಡಿ ಕುಂಭಾಗ್ರಮಂ।
ತೊಡೆಯುತ್ತುಂ ಪಿಡಿದಗ್ರಪಲ್ಲವಮನುದ್ದಂತಾಗ್ರಮಂ ಮೆಟ್ಟಿ ಕೈ
ಯೆಡೆಯಿಂ ಲಂಘಿಸಿದಂ [3]ನೆ[3]ಲಕ್ಕೆ ಜವದಿಂ ಸಾಹಿತ್ಯರತ್ನಾಕರಂ॥ ೨೬

(ಅನಂತನಾಥಪುರಾಣಂ, ೬–೯೭.)

ಸರಸಿರುಹಂಗಳಿಂದಿಟಿವ ಮತ್ತಮ[4]ದಾ[4]ಳಿಗಳಂತೆ ಕೇಳಿಭೂ
ಧರಶಿಖರಂಗಳಿಂದಿಟಿವ ಸೋಗೆಯ ಗೊಂದಣದಂತೆ ಬಂದ ಮಾ।
ಮರದೆಳಗೊಂಬಿನಿಂದಿಟಿವ ರಾಜಶುಕಾವಳಿಯಂತೆ ತೇರ್ಗಳಿಂ
ಕರಿಣಿಗಳಿಂದಮಂದಣದಿನೇನಿತಿತಂದರೊ ವಾರನಾರಿಯರ್॥ ೨೭

(ಅನಂತನಾಥಪುರಾಣಂ, ೬–೩.)

ಅಗೆವೊಯ್ದ ಚಂದ್ರಮಂಡಲ
ದಗೆಗಳವೋಲ್ ಕಾರಮುಗಿಲ [5]ಕೀಲ್ಸರಿ[5]ಗಳವೊಲ್।

---

[1] ಪಲ್ಲಿದೊಂಗಲ್ಗಳಿಂ (ಕ.ಖ.ಬ). [2] ತೊ (ಅ). [3] ಕೆ (ಅ). [4] ರಾ (ಅ) [5] ಕೀಳ್ಪಿರಿ (ಕ.ಬ).

ಸೊಗಯಿಸಿದುವು ಬೆಳ್ಗೊಡೆ ಕೊಂ
ಬುಗೊಂಬಿನೊಳ್ ಕಂಬಕಂಬದೊಳ್ [1]ಪೆಣ್ಪ್[1]ಡಿಗಳ್॥ ೨೮

(ಯಶೋಧರಚರಿತ್ರೆ, ೪-೪ ; ಅನಂತನಾಥಪುರಾಣಂ, ೭-೬.)

ಎಳಲತೆಗಳ್ಗೆ ಸೋಗೆಗೆ ನರೋಜಕುಲಕ್ಕೆ ಪಿಕಕ್ಕೆ ತಮ್ಮ ತೋ
ಳ್ಗಳ ಕುಡಿ ನೀಳ್ದ ಸೋರ್ಮುಡಿ ಮೊಗಂ ಗುಡಿ ಮೆಲ್ನುಡಿ ಮತ್ಸರಂಗಳಂ।
ಬಳೆಯಿಸಿ ಮುತ್ತು ವಂತೆ ಬನಮಂ ನಡೆದರ್ ಕಳನಾದೆಯರ್ ಸಮು
ಜ್ವಳಮುಖಬಿಂಬೆಯರ್ ಕುಟಿಲಕುಂತಳೆಯರ್ ವಿಚಳಲ್ಲತಾಂಗಿಯರ್॥ ೨೯

(ಅನಂತನಾಥಪುರಾಣಂ, ೭-೭.)

ಪರಿತಂದುತ್ಸಾಹದಿಂದರ್ಚಿಸಿದರೊಸೆದು ವಾಸಂತಿಯಂ ಸಾಂದಿನಿಂ ಮಾ
ಮರನಂ ಶ್ರೀಖಂಡದಿಂ ಮಲ್ಲಿಗೆಯನಗುರುವಿಂ ಚಂಪಕಾನೀಕಮಂ ಕ।
ತ್ತುರಿಯಿಂ ಕಂ[2]ಕೆಲ್ಲಿಯಂ[2] ಕಂಪಿಡಿದ ಕ[3]ಮಳ[3]ದಿಂ ನಾಗಮಂ ನೆಲ್ಲಿಯಿಂ ಪಾ
ದರಿಯಂ ಕಾಶ್ಮೀರದಿಂ ಕೇಸರಮನಮಲಕರ್ಪೂರದಿಂ ಕಾಂತೆಯರ್ಕ್ಕಳ್॥ ೩೦

(ಲೀಲಾವತಿ, ೧೩-೬೪.)

ಕುಸುಮಶರಾಸನಕ್ಕೆ ನನೆಯಂಬಿನ ತೆಕ್ಕೆಗೆ ವಿಾನಕೇತನ
ಕ್ಕಸಮ ಶಿಖೀಮುಖಕ್ಕೆ ರತಿಗೇಳಿಗಿವೆಂದರೆ ನೋಡಿ ಮೆಚ್ಚಿ ಜಾ ।
ನಿಸಿ ಕರಪಲ್ಲವಂ ಬಡುಗೆ ಬಾಯಿನ ಬಲ್ನನೆ ಮೊಗ್ಗೆ [4]ಜಾ[4]ಗರಲ್
ಪಸರಿಸೆ ಕೊಯ್ದು ಮಲ್ಲಿಗೆಯೊಳರ್ಚಿಸಿದರ್ ಸಹಕಾರಪಾದಮಂ॥ ೩೧

(ಅನಂತನಾಥಪುರಾಣಂ, ೭-೧೨.)

ಅರ್ಚಿಸಿದಾಯಲಾಗ ಪೊಸಪೂಗಳನೆಂದಿವೆ ಚಂದನಚ್ಛ[5]ಟಾ[5]
ಚರ್ಚೆಗಳೆಂಬವೋಲಡಸಿ ನೋಡಿ ನವಾಂ[6]ಕುರಕಾಂತಿದಾಮದಿಂ[6] ।
ದರ್ಚಿಸುವಂತೆ ನೀಡಿ ನಳಿತೋಳನಲಂಪಿನೊಳಾಯ್ದು ಕೊಯ್ದು ಕೈ
ಮರ್ಚಲ ತೋರಮಲ್ಲಿಗೆಗಳಂ ತಳರ್ವಟ್ಟಲೊಳೊರ್ವಳೊಟ್ಟಿದಳ್॥ ೩೨

(ಲೀಲಾವತಿ, ೧೩-೬೬.)

ವದನದ ಕಂಪನೊರ್ಮೆ ಸೆಳೆಗೊಂಬಿನ ಪೂಗಳನೊರ್ಮೆ ಸೂಬಸೂ
ಬದೆ ಮುಸುಱುತ್ತಮಿರ್ಪ ಮಱುದುಂಬಿಯನೀಯದೆ ಸುಯ್ಯೆ ನಾಸಿಕಾ।

---

[1] ಪೆರ್ಪಿ (ಅ). [2] ಕೇಳಮಂ (ಅ). [3] ಳಧ (ಅ). [4] ಪೋ (ಕ.ಖ.ಬ).
[5] ದಾ (ಕ.ಖ.ಬ). [6] ತರತಾಂತದಾಮದಿಂ (ಕ.ಖ.ಬ).

ವಿದಳಿತ ಚಂಪಕಶ್ವಸಿತ ಸೌರಭಮೊರ್ವಳಪೂರ್ವರೂಪಿನಾ
ಗದ ನಗೆವೂಗಳಂ ಬಯಸಿ ಬೆಟ್ಟದೆ ಬಿಚ್ಚತಮಾಯ್ದೊಳಟ್ಟಿಯಿಂ॥ ೩೩

(ಲೀಲಾವತಿ, ೧೩–೬೭.)

ನಡೆ ತಣ್ಪೂತಮರಂಗಳಂ ನೆರೆಯೆ ಭಾಷಾನಿಸ್ವನಂ ಪೊಣ್ಮೆ ನಾ
ರ್ದೆಡಗೈ ಬಾಗಿಸೆ ಶಾಖೆಯಂ ಬಲದ ಕೈ ಬೈತಿಟ್ಟವೋಲೆಯ್ದೆ ಕೆಂ।
ಪಡರ್ವನ್ನಂ ಕರಪಲ್ಲವಾಂಗುಲಿಗಳಿಂ ಪುರ್ಮಾಂಬುವಂ ಮಿಂಚೆ ಪೂ
ದೊಡವಿಂಗೆಂದು ಬೆಡಂಗಿಯರ್ ಬಿಡದೆ ಪೂವಂ ಕೊಯ್ದರುದ್ಯಾನದೊಳ್॥* ೩೪

ನಿಮಿರ್ದುದು ಮಧ್ಯಮುಂ ತಿವಳಿ ಕೆಟ್ಟವು ತೋಳ್ ಮೊಲೆ ಕುಂತಳಾಳಿ ಕ
ಣ್ಣೆಮೆ ಕುಡಿವುರ್ವು ಮೇಗೆ ನೆಗೆದೊಪ್ಪಿದುಪ್ಪೋಳ್ಮುಡಿ ಬಿಟ್ಟುವಿತ್ತ ಕಂ।
ಪಮನೊಳಕೊಂಡವೂರು ತುದಿಕಾಲ್ ನೆಲೆಗೊಂಡವು ನೂಪುರಂ ನಿನಾ
ದಮನೊಳಕೊಂಡವಿಂತಬಲೆ ಪೂದಿಱಿದಳ್ ನಿಮಿರ್ದಳ್ಳೆಗೊಂಬಿನೊಳ್॥* ೩೫

ವಳಿಗಳಟಿಯೆ ಬಿಂಕಂಬೆತ್ತ ವೃತ್ತಸ್ತನಂ ಕಂ
ಗೊಳಿಸೆ ಪೊಳೆಯೆ ಬಾಹಾಮೂಲಮೂರುದ್ವಯಂ ನಂ।
ಚಳಿಸೆ ನಿಜಪದಾಂಗುಷ್ಠಾಗ್ರದಿಂ ನಿಂದು ಕಣ್ಗಳ್
ಪೊಳೆಯೆ [1]ಮಿಳಿರ್ವ[1] ಕೊಂಬಂ ನಿಳ್ಕಿ ಪೂಗೊಯ್ವಳೊರ್ವಳ್॥ ೩೬

(ಕಾವ್ಯಾವಲೋಕನಂ, ೬೧೧.)

ಪರಿಮಳಿತರಂಜಿತಂ ಬಂ
ಧುರಗಂಧಂ ಮಂದರಾಗವರ್ಧನಕರಮೀ।
ಮರುಗಂ ಕರ್ಬಾಳಮುಮಿರೆ
ಮರುಳಲ್ಲವೆ ಕುಸುಮನಿಚಯದೊಳ್ ಮೆಱಿವಳಿಗಳ್॥ ೩೭

ಬಂಬಲ್ಗುರುಳೊಡನಾಡಿಗೆ
ತುಂಬಿಗೆ ಪಗೆಯೆಂದು ಮುಳಿದು ನಂಪಗೆಯೆಸಟಂ।
ತುಂಬಿಗುರುಳ್ಗೊಪ್ಪಿಸಿದಪ
ಳೆಂಬಿನಮೆಸಟ್ಗಳನೆ ತಿಱಿದು ನೂಡಿದಳೊರ್ವಳ್॥ ೩೮

(ಅನಂತನಾಥಪುರಾಣಂ, ೭–೧೪.)

ಪರಭಾಗಂ ಪೊಣ್ಮವನ್ನಂ ತನುಲತೆ ಲತೆಯೊಳ್ ಕೂಡೆ ತುಂಗಸ್ತನಂ ಮಂ
ಜರಿಯೊಳ್ ಮುಂಡಾಡೆ ಕಣ್ಗಳ್ ಬೆರಸೆ ಕುಸುಮದೊಳ್ ಕುಂತಳಂ ತುಂಬಿಯೊಳ್ ತ।

* ಈ ಪದ್ಯಗಳು (ಕ) ಪ್ರತಿಯಲ್ಲಿಲ್ಲ. [1] ನಿರ್ಮಿದ (ಅ).

ಳ್ತರೆ ಪುಷ್ಪಾವೋದದೊಳ್ ಸುಯ್ ಕಲಸೆ ಕರತಳಚ್ಛಾಯೆ ತದ್ಕೈಸೆ ಬಾಲಾಂ
ಕುರಮಂ ಪೂಗೊಯ್ದೊಳೊರ್ವಳ್ ಲತೆಲತೆಗೊಲವಿಂ ಬಿರ್ದು[1]ವಂದಂತಿರಿರ್ದಳ್[b1] ॥
(ಲೀಲಾವತಿ, ೧೩–೭೦.)

ಸೋದು ಕರಾಬ್ಜದಿಂ ಮುಗಿದ ಕಣ್ಮಲರಂ ಕಚಭಾರಬಂಧಮಂ
ಸೋದಿಸಿ ಮೇಲುದಂ ಬಿದಿರ್ದು ಕುಂತಳಮಂ ಸಮಸಂಶಯಕ್ಕೆ ತಂ।
ದೂದಿ ತಗುಳ್ದು ಬೆಂಬಟಿಯನೆಯ್ದಿಸಲಾಱದೆ ಕಾಯ್ವ ಮಲ್ಲಿಕಾ
ವೋದ ಮಧುವ್ರತಕ್ಕಗಿದು ವಿಭ್ರಮಮಂ ಪಡೆದತ್ತು ಸಂಭ್ರಮಂ॥ ೪೦

ನಱುಸುಯ್ಗೆ ತುಂಬಿಗಳ್ ಬಂ
ದೆಱಿಗೆ ಕರಾಂಬುಜದೆ ಕಮಲಮುಖಿ ಸೋವುತ್ತುಂ।
ಮಿಱುಗುವ ನೀಲದ ಬಟ್ಟಿನ
ತಿಱುಕಲ್ಗಳನಾಡುವಂತೆ ಸತಿ ಸೊಗಯಿಸಿದಳ್॥ ೪೧
(ಕಾದಂಬರಿ, ಉ. ಭಾ. ೨೬.)

ನೀರೇಜವದನೆ ತಿಱಿದಳ್
ತೋರಿದ ಮಲ್ಲಿಗೆಯ ಮುಗುಳನಾಗಳೆ ಕಾಶ್ಮೀ ।
ರಾರುಣಕರಪಲ್ಲವದಿಂ
ತಾರಗೆಯಂ ತಿಱಿವ ಪೂರ್ವಸಂಧ್ಯಾಂಗನೆವೋಲ್ ॥ ೪೨
(ಲೀಲಾವತಿ, ೧೩–೭೭.)

ಪೂಗಣೆಯನ ಚಾಮರಮಂ
ನೀಗುರಿಯಂ [2]ಪಿಡಿ[2]ವಳಂತೆ ಸೆಳೆಗೊಂಬುಗ[3]ಳಂ[3] ।
ಬಾಗೊತ್ತಿ ಗುಜ್ಜುಮಾವಿನ
ಪೂಗೊಂಚಲನುಡಿದು ಪಿಡಿದಳಳಿವೆರಸೊರ್ವಳ್ ॥ ೪೩
(ಲೀಲಾವತಿ, ೧೩–೮೨.)

ಎಳಲತೆಯನಂ[4]ಗ[4]ದಿಂ ಕೋ
ಕಿಳಮಂ ಕಳರವದಿ[5]ನಿಕ್ಕಿ[5] ಗೆಲೆಯಲರ್ವಳೆಯಂ ।
ತ[6]ಳೆದಳೆ[6]ನೆ ನಿಳ್ಕಲಾಱದೆ
ಸೆಳೆಗೊಂಬಂ ಲಲನೆಯಲುಗೆ ನೂಸಿದವಲರ್ಗಳ್ ॥ ೪೪
(ಲೀಲಾವತಿ, ೧೩–೮೬.)

---

[1] ದೆಂಬಂದದಿಂದಂ (ಕ.ಖ.ಬ). [2] ಪಡೆ (ಖ.ಬ). [3] ಳಿಂ (ಅ). [4] ದ (ಅ). [5] ನಾಕೆ (ಅ). [6] ಳಿದುದೆ (ಅ).

ವಲ್ಲಭನ ತೋಳ ಸೋಂಕುಂ
ಮಲ್ಲಿಗೆಯುಂ ಕುಂದದಿರ್ಕೆ ನಂತತಮೆನಗಾ ।
ನೊಲ್ಲೆಂ ಪೆಱತನೆನುತ್ತುಂ
ಮಲ್ಲಿಗೆಯಂ ಪಿಕನಿನಾದೆ ಕೊಯ್ದಳಿದೊರ್ವಳ್ ॥ ೪೫

(ಜಗನ್ನಾಥವಿಜಯಂ, ೧೪–೭೭.)

ಮರುಳೊಡನಾಡಿದ ಕತದಿಂ
ಮರುಳಾದನದಲ್ಲದಂತದಂ ನೂಡನೆ ಶಂ ।
ಕರನೆಂದು ಕೊಯ್ದಳೊರ್ವಳ್
ಪರಿಮಳಮಂ ಬೀಱುತಿರ್ಪ ಪೊಂಗೇದಗೆಯಂ ॥ ೪೬

(ಜಗನ್ನಾಥವಿಜಯಂ, ೧೪–೮೪.)

ಅಳಿ ಕರ್ದುಕಿದ ಕಡೆಗಂಗಳ
ಗಿಳಿ ಕರ್ದುಕಿದ ದಶನವಸನದುನ್ಮದದ ಪಿಕಾ ।
ವಳಿ ಕರ್ದುಕಿದ ಬೆರಲ ಲತಾ
ಲಲಿತೆಯರೆ ಪಲಂಬರಾದರಲರ್ಗೊಯ್ವೆಡೆಯೊಳ್ ॥ ೪೭

ಸುರಹೊನ್ನೆಯ ಮುಗುಳಂ ಕೊ
ಯ್ದರವಿಂದದ ನೂಲೊಳೊಪ್ಪೆ ಕಟ್ಟಿದಳೊರ್ವಳ್ ।
ಪರಿಮಳಮುಳ್ಳೆಳಮುತ್ತಿನ
ಸರಮೆತ್ತಣದೆಂದು ಮುಗ್ಧೆಯರ್ ಮುತ್ತುವಿನಂ ॥ ೪೮

(ಅನಂತನಾಥಪುರಾಣಂ, ೭–೨೦.)

ಕಟಿಸೂತ್ರಂ ಬ್ರಹ್ಮಸೂತ್ರಂ ಸರಿಗೆ ಮಿನುಕು ಕೊಪ್ಪುಂಗುರಂ ಕರ್ಣಪೂರಂ ಕಟಕಂ ಮಂಜೀರಕಂ ಮೂಕುತಿ ಚಳಕಿಗೆಪೂ ಪೊಂದಳಿರ್ ಪಾಯವಟ್ಟಂ । ನಿಟಿಲಾಂ[1]ತಂ[1] ಲಂಬಳಂ ಪೂಬಳೆ ಬಳೆ ಪೆಱೆ ಕೇಯೂರಮೆಂಬನ್ನವಂ ಪ್ರಸ್ಫುಟರ್[2][ತ್ನೋ[2]ಪಾಶ್ರಯಂ ರಂಜಿಸುವಿನಮಲರಿಂ ಕಾಂತೆಯರ್ ಮಾಡಿ [ತೊಟ್ಟರ್ ॥

ಬಳೆ ಮುದ್ರೆ ಬಂದಿ ಪುಟ್ಟಿಗೆ
ಬಳಸದ ಬಿಚ್ಚೋಲೆ ಹರಿಹು ಹೆಱೆ ತಿಲಕಂ ಕಂ ।
ಗಳನಲಸದೆ ಕೇದಗೆವೂ
ಗಳೊಳೆತ್ತಂ ಮಾಡಿ ತೊಟ್ಟರಬಲೆಯರೆಲ್ಲಂ ॥ ೫೦

[1] ಕಂ (ಕ). [2] ನ್ನೋ (ಕ.ಖ.ಬ).

ಪೊಸತಿಕ್ಕುವಂತೆ ಕಾಮನ
ಪೊಸನಿಧಿಯಂ ಕಾಮಕಾಳಸರ್ಪಂಗೊಲವಿಂ ।
ಪೊಸಮಲ್ಲಿಗೆಯುಮನಡಕೆಯ
ಸಸಿಯುಮನೊಸೆದೊರ್ವಳಿಕ್ಕಿದಳ್ ಸೋರ್ಮುಡಿಯೊಳ್ ॥ ೫೧

(ಲೀಲಾವತಿ, ೧೩–೧೦೮.)

ತೊಡವೆನಿತೊಳವನಿತಕ್ಕಂ
ಪಡಿಚಂದಂ ಮಾಡಿ ಕಾಂತೆಯರ್ ಪೂದೊಡವಂ ।
ತೊಡೆ ತೊಟ್ಟ ಮರಲಸರಳಂ
ಮಡಲಿಱಿದು ಮನೋಜನಡಸಿ ವಿರಹಿಯನೆಚ್ಚಂ ॥ ೫೨

ವನಕೇಳೀಲೀಲೆ[1]ಯೊಳ್[1] ತನ್ನಿನಿಯನ ದಯೆಯಿಂ ಪೆತ್ತ ನೂತ್ನೋತ್ಪಲಾಂಭೋ
ಜನವೋತ್ತಂಸಾವತಂಸಂಗಳನಭಿನವಪುನ್ನಾಗಕೇಯೂರಮಂ ನೂ
ತನ ಚಂಚತ್ಕರ್ಣಿಕಾರಪ್ರಸವವಲಯಮಂ ಮಲ್ಲಿಕಾಕಟ್ಟಲವ್ಯ
ಕ್ತನವೋದ್ಯದ್ಧಾರಮಂ ಕಾಮಿನಿ ತಳೆದೆನಸುಂ ನೋಡೆ ಕಣ್ಗೆಡ್ಡಮಾದಳ್ ॥ ೫೩

(ಶೃಂಗಾರರತ್ನಾಕರಂ, ೧–೩೭.)

ಎಳಲತೆಯುಯ್ಯಲಾಡಿದಪುದೆನ್ನಸಿತೋತ್ಪಲಮುಯ್ಯಲಾಡಿತೆ
ನ್ನೆಳದಳಿರುಯ್ಯಲಾಡಿದುದು ತೆಂಬೆರಲೆಂಬೆಲರಿಂದಮೆನ್ನುತಂ ।
ಕೆಳೆದಿಯರೊಲ್ದು ಪಾಡೆ ತನುಮಧ್ಯೆ ವಿಲೋಲ[2]ವಿನೀಲ[2]ನೇತ್ರೆ ಕೆಂ
ದಳದ ಬೆಡಂಗನಿಕ್ಕಿ ತಳಿರುಯ್ಯಲನಾಡಿದಳಾಮ್ರಶಾಖೆಯೊಳ್ ॥ ೫೪

(ಅನಂತನಾಥಪುರಾಣಂ, ೭–೧೫೫.)

ತಳಿರುಯ್ಯಲ್ ಕಣ್ಗೆವಂದತ್ತೆಳಅಡಕೆಯ ಕಂಭಗಳಿಂ ಕಂಜಸೂತ್ರೋ
ಜ್ವಳ[3]ರಜ್ಜು[3]ಭ್ರಾಜಿತಂ ಚಂದನದ ಮಣಿಯಿನುನ್ಮತ್ತಭೃಂಗಾಂಗನಾಮಂ ।
ಗಳಗೀತೋನ್ಮಾ[4]ದಿ[4] ಮೇಗೇಱಿಸಿದ ಕೃತಕನೃತ್ಯನ್ಮಯೂರಂಗಳಿಂ ನಿ
ರ್ಮಳಮಾಳಾಚಾಮರಂ ಚಂಪಕಮುಕುಳಚಲದ್ಭೃಂಟಿಕಾಜಾಳದಿಂದಂ ॥ ೫೫

(ಲೀಲಾವತಿ, ೧೧–೫೭)

ಎಳಸಿರೆ ದೇಸಿ ಪೊಚ್ಚಪೊಸಮಲ್ಲಿಗೆಯಂ ಪಲವಂ ತುಱುಂಬಿ ಕ
ಣ್ಗೊಳೆ ಸಿರಿಕಂಡದಣ್ಪನೊಸೆದಿ[5]ಟ್ಟು[5] ದುಕೂಲಮನುಟ್ಟು ಮೌಕ್ತಿಕಾ ।

---

[1] ಯಿಂ (ಕ.ಖ.ಬ). [2] ವಿಲೋಲ (ಕ.ಖ.ಬ). [3] ರಾಜಿ (ಕ.ಖ.ಬ). [4] ದ (ಖ.ಬ).
[5] ಕ್ಕಿ (ಅ).

ವಳಿಯನೊಱಿಲ್ದು ತೊಟ್ಟು ತಳಿರುಯ್ಯಲನ[1]ಟ್ಕಿಱೊ[1]ಳ್ಗೀಱಿ ಪಾಡಿದಳ್
ಲಲನೆ ವಸಂತದೊಳ್ ಪಲವು ವರ್ಣ[2]ನ[2]ದಿಂ ಕವಿಕಾಮದೇವನಂ ॥ ೫೬

(ಶೃಂಗಾರರತ್ನಾಕರಂ, ೧–೪೦.)

ತೆರೆಮುಗಿಲನಡರ್ವ ವಿದ್ಯಾ
ಧರಿಯೆಂಬಿನಬೊರ್ವಳ್ಗೀ[3]ಱಿ[3] ಕೃತಕಾದ್ರಿಯನೇಂ ।
ದೊರೆಯಾದಳೊ ರತಿಕಾಂತನ
ಕರುಮಾಡದ ಮದನನೋಹಿನೀಪುತ್ರಿಕೆಪೊಲ್ ॥ ೫೭

(ಅನಂತನಾಥಪುರಾಣಂ, ೭–೧೬; ಯಶೋಧರಚರಿತೆ, ೪–೯.)

ನಿಱಿದಳಿರ್ದೊಂಗಲಂ ತೆಗೆದು [4]ಬಾರುಳಿ[4]ಯಂ ದನಿಗೆಯ್ದ ಶೋಕೆಯೊಳ್
ಕಿಱುಮುಗು[5]ಳ್ಗುಂಜಿ[5]ಯಂ ತಳೆದು ಪೂವಿನ ಬಲ್ಮೊನೆಯಂಬು ಕೈಯೊಳ ।
ಚ್ಚಿಱಿದಿರೆ ಮೇಚಕಚ್ಛವಿಯ ತಾವರೆಗಂಗಳ ಗಾಣವೆಂಗಳೇಂ
ಮೆಱೆದರೊ ಕೇಳಿಶೈಲತಿಱರಾವಳಿಯೊಳ್ ಶಬರೀವಿಲಾಸಮಂ ॥ ೫೮

(ಅನಂತನಾಥಪುರಾಣಂ, ೭–೧೭.)

ಸೊಗಯಿಪ ಬಳ್ಳಿಮಾವನಡರ್ದೀಱಿ ತಳಿರ್ಪುದಿದಿರ್ದ ಕೊಂಬುಕೊಂ
ಬುಗಳೊಳಡಂಗಿ ತುಂಬಿಯಪ್ಪೋಲಾನತಿಮಾಡಿ ಶುಕಾಳಿವೊಲ್ ಕೊದಳ್ ।
ಬಗೆವುಗೆ ಮಾತನಾಡಿ ಪಿಕದಂತೆ ಪುಗಿಲ್ ಪುಗಿಲೆಂದು ಭೂಪನಂ
ನಗಿಸಿದರಲ್ಲಿ ಜವ್ವನದ ಸೊಕ್ಕಿನಳುರ್ಕೆಯ ನೀಱಿಯರ್ ಕೆಲರ್ ॥ ೫೯

ನಿಱಿ ಸೊಪ್ಪಾದುದು ಕೋಡಗಂ ಸೆಳೆದುದೇ ಮೈ ಬಾಸುಡೇಟ್ಪನ್ನೆಗಂ
ಪಱಿದತ್ತಕ್ಕಟ ಪೊಕ್ಕು ಕೇದಗೆಯ ಪೂಗೊಯ್ಯಲ್ಕೆ ಘರ್ಮಾಂಬುಗಳ್ ।
ತುಱುಗಲ್‌ಗೊಂಡವು ತಂಗೆ ಬಲ್ಲಿತೆ ಬಿಸಿಲ್ ಪೊದೋಂಟಮೊಳ್ ನಿನ್ನನೆಂ
ದಱಿದುತ್ಸಾಹಿಯಳಂಕೆಗೆಯ್ದು ಸಖಿಯಂ ತನ್ವಂಗಿ ಕ್ಷೋ[6]ಱಿದಳ್ ॥ ೬೦

ಎಳಮಾವಿನ ತಳಿರ್ವೂವಿನ
ಗಿಳಿ ಚಿಲಿಪಿಲಿಯೆಂದೊಡಾ ಮರಂ ಜಗಳಕ್ಕ ।
ವ್ಯಳಿಸಿದಪುದೆಂದು ಭಯದಿಂ [illegible]
ತಳಿರ್ಗೊಯ್ಯ[7]ದೆ[7] ಪಿಂಗಿ ಮುಗ್ಧೆ ನಗಿಸಿದಳೊರ್ವಳ್ ॥ ೬೧

ಗಿಳಿ ಸೆಳೆಯೆ ತಳಿರನೆಲೆವಱಿ
ಗಳ ಕಾಯ್ಗಳ್ ಪೊಳೆಯೆ ಚೂತಲತೆ ಪೋಲ್ತತ್ತಂ ।

---

[1] ಟ್ತಿಯೊ (ಅ). [2] ಕ (ಅ). [3] ಱಿ (ಕ). [4] ಚಾರಿಣಿ (ಕ.ಖ.ಬ).
[5] ಳಂಜೆ (ಕ.ಖ.ಬ). [6] ಣ್ಟೀ (ಖ.ಬ). [7] ೆ (ಖ.ಬ).

ಚಳಮನಳಿಪಿಂದಲನಿಯಂ
ಸೆಳೆಯೆ ಕುಚಂ ಪೊಳೆಯೆ ಮುರಿದು ನಿಂದಂಗನೆಯಂ ॥ ೬೨

ಕುರವಕಮಂ ಘನಸ್ತನದ ಸೋಂಕಿನೊಳುಳ್ಳಲರ್ವಂತಿರಾಳಿಯಂ
ಕರುವಿಡೆ ಕೂಡೆ ಕಂಡು ದರಹಾಸದಿನಾಕೆಯ ಚಿತ್ತವಲ್ಲಭಂ ।
ಪುರುಡಿಸಿ ಕಯ್ಯೊಳಿರ್ದ ಸರಸೀಜಮನಂಟುಮಗುಳ್ಚಿ ಬೆರ್ಚಿ [1]ತಾ
ವರೆಯೆಸಪ್ಪೊಟ್ಟ[1]ನಿಟ್ಟಸುಕೆಯೊ[2]ಳ್ಮಿಳಿರಲ್[2] ಪಡೆದಳ್ ಪ್ರಸಾದಮಂ ॥ ೬೩
(ಅನಂತನಾಥಪುರಾಣಂ, ೭-೧೯.)

ತರಳಾಪಾಂಗದಿನಾ ನೃಪಾಲತಿಲಕಂ [3]ಮೈವೆತ್ತರಲ್ದುಂ ಪ[3]ಯೋ
ಧರಸಂಘಟ್ಟದೆ ಕಾಮು[4]ಕಾಕು[4]ರವಕಂ ಸೊಂಪೇಱೆ ವಾಮೇತರೇ ।
ತರಪಾದಾಹತಿಯಿಂದಶೋಕನೊಲವಿಂದಂ ತಳ್ತು ಸಂತಂ ನಿರಂ
ತರಮುದ್ಯಾನವಿನೋದಮಂ ಸಲಿಸುವಂ ಭೂಕಾಂತನಾ ಕಾಂತೆ[5]ಯೊಳ್[5] ॥ ೬೪
(ಅನಂತನಾಥಪುರಾಣಂ, ೨-೧೮.)

ದಳಿತಾಂಭೋಜಾತವಕ್ತ್ರಶ್ವಸಿತಪರಿಮಳಂ [6]ಭ್ರೂಲತಾ[6]ಕ್ಷೇಪಲೀಲಾ
ವಳಿತಾಪಾಂಗಾನುರಾಗಂ ಮಧುರಫಳರಸಾಸ್ವಾದ್ಯಹೃದ್ಯಾಧರಂ ಕೋ ।
ಮಳೆಯೊಳ್ ಸಂಭೋಗದೊಳ್[8] ಸಂದಿಸೆ ನೃಪನ ಮನೋಜಾತಕೀರಂ ವಚಃಕೋ
ಕಿಳಮಾಲೋಕದ್ವಿರೇಫಂ ತಣಿವುವೆಳಸಿ ತತ್ಪ್ರೇಮಕಾಂತಂ [7]ನಿತಾಂತಂ[7] (?) ॥ ೬೫
(ಅನಂತನಾಥಪುರಾಣಂ, ೨-೧೭.)

ಗಳದೊಳ್ ತೋಳವೊದಲ್ ಪಳಂಚೆ ಕಟಿಯೊಳ್ ವ್ಯತ್ಯೋರು ತಳ್ಪೊಯ್ಯೆ ಪೆ
ರ್ಮೊಲೆ ವಕ್ಷಃಸ್ಥಲಮಂ ಪಳಂಚಲೆಯೆ ತೂಱಿ[9]ಲ್ಕೊಂಬಿನೊಳ್ ತೋರ್ಪ ಗೊಂ ।
ಚಲ ಪೂವಿಂಗೆ ಲತಾಂಗಿ ನಿಳ್ಕುವಿನಮೋಪಂ ಲೀಲೆಯಿಂದೆತ್ತಿ ವ್ಯ
ಕ್ಷಲತಾಲಿಂಗನಭಂಗಿಭಾವರಸಮಗ್ನಸ್ತಂಭಮಂ ತಾಳ್ದಿದಂ ॥ ೬೬
(ಅನಂತನಾಥಪುರಾಣಂ, ೭-೧೮.)

ಸ್ತನಮುರ[9]ದೊಳು[9]ರ್ಚಿತೆನೆ ಮಿಗೆ
[10]ಮೊನಸಿದ[10] ಮ್ಮೈನವಿರೆ ನಾಂಟಿತೆನೆ ಕೊಂಬಿನ ಪೂ ।

---

[1] ಕಾತರೆತಳಿರ್ವೊಟ್ಟ (ಅ). [2] ಳ್ದಳಿರಂ (ಅ). [3] ಮುಯ್ಯಾಂತರಲ್ದುತ್ಪ (ಅ).
[4] ಕೋತ್ಕು (ಅ). [5] ಯಂ (ಅ). [6] ಕೋರಕಾ (ಕ.ಖ.ಬ). [7] ಪಸಂತಂ (ಅ).
[8] ಳುಂಕೆ ತಿಱಿಯಲ್ ವೇ (ಅ). [9] ಮನು (ಕ.ಖ.ಬ). [10] ಮನಸಿಜ (ಅ).

ವನೆ ತೋಱು ತಿಱುಯಲೆ[1]ತ್ತಿದ[1]
ತನು [2]ಬಿರಿವಿನಮಪ್ಪಿ ವಲ್ಲಭಂ[2] ನವವಧುವಂ ॥ ೬೭
(ಲೀಲಾವತಿ, ೧೩–೬೬.)

ಅನುವಿಸಿ ನನೆದಿಱಿದಪೆನೆಂ
ದಿನಿಯಂ [3][ಬರೆ ಕಂಡು][3] ತೋಳನೆತ್ತಿದೆ ಕುಚಕುಂ ।
ಭನ[4]ಖಾಂಕ[4]ದತ್ತ ಲಜ್ಜಾ
ವನತಾನನೆ ನಿಂದ ಭಾವಮಂ ಬಯಸದರಾರ್ ॥ ೬೮
(ಲೀಲಾವತಿ, ೧೩–೬೮.)

ಎಡಗಯ್ಯೊ[5]ಳ್ಕೊಯ್ದು ಮೇಲುದು
ಸಡಿಲ್ದು ಬರೆ [6]ಬದಿಗೆ ಬಳೆದು[6] ನವನಖಪದಮಂ ।
ಬಿಡುಮುಡಿ ಮುಸುಂಕೆ ಮುಱಿದೇ
ನುಡಿದಳೊ ಕುಡಿದಳಿರನಲಘುಕುಚೆ ಪತಿಯಿದಿರೊಳ್ ॥ ೬೯
(ಲೀಲಾವತಿ, ೧೩–೬೯.)

ಒಂದು ಕುಚಮುರ[7]ಮನು[7]ರ್ಚಿರೆ
ಚಂದನಧವಳಿತನನಪ್ಪಿ ಪೂಗೊಯ್ದಳ್ ತ ।
ಳ್ತಿಂದುಧರನಂಗದಿಂ ಮುಳಿ
ಸಿಂದಂ ಮಿಗೆ ಮುರಿದು ಮಗುೞ್ದ ಗಿರಿಜೆವೊಲೊರ್ವಳ್ ॥ ೭೦
(ಲೀಲಾವತಿ, ೧೩–೧೦೨.)

ಕರಮೆಸೆದವು ಲತೆಗಳನೆ
ಬ್ಬರದಿಂ ಪಚ್ಚೆಲೆಯ ಹೊದಕೆ ಬೆಳ್ವಾಳದ ಬೇರ್ ।
ಸಿರಿಖಂಡದ ವಳಯಂ ಕ
ಪ್ಪುರವಳುಕಿನ ಜಗಲಿ ಕೇತಕೀರಜದ ಮಱಲ್ ॥ ೭೧

ಬಿಸಿಲೆಯ್ದೆ ಪಸಲೆಗವಿದುದು
ಪಸುರ್ವೆಳ್[8]ಗಿಂದೆ[8]ನಿಪ ಬಾಳಕದಳೀವನ[9]ದೊಳ್[9] ।
ಬಿಸರುಹದಳಂಗಳಿಂದಂ
ಮಿಸುಕದ ಹಿಮಗೃಹಮನವನಿಪಾಲಂ ಕಂಡಂ ॥ ೭೨
(ಕಾದಂಬರಿ, ಉ. ಭಾ ; ೨೦೯.)

---

[1] ತ್ತನೆ (ಅ). [2] ಬಿಗಿವಿನಮಪ್ಪಿಯಭಿಮತಂ (ಅ). [3] ತರೆಬಂದು (ಅ.ಕ), ಕರೆ ಬಂದು (ಖ.ಬ). [4] ಲೋಕ (ಖ.ಬ). [5] ಳಾ (ಕ.ಖ.ಬ). [6] ಬರಿಗೆ ಬಳೆದು (ಅ). ಬದಿಗಬಳೆ (ಖ.ಬ). [7] ದೊಳು (ಅ). [8] ಗೇಱು (ಕ.ಖ.ಬ). [9] ಮಂ (ಕ.ಖ.ಬ.).

ಒದವಿದ ತೋರಮಲ್ಲಿಗೆಯ ಹಾರದ ಸೂಸಕದಿಂದೆ ಸಿಂಧುವಾ
ರದ ಚಮರೀಜದಿಂ ಕುಮುದದುಜ್ವಲಮಾಲಕೆ[1]ಯಿಂದೆ [1]ಪುಂಡರೀ ।
ಕದ ಕಿಱುಗಂಟೆಯಿಂದೆ ಸಹಕಾರದ ಕೆಂದಳಿರಿಂದೆ ಚೆಲ್ವುವೆ
ತ್ತುದು ಕದಳೀದ್ರುಮಂ ಗ್ರಥಿತಸೌಂದರಮಂಡನಕಾಳಿಕವ್ರಜಂ ॥ ೭೩

(ಕಾದಂಬರಿ, ಉ. ಭಾ ; ೨೧೩.)

ನಗಿಸುವ ಕೋಡಗಂ ನೆರೆದು ನೋಡುವ ದೀಹದ ಹುಲ್ಲೆ ಸೋಗೆಯಂ
ನೆಗಪಿ ತುಡುಂಕಿ ಮೆಟ್ಟುವ ನವಿಲ್ ಕಳಕೂಜನೆಗೆಯ್ವ ಪಾರಿವಂ ।
ನಗುವ ಶುಕಾಳಿಯಾಡುವ ಕುರಂಗವಡಂಗುಱುಚಾಟಮಂ ಪ್ರಿಯ
ರ್ಗೊಗೆಯಿಪವಂಗಜನ್ಮನ ಬೆಸಂಬಡೆದಂತೆ ಲತಾಗೃಹಂಗಳೊಳ್ ॥ ೭೪

ಎಲೆ ಜಲಜಾಸ್ಯೆ ನಿನ್ನ ನಯನೋತ್ಪಲಮಂ ಮಱಿದುಂಬಿ ಪತ್ತವಿ
ತ್ತಲೆ ಕವಿತಪ್ಪುವೆಂದವಳ ಕಣ್ಗಳ ನಿಮೀಲನಮಂ ನಿಮಿರ್ಚಿ ಕಾ ।
ದಲಳಧರಾಗ್ರಮಂ ಸವಿದು ಪೀಡಿಸಿತೀಕೆಯು ವಕ್ತ್ರಪದ್ಮಮಂ
ನಲಿದಳಿಯೆಂದು ತಾಂ ಪುಸಿದನಾಕೆಗೆ ನಲ್ಲಳ ಸೀತ್ಕೃತಂಗಳಂ ॥ ೭೫

(ಲೀಲಾವತಿ, ೧೩--೧೦೩.)

ಮೊಗವಿಸಾಸೆ ಬಾರದೋಪರ್
ಸೊಗಯಿಸಿ ಪೆಣ್ಬರಿಜನಿಟ್ಟು ಬರೆ ಪೂದಿಱುವ ।
ಚ್ಚಗದಿಂದಮೆಯ್ದೆ ಮೆಚ್ಚಿನ
ಬಗೆಯಿಂ ಸ್ಮರಕೇಳಿಗೆಳಸಿದರ್ ಪುಂಶ್ಚಲಿಯರ್ ॥ ೭೬

(ಲೀಲಾವತಿ, ೧೩–೧೦೭.)

ಪೊಯ್ದುದು ಮಾಯ್ದಲರ್ ತಱಿಯಲೀಯದೆ ಧೂಳಿಯನೆಂದು ಗಾಳಿಯಂ
ಬಯ್ದು ಪರಾಗಮಂ ತೊಡೆಯುತಂ ನಿಡುಗಂಗಳನೊತ್ತಿ ಮುಚ್ಚಿ ಕೊಂ ।
ಡೊಯ್ದತಿಮುಗ್ಧವಲ್ಲಭೆಯ ಕಣ್ಬೊಣರಂ ಪತಿ ತುಂಬಿ ಪೀರ್ದಪೊಲ್
ನೆಯ್ದಿಲನೂದಿಯೂದಿ ಪರಿಚುಂಬಿಸಿದಂ ನಗುತಂ ನಿಜೇಚ್ಛೆಯಿಂ ॥ ೭೭

(ಲೀಲಾವತಿ, ೧೩–೧೦೪.)

ಅಲರಾ[2]ಯ್ವಬಲೆಯ[2] ನೊಸಲೊಳ್
ಜಲಜಲಿನುವ ಬೆಮರನೊರಸಿ ಕಳೆವಿನಿಯನ ಮೆ ।
ಲ್ವ[3]ಲೆವ ತಳೆದಲೆ[3]ಪದಿಂ ತಂ
ಬೆಲರಲೆಪದೆ ಮುಗುಳ್ತ ಲತೆವೊಲೆಯೆ೦ದ್ದ ಬೆಮರ್ತರ್ಳ್ ॥ ೭೮

(ಲೀಲಾವತಿ, ೧೩–೧೦೫.)

---

[1] ಗೊಂಡೆ (ಕ.ಖ.ಬ). [2] ಯ್ದು ಬಬರೆ (ಅ). [3] ರೆ ತವಳರೇ (ಖ.ಬ).

ಗಿಳಿಗಳೊಡಗಟಪಿ ಮೊರೆವಳಿ
ಕುಳದೊಡಗಾಣಯ್ಸಿ ಪುರುಳಿಯೊಳಗೆಳಸಿ ನವಿ ।
ಲ್ಗಳ ಬಳಗದೊಳಗೆ ನರ್ತಿಸಿ
ವಿಳಾಸಿನೀನಿಕರಮಾಗಳ್ದೇಂ ದಳ್ಳಿಸಿತೋ ॥ ೭೯

ಕರಗಮನೆತ್ತು [1]ನೀರ[1]ಳಿಕೆ ಕಾಲ್ದೊಳೆ ಮಾಳಿನಿ ತೀರ್ಚು ಬೋನಮಂ
[2]ಸ್[2]ರಳಿಕೆ ಪಾಸು ಗ[3]ದ್ದು[3]ಗೆಯನುತ್ಪಳಿನೀ ಕೆಲಕೊತ್ತು ಚಿತ್ರಿಕ್ಕೇ ।
ಪರಿಯಣಮಂ ನೃಪೇಶ್ವರಿಯನಾರೊಗಿಸಲ್ ಕರೆ ಮಂಜುಘೋಷೆಯೆಂ
ದರಸಿಗೆ ಬೋನಮೆತ್ತಲುಲದ[4]ತ್ತು ಪನಾಂತದೊಳಂಗನಾಜನಂ[4] ॥ ೮೦

(ಅನಂತನಾಥಪುರಾಣಂ, ೪–೮೫.)

ಕರಿರಿಪು ಪೀಠಮಂ ತೊಡೆದು ಪಾಸುವ ಕತ್ತುರಿನೀರಧಾರೆಯಂ
ಪರಪುವ ಮುತ್ತಿನೆಕ್ಕಸರಮಂ ಕಡೆಯಿಕ್ಕುವ ಪಾರಿಜಾತದೊ ।
ಳ್ಪರಲನುದಿರ್ಚುವಿರ್ತರದ ಗದ್ದುಗೆಯಿಕ್ಕುವ ಸಂಭ್ರಮಂಗಳಿಂ
ಪರಿಮರಿಯಾಡಿದರ್ [5]ನವಲತಾಗೃಹಪಂಕ್ತಿಯೊಳಂಗನಾಜನಂ[5] ॥ ೮೧

(ಅನಂತನಾಥಪುರಾಣಂ, ೪–೮೬.)

[6]ದೇವಿ[6] ನಿಜವದ[7]ನವಿಧುಗೀ
ತಾ[7]ವರೆ ಸೋಲ್ತತ್ತು ಬಾಯ ತಂಬುಲಮಂ ನೀ ।
ನೀವುದೆನಿಪಂತೆ ಪಚ್ಚೆಯ
ಕಾವಿನ ಮಾಣಿಕದ ಡವಕೆ[8]ವಿಡಿದಳದೊ[8]ರ್ವಳ್ ॥ ೮೨

(ಅನಂತನಾಥಪುರಾಣಂ, ೪–೮೪.)

ತುಟಿಕಲಡುಗೆಗಳೊಳೇಂ ಪಟು
ಗಟವೆಯ ಕೂಪ್ ತಿವುಡುಗಳೆದ ತೊವರಿಯ ತೊವೆ ಕಾ ।
ಯ್ದಿಟಿಪಿದ ತುಪ್ಪಂ ಕೋಡುವ
ಕಟಿಲಲ್ಲದೆ ದಿವ್ಯಭೋಜನಂ ಪೆಱತುಂಟೇ ॥ ೮೩

(ಕಾವ್ಯಾವಲೋಕನಂ, ೨೪೧.)

ಸಿತಮಿಶ್ರಿತ ಘೃತಪೂರಂ
ಸಿತಮಿಶ್ರಿತ ಸುರಭಿಗಂಧಕದಳಂ ಸದಳಂ ।

---

[1] ಶೀತ (ಆ). [2] ತ (ಆ). [3] ದ್ದಿ (ಆ). [4] ತ್ತಮರೇಂದ್ರಮಹತ್ತರೀಜನಂ (ಆ). [5] ಸುದತಿಯೋಲಗ ಸಾರೆಯೊಳಿಂದ್ರಕಾಂತೆಯರ್ (ಆ). [6] ತೀವೆ (ಕ.ಖ.ಬ) [7] ನೆ ನಡುಗಿತ್ತಾ (ಖ.ಬ). [8] ನೀಡಿದಳೊ (ಖ.ಬ).

ಸಿತದುಗ್ಧಪೂರಮೆಸೆದಿರೆ
ಸಿತನಿಷ್ಪಿಂಡಮನಭಂಡಮಂ ಮುಟ್ಟುವುದೇ ॥ ೮೪

ಬಗಿದಗುಱೊಂದದಂತೆ ತೆಗೆದಾಱುಸಿದೋಗರದೊಳ್ ಪೊದಮ್ಬು ಕ
ಮ್ಮಗೆ ಕೆನೆಗೊಂಡ ಗಡ್ಡೆಮೊಸರಂ ಸುರಿದೇಲೆಯಚೂರ್ಣವಿಕ್ಕಿ ಕಾ ।
ಯ್ದೊಗುಮಿಗೆ ಬೇಳೆಗೆಯ್ದ ಮೆಣಸಂ ತಳಿದಲ್ಲದ ಚಲ್ಲಿಯಂ ಪವ
ಣ್ಬಗೆ ಕಲಸಿರ್ದ ತಣ್ಗಳಸುಗೂಬಿನಿಳಾಪತಿಗಿತ್ತನಟ್ಟಿಯಿಂ ॥ ೮೫

(ಲೀಲಾವತಿ, ೫–೭೦.)

ಪಿಪ್ಪಿಲಿ ಚಿಲ್ಲಕಾಯ್ ಮೆಣಸು ಮಾಗುಳಿವೇರ್ ಮೊಳೆಯಲ್ಲಮೇಲೆ ಕ
ಮ್ಮಿಪ್ಪ ಸುಭದ್ರೆ ಮಾಮಿಡಿ ಕರಂಜಿಕೆಯಂಬುಟೆ ನಿಂಬೆ ನೆಲ್ಲಿಗಾಯ್ ।
ಕಪ್ಪುರಗಂಪನೊಪ್ಪಿಸುತಮಿರ್ಪರೆಮಾದುಫಲಂಗಳಾದಿಯಾ
ದುಪ್ಪಿನಕಾಯ್ಗಳಂ ಮಗಮಗಿಪ್ಪುವನಿಕ್ಕಿದನಬ್ಜಪತ್ರದೊಳ್ ॥ ೮೬

(ಲೀಲಾವತಿ, ೫–೭೧.)

ಗಾವಟೆ ಬೆಲ್ಲವತ್ತ ವರ ಮಾದಲವಂಬುಟೆ ಚಿಲ್ಲು ಚೆಳ್ಳೆಗಾ
ಯ್ಮಾವಿನ ಕಾಯ್ಗಳೊಪ್ಪುವರಗಪ್ಪರವಾಗುಳಿಗಳ್ ಸುಧಾರಸಂ ।
ತೀವಿರೆ ಕಂಪು ಪೊಂಪುಳಿಸೆಯುಪ್ಪಿನಕಾಯ್ಗಳನೇಕಮಂ ಕಲಾ
ಕೋವಿದೆಯರ್ ಕೆಲಂಬರಿಯಲಿಕ್ಕಿದರಿಕ್ಕು ಮಗುಳ್ದೆನುತ್ತಿರಲ್ ॥ ೮೭

ನಳನಳಿಸುವ ಮೆಣಸಿನ ಕರೆ
ಹುಳಿಯಲ್ಲಂ ಬಿದಿರ ಕಟಿಲೆಯೇಲಕ್ಕೀಕಾಯ್ ।
ಕಳವೆಯ ಕಾಯ್ ನೇರಿಯಕಾಯ್
ಮೊಳಗಿನಕಾಯ್ ಬೇಱೆ ಬೇಱೆ ಸವಿವಡೆದಿರವೇ ॥ * ೮೮

ಕಡಲೆಯು ಬಾಡಿ ಬೆಂದುರುಳಿಗೊಂಡುದು ಸೊಂಡಗೆ ಕೂಡೆ ಸಂಬರಂ
ಬಿಡದಗಸುಂಟುಗೊಂಡುದು ಮೊಸರ್ ಕೆನೆಗೊಂಡುದು ತುಪ್ಪಮಿಂಪನೊಂ ।
ದೆಡೆಗೆ ತೆರಿಳ್ದಿ ಕಂಪನೊಳಕೊಂಡುದು ಬಣ್ಣಿಸಿ ಪೇೞೆ ಚೆಲ್ವನ
ಪ್ಪಡಿಗೆಗಳೆಲ್ಲಮಿಲ್ಲಿ ದೊರೆಕೊಂಡಪುವೇನುಣಿಸೊಳ್ಳಿತಾದುದೋ ॥ ೮೯

ಗರಗರನಾದುದು [1]ಕೂಪ್ ನೆಯ್
[2]ಸು[2]ರಯಿಯ[1] ಕಂಪಾಯ್ತು ಸಟ್ಟುಗಕ್ಕಂ ಮೊಸರ್ಗಂ ।

---

* ಈ ಪದ್ಯ (ಕ) ಪ್ರತಿಯಲಿಲ್ಲ. [1] ೞ್ಮೆಯ್ಸರಯಿಯ (ಬ). [2] ನ್ಮ (ಕ.ಖ.ಬ).

ಪಿರಿದುಂ ಪೋರ್ಕುಳಿಯಾದುದು
ಕರಮಿನಿದಾಯ್ತು ಱಕೆ ಹೊದಕನಲ್ಲದೆ ಹೊರಕಂ ॥ ೯೦

ರಸಮೊಸರ್ವಂತಿರೆಯ್ದೆ ಪೊಸತಪ್ಪ ವಿನೋದದೊಳೆಯ್ದೆ ಸಂತನಂ
ಮಸಗುಪೊಲಂತಿರುಂಡು ಸಿರಿಗಂಧದ ಕರ್ಪುರಮೊಂದು ಕೊಪ್ಪೆಸರ್ ।
ಮಸಗುವ ನೀರದೊಂದು ಪುರುಷಂ ಬೆರಮುತ್ತಿಳಿಪೀರ್ದು ಏಳ್ದು ನೀ
ಳ್ದುಸಿರ್ದುಸಿರ್ದಿಂತಿದೇವ ಪೆಱತೇಂ ನುಡಿ ಸಂತಸದಂತನೆಯ್ದುರೇ ? ॥ ೯೧

ಪೊತ್ತದೆ ಪೊಗೆಸುತ್ತದೆ ನಸು
ಬತ್ತದೆ ಕೆಂಪಡರ್ದು ಬೆಂದ ಪಾಗಲಕಾಯಂ ।
ಪತ್ತೆಂಟು ತುತ್ತಿದಲ್ಲದೆ
ಚಿತ್ತಂ ತಣಿಗುಮೆ ನರಸ್ವತೀಮಣಿಹಾರಾ ॥ ೯೨

ಬೆಳ್ಳಿಯ ಬೆಳ್ಪನಾವರಿಸಿ ಶಂಖದ ವರ್ಣಮನೌಂಕಿ ಕರ್ಪುರ
ಕ್ಕುಳ್ಳ ಗುಣಂಗಳಂ ತೊಱಿಸಿ ಮಲ್ಲಿಗೆಯೊಳ್ಸಮನಾಗಿ ತೋರ್ಪ ನೀ ।
ರುಳ್ಳಿಯಗಡ್ಡೆಯಂ ಮನದೊಳಟ್ಟಿಯೊಳಾವಗಮೊಂದುತಕ್ಕೆಯಂ
ಚಲ್ಲಿಸಿ ಜಾಜಿಯಂ ಕಲಸಿ ಮೆಲ್ಲದ ಮಾನವನೇನಬಲ್ಲವಂ ॥ ೯೩

ಏಗೆಟ್ಟುದೆಂದು ಪಟಿಯಃ
ಲ್ಲಾಗದು ನತ್ಪುರುಷರಪ್ಪರಿನಿಸಿನಿಸಿಂದಂ ।
ಮೂಗಿಂಗೆ ಕಂಪನೊದವಿಪ
ದೋಗರದುಳ್ಳಿಯನೆ ಪಟಿದನಸುಗತಿಗಿಟಿದಂ ॥ ೯೪

ಮದಗಂದೇಭವಿಳಾಸಯಾನಮ[1]ನತ[1]ಪ್ರೌಢ್ಢೀನಯಾನಂ ತುರಂ
ಗದ[2]ವುಲ್ಲಂ[2]ಘಿತಯಾನ[3]ಮ[3]ಶ್ವತರಲೀಲಾಯಾನಮಾಂದೋಳನಂ ।
ಮದಯಾನಂ ನೆಱೆದೊಪ್ಪಿ ರಾಜಗೃಹಮಂ ಪೊಕ್ಕಂ ಪುರಸ್ತ್ರೀಚಲ
ನ್ಮದಿರಾ[4]ಹಾರ[4]ಮರೀಚಿ [5]ಚಿತ್ರಿತಕದಂಬೀಭೂತಮಾಳಿವ್ರಜಂ[5] ॥ ೯೫

(ಅನಂತನಾಥಪುರಾಣಂ, ೭--೫೫.)

ಓರಂತೆ ಮೆಚ್ಚಿದಂ ಕೃತಿ
ನಾರವನಕ್ರೀಡನಕ್ಕೆ ಹೊಯ್ಸಳವಂಶೋ ।

---

[1] ರದ (ಅ). [2] ಪೋರಂ (ಅ). [3] ವಿ (ಕ.ಖ.ಬ). [4] ಪಾಂಗ (ಅ).
[5] ಬಂದಿದಿರ್ಗೊಳಲ್ ತನ್ನಂ ಮಹೋತ್ಸಾಹದಿಂ (ಅ).

ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೯೬

ಇದು ನರಸ್ಪತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ಷ್ಟಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವ ಕಟಕಾಚಾರ್ಯ ನುಕವಿ
ಸುಮನೋಬಾಣ ಜಾಮಾತ್ಯ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ವನವಿಹಾರವರ್ಣನಂ ಏಕಾದಶಾಶ್ವಾಸಂ ಸಂಪೂರ್ಣಂ.

ಜಲಕ್ರೀಡಾವರ್ಣನಂ

ಬೆಮರಂ ವಾರಿವಿಲಾಸಮಂ ಸಲಿಲಧಾರಾಯಂತ್ರಮಂ [1]ವಾಃ[1]ಪ್ರವೇ
ಶಮನಾಲೇಪನ ಕಂಪಮಂ [2]ಮುಳಿಸು ಲೀಲಾ[2]ಯುದ್ಧಮಂ ಕಾಮಿನೀ।
ಶ್ರಮಮಂ ಮೂಡಿ ಮುಟುಂಗುತಿರ್ಪ ಪರಿಯಂ [3]ಮೆಯ್ಯುರ್ಬುಮಂ ಚೆಲ್ವು[3]ಮಂ
ಕ್ರಮದಿಂದಂ ಪೊಱಮಟ್ಟು ನಿಂದ ನಿಲವಂ ಪೇೞ್ವರ್ ಜಲಕ್ರೀಡೆಯೊಳ್ ॥ ೧

ವನಲಕ್ಷ್ಮೀಶತಮಂಗಜಂಗೆ ಶತಸಾಹಸ್ರಪ್ರಸೂನೇಕ್ಷುಚಾ
ಪನಿಕಾಯಂಗಳನೀವಪೋಲ್ ತರುಣಿಯರ್ ತಂದಿತ್ತು [4]ಪಂ[4] ಪುಷ್ಪಮಂ ।
ಡನಮಂ ತಾಳ್ದಿ ಸರೋವರಕ್ಕೆ ತಳರ್ದಂ ವಾಃಕೇೞ್[5]ಶಕ್ರಪ್ರಭೂ
ಪನ ತಾಮ್ರ[6]ದ್ವಿಪದಂತಿರುನ್ನಮಿತಯಾನಂ ರತ್ನಮಾಲಾನ್ವಿತಂ ॥ ೨

(ಅನಂತನಾಥಪುರಾಣಂ, ೭–೨೪.)

ನೆಲೆಮೊಲೆ ಪೊಣರ್ವಕ್ಕಿಗಳಂ
ವಳಿ ವಳಿಗಳನಾಸ್ಯಬಿಂಬಮಂಬುರುಹಮನ ।
ಗ್ಗಲಿಸೆ ಕಲಹಂಸಯಾನೆಯ
ರಲಗೊಳನಲಗೊಳಕೆ ಬಿರ್ದುವಂದಂತಿರ್ದರ್ ॥ ೩

(ಅನಂತನಾಥಪುರಾಣಂ, ೭–೨೬.).

ವನಕೇಳೀಶ್ರಾಂತಕಾಂತಾಜನದ ಮುಖಸರೋಜಂಗಳೊಳ್ ಪಾಯ್ದು ತುಂತು
ರ್ದನಿಯಂ ಪೇೞುತ್ತೆ ಮತ್ತ[6]ಶ್ರ[6]ಮಸುರಭಿಪಯೋಬಿಂದುವಂ ತಂದು ನೀರ್ವೂ ।
ವಿನ ಕಂಪಂ ಕೊಟ್ಟು ಪರ್ಬಿತ್ತ ಭಿನವಮಧುರಾಮೋದನಿಃಶ್ವಾಸದಿಂ ತ
ಣ್ಣನೆ ತೀಡಿ[7]ತ್ತೊ[7]ಂದು ಭೃಂಗದ್ವಿಗುಣಿತಗಣಿಕಾಕೇಶಭಾರಂ ಸಮೀರಂ ॥ ೪

(ಲೀಲಾವತಿ., ೧೩–೧೧೩.)

ಅಳಿಗಳ ರತ್ನಕದಂಬದ
ಬೆಳಗಿಂ ಬಹುವರ್ಣಜಲಮನಾಂತಕಟಾಗಂ ।

---

[1] ವಾರಿ (ಅ. ಕವಿಚ). [2] ತುಮುಳಿಲಾ (ಖ.ಬ). [3] ಮೇೞ್ಪಟ್ಟವರ್ಣಶ್ರಮಂ (ಖ.ಬ). [4] ಮುಂ (ಖ.ಬ). [5] ಶಕ್ರಾಭ್ರಮೂಪನತಾಭ್ರ (ಅ). [6] ಭ್ರ (ಅ). [7] ತ್ತಂ (ಅ).

ಗಳ ನಡುವೆ ಪೆತ್ತ ಮಱಿಯಂ
ಪಿಳುಗಾಡಿಸುವಂತೆ ಸರಸಿ ಪಡೆದುದು ಚೆಲ್ವಂ ॥ ೫

(ಅನಂತನಾಥಪುರಾಣಂ, ೭–೨೫.)

ಹರಿನೀಲೋಪಲಪಟ್ಟಿಕಾಘಟಿತ ಸೋಪಾನಂಗಳೊಳ್ ತೀರಮಂ
ದರ ಕಲ್ಲೋಲವಿಲೋಲಮಾಳಿಕೆಗಳೊಳ್ ಕಾಂತಾಪ್ರತಿಚ್ಛಾಯೆ ತ ।
ಳ್ತರೆ ಕಾಸಾರವಿದಲ್ಲದಲ್ಲದು ಮನೋಜಬ್ರಹ್ಮನಿರ್ಮಾಣನಂ
ತರುಣೀರತ್ನಮಹಾನಿಧಾನಮೆನೆ ಕಣ್ಗಿಂಬಾಯ್ತು ಪದ್ಮಾಕರಂ ॥ ೬

(ಅನಂತನಾಥಪುರಾಣಂ, ೭–೩೨.)

ಬನದೊಳಗುಳ್ಳ ಹಂಸೆ ಗಿಳಿ ಕೋಗಿಲೆಯೆಂಬಿವು ಮೆಚ್ಚಿ ಬಂದುವಂ
ಗನೆಯರ ಭಂಗಿವೆತ್ತ ನಳಿತೋಳ್ಗಳಿಗೆಂಬಿನಮೇಂ ಸರೋಜಲೋ ।
ಚನೆಯರ ಕಯ್ಯೊಳೊಪ್ಪಿದುವು ಮುತ್ತಿನ ಸುತ್ತಿನ ಪಚ್ಚೆಸಾರದ
ಚ್ಚಿನ ಹರಿನೀಲಮಾಲಿಕೆಯ ಸಂಘಟನೌಜಲಯಂತ್ರಸಂಕುಲಂ ॥ ೭

(ಅನಂತನಾಥಪುರಾಣಂ, ೭–೨೭.)

ಅರಗಿಳಿಯಂಚೆ ಕೊಂಚೆ ಪೊಣರ್ವಕ್ಕಿ ಕುಕಿಲ್ ನವಿಲಬ್ಜಮುತ್ಪಲಂ
ಕರಿ ತುರಗಂ ಗಜಾರಿ ಮಕರಂ ಮೃಗಮೆಂಬಿವಱೊಂದು ಮಾಜ್ಕೆಯಿಂ ।
ಪರಿಜಳವಟ್ಟ ಜೀರ್ಕೊಟವಿಗಳ್ ಕರಪಲ್ಲವದೊಳ್ ವಿಳಾಸಮಂ
ಧರಿಯಿಸೆ ಜಂತ್ರಕಾರ್ತಿಯರಪೊಲ್ ನೃಪಕಾಂತೆಯರಾದವೊಪ್ಪಿದರ್ ॥ ೮

ಕಡುನೀಱು ಜಂತ್ರದಂಚೆಯ
ನಡಿಗಡಿಗಾ ನೀರೊಳದ್ದಿದಳ್ [1]ನಡೆಯೊಳ್ ತಾಂ ।
ಗಡಣಂ[1] ಬರೆ ಪುರುಡಿಪುವೆ
ನ್ನೊಡ[2]ನೆಂದೊಯ್ದೊಯ್ದು[2] ಪುಡುಕನೀರದ್ದುವವೋಲ್ ॥ ೯

(ಮಲ್ಲಿನಾಥಪುರಾಣಂ, ೬–೧೧೦.)

ನೆಲೆಯಂ ನೋಡಿಸಿ ಮುನ್ನ ನೋಡಿದವರಿಂ ಮತ್ತಾ ಮನಶ್ಶಂಕೆಯಿಂ
ಮಲರುತ್ತುಂ ಸಖಿಯರ್ಕಳಂ ಪಿಡಿಯುತುಂ ನಿಂದೂರುಮಂ ಪೊಕ್ಕು ಜ ।
ಕ್ಕುಲಸುತ್ತುಂ ತೊಡೆತುಂಬಿ ಮೆಯ್ಯುಗಿವುತುಂ ಮೈದೋರ್ಪ ಮೀಂಗಂ ವಲಂ
ಕೆಲೆನುತ್ತುಂ ಕಡುಗಾಡಿ ಮಿಕ್ಕ ಕೊಳನಂ ಪೊಕ್ಕರ್ ಕೆಲರ್ ಬಾಲೆಯರ್ ॥ ೧೦

---

[1] ವೆಡೆಯೊಳ್ ಗಡನಾಣ್ಬದೆ (ಅ). [2] ನೆಂದುಯ್ದೆಲ್ಲಿ (ಅ) ನೊಡನೆಂದೊಯ್ದು (ಕ).

ಇಟಿದೊಡೆ ಕೂರದ ಪೆಂಡಿರ
ಕೆಬಗಾದಪೆವೆಂದು ರತ್ನಸೋಪಾನಕದೊಳ್ ।
ಗಬಗಬನಿಟಿಯದೆ ಬಾಣಿತಿ
ಪೊಱೆಮೆಟ್ಟುವ ತೆಱದಿ ಗುಜ್ಜುಮೆಟ್ಟುವರರೆಬರ್ ॥ ೧೧
(ಅನಂತನಾಥಪುರಾಣಂ, ೭–೩೪.)

ಬಕ ಕು[1]ರ[1]ರ ಪಕ್ಷವಿಕ್ಷಿ
ಪ್ತ ಕಂಜಕಿಂಜಲ್ಕಪುಂಜ ಪಿಂಜರಿತಾಜ್ಕೋ ।
ದಕ ಪರಿಪೂರ್ಣತಟಾಕ
ಪ್ರಕರಸರೋನಿಕರರಂಜಿತಾಶಾವ[2]ಲ[2]ಯಂ ॥ ೧೨
(ಆದಿಪುರಾಣಂ, ೧–೫೮; ಕಾವ್ಯಾವಲೋಕನಂ, ೫೧೬.)

ಜಳಪಕ್ಷಿವ್ರಾತ ಕೋಲಾಹಲಮೊಗೆವಿನೆಗಂ ಪಕ್ಕವಾದ್ಯಂಬೊಲುದ್ಯ
ನ್ನಳಿನೀಕಿಂಜಲ್ಕಪುಂಜಾವೃತ ಜವನಿಕೆವೊಲ್ ಪಿಂಗೆ [3]ಭೃಂ[3]ಗಾಳಿಯಿಂ ಪೂ ।
ಗೊಳನಂ ಪೊ[4]ಕ್ಕಂತು[4] ರಂಗಂಬುಗುವ ತೆಱವೆ ನೇತ್ರಪ್ರಭಾಜಾಲಪುಷ್ಪಾಂ
ಜಳಿಯಂ ಸೂಸುತ್ತೆ ಕಾಂತಾಜನಮದು ಜಲಕೇ[5]ಳ್ಯುಜ್ಜ್ವಲಲ್ಲಾಸ್ಯ[5]ಲೋಲಂ ॥ ೧೩
(ಲೀಲಾವತಿ, ೧೩–೧೧೫.)

ಸೆಳೆ[6]ದು[6] ಮರ[7]ಲ್ಚಿ[7] ಸೋಗೆನಿಱಿಯಂ ಮೃದುಜಂಘೆಯನೊಯ್ಯನಂ[8]ಟಿ[8] ಮೈ
ಪುಳಕಿಸಿ ಸೋಂಕಿ ನುಣ್ಪೊಡೆಯ ಮೆಲ್ದ[9]ಳ್[9]ಮಂ ಬಿಡೆ ತಳ್ತು ಮಧ್ಯಮಂ ।
ಕಳಶಕುಚಂಗಳಂತ[10]ರದೆ[10] ಪೊ[11]ಕ್ಕು[11]ಳಿವಲ್ಲಿ ತರಂಗಹಸ್ತದಿಂ
ಮಳಯಸಮೀರಣಂ ಸರಸವಾಡಿದನಗ್ಗದ ಪೆಂಡವಾಸಮಂ ॥ ೧೪
(ಅನಂತನಾಥಪುರಾಣಂ, ೭–೩೩.)

ತೆರೆಗಯ್ಯಿಂ ತುಡುಕುತ್ತು ಮೊಳ್ದೊಡೆಯನಾದಂ ನೀಪಿಯಂ ನೀವಿ ಬಿ
ತ್ತರಿಸುತ್ತುಂ ವಳಿಯಂ ಪಳಂಚಱೆಯುತುಂ ವಕ್ಷೋಜಮಂ ನಿಳ್ಕಿ ನೇ ।
ವರಿಸುತ್ತುಂ ನೆಲೆವೆರ್ಚಿ ಕಾಮುಕನವೊಲ್ ನೀರೇಱುತಿರ್ದತ್ತು ತ
ತ್ತರುಣೀಸಂಕುಳಮೆಲ್ಲಮೀಗಳೊಳಗಾಯ್ತೆಂಬಂತೆ ಪದ್ಮಾಕರಂ ॥ ೧೫
(ಚಂದ್ರಪ್ರಭಪುರಾಣಂ, ೭–೧೨೬.)

ಇದು ಪಿರಿದುಂ ವಸಂತ[12]ಸಖ[12]ಯೌವನರತ್ನನಿಧಾನಮಂತದ
ಲ್ತದು ಕುಸುಮಾಸ್ತ್ರಶಸ್ತ್ರಚಯಕೋಶಮ[13]ಹೀ[13]ಗೃಹಮಂತದಲ್ತು ಮ ।

---

[1] ಕ (ಕ.ಖ.ಬ). [2] ಳಿ (ಖ.ಬ). [3] ಸುಯ್ (ಅ). [4] ಕ್ಕರ್ತ (ಖ.ಬ). [5] ಳೀಚ ಲಲ್ಲಾಸ್ಯ (ಖ.ಬ). [6] ವ (ಖ ಬ). [7] ಲ್ವ (ಕ.ಖ.ಬ) [8] ಟೆ (ಅ). [9] ಡ (ಅ). [10] ಳೆದು (ಅ). [11] ಕ್ಕಿ (ಅ). [12] ಸಖಿ (ಅ). ಸಿಖಿ (ಕ). [13] ಹಾ (ಖ.ಬ).

ತ್ತಿದು ರತಿನಾಥಕಲ್ಪಲತಿಕಾಪ್ರ[1]ಕರೈ[1]ಕ ಕೃತಾಲವಾಲಮೆಂ
ಬುದನೆನಿಸಿತ್ತು ಸಂದಣಿಸಿ ನಿಂದಬಲಾವಳಿಯಿಂದೆ ಪೂಗೊಳಂ ॥ ೧೬

(ಚಂದ್ರಪ್ರಭಪುರಾಣಂ, ೭–೧೨೭.)

ಕೀರದ ಹಂಸದ ಪಿಕದ ಚ
ಕೋರದ ಚಕ್ರಾಹ್ವದಂತೆ ಮಾಡಿದ ಗರುಡೋ ।
ದ್ಗಾರದ ಮುತ್ತಿನ ನೀಲದ
ಹೀರದ ಮಾಣಿಕದ [2]ಪೊಳೆವ[2] ಜೀರ್ಕೊಟವೆಗಳಂ ॥ ೧೭

(ಚಂದ್ರಪ್ರಭಪುರಾಣಂ, ೭–೧೨೮.)

ಚರಣೋಪಾಸನೆಗೆಯ್ದು ಮೆಲ್ಲನೆ ಕಟಾಂತರ್ಭಾಗ[3]ದಿಂ[3]ದೂರುವಂ
ತೆರೆಗಯ್ಯಿಂ ಪೊಡೆದೇಱಿನೂಂಕಿ ಪುಳಕಶ್ರೀಯಂ ತ[4][ನೂಲೇ][4]ಖೆಯೊಳ್ ।
ವರನಾರೀಜನಕುಂಟುಮಾಡಿ ಸಲಿಲಕ್ರೀಡಾಸಮುದ್ಯೋಗದೊಳ್
ಸುರತೋದ್ಯೋಗಿಯ ಮಾಟ್ಕೆಯಿಂದೆ ಕಡುಚೆಲ್ವಂ ತಾಳ್ದುದಬ್ಜಾಕರಂ ॥ ೧೮

ನಿಱಿಯಂ ನೂಸಿ ಕಲಂಕಿ ನುಣ್ಗೊಡೆಗಳೊಳ್ ಕಯ್ಯಿಕ್ಕಿ ಮೆಯ್ವೆರ್ಚುತುಂ
ಪೊಱವಾಱಿಂ ಪರಿದೇಱಿ ಪೊಕ್ಕು ಪೊಕ್ಕುಱೊಳಪೊಕ್ಕೆಯ್ತಂದು ನವ್ಯಾನಮಂ ।
ತೆಱೆದುತ್ತುಂಗ ಕುಚಾಗ್ರಮಂ ತುಡುಕಿ ಗಾಢಾಲಿಂಗನಂಗೆಯ್ದು ಕೈ
ಸೆಱಿಗೊಂಡತ್ತು ತರಂಗಸಂಹತವಿಚಾನಂಗೋದ್ಭವಕ್ರೀಡೆಯಂ ॥ ೧೯

ತುಡಿಸುತ್ತುಂ ನೀರನಂಗದ್ಯುತಿಯಿನವಯವಚ್ಛಾಯೆಯಿಂ ತಮ್ಮನಂದಿ
ರ್ಮಡಿಸುತ್ತುಂ ನೇತ್ರನೀಲೋತ್ಪಲದ ನೆಱಲ ಬಂಬಲ್ಗಳಿಂ ನೆಯ್ದಿಲಂ ನೂ ।
ರ್ಮಡಿಸುತ್ತುಂ ವಕ್ತ್ರಕಂಜಂಗಳೊಳೆ ಕಮಲಪುಂಜಂಗಳಂ ಕೂಡೆ ಸಾಸಿ
ರ್ಮಡಿಸುತ್ತುಂ ಪೊಕ್ಕುದಬ್ಜಾಕರಮನೊಲವಿನಿಂ ಕಾಂತಕಾಂತಾಕದಂಬಂ ॥ ೨೦

(ಲೀಲಾವತಿ, ೧೩–೧೧೬.)

ಲಲನೆಯರ ನೊಸಲ ಕದಪಿನ
ಮೊಲೆಗೆಲದ ಪೊದಟ್ಟಿ ಬೆಮರಬಿಂದುಗಳಾಗಳ್[5] ।
ಜಲಕೇಳಿಗೆಳಸಿದುದನಱಿ
ಗಲಿಪಲೊಡಂ ತಳರ್ದು ಕೊಳಕೆ ನೃಪಕಳಹಂಸಂ ॥ ೨೧

ತೆರೆಗಳ್ ವಕ್ಷೋಜಘಾತಕ್ಕಗಿದು ತೆಗೆವವೋಲ್[6]ಮೀ[6]ಱಿ ಮರ್ಯಾದೆಯಂ ವಾ
ರಿರುಹಂಗಳ್ ವಕ್ತ್ರಚಂದ್ರಪ್ರಭೆಗೆ ಬೆ[6]ಗಡು[6]ಗೊಂಡಂತೆ ನೀರೊಳ್ ಮುಬುಂಗು ।

---

[1] ಮದ್ಯೈ (ಕವಿಚರಿತ್ರೆ ನಂ ೧–೩೭೮). [2] ಪಲಪು (ಖ.ಬ). [3] ಮಂ (ಕ). [4] ನುರ್ತೇ (ಕ.ಖ.ಬ). [5] ನೀ (ಖ.ಅ). [6] ಡಗು (ಬ).

ತ್ತರೆ ಹ[1]ಸ್ತಾಂಭೋಜದಿಂ[1]ದುತ್ಪಲದಳಿಕುಳಮಂ ಸೋಪುತುಂ [2]ಪೊ[2]ಕ್ಕುದಬ್ಜಾ
ಕರಮಂ ಕಾಂತಾಜನಂ ಪೆರ್ಚಿ[3]ಸುತುಮಲಘುಕಾಂಚೀಪದಾಘಾತದಿಂದಂ[3] ॥ ೨೨

(ಲೀಲಾವತಿ, ೧೩–೧೧೭.)

ನಿಱು ತೆಕ್ಕಿದರಳೆ ತೆರೆಗಳ್
ಪೊಱವಾಱುಂ ಭೋಂಕನಪ್ಪೆ ಘನನುಣ್ಗೊಡೆಯಂ ।
ನಿಱು ಸೋಂಕಿ ಸೋಂಕೆ ಕೊಳನಂ
ತುಱುಗೆವೆಗಳ್ ತುಱುಗೆ ಪೊಕ್ಕುದಬಲಾನೀಕಂ ॥ ೨೩

ತೆರೆಗಯ್ಗಳಿಂದಮಾಂತುದು
ಸರೋವರಂ ನಿಱುಯ ತೆಕ್ಕೆಯಂ ಮದನಮಹಾ ।
ಗುರುವೋದಿಸಲ್ಕೆ ಬಿರ್ಚಿದ
ಸುರತದ ಹೊತ್ತಗೆಯನಾಂತ ಶಿಷ್ಯರ ತೆಱದಿಂ ॥ ೨೪

ಪುದಿದಿರೆ ಪಕ್ಷದವೋಲ್ ಮೃಗ
ಮದಪತ್ರಂ ಕಾಂತಕರಜ ಕುಲಿಶಕ್ಷತಕ ।
ಳ್ಕಿದವೋಲ್ ಪೊಕ್ಕವು ಕೊಳನೆಂ
ಬುದಧಿಯನಬಲೆಯರ ಕಠನಕುಚಕುಲಗಿರಿಗಳ್ ॥ ೨೫

ಕಳನೂಪುರ ನಿನದಂಗಳ
ನೆಳವೆಂಡಿರ್ ಬಯಕೆಗೊಟ್ಟರಕ್ಕುಮೆ ಹಂಸಾ ।
ವಳಿಗೆನೆ ಕೊಳನಂ ಪೊಕ್ಕಾ
ಗಳೆ ಮಾಣ್ದಪು ಗಾಡಿವಡೆದ ನೇವುರದನಿಗಳ್ ॥ ೨೬

ಲಲಿತಂ ಕಾಮುಕನಂತೆಪೊ
ಲೊಳಪೊಕ್ಕೊಳ್ದೊಡೆಯನೆಬವಿ ಕಾಂಚೀಪದಮಂ ।
ಬಳಸಿ ವಿಟನಂತೆ ನಾಭಿ
ಸ್ಥಳದೊಳ್ ನೆಲೆಗೊಂಡು ನಿಂದುದಾ ಕಾಸಾರಂ ॥ ೨೭

ಅವರೋ[4]ಹ[4]ಪ್ರಮದಾಕದಂಬವಿ[5]ದ[5]ಳತ್ಕಾಶ್ಮೀರಸಾರಂ ಮೃಗೋ
ದ್ಭವಕ[6]ಲ್ಪಂ[6] ಘನಸಾರರೇಣುಪಟಲಂ ಶ್ರೀಖಂಡಜಂ ಬಾ[7]ಳಮೆಂ[7] ।

[1] ಸ್ತಾಬ್ಜಂಗಳಿಂ (ಅ). [2] ಮಿ (ಕ.ಖ.ಬ). [3] ಸಿದುದಲಘುಕಾಂತಾಪದಾ ಘಾತದಿಂದಂ (ಖ.ಬ). [4] ಧ (ಅ). [5] ಗ (ಅ). [6] ಲ್ಕಂ (ಗ). [7] ಳೆಯಂ (ಅ).

ಬಿವಱುಂ [1]ತೀವೆ[1] ತರಂಗಮಾಲೆ ರತಿ ಕಂದರ್ಪಂಗೆ ತೀವಿ[2]ಟ್ಟ[2] ಬ
ಣ್ಣವುರಂ ತಾನೆನೆ ಕಣ್ಗೆ ಮಾಡಿದುದು ಕಾಸಾರಂ ಸುಖಾಸಾರಮಂ ॥ ೨೮

(ಅನಂತನಾಥಪುರಾಣಂ, ೭–೫೨.)

ಅಡರೆ ಕವಲ್ತುದೊಂದೆಡೆ ಮೃಗೋದ್ಧವದಿಂ ಬೆಳರ್ವಟ್ಟು ನಿಂದುದೊಂ
ದೆಡೆ ಮಲಯೋದ್ಧವಪ್ರಸರ[3]ದಿಂ ಕದಡಿಂ[3] ಕಡುಗೆಂಕಮಾದುದೊಂ ।
ದೆಡೆ ನವಕುಂಕುಮದ್ರವದಿನುರ್ಬಿಪ ಕ[4]ರ್ಪಿಡಿದಿ[4]ರ್ಪನಾಳ್ದುದೊಂ
ದೆಡೆ ಪರಿಮಿಶ್ರಿತಾ[5]ದ್ರ್ರ[5]ಮಹಿಷೀ ರಸದಿಂ ಸರಸೀವಿಭಾಗದೊಳ್ ॥ ೨೯

(ಶಾಂತಿಪುರಾಣಂ, ೮–೨೯.)

ತೊಟ್ಟನೆ ಮಂಗಳಾನಕರವಂ ನೆಲೆವೆರ್ಚೆ ಸರಿತ್ತಟಂಗಳೊಳ್[6]
ಕಟ್ಟಿದಿರಾಗಿ ಸಾರ್ಚಿ ನೃಪವಲ್ಲಭನಂ ಪೊಸಪೂವಿನಿಂದಮಾ ।
ಯ್ದಿಟ್ಟೊಡನಾರ್ದು ವಾರವಧುವರ್ ಜಳಯಂತ್ರದಿನೊತ್ತೆ ಚಿತ್ರಮಂ
ನಿಟ್ಟಿಸಿ ಬಂದು ಪತ್ತಿದುವು ಸಂಧಿಸಿ ಕುಂಕುಮವಾರಿಧಾರೆಗಳ್ ॥ ೩೦

ಪರಿದೊಳಪೊಕ್ಕು ಜೀರ್ಕೊ[6]ಟ್[6]ಪ[6]ಯಂ ತೆಗೆ[7]ದ[7]ತ್ತಿದ ಕಯ್ಯೊಳೊರ್ವರೊ
ರ್ವರನಿರದೊತ್ತೆ ಪಂಜರಿಸೆ ಮೇಲೆ ಮುಸುಂಕುವ ಕುಂಕುವಾಂಬುಸಂ ।
ಕರದೊಳದೊಂದು ಕೆಮ್ಮುಗಿಲ ಕಾವಣದೊಳ್ ಕುಡುಮಿಂಚುಗಳ್ ತಡಂ
ಬರಿ[8]ದ[8]ವೊಲೇಂ ಬೆಡಂಗ[9]ಮರ್ದುದೋ[9] ರುಚಿ[10]ಮದ್ವಿ[10]ಚಳಲ್ಲತಾಂಗಿಯರ್ ॥ ೩೧

(ಅನಂತನಾಥಪುರಾಣಂ, ೭–೨೮.)

ಮಿಸು[11]ಪಲ್[11] ತೋಳವೊದಲ್ ತುಳುಂಕೆ ಮೊಲೆ ಮುಯ್ವಂ ಮೀಱೆ ಗಾತ್ರಾ
ಪ್ರಸರಂಬೆತ್ತಿರೆ ಕೊಂಕಿ ಬ[12]ಳ್ಕೆ[12] ನಡು ಕೊಂಬಂ ತೀವಿಕೊಂಡೆತ್ತಿ ಪೂ। [ಪರಂ
ಣಿಸಿ ತನ್ನಂ ಬಿಡೆ ಪೊಯ್ದು ಪೋಪವಳ ನಿಂದೊಡ್ಡೊಡ್ಡೆನುತ್ತೊರ್ವಳೊ
ಡ್ಡಿಸಿ ಪೊಯ್ಯಲ್ ನಿಮಿರ್ದೊಂ[13]ದೆ[13] ಭಾವದೊಳೆ ಭಾಪ್ಪೋದ್ಭೂತನಾದಂ ಸ್ಮರಂ ॥

(ಅನಂತನಾಥಪುರಾಣಂ, ೭–೨೯.)

ಮಂಡಳಿಗೊಂಡು ಸಿಂಪಿಸುವ ಕುಂಕುಮವಾರಿಯ ಜೆನ್ನ ಕೆಂಪು ಕೈ
ಕೊಂಡು ದುಕೂಲಚೇಲದ ವಿಲಾಸಿನಿಯರ್ಕಳ ದೇಸೆ [14]ತಂ[14]ದುದಿಂ ।

---

[1] ತೇಂಗೆ (ಅ). [2] ರ್ದ (ಕೆ.ಖ.ಬ). [3] ದೊಳ್ ಮುದದಿಂ (ಕ.ಖ). [4] ರ್ಪಿನದಿ (ಅ). [5] ದ್ರಿ (ಖ.ಬ). [6] ವಿ (ಖ.ಬ). [7] ದೊ (ಕ.ಖ.ಬ). [8] ವ (ಅ). [9] ಡರ್ದರೋ (ಅ). [10] ರು (ಖ.ಬ). [11] ಪಂ (ಅ). [12] ಳ್ಕಿ (ಖ.ಬ). [13] ದ (ಅ). [14] ವಂ (ಖ.ಬ).

ದುಂಡಿಗೆ ಸಾಧ್ಯಮಾಯ್ತೆನಗೆ ಮೂಜಗಮೀ ಜಲಕೇಳಿಯಿಂದಮೆಂ
ದುಂಡಿಗೆಯೊತ್ತಿ ತೋಱಿಸಿ ತೆರಳ್ದಿದನಂಗಜನೆಂಬ ಭಂಗಿಯಂ ॥ ೩೩

(ಅನಂತನಾಥಪುರಾಣಂ. ೭–೩೧.)

ಇಟಿಪಿದ ಕಟಾಹಶತದೊಳ್
ಸುಟಿಸುಟಿದೋರೊರ್ಮೆ ಮೊಗೆಯಲೆ[1]ಯ್ದುವ[1] ನೀರ್ ಜೀ ।
ರ್ಕೊಟವೆಯ ಕೊಂಬಿನ ಜಂತ್ರದ
ಘಟಿಯ[2]ಕ್ಕೇಂ ಪಿ[2]ರಿದೊ ನೃಪನ ವನಿತಾನಿವಹಂ ॥ ೩೪

(ಅನಂತನಾಥಪುರಾಣಂ, ೭–೩೧.)

ಜಳಜಾತದ್ವಯಮೇ ತಮೆತ್ತಿದಪುವಂಭೋಜಾಳಿಗೆಂಬಂತೆ ಕೆಂ
ದಳಿರ್ಗಳ್ಗೊಂದಳಮರ್ಘ್ಯಮಿತ್ತಪುವು ಶೀತದ್ಯೋತಿಗೆಂಬಂತೆ ಕೋ ।
ಮಳೆಯರ್ ಕೆಂದಳದಿಂ ಪೊಗಕ್ಕೆ ಜಳಮಂ ತುಳ್ಕಾ[3]ಡಿ ಮು[3]ಚ್ಕಾಡಿದರ್
ಪ್ರಳಯಕ್ಷುಬ್ಧಮನೋ[1]ಜವಾರ್ಧಿ[1]ಗಳೊಳೆತ್ತಲ್ ನೋಡೆ ಚಿತ್ತಪ್ರಿಯಂ ॥ ೩೫

(ಅನಂತನಾಥಪುರಾಣಂ, ೭–೩೬.)

ಸುರದೀರ್ಘಿಕೆಯೊಳ್ ಕರಪು
ಷ್ಕರದಿಂದಭ್ರಮುಮನಭ್ರಮೂಪತಿ ತಳಿಪಂ ।
ತಿರೆ ಜಳಯಂತ್ರದೆ ತಳಿದಂ
ಸರಸಿಯೊಳರಸಂ ಶಶಿಪ್ರಭಾವಲ್ಲಭೆಯಂ ॥ ೩೬

(ಚಂದ್ರಪ್ರಭಪುರಾಣಂ, ೭–೧೨೯.)

ಜಲಯಂತ್ರಮನೊತ್ತೆ ನೃಪಂ
ಲಲನೆಯ ಕುಚಯುಗಳ ಮಧ್ಯದಿಂದಿಟಿಯಲ್ ತ ।
ಜ್ಜಳಕೆ ತೆಱಪೀಯದಿರ್ದ
ತ್ತೊಳಕೊಂಡ ಪಯೋಧರಾಖ್ಯೆಯಂ ಪ್ರಕಟಿಪವೋಲ್ ॥ ೩೭

(ಚಂದ್ರಪ್ರಭಪುರಾಣಂ, ೭–೧೩೦.)

ನಾರಿಯ ಮೊಗಮಿನನೊತ್ತುವ
ಧಾರಾಪಾತಕ್ಕೆ ಬೆರ್ಚಿ ಜಿತವಾರಿರುಹಂ ।
ವಾರಿರುಹದ ಮಱೆಗೊಂಡುದು
ಭೀರುವನೋಲಗಿಸಿದರ್ಗೆ ಹೇಱ್ ಬಲಮುಂಟೆ ॥ ೩೮

---

[1] ಯ್ದವೆ (ಅ). [2] ಕ್ಕಿನಿವಿ (ಅ). [3] ಡೆತು (ಅ). [4] ಭವಾಬ್ಧಿ (ಅ).

ಮಡದಿಯ ಮೇಲಿಳಾಧಿಪತಿ ಕತ್ತುರಿನೀರ್ಗಳನೊತ್ತೆ ಕೂಡೆ ಪಾ
ಯ್ದಡಸಿದ ಧಾರೆಯಿಂ ವದನಪಂಕರುಹಂ ಮಱುಮಂಬಿಮಾಳೆದುಂ ।
ಪಡೆದುದು ಕರ್ಣಪೂರದಸಿತೋತ್ಪಲಮಂಜರಿ ನೀಳನಾಳಮಂ
ಪಡೆದುದು ಮರ್ಪಿಯಂ ಪಡೆದುದಾಕೆಯ ಮಧ್ಯಮನೋಜಕಾರ್ಮುಕಂ ॥ ೩೯

(ಅನಂತನಾಥಪುರಾಣಂ, ೭–೪೧.)

ತರಳಾಪಾಂಗಲಸದ್ವಿಲಾಸರಸದಿಂದೋರೊರ್ಮೆ ಲೀಲಾಪ್ರತಿ
ಸ್ಫುರಿತಭ್ರೂಯುಗವಿಭ್ರಮೈಕರಸದಿಂದೋರೊರ್ಮೆ ಸಸ್ನೇಹಭಾ ।
ಸುರಚಿತ್ತಪ್ರಸಭೋತ್ಥಭಾವರಸದಿಂದೋರೊರ್ಮೆ ಮಾದೇವಿ ಭೂ
ವರನಂ ಸಿಂಪಿಸಿದಳ್ ಸುಗಂಧರಸದಿಂದೋರೊರ್ಮೆ ತತ್ಕೇಳಿಯೊಳ್ ॥ ೪೦

(ಚಂದ್ರಪ್ರಭಪುರಾಣಂ, ೭–೧೩೨.)

ಪ್ರಮದೆಯರಂ ಮನೋಭವನೆ ನೂಟಱುದೆಚ್ಚಪನಗ್ನಿಬಾಣದಿಂ
ಹಿಮಕರಬಾಣದಿಂ ತಿಮಿರಬಾಣದಿನೆಂಬಿನಮಿಂಬುಪೆತ್ತುದೇಂ ।
ನಿಮಿರ್ದು[1]ವೊ[1] ಲೀಲೆಯಿಂದೆ ಜಳಯಂತ್ರಮನಂದು ಮಹೀಶನೊ[2]ತ್ತೆ[2] ಕುಂ
ಕುಮಜಳ ಚಂದನೋದಕ ಮ್ಯಗೋದ್ಭವ ವಾರಿನಿಯುಕ್ತಧಾರೆಗಳ್ ॥ ೪೧

(ಚಂದ್ರಪ್ರಭಪುರಾಣಂ, ೭–೧೩೩.)

ಇಟ್ಟಳಮಿಟ್ಟಟಿಮುಳಿಸಿಂ
ದಿಟ್ಟಳ್ ಕವಿರಾಜ[3]ಹಂಸ[3]ನಂ ಕಡೆಗಣ್ಗಳ್ ।
ನಟ್ಟ ಬಟಿವಿಡಿದು ನನೆಗಣೆ
ನಟ್ಟವೊಲಿರೆ ತಳದೊಳಡಸಿ ತೀವಿದ ನನೆಯಿಂ ॥ ೪೨

(ಲೀಲಾವತಿ, ೧೩–೧೫೮.)

ಸವತಿಯ ಮೇಲೆ ಜೀರ್ಕೊಟವೆಯಂ ತೆಗೆದೊತ್ತೆ ಮನಃಪ್ರಿಯಂ ಕಲಂ
ಕುವ ಬಗೆ ಕೆಂಕಮಾದ ಕಡೆಗಣ್ [4] ತಳಿರ್ವಣ್ಣಮನಾಳ್ದ ತೆಳ್ಗದಂ ।
ಪವಿರಳ ಘರ್ಮವಾರಿ ಮೆಱುವನ್ನಮದೊರ್ವಳೆಬಲ್ದು ಸುಯ್ಯೆಯುಂ
ಯುವತಿ ಕಡಂಗಿ ಕೋಪರಸದೋಕುಳಿಯಾಡಿದಳಿಕ್ಷುಚಾಪನೊಳ್ ॥ ೪೩

(ಅನಂತನಾಥಪುರಾಣಂ, ೭–೪೨.)

ಬರೆ ತೆಗೆದೊತ್ತೆ ಜೀರ್ಕೊಟವೆಯಿಂ ಪ್ರಿಯನೊತ್ತಿದ ವಾರಿಧಾರೆ [4]ತ
ಳ್ತಿರೆ[4] [5]ಚಳ[5]ಚೂಚುಕಾಗ್ರದೊಳೆಬಲ್ತರೆ ಕರ್ಚಿ ಮೃಣಾಳನಾಳಮಂ ।

---

[1] ದೊ (ಖ.ಬ). [2] ತ್ತಿ (ಖ.ಬ). [3] ಮಲ್ಲ (ಅ) [4] ನೀಳ್ದಿರೆ (ಅ). [5] ಬರ (ಬಿ).

ಬೆರಸಿದ ಜಕ್ಕವಕ್ಕಿ ಕುಣಿದಾಡುವವೊಲ್ ಕುಚಯುಗ್ಮ[1]ನರ್ತನಂ[1]
ತರಳತರಂಗ[2]ದಂಗಣದೊಳೇ[2]ನೆಸೆದಿರ್ದುದೊ ದೀರ್ಘನೇತ್ರೆಯಾ ॥ ೪೪

(ಲೀಲಾವತಿ, ೧೩–೧೪೬.)

ಬಿರಿವಿನಮೆನ್ನ ಚಿತ್ತಮಿರುಳುಂ ಪಗಲುಂ ಖಳ ನಿನ್ನ ದೂಸಱಿಂ
ಸ್ಮರನಿಸೆ ತಳ್ತು ತಾಗುವಲರಂಬುಗಳೆಯ್ದವೆ ನೀನದೇಕೆ ನಿ।
ಷ್ಕರು[3]ಣ[3] ಕರಾಬ್ಜಯಂತ್ರಮುಖಮುಕ್ತಸಿತಾಂಬುಗಳಂ ಬೆಗಟ್ಟಿನಂ
ಸುರಿಪಿನಿಸಿಲ್ಲದೆನ್ನೆರ್ದೆಯನೋವದೆ ನೋಯಿಸುವೈ ಮನಃಪ್ರಿಯಾ ॥ ೪೫

(ಲೀಲಾವತಿ, ೧೩–೧೪೫.)

ಕಿಂಜಲ್ಕಕೆ [4]ಕೆದಱುವಿನಂ
ಕಂಜದಿಸುಱು[4] ಮೋದುವಂತೆ ಕೆಂದಳದಿಂದಂ ।
ನಂಜಿಕೆ ನವರಜ[5]ನೀರಜ[5]
ಮಂಜರಿಯಂ ಮೊಗೆದು ಮೋದಿದಳ್[6] ನೃಸವರನಂ[6] ॥ ೪೬

(ಲೀಲಾವತಿ, ೧೩–೧೪೬.)

ಕತ್ತುರಿನೀರಿಂ ಕರ್ಪಂ
ಪೆತ್ತಂಗಂ ಕುಂಕುಮಾಂಬುವಿಂ ಕಡುಗೆಂಪಂ।
ಪೊತ್ತ ನಿಱು ಮೆಱುಯೆ ತಳಿರಂ
ಸುತ್ತಿದ ವನಚರಿಯನೊರ್ವಳನುಕರಿಸಿರ್ದಳ್ ॥ ೪೭

(ಚಂದ್ರಪ್ರಭಪುರಾಣಂ, ೭–೧೩೪.)

ಘುಸೃಣರಸಂ ಮೊಲೆ[7]ಯೆಡೆ[7]ಯಿಂ
ದಸಿಯಳ [8]ಬಾಸೆವಿಡಿದಿಟಿದು[8] ಸೊಗಯಿಸಿದುದು ತೆ ।
ಳ್ವಸಿಱಿ ಪೊಱುಗಣ್ಗೆ ಮಿನುಗುವ
ವಿನರತ್ತಾಂಬೂಲರಾಗರಸರೇಖೆಯವೋಲ್ ॥ ೪೮

(ಚಂದ್ರಪ್ರಭಪುರಾಣಂ, ೭–೧೩೫.)

ಸರಸಿಜದ ಸಿರಿಯನಾನಪ
ಹರಿ[9]ಸೆಂ[9] ಮನ್ಮುಖದಿನದುವೆ ನಿಜಮೆಂದು ತನೂ ।

---

[1] ಮಂಡಲಂ (ಕ.ಖ.ಬ). [2] ರಂಗದೊಳದೇ (ಅ). [3] ಣ (ಅ). [4] ಮಿಗೆ ಕೆದಱುವ ಕಿಂಜಲ್ಕದೆ (ಅ). [5] ನಿರಜೋ (ಖ.ಬ). [6] ಮಾನದನಂ (ಅ). [7] ಯುಲೆ (ಖ.ಬ). [8] ನನುಬಾಸೆವಿಡಿದು (ಖ ಬ). [9] ಸಿಯೆ (ಖ.ಬ).

ದರಿ [1]ತಡಗುಂದಿದ ಮೊಗದವೊ[1]
ಲರಸನ ಕೆಲದಲ್ಲಿ ಮುಬುಗಿದಳ್ [2]ನಲಿದೊ[2]ರ್ವಳ್ ॥ ೪೯
(ಚಂದ್ರಪ್ರಭಪುರಾಣಂ, ೭–೧೩೭.)

ನರ[3]ಸಿಜದೆಲೆಗೊಡೆ[3]ಯಂ ಪಿಡಿ
ದರಸನ ನೀರೊಯ್ಸೆ ನಿಂದು ಕು[4]ಸಿ[4]ದಂತೊರ್ವಳ್ ।
ಮರಕತದ ಹರಿಗೆಯೋಜೆಯ
ನರಲಂಬನ ಮುಂದೆ ಮೆಱೆವ ರತಿಯುವೊ[5]ಲರ್ದ[5]ಳ್ ॥ ೫೦
(ಅನಂತನಾಥಪುರಾಣಂ, ೭–೪೩.)

ಮುರಿದೆಡಗ್ಯೆ ನೀವಿಯನೋ
ನರಿಸಿರೆ ಬಲಗಯ್ಯನೊಡ್ಡಿ ಧಾರೆಗದೊರ್ವಳ್ ।
[6]ತರಲಾರ್ತಳು[6]ಭಯಕರದಿಂ
ಪ[7]ರಿವ್ಯ[7]ತದೊಳ್ ನಿಂದ ನರ್ತಕೀವಿಭ್ರಮಮಂ॥ ೫೧
(ಅನಂತನಾಥಪುರಾಣಂ, ೭–೪೪.)

ಕೋಕನದವದನೆ ಜಲಧಾ
ರಾಕದನಕ್ಕಾನಲಾಹಿದೊರ್ವಳ್ ಮೇಲ್ವಾ।
ಯ್ದೋಕುಳಿಯ ನೆವದಿನಪ್ಪಿ ಮ
ಹೀಕಾಂತನೊಳಂಗಸಂಗಸುಖಮಂ ಪಡೆದಳ್॥ ೫೨
(ಅನಂತನಾಥಪುರಾಣಂ, ೭–೪೫)

ನೀರ್ ಮೊಗಸಿ ಪೊಯ್ಯೆ ಬಿರ್ಚಿದ
ಸೋರ್ಮುಡಿಯೊಳೆ ಮುಸುಕೆ ನಿಜಮುಖಾಬ್ಜಮನಿನಿಸಂ।
ಕಾರ್ಮುಗಿಲೆಳಸಿದ ಹಿಮರೋ
ಚಿರ್ಮಾಲೆವೊಲೆಸೆದುದಸಿಯಳಾನನಬಿಂಬಂ॥ ೫೩
(ಅನಂತನಾಥಪುರಾಣಂ, ೭–೪೭.)

ಅರಸನ ಮೇಲೆ ಭೋರ್ಗರೆದು ರಾಣಿಯವಾಸದ ಪೆಂಡವಾಸದಾ
ದರದ ಬೆಡಂಗಿಯರ್ ಮಳಯಜಾಂಬುಮಿಳದ್ಫೇನಸಾರವಾರಿಯಂ
ಸುರಿಯೆ ಮನೋಜಪುಷ್ಪಲತಿಕಾಪ್ರಕರಂ ಮಕರಂದವರ್ಷಮಂ ।
ಸುರಿವ ನಮೇರು ಭೂರುಹದವೋಲ್ ಮೆಱೆದಂ ನರಲೋಕಚಂದ್ರಮಂ॥ ೫೪
(ಅನಂತನಾಥಪುರಾಣಂ, ೭–೪೮.)

---

[1] ತಂಡಗುಂಡಿಪುಗುವವೊ (ಅ). [2] ಮತ್ತೊ (ಖ.ಬ). [3] ಸೀರುಹದೆಲೆ (ಕ.ಖ.ಬ).
[4] ನಿ (ಅ). [5] ಲೆಸೆದ (ಅ). [6] ತರಳೋತ್ಕರೆ (ಖ.ಬ). [7] ರಭ್ಯ (ಕ.ಖ.ಬ.).

ಸುಲಲಿತ ಕಿಂಕಿರಾತ ನವಮಂಜರಿಯಂತಿರೆ ಕರ್ಣಪಾಳಿ ಕೆಂ
ದಳಿರ ತುಱುಂಬಿ[1]ನಂ[1]ತೆಸೆಯೆ ಸೋರ್ಮುಡಿ ಮೂಡುವ ಚಂದ್ರನಂತೆ ಪ।
ಜ್ಜಳಿಸೆ ಮುಖೇಂದು ಪೊಂಗಳನದಂತಿರೆ ಪೆರ್ಮೊಲೆ ಕಾಂತೆ ಪೊನ್ನಪು
ತ್ತಳಿಕೆಪೋಲಪ್ಪಿನಂ [2]ತಳಿದನೋಪಳ[2]ನೊಪ್ಪುವ ಕುಂಕುಮಾಂಬುವಿಂ॥ ೫೫

(ಲೀಲಾವತಿ, ೧೩–೧೪೧.)

ಜಲಮಂ ಕಾಂತನ ಮೊಗದೊಳ್
ತುಳುಂಕಲೆಂದಗಿದು ಮೊಗೆವ ಕಾಮಿನಿ ಕಯ್ಯಿಂ।
ಕಳನಂ ಜಗುಱ್ಪೊಡೆ ಮುಟು[3]ಗಿದ[3]
ಕೆಳದಿಯ ಪೆರ್ಮೊಲೆಗೆ ಪಾಯ್ದುಳಬ್ಜಾಕರದೊಳ್॥ ೫೬

(ಲೀಲಾವತಿ, ೧೩–೧೩೧.)

ಧೂರ್ತಂ ತುಳುಂಕೆ ಕತ್ತುರಿ
ನೀರ್ತುಳುಕಿದ [4]ಮೊಗದಿನಲೆದುವಬಲೆಯು ಮೊಲೆಗಳ್[4]।
ಸಾರ್ತಂದಗಲ್ಚಲುರ್ಚಿದ
ಕಟ್ತಲೆಯಂ ಕುಟುಕುಗೊಳ್ವ ಕೋಕದ್ವಯಮಂ॥ ೫೭

(ಲೀಲಾವತಿ, ೧೩–೧೩೪.)

ಕತ್ತುರಿಯ ನೀರನರಮಗ
ನೊತ್ತಲೊಡಂ ಕರಿಯ ಕಿಱಿಯ [5]ಕಾಮಿನಿ ಬೆನ್ನಂ।
ತೆತ್ತರ್[5] ರಾಜಾವರ್ತದ
ಪುತ್ತಳಿಕೆ ಬೆಮರ್ತತೆಱದಿನೇನೊಪ್ಪಿದಳೋ॥ ೫೮

(ಲೀಲಾವತಿ, ೧೩–೧೩೫.)

ಅಲೆವನ್ನಂ ಚೌರಿವ್ರೋಲ್ ಬಿರ್ಚಿದ ಬಹಳ ಕಚಂ ನಾರಕಸ್ತೂರಿಕಾಪಂ
ಕಿಲಮಂಭೋಧಾರೆ ಕೊಪ್ಪಿಂದಿಟಿದು ಬಳೆವಿನಂ ಕಾಂತನಂದೊತ್ತೆ ರಾಗಾ।
[6]ಕು[6]ಲೆ ಬೇಗಂ ಬಾಗಿದಳ್' ತುಂಬಿಯ ತಿರುಗೊಲೆಯೊಳ್' ಕೋದ ಕಂದರ್ಪಕೋದಂ
ಡಲತಾಸೌಭಾಗ್ಯಮಂ [7]ನೂಸುವ ತನುಲತೆ[7] ಚೆಲ್ವಾಗೆ ತನ್ವಂಗಿಯೊರ್ವಳ್॥ ೫೯

(ಲೀಲಾವತಿ, ೧೩–೧೩೮.)

---

[1] ದಂ (ಕ.ಖ.ಬ.). [2] ಸುರಿದನೋಪವ (ಖ.ಬ.). [3] ಗುವ (ಅ). [4] ಮೊಲೆಗ
ಳೊಡೆವುವೆಂದಬಲೆಯರ್ಗಳ್ (ಖ.ಬ.). [5] ಬಾಲಕಿಬಣ್ಣಂಬೆತ್ತಿರೆ (ಅ) ಕಾಮಿನಿಬೆನ್ನಂ
ಪತ್ತಿರೆ (ಖ.ಬ.). [6] ದ (ಖ.ಬ.). [7] ಬೀಱುವ ತನುರುಚಿ (ಖ.ಬ.).

ವಳರೇಖೆವಡೆದ ಬಡನಡು
ತೊಲೆಯೆನೆ ಕುಚಜಘನಭಾರಮಂ ಕರತಳದೊಳ್ ।
ನಿಲಿಸಿ ಲತಾಂಗಿಯನೀಸಲ್
ಕಲಿ[1]ಸುವ ಪತಿ[1] ತೂಗುವಂಗಜಂಗೆಣೆಯಾದಂ॥ ೬೦

(ಅನಂತನಾಥಪುರಾಣಂ, ೭–೩೯.)

ಮಾರಮುಖನೆತ್ತ ಸರಸೀ
ತೀರಕ್ಕಂ ಕಾಮ ಮುಂದುಗಾಣಲ್ ನೆವದಿಂ ।
ನೀರಂ ಕೊಳ್ವ ಮುಟುಂಗುವ
ವಾರಿಜಲೋಚನೆಯನಪ್ಪಿ ಭಾವುಕನಾದಂ?॥ ೬೧

ಪೊಳೆವೆಳವಾಳೆ ಚುಂಬಿಸಿ ಮುಟುಂಗಿರಲಂಜಿ[2]ದಳೆಯ್ದೆ ಮೇ[2]ಲೆ ಮೆ
ಯ್ಗೊಳಿಸಿದ ನಾಗವಟ್ಟಣಿಗೆ ನಾಂದು ಪಗಿಲ್ತಿರೆ ನಾಣ್ಚಿದಳ್ ಕುಚಂ ।
ಗಳ ಕೆಲದೊಳ್ ಕವಲ್ತ ನಖರೇಖೆಗೆ ಬೆನ್ನಗಡುವ್ರಣಕ್ಕೆ ಕಂ
ಚುಳಿಕೆವೊಲಾಗೆ ರಾಗಿಸಿದಳೊತ್ತಿದ ಕುಂಕುಮಪಂಕಧಾರೆ[3]ಯಿಂ॥ ೬೨

(ಅನಂತನಾಥಪುರಾಣಂ, ೭–೩೭.)

[4]ತುಳ್ಕುವ ನಲ್ಲಳ್ ನೀರ್ವೊಗ
ಲಳ್ಕಿದವೋಲ್ ಮುಬುಗೆ ಮುನ್ನ ಕಣ್ಚೋಟದವಳ್[4] ।
ತುಳ್ಕಿದೆಡೆಗೆಯ್ದಿ ಚುಂಬಿಸಿ
[5]ತುಳ್ಕಾಡಿ ಮರಳ್ದು[5] ಮೂಡಿದಂ [6]ಶಠ[6]ನೊರ್ವಂ॥ ೬೩

(ಅನಂತನಾಥಪುರಾಣಂ, ೭–೩೮.)

ತುಂಗನಿತಂಬದಿಂ ಕುಚದ ಬಿಂಬೊಜ್ಜುಯಿಂ ಪೊಡರಲ್ಕಮಾಱಿದಿ
ರ್ಪಂಗನೆಯರ್ ಸರೋಜಲದೊಳಂದವು ನೊಚ್ಚಿದುವಾಗೆ ರಾಗದಿಂ ।
ಪೊಂಗಿ ಪೊದಟ್ಟು ಪಾಱಿ ಪೊಳೆದಾಡಿದರಂತೆ ಜಡಪ್ರಸಂಗದಿಂ
ದೇಂ ಗಳ ಲೋಕದೊಳ್ ಗುರುಗಮಾಗಳೆ ಲಾಘವಮಾಗದಿರ್ಕುಮೇ॥ ೬೪

(ಲೀಲಾವತಿ ೧೩–೧೨೪.)

ಕಲಸಿದಳಿಂತೀ ಕಾಮಿನಿ
ವಿಳಾಸದಿಂ ಜನರ ಮನಮನೆಂದು ಮನೋಜಂ।

---

[1] ಪವಿಟುಂ (ಅ). [2] ಳೆಟ್ಟವೆಯ್ದೆ (ಅ), ಳೆಱ್ಱವೆಯ್ಗೆ (ಖ.ಬ.). [3] ಗಳ್[4] (ಅ). [4] ತುಳುಕುವ ನಲ್ಲನ ನೀರ್ವೊಯ್[4]ತೆಳುಕಿದಪೊಲ್ ಮುಬುಕೆ ಮುನ್ನೆ ಕಣ್ಚೋಟದವಳ್[4] (ಅ). [5] ಚುಳುಕಾಡೆ ಮರಳ್ಚಿ (ಅ). [6] ಸ್ಮರ (ಅ).

ಕೊಳೆ ನುತ್ತಿಕೊಂಡು ಗುಂಡಿಗೆ
ಮುಟುಗುವವೋಲ್ಮುಟುಗಿ ಮೊಲಗಿದಂತಿರೆ ನೆಗೆದಳ್॥ ೬೫

ಉನ್ನತಪೀನಸ್ತನಯುಗ
ಳನ್ನೀರೊಳ್ ತೇಂಕೆ ತೆರೆಯೊಳುರಮಿಕ್ಕಿದಳು।
ಕರ್ನ್ನಲಿದು ಜಕ್ಕವಕ್ಕಿಯ
ಬೆನ್ನೊಳ್ ಬಿರ್ದಿೀಸಿಯಾಡುವಂತೊಪ್ಪಿರ್ದಳ್॥ ೬೬

(ಲೀಲಾವತಿ, ೧೩–೧೨೫.)

ಮುರಿನೆಲರೆ[1]ತ್ತೆ[1] ಮೆಯ್ದಿರಿದು ತೋರಮನಾಳ್ದ ಪೊದಟ್ಟು ನೀಳ್ದ ಪಂ
ಕರುಹಪರಾಗಮುಂ ಜವದೆ ಮಂದರಮಾಗೆ ಸರೋವರಾಬ್ಧಿಯಂ।
ಸ್ಮರಸುರವಲ್ಲಭಂ ಪೊಸೆದು ಪುಟ್ಟಿಸುವಿಂದುಗಳಂದದಿಂದಮೇಂ
ಕರಮೆಸೆದಿರ್ದಪೋ ಮುಟುಗಿ ಮೂಡುವ ಮುಗ್ಧೆಯರಾನನೇಂದುಗಳ್॥ ೬೭

(ಲೀಲಾವತಿ, ೧೩–೧೨೩.)

ಅಲರ್ವಚ್ಚಮನಬಲೆಯರಿಂ
ತೊಲಗಿಸಿ ಮೈದೊಳೆದನಂಗದೃಷ್ಟಿಯ ತೊಡವಂ।
ಪಲವಂ ತೊಡಿಸಿದನಲ್ಲದೊ
ಡ[2]ಲೆಪಮನಿ[2]ರ್ಮಡಿಸಿ ಸರಸಿ ಪಡೆದು[3][ದೆ][3] ಮುದಮಂ॥ ೬೮

ಉಟ್ಟ ಘನಜವಳಿ ನಾಂದಳ
ವಟ್ಟಿರೆ ಮೆಯ್ವೆತ್ತಿ ತೋಱೆ ಸರ್ವಾಂಗಮುಮಂ।
ದುಟ್ಟುದು ಪೋಯ್ತೆಂದೊರ್ವಳ್
ಬಿಟ್ಟಿರ್ದ ಕಚಾಗ್ರದಿಂದೆ ಮುನುಕಿದಳುಡೆಯಂ॥ ೬೯

ಸ್ಫುರಿತಾಂಗಂ ನೂಸೆ ಲಾವಣ್ಯಮನೆಸೆವಲರ್ಗಣ್ ಚೆಲ್ಲಮಂ ನೂಸೆ ಬಿಂಬಾ
ಧರಹಾಸಂ ನೂಸೆ ಬೆಳ್ದಿಂಗಳನಲಘುಕುಚಂ ಮೇಲುದಂ ನೂಸೆ ಚಾಮೀ।
ಕರಕಾಂಚೀಮಂಜುಗುಂಜಧ್ವನಿ ಕವಿಗಮರ್ದಂ ನೂಸೆ ತಳ್ಪೊಯ್ವ ಸುಯ್ ಕ
ತ್ತುರಿಗಂಪಂ ನೂಸೆ ಲಕ್ಷ್ಮೀಪತಿಯ ತನುವಿನೊಳ್ ನೂಸಿದಳ್ ನೀರನೊರ್ವಳ್॥೭೦

(ಜಗನ್ನಾಥವಿಜಯಂ, ೧೪–೧೦೪.)

ತುಳ್ಕೆ ದರಸ್ಮಿತಂ ವದನದಿಂದನುರಾಗರಸಂ ಕಟಾಕ್ಷದಿಂ
ತುಳ್ಕೆ ಕುಚಾಗ್ರದಿಂ ತುಳುಕೆ ಹಾರಮರೀಚಿಲತಾಂಗರೇಖೆಯಿಂ।

---

[1] ತ್ತ (ಖ.ಬ). [2] ಲಪಮನೂ (ಖ.ಬ). [3] ದು (ಕ.ಖ.ಗ).

ತುಳ್ಕೆ ವಿಳಾನವಂಗಜನ ಬಾಳ ಪೊಗರ್ ನಿಜಬಾಹುದಂಡದಿಂ
ತುಳ್ಕೆ ತುಳುಂಕಿದಳ್ ಹರಿಯಮೇಲೆ ಪೆಱಳ್ ತರಳಾಕ್ಷಿ ತೋಯಮಂ॥ ೭೧

(ಜಗನ್ನಾಥವಿಜಯಂ, ೧೪–೧೦೩.)

ಕುರುಳೊಳ್ ಕುಚದೊಳ್ ಭುಜವ
ಲ್ಲರಿಯೊಳ್ [1]ನಯಮೆ[1]ಸೆಯೆ ಪೊಳೆ[2]ಯೆ[2] ತೋಱುವ ಬಿಂಬಾ।
ಧರದೊಳ್ ವಳಿಯೊಳುರೋಜಾಂ
ತರದೊಳ್ ಕೊಳಗೊಂಡವಂಗಸಕ್ತ ಜಲಂಗಳ್॥ ೭೨

ತನು ಲಾವಣ್ಯರಸಂಗಳಂ ಪಸರಿಸುತ್ತಿರ್ಪನ್ನೆಗಂ ಕಣ್ಣುಮಂ
ಮನಮಂ ಪಂಕರುಹಾಕ್ಷನೊಳ್ ಪಸರಿಸುತ್ತುಂ ತೋಯಮಂ ತನ್ಮುಕು।
ದನ ಮೇಲಬ್ಜಭಳುರ್ಕೆಯಿಂ ಪಸರಿಸುತ್ತಿರ್ದಳ್ ಪೆಱಳ್ ತನ್ನಮೇ
ಲೆನಿತಾನುಂ ನನೆಯಂಬುಗಳ್ ಪಸರಿಪನ್ನಂ ಕಾಮಕೋದಂಡದಿಂ॥ ೭೩

(ಜಗನ್ನಾಥವಿಜಯಂ, ೧೪–೧೦೨.)

ಸವತಿಯಮೇಲೆ ಮುಂ ತುಳು[3]ಕಿ[3] ತನ್ನಯಮೇಲಧಿಪಂ ಬಟಿಕ್ಕೆ ತು
ಳ್ಕುವ ವಿಮಲಾಂಬುಗಳ್ ತನಗೆ ಮನ್ಮಥನಂಬುಗಳಂತಿರೆಯ್ದೆ ಕೋ।
ಪವನೊಳಕೊಂಡು ತನ್ಪಿ ಬಸಮಲ್ಲ[4]ದ[4] ಕೃಷ್ಣನ ಮೇಲೆ ತಾಂ ತುಳುಂ
ಕುವ ಸಲಿಲಕ್ಕೆ ಕುಂಕುಮದ ರಾಗಮನಿತ್ತಳಪಾಂಗರಾಗದಿಂ॥ ೭೪

(ಜಗನ್ನಾಥವಿಜಯಂ, ೧೪–೧೦೦.)

ಮುರಮಥನಂ ಸಿಂಪಿಸೆ ಕ
ತ್ತುರಿನೀರಂ ತನ್ಮೃಗೋದ್ಭವಾಸಿತಧಾರಾ।
ಪರಿ[5]ದಳಿತ ಪರಾಙ್ಮುಖಿ
ಹರಿಹಸ್ತಾಕೃಷ್ಟ ಕೇಶಹಸ್ತಿವೊಲೆಸೆದಳ್॥ ೭೫

(ಜಗನ್ನಾಥವಿಜಯಂ, ೧೪–೧೦೬.)

ಸಕಲಾಂತಃಪುರಕಾಮಿನೀನಿಕರನಿರ್ಯದ್ಯಂತ್ರಧಾರಾಕರಂ
ಬಕಮಂ ತಾಳ್ದುಳಿವಿಂಗೆ ಮೇಗೊಗೆದ ಮಾರ್ಜಾಳಂಗಳೆಂದಂಚೆವಿಂ।
ಡು ಕಲಧ್ವಾನಮನೆತ್ತಲುಂ ಪಸರಿಸುತ್ತೋರಂತವಂ ಪಾಱಿ ಪಾ
ಱಿ ಕರ್ದುಂಕಲ್ ಮೊದಲಟ್ಟುವೇಂ ಪಿರಿದೊ ವಾರಿಕ್ರೀಡನಾಡಂಬರಂ॥ ೭೬

(ಜಗನ್ನಾಥವಿಜಯಂ, ೧೪–೧೦೮.)

---

[1] ಮೆಯ್ ಮ (ಕ). [2] ದು (ಕ). [3] ಕೆ (ಖ.ಬ). [4] ದೆ (ಖ.ಬ). [5] ಕಲತ ಪರಾವೃತ (ಅ).

ನವನದಿನಂಗರಾಗಮುಮಲಕ್ತ ಕರಾಗಮುಮೆಯ್ದೆ ಪೋಗಲಂ
ತವಯವದಲ್ಲಿ ತೋಱುವುಗುರ್ವೆಯ್ಲಳವಟ್ಟ ವ್ರಣಂಗಳುಂ ವಧೂ।
ನಿವಹದೊಳಾವ ಮಂಡನಮುಮಂ ಗೆಲೆವಂದುವು ಮಿಕ್ಕ ಮಂಡನಂ
ಯುವತಿ ಜನಕ್ಕದೇವುದೊ ರತೋತ್ಸವಚಿಹ್ನಮೆ ದಿವ್ಯಮಂಡನಂ॥ ೭೭

(ಜಗನ್ನಾಥವಿಜಯಂ, ೧೪–೧೧೦.)

ಶ್ರುತಿಕುಮುದಂಗಳ್ ಕೇಳ್ದೀ
ಪತಿತಂಗಳ್ ಕೊಳನ ತಡಿಗೆ ಸಾರ್ದುವು ತೆರೆಯಿಂ।
ಶ್ರುತಿಮಂಡನ[1]ನಾ[1]ದೊಡ[2]ಮಾ
ಪತಿತಂ[2] ನಿರ್ಮಲರ ನಡುವೆ ಯೋಗ್ಯ[3]ನೆ[3] ಸುಚಿಯಲ್॥ ೭೮

(ಜಗನ್ನಾಥವಿಜಯಂ, ೧೪–೧೧೧.)

ನವನಖರೇಖೆಗಳ್ ಕರಿತು ಪೋದುವು ಪೆರ್ಮೊಲೆ ಬಟ್ಟು ಗುಜ್ಜುಗೊಂ
ಡವು ಬೆಳವಾಯ್ ಬೆಳರ್ತುದಧರೋಷ್ಠದ ಕರ್ಪು ಬಯಲ್ಗೆ ಬಿಟ್ಟುದೊ।
ಪ್ಪುವ ನಿಡುಗಣ್ಣ ಕೆಂಪು ಘನಮಾದುವು ಕುಂತಳವಲ್ಲಿ ಸುರ್ಕುನೀ
ಳ್ದುವು ತೆರೆ ಪೂಣ್ಮಿ ಪತ್ತಿದುವು ನೌಂದರಿಯರ್ಕಳ ಮೆಯ್ಯೊಳುಪ್ಪಟಂ॥ ೭೯

ಕಳೆದುರು ಪತ್ರಭಂಗದ ಬೆಡಂಗುಗಳಂ ಕುಟಿಲಾಳಕಂಗಳಂ
ಬಳೆಯಿಸಿದತ್ತು ಕಣ್ಗೆಸೆವ ರಾಗಮ[4]ನೆಯ್ದಿಸಿ[4] ಕೇಶಹಸ್ತಮಂ!
ಚಳಯಿಸಿದತ್ತು ಮೈಗೆ ಪುಳಕೋದಯಮಂ [5]ತಳೆ[5]ದತ್ತು ತಲ್ಲತಾ
ಲಲಿತೆಯರ್ಗಿತ್ತು ದಿಂತು ಜಳಕೇಳಿ ಮನೋಭವಕೇಳಿಲೀಲೆಯಂ॥ ೮೦

(ಆದಿಪುರಾಣಂ, ೧೧–೧೫೦.)

ಮಱಸಿರ್ದಂಬರಮೆಯ್ದೆ ನಾಂದು ತನುವಂ ಪತ್ತಿರ್ದು ಕಣ್ಗೆಲ್ಲಿಯುಂ
ತೆಱಪಂ ಮಾಡೆ ಮನೋಜಚಕ್ರಿಯ ಜಯಶ್ರೀರಾಜ್ಯಚಿಹ್ನಂಗಳಂ।
ಮೆಱೆವೊಂದಂದದಿನೀಕ್ಷಣಕ್ಕೆ ಪರಮಾನಂದಾಮೃತಂ ಸಾರ್ವಿನಂ
ಮೆಱೆದರ್ ಚಕ್ರಿಯ ಮುಂದೆ ತ[6]ತ್ಕೃತಿ[6]ವಿಚಿತ್ರಾನಂಗಚಿಹ್ನಂಗಳಂ॥ ೮೧

(ಆದಿಪುರಾಣಂ, ೧೧–೧೫೩.)

ಸುರ್ಕುಟಿದುರುಳಿಗುರುಳ್ ನೆಱೆ
ಸುರ್ಕಿದ ಕುಚಚೂಚುಕಂ ಬೆಳರ್ತಧರಂ ನೀರ್।

---

[1] ಮಾ (ಅ). [2] ಮೇಂ ಪತಿತರ್ (ಅ). [3] ರೇ (ಅ). [4] ನಿತ್ತುದು (ಅ).
[5] ಪಡೆ (ಅ). [6] ಕ್ಕೃತ (ಅ).

ಪೋರ್ಕುಳಿಯೊಳೆ ಜೋಲ್ದುಳ್ಳುಡೆ
ಸಾರ್ಕೆಯೊಳೇಂ ನೃಪನ ಮನಮನಳವಡಿಸಿದುದೋ॥ ೮೨
(ಆದಿಪುರಾಣಂ. ೧೧–೧೪೯.)

ಲಲನಾಜನಮಗ್ಗಲಿಸಿದ
ನಲವಿಂದಂ ಬಟಲೆ ತುಳ್ಕುನೀರಾಡುವುದುಂ।
ನುಲಿಪಲ್ಲ ಪೊಳೆಪು ತಪ್ಪೊಳ್
ನೆಲಸಿದ ತೆಱದಿಂ ಬೆಳರ್ತುವವರಧರಂಗಳ್॥ ೮೩
(ಮಲ್ಲಿನಾಥಪುರಾಣಂ, ೬–೧೨೬.)

ಕರಶಾಖಾಳಿಗಳವಚ
ತ್ತಿರೆ ಜಳಯಂತ್ರಕ್ಕೆ ಮೆಲ್ಲನಾದುವು ಪದ್ಮಾ।
ಕರ ಕೇಳಿ ಸಾಲ್ವುದೆಂಬಂ
ತಿರೆ ಕಂಪಿಸುವು[1]ವು[1] ಬೆಡಂಗಿಯರ ತನುಲತೆಗಳ್॥ ೮೪

ತೊಳಗುವ ನಾಗವಟ್ಟಣಿಗೆ ನಾಂದು ಶರೀರಮನೆಯ್ದೆ ಪತ್ತೆ ಬ
ರ್ಪೆಳೆಯಳನೋವಿಯೇನೆಲೆಗೆ ಬತ್ತಲೆ ಬಂದಪೆಯೆಂದು ಮತ್ತೆ ಪೂ ।
ಗೊಳದೊಳಗೋಡಿ ಪೊಕ್ಕೊಡದನೀಕ್ಷಿಸಿ ಚಾಪಳೆಯರ್ ಪ್ರಮತ್ತ ಕೋ
ಕಿಳಕಳನಾದದಿಂ ನಗುತಲಿತ್ತರಿಳಾಪತಿಗಾದಮಟ್ಟಿಯಂ ॥ ೮೫

ದಂತಚ್ಛದಾತಿರಾ[2]ಗಂ[2]
ಕುಂತಳಕೌಟಿಲ್ಯವೃತ್ತಿ ಪಿಂಗಿದುದಬಳಾ ।
ಸಂತತಿಗೆ ಪಯಃಕೇಳಿಯೊ
ಳೆಂತುಂ ನಿರ್ಮಳರ ಸಂಗದಿಂದಾಗದುದೇಂ ॥ ೮೬
(ಚಂದ್ರಪ್ರಭಪುರಾಣಂ, ೭–೪೫.)

ನೀರಾಟಮಾಡಿ ಪೊಱಮಡು
ಮೈರಾವತದಂತೆ ದಿವಿಜದೀರ್ಘಿಕೆಯಿಂ ಕಾ ।
ಸಾರದಿನೇಂ ಸೋಱಮಟ್ಟನೊ
ವಾರವಧೂಸಹಿತಮಪನಿಪತಿ ಸಂತಸದಿಂ ೮೭
(ಅನಂತನಾಥಪುರಾಣಂ, ೭–೫೦.)

ಕರೆವ ಕೊದಳ್ಗಳುಂ ಪರೆವ ಕಣ್ಗಳ ಕೆಂಪು ಪಯೋಲವಂ ಕರಂ
ಬೆರಸಿದ ಮೆಯ್ಗಳುಂ ನಸು ಬೆಮರ್ತಧರಂಗಳುಮೆಯ್ದೆ ಸುರ್ಕುಗೆ ।

---

[1] ದು (ಕ). [2] ಗತೆ (ಅ)

ಟ್ಟುರುಳಿಗುರುಳ್ಗಳುಂ ಮನಮನಿಟ್ಟುಳಿಗೊಂಡಿರೆ ಕಾಂತೆಯರ್ ಮಹೀ
ವರನ ಕೆಲಕ್ಕೆವಂದು ಸುರಕಾಂತೆಯರಂದದಿನಾದವೊಪ್ಪಿದರ್ ॥ ೮೮

ಪರೆದಾ ನೀಲಾಳಕಂ ಜೋಲ್ದಲೆವ ಕಚಭರಂ ಕೆಂಪುವೆತ್ತಿರ್ದ ಕಣ್ಣಾ
ವರೆ ಬೆಳ್ಪೇಱಿರ್ದ ಬಿಂಬಾಧರಮಣಿ ತನುವಂ ನಾಂದು ಪತ್ತಿರ್ದ ಚೀನಾಂ ।
ಬರಮಿಂಬಾಗಿರ್ಪಿನಂ ಬಂದುದು ಮೃದುತರಲೀಲಾಪದನ್ಯಾಸಮುದ್ಯ
ದ್ದರಹಾಸಂ ಹೆಂಡವಾಸಂ ವಿಜಿತರತಿವಿಳಾಸಂ ಸುಖಶ್ರೀನಿವಾಸಂ॥ ೮೯

(ಜಗನ್ನಾಥವಿಜಯಂ, ೧೪–೧೧೩.)

ಮದಕಲಹಂಸಯಾನದ ರಥಾಂಗಕುಚಂಗಳ ವಾರಿಜಾತವ
ಕ್ತ್ರದ ಸಿರಿಯಿಂದಮೆನ್ನ ಸಿರಿ ತಾಂ ಮೆಱೆದಿರ್ದುದು ನಿಮ್ಮ ವಾರ್ಮಿನೋ ।
ದದಿನೆಲೆ ವಾರನಾರಿಯರಿರೆನ್ನನೆ ಬಿನ್ನನೆ ಮಾಡಿ ಪೋಗಲಾ
ಗದು ನಿಮಗೆಂದು ಕಾಲ್ಪಿಡಿವಪೊಲ್ ತೆರೆ ಪೊಣ್ಮಿದುವಬ್ಜಷಂಡದೊಳ್॥ ೯೦

(ಅನಂತನಾಥಪುರಾಣಂ, ೭–೫೧.)

ಸ್ತನಕುಂಭದ್ವಿತಯಂಗಳೊಳ್ ಮೆಱೆಯೆ ಹಸ್ತಸ್ವಸ್ತಿಕಂ ಕುಂತಳಾ
ಗ್ರನ[1]ವ್ಗೋ[1]ತ್ಪಲ್ಲವಮಾಸ್ಯದರ್ಪಣದ ಮೇ[2]ಲಿಂ[2]ಬಾಗೆ ನಾಂದಂಬರಂ ।
ತನುವಂ ಪ[3]ತ್ತೆ[3] ದಿಗಂಬರೀ ಮಹಿಮೆಯಂ ತಂ[4]ದಿಟ್ಟನೆಂ[4]ದಿರ್ದ ಕಾ
ಮಿನಿಯರ್ ಮಂಗಳಮಂತ್ರದೇವಿಯ[5]ರೆನಲ್[5] ಕಣ್ಗೆಂ ಬೆಡಂಗಾದರೋ ॥ ೯೧

(ಅನಂತನಾಥಪುರಾಣಂ, ೭-೫೩.)

ವಿತರತ್ಪೀತ್ಕಾರವಕ್ತ್ರಂ ಜಳನಿಬಿಡಿತವಾಸಸ್ಫುಟೀಭೂತನಿಮ್ನೋ
ನ್ನತಮುದ್ಯದ್ರೋಮಹರ್ಷಸ್ತನವಿನಿಹಿತದೋಃಸ್ವಸ್ತಿಕಂ ಲೋಚನೋಷ್ಮ ।
ದ್ವಿತಯವ್ಯತ್ಯಸ್ತವರ್ಣಸ್ಥಿತಿ ಮಿಲಿತಕಪೋಲಾವಲಗ್ನಾಳಕಂ ಯೌ
ವತಮಾದಂ ಕಣ್ಗೆವಂದಿರ್ದುದು ಕೃತಸಲಿಲಕ್ರೀಡಮಸ್ತೋಷ್ಣಪೀಡಂ ॥ ೯೨

(ಚಂದ್ರಪ್ರಭಪುರಾಣಂ ೭–೧೪೯.)

ಎಡಗಯ್ಯಂ ನಸುಸೋಂಕಿ ನೀರ್ವೊಱೆಯ ಬಿಣ್ಪಿಂ ಬಿಟ್ಟ ಧಮ್ಮಿಲ್ಲಮಂ
ಪಿಡಿದಲ್ಲಿಂ ಬರುತಿರ್ಪ ವಾರಿಗಳನಾರಕ್ತೋಜ್ವಳಾಪಾಂಗದಿಂ ।
ನಡೆನೋಡುತ್ತಮು . . ನೀತ್ಕೃತನಟದ್ಬಿಂಬಾಧರಂ ಪತ್ತಿದೊ
ಳ್ಗುಡೆ ಚೆಲ್ವಾಗಿರೆ ಮುಂದೆ ನಿಂದಬಲೆಯರ್ ಕಣ್ಗೊಪ್ಪಿದರ್ ಕೃಷ್ಣನಾ ॥ ೯೩

---

[1] ಮಿ (ಅ). [2] ಗಿಂ (ಅ). [3] ತ್ತಿ (ಅ). [4] ದೀಯೆನಿಂ(ಅ). [5] ರಪೊರ್ (ಅ).

ಮೃಗಲೋಚನೆಯರ್ ಸಲಲಾ
ವಗಾಹಮಂ ಮಾಣ್ದು ಪೊಱಿಗೆ ನಿಲೆ ಕಟ್ಟಲೆ ತಾ ।
ರಗೆಯನುಗುಟ್ಟಿಪ್ಪುವೆಂಬಿನ
[1]ಮೊಗೆ[1]ತಂದುವು ಸಲಿಲಬಿಂದುಗಳ್ ಸೋರ್ಮುಡಿಯಿಂ ॥ ೯೪

(ಮಲ್ಲಿನಾಥಪುರಾಣಂ, ೬–೧೩೧.)

ಬಸಿಯೆ ಜಳಬಿಂದು ಕೇಶ
ಪ್ರಸರಮನೆಡಗೆಯ್ಯೊಳಡಸಿ ಪಿಡಿದೆಸೆದುದು ಕಾ ।
ಱಿಸುವವೊಲನಂಗ[2]ನಸಿ[2]ಯು
ಬ್ಬಸಮಾಗಿರೆ ಪೀರ್ದ ವಿರಹಿಜನಜೀವನಮಂ ॥ ೯೫

(ಲೀಲಾವತಿ, ೧೪-೭.)

ಜಳಕೇಳಿಯ [3]ಪೊೞ್ಕು[3]ಳಿಯೊಳ್
ಪೊಳೆವಾರಂ ಪಱಿಯೆ ಸೂಸಿ ಕಂಟಕದೊಳ್ ಕೋ ।
ದೆಳಮುತ್ತುಗಳೆನೆ ನಿಂದುವು
ಜಳಬಿಂದುಗಳಂಗನಾಪಯೋಧರತಟದೊಳ್ ॥ ೯೬

(ಲೀಲಾವತಿ, ೧೪-೧೪.)

ಮುಡಿದ ತಳಿರ ತೊಂಗಲ್ ಜೋಲ್ದು ಬಂದಗ್ರದೊಳ್ ತಾಂ
ತೊಡರೆ ತಳವಿಳಾಸಂ ತಳ್ತ [4]ವೋಲ್ ಬಿಂ[4]ದು ಚೆಲ್ವಂ ।
ಪಿಡಿಯೆ ನಖನಿಕಾಯಂ ವಾಮಹಸ್ತಂಬೊಲಿಂಬಾ
ಯ್ತಿಡಿದು ತೊಳಪ ಕರ್ಪಿಂ ಕಾಮಿನೀಕೇಶಹಸ್ತಂ ॥ ೯೭

(ಲೀಲಾವತಿ, ೧೪-೯.)

ಭೂವರನಿತ್ತಂಬರಭೂ
ಷಾವಳಿಯಂ ತೊಳಪ ತೋರಮುತ್ತಿನ ಮೊತ್ತಂ ।
ಪೋವಣಿಗೆವಡೆದುದೆಂಬಿನ
ಮಾ ವರವನಿತೆಯರದೇಂ ಮನಂಗೊಳಿಸಿದರೋ ॥ ೯೮

(ಅನಂತನಾಥಪುರಾಣಂ, ೭-೫೪.)

ಸಲಿಲವಿನೋದದೊಳ್ ಹರಿ ತುಳುಂಕಿದ ಕುಂಕುಮವಾಃಕಣೋತ್ಕರಂ
ಮಲಯಜವಾಃಕಣಾವಳಿ ಮೃಗೋದ್ಭವವಾಃಕಣವೃಂದಮೀ ಲತಾ ।

---

[1] ಮುಗು (ಅ). [2] ಫಣಿ (ಖ.ಬ). [3] ಬಾಕು (ಅ). [4] ವಾರ್ಬಿಂ (ಅ).

ಲಲಿತೆಯರಂಗದೊಳ್ ತೊಡರ್ದು ಪೋಗದೆ ನಿಂದುವೆನಲ್ ವರಾಂಗನಾ
ವಲಿಗೆಸೆದತ್ತು ಮಾಣಿಕದ ಮುತ್ತಿನ ನೀಲದನರ್ಘ್ಯಮಂಡನಂ ॥ ೯೯

(ಜಗನ್ನಾಥವಿಜಯಂ, ೧೪–೧೧೪.)

ಮಾವಿಂಗಿದು ಮಲ್ಲಿಗೆಗಿದು
ತಾವರೆಗೊಳಕಿದು ದಲೆಂದು ಪೆಸರ್ವೆಸರಿಂ ಭೂ ।
ಷಾವಳಿಸಕಲಂಗಳುಮನಿ
ಳಾವಲ್ಲಭನಿತ್ತನಾತನೆಡಱೋಡುವಿನಂ ॥ ೧೦೦

(ಚಂದ್ರಪ್ರಭಪುರಾಣಂ, ೭–೧೫೧.)

ವನಮದು ಸುರಕುಜದಾರವೆ
ವನಜಾಕರಮದುವೆ ಸಿದ್ಧರಸಕೂಪಂ ತಾ ।
ನೆನಿಸೆ ನೃಪಂ ವನಜಳಕ್ಕೇ
ಳಿನಿಮಿತ್ತದಿನರ್ಥಿಗೀಪ್ಸಿತಾರ್ಥಮನಿತ್ತಂ ॥ ೧೦೧

(ಚಂದ್ರಪ್ರಭಪುರಾಣಂ, ೭–೧೫೨.)

ಕಱುದಾಳೊ[1]ಕತಚುಂಬಿತ[1]ಪ್ರಸರದಿಂ ಹನ್ತಾಬ್ಜವಿನ್ಯಾಸದಿಂ
ಕಱುದಾಂಬೋಳಿತಮಾ[ಳಿಯಿಂ] ಕಱುದು ತಾಂಬೂಲಪ್ರದಾನಂಗಳಿಂ ।
ಕಱುದಾನಮ್ರಶಿ[2]ರಃಕರಾಂಜುಳಿ[2]ಪುಟವ್ಯಾಲಗ್ನಭಾಳಂ ಜಗ
ಕ್ಕೆಱೆಯಂ ಬೀಱೊಡೆ ಪೋಯ್ತು ರಾಜಗೃಹದಿಂ ಸೌಜನ್ಯರಾಜನ್ಯಕಂ ॥ ೧೦೨

(ಅನಂತನಾಥಪುರಾಣಂ, ೭–೫೭.)

ಘನ್ಯಣರಸಾವಗಾಹಭರಮಂ [3]ರದನ[3]ಚ್ಛದ[1]ರಾಗಭೋಗವಾ
ಗಿಸೆ ಘನಸಾರಚಂದನಜಳಪ್ಲವಮಂ ದರಹಾಸನಕಾಂತಿಗಳ್ ।
ಪಸರಿಸೆ [4]ಮನ್ಮಥೋ[1]ತ್ಸವರ[5]ಸಾ[5]ಮ್ಯತದೊಳ್ ಮುಟುಗಾಡಿ ಮೂಡಿ ಸಂ
ದಿಸೆ ಪುಲಕಂ ನೃಪಂ [6]ಮೆಱೆದ[6]ನಂಗನೆಯೊಳ್ ಜಲಕೇಳಿಲೀಲೆಯಂ ॥ ೧೦೩

(ಅನಂತನಾಥಪುರಾಣಂ, ೨–೧೯.)

[1] ಕನಚಂದ್ರಿಕಾ (ಅ). ಕನಚುಂಬಕ (ಕ). ಕನಚುಂಬಿತ (ಬ). [2] ರನ್ಮಮಂಜಲಿ (ಅ). [3] ಡನನುತ್ಸವ (ಖ.ಬ). [4] ತನ್ಮನೋ (ಕ.ಖ.ಬ). [5] ತಾ (ಕ.ಖ.ಬ). [6] ಪಡೆವ (ಅ).

ಓರಂತೆ ಮೆಚ್ಚಿದಂ ಕೃತಿ
ಸಾರಂ ಜಲಕೇಳಿಗಿಂತು ಹೊಯ್ಸಳವಂಶೋ ।
ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೧೦೪

ಇದು ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ಷ್ಟಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕುಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತ್ಯ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ಜಲಕ್ರೀಡಾವರ್ಣನಂ ದ್ವಾದಶಾಶ್ವಾಸಂ ಸಂಪೂರ್ಣಂ.

ಮಧುಪಾನವರ್ಣನಂ*

ಮದಿರಾಪಾನವಿಕಾರಮುಂ ನವವಯಸ್ಸಂಪತ್ತಿಯುಂ ಬಂದು ನೋ
[1]ಡ[1]ದವೋಲ್ ನೋಡುವ ನಲ್ಲನಿ[2]ರ್ಪಿ[2]ರವುಮತ್ಯುತ್ಸಾಹಮಂ ಮಾ[3]ಡೆ[3] ಚಿ।
ತ್ತದೊಳಾಗಳ್ ತನುಮಧ್ಯೆಗೇನೆಸೆದುದೋ ನೃತ್ಯಂ ಚತುರ್ಥಂಗಿ ಭೇ
ದದ ಲೀಲಾಭಿನ[4]ಯ[4]ಪ್ರಧಾನವಿಧಿಯಿಂ ಕಾದಂಬರೀಗೋಷ್ಠಿಯೊಳ್॥ ೧

(ಶೃಂಗಾರರತ್ನಾಕರಂ, ೨–೭೧.)

ಮನಮನೊಜಿಲ್ಚೆ ನೂಪುರದ ಮೆಲ್ಲುಲಿ ಕಾಂಚಿಯ ಮಂಜುಳಸ್ವನಂ
ತನಗಿನಿದೀಯೆ ಕಂಕಣರುಣತ್ಕೃತಮೊಪ್ಪಿರೆ ತಾರಹಾರಮೊ।
ಯ್ಯನೆ ಮೊಲೆಯಂ ಪಳಂಚಲೆಯೆ ರಾಗರಸಂ ಕಠೆಗಣ್ಮೆ [5]ಬಂದು[5] ಕಾ-
ಮಿನಿ ನಯದಿಂ ಕರಂ ನಲಿದು ನರ್ತಿಸಿದಳ್ ಮಧುಪಾನಗೋಷ್ಠಿಯೊಳ್॥ ೨

(ಶೃಂಗಾರರತ್ನಾಕರಂ, ೧–೪೫.)

ಮದಿರಾಪಾನವಿಕಾರ್ದಿ
ನೊದವಿದ ಮುಗ್ಧೋಕ್ತಿ ಬೇಱು ಬಗೆಗೊಳಿಸೆ[6] ಕದ।
ಕ್ಕದಿಸೆ ಮೊಲೆ ನಡುಗೆ ನಡು ಮಿಳ
ರ್ದದಿರೆ ಕುರುಳ್ ಸುದತಿ ಜತೆಗೆ ಮೆಟ್ಟಿದಳೊರ್ವಳ್॥ ೩

(ಶೃಂಗಾರರತ್ನಾಕರಂ, ೧–೪೭.)

ಇರೆ ನವಪದ್ಮರಾಗಚಷಕಂ ನಿಜಹಸ್ತತಳಾಗ್ರದೊಳ್ ಮನೋ
ಹರಿ ತಳಿರ್ದೊಂಗಲಂ ತಳೆದ ಕೋಮಲವಲ್ಲರಿಯಂತೆ ರಕ್ತಪಂ।
ಕರುಹಮನಾಂತ ಪಂಕಜಿನಿಯಂತೆ ನವೋದಿತಚಂದ್ರಬಿಂಬಮಂ
ಧರಿಯಿಸಿದಿಂದ್ರದಿಗ್ವನಿತೆಯಂತೆಸೆದಳ್ ಮಧುಪಾನಗೋಷ್ಠಿಯೊಳ್॥ ೪

(ಜಗನ್ಮೋಹವಿಜಯಂ, ೧೬–೧೧೫.)

---

* ಈ ಪ್ರಕರಣದ ಆರಂಭದಲ್ಲಿ ಇತರ ಆಶ್ವಾಸಗಳ ಪ್ರಾರಂಭದಲ್ಲಿ ಇರುವಂತೆ ಆಶ್ವಾಸದಲ್ಲಿ ವರ್ಣಿತವಾಗುವ ವಿಷಯಗಳನ್ನು ಸೂಚಿಸುವ ಸಂಗ್ರಹರೂಪವಾದ ಬಹುಶಃ ಮಲ್ಲಿಕಾರ್ಜುನನಿಂದಲೇ ರಚಿತವಾಗಿರಬಹುದಾದ ಒಂದೆರಡು ಪದ್ಯಗಳು ಇಲ್ಲವಾಗಿವೆ.

[1] ಡಿ (ಖ.ಬ). [2] ರ್ದಿ (ಖ.ಬ). [3] ಡಿ (ಖ.ಬ). [4] ವ (ಅ). [5] ವಾರ (ಖ.ಗ.ಘ.ಬ.). [6] ದೊಳೊದವಿರೆ ಮುಗ್ಧೋಕ್ತಿ ಕಣ್ಗೆವರೆ ಗಾಡಿ (ಅ).

ನಡೆ ತಡಮಾಗೆ ನುಣ್ಣುಡಿ ತೊದಳ್ಗೊಳೆ ಝೊಂಪಿಸೆ ಕೆಂಪನಾಳ್ದ ಕ
ಣ್ಗುಡಿ ತನು ಡಿಳ್ಳಮಾಗೆ ಬಿದುವಿಂ ಪೊಳಪೇಱೆ ಕದಂಪು ಕಾಂತಿಯಿಂ।
ನಡಿಲೆ ಪೊದಟ್ಟ ನೀವಿ ಮಧುಪಾನನಿನೋದದಿನಾದ ಸೋಂಕು ಚೆ
ಲ್ವಡಿದಿರೆ ಬರ್ಪ ಗೋಪಿ ಮುರವೈರಿಗೆ ಕಾಣಿಕೆಯಿಕ್ಕಿ ಸೊಕ್ಕಿದಳ್॥ ೫ *

ಪಚ್ಚಿ ಪರಕಲಿಸಿ ಬೆನ್ನೊಳ್
ಬಿಚ್ಚಿರೆ ಮುಡಿ ಕಳ್ಳ ಬೆಳ್ಳಿವಟ್ಟಲ್ ಬಾಯೊಳ್।
ಬೆಚ್ಚಂತಿರೆ ಸತಿ ಸಸಿಯಂ
ಕಚ್ಚಿ ನೆಲಕ್ಕಿಟಿವ ರಾಹುವಂ [1]ಪೋಲ್ತಿರ್ದಳ್[1]॥† ೬

ತೊಡರೆ ಕೊದಳ್ ಪೊದಟ್ಟು ತುದಿನಾಲಗೆಯೊಳ್ ನಸುಗೆಂಪಿನಿಂದೆ ಕ
ಣ್ಣೊಡೆದು ಪಳಂಚಿ ಪೂರ್ವನೆವೆಯಿಕ್ಕುವ ತಗ್ಗುವ ತೂಗಿ ಬೀಗುತೊ।
ಗ್ಗುಡಿಸುವ ಜೋಲ್ವ ಝೋಂಪಿಸುವ ಭಂಗಿ ಮನಂಗೊಳೆ ತಕ್ಕಿನೆಕ್ಕೆಯೊಳ್
ತಡತಡಮೆಟ್ಟಿ ಪಾಡಿ ಪೊಸಕಳ್ಗಳನೀಂಟಿದುದಂಗನಾಜನಂ॥ ೭

ಮುಡಿ ಮಕರಧ್ವಜಂಬೊಲೆ[2]ಬಲು[2]ತ್ತಿರೆ ಬೆಂಬಿಡದೊಯ್ಯನೊಯ್ಯನು
ಳ್ಳುಡೆ ಕಟಿಸೂತ್ರದೊತ್ತಿನೊಳೆ ಜೋಲ್ದರೆ ನಾಣ್ ತಲೆದೋಱೆ ಕೂಡೆ ಕೂ।
ಕಿಡುವ ಕುಕಿಲ್ವ ಬಿಕ್ಕುಳಿಪ ತೇಗುವ ತನ್ನ ತೊಡಂಕದ್ಯೆದೆ ನೂ
ರ್ಮಡಿ ಮನದೊಳ್ ಪಳಂಚಲೆಯೆ [3]ಢಕ್ಕೆಯೊಳಟ್ಟಿ ಜವಾಗೆಯಾಡಿದಳ್[3]॥ ೮
(ಪಂಪಭಾರತಂ, ೪–೯೦.).

ತೋರಮುಡಿ ಬ[4]ಟ್ಟಿ[4]ಪ್ಪುದಾರುಣಿಯೊಳಗ್ಗಕಚಮಾರತಿಯನೆತ್ತೆ [5]ವದನೇಂದು
ಗಲರ್ಗಣ್ಗಳ್[5]
ತೋರಮೊಲೆ ಹಾರಮಣಿ ಕಾರಮಚೆಯಂ ಕಱುಯೆ ನೀರೆ ನನು ಜಾಱಿ ಪೊಱಿವಾ
ಱಿ[6]ಲೆಪದಿಂದಂ।
ದಾ[6]ರಮನ[7]ಮುಂ[7] ಸ್ಮರವಿಕಾರ[8]ಮನೆ[8] ತಾ[9]ಳೆ ಲಲಿತೋರು ಭರ[9]ದಿಂದೊಲೆದು
[10]ಮೆಟ್ಟಿ[10] ಕುಣಿದಳ್ ಶ್ಯಂ
ಗಾ[11]ರರಸವಾರಿನಿಧಿ ಮೇರೆಯನತಿಕ್ರಮಿಪ ವಾರವಧುಗಳ್ ನುಡಿದು ಸೊರ್ಕಿ
ದೆಸೆವಿಟ್ಟಿರ್[11]॥ (?) ೯

---

* ಈ ಪದ್ಯ (ಕ) ಪ್ರತಿಯಲ್ಲಿ ಅನ್ವಯ್ಸವಾಗಿದೆ. † ಈ ಪದ್ಯ (ಕ) ಪ್ರತಿಯಲ್ಲಿಲ್ಲ. [1] ನೆರೆಪೋಲ್ತಳ್ (ಗ.ಘ). [2] ಲೊಲೆ (ಖ.ಬ). [3] ತೆಕ್ಕೆಯನೆಕ್ಕೆಯೊಳೊರ್ವಳಾಡಿದಳ್ (ಕ.ಖ.ಬ). [4] ಟ್ಟು (ಕ). [5] ಕರವಾರಿಜಚಯಂಗಳ್ (ಕ). [6] ಮುದದಿಂದಂದಾ (ಕ), ಲೆಸೆದಿಂತುದ್ದಾ (ಖ). [7] ಮಂ (ಖ.ಬ). [8] ಮಂ (ಕ.ಬ). [9] ಳ್ದಿವರನೂರುಬಲ (ಕ). [10] ಯೇರಿ (ಖ.ಬ). [11] ರ ದೇವತೆಯ ಮಾರಿ ಮಿಗೆ ಸೊರ್ಕುತಮದಿರಮನೆ ನೀಂಟಿದರವಾರವಧುವ್ಯಂದಂ (ಕ).

ತುಂಬಿಗುರುಳೊಳ್ ತಡತಡಂಬಡರೆ ತುಂಬಿಗಳ [1]ಬಿಂಬಮಾಲೆಗಳ ಮುಖ
ವಾನವದ[1]ಕಂಪಂ
ಪೊಂಬಳೆಯ ಸೋರ್ಮುಡಿ ವಿಡಂಬಿಸೆ ಮನೋಜನಲರಂಬು ಮಡೆಯಂ
ಕಜ್ಜೆ[2]ಯೆ ಕಾರಮುಗಿಲಂ ಬ[2]।
ಕ್ಕಂಬಯಲೊ[3]ಳೆಂ[3]ಬಮದ್ರು ಮೀಂಬೊಣರ್ಗಳಂತಿರೆ ತೆಱಂಬೊಳೆವ ನೀಳ್ದನಿಡು
ಗಣ್[6] ಬೆಳಗೆ ತೊಂ
ಡಂ ಬೆಳಗೆ [4]ತೊಂಡರದ[4] ಮಾಜ್ಕೆ [5][ಯಿನೊಡಂಬಡುತಲಾಡಿದಳು ಬೆಂಬಟಿಯ
ಸಂಭ್ರಮದಲೊರ್ವ್[6]ಳ್[5]॥ (?) ೧೦

ಕೊಂಕೆ ಪುರ್ವು ತೊಡಂಕೆ ಸೋರ್ಮುಡಿ ನಾಣ ಪೊಂಕ ಮಡಂದಿ ತಾಂ
ದಿಂಕುಗೊಂಡೆಳಸೊರ್ಕು ಜಕ್ಕುಲಿಪಂತೆ ಮಿಕ್ಕಡದಿಂದ ರಾ।
ಗಾಂಕುರಂ ನೆಗೆವನ್ನವಾಗಿರೆ ಮೆಯ್ಯೆ ಮರ್ ನಲಿದುಣ್ಮೆ ತ
ಳ್ಕಂಕಗುಟ್ಟಿ ಮುಟುಂಗಿ ಪೊಣ್ಮೆ ನಿತಂಬದಿಂ ಮದನದ್ರವಂ॥ (?) ೧೧

ತೊಲಗೆ ಮೇಲುದನುರ್ಚಿ ಸಾರ್ಚಿದ ಬಾಳ್ವೊಲಿರ್ದ ಲತಾಂಗಿಯಂ
ಜಲಕನಾಗಿರೆ ಕಣ್ಗೆ ಸೊಕ್ಕಿನ ರೂಪು ಬೀಗಿ ಬೆಳರ್ತ ಬಾಯ್।
ಮೊಲೆಯ ಬಿಂಕಮೆ ಸೋಂಕಿ ಕಿಂಕೆಗೊಳೆಯಾಗಿ ನೋಟ್ಪರ ಚಿತ್ತದೊಳ್
ಮೊಳೆಯಲಬಲೆ (?) ಬೆಡಂಗೊಡಂಬಡೆ ಚೋದ್ಯಮಾಯ್ತು ಮದೋದ್ಯಮಂ॥ ೧೨

ತುಱುಗಿ ತುಂಬಿಗುರುಳ ಬಂಬ[6]ಲ್ಲೀ[6] ಕಪೋಲರಂಗಹೊಳ್
ತುಳುಂಕೆ [7]ಪ್ಪೊಕ್ಕ ಪಾಂಗಿನೊಳ್[7] ಮಲಂಗೆ ವಿಜಯಮಂಗದೊಳ್
ಮಿಱುಗೆ ಪಲ್ಲ ಧವಿಗಳೊಲೆದು ನೆಲಸಿ ಚೆ[8]ಲ್ವನಾಯ[8]ದೊಳ್:
ಬೆಡಂಗು ಬಳೆಯೆ ಮಾನದೊಳ್ ಮನಂ ತೊಡಂಕೆ [9]ಗಾನ[9]ದೊಳ್।
[10]ಮೆಱೆವ[10] ನವಪಯೋಧರೋತ್ಥ ಕುಂಭಮುಲಿಯೆ ಪಾದದೊಳ್
ಚಳಾಂದುಕಂ ವಿನೋದದೊಳ್ ಕಡಂಗೆ ಮಧುರ ಮೋದದೊಳ್
ಮೆಱೆದು ಪುಗುಗುಮಂಗನೆಯರುಮಂಕದಾನೆಯುಂ ನಮ
ನ್ನಿ ಕಾಮನಿಖಳಭುವನಮಂ ತದೀಯ ರಾಜಭವನಮಂ॥ ೧೩
(ಲೀಲಾವತಿ, ೭-೨೩.)

---

[1] ವೆಳಸುತ್ತಿರೆ ಮುಖಾಂಬುಜದ (ಗ.ಘ). [2] ಯಲಂಬುದಮಿದೆಂಬ (ಗ.ಘ). [3] ಳಂ (ಗ). [4] ಚೆಂಬುದರ (ಗ.ಘ). [5] ಯ ಕೊದಂಬಡೆಯೆ ಕಾಲಲತಬೆಂಬ ಟಿಯೊಳಾಡಿದಳರ್ವೊರ್ವ್[6] (ಕ.ಖ.ಬ). [6] ಲದೆ (ಅ). [7] ಪ್ಪೊಂಗರಂಗದೊಳ್ (ಅ). ಸೊರ್ಕಪಾಂಗದೊಳ್ (ಕ). [8] ಲ್ವಯಾನ (ಅ). [10] ದಾನ (ಅ). ನೆಱಿಯೆ (ಅ).

ಕುಡುವುರ್ವಂ ನಸು ನೀವುತುಂ ತಿಲಕಮುಂ ತಿರ್ದುತ್ತು ಮಾನ್ಯಾಬ್ಜಮುಂ
ತೊಡೆಯುತ್ತುಂ ಕುಟಿಲಾಳಕಾವಳಿಗಳಂ ಸೈತೊತ್ತಿ ಚೆಲ್ವಾಗೆ ನೇ।
ರ್ದಡಿನುತ್ತುಂ ಮದಿರಾಲಸೇಕ್ಷಣೆ ಮದನ್ತಂಬೇರಮಾಕಾರದಿಂ
ನಡೆಪಾಡುತ್ತು ಮುಪಾಂಗಣಪ್ರಣದೊಳ್ ತನ್ವಂಗಿ ಕಣ್ಗೊಪ್ಪಿದಳ್॥ ೧೪

ಅಲರ್ಗಣ್ಣ ಕುರುಳ ನೆಲಂ
ಲಲನೆಯರಾ ಮದಿರ ಮಂಡ[1]ನಂಗ[1]ಳ ನೀಲೋ।
ತ್ಪಲದಳಮುಣ್ಮಲ್ ಮಿಗೆ ಕ
ಟ್ಟಲಸದೆ ನಡೆನೂಂಕಿ ನೋಡಿ ಬಟಿಕವನಱಿವರ್॥ (?) ೧೫

ಕಡೆಗಣ್ಣ ಬೆಳ್ಪು ಕೆಂಪಿಂ
ಗೆಡೆಗುಡೆ ಬೆಳವರ್ವಾಯ್ ಪಳಂಚೆ ಸೊಗಯಿಸೆ ಮುದ್ದಿಂ।
ಗೆಡೆಗುಡದೈತಂದುಂ ಸೊ
ರ್ಕಡನುಡಿವಂತೆ [2]ಕೊ"ದಳ್ ಪೊದಱ್ದೊಡಂಬಡೆ ನುಡಿದರ್॥ ೧೬

ಕಾಯಡೆ ಕಣ್ಬರಿಯಂ ತಂ
ಗಾಯದೆ ನಿಮಗರಸನಾಣೆಯೆನೆಯೆನೆ ನೃಪತಿಯ।
ನಾಯಕಿಯೊಳ್ ನೆರೆದಿರ್ದ ಪ
ನಾಯತರಂ ಗೊಡ್ಡಕಾರ್ತಿ"ಯರ್ ಪಿಡಿದೆಱೆವರ್॥ (?) ೧೭

ತಱಿತಱಿಮೆಟ್ಟಿ ರಾಗದೊಡಗೂಡಿ ಬೆಡಂಗು ಪರಿಶ್ರಮಂಗಳೊಳ್
ನೆಱಿದಿಡೆ ನೂಲತೊಂಗಲ ತಲಾರದ ಮೆಲ್ಲುಲಿ ಪೆರ್ಚೆ ಮೆಲ್ಪು ಮ।
ತ್ತೊಱಗೆ ಕರಂಗಳಿಂ ನಿಱಿದುಱುಂಬೆದೆವಾದ್ಯದೊಳೊಂದಿ ನಿಂದು ಮುಂ
ದೆಱಗಿ ಲಯಂಗಳೊಳ್ ತಗುಳಿ ನರ್ತಿಸಿದಾಕೆಯರೊಪ್ಪಿ ತೋಱುದರ್॥ (?) ೧೮

ಇಱಿದುದಕದಂತೆ ಹಾಲಿನ
ನಱುಸೋನೆಯಲುಂಡ ಭಿಣ್ಣದರಲ್ಗಳ ಸೊನೆಯಿಂ।
ತುಱುಕಿನ ಜೋ[3]ಲುವ ತಿಳಿಗಳ[3]
ನೆಱಿಗಿದರಾ ಜನಮನಳುರೆ ಹೊಸ ರಸವಣಿಗರ್॥ (?) ೧೯

ರಸವಣಿಯನುಂಡ ಗೊಱವಿತಿ
ಪೊಸತಾಶೀರ್ವಾದವುಳ್ಳದೊಂದೆಂದಾಗಳ್।
ಬಸಿಗಳ್ಗಿಂಗೆ ಮಹೀಶರ
ಪಸಾದ ಸುರುಕವಡೆ ಕವಡೆ ಹರಿವೋ ಎಂದಳ್॥ (?) ೨೦

---

[1] ವಂಗ (ಖ). [2] ತೊ (ಖ.ಬ). [3] ಱುತಿಳಿಗಳೆನೆನೆ (ಕ).

ಏಗುವೆನೇಗುವೆಂ ಮುಗಿಲು ಬಿದ್ದಿದೆ ಮಂಡೆಯ ಮೇಲೆ ಹಾವು ಹಾ
ನಾಗಯನಾಮಿ ಜೋಯೆನುತೆ [1]ಕ[1]ತ್ತೆಗೆ ಕೈಮುಗಿದಕ್ಕ ಬಲ್ಲೆನಾಂ।
ಬಾ[2]ಗಿ[2]ಯ ಕಂತಿ[3]ಗ[3]ಣ್ಣಿಗೆಱೆ ಸೋದರನಾದಿನಿ [4]ಧಿಂ ದಿಮಿಕ್ಕ ಧಿಂ[4]
[5]ಕೋ[5]ಗಿಲೆಗೂರು ನಾರೆಯೆನುತೊರ್ವ [6]ಪುಳಿಂದಿನಿ ನಾಟ್ಯ[6]ವಾಡಿದಳ್॥ (?) ೨೧

ನಗುಗೇ ಬಾಲಕಿ ಬ[7]ಯ್ಯೆ[7] ನಿನ್ನ ಮೊಲೆಯಂ ಕೊಂಡೊಯ್ದರಾರ್[6] ಭಾವನೆ
ಲ್ಲಗೆ ಕೊಲ್ಲಾಪುರಕೇಕೆ ನಾಯ್ಗುಣಿಸನಿಕ್ಕಲ್ ತಕ್ಕುದೇನಕ್ಕ ಬೇ।
ನಗೆ ಬಾದಾವಿಯ ಬೆಟ್ಟಕಣ್ಣನದನಾಂ ಬಲ್ಲೆಂ ಎನುತ್ತೊರ್ವಳು
ರ್ವಿಗೆ ಬಿಡ್ದೊಯ್ಯನೆಯೆದ್ದು ಬಾಗಿ ಮಧುಪಾನೋನ್ಮತ್ತೆ ತೂಗಾಡಿದಳ್॥ ೨೨

ರಸಮೆ ರಸಂಬೊಲಿಂಬನೊಳಕೊಂಡಿರೆ ಭಾವಮೆ ಜೀವಮಾಗೆ ಚೌ
ರಸಮಳವಟ್ಟು ತೋಱೆ ಜತಿಯಂ ಕೊಳೆ ಕಾಲ್ದುಱುಗಲ್ ಬೆಡಂಗುವೆ।
ತ್ತೆ ಸೆದಿರೆ ಚೆ[8]ಲ್ವೊ[8]ಡಲ್ ಶಬರಿ ಸಂಭ್ರಮವಾಗಿರೆ ಪೆರ್ಚಿ ಜಾಣ್ಮೆಯೊಳ್
ಕುಸುರಿಯೊಳಾಡಿದಳ್ ದ್ರುತವಿಲಂಬಿತ ಮಧ್ಯಲಯಕ್ರಮಂಗ[9]ಳಿಂ[9]॥ ೨೩

ಪಿಡಿದೊಡೆ ರಾಹು ಕಳ್ಳೊಳಗೆ ನಿಕ್ಕುವಮ[10]ಲ್ಲ[10]ದನಿಂತು ನಂಬು ನೀಂ
ಜಡಿವೊಡೆ ನಿನ್ನ ರೋಹಿಣಿಯುಮಿಲ್ಲ[11][ಟಿಕಾತ][11]ರಮೋಘಮೇಕೆ ನೀಂ।
ನಡುಗುವೆಯಕ್ಕುಮಾಗಳಱುದೆಂ ಪೊಸವೆಂಡಿರೊಳೊಲ್ದು ಕೂಡುವಾ
ಗಡಿನ ಭಯಂ ವಿಟಂಗೆ ಪಿರಿದಪ್ಪುದು ಶಂಕಿಸದಿರ್ ನಿಶಾಕರಾ॥ ೨೪

ವಿಧುಮುಖಿ ಮೆಲ್ಲಮೆಲ್ಲನೆ ಮಧುದ್ರವಮಂ ತೆಗೆದೀಂಟುವಲ್ಲಿ ತ
ನ್ನಧರದ ರಾಗದೊಳ್ [12]ಪೊಳೆದುದಂ ಮಧುವಂ[12] ಬೆಱಗಾಗಿ ನೋಡುತುಂ।
ಮಧುರಸಮಲ್ತು ಕುಂಕುಮರಸಂ ದಿಟವೆಂದು ಬಟಿಕ್ಕೆ ಶಂಕೆ ತ
ನ್ಮಧುರಸಗಂಧದಿಂ ತೊಲಗೆ ಸೇವಿಸಿದಳ್ ಮಧುವಂ ನಿಜೇಚ್ಛೆಯಿಂ॥ ೨೫

(ಜಗನ್ನಾಥವಿಜಯಂ, ೧೬–೧೧೬.)

ತನುಲತೆಗಂಕುರಂ ತಳರಲರ್ ಮಧುಸಂಗದೊಳಾಯ್ತು ಚೋದ್ಯಮೆಂ
ದೆನೆ ಮಧುಪಾನಜಾತಪುಳಕೇಕ್ಷಣ ಶೋಣ[13]ತ[13] ಘರ್ಮಬಿಂದುಗಳ್।

---

[1] ಕೆ (ಘ). [2] ಲ (ಘ). [3] ಯ (ಘ). [4] ಧಿಮ್ಮಿ ಧಿಮ್ಮಿತೋ (ಘ). [5] ಕೂ. (ಕ). [6] ಳುನೊಕ್ಕಿಯೆನೃತ್ಯ (ಘ). [7] ಯ್ತು (ಗ). [8] ಲ್ವ (ಕ.ಖ.ಘ.ಙ). [9] ಳಂ (ಖ.ಙ). [10] ಲ್ಲಿ (ಕ). [11] ನಿತಾದ (ಕ). [12] ಪೊರೆದುದಂ ಮನದೊಳ್ (ಅ). [13] ಮ (ಅ).

ತನಗೆಸೆಯಲ್ ಮಹೋತ್ಸವದೆ ಕೋಗಿಲೆ[1]ವೆಣ್[1] ಗಬಪಂ ನೆಗಟ್ಟು[2]ವಂ
ತನುವಿಪ[2] ಸೊರ್ಕಿನಿಂ ಪಿಕನಿನಾದೆ ಪೆಱಿಳ್ ಗಬಪಂ ನೆಗಟ್ಟಿದಳ್॥ ೨೬

(ಜಗನ್ನಾಥವಿಜಯಂ, ೧೬–೧೧೬.)

ಎಮ್ಮ ಕೆಲಂಗಳೊಳ್ ಮೆಱೆಪುತಿರ್ದಪುವೀ ಶ್ರುತಿಪೂರಕೈರವಂ
ತಮ್ಮ ಬೆಡಂಗನೆಂದು ಸೆಣಸುತ್ತ ವಱೊಳ್ ತೊ[3]ಡರ್ದಿ[3]ಂತವಲ್ತೆ ಕೆಂ।
ಪಂ ಮುಳಿಸಿಂದವಾಂತವೆನೆ ಕೆನ್ನೆವರಂ ನಿಮಿರ್ದಕ್ಷಿಗಳ್ಗೆ ರಾ
ಗಂ ಮಧುಸೇವೆಯಿಂ ನೆಗಪೆ ರಂಜಿಸಿದರ್ ಮಧುಮತ್ತ ಕಾಂತೆಯರ್॥ ೨೭

(ಜಗನ್ನಾಥವಿಜಯಂ, ೧೬–೧೧೮.)

ಮೊಲೆಯಂ ಕದ್ದವರಾರೊ ನಮ್ಮೊಳಗೆ [4]ನೀನೇ ನೀನು[4]ಮಾನೆಂದುಮೊ
ರ್ಮ ಲತಾಗಾತ್ರೆಯ ಮೇಲೆನಲ್ಕೆ ಪಿರಿದೊಂದು ಭ್ರಾಂತಿಯಿಂ ತನ್ನ ಪೆ।
ರ್ಮೊಲೆಯಂ ತೋಱುದೊಡಾಹಹಾ ಮಱುದೆನಾಂ ನೋಡಕ್ಕ ಚಿಕ್ಕಮ್ಮನಂ
ಗೊಲವಾಯ್ತಣ್ಣನ ನಾರ್ಗೆಯೆಂದು ಮಧುಪಾನೋನ್ಮತ್ತೆ ಮಾತಾಡಿದಳ್॥(?) ೨೮

ಕಡಲೆಯ ಕಟಿಲೆಯ ಬೇಲದ
ಮಡಿವಾಗಲದೊಪ್ಪೆಯೆಳೆಯ ನೀರುಳ್ಳಿಯ ಮಾ।
ಮಿಡಿಗಳ ಪಸುಂಬರಿಯ ಸವಿ
ದಡಗಿನ ಬಾಡುಗಳ ನೆಲದೊಳ್ಕೇಂ ಬೇಯಿಸಿದರ್॥ ೨೯

ಕುಡಿದಾನಂದದೆ ಸೊರ್ಕಿ ಬ[5]ಟ್ಟೆ[5]ಯವರಂ ಕಂಡೆಯ್ದಿ ವಸ್ತ್ರಾಂತಮಂ
ಪಿಡಿದೈ ಘಾವ ಎನುತ್ತು ಮಿಾಗ ಕುಡು ತಾರಾ ಮೂಗನಾ ಮೂಗನಂ।
ಗಡಿಗೊಯ್ದಾ ಹರದಂಗೆ ಮಾಱುದೆಯಲಾ ವೂಯೆಂದು ತಾಂ ಮೂಗು ಹೊಂ
ದೊಡವೇನೇ ಕುಟಿಲಕ್ಕ ದೀವಳಿಗೆ ಬಾಳೆಂದುರ್ಬಿ ಜರ್ಬಾಡಿದಳ್॥ (?) ೩೦

ಗಾಳಿಗೆ ಮಾತನಾಡುವರು ಹಾರುವ ಹಕ್ಕಿಗೆ ಜೋಹರೆಂಬರೆ
ಳ್ದೂಳುವ ನಾಯ್ಗೆ ಮುದ್ದುಗೊಡಲೀಕ್ಷಿಸುವರ್ ಮರುಳಿಂಗೆ ಬುದ್ಧಿಯಂ।
ಹೇಳುವರುಟ್ಟುದಂ ಕಳೆದು ನೆತ್ತಿಗೆ ಸುತ್ತುವರಟ್ಟಿಯಿಂದೆ ಕಾ
ಡ್ಕೋಟಿಗಳಾಗಿ ಕೂಗುವರದೇಂ ಮಧುಪಾನದ ಸೊರ್ಕು ಸಾಲದೇ॥ ೩೧

ಓರಂತೆ ಮೆಚ್ಚಿದಂ ಕೃತಿ
ಸಾರಂ ಮಧುಕೇಳಿಗಿಂತು ಹೊಯ್ಸಳವಂಶೋ।

---

[1] ಯೊಲ್ (ಕ.ಖ.ಬ). [2] ತುಂ ತನುವಿನ (ಕ.ಖ.ಬ). [3] ಡರ್ದತ್ತಿ (ಕ.ಖ.ಬ).
[4] ನೀನೆನರಾನು (.ಖ.ಬ). [5] ಟ್ಟಿ (ಕ).

ದ್ಧಾರಂ ನರಸಿಂಗನುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ॥ ೩೨

ಇದು ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ತ್ಪಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾವಕರ್ಣನ ಕೌತುಕೋ
ತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ಮಧುಪಾನವರ್ಣನಂ ತ್ರಯೋದಶಾಶ್ವಾಸಂ ಸಂಪೂರ್ಣಂ.

ಸಂಭೋಗ ವರ್ಣನಂ

ಪರಿರಂಭಂ ಚುಂಬನಂ ಸೀತ್ಕೃತಿ ಗಳರುತಿ ದಂತಕ್ಷತಂ ರೇಖೆ ಹೊಯ್ಗುಳ್
ಕರಣಂಗಳ್ ಪಲ್ಲಟಂ ನಚ್ಚಿನ ಮುಖರ[1]ತೆ[1] ಸುಯ್ ಕಂಪನಂ ಸ್ವೇದಮಂಗಾಂ।
ತರಪೂರಂ ರೋಮಹರ್ಷಂ ನಯನಮುಕುಳನಂ ಮುಂಚಚಂಚ[2]ಚ್ಚ ಕುಂತೀ[2]
ಸ್ವರಮೊಪ್ಪಲ್ಕೊಪ್ಪವನ್ನಂ ಮೆಱೆ[3]ಗೆ[3] ಕವಿತೆಯೊಳ್ ನಾಡೆ ಸಂಭೋಗ[4]ದೊಳ್ಪಂ[4] ॥

ರತಿಗೇಹಂ ಹಾಸುಮಂಚಂ ಪಡಿಗವಡಪ[5]ವಿಂ[5] ಗೆಜ್ಜೆ[6]ಯುಂ[6] ಪಾನಕಂ ಧೂ
ಪಿತವಸ್ತ್ರಂ ಮಂಡನಂ ಲೇಪನಮಲರ್ವಸೆ ಪೂ ದರ್ಪಣಂ ವೀಜನಂ ಸ।
ತ್ಕೃತಿ[7]ಚಿತ್ರಂ[7] ವೀಣೆ ನೆತ್ತಂ ಸಹಚರಿಯಿವನುಳ್ಳಂಗದರ್ಗ್ಯೆಕರೂಪಾ
ನ್ವಿತೆ ಜಾಣುಳ್ಳಾಕೆ ಮಾಟ್ಕುಂ ವಿಟಗರ್ಗಭಿಮತಮಂ ಕಾಮನಾಮ್ರಾಜ್ಯದೊಳ್ಪಂ॥ ೨

ಮದನನೆ ದೈವವೊಲ್ದೊಲಿಸುವಾಗಮ[8]ವಾಗಮುವೆಯ್ದೆ[8] ಕಾಮ[9]ಕೂ
ಟದ ಸುಖಮಲ್ತೆ[9] ಮೋಕ್ಷದ ಸುಖಂ ಪೆಱ[10]ವೋ[10]ದುಗಳೆಲ್ಲವಿಂದ್ರಜಾ।
ಲದ ತೆಱನೆಂದು ತೊಂಡುಗೆಡೆಯಿತ್ತು ಪದೇಶಿಕನಂತೆ ಕಾಮ[11]ತಂ
ತ್ರ[11]ದ ತಿರುಳಂ ಕನತ್ಕನಕಪಂಜರಪಿಂಜರಿತಾಂಶುಕಂ ಶುಕಂ॥ ೩

ನೆಲೆಮೊಲೆ[12]ಯೊತ್ತೆ[12] ವಾತಮಧರಾಮೃತಸೇವನೆಯಿಂದೆ ಪಿತ್ತಮ
ಗ್ಗಲಿಸಿದಲಂಪಿನಿಂದಮಿರುಳೆಂಟು ಪಗಲ್ ಪದಿನಾಱುಗೊ[13]ಳ್ವ[13] ಕೋ।
ಟಲೆಯೊಳೆ ಪೋಗುಗುಂ ಕಫಮದಕ್ಕಟಿವೆಜ್ಜರ ಪೇಟ್ದ ಶುಂಠಿ ಪಿ
ಪ್ಪಲಿ ಮೆಣಸೇಂ ತ್ರಿದೋಷ[14]ಹರಣ[14]ಕ್ಕ[15]ಬಲಾಜನ[15]ಸೇವೆ ಸಾಲದೆ॥ ೪

ಪದೆದಮರ್ದಪ್ಪಿದಪ್ಪುಗಳ ಕಾಳಸೆಗಳ್ ಸಮಸಂದು ವಜ್ರಲೇ
ಪದೊಳೆಣೆಯಾಗಿ ಪತ್ತಿ ಸುರತಶ್ರಮಮಂ [16]ತಳೆ[16]ವಲ್ಲಿ ನಾಂದು ಪ।
ತ್ತಿದ ಸಿರಿತಾಣೆಯೋಲೆಗಳನೊಯ್ಯನಗಲ್ಚುವ ಮಾಟ್ಕೆಯಾದುದೇ
ನೊದವಿದಲಂಪು ದಂಪತಿಗೆ ಪೊಂಪುಟಿವೋಯ್ತೊ ರತಿಪ್ರಬಂಧದೊಳ್॥ ೫

---

[1] ತೆ (ಖ.ಬ.). [2] ತ್ಸಕಾಂಚೀ (ಖ.ಖ.). [3] ಯೆ (ಖ.ಬ.). [4] ವರ್ಣಂ (ಕ.ಗ.ಘ.) [5] ದಿಂ (ಬ.). [6] ಯಂ (ಖ.ಬ.). [7] ಚಕ್ರಂ (ಕ), ವೆತ್ತಂ (ಗ.ಘ.). [8] ವೇದ ಮೆವೇದ (ಕ). [9] ಸೌಖ್ಯದ ತೆಱನಲ್ತೆ (ಕ). [10] ತೋ (ಖ.ಬ.). [11] ತತ್ವ (ಕ). [12] ಯಂದೆ (ಖ.ಬ.). [13] ಳ್ದ. [14] ಗರಪ್ಪೊ (ಖ.ಬ.). [15] ಧರಾಮೃತ (ಕ.ಗ.ಘ.) [16] ಕಳೆ (ಬ.ಘ).

ತಾಗದೆ ಪಲ್ಗಳ್ ತುಟಿ ಹು
ಣ್ಣಾಗದೆ ನಡು ಕಂದದೊಳಗು ನೋಯದೆ ಕೆಲ[1]ಕಂ।
ಬಾಗಿ[1] ರತಿರಾಗದುರುಳಿವೊ
ಲಾಗೆ ಕರಂ ಬೀ[2]ಗಿ[2] ಬಾಯ್ಗಳಂ ಚುಂಬಿಸಿದರ್॥ ೬
(ಶೂದ್ರಕಂ—ಕಾವ್ಯಸಾರಂ ೬೭೭).

ಕದಪಿನ ಕಣ್ಣ ಸಾರ್ಕೆಯನಲಂಕೃತಿವೆತ್ತ ಗಳಪ್ರದೇಶಮಂ
ಪದಕದ ತಾಣಮಂ ಕುಚತಟಾಂತರಮಂ ನಿಜಬಾಹುಮೂಲಮಂ।
ಮೃದುರಸನಾಗ್ರದಿಂ ಬಳಸಿ ಚುಂಬಿಸಿದರ್ [3]ಸವಸೀಳ್ದ ನಾ[3]ಗಲೀ
ಕದ ಕುಸುಮಂಗಳಂ ಪಱುದು ಪತ್ತಿಸಿದಂತೆವೊಲೊಪ್ಪಿ ತೋರ್ಪಿನಂ॥ ೭
(ಶೂದ್ರಕಂ, ಕಾವ್ಯಸಾರಂ—೬೭೭).

[4][ನಿ][4]ನಗಿಂಬಲ್ಲದು ತಳ್ಪಮೆಂದು ತೆಗೆದಿಟ್ಟುತ್ಸಂಗದೊಳ್ ಪೀವರ
ಸ್ತನ[5][ಮಂ][5] ಜಾಱುವ ಮೇಲುದಂ ತೆಗೆವ ಪಾಂಗಿಂದಂಟಿ ಚಿತ್ರಾವಲೋ।
ಕನದೊಳ್ ಪತಿ ತ್ತಿಸಿ ವಾರಭಾವಿತ ರತವ್ಯಾಪಾರಮಂ ಪಚ್ಚು[6]ವೊಂ[6]
ದು ನೆವಂ ತಳ್ತಿರೆ ಸಾರ್ಚಿ ಚುಂಬಿಸಿದನುರ್ವೀವಲ್ಲಭಂ ನಲ್ಲಳಂ॥ ೮

ತೆಗೆದುತ್ಸಂಗದೊಳಿಟ್ಟುಕೊಂಡು ನಯದಿಂ ತಚ್ಕೈಸಿ ಸಂವ್ಯಾನಮೊ
ಯ್ಯಗೆ ಜಾಱುತ್ತಿರೆ ಸಾರ್ಚುತಂತೆ ಕುಚಮಂ ಕಣ್ಗಟ್ಟಿಯಂ ಪೆತ್ತು ಮಾ।
ಲೆಗುರುಳ್ ರೊಂಪಿಸೆ ಬಾಗಿ ನಿಂದ ಮೊಗಮಂ ಸೈತೆತ್ತಿ ತಳ್ತಚ್ಚೆವಾ
ತುಗಳಿಂ ಭೋಗಿಸುವಲ್ಲಿ ಬಂದಿವಿಡಿದಂ ಬಿಂಬಾಧರಸ್ಥಾನಮಂ॥ ೯

ನಯದಿಂ ಚುಂಬಿಸಿ ತೋಳ ತಟ್ಟಿದಿರ್ಗೊಳುತ್ತಿರ್ಪನ್ನೆಗಂ ಮೆಲ್ಲನ
ಪ್ಪಿ ಯಥಾಪ್ರಸ್ತುತಮನ್ಮಥಕ್ಷಣನದಿಂದಂ ಶಂಕೆಯಂ ತಾಳ್ದಿ ದಿ।
ಟ್ಟಿಯ ಮೆಯ್ಗೂಟದಿನಾದುದಂ ತಿಳಿದು ನಾನಾಭಂಗಿಯಿಂ ಕೂಡಿದಂ
ಪ್ರಿಯೆಯೊಳ್ ಸಮ್ಯಗುಪಾತ್ತ ಚಿತ್ತ ಭವಲೀಲಾಗೌರವಂ ಪೌರವಂ॥ ೧೦

ತೆಗೆದಮರ್ದಪ್ಪಿ ಬಾಯ್ವಿಡಿದು ನಂಬಿಸಿ ಚುಂಬಿಸೆ ಪೋದಜವ್ವನಂ
ಮಗು[7]ಟ್ಟುದೆ[7] ದೇವರಾ[8]ಯು[8] ದೊರೆಕೊಂಬುದು ಕೋಮಳಗಾತ್ರೆಯರ್ಕಳೋ।
ಲಗದ ವಿನೋದವಿಲ್ಲದರಸಂ ವಿರಸಂ ಮರದಿಂದೆ ಕಷ್ಟಮಾ
ಕೆಗಳತನುಪ್ರಸಂಗದೊಳೆ ಬಾಯ್ವಿ[9]ನರಂ ನರನಲ್ತು[9] ಲೋಕದೊಳ್॥ ೧೧

---

[1] ನಿಂಬಾಗಿ (ಕ.ಖ.ಬ); [2] ಗೆ (ಕ). [3] ಸ್ಮರ್ಮನಿರ್ದುನಾಂ (ಕಾವ್ಯಸಾರ).
[4] ನ. (ಕ.ಖ.ಗ.ಘ.ಬ) [5] ದೊಳ್ (ಸ). [6] ವಂ (ಖ.ಬ); [7] ಳ್ದುದು (ಕ.ಗ.ಘ).
[8] ಯ (ಕ.ಗ.ಘ). [9] ಮರಂಮರಲ್ತೆ (ಖ.ಗ.ಘ).

ತಂಬೆಲರಂತೆ ಸೋಂಕಿ [1]ಖ[1]ಗದಂತಿರೆ ಮೇಳಿಸಿ ತುಂಬಿಯಂದದಿಂ
ಚುಂಬಿಸಿ ಸೊಕ್ಕನಿಕ್ಕಿ ಮಱಿಪಿಕ್ಕಿ ಪದಂಬಿಡೆ ಚಿತ್ತಮೆಯ್ದೆ ನಾ।
ಣಂ ಬಿಡೆ ಬಿಟ್ಟ ಮೆಯ್ಯಱಿದು ಮ್ಮೆನವಿರು[2]ರ್ವಿ[2] ಪ್ರೋದಬ್ಧಿ[3]ಲ್ಗರ್ಚಿ[3] ಮೆ
ಯ್ಯಂ ಬಿಗಿಯಪ್ಪಿ ಬಾಲೆಯ ಭಯಂಗಳೆದಂ ನವಸಂಪ್ರಯೋಗದೊಳ್॥ ೧೨
(ಲೀಲಾವತಿ, ೧೩–೧೬.)

ಪದಯಿಸೆ ಸೋಂಕಿ ಸಂಕೆಗಿಡೆ ಮೇಳಿಸಿ ಮೆಯ್ವಿಡೆ ತಳ್ತು ತೋಳ್[4]ತ
ಟ್ಟಿ[4]ದಿಗ್ಗೊಳೆ ಮೆಲ್ಲನಪ್ಪಿ ಮೊಗ[5]ಮಿತ್ತಿ[5]ರೆ ಚುಂಬಿಸಿ ಸೋಲ್ತು ನಾಣನೊ।
ಕ್ಕುದನಱಿದಿಚ್ಚೆಕಾರ್ತನದ ಲಲ್ಲೆಗಳಂ ನುಡಿ[6]ದಂತಲಂಪಿನು
ಬ್ಬಟಿಗಮನಾ ಲ[6]ತಾಂಗಿಗೆ ನೃಪಂ ಪಡೆದಂ ನವಸಂಪ್ರಯೋಗದೊಳ್॥ ೧೩
(ಕಾವ್ಯಾವಲೋಕನಂ, ೮೦೦)

ಸೊಡರಂ ಮೆಲ್ಲನೆ ಬೀಸಿ ಸಾರ್ಚಿ ಪಡಿಯಂ ಸಾರಣ್ಗೆ ಬೇಗಂ ಬರಲ್
ಸೆಡೆಯುತ್ತಿರ್ಪಳನಾನೆ ಪೋಗಿ ನಯದಿಂ ತಕ್ಕೈಸಿ ಶಯ್ಯಾತಳ।
ಕ್ಕೊಡಗೊಂಡೊಯ್ದೊಡಗೂಡೆ ಶಂಕಿಸುವ ನಾಣಂ ಕಾಯ್ವ ಮತ್ತಂ ರಸಂ
ಬಡೆವೆನ್ನೋಪಳ ಮುಗ್ಧಭಾವರ[7]ತಮೇನೆ[7]ನ್ನಂ ಗೆಲಲ[8]ಸಾಲ್ದುದೋ[8] ॥ ೧೪
(ಶೃಂಗಾರರತ್ನಾಕರಂ, ೪–೩೩).

ಗರಗರನಾಗಿ ಭೋಗಿಪೊಡೆ ಮೇಳಿಸಿ ಮುಗ್ಧೆಯನಾಗುಮಾಟ್ಪುದೋ
ಗರದಧರಾಮೃತಂ ತುಳುಕಲಾಗದು [9]ಬೀ[9]ಸರವಾಗದಪ್ಪು ಕ।
ಣ್ಬರಿಯಣಮಾಗದಣ್ಪಟಿಯದಣ್ಮರೆಯಾಗದಲಂಪು ಮೀಸಲಂ
ತಿರೆ ಮನಮಿರ್ಪುದೇಳ್[10]ಸ[10]ದ ಲಜ್ಜೆಯ ಲಚ್ಚಣ[11]ದಂ[11]ಗಜಾಬ್ಧಿಯೊಳ್ ॥ ೧೫

ಮೃದುಗಳನಾದಮಂ ಸಲಸಲಮ್ಮದೆ ಪಲ್ಲಟಮಂ ಪೊಣರ್ಚಲೀ
ಯದೆ ನಿಜ ಮುಗ್ಧಮಂ ತಳೆದ ಕಾ[12]ಲದೊ[12]ಳಾದನುರಾಗದಿಂದೆ ನಾ।
ರ್ಚಿದ ಬೆಳವಾಯನೇಂ ನೃಪತಿ ಪೀರ್ದನೊ ಚಿತ್ತದ ಮೆಚ್ಚನಿಚ್ಛೆಯಂ
ಮುದಮನಲಂಪಿನಿಂಪಿನೊಲವಂ ಸುಖಮಂ ಬರೆ ಪೀರ್ವ ಮಾಡ್ಕೆಯಿಂ॥ ೧೬

ಕಾದಲರೊರ್ವರೊರ್ವರೊಳಳುರ್ಕೆಯನೀಯೆ ನಿಮಿರ್ಕೆ ಸೊರ್ಕಿನಿಂ
ಮೋದಿದ[ದೊಂ]ದು ಮಾಣಿಕದ ಮುದ್ರಿಕೆಯೊಪ್ಪದೆ ಕೊಳ್ಳಿಪೀಸಿದಂ।

---

[1] ಮಿ (ಕ.ಖ.ಬ.ಗ). [2] ರ್ಚಿ (ಅ). [3] ಜ್ಜೆ. [4] ನಣ್ಪಿ (ಖ.ಬ). [5] ಪೊಪ್ಪಿ (ಖ.ಬ). [6] ದೀವಲಂಪಿನುರ್ಬಿದಿರ್ಗೊಳೆ ತಲ್ಲ (ಖ.ಬ). [7] ನಮೇನೆ (ಖ.ಬ), ತಮಿನ್ನೆ (ಕ.ಘ). [8] ಸಾಲದೇ (ಕ). [9] ಬೇ (ಕ). [10] ಸಿ (ಕ.ಖ.ಬ). [11] ವಂ (ಕ). [12] ದಲ (ಖ.ಬ).

ತಾದುದು ಮಂಚವಿದ್ದಶಕುನಿಧ್ವನಿ ಮನ್ಮಥರಾಗಕೇಳಿಯು
ದ್ಬೋಧಿತರಾಗದಿಂದವಳಿ ಘೋಷಿಸುವಂತೆಪೋಲಾದುದಾ ಕ್ಷಣಂ ॥ ೧೭

ಕಾದಲರ್ಗೆಱಿ ಕಾಮಮಧುಮತ್ತತೆ ತೊಟ್ಟನೆ ನಾಣುಮುಟ್ಟುದುಂ
ಪೋದುವು ತೋರ್ಪ ಮೆಯ್ಯುಮೊಳಗುಂ ಬಿಡುತಂದುವು ತಳ್ತ ರೋಮಹ।
ರ್ಷೋದಯ[1]ಮುಂ[1] ಗಳಧ್ವನಿಯುಮುಬ್ಬರಮಾದುವು ಪೊಕ್ಕಳಂ [2]ಕಡಂ
ಗೋದುವು[2] ಪೊಯ್ದುಪೊಯ್ದು ಬಟಿಯೊಳ್ ನಖರೇಖೆಗಳಂ ಕುರುಳ್ಗಳಂ॥ ೧೮

ತೊಡೆ ಮಡವಿಡೆ ಮೊಲೆಗಳ ಮೇ
ಗೊಡೆದಡಗಡಗಾಗಿ ಬತ್ತಿ ಬಾಯುಗಿಯಿಂ ಮೆಯ್[4]।
ಸೆಡೆದೊಳ್ಳನುಶಿಯೆ (?) ಕೂಟದ
ಕಡುಪುಡುಗದೆ ಪಡೆದಳಾಕೆ ನೃಪತಿಗಲಂಪಂ॥ ೧೯

ಜಾಯಿಲನಂತೆ ಲಜ್ಜೆ ತೆಱಿದಾಡೆ ಬೆ[3]ಡಂಗಿ[3] ನೃಪಂ ಕಡಂಗಿ ವಾ
ತ್ಸ್ಯಾಯನನಂತೆ ಮರ್ಮವಱಿದಾಕೆಯ ತೀನ್ಮಸೆಪಾಸನಂಗಳಿಂ।
ಪಾಯೆ ತಗುಳ್ದು ಪಾಯ್ವ ಭರದಿಂದೊಡವಾಯ್ದು ಝಲಮ್ಮನೊಟ್ಟುಗುಂ
ನೀಯನೆ ಕಮ್ಮಗಿಮ್ಮನೆಳದೆಂಗಿನಕಾಯೊಡೆದಂತೆ ತೆಳ್ಪದಂ॥ ೨೦

ಮುಂಚದ ಪಿಂಚದಂಚೆಗಳೊಳಿಂಚರದಂಚರಮಾಗದಂಚೆಪೆ
ರ್ಚಂಚರ[4]ಮೀಯೆ[4] ಮಂಚ[5]ದುಲಿ[5]ಪಿಂ ಚದುರಿಂ ಚದುರೆಂಬ ದೂಸಱಿಂ।
ದಿಂಚರದಂಚೆಯಿಂಚರದ ಪಿಂಚದ ಚಂಚಲ ಚಂಚರೀಕದೊಂ
ದಿಂಚರದೊಳ್[6] ಪಳಂಚಲೆಯೆ ಮಂಚರವಂ ಮೊರೆದೇಚೆ ಕೂಡಿದಳ್॥ (?) ೨೧

ಗಳರುತಿ ಮಂತ್ರನಾದಮಳಕಸ್ಥಳತಾಡನ ಮುಷ್ಟಿಮುದ್ರೆ ಕೋ
ಮಳ ನಖರೇಖೆ ಯಂತ್ರಲಿಖಿತಂ ಸಮಬಿಂದುವೆ ನಿಗ್ರಹಾಕ್ಷರಂ ।
ತಳಹತಿ ವೇತ್ರದಂಡಹತಿಯಾ ನಱುಸುಯ್[6] ನವಧೂಪಮಾಗೆ ಕಾ
ದಲರ ಮನೋಭವಗ್ರಹಮನಲ್ಲಿ ತಳರ್ಚುವರಿಚ್ಚೆಗಾರ್ತಿಯರ್॥ ೨೨

ವಿಳಸನ್ಮಂಜೀರಕಾರಾವಮುಮತುಳಗಳಧ್ವಾನಮುಂ ತೀವ್ರ ಮಧ್ಯಾಂ
ಗುಳಿನನ್ಮುಷ್ಟಿಪ್ರಹಾರಸ್ವನಮುಮೆಸೆಯುತಂ ಮಾಣ್ದು ಮತ್ತೀಗಳೀಗಳ್ ।
ಕಳಕಾಂಚೀ ಶೃಂಖಲಾ ಝಂಕೃತ ರವಮನಿದಂ ಕೇಳಲಾದಪ್ಪುದಂತಾ
ವಳನಾವಂ ಪುಣ್ಯಪುಂಜೋದಯನುಪರರತಿಪ್ರೌಢಿಯಿಂ ತಾಳ್ದಿದಾತಂ॥ ೨೩

---

[1] ಮಂ (ಕ.ಖ.ಬ). [2] ಕಡಹಾಯ್ದುದು (ಕ), ಕಡಂಗೊಯ್ದುವು (ಖ). [3] ಗಂಪಿ (ಖ). [4] ಮಿಟ್ಟು (ಕ). [5] ದಿರು (ಕ).

ನೆರೆವ ಬಗೆ ನೆರೆವ ನೆರವಿಗೆ
ನೆರೆಮನೆಗಳ ನೆರವಿ ಪರೆಯೆ ನೆರವಿಯ ತುದಿಯೊಳ್।
ನೆರವಿಗೆ ಮೊದಲಡೆ ಮೊದಲಿನ
ನೆರವಿಯ ನವಿ ತುದಿಯ ನೆರವಿಗೊದವಿರೆ ನೆರೆದರ್॥ ೨೪

ನತಿಯ ಕೃತೋಪರಿಷ್ಕರತಿ[1]ಶ್ರ[1]ಮದೊಳ್ ನರಳಾಂಗುಲಚ್ಛಟ
ತ್ಕೃತಿ ಪಟುತಾಲ ತತ್ಕೃತಿ ಗಳೋತ್ಥಿತ ಹೂಂಕೃತಿ ಚಾರು ಮಂಚಚೀ।
ತ್ಕೃತಿ ಶಕುನಿಪ್ರತಾನಕುಹ[2]ರತ್ಕೃತಿ[2] ಕಂಕಣಕಿಂಕಿಣೀ ಝಣ
ತ್ಕೃತಿ ಸಮಪಾದ ಝಂಕೃತಿ ಸಚುಂಬನ ಸೀತ್ಕೃತಿ ಪೊಣ್ಮೆತೆತ್ತಲುಂ॥ ೨೫
(ಶೃಂಗಾರರತ್ನಾಕರಂ, ೪–೩೬.)

ಸಮಸಂದಟ್ಟಿಲಂಪನೀಯೆ ಶಯನಂ ಘರ್ಮಾಂಬುವಿಂ ನಾನೆ ಮು
ನ್ನಮೆ [3]ನಾಣ್ಗೊಬ್ಬುಡಿ[3]ವೋಗೆ ಸೂಸುವ ಪದಂ ಗಂಗಾಂಬುವಂ ಪೋಲೆ ವಿ।
ಭ್ರಮಮಂ ಕಂತರವಕ್ಕೆ ತಾಡನರವಂ ತಂದೀಯೆ ತತ್ಸಿಧದೊಳ್
ಸಮನತ್ವಂಬಡೆವಂತಿರಾಯ್ತು ಸುರತಪ್ರಾರಂಭ ಕೋಳಾಹಳಂ॥ ೨೬
(ಪಂಪಭಾರತಂ, ೪–೧೦೯.)

ಎಳೆಯಳ ಸೆಳೆವೊಳ್ನಡುವುಂ
ಸೆಳೆಮಂಚಮುಮೊಡನೆ ಸೆಳೆಯೆ ಪುರ್ವುಂ ಕುರುಳುಂ।
ಕಿಳಿರೆ ನಿತಂಬದ್ವಯಮುಂ
ಗಳರವಮುಂ ಪೊಣ್ಮೆ ಸುರತಮಂ ಸಮನಿಸಿದರ್॥ ೨೭

ಸುರತದ ಲೆಕ್ಕವಿಕ್ಕಿದೆಡೆಯಂತೆ ತಗುಳ್ದಿರೆ ನಲ್ಮೆಯೆಂಬ ಹೊ
ನ್ನೊರೆಯೊರೆದಂತೆ ರಾಗರಸದಿಂ ಪರಿಪೂರಿತಮಾದ ದೇಹ ತಾಂ।
ಬಿರಿದೆಡೆಯಂತೆ ಕಾಮಿನಿಯ ಕೋಮಲಮಪ್ಪ ಶರೀರದೊಳ್ ತರಂ
ತರವೊಗೆದೊಪ್ಪಿ ತೋಱುದುವು ಕಾಮುಕದಂತನಖಕ್ಷತಾದಿಗಳ್॥ ೨೮

ಪಂಕರುಹವದನೆಗೆನೆದುವು
ಕುಂಕುಮದಿಂ ತೊಯ್ದ ಚಮರಿಯಂ ಮೋದಿದವೋಲ್।
ಕೊಂಕಿ ನಖರೇಖೆ ಕೊರಲೊಳ್
ಕಂಕುಳ ಮುಯ್ಯ್ಗಳ ಮೊಲೆಗೆಲಂಗಳೊಳೆತ್ತಂ॥ ೨೯

ನವಲಜ್ಜಾಭಾರನಮ್ರಾನನೆಯನುರದೊಳೊತ್ತಂಬದಿಂದೊತ್ತಿ ನರ್ವಾಂ
ಗವನೆನ್ನಂಗಂಗಳೊಳ್ ಮೆಯ್ಗರೆದುವೆನಿಸಿ ಮೆಯ್ಯಾರೆ ತಳ್ತಪ್ಪಿ ದೇವ।

[1] ಕ್ತ (ಖ.ಬ). [2] ಕತ್ಕೃತಿ (ಅ). [3] ನಾಣ್ನಾಲ್ಕಡೆ (ಕ), ನಾಣ್ಕಡಿ (ಖ.ಬ), ನಾಲ್ಕುಡೆ (ಗ).

ರ್ಗವಣರಿ [1]ಕಯ್ಯೂಡ[1]ದಂತ[2]ಪ್ಪವಳ[2]ಧರಸುಧಾಸಾರಮಂ ತುಷ್ಟಿಪರ್ಯಂ
ತವಲಂಪಿಂ ಪೀರ್ದು ಮದ್ವಲ್ಲಭೆಯ ಸುಸಿಲ ಸ್ಯೆಪಿಂ ಕೃತಾರ್ಥಾತ್ಮನಪ್ಪೆಂ॥ ೩೧
(ಕಾದಂಬರಿ, ಉ.ಭಾ, ೫೨೨).

ಪ್ರತಿಘಾತಾಯತಲೋಲಕಂಕಣರ್ಝಣಜ್ಝಂಕಾರಚಂಚತ್ಕಳಾ
ಹತಿ ಮಂಚಾಗ್ರ ಶಕುಂತಿಕಾಪಟುರವಪ್ರೋಚ್ಚಾರನಾನಾಗಳಾ।
ರುತಿ ಮಧ್ಯಾಂಗುಳಿತಾಡನೋಚಿತಲಯಪ್ರವ್ಯಕ್ತ ಜಿಹ್ವಾಟಳ
ತ್ಕೃತಿ ಪೊಣ್ಮುತ್ತಿರೆ ರಮ್ಯಮಾಯ್ತು ಸುರತಪ್ರಾರಂಭಕೋಳಾಹಳಂ॥ ೩೧

ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ
ರವಝಂಕಾರಿತಚಾರುವಾಮಚರಣಾಘಾತಂ ಚಲದ್ಭ್ರೂಲತಾ।
ಗ್ರವಿಭಾಗೋತ್ಕಟತರ್ಜನಂ ತರಳತಾತಾಮ್ರಾಧರಂ ಚಕ್ಕಿಗಿ
ತ್ತು ವಲಂಪಂ ಪ್ರಣಯಪ್ರಕೋಪನುರತಪ್ರಾರಂಭದೊಳ್ ಕಾಂತೆಯಾ॥ ೩೨
(ಆದಿಪುರಾಣಂ, ೧೨-೪೮ ; ಕಾವ್ಯಾವಲೋಕನಂ. ೭೯೧ ;
ಶಬ್ದಮಣಿದರ್ಪಣಂ ಪುಟ-೧೨೫).

ಪೊಱಿ ತಡಮಾಗೆ ನಾಣಗಲೆ ತೆಳ್ಪದನೊಳ್ಪದನಾಗಿ ಪಾಯೆ ಮೈ
ಪಱಿವಱಿಯಾಗಿ ತೀರ್ಮಸಗಿ ಸೋಲಮಗುಂದಲೆಯಾಗಿ ಕೂಡುವ।
ಟ್ಕಱಿ ಮಿಗೆ ನೀಳ್ದ ಲಂಪೋದವೆ ಬೇಡಿಸುವಪ್ಪಿನಿತೆಂಬ ಲೆಕ್ಕಮಂ
ಮಱಿಯಿಸೆ ನಾಡೆ ಸೂಱ್ಗಳನೊಡಂಬಡೆ ಮಾಡಿದರೊಂದುಭಾವಮಂ॥ ೩೩

ಸುಯ್ಯ ನಿಡುಪುಡು[3]ಗ[3]ದಿರೆಯುಂ
ಮೆಯ್ಯ[4]ರೆ[4]ಮಱ್ಗ ದೆಯುಮಿಂತು ಸಂದಂದಿನಿಬರ್।
ಬಯ್ಯಲೆ ಪೊಯ್ಯಲೆ ಕುರುಳಂ
ಕೊಯ್ಯಲೆ ಪ್ಪೋ[5]ಯ್ತಿಂತು[5] ವಿನಯವತಿಗಂ ಪತಿಗಂ॥ ೩೪
(ಕಾವ್ಯಾವಲೋಕನಂ, ೩೧೧ ; ಶೂದ್ರಕಂ, ಕಾವ್ಯಸಾರಂ ೬೭೬.)

ಅಳಕಂ ತುಂಬಿವೊಲಾಡೆ ತುಂಬಿದ ಕುಚಂ ಚಕ್ರಾಹ್ವದಂತಾಡೆ ಕ
ಣ್ಣೆಳಮಿನಾನಾಟಮನಾಡೆ ಮುದ್ದುಮೊಗಮಂಭೋಜಾತದಂತಾಡೆ [6]ನೀರ್[6]।
ತಿಳಿನೀ[7]ರಂತೊಲೆದಾಡೆ[7] ನೂಪುರಮರಾಳೋನ್ನಾದವಾದ್ಯಕ್ಕೆ ಪೂ
ಗೊಳನೆದ್ದಾಡುವವೋಲದೇಂ ಮೆಱಿದಳೋ ಕಾಂತಾ[8]ರ[8]ತಪ್ರೌಢಿಯಂ॥ ೩೫
(ಲೀಲಾವತಿ, ೨-೧೩೨.)

---

[1] ಕಯ್ಯಾಱಿ (ಕ.ಖ.ಬ.). [2] ಜ್ವಳದ (ಕ). [3] ರ (ಖ.ಬ). [4] ನಿ (ಕ.ಗ. ಕಾವ್ಯ ಸಾರಂ). [5] ಯ್ತಂದು (ಕ.ಖ.ಬ.). [6] ಮೆಯ್ (ಅ). [7] ರಾಟಮನಾಡೆ (ಅ). [8] ಯ (ಅ).

ನೆಲೆಮೊಲೆಯಂ ತಗುಳ್ದಡಸಿ ತಾಗುವ ಹಾರಮನೇಱನೂಂಕಿ ಮುಂ
ದಲೆಯ ಕುರುಳ್ಗಳಂ ಕವಿಯದಂತೆ ಮುಖಾಂಬುಜದಿಂ ಮರಳ್ಚಿ ಸೂಪ್।
ಸಲೆ ನಿಲೆ ಬೆನ್ನನಪ್ಪಳಿಪ ಸೋರ್ಮುಡಿಯಂ ಕಲಿಗಂಟನಿಕ್ಕಿ ಕಾ
ದಲನೊಳೆ ಕೂಡೆ ಕೋಮಲೆಗೆ ಬಿಚ್ಚತಮೊಪ್ಪಿದುದಾಪರಿಷ್ವಕಂ॥ ೩೬

ಒದೆದುಗುರಿಂದೆ ಬಾರುಗಿದುದೆಯ್ದದೆ ಕುತ್ತಿದಳಪ್ಪಿ ಕಂಟಕೌ
ಘದಿನಳಿ ಪಾಱಿದವ್ವಳಪ ಕೆಂದಳರಿಂದೊಳಪೊಕ್ಕು ಪೊಯ್ದುದೆ।
ಯ್ದದೆ ಕುಚಕುಂಭದಿಂದಿಱಿದಳೋವದೆ ಬಾಸಿಗದಿಂದೆ ಮೋದಿತೆ
ಯ್ದದೆ ಕಡೆಗಣ್ಗಳಿಂ ತಿವಿದಳೋಪನನೋಪಳನಂಗಯುದ್ಧದೊಳ್॥ ೩೭

(ಲೀಲಾವತಿ, ೧೩-೨೧.)

ತೆಱಪಱಿದೋಪನಪ್ಪಿದೊಡೆ ಮೆಯ್ಮಱಿವಪ್ಪು ಸಡಿಲ್ದುದಕ್ಕೆ ಮೆ
ಯ್ಯಱಿವ ಪೊದಳ್ದು ಬಾಯುಗಿಗೆ ಮೆಯ್ಮಱಿವಂತದು ಮೆಲ್ಲನಾಗೆ ಮೆ।
ಯ್ಯಱಿವ ಜವಂ ಜವಂಗಿಡಿಸೆ ಮೆಯ್ಮಱಿವಾಸನಪಲ್ಲಟಕ್ಕೆ ಮೆ
ಯ್ಯಱಿವೆಡೆ ಸಾವ ಹುಟ್ಟುವೆಡೆಯಾದುದವಳ್ಗೆ ರತಾತಿರೇಕದೊಳ್॥ ೩೮

(ಲೀಲಾವತಿ, ೧೩–೨೦.)

ಪಸಿಯುಗುರೊತ್ತುಗಳ್ ನೊಸಲೊಳೊಪ್ಪಿರೆ ಪತ್ತಿದ ಕುಂತಳಂಗ[1]ಳಿಂ[1]
ಬಸವಟಿವಂಗದಿಂ ಬಸಿವ ಘರ್ಮಜಲಂಗಳಿನಾದ ಪಲ್ಲ ನು।
ಣ್ಮಸೆ ಮಿಗೆ ಪತ್ತಿ ಜರ್ಝರಿತಮಾಗಿ ಬೆಳರ್ತಧರೋಷ್ಮದಿಂ ರತಿ
ವ್ಯಸ[2]ನಿ[2] ಮಹಾಹಿ ನುಂಗಿಯುಗುಟ್ಟಂತೆವೋಲಾ ನಳಿನಾಕ್ಷಿಯೊಪ್ಪಿದಳ್॥ ೩೯

ನೆಗೆದುವು ಕಂಪನಂ ಪುಳಕಮುಂ ಬೆಳರ್ವಾಯ್ದೆಱಿ ಬತ್ತೆ ಘರ್ಮವಾ
ರಿಗಳೊಗೆತಂದುವಂಗಜರಸಂ ಪೊನಲೆಟ್ಟುದು ಬಿಟ್ಟ ಕೇಶದಿಂ।
ನೆಗಟ್ಟುದು ದುರ್ದಿನಂ ಮದನಮಾಂತ್ರಿಕಸೃಷ್ಟಿಯಿನಿಂತು ಮಾಗಿ ಬೇ
ಸಗೆ ಮಱೆಗಾಲವೆಂಬಿವೊಡನಾದುವು ನಲ್ಲರ ಸಂಪ್ರಯೋಗದೊಳ್॥ ೪೦

ಮೊಱೆಯಂ ಮಿಱಿವ ಮಾತು [3]ತೀರ್ಪಮ[3]ಸೆಪ ನಾಣ್ದಾಣಂ ತನಿತ್ತಿಂಬು ಮೈ
ಮಱಿಪಂ ಪುಟ್ಟುವ ಸೊರ್ಕು ನೂಟ್ಪಿಡಿದ ಕೂಟಂ ಪಲ್ಲಟಂಬಾಯ್ವ ಬಾ।
ಯ್ಮಱಿಕಂ ತಾಂಗಿ ಕಱಿಲ್ವ ನಾಣಿಲಿತನಂ ಬೆಂಡೇಱ್ವ ಕಣ್ ಬೀಯದ
ಟ್ಟಿಱೊಳಂ ಪಾಸಿಗೆ ನಾಂಬ [4]ತೆಳ್ವದ[4]ನಳುಂಬಂ ಕೂಟದೊಳ್ ನಲ್ಲರಾ॥ ೪೧

(ಚಂದ್ರಪ್ರಭಪುರಾಣಂ, ೮–೬೮.)

---

[1] ಳಂ (ತ). [2] ನ (ಕ). [3] ಕೆಂದೆ (ಅ). [4] ಮುಂಬುದ (ಅ).

ಹರವನಮೊಯ್ನಾ[1]ಱೆ[1] ಮುಗುಳ್ದಕ್ಷಿಗಳೆ[2]ಚ್ಚ[2]ಱೆ ಕೂಡೆ ಮೆಯ್ಯೊಳು
ಬ್ಬರಿಸಿದ ರೋಮರಾಜಿ ನಸುವಕ್ಕೆಗೆ ಸಾರೆ ಬಬಲ್ದ ಮೆಯ್ಗೆ ಚೇ।
ತರ[3]ಣಮೊಡ[3]ರ್ಚೆ ಬಾಯ್ಗೆ ಬಱಿಪಂ ಬರಿಸುತ್ತಿರೆ ಪೋದ ಕೂಟಮಂ
ಪರಿವಿಡಿಗೆಯ್ಯೆ ಚಿತ್ತಮೆಳಸಿತ್ತು ರತಾಂತಸುಖಾಂತಮೋಪರಾ॥ ೪೨

(ಚಂದ್ರಪ್ರಭಪುರಾಣಂ, ೮–೭೦.)

ಪದಯಿಪ ಸೋಂಕು ಚುಂಬಿಸುವಲಂಪಮರ್ದಪ್ಪುವ ಕಾಯ್ಪು ಮೇಲುವಾ
ಯ್ದೊದಗುವ ಕಾತರಿಕ್ಕೆ ಬಗೆಮೆಚ್ಚದ ಪಲ್ಲಟದಿಚ್ಚೆ ಬಾಯ್ಗೆವಂ ।
ದುದು ಗೆಡೆವುಜ್ಜುಗಂ ರತದ ಕಾದಲೆ ಸಾಱು ಪೊಡರ್ಪು ಮೇಱಿದ
ಪ್ಪಿದುದೆನೆ ಕೂಡಿದರ್ ಪ್ರಿಯತಮರ್ ಸಮಸಂದನುರಾಗವೃತ್ತಿಯಿಂ ॥ ೪೩

ಕೊನೆವೆರಲಿಂ[4]ದಪೆಂ[4]ಟಳತೆಗೊಂಡಧರಕ್ಷತಮಂ ಘನೋನ್ನತ
ಸ್ತನದುರಿಯಂ ತಗುಳ್ಚಣಿಸಿ ಬೈತು ಭುಜಂಗಳೊಳೋಳಿಗೊಂಡ ಚುಂ ।
ಬನವಳಯಂಗಳಂ ಪ್ರತಿನಲಚ್ಚಣದಿಂ ಪ್ರತಿಯಿಟ್ಟು ನೋಡಿ ಕಾ
ಮಿನಿ ಹು[6]ಲಿ[5]ನಾದ ಬೇಟವೆಳಸಂ ಕಡುಸಂತಸದಂತಮೆಯ್ದಿದಳ್ ॥ ೪೪

ಕಿಚ್ಚಿನೆಳುರ್ಕೆಯಿಂ ಬಿದಿರ ಗಂಟೊಡೆವಂತಿರೆ ತಾಲುತತ್ಕೃತಂ
ಬಿಚ್ಚತಮುಣ್ಮಿ ಪೊಣ್ಮಿ ಕಡುತಾಡನದಿಂ ನವರಕ್ತಧಾರೆಗಳ್ ।
ಱೆಚ್ಚರ[6]ಮೆಚ್ಚು[6] ಪಾಯ್ತರೆ ಪದಂಗಳ ನಾ[7]ದ[7]ದ ಸುಯ್ಯಲೊಪ್ಪೆ ಕ
ಟ್ಟಚ್ಚರಿಯಾದುದೊರ್ಬನ ಮಹಾರತಸಂಭ್ರಮ[8]ಮೊಂ[8]ದು ತಾಣದೊಳ್॥ ೪೫

ಪರಿವರಿಯಾಯ್ತು ವಲ್ಲಭನ ಮೆಯ್[9] ನಖಘಾತದಿನಾದ ರೇಖೆಗಳ್
ಹರಕೆಯ ಸಾಲ್ಗಳಾದವನುರಾಗರಸಂ ಹದನಾದುದೋಳಿಯಿಂ ।
ಸುರಿವ ಬೆಮರ್ ತರಂಬಿಡಿದ ಬೀರದ ಬಿತ್ತುಗಳಾಯ್ತು ಮೆಚ್ಚಿದು
ಬ್ಬರಬೆಳಸಿಂಗೆ [9]ತಕ್ಕ ಕೃಷಿಯಕ್ಕುಮೊ[9] ಕಾಮಿನಿ[10]ಯೌ[10]ಪರಿಷ್ವಕಂ ॥ ೪೬

ಘನಕುಚಮಧ್ಯತಾಡನೆಗೆ ಮುಂದಲೆಯೊಳ್ ಸಮನಾಗೆ ಲಲ್ಲೆಯಿಂ
ದಿನಿಯನ ಪೆರ್ಗೊಸರ್ಕೆ ನರಿಯಾಗೆ ಪತಿತ್ವಮನಾಳ್ವ ಚಾಟುನಿ ।
ಸ್ವನಮೆರ್ದೆಗೊಳ್ವ ಚುಂಬನಕೆ ಬೆಂಬಟಿಯಿಂದಿದಿರ್ವಪ್ಪ ತನ್ನ ಚುಂ
ಬನ [11][ಮೆ][11]ಣಿಯಾಗೆ ಕಾಂತೆ ಪುರುಷಾಯಿತದೊಳ್ ಕರಮೊಪ್ಪಿ ತೋಱಿದಳ್ ॥

---

[1] ಡೆ (ಕ). [2] ಬ್ಬ (ಕ). [3] ಣಿಯಲ (ಅ). [4] ದಮಂ (ಕ). [5] ರಿ (ಕ.ಖ.ಬ) [6] ವೆತ್ತು (ಕ.ಗ.ಘ). [7] ಡ (ಗ.ಘ). [8] ದೊಂ (ಬ). [9] ತತ್ಕೃಷಿಯೊನಿಕ್ಕುವ (ಕ), ತಕ್ಕತೃಷೆಯಕ್ಕುಮೊ (ಖ.ಬ). [10] ಯೋ (ಕ.ಖ.ಬ). [11] ಕೆ (ಕ.ಖ.ಬ).

ಉಡುಗಿ ಬರೆವರೆ ಗಳದ್ಧ್ವನಿ
ಯೆಡೆಯುಡುಗದೆ ಪೊಡರೆ ಸುಯ್ ನಿತಂಬದ್ವಯದಿಂ ।
ಬಿಡದೊಗೆಯೆ ಝಂಕೃತಂ ನಡು
ನಡುಗೆ ಲತಾ[1]ಲತಿಕೆ[1] ಕೂಡಿದಳ್ ಪ್ರಿಯವರನೊಳ್ ॥ ೪೮

ನೋಡಲೊಡಂ ಮನೋಭವಸುಖಾಮೃತವಾರ್ಧಿಯೊಳೆಯ್ದೆ ಚಿತ್ತಮೊ
ಲ್ದಾಡುಪುದೊಲ್ದು ಸೋಂಕಲೊಡಮಾಗಳೆ ಮೆಯ್ ಪುಳಕಾಂಕುರಂಗಳಿಂ ।
ಕೂಡೆ ಬೆಮರ್ತು ತಾಳ್ದುವುದು ತಳ್ತು ಕರಂ ಬಿಗಿಯಪ್ಪಿಕೊಂಡು ಬಾ
ಯ್ಗೂಡಲೊಡಂ ಬಟಿಕ್ಕಱಿಯೆನಾನೆನೆಗಾದ ರತಪ್ರಪಂಚಮಂ ॥ ೪೯

ಪಾರಿವಪಂಚೆ ಕೊಂಚೆ ಗಿಳಿ ಸೋಗೆ ಕುಕಿಲ್ ತೊಣೆವಕ್ಕಿ ತಮ್ಮತ
ಮ್ಮೋರಗೆ ತಪ್ಪಲುಂಬಿ ದನಿಗೆಯ್ದುಪುವೆಂದೊಡನೆಬ್ದು ಸುತ್ತಲುಂ ।
ಭೋರೆನೆ ಕೂಡಿಕೊಂಡು ವಿಟತಾಡನತಾಳಲಯಕ್ಕೆ ಒರ್ಪಿನಂ
ಚಾರು ಚಕೋರನೇತ್ರೆ ಗಳನಿಸ್ವನಮಂ ಮೆಱೆದೊಲ್ದು ಕೂಡಿದಳ್ ॥ ೫೦

ಪೆರ್ಮೊಲೆಗಳ್ ಕದಕ್ಕದಿಸೆ ನರ್ತಿಸೆ ಕುಂಡಲಮಾಡೆ ಕುಂತಳಂ
ಸೋರ್ಮುಡಿ ಬೆನ್ನನಪ್ಪಳಿಸೆ ಸಂಚಳಿಸುತ್ತಿರೆ ಮಧ್ಯಮುಣ್ಮೆ ಸುಯ್।
ಘರ್ಮನವೋದಬಿಂದು ಬಿಡುತಂದುದು ಭೂಷಣಮಂಜುಳಸ್ವನಂ
ನರ್ಮೊ[2]ಡೆ[2] ಪೆರ್ಚೆ ತನ್ವಿ ಪುರುಷಾಯಿತದೊಳ್ ಪ್ರಿಯನಂ ಮಗುಟ್ಟಿದಳ್॥ ೫೧

ಸುಲಯೆ ಬೆಮರೊಲೆಯೆ ನಡು ಕೊರ
ಲುಲಯೆ ಕುರುಳ್ ನಲಯೆ ಮುಂಚಶಕುನೀ ನಾದಂ ।
ಪಲತೆಱೆದೊಳೊದವೆ ರಾಗಂ
ನೆಲೆವೆರ್ಚೆ ಪದಂ ತುಳುಂಕೆ [3]ನೆರೆ[3]ದರ್ ನಲ್ಲರ್ ॥ ೫೨

ಮುನಿಯಿಸುವುಕ್ಕೆವಂ ತಿಳಿಪುವಬ್ಬಱಿ ಸೋಲಿಪ ಗಾಡಿ ಸೋಂಕಿನಿಂ
ಬನದಿಪ ಲಲ್ಲೆ ಚುಂಬಿಸುವಲಂಪು ಮರಳ್ಚುವ ಮುದ್ದು ಲಜ್ಜೆಯಂ ।
ನೆನೆಯಿಸುವುಜ್ಜುಗಂ ಮೊಱೆಯನೊಲ್ಲದವೊಳ್ನುಡಿ ಸೋರ್ವ ನಾಣ್ಬದಂ
ಜನಿಯಿಸೆ ರಾಗಮಂ ಮನಮನಗ್ಗಲಿಸಿತ್ತು ರತಂ ಲತಾಂಗಿಯಾ ॥ ೫೩

ತೆಗೆದತ್ತಲ್ ಬರೆ ತೆಪ್ಪದಂತೆ ತನುಗಳ್ ಬಾಯ್ಬಾಯ್ಗದೇಂ ಚುಂಬನಂ
ಸೊಗ[4]ನ್ದಂ[4] ಮುಂದಿಡೆ ಕೈ ತೊಡಂಕಿದೆಡೆಯೊಳ್ ತಮ್ಮಿಚ್ಛೆಯಿಂ ಬಿ[5]ಟ್ಟ[5] ದಿ ।

---

[1] ಲನೆ (ಖ.ಬ). [2] ದೆ (ಕ). [3] ನಡೆ (ಕ). [4] ಸಿಂ (ಕ). [5] ಟ್ಟು (ಖ.ಬ).

ಟ್ಟಿಗಳುಂ[1]ಬಂ ಕುಡೆ[1] ಸೊಕ್ಕಿ ಸೊಕ್ಕಿ ಮೆಱೆವಾವಾಂಗಾಂಗದೊಳ್ ಜೋಗವೆ
ಟ್ಟಿಗೆಯಂ ಗೇಣಿಡುವಂತಿರಾದುದು ರತಂ ವಿಶ್ರಾಮಸಾರಸ್ಯದಿಂ ॥ (?) ೫೪

ನಲಿವುಲವಿತ್ತಲನುವ ಬಿ
ತ್ತಲನುವ ಚುಂಬಿಸುವ ಹೊಯ್ವ ನಂಬಿಸುವಳಿಪ ।
ಗ್ಗಲನುವ ಹುಡುಕುವ ತುಡುಕುವ
ಮಲೆವಲೆವ ಪೊಡಪ್ಪು ನೇರ್ಪುವಡೆದಿರೆ ನೆರೆದರ್ ॥ (?) ೫೫

ಕುಣಿವ ಕುರುಳ್ ಕುರುಳ್ವಿಡಿದು ಜೋರ್ವ ಬೆಮರ್ ಬೆಮರತ್ತಣಂ ಕರಂ
ದಣಿದಪೊಲೇಳ್ದವೆತ್ತ ಪುಳಕಂ ಪುಳಕಂಗಳ ಕೂರ್ಪು ಕೂರಿತೆಂ ।
ದೆಣಿಸದೆ ಮಾಱುವಪ್ಪು ಬಿಗಿಯಪ್ಪಿನ ಗಾಢತೆ ಹಿಂಡಿದಂತೆ ಸಂ
ದಣಿಸುವ ತೆಳ್ಪದಂಗಳ ಪೊನಲ್ ಬಗೆಗೊಂಡವು ಸಂಪ್ರಯೋಗದೊಳ್ ॥ ೫೬

ಮೆಲ್ಲೆರ್ದೆಗೂಡುವಾಯೆ ನಸುಬೆಂಡು ಮಗುಟ್ಟಿರೆ ಕಣ್ ಗಳಸ್ವನಂ
ಮೆಲ್ಲನೆ ನಿಂದು ನಿಂದು ಪೊಡರುತ್ತಿರೆ ಪೊಣ್ಮುವ ತಾಡನಂಗಳಿಂ ।
ತೆಲ್ಲವಡಂಗೆ ಹೂಂಕೃತಿಗಳಬ್ಬರವೆಯ್ದೆ ಪೊಡಪ್ಪುಗುಂದೆ ತ
ಳ್ವೆಲ್ಲದೆ ತೆಳ್ಪದಂ ಸುರಿಯೆ ಕೋಮಲೆ ಕೂಡಿದಳಾತ್ಮನಾಥನೊಳ್ ॥ ೫೭

ಅಲ್ಲದ ಮೊಱೆಗೊಂಡಾಡುವ
ಪಲ್ಲಟಿಸುವ ಮುದ್ದುಗೆಯ್ವ ಭರದಿಂ ಕೊಲ್ ಕೊಲ್ ।
ಕೊಲ್ಲೆಂದಿದಿರ್ಗೊಂಡುಲಿವೀ
ನಲ್ಲಳ ರತದಿಂದೆ ಸೊಕ್ಕಿ ಮೆಱೆಯದನಾವಂ ॥ ೫೮

ಪುಳಕಮನಿಂಬುಸೋಂಕಮರೆ ನಿರ್ಝರಮಂ ಮನಗಿರ್ಪ ಚುಂಬನಂ
ತಳಿವಿನ ಬಂಬಲಂ ನೆಱೆಯೆ ಕಿಬ್ಬಲೆಯೆತ್ತುವ ಸೌಖ್ಯವಿಚ್ಛೆಯಂ ।
ಬಳೆಯಿಪಲಂಪು ಕಾದಲರೊಳಚ್ಚರಿಯಾಗಿರಲೊ[2]ರ್ಮ್ಮೆಗೊರ್ಮ್ಮೆ[2]ಗ
ಗ್ಗಳಿಸುವರಿಂತಿವಲ್ಲದೊಡೆ ಬೇಂಟಮದುಂಟೆ ಮಹೀವಿಭಾಗದೊಳ್ ॥ ೫೯

ಇನಿಯರೊಳಟ್ಟಿಯಿಂ ನೆರೆವ ಭಂಗಿಗಳಂ ಪೆಱಗಿರ್ಪಂತುಟೆಂದವಂ
ನೆನೆನೆನೆದೆಯ್ದೆ ಪೇೞ್ವರವರೇಂ ಮತಿವಂತೆಯರಕ್ಕ [3]ಕೂರ್ತು[3] ನ ।
ಲ್ಲ[4]ನ ತನು ಸೋಂಕುತಾ[4]ಗಳಿನಗಂ ನಿಱಿ ಮುನ್ನವೆ ಬಿಟ್ಟುಪೋಪುದೆಂ
ಬಿನಿತನೆ ಬಲ್ಲೆನಾ[5]ನಱಿಯೆನಂದೆನ[5]ಗಾದ ರ[6]ತಪ್ರಪಂಚಮಂ[6] ॥ ೬೦

(ಶೃಂಗಾರರತ್ನಾಕರಂ, ೧–೫೬.)

---

[1] ಪಿಂಕಡು (ಕ), ಬಂಕುಡು (ಖ.ಬ). [2] ರ್ಮ್ಮಗೊರ್ಮ್ಮ (ಖ.ಬ). [3] ಸ್ಯೆತು (ಖ.ಬ).
[4] ನೊಳೊಡಗೂಡುವಾ (ಅ.ಕ). [5] ಮೆಲ್ಲಱಿಯೆನೆನೆ (ಖ.ಬ). [6] ತಾಂತರಂಗಳಂ (ಖ.ಬ).

ಇಂತುಟದೆಂದು ಬಣ್ಣಿಸುವರಾರ್ ಗಳ ನಲ್ಲಳ ನಲ್ಮೆಯ[1]ಲ್ಲಿ[1] ನಾ
ಣಂ ತಲೆದೋಱಲೀಯದ ರತಂ ನುಡಿಯಂ ಪೋಱಿಪೊಣ್ಮಲೀಯದೋ।
ರಂತಿರೆ ಬಾಯ್ಗೆ ಬಾಯ್[2] ಸವಿಯನೊಪ್ಪಿಪ ಚುಂಬನಮೆಯ್ದೆ ನಿದ್ರೆಯಂ
ಸಂತತ ಮೋದುವೀಕ್ಷಣಮಲಂಕೃತಿಯಂ ಬೆದಱಟ್ಟುವಪ್ಪುಗಳ್ ॥ ೬೧

ಮುಡಿಯಿಂದಂ ನುತ್ತಲುಂ ಕತ್ತುರಿಯುದಿರ್ದುದು ಪೂಮಾಲೆ ನೂಸಿರ್ದುದೆತ್ತಂ
ಕಡಿಖಂಡಂಬೋಯ್ತು ಹಾರಂ ಬಳೆಯ ಮುಱುಗಳಂ ಸೆಜ್ಜೆ ತೀವಿತ್ತು ಮೆಚ್ಚ।
ಚ್ಚುಡಿವನ್ನಂ ಪಾರ್ದು ನಲ್ಲರ್ ನೆರೆದರಿದಿರೊಳೆಂದಟ್ಟಿಯಿಂ ಸೆಜ್ಜೆಯಿಂ ಪಿಂ
ಬಡಿನೊಳ್ ಪೊಕ್ಕಾಳಯರ್ ಕಂಡೊಡನೆ ಪೊಗಟ್ಟಿನಂ ಸಂಭ್ರಮಂ ಸಂಪ್ರಯೋಗಂ॥

ವದನಸ್ವೇದಾಂಬುವಿಂದಂ ಕೊನೆನನೆದ ಕುರುಳ್ ಪಾಟಲಚ್ಛಾಯೆಯಿಂ ಬೀ
ಗಿದ ಬಾಯ್ ಕೆಂಪಿಂ ತುಳುಂಕಾಡುವ ನಯನದಳಂ ಸೂಕ್ಷ್ಮರೇಖಾಳಿಯಿಂ ತೀ।
ವಿದ ವಕ್ಷೋಜೈಕಪಾರ್ಶ್ವಂ ಪೊಳೆಪುವಡೆದ ಮೆಯ್ ನೀಳ್ದ ನುಯ್ ಬೆಂಗೆ ಬಿಣ್ಪೇ
ಱಿದ ಕೇಶಂ ಮಂದಯಾನಂ ನೆಱೆ ಮೆಱೆದವು ರತ್ಯಂತದೊಳ್ ಕಾಂತೆಯರ್ಗಂ॥

ಅಳಸದಿರಣ್ಣನಿರ್ದನೆಲೆ ಅಗ್ಗದ ಪೆರ್ಮೊಲೆ ನೋಗುಮುಟ್ಟುದಂ
ಕಳೆಯದೆ ಕೂಡು ಬೇ[2]ನೆ ತ[2]ಳೆದಪ್ಪುದು ಪೊಯ್ಯದಿರೊತ್ತಿಯಾಱುತಿಂ ।
ಗಳ ಬಸಿಱೋಕೆಪಾಯ್ತೆಯದಿ[3]ರ್ಪಿಂ[3] ಬಣವೋಡಿದುದಿಂದು ನೋಡೆ ಕೂ
ಸಿಟಿ[4]ವು[4]ದು ಕಾವುದೀ ಮೊಗಮನಿತ್ತೆನುತಂ ಪೆಱಗಾಗಿ ಕೂಡಿದಳ್ ॥ ೬೪

ಮೊಲೆ ಮಲೆಯೆ ಭಾಳಪಟ್ಟಮ
ನಲೆಯೆ ಕುರುಳ್ ತಾರಹಾರಮಂಡಲಮುರದೊಳ್ ।
ನಲಿಯೆ ಶಕುನಿಗಳ ತೆಱದಿಂ
ದುಲಯೆ ಕೊರಲ್ ಕಾಂತೆ ಕೂಡಿದಳ್ ಪ್ರಿಯತಮನೊಳ್॥ ೬೫

ಒಡನೊಳಪೊಕ್ಕು ಮೆಯ್ಗೆ ಪುಳಕಂಗಳ ಕೀಲಮರ್ದಪ್ಪು ಕಾಳಸಂ
[5]ಬಡ[5]ದಿರೆ ಕಾಸಿ ಬೆಚ್ಚು ತೊಳೆದಂತೆ ಬೆಮರ್ [6]ಬಟಿಕೇ[6]ಪೆ ಪೀ[7]ರ್ದ ಬಾಯ್ ।
ಬಿಡದ ತೊಡಂಕಿನಿಂ ತೊಳಗೆ ಪೊಂಗಿ ತೊಡಂಕಿರೆ ಪೋಲ್ತ[7]ರೋಪರಿಂ
ಪಡರ್ದ ರ[8]ತಾಂತ[8]ದೊಳ್ ನಮನೆ ಸಂಪುಟದಿಂ[9]ದೆಸೆವರ್ದ[9]ನಾರಿಯಂ ॥ ೬೬

(ಅನಂತನಾಥಪುರಾಣಂ, ೮–೫೨.)

---

[1] ಟ್ಟಿ (ಕ). [2] ಗೆತ (ಕ), ನೆಕ (ಖ.ಬ). [3] ರ್ದಿಂ (ಖ.ಬ). [4] ದು (ಖ.ಬ). [5] ಬಡೆ (ಅ). [6] ತಿಳಿದೇ (ಅ). [7] ರ್ದು ಬಾಯ್ಬಡಗಿದೊಡಂಕಿನಂತೊಳಗೆ ಪೊಂಗಿ ದೊಡಂಕಿರಿಪೋಲ್ತ (ಅ). [8] ಥಾಂಗ (ಅ). [9] ಸಮೆದಿರ್ದ (ಅ).

ಸಮರತಸೌಖ್ಯದೊಳ್ ಸತಿ ದಿಗಂಬರವೇಷಮನಾಳ್ದು ಮುಕ್ತಕೇ
ತಮದೆಸೆಯಲ್ಕೆ ಕ[1]ಣ್ಗಳರೆ[1]ಮಿಾಲತಮಾಗಿರಲಾಸನಕ್ರಮಂ ।
ಸಮನಿಸೆ ಹೂಂಕೃತಪ್ರಣವಮೊಪ್ಪೆ ಶರೀರಮ[2]ನೊಕ್ಕು ತನ್ಮನೋ[2]
ರಮಣನ ಹೃನ್ನಿಧಾನಮನುಪಾರ್ಜಿಪ [3]ಯೋಗಿನಿ[3]ಯಂತಿರೊಪ್ಪಿದಳ್ ॥ ೬೭
(ಶೂದ್ರಕಂ—ಕಾವ್ಯಸಾರಂ, ೬೬೫.)

ಒದೆದು ಕಲಂಕಿ ಪಾಯ್ವ ಪದದೊಳ್ ಪದವೆತ್ತು ಪುಡುಂಕುನೀರನ
ದ್ದಿದಳುಱಿ ಮೋದಿ ಮುಂದೆಲೆಗೆ ಪಾಯ್ದು ಪೊರಳ್ಚಿದಳು[1]ರ್ಬ[4] ಬಾಹುಪಾ ।
ಶದೊಳೆ ತೊಡರ್ಚಿದಳ್ ಕರದ ಕೂರುಗುರಿಂದಮೆ ಬೆನ್ನ ಬಾರನೆ
ತ್ತಿದಳ್[5]ಡಬಾಱಿಲೊಲ್ಲ[5]ದವನಂ ವನಿತಾಜನಚಿತ್ತಚೋರನಂ ॥ ೬೮
(ಲೀಲಾವತಿ, ೧೩—೨೨.)

ಮದವದ್ಯೌವನ ರೂಪು ವಿಭ್ರಮವಿಲಾಸಂ ಕಣ್ಗೆ ಸಂಭೋಗಸ
ನ್ಮದ ಚಾತುರ್ಯಮ್ಮದೂಕ್ತಿಯಂ ಕಿವಿಗೆ ಗಾಢಾಲಿಂಗನಂ ಮೆಯ್ಗೆ ಬೀ ।
ಗಿದ ಬಿಂಬಾಧರದಿಂಪು ನಾಲಗೆಗೆ ಮೂಱುಂ ಕಂಪು ಮೂಗಿಂಗೆ ತೋ
ಱಿದಳೋಪಂಗೆ ಲತಾಂಗಿ ಮಂಚದೆಡೆಯೊಳ್ ಪಂಚೇಂದ್ರಿಯಪ್ರೀತಿಯಿಂ ॥ ೬೯

ಚುಂಬಿ[6]ಸೆ ಬೀಗೆ ಬೆಳ್ಕರಿಸಿದೊಳ್ತುಟಿ[7]ಯಾಳಿಸಿದ[6]ಪ್ಪಿ[7]ನೊತ್ತಿನಿಂ
ದಂ ಬಿಡೆ ಗುಜ್ಜುಗೊಂಡಮೊಲೆ ಪೋರ್ಕುಳಿಯಿಂದಮೆ ಹಂತಿದಪ್ಪಿ ತಾ ।
ಱುಂಬಟಿ[8]ಯೆಂದ್ದ ಚುಂಚು ಬೆಮರಿಂ ಕಡೆಗೆನ್ನೆಗೆ ಬಾನಲಾದ ಬೊ
ಟ್ಟೆಂಬಿವು ಕೂಟದೊಂದು ಸವಿಯೊಳ್ ಸವಿಯಾದುವು ಕಣ್ಗೆ ಕಾಂತನಾ[8]॥ ೭೦
(ಚಂದ್ರಪ್ರಭಪುರಾಣಂ, ೮—೭೨.)

ಎತ್ತಿ ಮುಖಾಬ್ಜಮಂ ಬೆಮರನೂದಿ ಕುರುಳ್ಗಳನೊಪ್ಪಿ ನೀವಿ ಸ್ಮೈ
ತೊತ್ತಿ ಕದಂಪಿನೊಳ್ ಕದಪನಿಟ್ಟು ತೊಡಂಕಿದ ಭೂಷಣಂಗಳಂ ।
ಬಿತ್ತರದಿಂದೆ ತಿದ್ದಿ ರಸದಂಬುಲಮಂ ಸವಿಮಾಡಿ [9]ನೀ[9]ಡಿ ಮೆ
ಯ್ವೆತ್ತ ರತಾಂತ್ಯದೊಳ್ ಸುರತಸೇದೆಯನಾಱಿಸಿದಂ ಮನಃಪ್ರಿಯಂ ॥ ೭೧

ನಿಡುಸುಯ್ ಪೊಂಗಿದರ್ ಬಾಯ್ ಚಪ್ಪಲರ್ದ ಕುಚಯುಗಂ ಕಂಪಮಾನೋ
ರುಭೇದ್ಯಂ
ಕಡುರಕ್ತಾಸಕ್ತನೇತ್ರಂ ನವನಖಪದಮಾಕೀರ್ಣನೀಲಾಳಕಂ ಜೋ ।

---

[1] ಣ್‌ದರನಿ (ಅ). [2] ನೋರಥದ್ರಮಾ (ಖ.ಬ). [3] ಜೋಗಿಣಿ (ಖ.ಬ). [4] ರ್ಚಿ (ಅ). [5] ವಳಾಱಿದೋವ (ಅ), ಡಬಾರಲಲ್ಲ (ಖ.ಬ). [6] ಸಿ ಬೀಗಿ ಬೆಳ್ಪ ಡರ್ದ ಬಾಯ್ತೆಱೆಯಾಳಿಸಿದ (ಅ). [7] ಯೊಳ್‌ಪಿಡಿದಪ್ಪಿ (ಖ.ಬ). [8] ಯುಂ ತೆರಳ್ದ ಕುರುಳುಣ್ಮೆ ಬೆಮರ್ ನನುಬಾಲನಾದ ಬೊಟ್ಟೆಂಬಿವು ಕೂಟದೊಂದು ಸವಿಯಂ ಪಿನು ಣಾಡುವುವೀ ಲತಾಂಗಿಯಾ (ಅ). [9] ನೋ (ಕ).

ಲ್ಲುಡೆ ಘರ್ಮಸ್ವೇದನಂ ಕಣ್ಗೊಳಿಸೆ ತಡತಡಂ ಮೆಟ್ಟಿ ರತ್ಯಂತದೊಳ್ ನೀ
ರ್ಗುಡಿಯಲ್ಕಂ ಪೋಪಳಂ ಕಂಡೆರ್ದೆ ತಣಿದು ಕುಳಿಕೊರ್ಪೀಡಿತೆನ್ನಂತರಂಗಂ॥೭೨

ಪರೆದಳಕವ್ರಜಂ ಕೆದಱು ಸೂಸಿದ ಮುಂದಲೆ ಗುಜ್ಜುಗೊಂಡ ಪೀ
ವರಕುಚಮಂಡಲಂ ತುಳುಕಲಾದೆರ್ದೆ ಬಿಚ್ಚಿದ ಕೇಶಪಾಶಮು ।
ಬ್ಬರಿಸಿದ ರೇಖೆಗಳ್ ನುಗಿದು ಪೋಗದ ಜರ್ಜರವಾದ ಬೊಟ್ಟು ಸಾಂ
ದರತರಮಾಗೆ ದಂಪತಿಗಳಿಂತೆಸೆದರ್ ಸುರತಾವಸಾನದೊಳ್॥ ೭೩

ನಲಿಗಚ್ಚುಂ ನಖರೇಖೆಯುಂ ಸುಲಿದುರೋಜೋಮಧ್ಯಮುಂ ಸ್ವೇದವಾ
ರಿಲವಂಗಳ್ ಪೊಳೆವಾಸ್ಯಮುಂ ಪರೆದ ಚಂಚತ್ಕುಂತಳಾನೀಕಮುಂ ।
[1]ಸ[1]ಲೆ ಮೆಯ್ದೋಱೆ [2]ರತಾಲಯಾಂಗಣದೊಳೊರ್ವಳ್ ನೀಱೆ ಮೆಯ್ಯೊಡ್ಡಿ [2] ಬ
ತ್ತಲೆ ನಿಂದಿರ್ದಳೆರಲ್ಗೆ ತೀರ್ದ ರತಖೇದಶ್ರಾಂತಿಯಿಂ ಬಿಚ್ಚತಂ॥ ೭೪

ಬೆಮರ್ಗಳನೂದಿ ನುಣ್ಪೊಡೆಗಳಂ ಪಿಡಿ[3]ದಾಂಕಿ[3] ಬೆರ[4]ಲ್ಗಳಂ ಕ್ರಮ[4]
ಕ್ರಮದೊಳೆ ಕೋದು ತಳ್ತು ಚಿಟುಕಿತ್ತು ತೊಡಂಕಿದ ಕುಂತಳಂಗಳಂ ।
ಸಮುದಯಮೊಪ್ಪೆ ನೀವಿ ರಸದಂಬುಲಮಂ ಸವಿಮಾಡಿ ನೀಡಿ ಮೆ
ಲ್ಲಮರಿ ಬಬಲ್ದ ತನ್ನಿನಿಯಳಂ ನೃಪನಾಱಿಸಿದಂ ರತಾಂತದೊಳ್॥ ೭೫

ಅಲರ್ಗಣ್ ಬೇಂಡೇಱೆ ರೋಮಾಂಚ[5]ನದೊದವಿನಿತುಂ[5] ತಾಱುತಟ್ಟಾಗೆ ಬಾಯೊ
ಪಲವುಂ ನುಣ್ಮಾತುಗಳ್ ಲಾವುಗೆಯ ಕೊರಳನಲ್ಲಾಡಿದಂತಾಗೆ ಜುಮ್ಮೆಂ। [ಳ್
ದೊಲೆದಂಗಂ ತೂಗೆ ಸುಯ್ಲಂತೊಳಗಿಟಿಯೆ [6]ಗಳಂ ಬೀಗೆ[6] ನಾಣ್ ಸೂಸೆ ಕಾ[7]ಮಂ
ಚಲದಿಂ[7] ಕೈಮಿಕ್ಕಮಳ್ಚಂತ್ರಮನೆ ಕೆಡಪಿದಂತಿರ್ವರುಂ ಮೂರ್ಛೆಪೋದರ್॥ ೭೬

ಬೆಮರಂ ಬೀಸಿ ತೊಡಂಕಿದೊಳ್ಗುರುಳನಾದಂ ನೀವಿ ಪಚ್ಚಂಗಳಂ
ಕ್ರಮದಿಂ ತಿರ್ದಿ ಕದಂಪಿನೊಳ್ ಕದಪನೋರಂತಿಟ್ಟು ಮೆಲ್ದೊಪ್ಪಿ ಸಂ ।
ಭ್ರಮದಿಂದಂ ಪಿಡಿಕೆಯ್ಸಿ ನುಣ್ಪೊಡೆಗಳಂ ಕಾದಲ್ಕೆ ಕೈಮಿಕ್ಕು ನೇ
ರ್ಪಮರ್ವನ್ನಂ ರತಖೇದಮಂ ಮಱಿಸಿದಂ ನಲ್ಲಳ್ಗೆ ತದ್ವಲ್ಲಭಂ॥ ೭೭

ಪೊಡರ್ವುತ್ತುಂಗಸ್ತನಂ ಕೊಂಕಟಿದು ನಿಮಿರ್ದ ನೀಲಾಳಕಂ ಜೋಲ್ದ ಬಂಬ
ಲ್ಮುಡಿ ಬೆಳ್ವೇಱಿರ್ದ ಬಿಂಬಾಧರಮಣಿ ನಸು[8]ಕೊಂಕಿ[8]ರ್ದ ಕಣ್ಕೊರ್ತ್ತಲಂ ಕೆಂ।
ಪಡರ್ದಾಲೋಲೇಕ್ಷಣಂ ಕಂಪಿಸುವ ತನು ರತಿಶ್ರಾಂತಿಯಿಂದಂ ಬೆಡಂಗಂ
ಕುಡೆ ನೆಮ್ಮಿರ್ದೊಪನಂ ಮೆಯ್ಬೆಮರನೆಲರೊಳಂದಾಱಿಸುತ್ತಿರ್ದಳೊರ್ವಳ್॥೭೮

(ಜಗನ್ನಾಥವಿಜಯಂ, ೧೬–೧೨೪.)

---

[1] ನೆ (ಗ.ಘ). [2] ರತಾಂತದೊಳ್ ಸುದತಿ ನಸ್ವೇದಾಂಬುವಂತೀರ್ದೆ (ಗ.ಘ). [3] ಕೆಯ್ವ (ಕ.ಖ). [4] ಳ್ಗಳೆಲ್ಲಮಂ (ಗ.ಘ). [5] ದಜಲವನಿತುಂ (ಗ.ಘ), [6] ಬೆಮರ್ ಪೊಣ್ಮೆ (ಗ.ಘ). [7] ಪೋಜ್ವಲದಿಂ (ಕ.ಖ.ಗ.ಘ), [8] ಗಂದಿ (ಕ.ಖ.ಬ).

ದೆಮರುಣ್ಮತ್ತು ಶಶಾಂಕಮಂಡಲದೊಳುದ್ಯತ್ತಾರಕಾಗರ್ಭಸಂ
ತಮನಂ ಬಿರ್ದಿದುದಾಯ್ತು ಕೇತಕಿ[1]ಶಿಖಾ [ಲೀಲಾಯಿ][1]ತಶ್ರಾಂತಿ ವಿ।
ಶ್ರಮಿಸಿತ್ತಬ್ಜಯುಗಂ ಚರನ್ಮಣಿವತಂಸಕ್ರೀಡೆ ಪೋದತ್ತು ವಿ
[2][ದ್ರುಮಮುಂ][2]ಸೀತ್ಕೃತಿ [3][ಗೆಟ್ಟು][3]ವಾನಱಿಯೆನಲ್ಲಿಂದಾದುದೇನೆಂಬುದಂ॥ ೭೯

ಉಗು[4]ರ್ವೊಯ್ಲಿಂದಾಸುರಂ ಬಾಸುಬ[4]ಮೊಗೆಯೆ ಕರಂ ಬೀಗೆ ಬಿಂದಾಧರಂ[5]ಬಾ
ಯುಗೆಯಿಂ ಕನ್ನೈಸೆ ಪೊಯ್ಲಿಂ ನಡುವೊಡೆಯೆ ಕುಚಂ[5] ಸೊಪ್ಪುಸೊಪ್ಪಾಗೆ ಕಂಗಳ್
ಮುಗಿವನ್ನಂ [6]ಪಾದದಿಂ ಬಳ್ಳನೆ ಬಳಿದವೊಲಚ್ಚಾಡೆ[6] ಮೈ [7]ಕೇಶಕೃಷ್ಣೋ[7]
ರಗನಂ ಪಿಂದಿಕ್ಕಿ ತನ್ನಂ ಪ್ರಿಯತಮಗರುಡಂ[8]ಗಿ[8]ತ್ತವೊಲ್ ಕೂಡುತಿರ್ದಳ್॥ ೮೦
(ಲೀಲಾವತಿ, ೨-೧೩೩.)

ಕರಜಾತಾರ್ದ್ರಕ್ಷತಂ ಕುಂಕುಮಲಿಖಿತಮನೋಹಾರಿಯಂತ್ರಂಬೊಲಿಂಬಾ
ಗಿರೆ ಮೆಯ್ಯೊಳ್ ಕೈಯ ಪಾತ್ರಂ ಕರಮೆಸೆಯೆ ರಣನ್ನೂಪುರಂ ಮುಕ್ತಕೇಶಂ ।
ಸ್ಮರಮಂತ್ರಾರಾಧನಾದೇವತೆಯೆ ಕುಣಿವವೋಲಾಡಿದಳ್ ಪೀರ್ದ ನುದ್ಯಂ
ಸುರಿವಂತೂರುಪ್ರದೇಶಂಬಿಡಿದು ಬಿಡೆ ಪದಂ ಕಾಂತೆ ನಿರ್ಗ್ರಂಥದಿಂದಂ॥ ೮೧
(ಲೀಲಾವತಿ, ೨-೧೨೭.)

ಓರಂತೆ ಮೆಚ್ಚಿದಂ ಕೃತಿ
ನಾರಂ ಸಂಭೋಗಕೆಯ್ದೆ ಹೊಯ್ಸಳವಂಶೋ।
ದ್ಧಾರಂ [9]ನರಸಿಂಹ[9]ಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ॥ ೮೨

ಇದು ನರಸ್ವತೀನವಾರ್ಣಂಗದರ್ಪಣಾಯಮಾನ ಪ್ರತಿಭಾನನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧನಾರೋದ್ಧಾರಮುಮ
ಷ್ಟಾದಶನ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ಸಂಭೋಗವರ್ಣನಂ ಚತುರ್ದಶಾಶ್ವಾಸಂ ಸಂಪೂರ್ಣಂ.

---

[1] ಸಖೀವಿರಾಯ (ಕ), ಶಿಖಾವೀರಾಯ (ಖ.ಬ.ಗ). [2] ಧ್ರುಮಮಾ (ಕ.ಖ.ಬ). [3] ಚಾಟು [4] ರೇಟುಂ ಬಾಸುಳೊಂದಾಸುರ (ಅ). [5] ಪಾಯ್ದುಗಿವನ್ನಂಬೆಂಗೆ ಪೊಯ್ದಾ ಗುರುಕುಚಯುಗಳಂ (ಅ). [6] ಪಾತದಿಂ ಪಿಳ್ಳನೆ ಪಿಳಿದವೊಲಳ್ಳಾಡೆ (ಅ) [7] ಕೃಷ್ಣ ಕಾಳೋ (ಖ.ಬ). [8] ಕಿ (ಅ). [9] ಬರ್ಲಾಳ (ಕ).

ವಿಪ್ರಲಂಭವರ್ಣನಂ

ಪುರು[1]ಡಿಂ ಮ್ಲಾ[1]ನದಿನನ್ಯದೇಶಗಮನವ್ಯಾಸಂಗದಿಂ ಸುವ್ರತಾಂ
ತರದಿಂ ಕೂಡಿದ ವಲ್ಲಭರ್ಗೆ ವಿರಹಂ ಪೂರ್ವಾನುರಕ್ತರ್ಗೆ ತಾಂ ।
ವಿರಹಂ [2]ಸಂದಿಸೆ[2] ಪಾಟಿಯಿಂದೆ ಪಿರಿದುಂ ಬರ್ಕುಂ ದಶಾವಸ್ಥೆಗಳ್
ಹರಿಣಾಂಕಾದಿಗಳಂಜಿಕುಂ ಸರಸಸೇವ್ಯಂ ವಿಪ್ರಲಂಭಸ್ಥಳಂ॥ ೧

ಸ್ಮರವಶದಿನನ್ಯಜನ್ಮಾಂ
ತರಕೃತಸಂಸ್ಕಾರದಿಂ ವಿ[3]ಭೋ[3]ಗ[4]ಸ್ಪೃಹೆ[4]ಯಿಂ ।
ವರ ಚಾತುರ್ಯಕಳಾಗಮ
ಪರಿಣತಿಯಿಂ ಸ್ನೇಹವೃತ್ತಿಗಳ್ ಸಂಭವಿಕುಂ॥ ೨
(ಶೃಂಗಾರರತ್ನಾಕರಂ, ೪–೭೦.)

ಪರಿಭಾವಿಸುವುದು ಪೂರ್ವಾ
ನುರಾಗ ಮಾನಾಖ್ಯ[5]ಕಂ ಪ್ರ[5]ವಾಸಾಖ್ಯಾನಂ ।
ಕರುಣಾತ್ಮಕಮೆಂದಿಂತವ
ತರಿಸೆ ಚತುರ್ಭಂಗಿ ವಿಪ್ರಲಂಭದ ಭೇದಂ॥ ೩
(ಶೃಂಗಾರರತ್ನಾಕರಂ, ೪–೫೯.)

ನಳತೋಳಂ ನೀಡಿ ಕಾಲಂ ಮ[6]ಡಿದು[6] ಪೆಱಗಣಂ ಬಾಗಿ ಬಂಬಲ್ಗುರುಳ್ ಸಂ
ಚಲ[7]ನಲ್[7] ನೀವೀನಿಬಂಧಂ ಸಡಿಲೆ ನಿಱುಯನೇಱೊತ್ತಿ [8]ಸೌ[8]ರಂಭದಿಂ [9]ಕೆಂ।
ದ[9]ಳಮಂ ಸಂಚಾರಿಕಾನ್ಕಂಧದೊಳವಯವದಿಂದೂಱಿ [10]ನೆಮ್ಮಿ[10]ರ್ದು ಮುಳ್ಳಂ
ಕಳ[11]ಯು[11]ತ್ತುಂ ನೋಡಿದಾ ಕಾಂತೆಯ ತೆಱನೆನಗುದ್ಭ್ರಾಂತಿಯಂ ಮಾ[12]ಡ್ಪು
ದಿನ್ನುಂ[12]॥೪
(ಶೃಂಗಾರರತ್ನಾಕರಂ, ೪–೪೨.)

ಇನಿಯಂ ಪ್ರಾಣಮಗಲ್ದು ಪೋಪ ತೆಱದಿಂದೆನ್ನಿಂದಗಲ್ದರ್ದನಾ
ತನ ಪೋಗಿಂಗೆನಗಕ್ಕ ನೋವಿನಿಸುಮಿ[13]ಲ್ಲೀಕೆಂ[18]ದೊಡೊಂದುಂಟು ನ ।

---

[1] ದಿಂ ಮಾ (ಗ.ಘ). [2] ಸಾಧಿಸಿ (ಖ.ಬ.ಗ.ಘ), [3] ಯೋ (ಕ). [4] ಕ್ರಿಯೆ (ಅ). [5] ಮುಂಪ್ರ (ಅ), ತತ್ಪ್ರ (ಗ.ಘ). [6] ಡುಪಿ (ಅ). [7] ಪನ್ನಂ (ಗ.ಘ). [8] ಸೆಂ (ಖ.ಬ). [9] ಕುಂತ (ಗ.ಘ). [10] ನಿಂದಿ (ಗ.ಘ). [11] ಸು (ಖ.ಬ). [12] ಡುತಿರ್ಕುಂ (ಅ). [13] ಲ್ಲಿಂತೆಂ (ಅ).

ಲ್ಲನ ಚಿತ್ತಂ ಪೆಱಪಿಂಗೆ ಪಿಂಗ[1]ದೆ[1] ತಗುಳ್ದೊರಂತೆ ನಿಷ್ಕಾರಣಂ
ನೆನೆವೀ ಚಿತ್ತದ [2]ಮೋಹ[2]ನಾಣಲಿತನಕ್ಕಾಂ ನೋವೆನಬ್ಜಾನನೇ॥ ೫
(ಶೃಂಗಾರರತ್ನಾಕರಂ, ೪–೪೫.)

ಪ್ರಿಯೆಯೊಡನಾದ ಕೂಟದೊಳಗಲ್ಕೆ[3]ಯೊಳಾನಿರೆ[3] ಕೂಟದಿಂದಗ
ಲ್ಕೆಯೆ ಕರಪೊಳ್ಕತೆನ್ನ ಬಗೆಗೆಂತೆನೆ ನೆಟ್ಟನೆ ನೋಡ್ಪೊಡಂ[4]ತೆ[4] ಮ।
ತ್ಪ್ರಿಯೆಯನೆ ಕಾಣ್ಬೆನೊರ್ವನಿನೆ [5]ಭಾವಿಪೊಡಿಂ ಬಟಿಕೆನ್ನ[5] ಕಣ್ಗೆ ತ
ನ್ಮಯಮೆನಗೀ ಜಗತ್ತ್ರಿತಯಮೆಲ್ಲಮಗಲ್ಕೆಯೊಳೆನ್ನ ನಲ್ಲಳಾ॥ ೬
(ಶೃಂಗಾರರತ್ನಾಕರಂ, ೪–೪೮.)

ಕೆಳದೀ ಕೀರಾಳಿಗಳ್ ಕೈಯೆಡೆ ನಿನಗೊಡಲಂ ತಾಳಲಾರ್ತಪ್ಪೆನಿಲ್ಲೀ
ಗಳದೊಂದುಂ ಬೇಡ ಕಾಂತಂ [6]ಕಟಿದ[6]ನೆನಗಿರಲ್ ತಕ್ಕುದಲ್ತೆಂದು ಕೈಗ್ಗೈ ।
ದೆಳೆಯಳ್[7] ತನ್ನಂ ಪರಿಚ್ಛೇದಿಸಿ ಬಗೆಯದೆ ಬಂ[8]ದುಣ್ಮಿ ಪರ್ವಿರ್ದ[8] ಬೆಳ್ದಿಂ
ಗಳ ಕೋಳ್ಗಂ ತೆಂಬೆಲರ್ಗಂ ಪ್ರಿಯ ಶರಣೆನುತುಂ ಸಾರ್ಚಿದಳ್ ಮ್ಮೆಯನೊರ್ವಳ್॥ ೭
(ಶೃಂಗಾರರತ್ನಾಕರಂ, ೪–೫೧.)

ಅಭಿಲಾಷೆ ಚಿಂತೆ ಸಂ[9]ಸ್ಮೃ[9]ತಿ
ವಿಭುಗುಣನುತಿ ತಾಪನಂ ಕ್ರಿಯಾದ್ವೇಷಂ ಸಂ ।
ದಭಿಮಾನಚ್ಯುತಿ ಗಮನಂ
ಕ್ಷುಭಿತಾತ್ಮಾವಸ್ಥೆ ಮರಣಮಿವು ದಶಭೇದಂ॥ ೮
(ಶೃಂಗಾರರತ್ನಾಕರಂ, ೪–೬೯.)

ಉಂಟೆಲ್ಲವಸ್ಥೆ ಮುಳಿಸಿಂ
ನಂಟಿಂದೊಂದೆರಡು ಮೂಱು ನಾಲ್ಕೈದಾಱೇ ।
ಬೆಂಟೊಂಬತ್ತುಪತ್ತೊಂಬ
ತ್ತೆಂಟೇಡಾಱೈದು ನಾಲ್ಕು ಮೂಱೆರಡೊಂದುಂ॥ ೯

ಇಂಬಱಿದು ನುಡಿವ ನುಡಿಯುಮೊ
ಡಂಬ[10]ಡಿಪೆನಿಸಿದ[10] ವಿಲಾಸಮುಂ ವರರೂಪಾ।
ಡಂಬರಮುಮಾರ ಬಗೆಯಂ
ನಂಬಿಸಿ ಪತ್ತಿಸದೆ ಚತುರ ಚತುರಾನನನಾ॥ ೧೦
(ಶೃಂಗಾರರತ್ನಾಕರಂ, ೪–೭೭.)

---

[1] ದು (ಖ.ಬ). [2] ಮಾಯ್ದ (ಅ). [3] ಯಗಲ್ಕೆಯ (ಅ). [4] ದು (ಅ). [5] ಕೂಡಿರೆ ಭಾವಿಪೊಡಿಂದು (ಅ). [6] ತಳರ್ದ (ಗ.ಘ). [7] ದಿಳೆಯೊಳ್ (ಅ). [8] ದಣ್ಮಿ ಪೆರ್ಚಿರ್ದ (ಅ). [9] ಸ್ಮೃ (ಖ.ಬ). ಸ್ಮೃ (ಗ.ಘ). [10] ಡಿಸುಗಯಿಪ (ಅ).

ಪರವಶದರ್ಶನದಿಂ[1]ದಮೆ[1]
ಪರಿದುದು ಮನಮೆನಗೆ ಕೂಟಮೆಂತಕ್ಕುಮವಂ ।
ಬರಲಱಿಗುಮಱಿ[2]ಯನೆನಗಂ[2]
ದೊರೆಕೊಳ್ಗುಮೊ ಕೊಳ್ಳದೆಂದವಳ್ ಚಿಂತಿಸಿದಳ್॥ ೧೧
(ಶೃಂಗಾರರತ್ನಾಕರಂ, ೪–೭೮.)

ಪಲತೆಱೆದ ವಿನೋದಂಗಳ್[3]
ಚಲಯಿಸುತಿರೆ ಮನ[4]ಮನೆಂ[4]ತುಮಾಕೆಯ ಮನದಿಂ ।
ಚಲಯಿ[5]ಸದಿರ್ಪನವಂ[5] ಸಂ
ಚಲ[6]ಸುವ[6] ಕೇತನದ ಪಟದ ರೂಪಿನ ತೆಱದಿಂ॥ ೧೨
(ಶೃಂಗಾರರತ್ನಾಕರಂ, ೪–೭೯.)

ಇಂತು ನುಡಿಯಲ್ಕೆ ಬಲ್ಲನ
ನಿಂತಿಂಬಱಿವವನನಿಂತು ಚೆಲ್ವನನಿಂತ ।
ತ್ಯಂತ ಗುಣಗಣಸಮೇತನ
[7]ನಿಂತಪ್ಪನನನ್ಯಗಂಡರೊಳ್ ಕಂಡಱಿಯೆಂ[7]॥ ೧೩
(ಶೃಂಗಾರರತ್ನಾಕರಂ, ೪–೮೦.)

ಕದಳೀಶಯ್ಯಾ[8]ತಳ[8]ಮುಂ
ಕದಳೀಗ[9]ರ್ಭಾಂಬುಸೇಚನಂ[9] ಶೈತ್ಯಮ[10]ನಿಂ ।
ದೊ[10]ದಯಿಸುಗುಮೆಂದು ಮಾಡಿದೊ
ಡದು ಪುಟಪಾಕದವೊಲಾಯ್ತುವಳ್ಗಂಗಜನಿಂ॥ ೧೪
(ಶೃಂಗಾರರತ್ನಾಕರಂ, ೪–೮೧.)

ಆಲೇಪನ[11]ಕಜ್ಜಲ[11]ತಾಂ
ಬೂಲ[12]ನ್ಯಗ್ಭೂ[12]ಷಣಾದಿ ವಿಭವಂಗಳನಾ ।
ಬಾಲೆ ಸಖೀಪ್ರಾರ್ಥನೆಯೊಳ್
ಮೇಳಿಸಿ ನಿನ್ನನೆ ಪಲುಂಬಿ ಪಂಬಲಿಸಿದಪಳ್॥ ೧೫
(ಶೃಂಗಾರರತ್ನಾಕರಂ, ೪–೮೨.)

ಬಗೆಯದೆ ತಾಯಂ ತಂದೆಯ
ಮೊಗಕಂಜದೆ ಬಂಧುವರ್ಗಮಂ ಮೀಱಿ ಕೆಲ ।

---

[1] ದಂ (ಅ). [2] ಱಿನೆನಗಿದು (ಖ.ಬ). [3] ದಂಗಂಗಳ್ ತಾಂ (ಅ). [4] ಮುಮೆಂ (ಅ). [5] ಸುತಿರ್ಪಿರವಿಂ (ಖ.ಬ), ನುತಿರ್ಪನವಂ (ಗ.ಘ) [6] ಕುಂ (ಅ). [7] ನಿಂತ ಪವ ನೆನ್ನಗಂಡನೊಳ್ ಕಂಡಱಿಯಾ (ಅ), ನಿಂತೀಲೋಕದೊಳ್ ಕಂಡರೊಳ್ ಕಂಡ ಱಿಯೆಂ (ಗ.ಘ). [8] ಸನ (ಖ.ಬ). [9] ರ್ಭಾವಗೂಹನಮಣ್ಣಿಂ (ಗ.ಘ). [10] ನಿನ್ನೊ (ಅ). [11] ಕಂಜುಲ (ಖ.ಬ). [12] ಶ್ರೀಭೂ (ಅ), ನದ್ಭೂ (ಗ.ಘ).

ಕ್ಕಗಿಯದೆ ನಿನ್ನೊಳ್ ನೆರೆಯಲ್
ಮೃಗಶಾಬೇಕ್ಷಣೆ ತಗುಳ್ದು ಪಂಬಲಿಸಿದಪಳ್॥ ೧೬

(ಶೃಂಗಾರರತ್ನಾಕರಂ, ೪–೮೩.)

ಕಳವಳಿಸಿದಪಳ್ ಬಾಯಟಿ
[1]ದೊಳಲು[1]ದಪಳ್ ಬೀದಿಬೀದಿಯೊಳ್ ನಿನ್ನಂ ಕೋ ।
ಮಳೆ ಪಿಡಿಯಲೆಂದು [2]ಪಾರ್ದ[2]
ವ್ಯಳಿಸಿದಪಳ್ ನೀನವಳ್ಗೆ ಕರುಣಿಸವೇಡಾ॥ ೧೭

(ಶೃಂಗಾರರತ್ನಾಕರಂ, ೪–೮೪.)

ಮಾಣದೆ[3]ಸುತಿರ್ಪ[3] ಮದನನ
ಬಾಣಾಹತಿಗೊಡಲ[4]ನೊಡ್ಡಿ ನಾಣುಂ ಜಾಣುಂ ।
ಮಾಣದೆಯುಂ[4] ಕಂಠಗತ
ಪ್ರಾಣೆಯವಳ್ ನಿನ್ನ ದೂಸಱುಂ [5]ಬಟ್ಟಪ್ಪಳ್[5]॥ ೧೮

(ಶೃಂಗಾರರತ್ನಾಕರಂ, ೪–೮೫)

ಅನವರತಮೆಸುವ ಕಾವನ
ನನೆಯ ಸರಲ್ ಸವೆಯೆ ಸ[6]ವೆಯ[6]ದಾಕೆಯ ಪದ್ಮಾ ।
ನನದಿನೆಡೆಯುಡುಗದುಣ್ಮವ
ಘನಸಾರಾಮೋದಪೂರಮಂದಶ್ವಾಸಂ॥ ೧೯

(ಶೃಂಗಾರರತ್ನಾಕರಂ, ೪–೮೬.)

ತಳರ್ಗೊಂಬಂ ಬಲಗೊಂಡು ಚಂದ್ರಬಲಮಂ ಕೈಕೊಂಡು ತೆಂಗಾಳಿಯಂ ಕೆಳೆಗೊಂಡಾಮ್ರಮನೊತ್ತು ಗೊಂಡು ಮಧುವಂ ಮುಂದಿಟ್ಟು ಪುಷ್ಪಾಸ್ತ್ರಸಂ। ಕುಳಮುಂ ತೀವಿರೆ ತೊಟ್ಟು ನಲ್ಲ[7]ರಟಿವಂ[7] ಪಾರ್ದೆಚ್ಚನಿಂತೀಗಳೀ ಖಳನೀ ಪಾತಕನೀ ಬಹುವ್ಯಸನನೀ ಚಂಡಾಲನೀ ಮನ್ಮಥಂ॥ ೨೦

ಬರಿದಪುದೆರ್ದೆ ಪೋಡಾಗದು
ಶರೀರಮುರಿದಪುದು ಭಸ್ಮಮಾಗದು ತನುವಂ ।
ಸ್ಮರನೆಚ್ಚಪನೇಱಾಗದು
ಮುರಹರ ನಿನ್ನೊಂದಗಲ್ಕೆಯಿದು ಚಿತ್ರತರಂ॥ ೨೧

---

[1] ದೆಳಸಿ (ಅ). [2] ನಂದ (ಅ). [3] ನುತ್ತಿದ (ಅ). [4] ನೀಗಳೊಪ್ಪಿಸಿ ನಾಣುಂ ಜಾಣುಂ ಕಿಡೆ (ಅ). [5] ಬರ್ದಿದಪಳ್ (ಅ). ಬರ್ದಿರ್ಪಳ್ (ಖ.ಬ). [6] ಮೆದು (ಅ). [7] ರುಳಿವಂ (ಕ). ಳುರಿವಂ (ಖ.ಬ.)

ಪೋದವರಾರುಮೇಂ ಮಗುಳ್ದು ಬಾರರೆ ಪೋದಪೆ[1][ನೆಂ]1ದೊಡೇಕೆಯಿಂ
ತಾದಪೆಯೆಂದೊಡಾಂತುಗುವ ಕಣ್ಬನಿಯಂ ನೆಗೆವುತ್ತ ರಂಗಳಂ ।
ಕಾದು ಪೊದಳ್ದು ನಾಣ್ಬೆರಸು ಮೆಲ್ಲನೆ ನೋಡಿ ವಿಯೋಗದುಃಖದಿಂ
ಕಾದಲಳಂದು ನಕ್ಕಳದು ಮುಂದಣ ಸಾವಿನೊಳಾದ ನಿಶ್ಚಯಂ॥ ೨೨

ಮಿಡುಕುಱೆ ಪೊಯ್ದ ತನ್ನೆರ್ದೆಯನೊತ್ತಿ ಕರಾಗ್ರದೊಳಾರೊಳಪ್ಪೊಡಂ
ನುಡಿಯದೆ ಚಿಂತಿಸುತ್ತ ಮೆಮೆಯಿಕ್ಕುವುದಂ ಮಱೆದೊಂದು ಜಾವಮುಂ।
ಮಿಡುಕದೆ ಸಾಲಭಂಜಿಕೆವೊಲರ್ದ ಲತಾಂಗಿಯ ರೂಪು ಕಣ್ಗಳೊಳ್
ತೊಡರ್ದಿರೆ ಪೋಗುಗೆಟ್ಟಿನಿಸುಬೇಗಮನಲ್ಲಯೆ ನಿಂದು ನೋಡಿ[2]ದಂ[2] ॥ ೨೩

ಒಡವಂದು ಕಳುಪಿ ನಿಲ್ಲೆಂ
ದೆಡೆಯೊಳ್ ಮರವಟ್ಟು ನಿಂದ ಕಾಮಿನಿ ಪತಿಗೇಂ।
ಪಡೆದಳೊ ರಂಭೆಯ ಶಾಪದೊ
ಳೊಡರಿಸಿ [3][ನ]3ರನಾಗಿ ನಿಂದ ಪೆಣ್ಣಾಕೃತಿ[4]ಯಂ[4] ॥ ೨೪

(ಶೃಂಗಾರರತ್ನಾಕರಂ, ೨–೯.)

ಸುರಚಾಪಂ ಕುಡುವುರ್ವು ಕುಂತಳಕುಲಂ ಧಾರಾಧರಂ ರೋದನ
ಸ್ವರಮಂಭೋಧರನಿಸ್ವನಂ ಪೊಳೆವಪಾಂಗಂ ನೀಳ್ದ ವಿದ್ಯುತ್ತು ಭೋ।
ರ್ಗರೆದೋರಂತುಗುವಶ್ರು ವೃಷ್ಟಿ ದಿಟದಿಂ ತಾನಾಗೆ ಕಾರ್ಗಾಲಮಂ
ನಿರುತಂ ಪೋಲ್ತುದು ನಲ್ಲಳಾನ್ಯಮಿನಿಯಂ ಪೋದಪ್ಪೆನೆಂದಿರ್ಪುದುಂ॥ ೨೫

ಪೋದವು ಕೂಡೆ ಕಯ್ಯ ಬಳೆ ಕಣ್ಬನಿ ಸಂಗಡಮಾಗೆ ಚೆಚ್ಚರಂ
ಪೋದುದು ಚಿತ್ತಮಂಗನೆಯ ಸ್ಮೈರಣೆ ಸಂಗಡಮಾಗೆ ಕಾದಲಂ।
ಪೋದಪೆನೆಂದು ಪೋಗುತಿರೆ ತಕ್ಕುದದಾತ್ಮ[5][ನ]5ಖಂ ಸ್ವಕೀಯಕಾ
ರ್ಯೋದಯದಿಂದೆ ಪೋಗಲರೆ ಮುಂದೆ ಸುಹೃತ್ತತಿ ಪೋಗದಿರ್ಕುಮೇ॥ ೨೬

ಚಲದಳಕಾಳಿಯೊಡ್ಡಿದ ಮುಗಿಲ್ ಕುಡಿವುರ್ವಮರೇಂದ್ರಚಾಪಮು
ಜ್ವಳ ದಶನಾಂಶು ಮಿಂಚು ಮಟೆ ಬಾಷ್ಪಜಲಂ ಮೊಟಗಟ್ಟೆಯಾಗೆ ಕೋ।
ಮಳೆ ಮಡೆಗಾಲದಂತೆಱಗಿ ಕಜ್ಜಳ ಕರ್ದಮವಂಘ್ರಿಮೂಲದೊಳ್
ಪೊಳೆವಿನಮೊರ್ವಳಾಱಿಸಿದಳೋಪನ ಕೋಪನಿದಾಘತಾಪಮಂ॥ ೨೭

ಇನಿಯನಗಲ್ದು ಪೋಗುತಿರೆ ನಿಂದೆವೆಯಿಕ್ಕದೆ ನೋಡುತಿರ್ದ ಕಾ
ಮಿನಿಯನು ಪೋದುದಾತನೊಡನಾತನುಮಾಗಳೆ ಪೋಗಿ ಬಂದು ಮೆ।

---

[1] ಯೆಂ (ಕ.ಖಬ) [2] ದಳ್ (ಖ.ಬ). [3] ಮ (ಕ.ಖ.ಬ) [4] ಯೊಳ್ (ಖ.ಬ).
[5] ನು (ಕ.ಖ.ಬ).

ಲ್ಲನೆ ತೆಗೆದಪ್ಪಿಕೊಂಡು ಬಿಸುಸುಯ್ದ [1]ಸುಯಿಲ್ ಬರಲಾರ್ತುದಿಲ್ಲ ವಾ
ತ[1]ನುಗೆ ಬಟಿಕ್ಕದೆಂತು ಬಿದಿ ನಲ್ಲರನೊಯ್ದನ[2]ಗಲ್ಚ[2] ನಿರ್ದಯಂ ॥ ೨೮

ತೊಡಿಗೆಗಳೆಲ್ಲಮಂ ತೊಡುವಳೊಲ್ಲದೆ ಮೇಣ್ ಕಳೆದಿಕ್ಕಿ ಪಾಸಿನೊಳ್
ಪಡುವಳದೇನನಕ್ಕೆ ಮಱುದಂತರಿಗೆಯ್ದುಱುದಂತೆವೊಲ್ ಬೆರಲ್।
ಮಿಡಿವಳೊಡರ್ಚಿ ಸುಯ್ದುಗಿವಳಾಗುಳಿವಳ್ ದನಿಯೆತ್ತಿ ಪಾಡುವಳ್
ನಡೆದು ತೊಡಂಕುವಳ್ ನುಡಿದು ತಪ್ಪುವಳುಣ್ಮಿ ಏಯೋಗ[3]ಯೋಗದಿಂ[3]॥ ೨೯

ಎನಗೆ ಮದಾಳಿ ಪಲ್ಮೊಱೆದು ಕಲ್ತಪು ಗಾವರಿಸಲ್ ಪಿಕಂಗಳೆ
ನ್ನನೆ ಜಡಿದೀಗಳೆಯ್ದೆ ನುಡಿಗಲ್ತಪು ಮನ್ಮಥನೆನ್ನನೆಚ್ಚು ನ।
ಚ್ಚಿನ ಶರವಿದ್ಯೆಯೊಳ್ ಕುತಲನಾದನಿದೇಂ ಪ್ರಿಯ ಮತ್ತಮೆಯ್ದದೇ
ಮುನಿಸೆನುತುಂ ಲತಾಂಗಿ ಸುರಿದಳ್ ಬಸಮಲ್ಲದ ಬಾಷ್ಪವಾರಿಯಂ॥ ೩೦
(ಮಲ್ಲಿನಾಥಪುರಾಣಂ, ೭–೭೮.)

ಅಳಿಗಳೊ ನೀಳ್ದ ಕರ್ಬೊಗೆಯೊ ಕೆಂದಳಿರೋಳಿಯೊ ಸುತ್ತುಗೊಂಡು ತ
ಳ್ತಳುರ್ವುರಿಮಾಲೆಯೋ ಸರಸಪಕ್ವಫಲಂಗಳೊ ವಿಸ್ಫುಲಿಂಗಸಂ ।
ಕುಳಮೊ ಮನಕ್ಕೆ ಸಂದೆಯಮಗುಂದಲೆಯಾಗಿರೆ ನೋಡಿ ನೋಡಿ ಕಂ
ಟಳಪುದಿದೆನ್ನ ಮೈ ಕೆಳದಿ ಪೇಟಿದು ಮಾಮರನೋ ದವಾಗ್ನಿಯೋ॥ ೩೧
(ಕಾವ್ಯಾವಲೋಕನಂ, ೭೦೯.)

ಅದನೇವೇಟ್ಪುದೊ ಮನ್ಮಥಾಗ್ನಿ ಪರಿತಾಪೋದ್ರೇಕಮಂ ಕನ್ನೆ ಕ
ಟ್ಟಿದ ಮುಕ್ತಾವಳಿ ನೀಲಕಂಠಿಕೆವೋಲಂಬಾಗಿರ್ದುದಾಪ್ಯಾಯನ।
ಪ್ರದಮಪ್ಪಣ್ಪಿನ ಚಂದನಂ ಮೃಗಮದಶ್ರೀವೊಲ್ ತಗುಳ್ದಿರ್ದುದು
ಟ್ಟ ದುಕೂಲಂ ಕರಿವಾಡೆಯಂತೆನೆದುಕೊಂಡಿರ್ದತ್ತು ಮೆಯ್ವೆಂ[4]ಕೆ[4]ಯಿಂ॥ ೩೨

ಮದನವಿಕಾರಮೊರ್ಮೊದಲೆ ನಾರ್ಚೆ ಶಕುಂತಳೆಗಿಚ್ಚೆ ಬಚ್ಚೆಯಾ
ದುದು ಬಗೆ ಬಂಜೆಯಾದುದಱುವಾಱಡಿವೋದುದು ಪೊಬ್ಬು ಮಿಬ್ಬುವಾ।
ದುದು ದೆಸೆ ಬೇಗೆಯಾದುದು ಬನಂ ಪಬುವಾದುದು ಗೊಟ್ಟಿ ಬಿಟ್ಟಿಯಾ
ದುದು ಪುರುವಂಶಭೂಷಣನ ಚಿತ್ತಮುಮೀ ತೆಱನಾಗದಿರ್ಕುಮೇ॥ ೩೩

ಪದೆದನುತಾಪದಿಂ ತನು ಬೆಳರ್ತುದು ನಾಣ ಭರಂ ತೆರಳ್ದಿ ಪೊ
ಣ್ಮಿದ [5]ಘನ[5]ಘರ್ಮವಾರಿ ತೊಱೆಯಾದುದು ಚಿತ್ತದ ಕೂಟದಿಂದೆ ಬ।
ತ್ತಿದುದು ಬೆಡಂಗುವೆತ್ತ ಬೆಳವರ್ವಾಯ್ದೆರೆ ಕನ್ನೆಯ ನಲ್ಮೆ ಮಾಗಿಯಾ
ದುದು ಮಚೆಗಾಲಮಾದುದುಱು ಬೇನಗೆಯಾದುದನಂಗನೃಷ್ಟಿಯಿಂ ॥ ೩೪

---

[1] ಡ ಸುಯ್ಯಲರಾರ್ತುದಿಲ್ಲ ತತ್ತ (ಗ.ಘ). [2] ದೇಕೆ (ಗ.ಘ). [3] ವೇಗೆಯಿಂ (ಗ.ಘ). [4] ಕಿ (ಕ.ಬ). [5] ಮದ (ಬ).

ಅಗಿವಳ್ ಬಂದೆಳಮಾಮರಕ್ಕೆ ಸುಗಿವಳ್ ಮಲ್ಲೀಲತಾಂತಕ್ಕೆ ಮೈ
ದೆಗೆವಳ್ ತೀಡುವ ತೆಂಬೆಲರ್ಗೆ ಪಗೆವಳ್ ಹಿಂದೋಳಿರಾಗಕ್ಕೆ ನೀ।
ರ್ವೊಗುವಳ್ ಶೀತಕರಾಂಶುಗಳ್ಗೆ ಕಳಕಂಠೀತಾರನಾದಕ್ಕೆ ನೊಂ
ದುಗುವಳ್ ಕಂಬುನಿದಂದಲಂ ತರುಣಿ ಪುಷ್ಪಾಸ್ತ್ರಾಗ್ನಿಸಂತಾಪದಿಂ॥ ೩೫

ಪೂಸಿಯುಮೊರ್ಮೆಯುಂ ಮಲಯಜದ್ರವಮಂ ಕದಳೀದಳಂಗಳಂ
ಬೀಸಿಯುಮುತ್ಪಲಾಬ್ಜದಳಸಂಚಯಮಂ ಪೆಲವುಂ ಪ್ರಕಾರದಿಂ।
ವಾಸಿಯುಮಿಂದುಕಾಂತದಿನೊಸರ್ತ ಹಿಮೋಜ್ವಲವಾಃಕಣಂಗಳಂ
ನೂಸಿಯುಮಾರ್ತರಿಲ್ಲ ಕಳೆಯಲ್ಕೆ ಲತಾಂಗಿಯನಂಗತಾಪಮಂ॥ ೩೬

ಉರಿದೆದ್ದತ್ತರೆ[1]ಯೊ[1]ತ್ತಿ ಪೊತ್ತಿ ತಳರ್ವಾಸಂತಂತೆ ಮೆಯ್ ನೋಂಕಿ ನೀ
ಕರಿವೋಯಿತ್ತಲರ್ವಾಸು ಕಾಯ್ದ ಕುಡಿವೊಲ್ ಕಾದತ್ತದೇನೆಂಬೆನ।
ಚ್ಚರಿ [2]ನೀರ್ವಾಸು[2] ಮೃಣಾಳನಾಳಕದಳೀಕಾಂಡಾದಿಗಳ್ ತದ್ವನಾಂ
ತರದೊಳ್ ತೀರ್ದುವು ತೀರದೆನ್ನ ದೆಸೆಯಿಂ ಸಂತಾಪಮಾ ಕಾಂತೆಯಾ॥ ೩೭

ಪುಗೆ ಪೊಗೆಯೆದ್ದ ಕೆಂದಳಿರ ಜೊಂಪಮಿವಂತವಳೀಸೆ ಕಾಯ್ದು ನೀ
ರ್ದೆಗೆದ ಸರೋವರಂಗಳವು ಜೋಲ್ದು ಮಲಂಗೆ ಕರಿಂಕುವಿದ್ದ ಬಾ।
ಡಿಗಳವು [3]ಸುಯ್ದು ನಾರ್ದೊಡನೆ[3] ನೀರದ ಲತಾ[4]ಳಯಿವಪ್ಪೆ[4] ಬೆಂದು [5]ಮೈ
ದೆಗೆದ ಕವುಂ[5]ಗಿದೆಂಬ ಕುಱು[6]ಪ್ಕೇಂ ಪಲವಾದುದೊ[6] ನಂದನನಂಗಳೊಳ್॥ ೩೮

(ಚಂದ್ರಪ್ರಭಪುರಾಣಂ, ೫–೧೩೩.)

ಇನಿಯನುಮಾನುಮೊಂದಿ ನೆರೆವಂದಿನ ಮನ್ಮಥನಂದಿನಿಂದುವಂ
ದಿನ ಕುಳಿರ್ಗಾಳಿಯಂದಿನ ಮಧುವ್ರಜಮಂದಿನ ರಾಜಕೀರವ`ಂ।
ದಿನ ಕಳಕಂಠಮಂದಿನ ಸರೋವರಮಂದಿನ ಹಂಸವೃಂದಮಂ
ದಿನ ದಿನವಲ್ಲದಿಂದು ಕಡುಗಾಯ್ದಪವೆಂದು ಲತಾಂಗಿ ಬಾಡಿದಳ್॥ ೩೯

ನಿರವಿಸು ತುಂಬಿ ಬಿನ್ನವಿಸು ಕೋಗಿಲೆ ಸೂಚಿಸು ಗಂಧವಾಹ ಪೇ
ಬರಗಿಳಿ ವಲ್ಲಭಂಗೆ ಮದವಸ್ಥೆಯನೆಂದುಸಿರ್ದಾಗಳಂತೆ ನೀಂ।
ನಿರವಿಸು ತುಂಬಿ ಬಿನ್ನವಿಸು ಕೋಗಿಲೆ ಸೂಚಿಸು ಗಂಧವಾಹ ಪೇ
ಬರಗಿಳಿ ನಲ್ಲನಿರ್ದಿರವನೆಂದೆಳೆಯಳ್ ಬೆನಗೊಳ್ವಳಟ್ಕುಱುಂ॥ ೪೦

ಮದನಶಿಖಾಕಲಾಪಮೊಡಲಂ ಸುಡದೇ ಘನಘರ್ಮ ಬಿಂದುಗಳ್
ಪುದಿಯದಿರಿನ್ನೆಗಂ ಮುಱಿಯದೇ ಕದಪಂ ಕರಪದ್ಮವಾಂಕೆಗೊ।

---

[1] ವೊ (ಕ.ಖ.ಬ). [2] ನಿರ್ದ್ಯಾಸು (ಖ.ಬ). [3] ನಾರ್ದುಸುಯ್ಯಡರೆ (ಅ).
[4] ವಳಿಯಪ್ಪೆ (ಖ.ಬ.) [5] ಕಂದೊಗೆದೆಳಗೌಂ (ಅ). [6] ಪಂ ಪಲವಾಂತುವು (ಅ).

ಳ್ದೊಡೆ ಕೊರಲ್ ದ್ಯಗಂಬು ಕಡಲಾಗದೆ ಕಾಯ್ದ ಕಪೋಲವೆಯ್ದೆ ಪೀ
ರದೊಡಸು ಪೋಗದೇ ಹರಿಯಗಲ್ದೊಡೆ ಚಿತ್ತದಿ ತಲ್ಲತಾಂಗಿಯಾ॥ ೪೧

ಪೆಱಸಾರ್ವಳ್ ಬಿಸುಸುಯ್ವಳಾಗುಳಿಸುವಳ್ ಸಂಸಾರಮಂ ಬೈದು ಬೇ
ಸಱುವಳ್ ಮೂರ್ಛೆಗೆ ಸಲ್ವಳುಮ್ಮಳಿಪಳೋರಂತಿರ್ಪುಗುಂದಿರ್ದ ಬಾ।
ಯ್ದೆಱೆಯಂ ನಾಲಗೆಯಿಂದೆ ನಾಂದು[1]ವಳವಳ್ಗೀ ತಾಪಮೀಯಂದಮೆಂ
ದಱಿಯೆಂ[1] ಸಂತವಿಸಲ್ ಜನಾರ್ದನವಿಯೋಗಾಕ್ರಾಂತೆಯಂ ಕಾಂತೆಯಂ॥ ೪೨

ಚೂತಕುಜಾತಮುಂ ಮುಱುಯೆ ಮೋದುಗೆ ಮಾರುತನಿನ್ನುಮೊರ್ಮೆ ಹೃ
ಜ್ಜಾತನನೀಶ್ವರಂ ಮುನಿದು ನೋಡುಗೆ ಮಂಜೊಳಕೊಳ್ವುದಕ್ಕೆ ಕಂ।
ಜಾತಮನಾವಗಂ ಗುಳಿಗೆಯಿಕ್ಕುಗೆ ರಾಹು ಪಯಃಪಯೋಧಿಸಂ
ಜಾತನನೆಂದು ನೊಂದು ನುಡಿದಳ್ ಪ್ರಿಯಕಾಂತೆ ವಿಯೋಗದುಃಖದಿಂ॥ ೪೩

ಮೊದಲೊಳ್ ಸೊರ್ಕಿದವಂಗೆ ಕಳ್ ವಿಷದಿನಳ್ಕಿರ್ದಂಗ ದುರ್ನಿದ್ರೆ ಕಾ
ಣದವಂಗುರ್ವಿದ ಮರ್ವು ದಿಗ್ಭ್ರಮೆ ಪದಂಗೆಟ್ಟಂಗೆ ಪೈಶಾಚಿಕಂ।
ಗೆ್ದುರಾವೇಶ[2]ಮಧಾರ್ಮಿ[2]ಕಂಗೆ ಕುಮತಂ ತತ್ತ್ವಪ್ರಮೂಢಂಗೆ ಬೀ
ನಿದ ಕಣ್ಮಾಯದ ಕುಂ[3]ಚದಂತಿರೆ[3]ನಗಾದತ್ತಾಗಳೇನೆಂಬುದೋ॥ ೪೪

(ಕಾದಂಬರಿ, ಪೂ. ಭಾ. ೮೦೩.)

ಬೊಟ್ಟಿದ ಪಕ್ಕೆ ನೋಡಿ ಮುಡಿ ಬಿಟ್ಟುದು ಸೋರ್ಮುಡಿ ಪುಷ್ಪಮಾಲೆಯಂ
ಕಟ್ಟುಡೆನೂಲನೇಱಿತೆಗೆ್ಮೇಲುದನೋಸರಿಸೆಂದು ಮೇಲೆ ಮೆ।
ಯ್ವಟ್ಟಳನಾನೆ ಸಾವಗಿಸುತುಂ ಬನದಿಂ ಮನೆಗೊಯ್ವನಂತವಂ
ತೊಟ್ಟನೆ ಬೆಳ್ಪ ಪತ್ತಿದೊಡೆ ತೆತ್ತಿಗರಾದವರೊಯ್ವ ಮಾಟ್ಕಿಯಿಂ॥ (?) * ೪೫

ಉದಯದ ನೇಸಱುಂ ಕಿಡದ ಕಟ್ಟಲೆ ಕಿಟ್ಟಲಗಿಂ ಕಱುತ್ತು ಕು
ತ್ತದ ಕಡುವೇನೆಯಂತಕನ ವಾರಿಗೆ ಬಾರದ ಸಾವು ಕಳ್ಳನು।
ಣ್ಣದ ಕಡುಸೊರ್ಕು ಕಿಚ್ಚನುರಿ ಪತ್ತದೆ ಪೊತ್ತುವ ಬೇಗೆ ಪಾವು ತಿ
ನ್ನದ ಕಡುನಂಜು ತನ್ವಿಯರೊಳಾದಳಿಪಿಂ ಪೆಱತುಂಟೆ ಲೋಕದೊಳ್॥ ೪೬

ನಾಡೆ ಬಟಲ್ದಟಲ್ದು ನಿಲಲಾಱದೆ [4]ಸೆಜ್ಜೆ[4]ಗೆವಂದು ಮೆಯ್ಯನೀ
ಡಾಡಿ ನಿಜೋತ್ಕರ್ಷೀಯ ವಸನಾಂಚಲದಿಂ ಮುಸುಕಿಟ್ಟು ಚಿಂತೆಯೊಳ್।

---

[1] ಸುಗಿವಳ್ ಸಂತಾಪದೊಂದಂದವೆಂತರಿವೆಂ (ಗ.ಘ). [2] ದವಾರ್ಧಿ (ಕ.ಖ.ಬ). [3] ಎಂತಿದೆ (ಕ.ಖ.ಬ). * ಈ ಪದ್ಯ (ಕ) ಪ್ರತಿಯಲ್ಲಿಲ್ಲ. [4] ಸಂಜೆ (ಖ).

ಮೂಡಿ ಮುಟುಂಗಿ ತನ್ನ ಮನದನ್ನರೊಳಂ ಮೊದಲಾಗಿ [1]ತಾನೆ[1] ಮಾ
ತಾಡದೆ ಜಾನಿಸುತ್ತಮಿರೆ ಪಿಂಗಿದುದಂದಿನದೊಂದಹರ್ನಿಶಂ॥ ೪೭

(ಕಾದಂಬರಿ, ಉ. ಭಾ. ೩೬೬.)

ನಡುಗುತ್ತಂ ಮೇಲು[2]ದಂ ಪೆರ್ಮೊಲೆಗೆ[2] ತೆಗೆ[3]ವುತುಂ ಹಾರಮಂ[3] ನಾರ್ಚು
ತುಂ ಸೋ
ರ್ಮುಡಿಯಂ ನಸ್ಪೇದಹಸ್ತಾಬ್ಜದಿನೆಬವುತುಮಾತ್ಮ ಪ್ರತಿಚ್ಛಾಯೆಯಂ ಕೈ।
ಗುಡು ನೀನೆಂಬಂದದಿಂ ನಿರ್ಮಲತರಮಣಿಬದ್ಧಾವನೀಭಾಗಮಂ ತ
ನ್ನಿಡಗಯ್ಯಿಂ ಮೆಲ್ಲನೊತ್ತುತ್ತೆಸೆವಲರ್ವಸೆಯಿಂ ಕಾಂತೆ[4]ಯೆಂತಾನುಮೆಟ್ಟಿಳ್[4] ॥೪೮

(ಕಾದಂಬರಿ, ಉ. ಭಾ. ೨೩೪.)

ಪದೆದೆನ್ನಂ ಕಾಮನಿತ್ತಂ ತನಗೆನಲದು ಪೊರ್ದಲ್ ನೆವಂ ಕೂರ್ಪೆನಾನೆಂ
ಬುದು ವೇಶ್ಯಾಲಾಪವಾಂ ತನ್ನಯ ವಿರಹದೆ ನತ್ತಪ್ಪೆನೆಂಬಂದು ದೃಷ್ಟ।
ಕ್ಕದನತ್ಯಂ ಬರ್ಪೆನಾನೆಂಬುದು ಚಪಲತೆ ತಾಂ ಬರ್ಪುದೆಂದಂದು ಸೌಭಾ
ಗ್ಯದ ಗರ್ವಂ ಮೇಲೆ ಬಿಟ್ಟಾನೆಳಸಿದಪೆನೆನಲ್ ಬಂಧಕೀಧಾಷ್ಟ್ರ್ಯಮಲ್ಲೀ॥ ೪೯

(ಕಾದಂಬರಿ, ಉ. ಭಾ. ೩೧೬.)

ನೋಡಿದೊಡೆವೆ ನೀಗುಂ ಮಾ
ತಾಡಿದ ಕೆಳದಿಯರ ಬಾಯೊಳೊಗೆಗುಂ ಪೊಗೆ ಮೆಯ್।
ತೀಡಿದ ತಂಬೆಲರುರಿಗುಂ
ನಾಡೊಳಗಿವು ಕೌಮುದೀಲತಾಂಗಿಯ ವಿರಹಂ॥ ೫೦

ಆಲರ್ದಲರ್ವಾಸುಗಳೊಳ್ ಪರಿ
ಮಳಕ್ಕೆ ಪರಿತಂದು ಮುಸುಱುವಳಿಕುಳದಿಂದಾ।
ಕುಲತೆ ಪಿರಿದಾಗೆ ಮದನಾ
ನಳನಳುರಲ್ ಕಾಂತೆ ಪೊತ್ತಿ ಪೊಗೆವಂತಿರ್ದಳ್॥ ೫೧

(ಕಾದಂಬರಿ, ಉ. ಭಾ. ೩೩೮.)

ಮೂಡಿದೊಡಂ ಸುಧಾಕಿರಣನೊಳ್ಳಲರ್ಗಂಪನೆ ತಂದು ತೆಂಬೆಲರ್
ತೀಡಿದೊಡಂ ರನಂ ತೆರಳೆ ಗಾಯಕಿಯರ್ ಸಮಸಂದು ಬೇಟಮಂ।
ಪಾಡಿದೊಡಂ ವಿಚಿತ್ರಕಥಕರ್ ಸಮಸಂದಿರೆ ಹೂಣ್ ಹೊಕ್ಕು ಮಾ
ತಾಡಿದೊಡಂ ಭವದ್ವಿರಹವಿಹ್ವಲೆ ಕೌಮುದಿ ನತ್ತು ಪುಟ್ಟುವಳ್॥ ೫೨

---

[1] ಕನ್ನೆ (ಅ). [2] ದೆಂದೊರ್ಮೊದಲೆ (ಅ). [3] ದುಹಾರಾಂಶುವಂ (ಅ).
[4] ತನುಂತಾನುಮಿರ್ದಳ್ (ಖ.ಬ). * ಈ ಪದ್ಯವು (ಕ) ಪ್ರತಿಯಲ್ಲಿಲ್ಲ.

ಮೃಗಶಾಬಾಕ್ಷಿಗೆ ಮಾಧವಂ ಮಧುಕರಂ ಮಂದಾನಿಲಂ ಮಾವು ಮ
ಲ್ಲಿಗೆ ಮಾದ್ಯತ್ಪಿಕನಿಸ್ವನಂ ಮನಸಿಜಂ ಮುಗ್ಧೇಂದುವೆಂಬೆಲ್ಲ[1]ಮು।
ಬ್ಬಿಗ[1]ಮಂ ಮಾಡಿದುದೊಂದೆ ಮೇಣಿರಡೆ ಮೇಣ್ ಮೇಣ್ಮೂಱು ನೋಡೊಂದು ಹು
ಲ್ಲಿಗೆ [2]ನೂರ್ವರ್ ನೆರೆದಂಬು[2]ತೊಟ್ಟ ತೆಱನಾಯ್ತಾ ನಿನ್ನದೇನೆಂದಪೆಂ॥* ೫೩

ನವಕುಂಭಂ ಪೊಲೆ ಕಾಷ್ಮಸಂತತಿ ಮೃಣಾಳಂ ಚಂದನಂ ಮೆಲ್ಗೆಸಱ
ನವಸಂದಾವಿಗೆಗಿಚ್ಚು ಮೆಲ್ಲೆರ್ದೆಯ ಸೂಡಂಗೋದ್ಭವಂ ಕುಂಬಱಂ।
ಪವನಂ ಸುಯ್ ತನು ದಾಹಭೂಮಿಯೆನೆ ಹೃತ್ಸಂತಾಪಮಂ ಪೆರ್ಚಿಸ
ಲ್ಕೆ ವಲಂ ಕಾರಣಮಾದುದಂಗನೆಗೆ ನೀಹಾರಕ್ರಿಯಾಸಂಗಮಂ॥ ೫೪

ಮಡುವಂ ಪೊಕ್ಕು ಮದಾಂಬುವಿಂದೆ ಸಲಿಲಂ ಚುಱ್ರೆಂಬುದುಂ ಭೋಂಕನಾ
ಮಡುವಿಂದಂ ಪೊಱಮಟ್ಟು ಪೋಪ ಕಡೆಯೊಳ್ ತನ್ನಂಗಸಂತಾಪಮಾ।
ಗಡೆ ತಾಪಂ ಕಮಲಾಕರಕ್ಕೆ ಕುಡೆ ವಾರಿಕ್ರೀಡೆಯಂ ಮಾಬ್ಪಳೆಂ
ದೊಡೆ ಬಾರಿಪ್ಪವರಾರ್ ಲತಾಂಗಿಯ ವಿಯೋಗಾವಸ್ಥೆಯುದ್ರೇಕಮಂ॥ ೫೫

ಕಳವಳಮಲ್ಲದಿಲ್ಲ ನುಡಿ ಕಣ್ಬರಿ ಕಣ್ಬನಿಯಲ್ಲದಿಲ್ಲ ಸು
ಯ್ಗೞ ಬಿಸುಪಲ್ಲದಿಲ್ಲುಸಿರ್ಗಳಂಗಭವಜ್ವರಮಲ್ಲದಿಲ್ಲ ಮೆಯ್[1]।
ತಳವೆಳಗಲ್ಲದಿಲ್ಲಱುವು ಮೆಲ್ಲೆರ್ದೆ ತಲ್ಲಣಮಲ್ಲದಿಲ್ಲ ಕೋ
ಮಳೆಗಟಿವಲ್ಲದಿಲ್ಲವಯವಂಗಳಿದಂ ಕಟಿವಂದಮಾವುದೋ॥ ೫೬

(ಅನಂತನಾಥಪುರಾಣಂ, ೮–೩೯.)

ಎನಗೇಕಾದುದು ಬಿಂದ ರೂಪೆಸೆವ ರೂಪಿಂಗಿಂತು ಪಾಟಾದ ಜ
ವ್ವನಮೀ ಜವ್ವನದಲ್ಲ ಕೂರದನ ಬೇಟಂ ಬೇಟದೊಳ್ [3]ಮಾಯ್ದ[3] ಚ್ಯೆ।
ತ್ರನ ಕಾಟಂ ಕಟಿವಂದಮಾವುದೆನಗಿ[4]ನ್ನೇನೆಂದೊಡೇನೆಂಬೆನಂ[4]
ಗನೆ ನೀಂ ಗ್[5]ರ್ವಿ[5]ಸಿದಪ್ಪೆ[6]ಯೇಂ ಬೆಸಗೆದಂದಾ[6] ನಲ್ಲನೇನೊಲ್ಲನೇ॥ ೫೭

(ಅನಂತನಾಥಪುರಾಣಂ, ೮–೪೧.)

ಕರದಿಂ ಮೆಯ್ಯೊಳ್ ಪನಿತ
ಕ್ಕರದಂತಿರೆ ಸಾಂಜನಾಂಬುಕಣತತಿ ಕಾಮಂ।

---

[1] ಮಚ್ಚಿಗ(ಕ.ಖ.ಬ.). [2] ನೋಡಲ್ಕೆರಡಂಬು (ಕ.ಖ.ಬ.). * ಇಲ್ಲಿಗೆ (ಖ). ಪ್ರತಿಯು ಮುಗಿದುಹೋಗಿದೆ. [3] ಕಾಯ್ದು (ಅ). [4] ನ್ನೆಂತೊಡಾನೆಂದನಂ (ಅ). [5] ರ್ಪಿ (ಕ). [6] ಯೆಂದು ಬಗೆದೋಱಂ (ಬ).

ಬರೆದ ನೃಪನುತನ [1]ರೂಪಿನ[1]
ನರಶಾಸನದಂತೆ ವಿರಹವಿಹ್ವಲೆ[2]ಯಿರ್ಪಳ್[2]॥ ೫೮
(ಚಂದ್ರಪ್ರಭಪುರಾಣಂ, ೫–೧೨೬.)

ಎನ[3]ಗನ್ನಂ[3] ಪ್ರತಿಪನ್ನ[4]ಮೀ ನರನಗೇಯಂ[4] ತಾನುಪಾದೇಯಮೀ
ವನಿತಾಕ್ರೀಡಿತಮೆಂತುಮೀಡಿತಮೆ ಹೇಟೀ ಜೀವನಂ ಮತ್ತೆ ಪಾ।
ವನಮೀ ಬಂಧುಜನೋಪಜಾಪ್ಯಮದು ಕರ್ಣ[5]ಶ್ರಾವ್ಯ[5]ಮೀ [6]ವಲ್ಲಭಂ
ಮುನಿದಿರ್ದಿ[6] ವಿರಹಪ್ರಘಟ್ಟಕದೊಳೀ ನೈಪಥ್ಯ[7]ಮೀಂ[7] ಪಥ್ಯಮೀ॥ ೫೯
(ಚಂದ್ರಪ್ರಭಪುರಾಣಂ, ೮–೮೮.)

ಅತಿವಿರಹದೊಳೀ ಲಲನೆಗೆ
ಮತಿ ದುರ್ಮತಿ ವೀಣೆ ಸಾಣೆ ಸೋಮಂ ಭೀಮಂ।
ಲತೆಯಸಿಲತೆ ಸಂಪಗೆ ಪಗೆ
ನುತ ಭೃಂಗಂ ಭಂಗಮನ್ಯಪುಷ್ಪಮರಿಷ್ಟಂ॥ ೬೦

ಘನಬಾಷ್ಪಾಂಬುಕಣಾರ್ದ್ರಯು[8]ಕ್ತೆ[8] ನಳಿನೀಪತ್ರಾಂಶುಕಾಶ್ಲೇಷೆ ಮು
ಕ್ತ ನಿಜಾಳೀನಹಭಾಷಣೋತ್ತರೆ ಕಪೋಲನ್ಯಸ್ತಹಸ್ತಪ್ರವ।
ರ್ತನೆ ಚತ್ರಾರ್ಪಿತಕಾಂತೆಯಂತೆ ತಳೆದಳ್ ಸ್ವಾತೀವಚಂತಾವಿಚೇ
ತನೆ[9]ಯಂ[9] ನಿನ್ನ ವಿಯೋಗ ದುಃಖ[10]ದೊಳ[10]ವಳ್ ನಿಷ್ಪಂದ[11]ಕಾರಿ[11]ತ್ವಮಂ॥ ೬೧
(ಚಂದ್ರಪ್ರಭಪುರಾಣಂ, ೮–೮೫.)

ಚತ್ತಂಬೊಕ್ಕರ್ದೆಯೆಂತ್ಯೆ ಹರಿ ಕುಳಿರ್ವ ಕರಸ್ಪರ್ಶದಿಂದಿಂದು ತಾಪಂ
ಬೆತ್ತಂ ಮೈನೋಂಕಿ ಮಂದಾನಿಳನುರಿದನದರ್ಕಾಳಿಯರ್ ದೂರದಿಂ ಸೂ।
ನುತ್ತಿರ್ಪರ್ ತೋಯಮಂ ಜೀರ್ಕೊಬವಿಯೊಳೆ ಮನೋಜಾತ[12]ನೆದ್ದೆದ್ದಸಲ್ಕಾ
ರ್ದೆ[12]ತ್ತುಂಗೋರಲಕ್ಕುವಂ ಬಣ್ಣಿಸುವರಳವೆ ಸತ್ರಾಜಿತೀದೇಹದಾಹಂ॥ ೬೨
(ಜಗನ್ನಾಥವಿಜಯಂ, ೧೧–೩೮.)

ಅನಲಸಹಾಯಮಪ್ಪ ಯಮುದಿಬ್ಮುಖದಿಂ ಪರಿತರ್ಪ ತೆಂಬೆಲರ್
ಮನಸಿಜವಹ್ನಿಯಂ ಬಿಡದೆ ಪೆರ್ಚಿಪುದುಂ ಕಡುನೋವನೀವುದುಂ।
ವನರುಹವಕ್ತ್ರೆ ವಿನ್ಮಯಮೆ ತಾಪಹರಂ ಜನಸೌಖ್ಯಕಾರಿ ನಂ
ದನ[13]ಮೆನಗಂ[13]ಗತಾಪಮುಮನೋವದೆ ನೋವುಮನೀವುದದ್ಭುತಂ॥ ೬೩
(ಜಗನ್ನಾಥವಿಜಯಂ, ೧೧–೪೨.)

---

[1] ಸೊಬಗಿನ (ಅ). [2] ಯಾದಳ್ (ಖ.ಬ). [3] ಗಂತಾಂ (ಅ). [4] ಮೆಂಬ ಬಗೆಯುಂ (ಅ). [5] ಪ್ರಾಪ್ಯ (ಅ). [6] ನಲ್ಲನೊಲ್ಲನೆಪ್ಪೊದೀ (ಅ). [7] ಮುಂ (ಅ). [8] ಕ್ತ (ಅ). [9] ಯೀ (ಬ). [10] ದಿನ (ಅ). [11] ತಾರ (ಬ). [12] ನೆನುದ್ದೀಪಿ ಕಾರ್ಧಂ (ಬ). [13] ವನಮಂ (ಅ).

ಸರಸಿಜನಾಭನಿಂದುಟಿದ ವೇದನೆಯಿಂದಮಶೋಕಪಲ್ಲವಾ
ಧರೆ ನವಚೂತಪಲ್ಲವಕರಾಂಬುಜೆ ಕುಂದಲತಾಂತದಂತೆ ವಿ।
ಸ್ಫುರಿತ ತಮಾಲನೀಲಕಬರೀಭರೆ ಪಾಟಲಗಂಧಿ ಕೇತಕೀ
ಕರರುಹೆ ಚೇಪ್ಪೆಗೆಟ್ಟು ಮರವಟ್ಟಳೆನಿಪ್ಪುದದಾವ ವಿಸ್ಮಯಂ॥ ೬೪

ಜಲರುಹನೇತ್ರನಲ್ಲಿಗೆ ಚಕೋರವಿಲೋಚನೆ ಚಂಚರೀಕಕುಂ
ತಳಕುಳೆ ಚಕ್ರವಾಕಮಿಥುನಸ್ತನಿ ಚಾರುಮರಾಳಯಾನೆ ಚಾ।
ಪಳಪಿಕನಾದೆ ಕೀರಮ್ಮದುಭಾಷಿಣಿ ನಿಚ್ಚಲೆಱಂಕೆಯಿಟ್ಟು ಪಾ
ಱಲೆ ಬಗೆಯ[1]ಲ್ಲ ನೀಂ ಪ್ರಕೃತಿಗೀ[1]ಕ್ಷಿಸೆ ಸಾಮ್ಯಮಿದಲ್ತೆ ಬಾಲಕೀ॥ ೬೫

ಲಲನೆ ಹಿವೋಲ್ಲನದ್ಭವನದೊಳ್ ವನದೊಳ್ ವನದೊಳ್ ಪೊರಳ್ದು ನಿ
ಚ್ಚಲುಮಿಸೆ ಕಂತು ನಿಪ್ಪಸರದಿಂ ಸರದಿಂ ಸರದಿಂಪುದೋಱೆ ಕೋ।
ಗಿಲೆ ವಿಧು ಬೀಱೆ ಭೀತಿಕರಮಂ ಕರಮಂ ಕರಮಂ ಕಪೋಲದೊಳ್
ನಿಲಿಸುವ[2]ಳೆಯ್ದೆ[2] ನೋವ[3]ಳ[1]ಧಿಪಾಂಗದಪಾಂಗದ ಪಾಂಗದಗ್ಗಳಂ॥ ೬೬

(ಜಗನ್ನಾಥವಿಜಯಂ, ೧೧-೧೯.)

ಸುದತೀ ಮತ್ಪತಿ ಕಣ್ಣೊಳಂ ಮನದೊಳಂ ತಾನಿರ್ಪನಿರ್ದುಂ ಮುಟುಂ
ಗಿದನಿಲ್ಲಶ್ರುಜಲಂಗಳೊಳ್ ಪುದಿದ ಹೃತ್ಕಾಮಾಗ್ನಿಯಿಂ ಬೆಂದನಿ।
ಲ್ಲದು ಚತ್ರಂ ಬಗೆವಾಗಳೆಂಓನವನೋ ಮಾಯಾವಿ ಪೇೞೆಂದು ಪು
ಟ್ಟಿದನೆಂದೋದಿನೆಂದು ಕಲ್ತನೊ ಜಲಾಗ್ನಿಸ್ತಂಭ[4]ವಿದ್ಯಂ[4]ಗಳಂ॥ ೬೭

ಅನಿಮಿಷನಪ್ಪೆಂ ಕಂಡೊಡೆ
ನೆನೆದಂದಸ್ಪಷ್ಟನಪ್ಪೆನೊಡನಿರೆ ಕಮಳಾ।
ನನೆ ಕಾಮನಪ್ಪೆನದಱಿಂ
ದೆನಗಾದುದು ನಿನ್ನ ದೂಸಱಿಂ ದೇವತ್ವಂ॥ ೬೮

ಹೃದಯದೊಳಿರ್ದ ವಲ್ಲಭನನಾ ಕ್ಷತಭೀತಿಯಿನೀಕ್ಷಿಪಂತೆ ಮು
ಚ್ಚಿದವಲರ್ಗಣ್ಪೊಣರ್ ತಡವಿ ನೋಡುವವೋಲ್ ಕುಚಮಧ್ಯದಲ್ಲಗಾ।
ದುದು ಕರಪಲ್ಲವಂ ಸರಮನಾಲಿಸುವಂತೆ ಮೊಗಂ ಮಲಂಗೆಯಂ
ತಪೊಳೆರ್ದೆ ಶೂನ್ಯಮಾಗಱಿಸುವಂತಸು ಪೋಯ್ತು ಸಿತಾಬ್ಜನೇತ್ರೆಯಾ॥* ೬೯

(ಅನಂತನಾಥಪುರಾಣಂ, ೧೨-೪.)

---

[1] ಯಪ್ರಕೃತಿನೀ (ಕ). [2] ಳೀಯೆ (ಬ). [3] ನ (ಬ). [4] ಮಂತ್ರಂ (ಬ).

* ಈ ಪದ್ಯ (ಕ) ಪ್ರತಿಯಲ್ಲಿಲ್ಲ.

ಇನಿಯನಿರೆ [1]ನೋಡ[1] ಮತ್ತೊ
ಬ್ಬನ ಕಣ್ಗಂ [2]ಮನಕ[2]ಪೊಪ್ಪಿದಪ್ಪುದು ಸುಡಲೀ।
ತನುವನಿದನೆಂದು ಜೀವಂ
ಮುನಿದಂತಿರೆ ಬಿಟ್ಟುಪೋ[3]ಯ್ತು ನಿಬಿಡಸ್ತನೆಯಾ[3]॥ ೭೦

(ಅನಂತನಾಥಪುರಾಣಂ, ೧೨–೬.)

ವರ ಸಂಭೋಗದವಸ್ಥಾಂ
ತರಭೇದಮನುಚಿತವಚನ ರಚನೆಗಳಿಂದಂ।
ವಿರಚಿಸಿದನುದಾಹರಣೆಯ
ಪರಿಕರಮಂ ಸುಕರಸುಕವಿಮುಖಮಣಿಮುಕುರಂ॥ ೭೧*

ಓರಂತೆ ಮೆಚ್ಚಿದಂ ಕೃತಿ
ಸಾರೋದಿತವಿಪ್ರಲಂಭವರ್ಣನಕಂ ಕಾಂ।
ತಾರತಿರಹಸ್ಯಚತುರಂ
ಧಾರುಣಿಯೊಳ್ ವೀರಸೋಯಿದೇವ ನೃಪಾಲಂ॥ ೭೨

ಇದು ಸರಸ್ವತೀ ಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮು
ಷ್ಟಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವ ಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ಸೂಕ್ತಿ
ಸುಧಾರ್ಣವದೊಳ್

ವಿಪ್ರಲಂಭವರ್ಣನಂ ಪಂಚದಶಾಶ್ವಾಸಂ ಸಂಪೂರ್ಣಂ.

---

[1] ನಾಡೆ (ಬ). [2] ಬಗೆಗ (ಅ). [3] ಯಿತಪು ಶಶಿಮುಖಿಯ (ಅ).

* ಈ ಪದ್ಯ (ಕ) ಪ್ರತಿಯಲ್ಲಿಲ್ಲ.

ಮಂತ್ರ್ಯವರ್ಣನಂ

ಶೋಕದಾಲಾತ್ಯಂತದೂ[1]ರಂ[1] ಜನಕುಲನಯನಾಗೋಚರಂ ಸ್ತಂಭಜಾಲಾ
[2]ನಿಕ[2]ಶೂನ್ಯಂ ಮಂತ್ರಗೇಹಂ ನೃಪವರನುಭಯಾಯತ್ತಸಾಳೋಚಕರ್ ಮಂ।
ತ್ರಕಳಾದ್ಯರ್ ಬುದ್ಧಿ[3]ವೃದ್ಧರ್[3] ಸಚಿವರರಿಗಳನ್ವೇ[4]ಷ[4]ದಿಂ ಕಾಲದಿಂ ಸೈ
ನಿಕದಿಂದಂ [5]ತಾ[5]ಳ್ದು ಪೆರ್ಚಂ ತಿಳಿದು ಗಮಿಸುವರ್ ಕಾವ್ಯಮಂತ್ರಸ್ಥಲಾಂಗಂ॥ ೧

ವಿಗತಾಂತರ್ವಲ[6][ಯಂ][6] [7]ವ್ಯಪೇತಪೃಥುಕಂ[7] ನಿಸ್ತಂಭರಂಗಂ ನಿರ
ಸ್ತಗವಾಕ್ಷಂ ವ್ಯಪನಂಭೃತಪ್ರತಿರವಂ ನಿ[8]ಷ್ಕೀ[8]ರಮಾ ಮಂತ್ರಶಾ।
ಲೆಗೆ ಬಾಹಾಜಯನಾಟ್ಯಶಾಲೆ[9]ಗಧಿರಾಜ್ಯ[9]ಶ್ರೀವಧೂಸೂಚ್ಯಶಾ
ಲೆಗೆ ಬಂದಂ ಜನಕಾನುಜರ್ವೆರಸು [10]ಸಸ್ಮಿತ್ರ[10]ಪ್ರಭಂ ಸುಪ್ರಭಂ॥ ೨
(ಅನಂತನಾಥಪುರಾಣಂ, ೧೩-೫೪.)

ಆಗಳುವೊಂದು[11]ಮಂ ಮನದೆ[11] ಚಿಂತಿಸಿ ಚಿಂತೆಗೆ ಸಂದು ತಾಂ ನಿರು
ದ್ಯೋಗದೊಳೊಂದಿ ಸಾಧುತನಮಂತಣವಿರ್ದರೆ ಭೂಭುಜರ್ ಯಶೋ।
ಭಾಗಿಯೆನಲ್ ಸಮಸ್ತಧರಣೀಭರಕಾರ್ಯಸಮಸ್ತಮಂ ಮನೋ
ರಾಗದೆ ಚಿಂತೆಗೆಯ್ದು ಸಮಕಟ್ಟುವುದಲ್ತೆ ಬಹುಪ್ರಕಾರದಿಂ॥ ೩

ವಿನಯಂಗೆಯ್ವುದು ನಂಟುಗೊಳ್ವುದಹಿತಕ್ಷ್ಮಾಪಾಲರೊಳ್ ಸಾಮಮ
ನ್ಯನರೇಂದ್ರರ್ ಪ್ರಿಯದಿಂ ಕಟಲ್ಟುವುದು ಭೇದಂ ಸ್ವಲ್ಪಮೌಚಿತ್ಯಮಂ।
ಮುನಿವಂಗೀವುದು ಸಂಪ್ರದಾನಮಿವಱಿಂದು[12]ತ್ತೈ[12]ಧಮಾಗಿರ್ಪಿನಂ
ಮೊನೆಯೊಳ್ ಕೀಲ್ವುದು ದಂಡಮೆಂದಱಿವುದಿಂತೀ ನಾಲ್ಕುಮಂ ಭೂಭುಜರ್॥ ೪

ಧರೆಯೊಳ್ ಪುಟ್ಟಿದ ಕಾರ್ಯಮಂ ಮಿಗೆ ಸುಸೂತ್ರಂ ಮಾ[13]ಡ್ಪೊಡೆಂ[13]ತುಂ ಪ್ರಧಾ
ನರೊಳಾಳೋಚಿಸಿ ಮಾಟ್ಟು ದೊರ್ವನೆ ಚಲಂಗೊಂಡೊಂದುವಂ ಮಾಡಬೇ।
ಡರನಂ [14]ನೆಟ್ಟ[14]ನೆ ಮಾಡುವಾಗಳನಹಾಯೋದ್ಯೋಗದಿಂದೇಕಚ
ಕ್ರರಥಾಕಾರಮನೆಯ್ದೆ ಪೋ[15]ಲ್ವು[15]ದದು ನಿರ್ವಾಹಕ್ಕೆ ಪೇಪ್ ನಲ್ಗುಮೇ॥ ೫

---

[1] ತಂ (ಕ). [2] ನ್ವಿತ (ಕ). [3] ವಧ್ವಂ (ಕ). [4] ಷಿ (ಕ). [5] ಅ (ಕ).
[6] ಜಂ (ಕ.ಬ). [7] ಮೌತ್ಪೃತಕಂ (ಬ). [8] ಷ್ಕೀ (ಕ). [9] ಗೆನಸುಂತಾಂ (ಕ.ಬ).
[10] ವಿಕ್ರಾಂತ (ಅ). [11] ಕಾರ್ಯಮಂ (ಕ). [12] ತ್ಸಾ (ಕ), ತ್ಸಾ (ಬ)
[13] ಳ್ಪಿದೆಂ (ಬ). [14] ಗೊಯ್ಯ (ಕ). [15] ಲ್ತು (ಕ).

ನದಮಳ ರಾಜ್ಯಭಾರಧರನಪ್ಪದು ಮಂಗಳಕಾರ್ಯಯುಕ್ತನ
ಪ್ಪದು ಜಯಲೋಲನಪ್ಪದು ಕುಲೋನ್ನತನಪ್ಪದು ವಶ್ಯತಂತ್ರನ।
ಪ್ಪದು ಸುಚರಿತ್ರನಪ್ಪದು ಜಿತೇಂದ್ರಿಯನಪ್ಪದು ಶುದ್ಧಚಿತ್ತನ
ಪ್ಪದು ಪರಿವಾರಮಂ ಪೊರೆವನಪ್ಪದು ತಪ್ಪದೆ ಭೂಪನಪ್ಪವಂ॥ ೬

ಧರೆಯಂ ರಕ್ಷಿಸಿ ದುಷ್ಟರಂ ಜಡಿದು ಸದ್ಧರ್ಮಂಗಳಂ ಕಾದು ತ
ಸ್ಕರರಂ [1]ಬಂಧಿ[1]ಸಿ ಕಷ್ಟರಂ ಕೆಡಿಸಿ ದಂಡಂಗೊಂಡು ಮಿಂಡರ್ಕಳಂ।
ಭರದಿಂ [2]ಬಗ್ಗಿ[2]ಸಿ ಶಿಷ್ಟರಿಷ್ಟ[3]ಪದ[3]ಮಂ ಸಂತೋಷದಿಂ [4]ಕೊಟ್ಟು[4] ಧೂ
ರ್ತರ ಬೇರಂ ನೆಱಿ ಕಿಬ್ತು ಪಾಲಿ[5]ಸುವುದುರ್ವಿ[5]ಚಕ್ರಮಂ ಕ್ಷತ್ರಿಯರ್॥ ೭
(ಧರ್ಮಾಮೃತಂ, ೨–೮೪.)

ಆಱಿಡಿ ಬಂದಿ ಠಕ್ಕು ಕಳವೊಟ್ಟಜೆ ತಾಂ [6]ಪ[6]ರಿ ಮುತ್ತು ಡಾವರಂ
ನೂಱಿ ನಿರೋಧ ನಿಗ್ರಹಮುಪದ್ರವಮಾ[7]ಯಿಲಮೊ[7]ತ್ತು ಜೊತ್ತು ಮೇ।
ಲೇಱುಳಗೇಱು ದೂಱು ಮಱಿವೊಳ್ನುಡಿ ವಂಚನೆಯೆಂಬುಪಾಯಮಂ
ಪಾಱಿಸಿ ಧರ್ಮಮಂ ನಿಱಿಸಿ ಪಾಲಿಸವೇಱ್ಪುದು ದೇಶಮಂ ನೃಪಂ॥ ೮

ಬಡವರ ಪುಯ್ಯಲಂ ಪ್ರಜೆಯ ಬಿನ್ನಹಮಂ ವಿವಿಧಪ್ರಸಂಗದೊಳ್
ತೊಡರ್ದಿರೆ ಪೂರ್ಣ್ಕೆಯಾ ಚ[8]ರ್ರ[8]ರ ಮಾತುಗಳಂ ಸುಕವೀಂದ್ರರಾ[9]ದ[9]ಮು।
ಗ್ಗಡಿಸುವ ಪುಣ್ಯಪಾಠಕರ ಗಾಣರ ವಿಪ್ರರ ವಾಗ್ವಿಳಾಸಮಂ
ನಡೆವ ಮಹಾನಿಯೋಗಿಗಳ ಲೆಕ್ಕಮನಾ[10][ಲ][10]ಸದಂ ನೃಪೇಂದ್ರನೇ॥ ೯

ದೋಷಿಗೆ ತಕ್ಕ ದಂಡನೆಯ ಮಾಟ್ಟುದು ಮಾಡದುಪೇಕ್ಷಿಸಿದ್ದೊಡಾ
ದೋಷಿ ಬಟಿಕ್ಕೆ ಧಾರಿಣಿಯೊಳಂಕುಶಮಿಲ್ಲದ ಹಸ್ತಿಯಂತೆ ನಿ।
ರ್ದೋಷಿಗಳಂ ಮದಾಂಧಗುಣದಿಂ ತುಟಿಗುಂ ತುಟಿದಂದು ದೇಶಮುಂ
ದೋಷದೊಳೊಂದಿಪೋಕುಮದಱಿಂದಮೆ ಪೆರ್ಚಿದಗ್ನಿಕ್ಕೆಯಗ್ನಿಯಂ॥ ೧೦

ಜಡಿವೊಡೆ ಗುಪ್ತದೊಳ್ ಜಡಿವುದಾಗ್ರಹದಿಂ ಸಭೆಯೊಳ್ ಮಹೀಭುಜಂ
ಜಡಿಯಲೆವೇಡ ಮನ್ನಣೆಯ ಮಾನಿಸರಂ ಸಿಡಿ[11]ದೇಳ್ದೆ ವೆತ್ತು[11] ತಾಂ।
ಕಿಡೆ ಜಡಿದಾಗಳಾತನವನೀತಳದೊಳ್ ಬೆಲೆಗೆ[12]ಯ್ಯದಿ[12]ರ್ಕುಮಿ
ರ್ದೊಡೆ ನಿಜಕಾರ್ಯಮಂತರಿಸುಗುಂ ಶುಭಮಂತರಿಸಲ್ಕೆ ಬರ್ಕುಮೇ॥ ೧೧

---

[1] ಬಾರಿ (ಅ). [2] ಬಂಧಿ (ಅ). [3] ಫಲ (ಅ). [4] ದಿತ್ತು (ಅ). [5] ಪುದು ಧಾತ್ರೀ (ಅ). [6] ಪಿ (ಬ). [7] ಯ್ಲಲಮು (ಬ). [8] ಕ (ಕ). [9] ವ (ಕ). [10] ಗಿ (ಕ.ಬ). [11] ಲೆಳ್ದೆಯಿದ್ದು (ಬ). [12] ಯ್ಯುತಿ (ಕ).

ಆಗಳೆ ಮಾಡದಂದಟಿವ ಕಜ್ಜಮನಾಗಳೆ ಮಾಡಲೊಲ್ಲದೆಂ
ದಾಗಿಯುಮೊರ್ಮೆ ಮಾಡ್ಪೆನೆನುತಿರ್ಪುದುಮಕ್ಕುಮುದಾಗದೆಂಬುದಂ।
ಬೇಗದೆ ಮಾಟ್ಟುದುಂ ನೆಱೆ ವಿಚಾರಿಸಿ ನಿಶ್ಚಯಿಸಿರ್ದು ಕಾರ್ಯದು
ದ್ಯೋಗದೆ ಮಾಡದಿರ್ಪುದುಮಿವೆಲ್ಲವು ಕಾರ್ಯವಿನಾಶಹೇತುಗಳ್॥ ೧೨

ಕ್ಷಿತಿಯೊಳ್ ತನ್ನಾಜ್ಞೆಯಂ ಪೆರ್ಚಿಸುವೊಡಿರದೆ ನಿಷ್ಕಂಟಕಂ ಮಾಡಿ ಪತ್ರ
ಸ್ಥಿತಿಯಿಂ ಸಿದ್ಧಾಯಮಂ ಕೊಳ್ವುದು ನರಪತಿ ಮರ್ಯಾದೆಯಂ ಚಿತ್ತ।
ವ್ಯಥೆ[1]ಯಪ್ಪಂತೊಕ್ಕ[1]ಲಂ ಮಿ[2]ಕ್ಕಳ[2]ಪಿ ಕೊಳಲೊಡಂ ಕೆಟ್ಟುಪೋಕುಂ ನಿತಾಂತಂ
ಕ್ಷಿತಿರೌದ್ರಾರಣ್ಯವಾಗಳ್ ಖಗಮೃಗಫಣಿಸಂದೋಹಮಂ ತಾಳ್ದಿ ನಿಲ್ಕುಂ॥ ೧೩

ಬೇಸತ್ತು ನಾಡು ಕೆಟ್ಟೊಡೆ
ದೇಶಮನಾಳ್ವರಸು ಕೆಡುಗುಮರಸಿನ ಕತದಿಂ।
ದೇಶಂ ಕೆಡುಗುಮದೆಂತೆನೆ
ತ್ರಾಸಿನ ಕೊಡನೊಂದು ಬೀಲು[3]ಲೊಂದಿರ್ದಪುದೇ[3]॥ ೧೪

ಮಧುರಾಳಾಪಪ್ರಸಂಗಂ ಪರಹಿತನಮಳಂ ಸರ್ವಸನ್ನಾಹಶಸ್ತ್ರಾ
ಯುಧಸಾರಂ ಧಾರಕಾರ್ಯಂ ರಿಪುಜಯಪಟು ಸಾಮಂತ ಶಿಷ್ಟೇಷ್ಟನಾನಾ ।
ವಿಧತಂತ್ರಂ ನಿಷ್ಕಳಂಕಂ ಋಜುಮತಿ ಕುಶಲಂ ಸತ್ಯ ಶೌಚಾಭಿಮಾ[4]ನಾಂ[4]
ಬುಧಿಯರ್ಥೋದ್ಯೋಗಿ ಶಕ್ತಿತ್ರಯನಿಧಿಯೆನೆ ನಂದಿರ್ದವಂ ದಂಡನಾಥಂ॥ ೧೫

ಕರಣೀಯೋಪಾ[5]ಯ[5]ಮಂ ಚಿಂತಿಸುವುದು ಪುರುಷಂ ದ್ರವ್ಯಸಂಪತ್ತಿಯೊಳ್ ತ
ತ್ಪರನಾಗುತ್ತಿರ್ಪ ಬಿ[6]ರ್ದಿ[6]ರ್ದುದನೆ ನೆಗಟ್ಟುದೀ ಕಾಲದೊಳ್ ತಾನಿದಂ ಚಾ।
ತುರದಿಂ[7]ದಂ[7] ಕೊಳ್ವುದೆಂತುಂ ನಯಮಿದನಯಮೆಂಬುಕ್ಕಿಯಂ ಕ[8]ಳ್ವುದು[8]ರ್ವೀ
ಶ್ವರನಾದಂ ಕೆಟ್ಟುದಂ ಸಂವರಿಪುದಿದುವೆ ಪಂಚಾಂಗಮಂತ್ರಪ್ರ[9]ಯೋಗಂ[9]॥ ೧೬

ಗೆಲವೇಟ್ಕುಂ ಕಾಮಕ್ರೋ
ಧಲೋಭಮದಮಾನಹರ್ಷಮೆಂಬಿವನವನೀ।
ತಲಪತಿಯರಿಷಡ್ವರ್ಗಮ
ನಲಸದೆ ಗೆಲ್ವನೆ ಪಡೆಗು[10]ಮಿಹ[10]ಪರಹಿತಮಂ॥ ೧೭

ಬೆಳೆಯಿಸದೇಡರಾತಿತರುವಂ ಬಟಿಸಂದದು ಕೂಡೆ ಕೊರ್ಬಿ ಸಂ
ಚಳಿಸದೆ [11]ಪೆ[11]ರ್ಚಿ ಬೇರ್ಪರಿದು ದಾಂಗುಡಿವೋಗದೆ ಮಾಣದಂತದಂ।

---

[1] ಯಂತಪ್ಪಂಕ (ಕ). [2] ಕ್ಕುಳಿ (ಬ). [3] ಲಿರ್ಪುದೆಪೇಳ್ (ಕ). [4] ನಂ (ಬ).
[5] ದ (ಬ). [6] ಲ್ಲಿ (ಬ). [7] ಕೈ (ಕ). [8] ಲ್ದುದೂ (ಕ). [9] ಯುಕ್ತಂ (ಕ).
[10] ಮೀ (ಕ). [11] ಬೆ (ಬ).

ಮೊಳೆಯೊಳೆ ತೋಡಿ [1][ಸೀಂಟಿ][1] ಕಳೆಯಲ್ ಬಗೆದಪ್ಪುದು ಮಾಡ[2]ದಾಗಳು
ಮ್ಮಳಿಸಿ ಬಟಿಕ್ಕ ಪೆರ್ಗೊಡಲಿಗೊಳ್ವವೊಲಕ್ಕುಮದೊಳ್ಳಿತಕ್ಕುಮೇ॥ ೧೮

ಇದಿರ ವಿರೋಧಿಸೇನೆ ನಿಜಸೇನೆಗೆ ಹೀನಮೆನಿಪ್ಪೊಡೆತ್ತಿ ಮಾ
ಣದೆ ತಱಿಸಂದು ಕಾದು ಕಡುಬಲ್ಲಿದನೊಳ್ ತಱಿಸಂದತಿಪ್ರವೇ।
ಶದಿನಿರದೆತ್ತಿ ಕಾದಲಣಮಾಗದು ಮಾಣದು ಕಾದಿದಂದು ಕೊ
ರ್ಬಿದ ನರಿ ಸಿಂಗಮಂ ಕೆಣಕಿತೆಂಬವೊಲಕ್ಕುಮದೊಳ್ಳಿಕೆಯ್ಗುಮೇ॥ ೧೯

ಅರಿನೃಪರಿರ್ದ[3]ರಿ[3]ರ್ದೆಸೆಯ ಮಂಡಲಮಂ ಕವಿತಂದವುಂಕಿ ಕ
ರ್ತರಿಯೊಳಗಿರ್ದ ರೋಮದವೊಲರ್ದರಿ ಭೂಪತಿ ಮುನ್ನಮೆಯ್ದೆ ಬ।
ರ್ದರಿ[4]ಯುಮ[4]ನೆಯ್ದೆ ಸಾಧಿಸಿ ಬಟಿಕ್ಕೆ ಬಲಸ್ಥನೆನಿಪ್ಪ ಪೈರಿಯಂ
ಧುರದೊಳಿದಿರ್ಚಿ ಕೊಲ್ವುದವನಂ ಮಿಗೆ ಮಂತ್ರಿಯೆನಿಪ್ಪ ಭೂಭುಜಂ॥ ೨೦

ಕಾದಲೊಡರ್ಚಿ ಗೆಲ್ವ ರಣರಂಗದೊಳೊಡ್ಡಿದರಾತಿ ಭೂಪರೊಳ್
ಕಾದು[6]ವುದಣ್ಮಿ ಮುನ್ನ[6] ಶಕುನಸ್ಥಿತಿ ಚಂದ್ರಬಲಂಗಳೆಂಬಿವಂ ।
ಶೋಧಿಸಿ ನೋಡಿ ಪಾಂಗಱಿದು ಕಾದುವುದೊಪ್ಪಿರೆ ತನ್ನ ಸೈನ್ಯಮಂ
ಕಾದು ಜಯಾವಹಂ ತನಗೆ ಸಾರ್ವಿನೆಗಂ ಸಕಲಾವನೀಶ್ವರಂ ॥ ೨೧

ಆಱನೆಯ ಭಾಗದೊಳ್ ಮೈ
ದೋಱುರೆ ಸಂದೊಂದುಭಾಗಮಂ ಕೊಂಡು ನೃಪಂ।
ಮಾಱಿದೆ ರಕ್ಷಿ[6]ಸೆ[6] ನಾಡಂ
ಬೀಱಿಗುಮಾ ನಾಡುಮವನ ರಾಜ್ಯಶ್ರೀಯಂ॥ ೨೨

ಎರವಿನ ಬೀರದೇಳ್ಗೆಗಳನಟ್ಟಿಯೆ ಪಾಡಿಸಿ ಪೊಂಗಿ ಮಾನೆಯಂ
ಮುರಿದು ವಿಲಾಸದಿಂದೊ[7]ದೆ[7]ದು ಘಟ್ಟಿಸಿ [8]ಱಿ[8]ಚ್ಛೆಯೊಳರ್ದು [9]ಬೆಟ್ಟದಿಂ[9] ।
ಪಿರಿಯವೆನಿಪ್ಪ ಮಾತುಗಳನಾಡಿ ಒಟಿಕ್ಕೊಳನಾ[10]ರ್ವ[10]ಗಂಡರಂ
ಧರಣಿಪರಾ[11]ಳ್ವುದೇ[11] ಬಿಡದೆ ಕೂರಸಿಯಂ ಪಿಡಿದೇಟ್ವ ಭಂಡರಂ ॥ ೨೩

ಚತುರುಪಧಾವಿಶುದ್ಧನಭಿಮಾನಿ ದಯಾಳು ಕುಲಜ್ಞ [12]ನಾ[12]ಜಿಗೂ
ರ್ಜಿತವಿಜಯಪ್ರಸನ್ನನಧಿಕಾರಿ ಧುರಂಧರನೇಕವಾಕ್ಯನು।
ನ್ನತಮತಿ ಶಕ್ತಿಯುಕ್ತನಮಲಂ ವ್ಯವಹಾರವಿಶಾರದಂ ಬಹು
ವ್ರತಪಥನೆನಿಪಾತನಲ್ತೆ ಮನೆವೆಗ್ಗ[13]ಡೆ[13] ಭೂಪತಿಗಪ್ಪುದೊಪ್ಪುಗುಂ॥ ೨೪

---

[1] ಟಿಱುಟಿ (ಕ). [2] ತಾಕ (ಬ). [3] ರೆ (ಬ). [4] ಯುನ (ಕ). [5] ದಮ್ಮಿ ಮುನ್ನೆ (ಕ), ದರ್ಮಿಮುನ್ನ (ಬ). [6] ಸಿ (ಕ.ಬ). [7] ರೆ (ಬ). [8] ರ (ಬ). [9] ಬೇಟ (ಕ). [10] ರ್ದು (ಕ). [11] ಳ್ವರೆ (ಬ). [12] ವಾ (ಕ). [13] ದಿ (ಬ).

ಜನತಾಧೀಶನ ಕಾರ್ಯಮಂ ಬರಿಸಮಂ ಮಾನಾರ್ಥಮಂ ಮಾನಮಂ
ದಿನಮಂ ವಾರಮನಾಳ್ವ ಮಂಡಳಮನೂ[1]ರಂ[1] ಸ್ಥಾನಮಂ ಸಾಕ್ಷಿಯಂ ।
ಧನಮಂ ತತ್ಪರಿಸಂಖ್ಯೆ[2]ಯಂ[2] ಕೊಡುವನಂ ಕೊಳ್ವಾತನಂ ತತ್ಕ್ರಯೋ
ಜನಮಂ ತಾನಱಿದೆಲ್ಲಯುಂ ಬರೆದವಂಗೊಳ್ಪಕ್ಕುಮಂತೆಲ್ಲಯುಂ ॥ ೨೫

ಕ್ಷಿತಿಪತಿಯಾಳಲ್ಕಾಗದು
ಮತಿಹೀನನನಧಿಕದೋಷಿಯಂ ಮಂದನನು ।
ದ್ಧತನಂ ಭೃತ್ಯನನೆಂದುಂ
ಪ್ರತಿಪಕ್ಷದೊಳೊಂದಿದವನನಾತ್ಮಂಭರಿಯಂ ॥ ೨೬

[3]ಎ[3]ಂತುಂ ದಾಯಕನೆನಿಪನ
ನೆಂತುಂ ಕೃತಿನಾಶಿಯಂ ಪ[4]ಲಾತ್ಮಕ[4]ನುಮಂ ।
ಮಂತಣವೇಂ ಗಡ ಬಿಡುವುದು
ನಂತಂ ಭೂನಾಥನದ್[5]ಮ[5]ಭೃತ್ಯನನೆಂದುಂ ॥ ೨೭

ಸುರತಾನಕ್ತನನನ್ಯಕಾರ್ಯ[6]ರತ[6]ನಂ ನಿದ್ರಾಳುವಂ ಕೋಪ ಭೀ
ಕರನಂ ವಾದಿತನೃತ್ಯಗೀತಮಧುರಾಳಾಪೇಷ್ಟಗೋಷ್ಠೀಮನೋ।
ಹರನಂ ಕುಕ್ಕುಟ ಮಲ್ಲ ಮೇಷ ಮಹಿಷೇಭದ್ವಂದ್ವಯುದ್ಧಕ್ರಿಯಾ
[7]ಭ[7]ರನಂ ಭೂಪನನೆಯ್ದಿ ಬಿನ್ನವಿಸಬೇಡೇನಾದೊಡಂ ಸೇವಕಂ ॥ ೨೮
(ದುರ್ಗಸಿಂಹನ ಪಂಚತಂತ್ರಂ. ಪು ೩೧ ಪದ್ಯ ೮೩.)

ಅರಿನೃಪರುತ್ಸವಮಂ ಕೇ
ಳ್ದರೆಯುಂ ಸೆಂಡಾಡುತಿರೆಯುಮಾನೆಯನೇಱು।
ತ್ತಿರೆಯುಂ ಮಂತಣದೊಳ್ ಕು
ಳ್ಳಿರೆಯುಂ ಬಿನ್ನವಿಸಲಾಗದೆಂ[8]ದುಂ[8] ಭೃತ್ಯಂ ॥ ೨೯
(ದುರ್ಗಸಿಂಹನ ಪಂಚತಂತ್ರಂ, ಪು ೩೨ ಪದ್ಯ ೮೪.)

ಭೀತನನಲಸಿದನಂ ಕಾ
ರ್ಯಾತುರನಂ ಪಸಿದನಂ ತೃಷಾಪೀಡಿತ[9]ನಂ ।
ದ್ಯೂ[9]ತಮೃಗ[10]ವ್ಯವ್ಯಸನೋ[10]
ಪೇತನನಱಿದಱಿದು ಬಿನ್ನವಿಪ್ಪಂ ಗಾಂಪಂ ॥ ೩೦
(ದುರ್ಗಸಿಂಹನ ಪಂಚತಂತ್ರಂ, ಪು ೩೨ ಪದ್ಯ ೮೫.)

---

[1] ರುಂ (ಕ). [2] ಯಿಂ (ಕ). [3] ಅಂ (ಕ). [4] ನಾತ್ಮತ (ಕ). [5] ರ್ಮ (ಕ). [6] ಪರ (ಬ). [7] ಪ (ಕ). [8] ತುಂ (ಅ). [9] ದ್ಯೂತ (ಬ). [10] ವ್ಯಸನ ಜನೋ (ಕ).

ಒಡೆಯರ ರಾಯಸಂ ತನಗೆ ಬಂದೊಡೆ ತಾನಿದಿರೆಬ್ದುವಂದು ಮೈ
ವಿಡೆ ಪೊಡೆಮಟ್ಟು ಕೈಮುಗಿದು ಬೇಗದಿನೋದಿಸಿ ಕೇಳ್ದು ಬಿಚ್ಚತಂ ।
ತಡೆಯದೆ ರಾಜಕಾರ್ಯಮನೆ ಮಾಟ್ಪುದು ಮಂತ್ರವಿಶುದ್ಧಕೀರ್ತಿಯಂ
ಪಡೆವನಿರುದ್ಧಲಕ್ಷ್ಮಿಗೆಡೆಯಪ್ಪ ಪಸಾಯತಬಲ್ಮೆಯಪ್ಪವಂ॥ ೩೧

ಭರದಿಂ ವಾಚಕಮುಂಟೆಂ
ದುರವಣಿಯಿಂದೋದಿ [1]ಕ[1]ಳೆಯದರ್ಥಾರ್ಥಿಗಳಂ ।
ದೊರೆಕೊಳಲನು[2]ಮಾನಿಸಿ[2] ಭೂ
ವರನಾಲ[3]ಸೆ[3] ವಿದಿತಮಾಗಲೋದುಗೆ ಕರಣಂ ॥ ೩೨

ಅನುಮಾನಿಸಿ ಲೇಖಾರ್ಥಮ
ನನುನಯದಿಂ ಚಿತ್ತಮಾಗೆ ಮಧುರಧ್ವನಿಯಿಂ।
ಮನಕೆಸೆವ ತೆಱದಿನೋದುಗೆ
ಜನಪನ ಸಭೆ ಮೆಚ್ಚಿ ನಚ್ಚಿ ಮುಯ್ಯಾಂಪಿನೆಗಂ॥ ೩೩

ಬೆರಲಿಂದೊರಸದೆ ಸಗಣಮ
ನೊರೆಯದೆ ನಾಲಗೆಯೊಳಿನಿಸು ನಕ್ಕದೆ ಕೆಲದರ್ ।
ಪಿರಿದುಂ ಬೇಸಱಲೋದದೆ
ವಿರಚಿಸುವುದು ಲೇಖನಾರ್ಥಮಂ ಗಣಿತಜ್ಞಂ ॥ ೩೪

ನಡುಗದೆ [4]ಕೆಕ್ಕ[4]ರಿಸದೆ ಬಾಯ್
ತಡವಾಗದೆ ತೊಡರೊಳೊಂದಿ ತೋಱಿದೆ ಮತ್ತಂ।
ನುಡಿದ [5]ಪದವೆಡಹಿಬಾರದೆ[5]
ನಡುಹುಡನೋದುವುದು ಸೇನಬೋವಂ ಸಭೆಯೊಳ್ ॥ ೩೫

ಮಾನಧನಂ ಮಧ್ಯಸ್ಥಂ
ನೂನ್ಯತವಾಕ್ಯಂ ವಿಶುದ್ಧಚರಿತಂ ಕುಲಜಂ।
ತಾನೆನಿಪುದು ಕೃತಪುಣ್ಯಂ
ತಾನೆನಿಪುದು ರಾಜವರ್ಧನಂ ನೃಪಕರಣಂ ॥ ೩೬

ಪದುಳಗನಪ್ಪುದೋಜೆವೆರಸಿಪ್ಪುದು ಸದ್ವಿಮಳಾಂಗಿಕಾಂಗನ
ಪ್ಪುದು ಧೃತಚಿತ್ತನಪ್ಪುದತಿಭಾವುಕನಪ್ಪುದು ನಿರ್ವಿಕಾರಿಯ।

---

[1] ತ (ಕ). [2] ವಾಗಿ (ಬ). [3] ಸಿ (ಕ). [4] ಕೇಕ (ಕ) [5] ಪವೆಡಹರಿವಾರದೆ (ಕ).

ಪ್ಪುದು ನಯದಿಂದಮುಂದಮಱುದಿಂಬಿನೊಳೆಲ್ಲವನೋದಬಲ್ಲನ
ಪ್ಪುದು ಲಘುಹಸ್ತನಪ್ಪುದು ವಿಶೇಷಗುಣಂ ಗಣಕಂಗೆ ಲಕ್ಷಣಂ॥ ೩೭

ಠವಣಿಸುವೋಜೆ ಲೆಕ್ಕಿಪ ಬೆಡಂಗವಧಾನಿಸುವುನ್ನತಿಕ್ಕೆ ಕೂ
ಡುವ ಕಳೆವಂದಮುಗ್ಘಡಿಸುವೊಟ್ಟಜೆ ತಿದ್ದುವ ಬಿನ್ನಣಂ ಕರಂ।

ರನೆಂಬಿವಂ ಮೆಱೆಯವೇಱ್ಪುದು ಶ್ರೀಕರಣಕ್ಕಧೀಶ್ವರಂ॥ ೩೮*

ಪುನರುಕ್ತಂ ಸಂಧಿದೋಷಂ ಸ್ವರತತಿ ಪದಪೂರ್ಣೋಕ್ತಿದೋಷಂಗಳೆಂದೆಂ
ಬಿನಿತುಂ ದೋಷಂಗಳಂ ಬಿಟ್ಟಳವಡೆ ಪದಕಂ ವ್ಯಕ್ತಮಪ್ಪಂ[1]ತಿರೊ[1]ಲ್ದಾ।
ವನ ಚಿತ್ತಪ್ರೀತಿಯಾಗಲ್ ಬರೆದು ಪದಕಮುಂ ಬಾರಿಸಲ್ ಬಲ್ಲನಂ ಮಾ
ಡ್ಕೆ ನಿತಾಂತಂ ರಾಜಪುತ್ರಂ ನಯಮನಱಿವನಂ ಸಂಧಿಗಂ ವಿಗ್ರಹಕ್ಕಂ॥ ೩೯

ಗುರುಗೆ ಮಹೀಭುಜಂಗೆ ಕೆಳೆಯಂಗೆ ವಿರೋಧಿಗೆ ಸೇವಕಂಗೆ ಬಿ
ತ್ತರದೆ ಬಟಿಕ್ಕಮಲ್ಲ ಋತುಕಾಮಶರಾಸನವೇದಲೋಚನಸ್ಥಿರ।
ಪರಿಸಂಖ್ಯೆಯಂ ನೆಱೆಯೆ ಲೆಕ್ಕದ ಮೇಲೆನಿಸುತ್ತೆ ಮತ್ತೆ ಬಿ
ತ್ತರದೊಳೆ ಕೂರ್ತು ಮುದ್ರಿಸಿ ಪದಂ ಬರೆದೋದುಗೆ ಬಂದ ಲೆಕ್ಕಮಂ॥ ೪೦

ಚದುರಂ ಭಾವುಕನಿಂಗಿತಜ್ಞನಱಿವುಳ್ಳಂ ದೇಶಭಾಷಾನ್ವಿತಂ
ಪದವಾಕ್ಯಾರ್ಥವಿ[2]ವಕ್ಷಿ[2]ತಂ ಬಹು[3]ಕಳಾ[3]ಸಂಪನ್ನನಾಸ್ಥಾನಸ।
ವ್ಮದವಾ[4][ಗ್ವಿ][4]ತ್ತನೆನಿಪ್ಪನಂ ನೃಪವರಂ ಕೈಕೊಂಡು ನತ್ಪಾತ್ರನಂ
ಪದಪಿಂ ನೆಟ್ಟನೆ ಸಂಧಿವಿಗ್ರಹಿಯನೆಂತುಂ ಮಾಡ್ಕೆ ನೀತಿಜ್ಞನಂ॥ ೪೧†

ಒಡೆಯನ ವೀರಮಂ ಪೊಗಬಲಮ್ಮದನಂ ಲನದುತ್ತರಂಗಳಂ
ಬಿಡದರಿಭೂಪರೊಳ್ ನುಡಿಯಲಮ್ಮದೆ ತತ್ಸಭೆಯಲ್ಲ ಭೀತಿಯಿಂ।
ನಡುಗುವ ಪೇಡಿಯಂ ಕಳುಪಲಾಗದು ನೆಟ್ಟನೆ ಸಂಧಿಯಲ್ಲಗಂ
ತಡೆಯದೆ ಭೂಭುಜಂ ನೆಗಬ್ದ ವಿಗ್ರಹದಲ್ಲಗಮಾವ ಕಾಲದೊಳ್॥ ೪೨

ಎರಡಕ್ಕಂ ಸಲ್ವಂತಿರೆ
ನರನಾಥಂಗುಸಿರ್ಗೆ ಸಂಧಿವಿಗ್ರಹಿ ನುಡಿಯಲಿ।
ಸರಿಯಪ್ಪುದನೆರಡಕ್ಕಂ
ಪರಿಣತಮತಿ ದೂತನಿಂತು ನುಡಿಯಲೆವೇಱ್ಕುಂ॥ ೪೩

---

* ಈ ಪದ್ಯ (ಬ) ಪ್ರತಿಯಲ್ಲಿಲ್ಲ. [1] ತುವೊ (ಕ). [2] ವಿಮ (ಕ), ವಿವ (ಬ). [3] ವಳಂ (ಕ). [4] ಗ್ಮಿ (ಕ.ಬ). † ಈ ಪದ್ಯ ದೂತಾಂಗವರ್ಣನೆಯ ೨೬ನೆಯ ಪದ್ಯವಾಗಿಯೂ ಇದೆ.

ಅಟ್ಟಿದ ಕಾರ್ಯಮನೊಡೆಯಂ
ಗೊಟ್ಟಜೆಯಿಂ ಸಂಧಿವಿಗ್ರಹಂಗಳನೆರಡಂ।
ನೆಟ್ಟನೆ ಮಾಪ್ಪ ಸಮರ್ಥನ
ನಟ್ಟುಗೆ ವಿಶ್ವಾಸನೀಶ್ವರಂ ನಯವಿದನಂ॥ ೪೪

ನೀಱಿನನಾತ್ಮಘಾತಕನನುತ್ಸುಕನಂ ಕ್ಷಮೆಯಿಲ್ಲದಾತನಂ
ಜಾಱುವನಂ ಪಲುಂಬುವನನಸ್ಥಿರನಪ್ಪನನಾಳಿಕಾಱಿನಂ।
ದೂಱುವನಂ ನಿಕೃಷ್ಟನ[1][ನೊಡಂ]ಬಡುಕಾಱಿನನೇನೆನೆಂದೊಡಂ
ಮಾಱುವನಂ ಕಡಂಗಿ ಸಲೆ ಬೇಡುವನಂ ನೃಪನಾಳಲಕ್ಕುಮೇ॥ ೪೫

ಬೆಸವೇಱ್ದಾಗಲೆ ಜೀವಿತಕ್ಕೆಳಸುವಂ ನಿಷ್ಕಾರಣಂ ಕುತ್ತದಿಂ
ಕುಸಿವಂ ನಲ್ಗೆಗೆ ಮೆಯ್ಯನಾಂತು ತೊನೆವಂ ಕೊಂಡಿರ್ದು ಮೇಲ್ವಾಯ್ದು ಗ।
ರ್ದಿಸುವಂ ದುರ್ವ್ಯಸನಂಗಳೊಳ್ ತೊಡರ್ದು ನಾಣ್ಗೆಟ್ಟಾಡುವಂ ಕಾಡುವಂ
ನಿಸದಂ ಹಂಗಿಸುತಿರ್ಪನಾ ಖಳನನಾಳ್ವಾತಂಗೆ ಪೆಂಪಕ್ಕುಮೇ ॥ ೪೬

ಅರಸಂ ಪೆರ್ಗಡೆ ಜನಪದ
ವರಿದೆನಿಸುವ ಕೋಟೆ ಕೋಶಮಾ[ರಯ್ಯೆ] ಬಲಂ।
ದೊರೆವೆತ್ತ ಮಿತ್ರನೆಂದಿಂ
ತು ರಾಜ್ಯಮಕ್ಕುಂ ವಿಚಾರಿಸಲ್ ಸಪ್ತಾಂಗಂ॥ ೪೭

ಬಾಲಂ ವೃದ್ಧಂ ಜಡನೆಂ
ದೇಳಿಸವೇಡರಸುಮಗನನಾತನೆ ದೇವಂ ।
ಕಾಲಾಗ್ನಿರುದ್ರನೆಂದಱಿ
ದಾಳೋಕಿಸು ವಿನಯಪೂರ್ವಕಂ ನೆಱೆ ಬಲವಂ ॥ ೪೮

ಶೂರಂಗೆ ಪರಿಜನಂ ಸಲೆ
ಕೂರದು ಮೆಲ್ಲದನನಾರುಮುಱಿರದಱಿಂ ನಾ ।
ಧಾರಣಮೆಯಪ್ಪುದಾ ಪರಿ
ವಾರದ ಹೆರ್ಚುಗೆಯನದಱಿ ನಣ್ಪುಮನೊಲವಂ ॥ ? ೪೯

ಆಯಮನಾ ಯುಗಾವಧಿವರಂ ನಿ[2]ಱು[2]ಸಲ್ ಮಱೆವೊಕ್ಕ ರಾಯರಂ
ಕಾಯ್ಲುದಾತ್ತ ವೃತ್ತಿಯನೆ [3]ಪೆರ್ಚಿಲತರ್ಮನ[3] ನೇದೆವಟ್ಟುವ।

---

[1] ನೆರಂಬಿ (ಕ.ಬ). [2] ಲ (ಬ). [3] ಪಿಚ್ಚಿಲತರ್ಮನೆ (ಕ).

[1]ಗ್ನಿ[1]ಯಲವುಂಕ ತನ್ನ ನೆಲನುಂ ಕುಲವಾರಿಯುಮಂ ಬಲ[2]ಸ್ಥನ[2]
ನ್ಯಾಯದಿನಾಳೆ ಪೂಣ್ದಱಿಯಲುಂ ಪಿರಿದೇಂ ನೃಪನೆಂಬ ಲೆಕ್ಕಮೇ ॥ ? ೫೦

ಜನಪದಕಜ್ಜಮಂ ಕೆಡಿಸಿ ಕೊಳ್ಳಿದನೆಂದೊಡೆ ಕೊಳ್ವನನ್ಯ ಕಾ
ಮಿನಿ ತನಗೊಲ್ದಳೆಂದೊಡದನಾರಿಸಿಯಾಳ್ದನಿನಾಪ್ಪ ಪಾಯಮುಂ ।
ಟೆನೆ ಬೆದಱಿಂ ಸ್ವಕಾರ್ಯವಿರೋಧಮಾಗೆ ತೊ . . .
ಟ್ಟನೆ ಕೊಳೆಮಾಪ್ಪನಿಂತುಟುಪಧಾಪರಿಶುದ್ಧನಮಾತ್ಯನಕ್ಕುಮೆ ॥ ? ೫೧*

ಚಳಮತಿ ಬೆಸನಿ ಸುಖಪ್ರಿಯ
ನಳಪನನಿಶ್ಚಯನನಾಹಸಂ ಚ್ಯುತಚಿತ್ತಂ।
ಸ್ಖಲಿತೋದ್ಯೋಗನೆನಲ್ ಭೂ
ತಳದೊಳ್ ನಿರ್ಹಾಗ್ಯರೆಣ್ಬರಪ್ಪರಿಳೇಶರ್ ॥ ೫೨

ವೇದವಿದಂ ಕಾಲತ್ರಯ
ವೇದಿ ಬಹುಶ್ರುತನಥರ್ವಕುಶಲಂ ಶುಭವಂ।
ಶೋದಯನುತ್ತಮನಾಶೀ
ರ್ವಾದಪರಂ ಪರಹಿತಂ ಪುರೋಹಿತನಕ್ಕುಂ ॥ ೫೩

ಚತುರಪಧಾವಿಶುದ್ಧನಧಿಕಾರಿ ಕಳಾವಿದನರ್ಥಶಾಸ್ತ್ರ ನಿ
ಶ್ಚಿತಮತಿ ಸಂಧಿವಿಗ್ರಹಪದಸ್ಥಿತನಲ್ಲ . . ದುಂತೆ ಗ ।
ರ್ಭಿತನಿದರೊಡ್ಡುವಂ ಮನದೊಳ್ಕೆದದವಂ ಮಱಿವಾಱ್ದನಾಳ್ದನು
ದ್ಧತನೆನೆ ಸಂಧಿವಿಗ್ರಹಿಯೆ ವಿಗ್ರಹಭೂಪತಿಗಾಗದಿಕ್ಕುಮೆ ॥ ೫೪*

ಪಡೆಯರನುಱಿದಪಮಾನದೆ
ಕಟಲ್ಚುವಂ ಬೀಡಿನಾಳ್ಗೆ ತೆಱೆಯಂ ಮತ್ತಂ ।
ಘಟಿಯಿಸುವಂ ರಾಜ್ಯಮನವ
ಗಟಿಯದೆ ದುಷ್ಟಪ್ರಧಾನನಿರಲಱಿದಪನೆ ॥ ೫೫*

ತನಗೆಡಱಿಗೆ ನಾಣಟಿವು ನಾಣ್ಗೆಡೆ ತೇಜದ ಹಾನಿ ತೇಜಮಿ
ಲ್ಲೆನಿಸೆ ಪರಾಭವಂ ಪರಿಭವಂಬಡೆದಂದಪಮಾನವೃತ್ತಿ ತೊ ।
ಟ್ಟನೆ ಕೊಳೆ ನಾರ್ಗುಮಂತದಱಿ ನಾರ್ಕೆಯೊಳುಬ್ಬೆಗಮಿರ್ಕುಮುಬ್ಬೆಗಂ
ಜನಿಯಿಸೆ ಬುದ್ಧಿಹಾನಿ ಮತಿವಿಭ್ರಮದಿಂ ಮರುಳೆಂಬರೆಲ್ಲರುಂ ॥ ೫೬

---

[1] ರ್ನಿ (ಕ). [2] ಸ್ತನಾ (ಕ). * ಈ ಪದ್ಯಗಳು (ಬ) ಪ್ರತಿಯಲ್ಲಿಲ್ಲ.

ಕಿನುವಿಂ ದೇವತೆಯಂ ಮಾ
ಡಿಸಿ ಪೂಜಿಸೆಯುಂ ಕಿಲುಂಬುನಾರ್ವುದನೆಂತುಂ ।
ಬಿಸುಡದು ಗುಣವಿಲ್ಲದುದೇಂ
ಹೆಸರ್ವಡೆದುಂ ತನ್ನ ನಾಜಮಂ ಬಿಸುಡುವುದೇ ॥ ೫೭

ಬಡವನ ಯೌವನಮಫಲಂ ।
ಕೊಡದನ ಧನಮಫಲವೊರ್ವನುಣ್ಣದದಫಲಂ ।
ಜಡಮತಿಯೋದಿದೊಡಫಲಂ
ಕಡುಮೂರ್ಖಂ ಮಂತ್ರಿಯಾದ ರಾಜ್ಯಮದಫಲಂ ॥ ೫೮

ಎನಗಿವ ಭಕ್ತನೆನ್ನದೆ ಧುರಂಧರನೆನ್ನದೆ ಶಂಕರಂ ವೃಷೇಂ
ದ್ರನನತಿದೂರದೊಳ್ ನಿಲಿಸಿ ವಕ್ತ್ರಸಮೀಪಕೆ ಸರ್ಪನಂ ದ್ವಿಜಿ ।
ಹ್ವನನನುರಾಗದಿಂ ಕವಿಯ ಪಕ್ಕದೆ ತಾಳ್ದಿದನಂತೆ ತಕ್ಕರಂ
ಜನಪತಿ ಗೆಂಟುಮಾಡಿ ಖಳರಂ ಕವಿಯತ್ತೆಳೆಕೊಂಡು [1]ನಾರ್ಚುಗುಂ[1] ॥ ೫೯

ಉರಗಂಗಳಟ್ಟಿ ತಿನೆಯುಂ
ಶರನಿಧಿಪತಿ ಮೇರೆದಪ್ಪೆಯುಂ ನರ[2]ನಾಥಂ ।
ಪರಿ[2]ಕಿಸದೆ ಮುನಿಯೆಯುಂ ಸಂ
ಹರಣಂ ಪ್ರಜೆಗಕ್ಕುಮೆಂಬುದೊಂದಚ್ಚರಿಯೆ ॥ ೬೦

ತನಗೆಣೆಯಿಲ್ಲದ[3]ನೇನೆಂ[3]
ದನಪ್ಪೊಡಂ ಮುನಿಯವೇಡದೆಂತೆನೆ ಗಜಗ ।
ರ್ಜನೆಗೆ ಕಡುಮುಳಿವ ಸಿಂಗಂ
ಮುನಿಗುಮೆ ನೆರೆದೂಳುತಿರ್ಪ ನಾಯ್ಗಂ ನರಿಗಂ ॥ ೬೧

ಬಿಲದೊಳಗೊಂದು ಕಲ್ಲಗವಿಯೊಳ್ ಕಡುಗೆಂಟಱೊಳಿರ್ದು ಕಪ್ಪೆ ಪೆ
ರ್ಬುಲಗಿದಿರಾಗಿ ಗರ್ಜಿಸಿದೊಡಾ ಪುಲಿ ಕಪ್ಪೆಗೆ ಪಾಯ್ದು ಪಾಱಿಲುಂ ।
ಕೊಲಲುಮೊಡರ್ಚಿ ಕಲ್ಲೊಡನೆ ಪೋರ್ದು ಬಲಂ ಕಡುವಂತೆ ದುರ್ಗದೊಳ್
ನೆಲೆಗೆಡೆದಿರ್ದರಂ ನೆಱಿಯ[4]ರಾ ಪಿಸಿ[4]ಗೆಲ್ವರದೆಂತು ಬಾ[5]ಟು[5]ವರ್ ॥ ೬೨

ಮಾನಧನನಂ ನೆಗಪ್ಪ್ಯ
ಮಾ[6]ನ[6]ನಂ ತನಗೆ ಹಿತನನೊಂದಟಿದೋಪ ।

---

[1] ಚಾರ್ಚುವರ್ (ಕ). [2] ಥರ್ಪ (ಕ). [3] ನೆಲನಂ (ಬ). [4] ತಾಪಸಿ (ಕ).
[5] ಳ (ಕ). [6] ನಿ (ಬ).

ಕ್ಕಾ ನರಪತಿ ಕೆಡಿಪೊಡೆ ಕಣ್
ಬೇನೆಗೆ ತಲೆದಿವಿಸಿಕೊಳ್ವನಂ ನೆಱೆ ಪೋಲ್ಗುಂ ॥ ೬೩

ಸೊರೆಯಂ ಪಿಡಿದಂ ಮೊದಲಾ
ಗಿರೆ ತೀವಿದ ತೊಱೆಯನೀಸಿ ನಿತ್ತರಿಸಿದಪಂ ।
ಪಿರಿಯನಿವನೆಂದು ನಂಬಿದ
ನರನಂ ನಿತ್ತರಿಸದಾತನುಂ ಮಾನಸನೇ ॥ ೬೪

ಮನುಚರಿತಕ್ಕೆ ವ್ಯತ್ತಿ ನೃಪನೀತಿಗೆ ಪಂಚಕೆ ಲೌಕಿಕಪ್ರವ
ರ್ತನೆ[1]ಗುರುವಾರ್ತಿಕಂ ರಿಪುಷಡನ್ವಯರೋದದ[1] ಟಿಪ್ಪಣಂ ಧರಾ ।
ವನಗುಣದೊಂದು ಟೀಕು ಪರಮಾರ್ಥವಿವೇಕದ ಭಾಗ್ಯಮೆಂದೊಡಾ
ಜನಪತಿ ರತ್ನಶೇಖರನ ರಾಜಗುಣಂ ಬುಧಸೇವ್ಯಮೆನ್ನಿರೇ ॥ ೬೫

(ಅನಂತನಾಥಪುರಾಣಂ, ೩–೨೧.)

ಕುಲಜನನದರ್ಶನೀಕಂ
ಬಲವಂತಂ ಬುದ್ಧಿವಂತನಿಂಗಿತಮಱಿವಂ ।
ಸಲೆ ಸೇನೆಯೊಡೆಯನಕ್ಕೆ ವಿ
ಮಲ ಸದ್ಭೂಪಾಲನಿಧಿಗೆ ನೂನೃತವಾಕ್ಯಂ ॥ ೬೬

ವಿದಿತಾಯುವಿದಂ ಕೃತಮತಿ
ಮೃದುವಾಕ್ಯಂ ಶಾಸ್ತ್ರಯುಕ್ತನತಿದೈವಜ್ಞಂ ।
ಪದಪಿಂ ನರನಾಥಂಗೊ
ಲ್ದೊದವಿರೆ ಜೋಯಿಸಿಗನಕ್ಕೆ ದರ್ಶನಸಾರಂ ॥ ೬೭*

ಸ್ವಾಮಿಗೆ ತಪ್ಪಿದ ಭೃತ್ಯನ
ಧೋಮಾರ್ಗಂ ರೌರವಕ್ಕೆ ಗಱಗಱನಿಱಿಗುಂ ॥
ಸ್ವಾಮಿ ಸುಭೃತ್ಯಗೆ ತಪ್ಪಿದೊ
ಡಾಮಱಿಯೆವು ದೇವರಱಿವರಾಳ್ದನಗತಿಯಂ ॥ ೬೮

ಮುಂ ಕೊಟ್ಟುಟ್ಟುವುದುತ್ತಮಂ ಕಪಿಬಲಂ ವಾರಾಸಿಯಂ ದಾಂಟದ
ನ್ನಂ ಕಲ್ಪಾಂತಕೃತಾಂತದೂತಸದೃತಂಗಳ್ ರಾಮರೌದ್ರೇಷುಗಳ್ ।
ಲಂಕಾದ್ವಾರಕವಾಟಮಂ ಮುಱಿಯದನ್ನಂ ಲಕ್ಷ್ಮಣಜ್ಯಾಲತಾ
ಟಂಕಾರಂ ಕಿವಿಗೆಯ್ದದನ್ನಮಖಿಲಪ್ರಖ್ಯಾತೆಯಂ ಸೀತೆಯಂ ॥ ೬೯

(ರಾಮಚಂದ್ರಚರಿತಪುರಾಣಂ, ೧೨–೭೧.)

---

[1] ರುಕೀರ್ತಿ ಕಂಕಷಮನದ್ವಯವಾದದ (ಕ.ಬ). ಈ ಪದ್ಯ (ಬ) ಪ್ರತಿಯಲ್ಲಿಲ್ಲ.

ಲೋಕಕ್ಕಿದರ್ಥಶಾಸ್ತ್ರದ
ಟೀಕೆನಿಸಿದ ತನ್ನನುಡಿ [1]ಮನಂ[1]ಗೊಳಿಸೆ ದಳ ।
ತ್ಕೋಕನದಜಠರನಂ ನಿ
ರ್ವ್ಯಾಕುಳಪಿಂತೆಂದು ಧರ್ಮತನಯಂ ನುಡಿದಂ ॥ ೭೦*
(ಪಂಪಭಾರತಂ, ೯–೧೪).

ಬಸಿಱೊಳಗೆ ಜಗತ್ತ್ರಯಮುಮ
ನೊಸೆದೋರಂತಿಟ್ಟು ಕಾದ ಪೆಂಪಿನ ನಿಮ್ಮಾ ।
ಬಸಿಱಿಂ ಪೊಕ್ಕಿರ್ದ್ದೆವರ
ನಸುರಕುಳಾಂತಕ [2]ಕಡಂಗಿ[2] ಕಾವುದು [3]ಪಿ[3]ರಿದೇ ॥ ೭೧
(ಪಂಪಭಾರತಂ, ೯–೧೬.)

ಕಾದದೆ ಪನ್ನಗಧ್ವಜನಿಳಾತಳಮಂ ಕುಡನಾನುಪಿರ್ಪುದೇಂ
ಸೋದರರೆಂದು ನಾಣ್ಚಿ ಸೆಡೆದಿರ್ದಪೆನಿರ್ದೊಡವಸ್ತು ಭೂತನೆಂ ।
ದಾದಮೆ ಭೂತಳಂ ತೆಗಪೆ ತೇಜಮೆ ಕೆಟ್ಟಪುದಿಂತಿದರ್ಕೆ ಪ
ದ್ಮೋದರ ನೀನೆ ಪೇೞಮಗೆ ಕಜ್ಜಮನೀಗಳೆ ದಿವ್ಯಚಿತ್ತದಿಂ ॥ ೭೨*
(ಪಂಪಭಾರತಂ, ೯–೧೮.)

[4]ಬೆ[4]ಸವಾರ್ ಕೊಂಡಪೊಲಕ್ಕುಮೊಂದೆ ನಯಮಂ ಕೇೞ್ ನಿನ್ನ ಮುಂದೀಗಳಾ
ನುಸಿರ್ದಪ್ಪೆಂ ಸರೆ ಮೆಲ್ದು ಬಲ್ಪನಟಿಗುಂ ಕೈವಾರ[5]ಮುಂ[5] ಕೂರಿ ಕೂ ।
ರಿಸುಗುಂ ನಿಕ್ಕುವಮಪ್ಪ [6]ಕಾರಣದಿನಿಂತೀ[6] ನಾಮಮಂ ಮುಂ ಪ್ರಯೋ
ಗಿಸದೇಗೆಟ್ಟುಪುದೆಂದು ದಂಡಮನೆ ತಾಂ ಮುಂದಿಕ್ಕುವಂ ಮಂತ್ರಿಯೇ ॥ ೭೩
(ಪಂಪಭಾರತಂ, ೯–೧೯.)

ಆ ಲಾಕ್ಷಾಗೃಹದಾಹಮೊಂದೆ ವಿಷಸಂಯುಕ್ತಾನ್ನಮಂತೊಂದೆ ತಾಂ
ಚಾಲೀನಿಗ್ರಹಮೊಂದೆ ಟಕ್ಕುವಗೆಯಿಂ ಗೆಲ್ದಿರ್ದ ಜೂದೊಂದೆ ಶಾ ।
ರ್ದೂಲಾಭೀಲವ[7]ನಂಗಳೊ[7]ಳ್ ತಿರಿಪಿದೀ[8]ಯುರ್ಕೊಂದೆ[8] ಲೆಕ್ಕಂಗೊಳಲ್
ಕಾಲಂ ಸಾಲವು ಕಂಡುಮುಂಡು ನಮಗಿನ್ನಾ ತಂಗಳೊಳ್ [9]ನಂಧಿಯೇ[9] ॥ ೭೪
(ಪಂಪಭಾರತಂ, ೯–೨೨.)

ತೋಡುವೆನೊರ್ವನೊಳ್ಗುರುಳನುರ್ವಿಗೆ ನೆತ್ತರನಾರ್ದು ಪೀರ್ದು ಪೋ
ರ್ದಾಡುವೆನೊರ್ವನೂರುಗಳೆನೆನ್ನ ಗದಾಶನಿಘಾತದಿಂದೆ ನು ।

---

[1] ಯುಬಗೆ (ಬ). * ಈ ಪದ್ಯಗಳು (ಕ) ಪ್ರತಿಯಲ್ಲಿಲ್ಲ. [2] ನೊರಲ್ದು (ಬ). [3] ಮ (ಬ). [4] ರ (ಕ.ಬ). [5] ದಿಂ (ಬ). [6] ಲದಿನದಂತಾ (ಬ). [7] ನಾಳೆಯೊ (ಬ). [8] ಯೋರೊಂದು (ಬ). [9] ಪಾಟಿಯೇ (ಅ).

ರ್ಗಾಡುವೆನೇಟುಲೋಕಮಱಿವಂತಿರೆ ಪೂರ್ಣ್ದನಗಿಂದು ಸಂತಸಂ
ಮಾಡದೆ ಸಂಧಿಮಾಡಿ ಕುರುಪುತ್ರರೊಳೆನ್ನನೆ ಜೋಡುಮಾಬ್ಪರೇ ॥ ೭೫
(ಪಂಪಭಾರತಂ, ೯–೨೪.)

ಬಲಿಯಂ ವಾಮನ ರೂಪದಿಂದಮೆ ವಲಂ ಮುಂ ಬೇಡಿದೆಂ ಭೂರಿ ಭೂ
ತಲಮಂ [1]ಕುಂದೆನಗಾಯ್ತೆ[1] ಕೊಂಡೆನಿಳೆಯಂ ಕಟ್ಟಿಟ್ಟೆನಿನ್ನುಂ ರಸಾ ।
ತಲದೊಳ್ ದೈತ್ಯ[2]ನನಂತೆ[2] ನೀನುಮಿಳೆಯಂ ಮುಂ ಬೇಡಿಯಟ್ಟಟ್ಟು ಮಾ
ರ್ಮಲೆದಾತಂ ಕುಡದಿರ್ದೊಡಂದಿಱಿಯ ನೀಂ ಲೋಕಂ ಗುಣಂಗೊಳ್ವನಂ ॥ ೭೬
(ಪಂಪಭಾರತಂ, ೯–೨೦.)

ಬಂದು ಕುರುಕ್ಷೇತ್ರದೊಳಳ
[3]ವುಂ ದಱಮುಂ ನೆರೆದುನೆರೆದು ನಮ್ಮೊಳ್ ಕಾದ ।
ಲ್ಕೆಂದು ಗಡಂ[3] ಬಂದಿರ್ದರ
ದೇಂ ದಾಯಿಗತನ[4]ದೆ ಪಾಂಡವರ್ ತೋಱಿದರೇ[4] ॥ ೭೭
(ಪಂಪಭಾರತಂ, ೧೦–೩.)

ಪಡೆವಳ್ಳಂ ಗಡ ಮಾರ್ಬಲಕ್ಕೆ ತಲೆ ಧೃಷ್ಟದ್ಯುಮನೆಂ[5]ಬೊಳ್ಳೆಯಾ[5]
ಪಡೆಯೊಳ್ ಗಂಡನುಮಾ[6]ಮೊಲಂ[6] ದ್ರುಪದನುಂ [7]ಹೇರೊಟ್ಟೆ[7]ಯಾ ಮತ್ಸ್ಯನುಂ ।
ಗಡಮಂತಾ ಬಲಕಾಳ್ದನೇನಱಿಯಿರೇ ಧರ್ಮಜ್ಞನಾ ಧರ್ಮಜಂ
ಗಡಮೇಂ ನಾಯಕರೊಳ್ಕಿದರ್ ನೆರೆದರೋ [8]ಮತ್ಸ್ಯೇಶನುದ್ಯಾನದೊಳ್[8]॥
(ಪಂಪಭಾರತಂ, ೧೦–೪.)

ಕಳವೇಡ್ದೈ ಕುರುಭೂಮಿಯಂ ಕಳಕವರ್ ವಂದಿರ್ದರೆಂದಂತೆ ದೋ
ರ್ವಳ ಚಾತುರ್ವಳ ತತ್ಪುಹೃದ್ಬಳಮನಿನ್ನೇಗೇಳ್ದಪ್ಪೆ ಪಾಂಡವರ್ ।
ಬಳಸಂಪನ್ನರುದಗ್ರದೈವಬಳಸಂಪನ್ನರ್ ಮರುಳ್ಮಾತನಿ
ನ್ನುಟಿ ಗಾಂಗೇಯರ ಪೇೞ್ದದೊಂದು ತೆಱದಿಂ ನೀ ಕಾದು ದುರ್ಯೋಧನಾ॥ ೭೯*
(ಪಂಪಭಾರತಂ, ೧೦–೫.)

ಪಿಡಿದರವರಸುರಮ್ಮೈರಿಯ
ನೊಡಂಬಡಿಂ ತೊಟ್ಟುವೆನದೊಳಾಂ ನಿಮ್ಮಡಿಯಂ ।
ಪಿಡಿದೆನದಕ್ಕಾಂ ನಾಣ್ಚಿಯೆ
ಪಿಡಿದೆನವರ್ ಬಂದು ಪಿಡಿದೊರೆನ್ನರೆ ಗೆಲ್ಲಂ[9] ॥ ೮೦
(ಪಂಪಭಾರತಂ, ೧೦–೮.)

---

[1] ಕೊಟ್ಟೊಡೆ ನೋಡಿ (ಬ). [2] ನೆಂತು (ಬ). [3] ವೊಂದಿರೆ ನಮ್ಮೊಳ್ ಕದಂಗಿ ಮಿಗೆ ತಳ್ತಿಱಿಯಲ್ಕೆಂದಾನುಂ (ಅ). [4] ಮನಮನವರ್ ತೋಱಿದಪರ್ (ಅ). [5] ಬಾತನಾ (ಬ). [6] ದನಾ (ಬ). [7] ಪೆಣ್ಣೊಟ್ಟ (ಕ.ಬ). [8] ಕಾದಲ್ಕೆಮತ್ಸ್ಯನ್ಯದೊಳ್ (ಅ.ಕ).
* ಈ ಪದ್ಯ (ಬ) ಪ್ರತಿಯಲ್ಲಿಲ್ಲ. [9] ತೆನ್ನೆದೆಗಲ್ಲಂ (ಕ.ಬ).

ನರನಾರಾಯಣರಿರ್ವರೆ
ಧುರದೊಳ್ ಮಾರ್ಕೊಳ್ವರೆನ್ನನೊರ್ವಂ ಮೊಮ್ಮಂ ।
ಪರಮಗುರುವೊರ್ವನವರಿ
ರ್ವರುಮಂ ಕಾದಟಿವೆನುಟಿದ ರಿಪುನೃಪಬಲಮಂ ॥ ೮೧*
(ಪಂಪಭಾರತಂ, ೧೦–೧೪.).

ಧೃತರಾಷ್ಟ್ರಂ ನುಡಿದಾರ್ತನೇ ಹರಿ ಭರಂಗೆಯ್ದಾರ್ತನೇ ನೀಂ ಪೃಥಾ
ಸುತರಂ ನೋಯಿಸಲಾಗದೆಂದು ನುಡಿದೇನಾಮಾರ್ತೆಮೇ ನಿನ್ನೊರಂ ।
ಸುತನಂ ಕೈಗಟಿವಾಯ್ತುದಪ್ಪೊಡೆ ಮಹಾಭಾರಾವತಾರಂ ರಣೋ
ದ್ಧತನಾಗೆಂಬುದನೆಮ್ಮನನ್ಯರವೊಲೇಂ ನೀಂ ಪ್ರಾರ್ಥಿಸಲ್ವೇಟ್ಪುದೇ ॥ ೮೨†
(ಪಂಪಭಾರತಂ, ೧೦–೧೦).

ಪಿಡಿಯೆಂ ಚಕ್ರಮನೆಂಬ ಚಕ್ರಿಯನಿಳಾಚಕ್ರಂ ಭಯಂಗೊಳ್ವಿನಂ
ಪಿಡಿಯಿಪ್ಪೆಂ ಕರಚಕ್ರಮಂ ನರರಥಂ [1]ತೂಳ್ದಾ[1] ಕುರುಕ್ಷೇತ್ರದೊಳ್ ।
ಪಡುವೆಣ್ಗಾವುದ ಪೋಗಪೋಗಲೆಸುವೆಂ ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆ ಮಾಪ್ಪೆನೋವದೆ ಪಯಿಂಧಾಸಿರ್ವರಂ ಯುದ್ಧದೊಳ್ ॥ ೮೩
(ಪಂಪಭಾರತಂ, ೧೦–೨೫.)

ಓರಂತೆ ಮೆಚ್ಚಿದಂ ಕೃತಿ
ಸಾರಂ ಮಂತ್ರಾಂಗಕೆಯ್ದೆ ಹೊಯ್ಸಳವಂಶೋ ।
ದ್ಧಾರಂ ನರಸಿಂಹಸುತಂ
ದೋರಸಮುದ್ರಾಧಿನಾಯಕಂ ಸೋಮನೃಪಂ ॥ ೮೪

ಇದು ಸರಸ್ವತೀಸರ್ವಾಂಗದರ್ಪಣಾಯಮಾನ ಪ್ರತಿಭಾಸನೂತನ ಪುರಾತನ
ಪ್ರಮಾಣ ಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಮ
ದ್ವಾದಶಸ್ಥಳವರ್ಣನಮಾರ್ಗಮನೋಹರಮುಂ ವೀರಹೊಯ್ಸಳ
ಸೋಯಿದೇವರಾಯ ವಿನೋದಾಕರ್ಣನ ಕೌತುಕೋ
ತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿ
ಸುಮನೋಬಾಣ ಜಾಮಾತೃ ಪರಮಚಿದಾ
ನಂದ ಮಲ್ಲಿಕಾರ್ಜುನ ಕವೀಶ್ವರ
ಸಂಯೋಜಿತಮುಮಪ್ಪ ನೂಕ್ತಿ
ನು ಧಾ ರ್ಣ ವ ದೊಳ್

ಮಂತ್ರವರ್ಣನಂ ಷೋಡಶಾಶ್ವಾಸಂ ಸಂಪೂರ್ಣಂ.

* ಈ ಪದ್ಯ (ಕ) ಪ್ರತಿಯಲ್ಲಿಲ್ಲ. † ಈ ಪದ್ಯ (ಬ) ಪ್ರತಿಯಲ್ಲಿಲ್ಲ.
[1] ಮತ್ತಾ (ಬ).

ದೂತಾಂಗ ವರ್ಣನಂ

ಸ್ಥಿರನಾದೇಯಸ್ವರೂಪಂ ಪರನೃಪವಸುಧಾಂತಾಕುಳಜ್ಞಂ ಸದೃಷ್ಟಾಂ
ತರವಾಕ್ಯಂ ಸಾಮಭೇದಾದ್ಯತಿಶಯವಿದನಗ್ರಾಮ್ಯವೇಷಂ ಸಭಾಭ್ಯಂ ।
ತರನಿಶ್ಶಂಕಂ ಪರಾಶೇಂಗಿತವಿದನೆನಿಪಂ ದೂತನೆಂದಿಂತು ಧಾತ್ರೀ
ಶ್ವರಕಾರ್ಯೋದ್ಯೋಗಿಗಳ್ ಬಿತ್ತರಿಪ ಕವಿಗಳಿಂ ಖ್ಯಾತದೂತಾಂಗಮಕ್ಕುಂ ॥ ೧

ಸಾಧಿತಮಂತ್ರನುನ್ನತಗಿರೀಂದ್ರಗುಹಾಂತರದಿಂ ಪ್ರಸಿದ್ಧ ವಿ
ದ್ಯಾಧರನಾತ್ಮಮಂದಿರಕೆ ಬರ್ಪವೊಲೊಪ್ಪುವ ಮಂತ್ರಶಾಲೆಯಿಂ ।
ದಾ ಧರಣೀಶ್ವರಂ ಸೊಗಯಿಪೋಲಗಸಾಲೆಗೆ ಸಿದ್ಧಮಂತ್ರನಾ
ಜ್ಞಾಧರನಟ್ಟಿಯಿಂದೆ ನಡೆತಂದು ವಿನೋದದೊಳಿರ್ದನೂರ್ಜಿತಂ ॥ ೨

(ಪಾರ್ಶ್ವನಾಥಪುರಾಣಂ, ೨–೪೭.)

ಸಕಳಾಂತಃಪುರ ಮಂತ್ರಿಮಂಡಳಿಕ ರಾಜಶ್ರೇಷ್ಠತಂತ್ರಾದಿ ನಾ
ಯಕ ಸಾವಂತ ಕವೀಂದ್ರ ವಾದಿಗಳು ಕೋದ್ವಾದಾದಿ ವಾಜ್ಞೇಯ ಕಾ।
ರಕಥಾದ್ಯೂತಕ ಪುಣ್ಯಪಾಠಕಲನದ್ಗೇಯಪ್ರವೀಣಪ್ರವಾ
ದಕ ಮೈತಾಳಿಕ ನರ್ತನಪ್ರಕರದಿಂದೊಪ್ಪಿರ್ದುದೊಡ್ಡೋಲಗಂ॥ ? ೩

ನಂತತಮೋಲಗಿಪ್ಪ ಖಿಳಮಂತ್ರಿಪುರೋಹಿತ ದಂಡನಾಥ ಸಾ
ವಂತ ನಿಯೋಗಿವರ್ಗ ಬುಧಗಾಯಕವಾದಕರೋಳಿಯೊಪ್ಪೆ ವೇ ।
ದಾಂತವಿಲಾಸಿನೀ ಜನಸಮೇತಮಿಳಾಪತಿ ರಂಜಿಸಿರ್ದನ
ತ್ಯಂತವಿಚಿತ್ರ ಶೋಭೆವಡೆದೋಲಗಸಾಲೆಯೊಳಿಂದ್ರಲೀಲೆಯಿಂ॥ ೪*

ಕರಗಳ್ ನರ್ತಿಸೆ ಚಾಮರಂಗಳೆಳವಿಂದಂ ಮೆಲ್ವನಿಂ ನರ್ತಿಸು
ತ್ತಿರೆ ನೇರಿರ್ದ ಸೆಱಂಗು ಚಿತ್ರಿಸಿದ ಹಂಸಾನೀಕದಿಂ ಚೆಲ್ವನಾ।
ಳ್ದಿರೆ ದುಗ್ಧಾರ್ಣವ ಫೇನ ಪಾಂಡುರತೆಯಂ ಕೈಕೊಂಡ ಬೆಳ್ದಂಗಳಂ
ತಿರೆ ತೋಱುತ್ತಿರಲುತ್ತರೀಯವಸನಂ ರಾಜೇಂದ್ರ ಚಂದ್ರಾಂಕನಾ॥ ೫

[1] ೆಕೋದ್ವೋ (ಕ). * ಈ ಪದ್ಯ (ಕ) ಪ್ರತಿಯಲ್ಲಿಲ್ಲ.

ಚರನೊರ್ವಂ ಪರಿತಂದು ಭೂಪತಿಗೆ ಬೇಗಂ ಕಾರ್ಯವಿಜ್ಞಾಪನಾ
ತುರಚಿತ್ತಂ ಪೊಡೆಮಟ್ಟು ಬಿನ್ನವಿಸಿದಂ ನಿಮ್ಮಾಜ್ಞೆಯಂ ಪಾಱು ದೇ।
ವರ ಠಾಣಾಂತರಮಂ ತಿರಸ್ಕರಿಸಿ ನಾಡಂ ವಜ್ರವೀರ್ಯಂ ದುರೋ
ದರ ಶೌರ್ಯಂ ಬಿಡೆ ಕಾದಿ ಗೋಟಿಡಿಸಿದಂ ಸ್ತ್ರೀಬಾಲರಂ ವೃದ್ಧರಂ॥ ೬

(ಪಾರ್ಶ್ವನಾಥಪುರಾಣಂ, ೨–೧೧.)

ಅನುಕೂಲಜನಕ್ಕಿಂದ್ರನ
ನನುಕೂಲಜನಕ್ಕೆ ಯಮನೆ ನೀನೆಂಬುದನಿಂ।
ತಿನಿತಂ ಬಗೆಯದೆ ವಿಘಟಿಸಿ
ದನುದಗ್ರಂ ವಜ್ರವೀರ್ಯನತಿದುರ್ವಾರಂ॥ ೭

(ಪಾರ್ಶ್ವನಾಥಪುರಾಣಂ, ೨–೧೨.)

ಸಂದ ನಿಜಸ್ನೇಹಭರಂ
ಕುಂದಿದೊಡಿನನುದಯದಲ್ಲಿ ತನಗಪದೆಸೆಯೊಳ್।
ಮುಂದಱಿಯದತಿಮದಾಂಧಂ
ನಂದುವ ಸೊಡರುದ್ದಮುರಿವ ಮಾಪ್ಕೆಯೊಳುರಿದಂ॥ ೮

(ಪಾರ್ಶ್ವನಾಥಪುರಾಣಂ, ೨–೧೩.)

[1]ಶಲಭಂ[1] ಪ್ರದೀಪತೇಜ
ಕ್ಕಲಘುತರಕ್ಕಿರದೆ ಕಾಯ್ವ ನಿನ್ನೀತೇಜೋ।
ಬಲದ ಸಮೃದ್ಧಿಗೆ ಕಾಯ್ದುಂ
ಚಲಪಕ್ಷೋದ್ವೃತ್ತನನಧಿಗತ ನಿಜಸತ್ವಂ॥ ೯

(ಪಾರ್ಶ್ವನಾಥಪುರಾಣಂ, ೨–೧೪.)

ಕಡೆಗಣ್ಣೊಳ್ ಕೆಂಪಿಡಿದಿರೆ
ಕಡುಗೊರ್ವಿರೆ ಬೆಮರ ಬಿಂದು ಗಂಡಸ್ಥಳದೊಳ್।
ಬೆಡಗೊಪ್ಪುವ ವೀರಾಂಗನೆ
ಯೊಡಗೂಡಿದ ತೆಱದಿನವನಿಪತಿ ಸೊಗಯಿಸಿದಂ॥ ೧೦

(ಪಾರ್ಶ್ವನಾಥಪುರಾಣಂ, ೨–೧೫.)

ಪುದಿದರೆ ಕೆಂಪು ನಿನ್ನ ನಯನಂಗಳೊಳನ್ಯರ ರಕ್ತದಿಂದೆ ಮೀ
ಯದೆ ತುಟಿ ಕಿಬ್ಬಿ ಶಸ್ತ್ರಕುಳಮಂ ಕಿಬದುಣ್ಮೆ ಬೆಮರ್ ಕಪ್ಪೋಲದೊಳ್।

---

[1] ಸುಲಭಂ (ಕ).

ಮಡವದರಾತಿ ಕಾಂತೆಯರ ಲೋಚನವಾರಿಗಳಿಂ ಕಪೋಲಪ
ತ್ರದ ಸಿರಿಯಂ ವಿಮರ್ದಿಸದೆ ಮಾಣ್ಬವನಲ್ತೆ ರಸಾಧಿನಾಯಕಾ॥ ೧೧
(ಪಾರ್ಶ್ವನಾಥಪುರಾಣಂ, ೨–೧೭.)

[1]ಏಂ ಧರಣೀಶ ನೀಂ[1] ಮುಳಿದು ಕಾದಲೊಡರ್ಚುವೋಡೇನವಂ ನಮ
ಸ್ಕಂಧನೆ ವಜ್ರವೀರ್ಯನೆನಗೀ ಬೆಸನಂ ಬೆಸಸಾತನಂ ಗಜ।
ಸ್ಕಂಧತಳಾಧಿರೂಢನನಗುರ್ವಿಪ [2]ಮಾರ್ಪಡೆ[2] ನೋಡೆ ನೋಡೆ ಕೊ
ಲ್ವೆಂ ಧುರದಲ್ಲಿ ನಿಂದೊ[3]ಡೊಳನೋರ್ದೊಡೆ[3] ಕೋಡಗಗಟ್ಟುಕಟ್ಟುವೆಂ॥ ೧೨
(ಪಾರ್ಶ್ವನಾಥಪುರಾಣಂ, ೨–೧೮.)

ಸಿಂಗಂ ತುಂಗಕರೀಂದ್ರಕುಂಭತಟಮಂ ಸೀಳ್ದಿಕ್ಕುವಂತಳ್ಕದ
ಷ್ಟಾಂಗದ್ರೋಹನನಾಹವಾಂಗಣದೊಳತ್ಯುಗ್ರಾಸಿಯಿಂ ಸೀಳ್ದು ದೋ।
ರ್ದಂಗಂಬೆತ್ತನ ವಜ್ರವೀರ್ಯನ ದಳತ್ಖಂಡಂಗಳಿಂದಷ್ಟದಿ
ಕ್ಕಿಂಗಂ ಕೇಳ್ ಬಲಿಗೊಟ್ಟು ದೇವ ಮೆಱೆವೆಂ ದುರ್ವಾರಮಂ ವೀರಮಂ॥ ೧೩
(ಪಾರ್ಶ್ವನಾಥಪುರಾಣಂ, ೨–೨೦.)

ಸಿಡಿಲೆಱಪಂದದಿಂದೆಱಗಿ ಪೊಯ್ದೊಡೆ ಬಾಳ್ದಲೆ ಸೀಳ್ದು ಪಾಱಿ ಬಿ
ಟ್ಟೊಡೆದು ಸಿಡಿಲ್ದು ರುಳ್ದು ತಲೆ ಮೂದಲೆಯಾಗಿರೆ ಪಚ್ಚುವಿಟ್ಟು ಪೆ !
ರ್ದೊಡೆಯೊಡೆಸೆಕ್ಕೆಯಾಗಗಿದು ಕೆತ್ತುವ ಪುಣ್ಗಳ ಬಾಯ್ಗಳೇಱಿನು
ಗ್ಗಡಿಸುವ ಬಾಯ್ಗಳಾಗಿರೆ ಕಱಿತ್ತಿಱಿವೆಂ ರಿಪುಸೈನ್ಯಮಂ ನೃಪಾ॥ ೧೪
(ಶೃಂಗಾರರತ್ನಾಕರಂ, ೧–೮೩.)

ಕುಡೆ ಪತಿ ಕೂರ್ತು ಜೀವಿತಮನಾಹವದೊಳ್ ಕುಡುವಂತೆ ಕೊಂಡ ನಿ
ಮ್ಮಡಿಗಡನಂ ಕರಂ ಸುಭಟನನ್ಯನೃಪಾಲರ ಜೀವಿತಂಗಳಂ ।
ತಡೆಯದೆ ತಂದು ತನ್ನ ಪತಿಗಿತ್ತರಿನಾರಿಯ ಕರ್ಣಯುಗ್ಮದೊಳ್
ಮಡಗಿದ ಪತ್ರಮಂ ತೆಗೆದು ಸೀಳಿನದಿರ್ದೊಡೆ ಪೋಕುಮೇ ಋಣಂ ॥ ೧೫

ಬೆಸನಂ ಬೇಡ್ಪುದಱಿಂ ಭಟ
ರ್ಗುಸುರ್ವುದೆ ಗುಣಮಲ್ಲದಧಿಪನುಂ ಮಾಮನಕಂ ।
ಮನಗಿ ನುಡಿದಂದು ಪೆಂಪಿಂ
ದೆಸೆದಪುದದಱಿಂದೆ ಮಾಡಿ ತೋರ್ಪಂ ಕೂರ್ಪಂ ॥ ೧೬
(ಪಾರ್ಶ್ವನಾಥಪುರಾಣಂ, ೨–೨೯.)

---

[1] ಯಿಂಧರಣೀಶನಂ (ಕ), ಇಂದು ನಿಜೇಶನಂ (ಬ). [2] ನಂ ನೆರೆ (ಬ).
[3] ಡಲನಾರ್ದೊಡೆ (ಕ).

ಪಕ್ಕಿ ಮೊದಲಾಗಿ ಪತಿಕಾ
ರ್ಯಕ್ಕನುವಶನಾಗಿ ತಾಗಿ ರಾವಣನೊಳ್ ಪೋ ।
ರ್ದೆಕ್ಕತುಳಮಿಱುದುದೆಂದೊಡೆ
ತಕ್ಕಂ ಪತಿಕಾರ್ಯದೆಡೆಯೊಳೋಸರಿಸುವನೇ ॥ ೧೭

(ರಾಮಚಂದ್ರಚರಿತಪುರಾಣಂ, ೯–೧೦೫.)

ಕಿಡುಗುಮುಪಪ್ರದಾನದೆ ಧನಂ ನಿಜಸೈನಿಕಹಾನಿ ದಂಡದಿಂ
ದೊಡರಿಕುಮೆಯ್ದೆ ಪೊರ್ದುಗುಮುಪಾಂಶುತೆ ಭೇದದಿನಂತದಱಿಂದಮೀ ।
ಗಡಿನ ಪದಕ್ಕೆ ಸಾಮಮೆ ಸುಸಾಧ್ಯಮಣಂ ಪ್ರಿಯವಾಕ್ಯಮಂತ್ರದಿಂ
ಬಿಡುಗುಮದಲ್ಲದೇಂ ಬಿಡುಗುಮೇ ಮನಮಂ ಪಿಡಿದಾಗ್ರಹಗ್ರಹಂ ॥ ೧೮

(ಚಂದ್ರಪ್ರಭಪುರಾಣಂ, ೯–೧೧೮.)

ನಯಮಿದು ನಮ್ಮ ನಾಡಗಡಿಯಂ ಪುಗದಲ್ಲಯೆ ಬಂದು ಮುಟ್ಟಿದ
ಲ್ಲಯೆ ಬೆದಱಿಟ್ಟ ಸಂವರಿಸಿದಲ್ಲಿಯೆ ರಾಜ್ಯಮನೀಡ್ಗುಕೊಳ್ಳದ ।
ಲ್ಲಯೆ ಬೆಸಕೆಯ್ದೆವೆಂದಿರದೆ ಸಾರಧನಂಗಳನಟ್ಟಿಮುಟ್ಟಿ ಭೀ
ತಿಯಿನಿದಿರ್ವಂದು ಕಂಡರಸುವಿಟ್ಟವರೇನುಚಿತಪ್ರವೀಣರೋ ॥ ೧೯

ನಾಮದೊಳಳವಡುವೊಡೆ ಸಂ
ಗ್ರಾಮಂ ರಿಪುನೃಪರೊಳೇಕೆ ಪಾಲ್ಸಕ್ಕರೆಯಿಂ ।
ದಾಮಯಮುಪಶಮಿಪೊಡೆ ವಿ
ದ್ಯಾಮಯ ಸೇವಿಸಲದೇಕೆ ಕಟುಕತ್ರಯಮಂ ॥ ೨೦

(ಪಾರ್ಶ್ವನಾಥಪುರಾಣಂ, ೨–೪೦.)

ಅವನಳ್ಕದೆ ನಮ್ಮೊಳ್ ಕಾ
ದುವ ಧರದಿಂ ನಾಡನಿಱುದೊಡಂ ಕಾದದೆ ಮ ।
ತ್ತವನೊಳ್ ಸಾಮಮನಾಚರಿ
ಸುವುದೆಂಬುದು ನೋಡೆ ನಾಡೆ ನಗೆಗೆಡೆಯಲ್ತೇ ॥ ೨೧

(ಪಾರ್ಶ್ವನಾಥಪುರಾಣಂ, ೨–೪೧.)

ನಯವಿದನಂ ಸಾಮದಿನಪ
ನಯನಂ ದಂಡದೊಳೆ ಗೆಲ್ವುದೆಂತೆನೆ ಕಟುಕ ।
ತ್ರಯದಿಂದಲ್ಲದೆ ಮಧುರ
ಪ್ರಯೋಗದಿಂ ಕಫಮನಾವನುಪಶಮಿಸಿದಪಂ ॥ ೨೨

(ಪಾರ್ಶ್ವನಾಥಪುರಾಣಂ, ೨–೪೨.)

ಬೇಡಿದೊಡೀಯನಾಂತಡಿಱಿಯಂ ಮಱಿವೊಕ್ಕಡೆ ಕಾಯನಂತವಂ
ನಾಡರಸಾಗಿ ಪೀಟಿಗೆಯನೇಱಿದೊಡೇನವನಗ್ರಗಣ್ಯನೇ ।
ಕೋಡಗವೇಱಿದೇ ಮರನನಟ್ಟವನೇಱಿದೆ ಬೆಕ್ಕು ಕಾಗೆ ಹೆ
ಮ್ಮಾಡಮನೇಱಿದೇ ಮನೆಯನೇಱಿದೆ ನಾಯ್ ನಿಜದಿಂ ನಿರಂತರಂ ॥ ೨೩

ರಾಯಸಮಂ ಪೆಸರ್ವೆತ್ತ ಪ
ನಾಯಂಬೆರಸಟ್ಟಿ ದೂತನಿಂ ಪಗೆವನಭ ।
ಪ್ರಾಯಮನುಜ್ಜ್ವಳಮನವಂ
ಗಾಯತ್ತ್ರನಹಿತರಂ ವಿಚಾರಿಪುದುಚಿತಂ ॥ ೨೪

(ಪಾರ್ಶ್ವನಾಥಪುರಾಣಂ, ೨-೪೫.)

ಒಡೆಯನ ವೀರಮಂ ಪೊಗಬಲಮ್ಮದೆ ತನ್ನ ನದುತ್ತರಂಗಳಂ
ಬಿಡದರಿಭೂಪರೊಳ್ ನುಡಿಯಲಮ್ಮದೆ ತತ್ಸಭೆಯಲ್ಲಿ ಭೀತಿಯಿಂ ।
ನಡುಗುವ ಪೇಡಿಯಂ ಕಳುಹಲಾಗದು ನೆಟ್ಟನೆ ಸಂಧಿಯಲ್ಲಗಂ
ತಡೆಯದೆ ಭೂಭುಜಂ ನೆಗಟ್ಟ ವಿಗ್ರಹದಲ್ಲಗಮಾವ ಕಾಲದೊಳ್ ॥ ೨೫*

ಚದುರಂ ಭಾವಕನಿಂಗಿತಜ್ಞನಱಿವುಳ್ಳಂ ದೇಶಭಾಷಾನ್ವಿತಂ
ಪದವಾಕ್ಯಾರ್ಥವಿವಕ್ಷಿತಂ ಬಹುಕಳಾಸಂಪನ್ನನಾಸ್ಥಾನಸಂ।
ಮದವಾ[1][ಗ್ವೇ][1]ತ್ತನೆನಿಪ್ಪನಂ ನೃಪವರಂ ಕೈಕೊಂಡು ಸತ್ಪಾತ್ರನಂ
ಪದಪಿಂ ನೆಟ್ಟನೆ ಸಂಧಿವಿಗ್ರಹಯೆನಲ್ ಭಾವಿಪ್ಪುದೆಲ್ಲಾಗಳುಂ ॥ ೨೬*

ಸಹಜಪ್ರಜ್ಞ[3]ನಶೇಷ[3]ದೇಶಲಪಿನದ್ಭಾಷಾವಿಶೇಷಜ್ಞನ
ನ್ನಿಹಿತಂ ನೀತಿವಿನೂತಸೂಕ್ತಿಸಹಿತಂ ದಕ್ಷಂ ಜಿತಾಕ್ಷಂ ನಿರಾ ।
ಗ್ರಹನುದ್ಯದ್ಗುಣರತ್ನಸಂಗ್ರಹನೆನಿಪ್ಪಂಗಾ ಮಹಾಸಂಧಿವಿ
ಗ್ರಹಗಾಳೋಚಿಸಿದಂದದಿಂದೆಸೆಗು ನೀನೆಂದಂ ಧರಾಧೀಶ್ವರಂ ॥ ೨೭

(ಪಾರ್ಶ್ವನಾಥಪುರಾಣಂ, ೨-೪೬.)

ಮಾನಧನಂ ಮಧ್ಯಸ್ಥಂ
ನೂನೃತವಾಕ್ಯಂ ವಿಶುದ್ಧಚರಿತಂ ಕುಲಜಂ ।
ತಾನೆನಿಪುದು ಕೃತಪುಣ್ಯಂ
ತಾನೆನಿಪುದು ರಾಜವರ್ಧನಂ ನೃಪಕರಣಂ ॥ ೨೮

---

* ಈ ಪದ್ಯಗಳು ಮಂತ್ರಾಂಗವರ್ಣನೆಯ ೪೨, ೪೧ನೆಯ ಪದ್ಯಗಳಾಗಿಯೂ ಇವೆ.

[1] ಗ್ಮೈ(ಬ). [2] ವಿದೇಶ (ಕ).

ಬೆನಗೊಳ್ಳದೆಡಪದನುಮಾ
ನಿಸದುಚಿತಮೆನಿಪ್ಪ ವಚನದಿಂದೆನೆದಿರೆ ರಾ ।
ಯನಮಂ ಬರೆದಾಗಳೆ ಮು
ದ್ರಿಸಿ ಕಟ್ಟಿ ಪನಾಯಮಂ ನೃಪೋಕ್ತಕ್ರಮದಿಂ ॥ ೨೯
(ಪಾರ್ಶ್ವನಾಥಪುರಾಣಂ, ೨-೪೮.)

ಧೃಷ್ಟಂ ವರವಕ್ರೋಕ್ತಿವಿ
ಶಿಷ್ಟಂ ನಿಶ್ಶಂಕನನ್ವಿತಂ ನಯನಿಪುಣಂ ।
ಸ್ಪಷ್ಟತರಚಿತ್ತವೃತ್ತಿ ನಿ
ಸೃಷ್ಟಾರ್ಥನೆನಿಸ್ಪ[1]ದೂತ[1]ಮುಖ್ಯನ ಕರೆದರ್ ॥ ೩೦
(ಪಾರ್ಶ್ವನಾಥಪುರಾಣಂ, ೨-೪೯.)

ಇರದೆ ನಿಜಾಂತರ್ಗತಮಂ
ನಿರವಿಸಿ ಕಟುಪಿದೊಡೆ ಕಟಿದು ಬಹುಜನಪದಮಂ ।
ತ್ವರಿತಗತಿಯಿಂದೆ ಪದ್ಮಾ
ಪುರಿಯಂ ಕಡುಚೆಲ್ವನಾ[1]ಗರ[1]ಮನೆಯ್ತಂದಂ ॥ ೩೧
(ಪಾರ್ಶ್ವನಾಥಪುರಾಣಂ, ೨-೫೦.)

ನಮರೋದಗ್ರಘಟಪ್ರತಾನಮನುದಾರೋರ್ವೀಶಸಂತಾನಮಂ
ಪ್ರಮದಾಸ್ಯಾಂಬುಜಗಂಧಮಗ್ನಮಧುಪಪ್ರಧ್ವಾನಮಂ ನೃತ್ಯವಾ ।
ದ್ಯಮಿಳದ್ಭಾನಮನಾರ್ಯವರ್ಯಸುವಚಃಪೀಯೂಷದತ್ತಾವಧಾ
ನಮನೈಶ್ವರ್ಯನಿಧಾನಮಂ ಪದಪಿನಿಂ ಪೊಕ್ಕಂ ನೃಪಾಸ್ಥಾನಮಂ ॥ ೩೨
(ಪಾರ್ಶ್ವನಾಥಪುರಾಣಂ, ೨-೫೨.)

ಭಾವಕನೈದಿಬಂದು ಜನನಾಥಪದಾಬ್ಜಪ್ರಣೂತನಾಗಿ ಮ
ತ್ತಾ ವರಪಾವುಡಂಗಳನು ತಂದಿರಿಸೆಯ್ದೆ ಮನೋನುರಾಗದಿಂ ।
ಭೂವಧುವಲ್ಲಭಾ ನಿನಗೆ ಮದ್ಭುವನಾಧಿಪನಿತ್ತ ಲೇಖಮಂ
ನೀವವಧಾನಿಸೆಂದು ಮುದದಿಂ ನುಡಿದಂ ಚರನೊರ್ವನಬ್ಜಭಂ ॥ ೩೩

ವಾನವಸಮನೃಪಗತಿಭೂ
ಪಾನನಮ ನಿವೇದಿಸುತ್ತೆ ಲೇಖಮನೊಸೆದಾ ।
ದೇಶಲಪಿಥಾ[2][ಷೆ][2]ಕ್ಕೋವಿದ
ವಾ ಶ್ರೀಕರಣಾಧಿಪತಿ ನಿರೀಕ್ಷಿಸಿದನದಂ ॥ ೩೪

[1] ಸವ (ಕ). [2] ಷಾ (ಬ).

ಅವಧಾರಿಸುವುದು ದೇವರ್
ಭುವನೇಶಾದೇಶಮೆಂದು ಬಿನ್ನವಿಸಿ ನಭಾ ।
ಶ್ರವಣರಸಾಯನಮೆನಿಪತಿ
ವಿವರಣಗಂಭೀರನಾದದಿಂ ವಾಚಿಸಿದಂ ॥ ೩೫

(ಪಾರ್ಶ್ವನಾಥಪುರಾಣಂ, ೨–೫೩.)

ಸ್ವಸ್ತಿ ನಮಸ್ತ ಸದ್ಗುಣವಿರಾಜಿತರಾಜನಮಾಜಮಸ್ತಕ
ನ್ಯಸ್ತ ಪದಾರವಿಂದನರವಿಂದಮಹೀಪತಿ ವಜ್ರವೀರ್ಯನಂ ।
ವಾಸ್ತವಭಕ್ತಿಯುಕ್ತನೆನಗಾಗ್ರಹದಿಂ ಬೆಸೆದಿ[1]ರ್ಪನೆಂ[1]ಬುದುಂ
ದುಸ್ತರಕೋಪವಹ್ನಿಗೆ ಘೃತಾಹುತಿಯಾಯ್ತುದು ತನ್ನೃಪಾಲನಾ ॥ ೩೬

(ಪಾರ್ಶ್ವನಾಥಪುರಾಣಂ, ೨–೫೪.)

ಕುಡುವುದು ಕಪ್ಪಮಂ ನಡೆವುದಾಳ್ಚೆಸದಿಂದಮೆ ಮುನ್ನಿನಂದದಿಂ
ಬಿಡುವುದು ದರ್ಪಮಂ ಪಡೆವುದಾಳ್ದನದೊಂದು ಮನಃಪ್ರಸಾದಮಂ ।
ತಡೆವುದು ಬುದ್ಧಿಯಲ್ಲಧಿಕನಪ್ಪವನೊಳ್ ಬಲಹೀನನಪ್ಪವಂ
ಕೊಡದೊಡೆ ಕೇಡು ತಪ್ಪದೆನುತಂ ನುಡಿದಂ ನಯಶಕ್ತಿ ಕೋವಿದಂ ॥ ೩೭

(ಪಾರ್ಶ್ವನಾಥಪುರಾಣಂ, ೨–೫೫.)

ನಿನ್ನಾಚರಿಸಿದ ತಪ್ಪಂ
ಮುನ್ನಂ ಬೆಸಕೆಯ್ದುದಕ್ಕೆ ಮನ್ನಿಪೆನಾನೆಂ ।
ಬುನ್ನತಿಗೆ ನೃಪತಿ ಕಟುಪಿದ
ನೆನ್ನನಿದಂ ಬಗೆದು ಪತಿಗೆ ವಿನಮಿತನಾಗಾ ॥ ೩೮

(ಪಾರ್ಶ್ವನಾಥಪುರಾಣಂ, ೨–೫೭.)

ಘನದೂತೋಕ್ತಿನವಿಸಾರಣ ಪ್ರಚಳಿತಸ್ಫೂಲಾಯಿ[2]ತಶ್ಮಶ್ರು[2] ಲೇ
ಖನಪೀನೋದ್ಧತ ಧೂಮಲೇಖೆ ನಯನೋದ್ಯಚ್ಛೋಣಿಮಜ್ವಾಲೆ ನಂ ।
ಜನಿತಸ್ವೇದಜಲಂ ಘೃತಾಹುತಿಯೆನಿಪ್ಪನ್ನಂ ಸ್ವವಂಶಪ್ರಣಾ
ಶನದಾವಾಗ್ನಿವೊಲುರ್ಬಿ ಕೊರ್ಬಿದುದು ಭೂಪಾಲಂಗೆ ಕೋಪಾನಳಂ ॥ ೩೯

(ಪಾರ್ಶ್ವನಾಥಪುರಾಣಂ, ೨–೫೮.)

ವನುಧೆಗಧೀಶ್ವರ ನಾನೆಂ
ಬೆಸಕಂ ಮಿಗೆ ನಿನ್ನನಟ್ಟಿದಂ ನೆಟ್ಟನೆ ಭಾ ।

---

[1] ರ್ಪೆವೆಂ (ಕ). [2] ತಃ ಶಶ್ರು (ಕ).

ವಿನದಣಮೆ ವೀರಭೋಜ್ಯಾ
ವಸುಂಧರಾ ಎಂಬ ವಾಕ್ಯಮಂ ನಿನ್ನರನಂ ॥ ೪೦

(ಪಾರ್ಶ್ವನಾಥಪುರಾಣಂ, ೨–೫೯.)

ಕಪ್ಪಮನೆನ್ನೊಳ್ ಬೇಡುವ
ತಪ್ಪಂ ಸಾಧಿಸುವ ಸುಭಟನೃಪನಾವನೊ ಮುಂ ।
ತಪ್ಪವನಾಹವದೊಳ್ ಮುಂ
ತಪ್ಪವನೆಂದೆನೆ ಮದುಗ್ರಖಡ್ಗಾಹತಿಯಿಂ ॥ ೪೧

(ಪಾರ್ಶ್ವನಾಥಪುರಾಣಂ, ೨–೬೧.)

ತನ್ನ ಪೊಡರ್ಪಿನಿಂದಮೆ ನಮಸ್ತ ಧರಿತ್ರಿಯ ದರ್ಪಮಪ್ಪುದಂ
ಮುನ್ನಮಡಂಗಿಪಾ ಸಿಡಿಲ ಡಾಣೆಗೆ ವಜ್ರದ ಕಟ್ಟುಗೊಟ್ಟವೋ ।
ಲೆನ್ನಯ ತೋಳ್ಬಲಕ್ಕೆ ನೆರವಾದರನೇಕಧರಾಧಿನಾಥರ
ತ್ಯುನ್ನತಶೌರ್ಯರೆಂದೊಡಿದಿರಾಂಪವರಾರೆನಗಾಜಿರಂಗದೊಳ್ ॥ ೪೨

(ಪಾರ್ಶ್ವನಾಥಪುರಾಣಂ, ೨–೬೩.)

ಆಶಂಕೆಯನುಟಿದು ನಿಜಾ
ಧೀಶಂ ನಯಹೀನನಟ್ಟಿದೊಡೆ ನೀಂ ತಂದಾ ।
ದೇಶಮಿದು ನಿಮ್ಮ ದೇಶವಿ
ನಾಶಮನಾಂ ಮಾಡುವೆಡೆಗೆ ಸಿದ್ಧಾದೇಶಂ ॥ ೪೩

(ಪಾರ್ಶ್ವನಾಥಪುರಾಣಂ, ೬–೬೭.)

ಅಲ್ಲದೊಡೇಕೆ ನಿನ್ನನಿನಿತಂ ನುಡಿದಟ್ಟಿದನಟ್ಟಿದಂದದಿಂ
ನಿಲ್ಲದೆ ನಾಳೆ ಕಾಳೆಗಕೆ ಸಂಗರರಂಗದೊಳಕ್ಕ ದೊಡ್ಡವೇಪ್ ।
ಬಲ್ಲಿದರಾರ್ ವಿ[1]ಹೀನಬಳರಾರ್ ವಿಭುವಾ[1]ರ್ಗ್ಗಳ ಭೃತ್ಯರಾರಿದಿಂ
ತೆಲ್ಲಮನಲ್ಲಿ ನಿನ್ನ ಪತಿಗಂ ನಿನಗಂ ವೆಱು ತೋಱುದಪ್ಪೆನಾಂ ॥ ೪೪

(ಪಾರ್ಶ್ವನಾಥಪುರಾಣಂ, ೨–೭೦.)

ಅಪರಿಮಿತಂಗಳಂ ಗಱುಪಲಾಗದು ದೇವರಿಗಿಂತುಟೊಂದು ಬಿ
ನ್ನಪ ಪ್ರತಿಭೂಪನಪ್ಪೊಡೆ ಬಲಾಧಿಕನಾದೊಡಮೇನೊ ಎನ್ನೊಳಾಂ ।
ತಪನೆಯವಶ್ಯವಾಂಪನೆರಡಿಲ್ಲದವಂ ಕಲಿ ಕಾಳೆಗಕ್ಕೆ ಬಂ
ದಪನದು ನಿಶ್ಚಯಂ ಬಟಿಕ ದೇವರೆ ಬಲ್ಲರಿದಕ್ಕೆ [2]ತಕ್ಕುದಂ[2] ॥ ೪೫

---

[1] ಷಕ್ಕೆಜಳಾರಿವಿಭುವಾ (ಕ), ಷಕ್ಕೆಜಲರಾಶಿಭವಾ (ಬ). [2] ನಿಶ್ಚಯಂ (ಕ)

ಲೋಕಾಧಿಪತಿಯನೇಳಿಸು
ವೀ ಕುನಯಮನಿತ್ತು ಕೇಡನೊಡರಿನುವ ನೃಪಾ ।
ನೀಕದ ಪಕ್ಷಂಬಿಡಿದಿಂ
ತೇಕಿಱುಪೆಗೆಱಿಂಕೆ ಮೂಡಿದವೊಲಾದಪೆ ನೀಂ ॥ ೪೭

(ಪಾರ್ಶ್ವನಾಥಪುರಾಣಂ, ೨–೭೨.)

ಬೆದಱಿದ ರಾಜಧಾನಿ ಬೆನಕಯ್ಯದ ಬಲ್ಲಿದರೊಡ್ಡಿ ಕಾದಿ ನಾ
ಯದ ನಮರೋದ್ಧತರ್ ಕಿಡದ ಕಂಟಕರೋಡದ ಬೇಡವಟ್ಟು ಪೋ ।
ಗದ ಕಲಗೋಂಟೆ ಸಿಲ್ಕದ ವಿರೋಧಿಕುಟುಂಬಮಿಱುಂಬುಗೊಂಡೊಡಂ
ಜದ ಖಳರನ್ಯಮಂಡಲದೊಳಿಲ್ಲ ಕುಮಾರನದೇನುದಗ್ರನೋ ॥ ೪೭

(ಪುಷ್ಪದಂತಪುರಾಣಂ, ೫–೫೫.)

ಅಸಮಪರಾಕ್ರಮಾಧಿಪ ಮೃಗಾಧಿಪನೊಳ್ ನಮರಕ್ಕೆ ವರ್ಪ ನಾ
ಹಸದಿನಿಭೇಂದ್ರನನ್ಯಮೃಗಜಾತಿಗಳೊಳ್ ನಿಜಜಾತಿಮೈರಮಂ ।
ಬಿಸುಡೊಡಗೂಡುವಂದದೊಳೆ ನಿನ್ನೊಡಗೂಡಿದ ಭೂಪರುಂ ಮದ
ಪ್ರಸರದೆ ನೀನುಮಾಂತು ನಿಲೆ ಗೆಲ್ಲದೆ [1]ನಿಲ್ಲ[1]ನಧೀಶನಾಜಿಯೊಳ್ ॥ ೪೮

(ಪಾರ್ಶ್ವನಾಥಪುರಾಣಂ, ೨–೭೩.)

ಪತ್ರವ[2]ನಿದನ[2]ವನೀಪತಿ
ಸೂತ್ರಿಸಿದವೊಲುತ್ತಮಾಂಗದೊಳ್ ತಾಳ್ದಿ ಭವ ।
ದ್ಧಾತ್ರಿಯನಾಳಲ್ಲದೊಡಸಿ
ಪತ್ರಂ ನಿಜಮಸ್ತಕಕ್ಕೆ ತಡೆಯದೆ ಬರ್ಕುಂ ॥ ೪೯

(ಪಾರ್ಶ್ವನಾಥಪುರಾಣಂ, ೨–೭೭.)

ಎನೆ ಮುನಿದು ವಜ್ರವೀರ್ಯಂ
ಘನಪೀಠದಿನೆದ್ದು ವಜ್ರನಿರ್ಘೋಷದವೋ ।
ಲನ[3]ಯಪರಂ ಪೊಳೆವಸಿ[3] ಮಿಂ
ಚನಿಳಿಸಿ ಪೊಯ್ಯಲ್ಕೆ ನಿಳ್ಕಿದಂ ನೃಪಚರನಂ ॥ ೫೦

(ಪಾರ್ಶ್ವನಾಥಪುರಾಣಂ, ೨–೮೧.)

ಪೊಯ್ಯ[4]ಲ್ಕೈವೇಡ[4] ಭೂಪತಿ
ಯೊಯ್ಯನೆ ಪೆಱಿನಾರ್ದು ನುಡಿವುದ್ಯೆ ನಿಜಪತಿಯಾ ।

---

[1] ಮಾಣ (ಕ). [2] ನಿನಗ (ಪ). [3] ಯಂಪರಾಸಿಯುಮಂ (ಕ). [4] ರೆವೇಡ (ಕ).

ಕಯ್ಯಲದೆ ನಿಮ್ಮ ಬಾಟ್ಪಲೆ
ಪುಯ್ಯಲ್ಗದಿರಾಗು ತೋಱು[1]ವೆಂ[1] ತತ್ಕ್ಷಣದಿಂ ॥ ೫೧

ಅವನತನಾದೊಡಂ ವಿಭುಗೆ ಭೀತಿಯಿನಾಜಿಯೊಳೋಡಿ ಪೋದೊಡಂ
ವಿವಿಧಮೃ[2]ಗೇ[2]ಕ್ಷಣಾಳಿ ವಿಲಸದ್ಭುವನಾಶ್ರಯಮುದ್ಭಶಾಲಮೊ ।
ಪ್ಪುವ ಕಟಕಂ ಸುವಂಶವಿಭವಂ ನೆಗ[3]ಟ್ಟಿ[3] ಧನಮುಳ್ಳದೇಶಮೆಂ
